ಚಿತ್ರಕಲಾವಿದ ಜಿ.ಎಸ್. ಖಂಡೇರಾವ ಒಂದು ಅಧ್ಯಯನ

ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಕಿರು ಪ್ರಬಂಧ

ಸಂಶೋಧಕರು :

ಮಲ್ಲಿಕಾರ್ಜುನ ಸಿ. ಭಾಗೋಡಿ

ಮಾರ್ಗದರ್ಶಕರು :

ಡಾ. ಎಸ್.ಸಿ. ಪಾಟೀಲ

ಲಲಿತಕಲಾ ನಿಕಾಯ, ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ - 583276

ಪ್ರಮಾಣ ಪತ್ರ

[illegible]

ಪ್ರಮಾಣ ಪತ್ರ

ಶ್ರೀ ಮಲ್ಲಿಕಾರ್ಜುನ ಸಿ. ಭಾಗೋಡಿ ಇವರು ಬರೆದು ಸಾದರ ಪಡಿಸಿದ ಚಿತ್ರಕಲಾವಿದ ಜಿ.ಎಸ್.ಖಂಡೇರಾವ ಒಂದು ಅಧ್ಯಯನ ಎಂಬ ವಿಷಯ ಕುರಿತು ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಈ ಕಿರುಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದ್ದು, ಅವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗದಲ್ಲಿ ಸಂಶೋಧನೆ ನಡೆಸಿ ಈ ಕಿರು ಪ್ರಬಂಧವನ್ನು ಸಿದ್ಧಪಡಿಸಿದ್ದಾರೆ. ಈ ಸಂಶೋಧನ ಕಿರು ಪ್ರಬಂಧವು ಇಡಿಯಾಗಿ ಇಲ್ಲವೇ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ.

(signature) 12/7/2009
(ಡಾ. ಎಸ್.ಸಿ.ಪಾಟೀಲ)
ಮಾರ್ಗದರ್ಶಕರು
ಶಿಲ್ಪಮತ್ತುವರ್ಣಚಿತ್ರಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಶಾಖೆ: ಬನಶಂಕರಿ-ಬಾದಾಮಿ

ದಿನಾಂಕ :

ಘೋಷಣಾ ಪತ್ರ

ಚಿತ್ರಕಲಾವಿದ ಜಿ.ಎಸ್.ಖಂಡೇರಾವ ಒಂದು ಅಧ್ಯಯನ ಎಂಬ ಶೀರ್ಷಿಕೆಯ ಈ ಕಿರುಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ಡಾ. ಎಸ್.ಸಿ.ಪಾಟೀಲರವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಿ, ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ಶಿಲ್ಪ ಮತ್ತು ವರ್ಣ ಚಿತ್ರಕಲಾ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಈ ಕಿರು ಪ್ರಬಂಧದ ಯಾವುದೇ ಭಾಗದ ವಿಷಯ ಈ ಮೊದಲು ಬೇರಾವುದೇ ಪದವಿಗಾಗಿಯಾಗಲಿ, ಇತರಯಾವುದೇ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲವೆಂದು ಈಮೂಲಕ ಧೃಡಿಕರಣಮಾಡುತ್ತೇನೆ.

(ಮಲ್ಲಿಕಾರ್ಜುನ ಸಿ. ಭಾಗೋಡಿ)
ಸಂಶೋಧನ ವಿಧ್ಯಾರ್ಥಿ
ಶಿಲ್ಪಮತ್ತುವರ್ಣಚಿತ್ರಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ , ಹಂಪಿ
ಶಾಖೆ : ಬನಶಂಕರಿ - ಬಾದಾಮಿ

ದಿನಾಂಕ : 3-5-2002

ಅರಿಕೆ

ಚಿತ್ರಕಲೆಯ ಬಗೆಗೆ ನನಗೆ ಚಿಕ್ಕಂದಿನಿಂದಲೂ ತುಂಬಾ ಆಸಕ್ತಿ, ಬಹುಶ ಆ ಕಾರಣವಾಗಿಯೇ 1990-91 ರಲ್ಲಿ ಚಿತ್ರಕಲಾಶಿಕ್ಷಣವನ್ನು ಪಡೆಯಲು ಕಲಬುರ್ಗಿಗೆ ಬಂದೆ. ಅಲ್ಲಿ ಶರಣಬಸವೇಶ್ವರ ಕಲಾಮಹಾವಿದ್ಯಾಲಯದಲ್ಲಿ ಎರಡು ವರ್ಷದ ವಾಣಿಜ್ಯ ಚಿತ್ರಕಲೆಯನ್ನು ಮುಗಿಸಿ, ಮುಂದೆ ಅಲ್ಲಿಯೇ ಬಿ.ಎ. ಲಲಿತಕಲೆಯಲ್ಲಿ ಪ್ರವೇಶವನ್ನು ಪಡೆದೆ. ಅಲ್ಲಿ ನನಗೆ ಗುರುಗಳಾದ ಜೆ.ಎಸ್.ಖಂಡೇರಾವ ಮತ್ತು ವಿ.ಬಿ.ಬಿರಾದಾರರವರು ಕಲಾಕೃತಿಗಳ ರಚನೆಯ ಜೊತೆಗೆ ನಾಡಿನ ಹಲವಾರು ಕಡೆಗಳಿಗೆ ನನ್ನನ್ನು ಕರೆದುಕೊಂಡು ಹೋಗಿ, ಅಲ್ಲಿಯ ಕಲಾವಾತಾವರಣವನ್ನು, ಕಲಾಗ್ಯಾಲರಿಗಳನ್ನು, ಕಲಾಪ್ರದರ್ಶನಗಳನ್ನು ಅಲ್ಲದೆ ಹಿರಿಯ ಕಲಾವಿದರನ್ನು ಪರಿಚಯಿಸುತ್ತಿದ್ದರು. ಹೀಗೆ ಅವರು ನನಗೆ ಚಿತ್ರಕಲೆಯಲ್ಲದೇ ಇನ್ನೂ ಅನೇಕ ವಿಷಯಗಳ ಬಗ್ಗೆ ಪ್ರೇರಣೆಯನ್ನು ನೀಡಿದವರಲ್ಲಿ ಪ್ರಮುಖರು. ಅವರನ್ನು ಸ್ಮರಿಸಿಕೊಳ್ಳುವುದು ನನ್ನ ಮೊದಲ ಕರ್ತವ್ಯವಾಗಿದೆ. ಹೀಗಿರುವಾಗ ನಾನು ಬಿ.ಎ. ಲಲಿತಕಲೆಯಲ್ಲಿ ಪ್ರಥಮ ರ್‍ಯಾಂಕ ನೊಂದಿಗೆ ತೇರ್ಗಡೆಯಾದೆ. ಆದರೆ ಚಿತ್ರಕಲೆಯ ಸಂಶೋಧನೆಯ ಕಡೆಗೆ ನನ್ನೊಲವು ಮೂಡಿದ್ದು ಸಹಜವಾಗಿಯೇ, ಅದೊಂದು ದಿನ 1997-98 ರಲ್ಲಿ ನಾನು ಶರಣಬಸವೇಶ್ವರ ಕಲಾಮಹಾವಿದ್ಯಾಲಯದ ಸ್ನಾತಕೋತ್ತರ ಲಲಿತಕಲಾ ವಿಭಾಗದಲ್ಲಿ ಎಂ.ಎ. ಇನ್ ಡ್ರಾಯಿಂಗ್ ಆ್ಯಂಡ ಪೇಯಿಂಟಿಂಗ್‌ನಲ್ಲಿ ಪ್ರಥಮ ರ್‍ಯಾಂಕನೊಂದಿಗೆ ತೇರ್ಗಡೆ ಹೊಂದಿದೆ. ಗುಲಬರ್ಗಾ ವಿಶ್ವವಿದ್ಯಾಲಯವು ಏರ್ಪಡಿಸುವ ಘಟಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಚಿನ್ನದ ಪದಕ ಪಡೆದದ್ದು ಒಂದು ಅಪರೂಪದ ಪ್ರಸಂಗ ಅಂದು ಗುರುಗಳಾದ ಜೆ.ಎಸ್.ಖಂಡೇರಾವ ಅವರನ್ನು ಭೆಟ್ಟಿಯಾದೆ. ಅವರು ನನಗೆ ಶುಭವನ್ನು ಹಾರೈಸುತ್ತ ನೀನು ಚಿತ್ರಕಲೆಯ ಬಗ್ಗೆ ಮುಂದೆ ಸಂಶೋಧನೆಯನ್ನು ಮಾಡು. ಸಂಶೋಧನೆಯನ್ನು ಮಾಡುವ ಪರಿಶ್ರಮ ನಿನ್ನಲಿದೆ ಎಂದರು. ನಾನು ಮುಂಬೈ ಅಥವಾ ಬರೋಡಾ ಕಡೆಗೆ ಹೋಗಿ ಚಿತ್ರಕಲೆಯ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನ ಮಾಡಬೇಕೆಂಬ ಆಸೆಯಿಟ್ಟುಕೊಂಡಿದ್ದೆ. ಆದರೆ ಗುರುಗಳಾದ ಖಂಡೇರಾವರು ಈ ವಿಷಯವನ್ನು ಸೂಚಿಸಿದಾಗ ನಾನು ಯಾಕೆ ಸಂಶೋಧನೆ ಮಾಡಬಾರದು. ಎಂದು ಆಲೋಚಿಸಿ ಕೊನೆಗೆ ಈ ಕ್ಷೇತ್ರಕ್ಕೆ ಬರಲು ನಿರ್ಧರಿಸಿದೆ.

ಈ ಚಿತ್ರಕಲೆಯ ಕುರಿತಾದ ಸಂಶೋಧನೆ ಎಲ್ಲಿ ಮಾಡುವುದು ? ಯಾರನ್ನು ಮಾರ್ಗದರ್ಶಕರನ್ನಾಗಿ ಮಾಡಿಕೊಳ್ಳಬೇಕು ಇತ್ಯಾದಿ ಪ್ರಶ್ನೆಗಳ ಚಿಂತನೆ ನನ್ನಲ್ಲಿ ಪ್ರಾರಂಭವಾಯಿತು. ಕನ್ನಡ ವಿ.ವಿ. ಹಂಪಿಯಲ್ಲಿ ಚಿತ್ರಕಲೆಯ ಸಂಶೋಧನೆಗೆ ಅವಕಾಶವಿರುವ ವಿಷಯ ನನ್ನ ಗುರುಗಳಿಂದ ತಿಳಿಯಿತು. ನಾನು ತಡಮಾಡದೆ ನನ್ನ ಕೆಲವು ಲೇಖನಗಳನ್ನು ಮತ್ತು ನನ್ನ ಚಿತ್ರಗಳ ಒಂದು ಅಲ್ಬಂನ್ನು ತೆಗೆದುಕೊಂಡು ಕನ್ನಡ ವಿ.ವಿ.ಹಂಪಿಗೆ ಬಂದೆ. ಅಲ್ಲಿ ಡಾ. ಎಸ್.ಸಿ ಪಾಟೀಲ ಅವರನ್ನು ಭೆಟ್ಟಿಯಾಗಿ ನನ್ನ ಆಸಕ್ತಿಯನ್ನು ವ್ಯಕ್ತಪಡಿಸಿದೆ. ಅದೆಲ್ಲವನ್ನು ನೋಡಿ ಅವರು ನೋಡಪ್ಪ ಈ ವರ್ಷ ಯಾವ ಸೀಟು ಖಾಲಿ ಇಲ್ಲ. ಬೇಕಿದ್ದರೆ ಈ ವರ್ಷ ನೀನು ಚಿತ್ರಕಲೆಯ ಕುರಿತು ಇನ್ನಷ್ಟು ಲೇಖನಗಳನ್ನು ಬರೆಯುವ ಅಭ್ಯಾಸ ಮಾಡಿಕೋ ಎಂದು ಹೇಳಿದರು. ನನಗೆ ಸ್ವಲ್ಪ ನಿರಾಸೆಯಾಯಿತಾದರೂ ಅಧ್ಯಯನ ಮಾಡುವ ನನ್ನ ಧೃಡ ಸಂಕಲ್ಪ ಇನ್ನೂ ಹೆಚ್ಚಾಯಿತು.

ಕಲಬುರ್ಗಿಗೆ ಬಂದ ನಾನು ಡಾ.ಎಸ್.ಸಿ. ಪಾಟೀಲರು ಹೇಳಿದ ಹಾಗೆ ಕೆಲವು ಬಿಡಿ ಲೇಖನಗಳನ್ನು ಬರೆಯಲು ಪ್ರಾರಂಭಿಸಿದೆ. ಅವುಗಳಲ್ಲಿ ಕೆಲವು ದಿನಪತ್ರಿಕೆಗಳಲ್ಲಿ ಪ್ರಕಟಗೊಂಡವು. ಹೀಗೆ ಒಂದೆರಡು

ವರ್ಷಗಳು ಕಳೆದವು 2001 ನೇ ಸಾಲಿನಲ್ಲಿ ಬಾದಾಮಿಗೆ ಆಕಸ್ಮಿಕವಾಗಿ ಪ್ರವಾಸಕ್ಕೆ ಬಂದಿದ್ದೆ. ಬನಶಂಕರಿಗೆ ಬಂದು ಇಳಿದಾಗ ಅಲ್ಲಿ ಮಾರ್ಗದಲ್ಲೇ ಕನ್ನಡ ವಿಶ್ವವಿದ್ಯಾಲಯ , ಹಂಪಿಯ ಶಿಲ್ಪಕಲಾ ವಿಭಾಗದ ಬೋರ್ಡನ್ನು ನೋಡಿ ತಕ್ಷಣವೇ ವಿಶ್ವವಿದ್ಯಾಲಯದ ವಿಭಾಗದ ಕಡೆಗೆ ನಡೆದೆ . ಡಾ. ಎಸ್.ಸಿ.ಪಾಟೀಲರವನ್ನು ಭೆಟ್ಟಿಯಾದೆ . ಸಂಶೋಧನೆಯ ಕುರಿತು ಮಾತಾಡಿದೆ. ಅವರು ಈ ವರ್ಷ ನಮ್ಮ ವಿಶ್ವವಿದ್ಯಾಲಯವು ಎಂ.ಫಿಲ್. ತರಗತಿಗಳನ್ನು ಪ್ರಾರಂಭಿಸುತ್ತಿದೆ. ಒಂದು ವರ್ಷದ ಕೋರ್ಸು ನೀನು ಅದನ್ನು ಮೊದಲು ಮಾಡು ಎಂದು ಸೂಚಿಸಿದರು. ನಂತರ ಮುಂದೆ ಕನ್ನಡ ವಿ.ವಿ.ಯ ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗದಲ್ಲಿ ವಿ. ವಿ.ಯ ನಿಯಮಾನುಸಾರ ಎಂ.ಫಿಲ್. ವಿದ್ಯಾರ್ಥಿಯಾಗಿ ಸೇರ್ಪಡೆಯಾದೆ. ನನ್ನ ಆಸಕ್ತಿಯನ್ನು ಕೆರಳಿಸಿದ ನಾಡಿನ ಹಿರಿಯ ಕಲಾವಿದರಾದ ಮತ್ತು ನನ್ನ ವಿದ್ಯಾ ಗುರುಗಳಾದ ಜಿ.ಎಸ್.ಖಂಡೇರಾವ ಅವರ ಬಗ್ಗೆಯೇ ಸಂಶೊಧನ ಪ್ರಬಂಧ ಬರೆಯಲು ಅವಕಾಶ ಸಿಕ್ಕಿದ್ದು ನನ್ನ ಭಾಗ್ಯ. ನನ್ನನ್ನು ಈ ಪ್ರಬಂಧದುದ್ದಕ್ಕೂ ತಿದ್ದಿತೀಡಿ ನನ್ನ ಬರವಣಿಗೆಗೆ ಒಂದು ರೂಪಕೊಟ್ಟು ಮಾರ್ಗದರ್ಶನ ಮಾಡಿದ ಡಾ. ಎಸ್.ಸಿ .ಪಾಟೀಲರವರಿಗೆ ಮೊದಲು ನನ್ನ ಅನಂತ ವಂದನೆಗಳನ್ನು ಸಲ್ಲಿಸುತ್ತೇನೆ.

ನಾಡಿನ ಖ್ಯಾತ ಜನಪದ ವಿದ್ವಾಂಸರು ಕನ್ನಡ ವಿ. ವಿ.ಯ ಕುಲಪತಿಗಳಾದ ಮಾನ್ಯ ಡಾ. ಎಚ್.ಜಿ. ಲಕ್ಕಪ್ಪಗೌಡ ಅವರು ವಿಶ್ವವಿದ್ಯಾಲಯಕ್ಕೆ ಬಂದ ಮೇಲೆ ದೃಶ್ಯಕಲಾ ವಿಭಾಗದಲ್ಲಿ ಮೊದಲ ಬಾರಿಗೆ ಎಂ.ಫಿಲ್. ಅಧ್ಯಯನ ಪ್ರಾರಂಭಿಸಿದ್ದು ನನ್ನಂತ ಅನೇಕ ವಿದ್ಯಾರ್ಥಿಗಳು ಅಧ್ಯಯನ ಮಾಡಲು ಅವಕಾಶವಾಗಿದೆ. ಅವರಿಗೆ ನನ್ನ ಅನಂತ ಕೃತಜ್ಞತೆಗಳು. ಕುಲಸಚಿವರಾದ ಡಾ.ಕೆ.ವಿ. ನಾರಾಯಣ, ಅಧ್ಯಯನಾಂಗದ ನಿರ್ದೇಶಕರಾದ ಡಾ. ಹಿ.ಚಿ. ಬೋರಲಿಂಗಯ್ಯ, ಲಲಿತಕಲಾ ನಿಕಾಯದ ಡೀನ್ ಪ್ರೊ. ಹನುಮಣ್ಣ ನಾಯಕ ದೊರೆ ಅವರನ್ನು ಇಲ್ಲಿ ಗೌರವಪೂರ್ವಕವಾಗಿ ಸ್ಮರಿಸಿಕೊಳ್ಳುವದು ನನ್ನ ಕರ್ತವ್ಯವಾಗಿದೆ.

ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗದಲ್ಲಿ ಗೌರವ ಉಪನ್ಯಾಸಕರಾದ ಹಿರಿಯ ಕಲಾವಿದ ಎಂ. ಆರ್. ಬಾಳಿಕಾಯಿ ,ಆತ್ಮೀಯ ಸ್ನೇಹಿತರಾದ ಡಾ. ಯಾದಪ್ಪ ಪರದೇಶಿ, ಶಿವಾನಂದ ಬಂಟನೂರ ಇವರೆಲ್ಲರ ಸಹಾಯ ಸಹಕಾರವನ್ನು ಪ್ರೀತಿಯಿಂದ ನೆನೆಯುತ್ತೇನೆ. ಇದಲ್ಲದೆ ವಿಭಾಗದ ಶಿಕ್ಷಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ನನ್ನ ಆನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಸಂಶೋಧನ ಅಧ್ಯಯನವನ್ನು ಮಾಡುವಾಗ ಗ್ರಂಥಗಳಿಂದ ಮಾಹಿತಿಯನ್ನು ಪಡೆದುಕೊಳ್ಳಲು ಗುಲಬರ್ಗಾವಿಶ್ವವಿದ್ಯಾಲಯದ ಗ್ರಂಥಾಲಯ, ಶರಣಬಸವೇಶ್ವರ ಕಲಾ ಮಹಾ ವಿದ್ಯಾಲಯದ ಗ್ರಂಥಾಲಯ, ಎಂ. ಎಂ.ಕೆ. ಕಾಲೇಜಿನ ಗ್ರಂಥಾಲಯಕ್ಕೆ ಹೋಗಿ ಅಲ್ಲಿಯ ಗ್ರಂಥ ಭಂಡಾರದಿಂದ ಮಾಹಿತಿಯನ್ನು ಪಡೆಯಲು ಹೋದಾಗ ನನ್ನ ಅಧ್ಯಯನಕ್ಕೆ ಸಂಬಂಧಪಟ್ಟಂತೆ ತಮ್ಮ ಮೌಲಿಕವಾದ ಸಲಹೆ- ಸೂಚನೆಗಳನ್ನು ಕೊಟ್ಟಿರುವ ಡಾ.ಪಿ.ಕೆ. ಖಂಡೋಬಾ , ಖ್ಯಾತ ಕಲಾವಿದ ವಿ.ಜಿ. ಅಂದಾನಿ, ಶಿವಪುತ್ರಪ್ಪ ಶೇರಿ ಅಲ್ಲದೇ, ನನ್ನ ಸಂಶೋಧನ ಅಧ್ಯಯನದ ಪ್ರಾರಂಭದಿಂದ ಹಿಡಿದು ಅಂತ್ಯದವರೆಗೆ ಹಲವಾರು ರೀತಿಯಲ್ಲಿ ತಮ್ಮ ಸಲಹೆ ಸೂಚನೆಗಳನ್ನು ಕೊಟ್ಟಿರುವ ಪೂಜ್ಯರಾದ ರಾವೂರಿನ ಶ್ರೀ ಸಿದ್ದಲಿಂಗಮಹಾಸ್ವಾಮಿಗಳು ಮತ್ತು ಚಿತ್ತಾಪೂರಿನ ಶ್ರೀ ಸೋಮಶೇಖರ ಶಿವಾಚಾರ್ಯರು, ಡಾ. ಪ್ರಭುರಾಜ ಕಾಂತಾ, ಡಾ. ಗುಂಡಣ್ಣ ಬಾಳಿ, ಸಿಸ್ಟರ ಸೇವರಿನ್, ಸುರೇಶ ಬೇಕನ್,

ಶ್ರೀಮತಿ ಶೀಲಾ ಬಿ.ಕಾಶಿ., ಶ್ರೀ ಬಸವರಾಜ ಯರಗಲ್ ಇವರ ಸಹಾಯವನ್ನು ಕೃತಜ್ಞತೆಯಿಂದ ಸ್ಮರಿಸುವೆ.

ನನ್ನ ಎಂ.ಫಿಲ್. ಸಂಶೋಧನ ಅಧ್ಯಯನದುದ್ದಕ್ಕೂ ಝರಾಕ್ಸ ಪ್ರತಿಗಳನ್ನು ಮಾಡಿಕೊಡುವುದರಲ್ಲಿ ಸಹಾಯಮಾಡಿದ ಆತ್ಮೀಯ ಸ್ನೇಹಿತ ಅನಂತ ಬಸೂದೆಯವರಿಗೆ, ಹಾಗೆನೇ ರೇಖಾಚಿತ್ರಗಳನ್ನು ಕಂಪ್ಯೂಟರ ಮೂಲಕ ಸ್ಕ್ಯಾನಿಂಗ ಮಾಡಿಕೊಟ್ಟ ಗೆಳೆಯ ವಿಜಯಾನಂದ ಡರ್ಬಿ, ಛಾಯಾಚಿತ್ರಗಳನ್ನು ಮಾಡಿಕೊಟ್ಟ ಸ್ನೇಹಿತ ರಮೇಶ ಗೊಳಿ , ಅತೀ ಕಡಿಮೆ ವೇಳೆಯಲ್ಲಿ ಸುಂದರವಾಗಿ ಡಿ.ಟಿ.ಪಿ ಮಾಡಿಕೊಟ್ಟ ಪೂರ್ಣಿಮಾ ಗ್ರಾಫಿಕ್ಸ ನ ರವೀಂದ್ರರವರಿಗೂ, ಕರಡು ಪ್ರತಿಗಳನ್ನು ತಿದ್ದಲು ಸಹಕರಿಸಿದ ಸ್ನೇಹಿತರಾದ ಆನಂದ ಪೂಜಾರ, ಶಿವಪ್ರಕಾಶ ತುಕ್ಕಣ್ಣವರ್, ಎಸ್.ಪಿ.ದೇಶಪಾಂಡೆ ಮತ್ತು ನನ್ನ ಎಲ್ಲಾ ಸ್ನೇಹಿತರಿಗೂ ಈ ಸಂದರ್ಭದಲ್ಲಿ ವಂದನೆಯನ್ನು ಸಲ್ಲಿಸುತ್ತೇನೆ. ಎಲ್ಲದಕ್ಕೂ ಮುಖ್ಯವಾಗಿ ನನ್ನ ತಂದೆ-ತಾಯಿ, ಕುಟುಂಬದ ಎಲ್ಲಾ ಪರಿವಾರದವರಿಗೆ ನನ್ನ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಾನು ಸಂಶೋಧನ ಅಧ್ಯಯನವನ್ನು ಮಾಡುವಾಗ ನನಗೆ ಆರ್ಥಿಕವಾಗಿ ಸಹಾಯ ಮಾಡಿದ ಸಹೋದರರಾದ ಶಿವರಾಜ, ಶಿವಶರಣ ,ಬಸವರಾಜ, ವಿಶ್ವನಾಥ ಅಲ್ಲದೇ ಗುಲಬರ್ಗಾ ಜಿಲ್ಲಾ ಪಂಚಾಯತನ ಅಧ್ಯಕ್ಷರು ಮತ್ತು ಹಣಕಾಸು ಯೋಜನಾ ಆಯೋಗದ ಸದಸ್ಯರು ಇವರೆಲ್ಲರಿಗೂ ನಾನು ಈ ಸಂದರ್ಭದಲ್ಲಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನನ್ನ ಕ್ಷೇತ್ರ ಕಾರ್ಯದಲ್ಲಿ ಸಹಾಯ ಮಾಡಿದವರಿಗೆ ಮತ್ತು ಪ್ರಶ್ನಾವಳಿಗಳಿಗೆ ಉತ್ತರಗಳನ್ನು ಬರೆದು ತಮ್ಮ ಅಭಿಪ್ರಾಯಗಳನ್ನು ಬರೆದು ಕಳುಹಿಸಿದ ನಾಡಿನ ಹಿರಿಯ ಕಲಾವಿದರ ಸಹಕಾರವನ್ನು ಪ್ರೀತಿಯಿಂದ ನೆನೆಯುತ್ತೇನೆ.

ಮಲ್ಲಿಕಾರ್ಜುನ. ಸಿ. ಭಾಗೋಡಿ

ಸಂಶೋಧನ ವಿಧ್ಯಾರ್ಥಿ.

ಚಿತ್ರಕಲಾವಿದ ಜೆ.ಎಸ್. ಖಂಡೇರಾವ

ಒಂದು ಅಧ್ಯಯನ

ಪರಿವಿಡಿ

ಅಧ್ಯಾಯ ಒಂದು :

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವಿಧಾನ 1

ಅಧ್ಯಾಯ ಎರಡು :

ಜೆ.ಎಸ್.ಖಂಡೇರಾವ : ಸಾಂಸ್ಕೃತಿಕ ಪರಿಸರ ಮತ್ತು ಬಾಲ್ಯಜೀವನ 11

ಅಧ್ಯಾಯ ಮೂರು :

ಜೆ.ಎಸ್. ಖಂಡೇರಾವ : ಕಲಾಶಿಕ್ಷಣ 22

ಅಧ್ಯಾಯ ನಾಲ್ಕು

ಜೆ.ಎಸ್. ಖಂಡೇರಾವ : ವೃತ್ತಿ ಜೀವನ ಮತ್ತು ಕಲಾಬದುಕು 36

ಅಧ್ಯಾಯ ಐದು :

ಜೆ.ಎಸ್. ಖಂಡೇರಾವ : ಕಲಾಕೃತಿಗಳ ವಸ್ತುವೈವಿಧ್ಯತೆ, ತಂತ್ರ ಮತ್ತು ಶೈಲಿ 59

ಅಧ್ಯಾಯ ಆರು :

ಜೆ.ಎಸ್.ಖಂಡೇರಾವ : ಕಲಾಕೃತಿಗಳ ಮೇಲಾದ ಪ್ರಭಾವ ಮತ್ತು ಪ್ರೇರಣೆ 100

ಅಧ್ಯಾಯ ಏಳು :

ಜೆ.ಎಸ್. ಖಂಡೇರಾವ : ಕಲಾಚಟುವಟಿಕೆಗಳು ಮತ್ತು ಕಲಾ ಸಾಹಿತ್ಯ 111

ಅಧ್ಯಾಯ ಎಂಟು :

ಸಮಾರೋಪ

ಅನುಬಂಧ

1. ಗ್ರಂಥಋಣ

2. ಜೆ.ಎಸ್.ಖಂಡೇರಾವರಿಗೆ ಬಂದ ಪ್ರಶಸ್ತಿಗಳು / ಬಹುಮಾನಗಳು

ಅಧ್ಯಾಯ ಒಂದು :

ಅಧ್ಯಯನದ ಉದ್ದೇಶ , ಸ್ವರೂಪ ಹಾಗೂ ವಿಧಾನ

ಭಾರತೀಯ ಸಂಸ್ಕೃತಿಯನ್ನು ಪ್ರತಿನಿಧಿಸುವ ಅಧಿಕಾರ ಬಹಳ ಮಟ್ಟಿಗೆ ಭಾರತೀಯ ಲಲಿತ ಕಲೆಗಳಿಗೆ ಇದೆ. ಲಲಿತಕಲೆಗಳಲ್ಲಿ ಪ್ರಧಾನವಾದ ಕಲೆ ಚಿತ್ರಕಲೆ ಇದು ನಮ್ಮ ಸಂಸ್ಕೃತಿಯಲ್ಲಿ ಅಧಿಕ ಮನ್ನಣೆ ಪಡೆದು, ವಿವಿಧ ಕಾಲ ಘಟ್ಟಗಳಲ್ಲಿ ಬೆಳವಣಿಗೆಯಾಗುತ್ತಾ ಬಂದಿದೆ. ಪ್ರದೇಶನಿಷ್ಟ, ಜನಾಂಗನಿಷ್ಟ ವೈಶಿಷ್ಟ್ಯಗಳನ್ನು ಹೊಂದಿ ರಾಜಾಶ್ರಯದಲ್ಲಿ ವಿವಿಧ ಧರ್ಮಗಳ ಧಾರ್ಮಿಕ ಹಿನ್ನೆಲೆಯಲ್ಲಿಯೂ ಕಾಣಿಸಿಕೊಂಡಿದೆ. ಬೌದ್ಧ ಅರಸರ ಕಾಲದಲ್ಲಿ ಬೌದ್ಧ ಕಲೆಯಾಗಿ ಜೈನ ಅರಸರ ಕಾಲದಲ್ಲಿ ಜೈನಕಲೆಯಾಗಿ, ಮೊಗಲ, ರಜಪೂತ, ಚಾಲುಕ್ಯ, ಹೊಯ್ಸಳ, ವಿಜಯನಗರ, ಮೈಸೂರು ಇತ್ಯಾದಿ ಹೀಗೆ ವಿವಿಧ ಪ್ರದೇಶಗಳಲ್ಲಿ ಆಯಾ ಹೆಸರಿನ ಕಲೆಯಾಗಿ ಕಲಾಶೈಲಿಯಾಗಿ ಈ ಕಲೆ ಬೆಳೆದು ಬಂದಿದೆ. ಬದುಕಿನಿಂದ ಸಂವೇದನೆಗೊಂಡು ಬದುಕಿಗೆ ಸ್ಫೂರ್ತಿಯನ್ನು ಕೊಡುವ ಚಿತ್ರಕಲೆ ಬದುಕಿನ ನಿಯಮವನ್ನು ಒಂದು ರೀತಿ ಅನು - ಸರಿಸುತ್ತದೆ. ಆದರಲ್ಲಿಯೂ ಜೀವನದಲ್ಲಿರುವಂತೆಯೇ ಏಳು ಬೀಳುಗಳ ಸಂಪ್ರದಾಯಗಳು, ಅವುಗಳ ವಿರುದ್ಧ ಕ್ರಾಂತಿ ಇತ್ಯಾದಿಗಳನ್ನು ಕಾಣುತ್ತೇವೆ. ಜೀವನ ಬದಲಾಯಿಸಿದಂತೆ ಜೀವನದ ಮೌಲ್ಯಗಳು ಬದಲಾದಂತೆ ಕಲೆಯೂ ಬದಲಾಗುತ್ತದೆ. ಹಳೆಯದರ ಸ್ಥಾನಕ್ಕೆ ಹೊಸದು ಬಂದು ನಿಲ್ಲುತ್ತದೆ. ಈ ಹೊಸದು ಕೂಡ ಮುಂದೆ ಮತ್ತೊಂದು ಹೊಸ ಸಂಪ್ರದಾಯಕ್ಕೆ ದಾರಿ ಮಾಡಿಕೊಡುತ್ತದೆ. ಈ ಕಾಲಾನುಗುಣ ಅಭಿವ್ಯಕ್ತಿ ನಿರಂತವಾಗಿ ನಡೆಯುವ ಕ್ರಿಯೆ[1] ಎಂಬ ಮಾತಿನಲ್ಲಿ ಸತ್ಯಾಂಶವಿದೆ.

ಯಾವುದೇ ದೇಶದ ಅಥವಾ ನಾಡಿನ ಈ ಕಲೆಗಳು ಒಮ್ಮೆಲೆ ಪರಿಪೂರ್ಣತೆಯ ಹಂತವನ್ನು ಏರುವುದಿಲ್ಲ. ಅವು ಪರಿಪಕ್ವತೆಯ ಸ್ಥಿತಿಯನ್ನು ಮುಟ್ಟುವದಕ್ಕೆ ಶತ ಶತಮಾನಗಳುದ್ದಕ್ಕೂ ಸಾವಿರಾರು ಕಲಾವಿದರು, ಪ್ರತಿಭಾವಂತರು ಅವಿರತವಾಗಿ ಮಾಡಿದ ಪ್ರಯತ್ನ ಇರುತ್ತದೆ. ಹಾಗೆಯೇ ನಾಡಿನ ಪ್ರಜೆಗಳ ಹಾಗೂ ಅವರ ಪ್ರತಿನಿಧಿಗಳಾಗಿರುತ್ತಿದ್ದ ಅರಸರ , ಮಾಂಡಲಿಕರ, ನಾಯಕರ ಕಲಾಭಿರುಚಿಯ, ಕಲಾಭಿಜ್ಞತೆಯ ಆಶ್ರಯ ಪಾಲನೆ-ಪೋಷಣೆ ಮತ್ತು ಪ್ರೋತ್ಸಾಹಗಳು ಇರುತ್ತವೆ. ಸಾಹಿತ್ಯ, ಸಂಗೀತ. ಚಿತ್ರ, ಶಿಲ್ಪ , ನೃತ್ಯಕಲೆ ಮೊದಲಾದ ಲಲಿತಕಲೆಗಳು ಅಂದಂದಿನ ಒಟ್ಟು ಜನಾಂಗದ ಪ್ರತಿಬಿಂಬವಾಗಿ ಬೆಳವಣಿಗೆ ಹೊಂದಿರುತ್ತವೆ. ಅಲ್ಲದೆ, ಅಯಾ ಕಾಲದ ಸಾಂಸ್ಕೃತಿಕ ಇತಿಹಾಸವನ್ನೇ ತಮ್ಮಲ್ಲಿ ಒಡಮೂಡಿಸಿಕೊಂಡಿರುತ್ತವೆ.[2]

---

1. ಡಾ. ಎಸ್.ಸಿ . ಪಾಟೀಲ : ವರ್ಣಸಂಚಯ , ಪುಟ 47.
2. ಕರ್ನಾಟಕದಲ್ಲಿ ಕಲಾಪರಂಪರೆ ಬೆಳೆದು ಬಂದ ದಾರಿ : (ಲೇ.) ಡಾ. ಬಿ.ಕೆ.ಹಿರೇಮಠ : ಚಿತ್ರಾಕ್ಷಿ ಡಾ.ಎಸ್.ಸಿ. ಪಾಟೀಲ (ಸಂ.) ಪುಟ 5

ಚಿತ್ರಕಲೆ ಪ್ರಾಚೀನವಾದ ಕಲೆ ಎಂಬುದರಲ್ಲಿ ಸಂದೇಹವಿಲ್ಲ. ಅದರಲ್ಲೂ ಭಾರತೀಯ ಚಿತ್ರಕಲೆ ಬಹು ಪ್ರಾಚೀನವೆಂಬುದಕ್ಕೆ ಸಂಸ್ಕೃತಿ ಕಾವ್ಯಶಾಸ್ತ್ರ ಪುರಾಣಗಳಲ್ಲಿ ಪ್ರಮಾಣಭೂತ ವಾಕ್ಯಗಳೂ ಸಂದರ್ಭಗಳೂ ದೊರೆಯುತ್ತವೆ.[3] ಪ್ರಾಚೀನ ಭಾರತದಲ್ಲಿ ಚಿತ್ತಕಲೆಯ ಕುರಿತು ಪ್ರಾಸ್ತಾವಿಕವಾಗಿ ಕೆಲವು ಸಲ ಚಿತ್ರಕಲೆಯ ವಿಷಯವಾಗಿಯೇ ಸಾಹಿತ್ಯ ಗ್ರಂಥಗಳೂ ರಚನೆಗೊಂಡಿವೆ. ಈ ಪರಂಪರೆಯಲ್ಲಿಯೇ ನಿರ್ಮಾಣಗೊಂಡ ಕ್ರಿ.ಶ. ಸುಮಾರು ಮೂರನೇ ಶತಮಾನದ "ವಾತ್ಸಾಯನನ ಕಾಮಸೂತ್ರ" ತುಂಬ ಪ್ರಸಿದ್ಧಿಯನ್ನು ಪಡೆದ ಗ್ರಂಥವಾಗಿದೆ. ಹೆಸರೇ ಸೂಚಿಸುವ ಹಾಗೆ ಈ ಕೃತಿ ಬರೀ ಕಾಮಕಲೆಯ ವರ್ಣನಾಕೃತಿಯಲ್ಲ ಅಲ್ಲಿ ವಿಜ್ಞಾನ, ತತ್ವಜ್ಞಾನ, 64 ಕಲೆಗಳಂತಹ ವಿಷಯಗಳ ವಿವೇಚನೆಯಿದೆ. ಇದಲ್ಲದೆ ವಿಷ್ಣೋಧರ್ಮೋತ್ತರ ಮುಂತಾದ ಪುರಾಣಗಳಲ್ಲಿ ಚಿತ್ರಕಲೆಯ ಶಾಸ್ತ್ರೀಯ ವಿವೇಚನೆಯಿದೆ. ಮಾನ ಸೋಲ್ಲಾಸ ಕೂಡ ಚಿತ್ರಕಲೆಯನ್ನು ಪರಿಚಯಿಸುತ್ತದೆ.[4]

ಭಾರತೀಯರು ಕಲೆಯ ಮಹತ್ವವನ್ನು ಪ್ರಾಚೀನ ಕಾಲದಲ್ಲಿಯೇ ಅರಿತು ಅನೇಕ ಕಲಾವಿದರು ಕೃತಿ ನಿರ್ಮಾಣ ಮಾಡಿದುದಕ್ಕೆ ಅನೇಕ ನಿದರ್ಶನಗಳಿವೆ. ಪ್ರಾಚ್ಯ ಸಂಶೋಧನೆ ಫಲವಾಗಿ ಮೊಹೆಂಜೋದಾರೋವಿನಲ್ಲಿ ದೊರೆತ ಬಣ್ಣ ಹಾಕಿದ ವಿಗ್ರಹಗಳಿಂದ ನಾಲ್ಕುಸಾವಿರದ ಐನೂರು ವರ್ಷಗಳ ಹಿಂದೆಯೇ ವಿವಿಧ ಬಣ್ಣಗಳನ್ನು ಉಪಯೋಗಿಸಿ ವಸ್ತುಗಳನ್ನು ಅಲಂಕರಿಸುವುದು ರೂಡಿಯಲ್ಲಿತ್ತೆಂದು ತಿಳಿದು ಬರುತ್ತದೆ. ಅಜಂತದ ಗುಹೆಗಳಲ್ಲಿರುವ ಭಿತ್ತಿಚಿತ್ರಗಳೂ, ಮೂರ್ತಿಗಳೂ ಬುದ್ಧ ಭಿಕ್ಷುಗಳಿಂದ ಕ್ರಿಸ್ತಪೂರ್ವದಲ್ಲಿಯೇ ಬರೆಯಲ್ಪಟ್ಟವೆಂದು ಧೃಡಪಟ್ಟಿವೆ. ಇದರಂತೆ ಪುದು-ಕೋಟೆಯ ಬಳಿಯಲ್ಲಿರುವ ಸಿಸ್ತನಿವಾಸಲ್‌ದಲ್ಲಿಯೂ ಪುರಾತನ ಭಿತ್ತಿಚಿತ್ರಗಳೂ ದೊರೆತಿವೆ. ಕೆಲವು ಪ್ರಾಚೀನ ದೇವಾಲಯಗಳಲ್ಲಿ ಕ್ರಿ.ಶ. ಏಳು-ಎಂಟನೇಯ ಶತಮಾನಗಳಲ್ಲಿ ಬರೆದ ಅನೇಕ ಪೌರಾಣಿಕ ಮತ್ತು ಐತಿಹಾಸಿಕ ಚಿತ್ರಗಳು ಅಂದಿನ ಕಲಾವಿದರ ಪ್ರತಿಭೆಯ ಪ್ರದರ್ಶನದಂತಿವೆ.[5]

ಮಾನವ ಸಂಸ್ಕೃತಿಯಲ್ಲಿ ಕಲೆಗೆ ಆಗ್ರಸ್ಥಾನವಿದೆ. ಆದಿಕಾಲದಿಂದಲೂ ಕಲೆ ಮನುಷ್ಯನ ಕೈ ಹಿಡಿದುಕೊಂಡೇ ಬಂದಿದೆ. ಪ್ರತಿಭೆಯ ಮೂಸೆಯಲ್ಲಿ ಅರಳಿ ನಿಲ್ಲುವ ಇದು ಅವನ ದಿನನಿತ್ಯದ ವ್ಯವಹಾರದಲ್ಲಿಯೂ ತೋರಿಬರುತ್ತದೆ. ತನ್ನನ್ನು ಅಲಂಕರಿಸಿಕೊಳ್ಳುವದರಲ್ಲಿ, ತನ್ನ ಕೆಲಸಕಾರ್ಯಗಳನ್ನು ಹಗುರ ಮಾಡಿಕೊಳ್ಳುವಲ್ಲಿ ಶ್ರಮವನ್ನು ಮರೆತು ಕೆಲಕಾಲ ಆನಂದದಲ್ಲಿ ಮೈಮರೆಯುವ ಕಲೆ ಅವನಿಗೆ ಸಹಾಯಕ. ಅದು ಹಾಡಿನ ರೂಪದಲ್ಲಿರಬಹುದು, ಚಿತ್ರದ ರೂಪದಲ್ಲಿರಬಹುದು, ಶಿಲ್ಪದ ರೂಪದಲ್ಲಿರಬಹುದು, ಕುಣಿತದ ರೂಪದಲ್ಲಿರಬಹುದು. ಬೆಳವಣಿಗೆಯನ್ನು ಪಡೆದು-ಕೊಂಡಂತೆ ರೂಪುಗೊಂಡು ಚಿತ್ರ ಶಿಲ್ಪ, ಸಾಹಿತ್ಯ, ಸಂಗೀತ ನೃತ್ಯ ನಾಟಕ ಮೊದಲಾದ ಲಲಿತಕಲಾ ಪ್ರಕಾರಗಳಲ್ಲಿ ಪ್ರೌಢ ಕಲೆಯಾಗಿ ಮಾರ್ಪಾಡಬಹುದು.[6] ರಸ ಋಷಿ ಡಿ.ವಿ. ಜಿ.ಯವರೇ ಹೇಳಿದಂತೆ "ಕಲೆಗಳಲ್ಲಿ ಪರಮಕಲೆ ಜೀವನದ ಲಲಿತಕಲೆ" ಎಂಬುದು ಸಾರ್ಥಕವಾಗುತ್ತದೆ. ಚಿತ್ರಕಲೆ ಸಪ್ತಕಲೆಗಳ ದೃಷ್ಟಿಯಿಂದ ಹಿರಿಯ ಸ್ಥಾನ ಪಡೆದದ್ದು ನಿಜ. ಹತ್ತು ಚಿತ್ರಕಾರರ ಕುಂಚದ ಕೈಚಳಕದಲ್ಲಿ ಹತ್ತು ಬಗೆಯ ವರ್ಣರಂಜನೆಯ ಹೊಸ ಹೊಸ ಕಲೆಗಳು ಹೊರಹೊಮ್ಮುತ್ತವೆ. ಕಲೆಯ ನಿರ್ಮಾಣಕ್ಕೆ ಬೇಕಾಗುವ ಸಮನ್ವಯ ಪ್ರತಿಭೆಯನ್ನು ಕಲಾವಿದ ಉಳಿಸಿಕೊಂಡು ಹೋಗುವ ಮನೋ-ಧರ್ಮವನ್ನು ಬೆಳೆಸಿಕೊಂಡಲ್ಲಿ ಆಗ ತನ್ನಿಂದ ರಚಿತವಾದ ಚಿತ್ರಕಲೆ ಇಂದ್ರಸೃಷ್ಟಿಯನ್ನೇ ನಿರ್ಮಿಸಬಲ್ಲದು. ಕಲೆಯಿಂದ ಸೌಂದರ್ಯತುಂಬುವ ಶಕ್ತಿ ಕಲಾರಾಧಕನಿಗೆ ಮಾತ್ರ ಸಾಧ್ಯ. ಅಂತೆಯೇ ಬಣ್ಣದ ಬದುಕಿನಲ್ಲಿಯೇ ಬಾಳಿ ಕಲ್ಪನಾ ಶಕ್ತಿಯಿಂದ ಅಳಿದುದ್ದನ್ನು ಸಹ ಜೀವಂತವಾಗಿರಿಸುವ ಪ್ರತಿಭೆ ಯನ್ನು ಕಲಾವಿದ ಕುಂಚದಿಂದ ಚಿತ್ರಿಸುವಾಗ ಜನರ ಕಣ್ಮನ ಸೆಳೆಯುವ ಚಿತ್ರಕಲೆಯಲ್ಲಿ ತನ್ನ ಅಪ್ರತಿಮ ಪ್ರತಿಭೆಯನ್ನು ಕಾಣಿಕೆಯಾಗಿ ನೀಡುತ್ತಾ ಬಂದಿದ್ದಾನೆ. ಇಂಥಹ ಅನೇಕ ಕಲಾತಪಸ್ವಿಗಳು ಚಿತ್ತಾರಲೋಕಕ್ಕೆ ರೂವಾರಿಗಳಾಗಿದ್ದಾರೆ.

---

3. ಪಿ. ಆರ್ ತಿಪ್ಪೆಸ್ವಾಮಿ (ಪ್ರ.ಸಂ.) : ಚಿತ್ರಕಲಾ ಪ್ರಪಂಚ, ಪುಟ 110
4. ಡಾ. ಎಸ್.ಸಿ. ಪಾಟೀಲ (ಸಂ.) : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ 144
5. ಡಾ. ಎಸ್.ಸಿ. ಪಾಟೀಲ (ಸಂ.) : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು. ಪುಟ 133
6. ಪಿ. ಆರ್ ತಿಪ್ಪೆಸ್ವಾಮಿ (ಪ್ರ.ಸಂ.) : ಚಿತ್ರಕಲಾ ಪ್ರಪಂಚ. ಪುಟ 308

ಕರ್ನಾಟಕ ಸಾಂಸ್ಕೃತಿಕ ಪರಂಪರೆಯ ಇತಿಹಾಸದಲ್ಲಿ ಲಲಿತಕಲೆಗಳ ಪಾತ್ರ ತುಂಬ ಮೌಲಿಕವಾದದ್ದು ಈ ನಾಡನ್ನು ಕಟ್ಟುವಲ್ಲಿ ಅನೇಕ ಜನರ ಪರಿಶ್ರಮದ ಬೆವರಿದೆ. ಅದರಲ್ಲಿ ಕಲಾವಿದನ ಪಾತ್ರವನ್ನು ನಿರ್ಲಕ್ಷಿಸುವಂತಿಲ್ಲ. ಚಿತ್ರ ಶಿಲ್ಪಕಲೆಗಳು ನಾಡಿನ ಅಮೂಲ್ಯ ಆಸ್ತಿಗಳಾಗಿವೆ. ಅಲ್ಲದೇ ಅವುಗಳು ಸಾವಿರಾರು ವರ್ಷದ ಇತಿಹಾಸವನ್ನು ಇಂದಿಗೂ ಸಾರಿ ಹೇಳುತ್ತವೆ. ಅವುಗಳ ಸಂರಕ್ಷಣೆಯ ದೃಷ್ಟಿಯಿಂದ ಹೆಚ್ಚಿನ ಪ್ರಮಾಣದಲ್ಲಿ ಅಧ್ಯಯನಗಳು ನಡೆಯದೇ ಇರುವುದು ಕಂಡುಬರುತ್ತದೆ. ನಾಡಿನ ಸಾಂಸ್ಕೃತಿಕ ಪರಂಪರೆಯ ಪ್ರತೀಕವಾಗಿರುವ ಚಿತ್ರ, ಶಿಲ್ಪಕಲೆಗಳು , ಸಾಂಸ್ಕೃತಿಕ ಪರಂಪರೆಯ ಹರಿಕಾರರಾದ ಕಲಾವಿದರ ಕುರಿತಾದ ಅಧ್ಯಯನಗಳು ಗಮನಾರ್ಹವಾಗಿ ನಡೆಯಬೇಕಾಗಿವೆ.

ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಹಲವಾರು ಕಲಾವಿದರು ತಮ್ಮ ಬದುಕನ್ನೇ ಕಲೆಗಾಗಿ ಮುಡುಪಾಗಿಟ್ಟುಕೊಂಡಿರುವರು. ನಮ್ಮಲ್ಲಿ ಕಲಾವಿದರು , ಕಲಾನಿದರ್ಶನಗಳು ಸಾಕಷ್ಟಿದ್ದರೂ ಅವುಗಳ ಕುರಿತು ನಡೆದ ಚರ್ಚೆ, ವಿಮರ್ಶೆಗಳು , ಸಂಶೋಧನೆಗಳು ಮಾತ್ರ ತುಂಬ ವಿರಳ. ಬೆರಳೆಣಿಕೆಯಷ್ಟು ಎಂದರೆ ತಪ್ಪಿಲ್ಲ. ಇಂತಹ ಪ್ರಮುಖ ಕಲಾವಿದರ ಅಧ್ಯಯನಗಳು ಇಂದು ನಡೆಯಬೇಕಿವೆ. ಈ ಹಿನ್ನೆಲೆಯಲ್ಲಿ ಕಲಬುರ್ಗಿ ಜಿಲ್ಲೆಯೂ ಕೂಡ ಅನೇಕ ಕಲಾವಿದರಿಗೆ ಜನ್ಮ ನೀಡಿದ ತಾಣವಾಗಿದೆ. ಇತ್ತೀಚಿನ ಈ ಅಧುನಿಕ ಯುಗದಲ್ಲಿ ಈ ಜಿಲ್ಲೆಯು ಚಿತ್ರಕಲೆಯಲ್ಲಿ ರಾಷ್ಟ್ರಮಟ್ಟದವರೆಗೂ ಬೆಳೆದು ವ್ಯಾಪಿಸಿರುವುದಂತೆ ತೋರುತ್ತದೆ. ಅದರಲ್ಲಿ ಮುಖ್ಯವಾಗಿ ಶಂಕರರಾವ ಅಳಂದಕರ್, ಎಂ. ಟಿ. ಭೋಪಲೆ , ಶಾಂತಲಿಂಗಪ್ಪ ಪಾಟೀಲ, ಚಂದ್ರಶೇಖರ, ಎಸ್. ಎಮ್. ಪಂಡೀತರಂಥವರನ್ನು ಹೆಸರಿಸಬಹುದು. ಇವರು ತಮ್ಮ ಬದುಕನ್ನೇ ಕಲೆಗಾಗಿ ಮುಡುಪಾಗಿಟ್ಟುಕೊಂಡವರು. ಇಂಥವರ ಸಾಲಿನಲ್ಲಿ ತಮ್ಮ ಬದುಕನ್ನೇ ಕಲೆಗಾಗಿ ಮುಡುಪಾಗಿಸಿಕೊಂಡವರು ಜಿ. ಎಸ್. ಖಂಡೇರಾವರೂ ಒಬ್ಬರು. ಶ್ರೀ. ಜಿ.ಎಸ್. ಖಂಡೇರಾವರ ಬಗ್ಗೆ ಇಲ್ಲಿ ಅಧ್ಯಯನವನ್ನು ಮಾಡುವ ಉದ್ದೇಶವನ್ನು ಹೊಂದಿದೆ.

ಕಲಾವಿದನ ಬದುಕು , ಪರಿಸರ, ವ್ಯಾಸಂಗ, ಧ್ಯೇಯ, ಪ್ರೇರಣೆ, ಸಾಧನೆ, ಸಿದ್ಧಿ ಮುಂತಾದವುಗಳು ಆತನ ಕಲಾಕೃತಿಯ ಸೃಷ್ಟಿಯ ಪರಿಕರಗಳಾಗಿರುತ್ತವೆ. ಕಲಾವಿದ ಅವುಗಳಿಗೆ ಅತೀತನಾಗಿ ಕಲಾಕೃತಿ ನಿರ್ಮಾಣಕ್ಕೆ ಅವುಗಳನ್ನು ಹೇಗೆ ದುಡಿಸಿಕೊಳ್ಳುತ್ತಾನೆ. ಮತ್ತು ಕಲಾವಿದನ ಸ್ವಂತಿಕೆಯು ಹೇಗೆ ಅಲ್ಲಿ ಅಭಿವ್ಯಕ್ತಗೊಂಡಿರುತ್ತದೆ ಎಂಬುದು ಮುಖ್ಯವಾಗುತ್ತದೆ. ಕಲಾವಸ್ತುವಿನ ಆಯ್ಕೆಯಲ್ಲಿ ಕಲಾವಿದನ ಅಭಿರುಚಿಯೂ ಆ ವಸ್ತುವಿನ ಬಗ್ಗೆ ತೋರುವ ಆಸ್ಥೆ ಇಲ್ಲವೆ ಪ್ರತಿಕ್ರಿಯೆಯಲ್ಲಿ ಕಂಡುಬರುತ್ತದೆ. ಯಾವುದೇ ಕಲಾವಿದನ ಧೋರಣೆಯೂ ಅವನದೇ ಆದ ಅಭಿವ್ಯಕ್ತಿಯ ವೈಯಕ್ತಿಕತೆಯಲ್ಲಿ ಅವನ ಕಲಾಸೃಷ್ಟಿಯ ವಿಶಿಷ್ಟತೆಯನ್ನು ಗುರುತಿಸಬಹುದು.[7] ಈ ಹಿನ್ನೆಲೆಯಲ್ಲಿ ಕಲಾವಿದರ ಜೀವನ ಚರಿತ್ರೆಯ ಅಧ್ಯಯನವು ಇಲ್ಲಿ ಅಷ್ಟೇ ಮಹತ್ವದ್ದಾಗಿದೆ.

ಈ ಸಂಸ್ಕೃತಿಯ ಬಹುಮುಖ್ಯವಾದ ಅಭಿವ್ಯಕ್ತಿಯಲ್ಲಿ ಚಿತ್ರಕಲೆಯು ಒಂದು. ಯಾವುದೇ ಕಲಾಕೃತಿಯೊಂದರ ಅಧ್ಯಯನಕ್ಕೆ ಅದರ ಕರ್ತೃವಿನ ಜೀವನಾಭ್ಯಾಸವು ಅಗತ್ಯವಾಗಿರುತ್ತದೆ. ಕಲಾವಿದ ಬಾಳಿದ ಕಾಲ, ಪರಿಸರ, ಅಲ್ಲದೆ ಅವನ ಸಮಕಾಲೀನ ಅಂಶಗಳು ಹೇಗೆ ಕಲಾಕೃತಿಯಲ್ಲಿ ಒಡಮೂಡಿವೆ ಎಂಬ ಅಂಶಗಳನ್ನು ಅಭ್ಯಸಿಸಿದರೆ ಮಾತ್ರ ಕಲಾಕೃತಿಯನ್ನು ತಿಳಿದುಕೊಳ್ಳಲು ಸಾಧ್ಯ. ಇಲ್ಲಿ ಜಿ.ಎಸ್. ಖಂಡೇರಾವ ಅವರ ಸಾಂಸ್ಕೃತಿಕ ಪರಿಸರ, ಈ ಒಂದು ಪರಿಸರದಲ್ಲಿ ಅವರಿಗೆ ಚಿತ್ರಕಲೆಯ ಕಡೆಗೆ ಒಲಿದ ಮನಸ್ಸು , ಅವರ ಬಾಲ್ಯ ಜೀವನದ ಕಲಾಸಕ್ತಿಗಳು, ಅವರಿಗೆ ಪ್ರೇರಣೆ ಪ್ರೋತ್ಸಾಹವನ್ನು ನೀಡಿದವರು. ಅವರ ಪ್ರೇರಣೆಯಿಂದ ಖಂಡೇರಾವರು ಉನ್ನತಕಲಾಶಿಕ್ಷಣವನ್ನು ಪಡೆಯಲು ಮುಂಬೈನ ಜೆ. ಜೆ. ಕಲಾಶಾಲೆಗೆ ತೆರಳಿದ್ದು, ಮುಂಬೈ ಪರಿಸರದಲ್ಲಿಯ ಅವರಕಲಾಸಕ್ತಿ, ಅಲ್ಲಿಯ ಕಲಾಗುರುಗಳು, ಅವರ ಸಮಕಾಲೀನ ಕಲಾವಿದರು, ಇವರ ಜೊತೆಗೂಡಿ ಖಂಡೇರಾವರು ಕಲಾಚಟುವಟಿಕೆಗಳಲ್ಲಿ ಭಾಗವಹಿಸಿದ್ದು, ಜೆ.ಜೆ.ಕಲಾಶಾಲೆಯಲ್ಲಿನ ಪಠ್ಯಕ್ರಮ , ಈ ಒಂದು ಹಂತದಲ್ಲಿ ಮುಂಬೈ ಕಲಾವಾತಾವರಣದಿಂದ ಅವರಿಗಾದ ಅನುಭವ

---

7. ಲಕ್ಷ್ಮಿದೇವಿ ಗವಾಯಿಯವರ ಕಲಾವಿದ ಎಮ್.ಎ.ಚಟ್ಟಿ ಜೀವನ, ಕಲಾಕೃತಿಗಳು ಅಪ್ರಕಟಿತ ಮಹಾ ಪ್ರಬಂಧ ಕನ್ನಡ ವಿ.ವಿ.ಹಂಪಿ ಪುಟ 164

ಇವರಿಗೆ ಪ್ರೇರಣೆಯನ್ನು ನೀಡಿದವರು. ಬೇರೆಯವರ ಕಲಾಕೃತಿಗಳಿಂದ ಇವರ ಮೇಲಾದ ಪ್ರಭಾವ ಬೇರೆಯವರ ಕಲಾಕೃತಿಗಳಿಂದ ಪ್ರಭಾವಿತರಾಗಿ ತಮ್ಮ ಕಲಾಕೃತಿಗಳಲ್ಲಿ ಬಳಸಿಕೊಂಡ ವಸ್ತುವಿಷಯ, ತಂತ್ರ , ಶೈಲಿ ಮತ್ತು ಅವರ ಕಲಾ ಚಟುವಟಿಕೆಗಳು ಇವುಗಳನ್ನು ಕುರಿತು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗುವುದು.

ಜಿ.ಎಸ್. ಖಂಡೇರಾವರು ಕಲಬುರ್ಗಿಯಲ್ಲಿ ಆದರ್ಶ ಕಲಾ ಮಂದಿರವನ್ನು ಸ್ಥಾಪಿಸಿ, ಕಲಬುರ್ಗಿಯ ಪರಿಸರದಲ್ಲಿ ಕಲಾವಾತಾವರಣವನ್ನು ಸೃಷ್ಟಿಸಿದವರಾಗಿದ್ದಾರೆ. ಇದಲ್ಲದೆ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಸ್ನಾತಕೋತ್ತರ ಲಲಿತಕಲಾ ವಿಭಾಗದ ನಿರ್ದೇಶಕರಾಗಿ ಸುಮಾರು ಮೂರು ದಶಕಗಳವರೆಗೆ ಕಲಾಶಿಕ್ಷಕರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಇವರ ಕೈಯಲ್ಲಿ ಪಳಗಿದ ಅನೇಕ ವಿದ್ಯಾರ್ಥಿಗಳು ನಾಡಿನ ಹಲವಾರು ಕಡೆಗಳಲ್ಲಿ ತಮ್ಮನ್ನು ಪರಿಚಯಸಿಕೊಂಡಿದ್ದಾರೆ. ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡವರಾಗಿದ್ದಾರೆ. ಆದರ್ಶ ಕಲಾಶಿಕ್ಷಕರಾಗಿ ,ಕಲಾವಿದರಾಗಿ, ಒಳ್ಳೆಯ ಆಡಳಿತಗಾರರಾಗಿ ಅಲ್ಲದೇ ಚಿತ್ರಕಲೆಗಾಗಿಯೇ ತಮ್ಮನ್ನು ಅರ್ಪಿಸಿಕೊಂಡ ಶ್ರೀ. ಜಿ. ಎಸ್. ಖಂಡೇರಾವ ಅವರು ರೇಖಾಚಿತ್ರ, ಜಲವರ್ಣ, ತೈಲವರ್ಣ, ಮಿಶ್ರಮಾಧ್ಯಮಗಳಲ್ಲಿ ಸಾವಿರಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಇವರ ನೈಜಸಂಯೋಜನಾ ಕಲಾಕೃತಿಗಳು ಈ ಭಾಗದ ಹಲವಾರು ಮನೆಮಠಗಳಲ್ಲಿ ಸಂಗ್ರಹಗೊಂಡಿರುವುದನ್ನು ಕಾಣ-ಬಹುದು. ಯುವ ಪೀಳಿಗೆಗೆ ಅವು ಕಲಾಸಕ್ತಿಯನ್ನು ಮೂಡಿಸುವಂತಹುಗಳಾಗಿವೆ. ಇದಲ್ಲದೆ ದೇಶ ವಿದೇಶಗಳ ಸಂಗ್ರಹಾಲಯಗಳಲ್ಲಿ ಮತ್ತು ಖಾಸಗಿ ಸಂಘ ಸಂಸ್ಥೆಗಳಲ್ಲಿಯೂ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ. ಖಂಡೇರಾವ ಅವರು ಅನೇಕ ಕಲಾಪ್ರದರ್ಶನಗಳ ಮೂಲಕ ಮತ್ತು ಸಾಂಸ್ಕೃತಿಕ ಸಂಘಟನೆಗಳಿಂದಾಗಿ ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಶ್ರೀಮಂತಗೊಳಿಸುವಲ್ಲಿ ಇವರು ತುಂಬ ಪರಿಶ್ರಮಿಸಿದ್ದಾರೆ. ಹೀಗೆ ಖಂಡೇರಾವರು ಚಿತ್ರಿಸಿದ ಕಲಾಕೃತಿಗಳು, ಅವರ ಕಲಾಪ್ರದರ್ಶನಗಳು, ಅವರು ಕೈಗೊಂಡ ಅನೇಕ ಕಲಾಚಟುವಟಿಕೆಗಳನ್ನು ಅವರ ಕಲಾ ಬದುಕು, ಅವರ ಜೀವನ ಮತ್ತು ಕಲಾಸಾಧನೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ದೃಷ್ಟಿಯಿಂದ ಈ ಅಧ್ಯಯನವು ತುಂಬ ಮಹತ್ವದ್ದಾಗಿದೆ.

ಜಗದೇವಪ್ಪ ಶಂಕ್ರಪ್ಪ ಖಂಡೇರಾವರು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಖ್ಯಾತಿಯನ್ನು ಹೊಂದಿದ ಕಲಾವಿದರು. ಅಂತರರಾಷ್ಟ್ರೀಯ ಟ್ರಿನಾಲೆ ಕಲಾಪ್ರದರ್ಶನದಲ್ಲಿ ವಿಶೇಷವಾಗಿ ಕರ್ನಾಟಕದಿಂದ ಆಹ್ವಾನಿತರಾದವರು. ಮತ್ತು ಕರ್ನಾಟಕ ಸರಕಾರದ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಲಲಿತಕಲಾ ಅಕಾಡೆಮಿಯ ಉನ್ನತ ಕಲಾವಿದ ಪ್ರಶಸ್ತಿ ಪಡೆದಿದ್ದಾರೆ. ಅಲ್ಲದೇ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ, ಮುಂಬೈನ ಬಾಂಬೆ ಆರ್ಟ ಸೊಸಾ-ಯಿಟಿಯ ಅಜೀವ ಸದಸ್ಯರಾಗಿ ಹಲವಾರು ಬಾರಿ ಆಮಂತ್ರಿತ ಉಪನ್ಯಾಸಕರಾಗಿ, ಕಲಾಪ್ರದರ್ಶನಗಳ ನಿರ್ಣಾಯಕರಾಗಿ , 1970 ರ ದಶಕದಲ್ಲಿ ಮೈಸೂರು ಆರ್ಟ ಕೌನ್ಸಿಲ್ ಎಂಬ ಸಂಸ್ಥೆಯಲ್ಲಿ ಕ್ರಿಯಾಶೀಲ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಹೀಗೆ ಖಂಡೇರಾವರ ಜೀವನದೊಂದಿಗೆ ಅವರ ಕಲಾ ಸಾಧನೆಯನ್ನು ಇಲ್ಲಿ ಮುಖ್ಯವಾಗಿ ಗುರುತಿಸ-ಬಹುದಾಗಿದೆ. ಅಲ್ಲದೇ ಖಂಡೇರಾವರ ಮೂಲಕ ಅವರ ಕಲಾಕೃತಿಗಳಲ್ಲಿ ನಮ್ಮ ಸಂಸ್ಕೃತಿಯ/ಸಮಕಾಲೀನ ಸಾಂಸ್ಕೃತಿಕ ವಿವರಗಳು ಹೇಗೆ ದಾಖಲುಗೊಂಡಿವೆ ಎಂಬುದನ್ನೂ ಸಹ ಪ್ರಸ್ತುತ ಅಧ್ಯಯನದ ಮೂಲಕ ಕಂಡುಕೊಳ್ಳಲಾಗುವುದು. ಇಂದು ವಿವಿಧ ಕ್ಷೇತ್ರಗಳಲ್ಲಿ ವ್ಯಾಪಕನಾದ ಸಂಶೋಧನೆ ನಡೆಯುತ್ತಿದ್ದರೂ ಚಿತ್ರಕಲಾ ಕ್ಷೇತ್ರದಲ್ಲಿಯ ಸಂಶೋಧನೆ ಮಾತ್ರ ಇನ್ನೂ ಕಡಿಮೆ. ಆದರೆ ಈ ಕ್ಷೇತ್ರದ ಕೊಡುಗೆ ಅಪಾರವಾದದ್ದು ಎಂಬುದರಲ್ಲಿ ಎರಡು ಮಾತಿಲ್ಲ. ಹಲವಾರು ಕಲಾವಿದರು ಉನ್ನತ ಶಿಕ್ಷಣದ ಕೊರತೆಯಿಂದಾಗಿ ಮತ್ತು ಕಲಾಸೌಕರ್ಯಗಳ ಕೊರತೆಯಿಂದಾಗಿ ಈ ಕಲಾಕ್ಷೇತ್ರದ ಅಧ್ಯಯನ ಕುಂಠಿತಗೊಳ್ಳುತ್ತ ಬಂದಿರುವುದನ್ನು ಗಮನಿಸಬಹುದು.

ಆದರೆ ಮುಂದಿನ ಪೀಳಿಗೆಗೆ ಈ ಕಲೆ, ಕಲಾವಿದರ ಸಾಧನೆಯನ್ನು ಪರಿಚಯಿಸುವ ದಾಖಲೆಗಳು ತುಂಬ ಮಹತ್ವದ್ದಾಗಿವೆ. ಇತ್ತೀಚಿನ ದಿನಗಳಲ್ಲಿ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಈ ಕ್ಷೇತ್ರದ ಸಂಶೋಧನೆ ಇನ್ನುಳಿದ ಕ್ಷೇತ್ರಗಳ ಸಂಶೋಧನೆಯಂತೆ ಪ್ರಾರಂಭಗೊಂಡಿರುವುದು ಒಂದು ಶುಭದ ಸೂಚನೆಯಾಗಿದೆ.

ಇಲ್ಲಿಯವರೆಗೆ ನಡೆದ ಅಧ್ಯಯನಗಳು :

ಇಲ್ಲಿಯವರೆಗೆ ಈ ಕ್ಷೇತ್ರದಲ್ಲಿ ಸಂಶೋಧನೆ ಲೇಖನ ರೂಪದಲ್ಲಿ ಒಂದೆರಡು ಗ್ರಂಥದ ಉಪ ಅಧ್ಯಾಯಳಾಗಿ, ಸಣ್ಣಪ್ರಮಾಣದ ಅಧ್ಯಯನಗಳು ಅಲ್ಲಲ್ಲಿ ಕಾಣಿಸಿಕೊಂಡಿವೆ. 1983 ರಿಂದ ಕರ್ನಾಟಕದಲ್ಲಿ ಚಿತ್ರಕಲಾಕ್ಷೇತ್ರದಲ್ಲಿ ವಿಶ್ವ ವಿದ್ಯಾಲಯ ಹಂತದಲ್ಲಿ ಸಂಶೋಧನ ಅಧ್ಯಯನ ಮೊದಲ ಬಾರಿಗೆ ಪ್ರಾರಂಭಗೊಂಡಿರುವುದು ಕಂಡುಬರುತ್ತದೆ. ಡಾ॥ ಎಸ್.ಸಿ.ಪಾಟೀಲರು ಸ್ನಾತಕೊತ್ತರ ಶಿಕ್ಷಣ ವಿಭಾಗಕ್ಕೆ ಸಲ್ಲಿಸಿದ ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ ಒಂದು ಅಧ್ಯಯನ ಎಂಬ ಸಂಶೋಧನ ಕಿರುಪ್ರಬಂಧ ಈ ಕ್ಷೇತ್ರದಲ್ಲಿ ಬಂದ ಮೊದಲ ಪ್ರಯತ್ನವಾಗಿದೆ.

1987 ರಲ್ಲಿ ಡಾ॥ ಬಿ.ಕೆ.ಹಿರೇಮಠ ಅವರ ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನವೆಂಬ ಪಿಎಚ್.ಡಿ. ಮಹಾ ಪ್ರಬಂಧದಲ್ಲಿ ಹಸ್ತಪ್ರತಿ ಚಿತ್ರಗಳನ್ನು ಪ್ರಾಸಂಗಿಕವಾಗಿ ಒಂದೆರಡು ಅಧ್ಯಾಯಗಳಲ್ಲಿ ಅಧ್ಯಯನ ಮಾಡಲಾಗಿದೆ. 1991 ರಲ್ಲಿ ಕರ್ನಾಟಕದಲ್ಲಿ ಚಿತ್ರಕಲೆಯನ್ನೇ ಮುಖ್ಯವಾಗಿ ಪಿಎಚ್.ಡಿ. ಅಧ್ಯಯನಕ್ಕಾಗಿ ತೆಗೆದುಕೊಂಡು ಸಂಶೋಧನೆ ನಡೆಸಿದ್ದುದು ಕರ್ನಾಟಕ ವಿಶ್ವವಿದ್ಯಾಲಯದಿಂದ ಬಂದ ಡಾ॥ ಎಸ್.ಸಿ ಪಾಟೀಲರ ಕರ್ನಾಟಕದ ಜನಪದ ಚಿತ್ರಕಲೆಯಾಗಿದೆ. ಇದು ಈ ಕ್ಷೇತ್ರದಲ್ಲಿ ಬಂದ ಮೊಟ್ಟಮೊದಲ ಸಂಶೋಧನ ಮಹಾಪ್ರಬಂಧವೊಂದಾಗಿದೆ. ನಂತರದಲ್ಲಿ ಡಾ.ಅ.ಲ.ನರಸಿಂಹನ್ ಅವರು ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು ಎಂಬ ಪಿಎಚ್.ಡಿ. ಮಹಾಪ್ರಬಂಧ ಬೆಂಗಳೂರು ವಿ.ವಿ.ಯಿಂದ ಬಂದಿದೆ. ಕಲಾವಿದರ ಕುರಿತು ಡಾ. ಪುಷ್ಪಾ ದ್ರಾವಿಡರ : ಕಲಾವಿದ ರೋರಿಕ್ ಮತ್ತು ಅವರ ಕಲಾಕೃತಿಗಳು ಒಂದು ಅಧ್ಯಯನ ಪಿ.ಎಚ್‌ಡಿ. ಮಹಾಪ್ರಬಂಧ ಬೆಂಗಳೂರು ವಿಶ್ವವಿದ್ಯಾಲಯ ದಿಂದ ಹೊರಬಂದಿದೆ. ಡಾ. ಯಾದಪ್ಪ ಪರದೇಶಿಯವರ : ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ ಒಂದು ಅಧ್ಯಯನ ಎಂಬ ಪಿಎಚ್.ಡಿ. ಮಹಾಪ್ರಬಂಧ ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ 2001 ರಲ್ಲಿ ಹೊರಬಂದಿದೆ. ಡಾ. ಸಂಪದಭಟ್ ಅವರ ರಾಗ ಮಾಲಾ ಚಿತ್ರಗಳು ಮತ್ತು ಹಿಂದುಸ್ತಾನಿ ಸಂಗೀತ ಪಿಎಚ್.ಡಿ. ಮಹಾಪ್ರಬಂಧ ಕನ್ನಡ ವಿ.ವಿ. ಹಂಪಿಯಿಂದ ಬಂದಿದೆ. ಅದಲ್ಲದೆ ಲಕ್ಷ್ಮೀದೇವಿ ಗವಾಯಿಯವರ : ಕಲಾವಿದ ಎಂ.ಎ. ಚಟ್ಟಿಯವರ ಜೀವನ, ಕಲಾಕೃತಿಗಳು ಒಂದು ಅಧ್ಯಯನ ಮತ್ತು ಶಿವಾನಂದ ಬಂಟನೂರರ : ಕರ್ನಾಟಕ ಜನಪದ ಶಿಲ್ಪಕಲೆ ಒಂದು ಅಧ್ಯಯನ, ಮಹಾಪ್ರಬಂಧಗಳು ಹಂಪಿ ಕನ್ನಡ ವಿಶ್ವವಿಧ್ಯಾಲಯದ ಪಿ.ಎಚ್.ಡಿ. ಪದವಿಗಾಗಿ ಇದೀಗ ಸಲ್ಲಿಸಲಾಗಿದೆ.

ಗುಲಬರ್ಗಾ ವಿಶ್ವವಿದ್ಯಾಲಯವೂ ಕೂಡ ಈ ಕ್ಷೇತ್ರದಲ್ಲಿ ಸಂಶೋಧನ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟಿದೆ. ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಈ ವರ್ಷ ಚಿತ್ರಕಲೆಯಲ್ಲಿ ಎಂ.ಫಿಲ್. ಪದವಿ ಪ್ರಾರಂಭಗೊಂಡಿರುವುದು ಈ ಕ್ಷೇತ್ರದ ಸಂಶೋಧನ ಹೆಚ್ಚು ವ್ಯಾಪಕವಾಗಿ ಬೆಳೆಯುತ್ತಿರುವುದರ ಲಕ್ಷಣವಾಗಿದೆ. ಪ್ರಸ್ತುತ ಸಂದರ್ಭದ ಗಮನಾರ್ಹ ಕಲಾವಿದರಲ್ಲೊಬ್ಬರಾದ ಚಿತ್ರಕಲಾವಿದ ಜೆ. ಎಸ್. ಖಂಡೇರಾವರನ್ನು ಕುರಿತು ಇಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಇವರ ಕುರಿತು ಕರ್ನಾಟಕ ಲಲಿತ ಕಲಾ ಅಕಾಡೆಮಿಯಿಂದ ಒಂದು ಕಿರುಪರಿಚಯಾತ್ಮಕ ಕೃತಿ ಪ್ರಕಟವಾಗಿದೆ. ಕೆಲವು ದಿನ ಪತ್ರಿಕೆ ಮತ್ತು ಗ್ರಂಥಗಳಲ್ಲಿ ಇವರ ಪರಿಚಯದ ಲೇಖನಗಳು ಬಂದಿವೆ. ಇಷ್ಟನ್ನು ಬಿಟ್ಟರೆ, ಸಮಗ್ರವಾದ ಇವರ ವ್ಯಕ್ತಿತ್ವ ಕಲಾಕೃತಿಗಳ ಅಧ್ಯಯನದ ಯಾವ ಗ್ರಂಥಗಳು ಇಲ್ಲಿಯ ವರೆಗೆ ಬಾರದೆ ಇರುವುದನ್ನು ಗಮನಿಸಿ ಪ್ರಸ್ತುತ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವನ್ನು ಎಂಟು ಅಧ್ಯಾಯಗಳಲ್ಲಿ ವಿಂಗಡಿಸಿಕೊಂಡಿದ್ದು, ಪ್ರತಿಯೊಂದು ಅಧ್ಯಾಯದಲ್ಲಿ ಚರ್ಚಿಸುವ ವಿಷಯವನ್ನು ಕುರಿತಂತೆ ಅದರ ಸಂಕ್ಷಿಪ್ತ ಸ್ವರೂಪದ ವಿವರವನ್ನು ಇಲ್ಲಿ ಕೊಡಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಅಧ್ಯಯನದ ಸ್ವರೂಪ, ಅಧ್ಯಯನದ ವಿಧಾನ ಮತ್ತು ಮೂಲ ಆಕರ ಸಾಮಗ್ರಿ, ಆನುಷಂಗಿಕ ಆಕರ ಸಾಮಗ್ರಿಯ ಕುರಿತಾದ ವಿವರಣೆ ಇರುವುದು.

ಎರಡನೆಯ ಅಧ್ಯಾಯದಲ್ಲಿ ಜಿ.ಎಸ್. ಖಂಡೇರಾವರು ಜನಿಸಿದ ಕಲಬುರ್ಗಿ ಪರಿಸರದ ಸಾಂಸ್ಕೃತಿಕ ಹಿನ್ನೆಲೆಯೊಂದಿಗೆ ಅವರ ಬಾಲ್ಯಜೀವನ, ಪ್ರಾಥಮಿಕ ಮತ್ತು ಪ್ರೌಢಹಂತದ ಶೈಕ್ಷಣಿಕ ಜೀವನವನ್ನು ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಜಿ.ಎಸ್. ಖಂಡೇರಾವ ಅವರು ಕಲಬುರ್ಗಿಯಲ್ಲಿ ತಮ್ಮ ಪ್ರಾಥಮಿಕ ಮತ್ತು ಪ್ರೌಢ ಹಂತದ ಶಿಕ್ಷಣವನ್ನು ಮುಗಿಸಿಕೊಂಡು ಮುಂಬೈನ ಸರ್. ಜಿ.ಜಿ. ಕಲಾಶಾಲೆ ಮತ್ತು ಕಲಾಗುರು ದಂಡಾವತಿಮಠ ರವರ ನೂತನ ಕಲಾಮಂದಿರದಲ್ಲಿ ಕೈಗೊಂಡ ಕಲಾಶಿಕ್ಷಣ ಅಲ್ಲಿಯ ಪಠ್ಯಕ್ರಮ, ಅವರ ಸಮಕಾಲೀನ ಕಲಾವಿದರು, ಅವರ ಗುರುಗಳು, ಅವರ ಸ್ನೇಹಿತರು, ಅಲ್ಲಿ ಅವರು ಕೈಗೊಂಡ ಕಲಾಚಟುವಟಿಕೆಗಳನ್ನು, ಮುಂಬೈನ ಕಲಾ ಮತ್ತು ಸಾಂಸ್ಕೃತಿಕ ವಾತಾವರಣವನ್ನು ಕುರಿತು ಇಲ್ಲಿ ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಜಿ.ಎಸ್. ಖಂಡೇರಾವ ಅವರು ಮುಂಬೈನ ಜಿ.ಜಿ. ಕಲಾಶಾಲೆ ಮತ್ತು ನೂತನ ಕಲಾಮಂದಿರದಲ್ಲಿ ಕಲಾಶಿಕ್ಷಣವನ್ನು ಪಡೆದು ಶರಣಬಸವೇಶ್ವರ ಕಲಾಮಹಾವಿದ್ಯಾಲಯದ ಲಲಿತಕಲಾ ವಿಭಾಗದಲ್ಲಿ ಉಪನ್ಯಾಸಕರಾಗಿ ಮುಂದೆ ಸ್ನಾತಕೋತ್ತರ ಲಲಿತಕಲಾ ವಿಭಾಗದಲ್ಲಿ ಮುಖ್ಯಸ್ಥರಾಗಿ ಸಲ್ಲಿಸಿದ ಸೇವೆಯನ್ನು ಅವರ ವೃತ್ತಿ ಜೀವನದ ಹಾಗೂ ಈ ಅವಧಿಯಲ್ಲಿ ಅವರು ರಚಿಸಿದ ಕಲಾಕೃತಿಗಳು, ಅವರ ಮಾರ್ಗದರ್ಶನದಲ್ಲಿ ತಯಾರಾದ ಕಲಾವಿದರ ಸ್ಥೂಲ ವಿವರಗಳನ್ನು ಹೊಂದಿದೆ

ಐದನೆಯ ಅಧ್ಯಾಯದಲ್ಲಿ ಜಿ.ಎಸ್. ಖಂಡೇರಾವರು ರಚಿಸಿದ ಕಲಾಕೃತಿಗಳನ್ನು ವಿಷಯವಾರು ಹಾಗೂ ಮಾಧ್ಯಮವಾರು ವರ್ಗೀಕರಿಸಿಕೊಂಡು ವಿವರವಾದ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಆರನೆಯ ಅಧ್ಯಾಯದಲ್ಲಿ ಜಿ.ಎಸ್.ಖಂಡೇರಾವರ ಕಲಾಕೃತಿಗಳ ರಚನೆಗೆ ಪರಿಸರ, ವಾತಾವರಣ, ಕಲಾವಿದರುಗಳ ಪ್ರೇರಣೆ, ಪ್ರಭಾವ ಕುರಿತು ಮತ್ತು ಅವರ ಕಲಾಕೃತಿಗಳು ಮತ್ತೊಬ್ಬರ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಜಿ.ಎಸ್. ಖಂಡೇರಾವರ ಕುರಿತಾದ ಗ್ರಂಥಗಳು, ಲೇಖನಗಳು, ಪತ್ರಿಕಾವರದಿಗಳು ಒಂದು ಬಗೆಯ ವಿಷಯಗಳಾದರೆ, ಅವರ ಕಲಾಚಟುವಟಿಕೆ ಬಗ್ಗೆ ಕಲಾಪ್ರದರ್ಶನಗಳು, ಕಲಾ ಶಿಬಿರಗಳು, ಕಾರ್ಯಾಗಾರಗಳು, ಪ್ರಾತ್ಯಕ್ಷಿಕೆಗಳು, ಕಲಾನಿರ್ಣಾಯಕರಾಗಿ ಹೋಗಿದ್ದು, ವಿಚಾರ ಸಂಕೀರ್ಣಗಳನ್ನೊಳಗೊಂಡ ಸಮಗ್ರ ವಿವರಗಳನ್ನು ಈ ಅಧ್ಯಾಯವು ಹೊಂದಿರುತ್ತದೆ.

ಎಂಟನೆಯ ಅಧ್ಯಾಯವು ಸಮಾರೋಪವಾಗಿದ್ದು, ಅಧ್ಯಯನದಿಂದ ಹೊರಬಂದ ಫಲಿತಗಳ ಕುರಿತಾದ ಸಮೀಕ್ಷೆಯನ್ನು ಒಳಗೊಂಡಿರುತ್ತದೆ.

ಅಧ್ಯಯನದ ವಿಧಾನ :

ಈ ಅಧ್ಯಯನಕ್ಕೆ ಎರಡು ರೀತಿಯ ಆಕರಗಳನ್ನು ಬಳಸಿಕೊಳ್ಳಲಾಗಿದೆ.

1) ಮೂಲ ಆಕರ ಸಾಮಗ್ರಿ.

2) ಆನುಷಂಗಿಕ ಆಕರ ಸಾಮಗ್ರಿ.

1. ಮೂಲ ಆಕರ ಸಾಮಗ್ರಿ

ಸಂಶೋಧನೆಯ ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದದ್ದು ಕ್ಷೇತ್ರಕಾರ್ಯ. ಸ್ವತಃ ಕಲಾವಿದರ

ಸಂದರ್ಶನ, ಚರ್ಚೆ, ಕಲಾಕೃತಿಗಳ ಛಾಯಾಚಿತ್ರಣ ಮಾಡುವದು ಅವರ ಕುರಿತು ಬಂದ ಸಂದರ್ಶನಗಳಿಂದ ವಿಷಯ-ಗಳನ್ನು ಸಂಗ್ರಹಿಸಿ ಅಧ್ಯಯನವು ವೈಶಿಷ್ಟ್ಯಪೂರ್ಣರೂಪದಲ್ಲಿರುತ್ತದೆ.

ಸಂದರ್ಶನ : ವಿಶೇಷವಾಗಿ ಇಲ್ಲಿ ಕಲಾವಿದರಾದ ಜಿ.ಎಸ್.ಖಂಡೇರಾವ ಅವರನ್ನು ಸಂದರ್ಶಿಸಿ , ಅವರ ಸಾಂಸ್ಕೃತಿಕ ಪರಿಸರ, ಬಾಲ್ಯಜೀವನ, ಅವರ ಮುಂಬೈ ಕಲಾಶಿಕ್ಷಣ , ಅಲ್ಲಿಯ ವಾತಾವರಣ , ಕಲೆಯ ಕಡೆ ಒಲಿದ ಮನಸ್ಸು , ಕಲಾವಿದರು , ಕಲಾಸ್ನೇಹಿತರು, ಕಲಾಗುರುಗಳು, ಅಲ್ಲಿ ಅವರು ಕೈಗೊಂಡ ಕಲಾಚಟುವಟಿಕೆಗಳು, ಅಲ್ಲಿಯ ವಾತಾವರಣದಿಂದ ಪಡೆದ ಅನುಭವಗಳು, ಪ್ರೇರಣೆ ನೀಡಿದ ಗುರುಗಳು, ಕಲಾವಿದರು, ಅವರ ವೃತ್ತಿಜೀವನ, ಈ ಹಂತದಲ್ಲಿ ಅವರು ರಚಿಸಿದ ಕಲಾಕೃತಿಗಳ ರಚನೆ, ಅವರ ಕಲಾಕೃತಿಗಳ ರಚನಾತಂತ್ರ ವಸ್ತುವಿಷಯ, ವರ್ಣಗಾರಿಕೆಯ ಪ್ರಭಾವ ಹೀಗೆ ಹತ್ತು ಹಲವು ವಿಷಯಗಳನ್ನು ಮುಖತಃ ಸಂದರ್ಶಿಸಲಾಯಿತು.

ಅಲ್ಲದೇ ಅವರ ಕುಟುಂಬದವರಿಂದ, ಅವರ ಸ್ನೇಹಿತವರ್ಗದವರಿಂದ, ಅವರ ನಿಕಟವರ್ತಿಗಳಿಂದ ಸಂದರ್ಶನವನ್ನು ಕೈಗೊಂಡು ವಿಷಯವನ್ನು ಸಂಗ್ರಹಿಸಿಕೊಳ್ಳಲಾಗಿದೆ. ಇಷ್ಟಲ್ಲದೆ ಅವರ ವ್ಯಕ್ತಿತ್ವವನ್ನು ತಿಳಿದುಕೊಳ್ಳುವ ಸಲುವಾಗಿ ಪ್ರಶ್ನಾವಳಿಯನ್ನು ತಯಾರಿಸಿಕೊಂಡು ಖಂಡೇರಾವರ ಸಮಕಾಲೀನ ಕಲಾವಿದರು, ಅವರ ಆಪ್ತಪರಿಚಿತರು, ಅವರ ವಿಧ್ಯಾರ್ಥಿಗಳಿಗೆ ಪತ್ರದ ಮೂಲಕ ಸಂದರ್ಶಿಸಿ ಅವರಿಂದಲೂ ಮಾಹಿತಿಯನ್ನು ಸಂಗ್ರಹಿಸಿಕೊಂಡು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಛಾಯಾಚಿತ್ರಣ : ಕಲಾವಿದ ಜಿ.ಎಸ್. ಖಂಡೇರಾವರ ಮನೆಗೆ ಹೋಗಿ ಅವರ ಅಮೂಲ್ಯ ಕಲಾಕೃತಿ-ಗಳನ್ನು ಛಾಯಾಚಿತ್ರ ಮಾಡಿಕೊಳ್ಳಲಾಯಿತು. ಇದರಲ್ಲಿ ಅವರು ಅಧ್ಯಯನ ಕಾಲದಲ್ಲಿ ರಚಿಸಿದ ಕಲಾಕೃತಿಗಳು, ಅಧ್ಯಾಪಕ ವೃತ್ತಿಯಲ್ಲಿ ರಚಿಸಿದ ಕಲಾಕೃತಿಗಳು, ನಿವೃತ್ತಿಯ ನಂತರದಲ್ಲಿ ರಚಿಸಿದ ಕಲಾಕೃತಿಗಳು ಹೀಗೆ ಅವರು ವಿವಿಧ ಹಂತಗಳಲ್ಲಿ ಚಿತ್ರಿಸಿದ ರೇಖಾಚಿತ್ರಗಳು ಹಾಗೂ ವರ್ಣಚಿತ್ರಗಳಲ್ಲಿ ಭಾವಚಿತ್ರಗಳು, ನಿಸರ್ಗ ಚಿತ್ರಗಳು, ನೈಜ ಸಂಯೋಜನ ಚಿತ್ರಗಳು, ಧಾರ್ಮಿಕ , ಪೌರಾಣಿಕ ಚಿತ್ರಗಳು, ಅಭ್ಯಾಸಪೂರ್ವದ ಚಿತ್ರಗಳು, (ಸ್ಕೆಚ್‌ಗಳು) ಹಲವಾರು ವಿಷಯಗಳನ್ನೊಳಗೊಂಡ ಕಲಾಕೃತಿಗಳ ಛಾಯಾಚಿತ್ರಗಳನ್ನು ಮಾಡಿಕೊಳ್ಳಲಾಯಿತು. ಇದಲ್ಲದೆ ಅವರ ರೇಖಾಚಿತ್ರಗಳಲ್ಲಿ ಕೆಲವು ಚಿತ್ರಗಳನ್ನು ಕಂಪೂಟರದ ಸ್ಕ್ಯಾನಿಂಗ್ ಮುಖಾಂತರ ಮುದ್ರಿಸಿಕೊಳ್ಳಲಾಯಿತು. ಹೀಗೆ ಈ ಎಲ್ಲ ವಿಧಾನಗಳಿಂದ ಅವಶ್ಯವಾದ ವಿಷಯಗಳನ್ನು ಸಂಗ್ರಹಿಸಿ ಕಿರು ಪ್ರಬಂಧಕ್ಕೆ ಬಳಸಿಕೊಳ್ಳಲಾಗಿದೆ.

ಆನುಷಂಗಿಕ ಆಕರ ಸಾಮಗ್ರಿ :

ಸಂಶೋಧನ ಮಹಾಪ್ರಬಂಧಗಳು, ಪ್ರಕಟಿತ - ಅಪ್ರಕಟಿತ ಕೃತಿಗಳು, ನಿಘಂಟುಗಳು, ಗೆಝೆಟೀಯರ್‌ಗಳು ಪತ್ರಿಕೆಗಳು, ಕಲಾವಿದರ ಕಲಾಕೃತಿಗಳನುದ್ದೇಶಿಸಿ ಪ್ರಕಟವಾದ ಕಲಾವಿಮರ್ಶೆ ಮತ್ತು ಅಭಿಪ್ರಾಯಗಳು, ಲೇಖನಗಳು ಸಂಶೋಧನ ಲೇಖನಗಳು , ಬೇರೆ ಬೇರೆ ಕಲಾಶಾಲೆಗಳು ಮತ್ತು ವಿಶ್ವವಿಧ್ಯಾಲಯಗಳ ಗ್ರಂಥಾಲಯಗಳಿಗೆ ಹೋಗಿ ಅಲ್ಲಿಂದ ವಿಷಯವನ್ನು ಸಂಗ್ರಹಿಸಿಕೊಂಡು ಬಂದು ಈ ಕಿರು ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಅಧ್ಯಾಯ ಎರಡು :

ಜಿ.ಎಸ್. ಖಂಡೇರಾವರು 1940 ನವ್ಹೆಂಬರ ಒಂದರಂದು ಕಲಬುರ್ಗಿಯಲ್ಲಿ ಜನಿಸಿದರು. ಇವರ ತಂದೆ ಶಂಕರಪ್ಪ, ತಾಯಿ ಬಸಮ್ಮ ಇವರದು ಸುಸಂಸ್ಕೃತ ಮನೆತನ ಮತ್ತು ದೊಡ್ಡ ಕುಟುಂಬ. ಈ ಕುಟುಂಬದಲ್ಲಿ ಜನ್ಮ ತಾಳಿದ ಖಂಡೇರಾವರು ಎರಡನೇ ದಿನದಲ್ಲಿಯೇ ತಮ್ಮ ತಾಯಿಯನ್ನು ಕಳೆದುಕೊಂಡು ಅನಾಥರಾದರು. ಕೆಲವು ಕಾಲ ತಮ್ಮ ಸೋದರತ್ತೆಯ ಆಶ್ರಯಪಡೆದರು. ಮುಂದೆ ತಮ್ಮ ಎರಡನೆಯ ತಾಯಿ ಶಿವಮ್ಮನವರ ಆರೈಕೆಯಲ್ಲಿ ಇವರು ತಮ್ಮ ವ್ಯಕ್ತಿತ್ವ ವನ್ನು ರೂಪಿಸಿಕೊಂಡು ಬೆಳೆದರು.

ಇವರು ತಮ್ಮ ಪ್ರಾಥಮಿಕ ಶಿಕ್ಷಣ ಹಂತದಲ್ಲಿಯೇ ಕಲಾಸಕ್ತಿಯನ್ನು ಹೊಂದಿದವರಾಗಿದ್ದುದು ತಿಳಿದುಬರುತ್ತದೆ. ಆದರೆ ಇವರ ತಂದೆಗೆ ಇದು ಇಷ್ಟವಿರಲಿಲ್ಲವೆಂದು, ಅವರು ತಮ್ಮ ಮಗ ಇಂಜಿನಿಯರೋ ಅಥವಾ ಇನ್ನಾವುದೇ ಅಧಿಕಾ ರಿಯೋ ಆಗಬೇಕೆಂದು ಬಯಸಿದ್ದರಂತೆ ಆದರೆ ಇವರ ಪ್ರಾಥಮಿಕ ಶಾಲೆಯಲ್ಲಿನ ಕಲಾಶಿಕ್ಷಕರಾಗಿದ್ದ ಮಹ್ಮದ ಷರೀಫ ಇವರು ಜಗದೇವಪ್ಪನವರಲ್ಲಿರುವ ಕಲೆಯನ್ನು ಕಂಡು ಅವರಿಗೆ ಉನ್ನತ ಕಲಾಶಿಕ್ಷಣವನ್ನು ಮುಂದುವರೆಸಲು ಪ್ರೇರೆಪಿಸಿದ್ದುದು ತಿಳಿದುಬರುತ್ತದೆ. ಹೀಗೆ ಖಂಡೇರಾವರು ಸಾಂಸ್ಕೃತಿಕ ಪರಿಸರ ಮತ್ತು ಬಾಲ್ಯ ಜೀವನವನ್ನು ಕುರಿತು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅಧ್ಯಾಯ ಮೂರು :

ಈ ಅಧ್ಯಾಯದಲ್ಲಿ ಜಿ. ಎಸ್. ಖಂಡೇರಾವರು ಕಲಬುರ್ಗಿಯಲ್ಲಿ ತಮ್ಮ ಪ್ರಾಥಮಿಕ ಹಂತದ ಶಿಕ್ಷಣವನ್ನು ಮುಗಿಸಿ ಮುಂಬೈನ ಸರ್.ಜಿ.ಜಿ.ಕಲಾಶಾಲೆಯಲ್ಲಿ ಸೇರಿ ಅಲ್ಲಿ ಅವರು ಡ್ರಾಯಿಂಗ್ ಮತ್ತು ಪೇಯಿಂಟಿಂಗ್ ವಿಷಯವನ್ನು ಆರಿಸಿಕೊಂಡು ಅಧ್ಯಯನ ಮಾಡಿದರು. ಆಗ ಪಳಸೀಕರ್, ಬಾಬುರಾವ್ ಸದ್ವೇಲ್ಕರ್ ಇವರ ಶಿಕ್ಷಕರಾಗಿದ್ದರು. ಬೆಳಗಿನ ವೇಳೆಯಲ್ಲಿ ಕಲಾಗುರು ದಂಡಾವತಿಮಠರವರ ನೂತನ ಕಲಾಮಂದಿರದಲ್ಲಿ ಹೆಚ್ಚಿನ ಅಭ್ಯಾಸ ಮಾಡುತ್ತಿದ್ದರು. ತಮ್ಮ ಸಹಪಾಟಿಗಳಾದ ಅಡಿವಿರೇಕರ್, ಜಿ. ಎಸ್.ಶೆಣೈ, ಮೃಘಾಂಕ ಜೋಶಿಯವರ ಜೊತೆಗೂಡಿ ಹಲವಾರು ಕಲಾಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದಾರೆ.

ಸರ್.ಜಿ.ಜಿ. ಕಲಾಶಾಲೆಯು ಕಟ್ಟುನಿಟ್ಟಾದ ಶಿಸ್ತಿನ ವ್ಯಾಸಾಂಗ ಪದ್ದತಿಯನ್ನು ಹೊಂದಿದ್ದಿತು. ಇದು ತಮ್ಮ ಜೀವನದಲ್ಲಿ ಮುಂದೆ ಕಲಾಸಾಧನೆಗೆ ಹೇಗೆ ಭದ್ರಬುನಾದಿಯಾಯಿತೆಂಬುದನ್ನು ಈಗಲೂ ಖಂಡೇರಾವರು ಅಭಿಮಾನದಿಂದ ಸ್ಮರಿಸಿಕೊಳ್ಳುತ್ತಾರೆ ಮುಂಬೈನ ಸುತ್ತ-ಮುತ್ತಲಿನ ಭೂದೃಶ್ಯಗಳನ್ನು ಚಿತ್ರಿಸುತ್ತಿದ್ದರು. ಅಂದು ಇವರು ರಚಿಸಿದ ಮಲಬಾರ್ ಹಿಲ್ಸ್ ನಿಸರ್ಗ ಚಿತ್ರವು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಹೀಗೆ ಅವರ ಅಧ್ಯಯನ ಕಾಲದಲ್ಲಿ ನಡೆದ ಅನೇಕ ಮಹತ್ತರ ಘಟನೆಗಳು, ಆಗಿನ ಕಾಲದ ಪಠ್ಯಕ್ರಮ, ಅಧ್ಯಾಪಕವರ್ಗ, ಸ್ನೇಹಿತರಬಳಗ, ಕಲಾವಾತಾವರಣ ಹಾಗೂ ಕಲಾಸಾಧನೆಯ ಕುರಿತು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅಧ್ಯಾಯ ನಾಲ್ಕು :

ಕಲಾವಿದ ಜಿ.ಎಸ್. ಖಂಡೇರಾವರು ಮುಂಬೈನ ಸರ್. ಜಿ.ಜಿ. ಕಲಾಶಾಲೆಯಲ್ಲಿ ಡ್ರಾಯಿಂಗ್ ಮತ್ತು ಪೇಯಿಂಟಿಂಗ್ ಡಿಪ್ಲೋಮಾ ಮುಗಿಸಿಕೊಂಡು ಕಲಬುರ್ಗಿಗೆ ಬಂದರು. 1964 ರಲ್ಲಿ ಇವರ ವಿವಾಹವು ವೀರಮ್ಮನವರೊಡನೆ ನಡೆಯಿತು. ಗೃಹಸ್ಥರಾದನಂತರ ಸಂಸಾರದ ಜವಾಬ್ದಾರಿಯನ್ನು ಹೊತ್ತ ಇವರಿಗೆ ಜೀವನೋಪಾಯಕ್ಕಾಗಿ ಯಾವುದಾದರೂ ಒಂದು ಕೆಲಸವನ್ನು ಮಾಡಲೇಬೇಕಾದ ಅನಿವಾರ್ಯತೆ ಎದುರಾಯಿತು. ಇವರು ಶ್ರೀ ಸಿ.ವಿ.ಕರಡಗಿಯವರನ್ನು ಸಂದರ್ಶಿಸಿದಾಗ ಸಿ.ವಿ.ಕರಡಗಿಯವರು ನಮ್ಮ ಭಾಗದ ಕಲಾವಿದರು ತಮ್ಮ ಉನ್ನತ ಕಲಾಶಿಕ್ಷಣ ಎಲ್ಲೋ ದೂರಹೋಗಿ ಏಕೆ ಕಲಿಯಬೇಕು? ಇಲ್ಲೇ ಒಂದು ಕಲಾಶಾಲೆ ಏಕೆ ತೆರೆಯಬಾರದು ? ಎಂದು ಹೇಳಿದಾಗ, ಆಗತಾನೆ ನೂತನ ವಿದ್ಯಾಲಯದಲ್ಲಿ ಶಂಕರರಾವ ಆಳಂದಕರ್‌ರವರು ಕಲಾವಿಭಾಗ ಪ್ರಾರಂಭಿಸಿದ್ದರು. ಖಂಡೇರಾವರು ತಾವೊಂದು

ಕಲಾ ಶಾಲೆಯನ್ನು ತೆರೆಯುವದಾಗಿ ಪ್ರಸ್ತಾಪಿಸಿದಾಗ ಆಳಂದಕರ್‌ರವರು ಕಲಾಶಾಲೆಯನ್ನು ನಡೆಸುವಲ್ಲಿ ಎದುರಾಗುವ ಅನೇಕ ಸಮಸ್ಯೆಗಳನ್ನು ತಿಳಿಹೇಳಿದರು.ಆದರೂ ಖಂಡೇರಾವರು ತಮ್ಮ ಸಂಕಲ್ಪದಿಂದ ವಿಮುಖರಾಗದೆ 1965 ರಲ್ಲಿ ದಿ ಐಡಿಯಲ್ ಕಲಾಶಾಲೆಯನ್ನು ಸ್ಥಾಪಿಸಿದರು.

ಮುಂಬೈ ಕಲಾಶಿಕ್ಷಣ ಪದ್ಧತಿಯಿಂದ ಪ್ರಭಾವಿತರಾದ ಇವರು ವಿದ್ಯಾರ್ಥಿಗಳಲ್ಲಿ ಕಲಾಪ್ರಜ್ಞೆ ಮೂಡಿಸುವಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದರು. ಆಗಾಗ್ಗೆ ಕಲಾಶಾಲೆಯಲ್ಲಿ ಸಾಹಿತಿಗಳ ಚರ್ಚಾಕೂಟವನ್ನು ಏರ್ಪಡಿಸುತ್ತಾ ವಿದ್ಯಾರ್ಥಿಗಳಿಗೆ ಇತರ ಸಾಂಸ್ಕೃತಿಕ ರಂಗಗಳ ಪರಿಚಯವನ್ನು ಮಾಡಿಸುತ್ತಿದ್ದರು. ಇಷ್ಟೆಲ್ಲಾ ಪರಿಶ್ರಮದ ನಡುವೆಯೂ ಇವರ ವೈಯಕ್ತಿಕ ಕಲಾಸಾಧನೆ, ಕಲಾಕೃತಿಗಳ ರಚನೆ ನಿರಂತರವಾಗಿ ಮುಂದುವರೆದುಕೊಂಡು ಬಂದಿತ್ತು. ಇವರ ಕಾರ್ಯವೈಖರಿ ಮತ್ತು ಶಿಸ್ತು ಸಂಯಮವನ್ನು ಗಮನಿಸಿ ಕಲಬುರ್ಗಿಯ ಶ್ರೀ ಶರಣಬಸವೇಶ್ವರ ಸಂಸ್ಥಾನದ ಎಂಟನೆಯ ಪೀಠಾಧಿಪತಿಗಳಾದ ಡಾ॥ ಶರಣಬಸವಪ್ಪ ಅಪ್ಪ ಅವರು ತಮ್ಮ ಕಲಾ ಮಹಾವಿದ್ಯಾಲಯದ ಲಲಿತಕಲಾ ವಿಭಾಗದ ಉಪನ್ಯಾಸಕರಾಗಲು ಖಂಡೇರಾವರನ್ನು ಒಪ್ಪಿಸುತ್ತಾರೆ. ಮುಂದೆ ಇವರು 1971ರಲ್ಲಿ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದ ಲಲಿತಕಲಾ ವಿಭಾಗದ ಉಪನ್ಯಾಸಕರಾಗಿ ಇಪ್ಪತ್ತೈದು ವರ್ಷಗಳ ಕಾಲ ಸೇವೆ ಸಲ್ಲಿಸುತ್ತಾರೆ ಈ ಹಂತದಲ್ಲಿ ಅಲ್ಲಿ ಸ್ನಾತಕೋತ್ತರ ಲಲಿತಕಲಾ ವಿಭಾಗವು ಪ್ರಾರಂಭಗೊಳ್ಳುತ್ತದೆ. ಆಗ ಅದರ ಮುಖ್ಯಸ್ಥರಾಗಿ ಸಲ್ಲಿಸಿದ ಸೇವೆ ಮತ್ತು ಈ ಅವಧಿಯಲ್ಲಿ ಅವರು ರಚಿಸಿದ ಕಲಾಕೃತಿಗಳು, ಅವರ ಮಾರ್ಗದರ್ಶನದಲ್ಲಿ ತಯಾರಾದ ಕಲಾವಿದರ, ಮತ್ತು ಅವರ ಕಲಾಬದುಕು ಇವುಗಳನ್ನು ಕುರಿತು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅಧ್ಯಾಯ ಐದು :

ಈ ಅಧ್ಯಾಯದಲ್ಲಿ ಜಿ.ಎಸ್. ಖಂಡೇರಾವರ ಕಲಾಕೃತಿಗಳನ್ನು ಕುರಿತು ವಿಶೇಷವಾಗಿ ಚರ್ಚಿಸಲಾಗಿದೆ. ಮುಂಬೈನ ಸರ್. ಜೆ.ಜೆ.ಕಲಾಶಾಲೆಯಲ್ಲಿ ಶಿಕ್ಷಣವನ್ನು ಪಡೆದ ಇವರು ಅನೇಕ ಕಲಾಕೃತಿಗಳನ್ನು ರಚಿಸಿದ್ದು, ಅವುಗಳನ್ನು ಮೂರು ಹಂತವಾಗಿ ವಿಂಗಡಿಕೊಂಡು ಅಧ್ಯಯನ ಮಾಡಲಾಗಿದೆ. ಒಂದನೇಯದು ಅಧ್ಯಯನ ಕಾಲದಲ್ಲಿಯ ಕಲಾಕೃತಿಗಳು ಎರಡನೇಯದು ಅಧ್ಯಾಪಕ ವೃತಿಯಲ್ಲಿಯ ಕಲಾಕೃತಿಗಳು ಮೂರನೇಯದು ನಿವೃತ್ತಿಯ ನಂತರದಲ್ಲಿಯ ಕಲಾಕೃತಿಗಳು.

ಅಧ್ಯಯನ ಕಾಲದಲ್ಲಿಯ ಕಲಾಕೃತಿಗಳಲ್ಲಿ ಪಠ್ಯಕ್ರಮವನ್ನೇ ಕೇಂದ್ರಿಕೃತವಾಗಿರಿಸಿಕೊಂಡು ರಚಿಸಿದ ಕಲಾಕೃತಿಗಳಲ್ಲಿ ಮುಖ್ಯವಾಗಿ ರೇಖಾ ಚಿತ್ರಗಳು, ಸ್ಥಿರಚಿತ್ರಗಳು, ನಿಸರ್ಗಚಿತ್ರಗಳು, ಭಾವಚಿತ್ರಗಳು ಮತ್ತು ಸಂಯೋಜನಾ ಚಿತ್ರಗಳು . ಅಧ್ಯಾಪಕ ವೃತ್ತಿಯಲ್ಲಿಯ ಕಲಾಕೃತಿಗಳಲ್ಲಿ ಇವೆಲ್ಲವೂ ಸೇರಿ ಭಿತ್ತಿ ಚಿತ್ರಗಳು, ಪೂರ್ಣ ಪ್ರಮಾಣದ ಜೀವ ಮಾದರಿಯ ಚಿತ್ರಗಳು ಮತ್ತು ಸಂಯೋಜನಾ ಚಿತ್ರಗಳು ರಚಿಸಿದ್ದು ಕಂಡುಬರುತ್ತದೆ. ನಿವೃತ್ತಿಯ ನಂತರದಲ್ಲಿಯ ಕಲಾಕೃತಿಗಳಲ್ಲಿ ಮನೆಮಠಗಳಿಗಾಗಿ, ಖಾಸಗಿಯವರಿಗಾಗಿ, ಅನೇಕ ಭಾವಚಿತ್ರಗಳು, ಪೌರಾಣಿಕ ಚಿತ್ರಗಳು, ಧಾರ್ಮಿಕ ಚಿತ್ರಗಳನ್ನು ರಚಿಸಿದ್ದಾರೆ.

ಖಂಡೇರಾವರು ಚಿತ್ರಿಸಿದ ಒಟ್ಟು ಕಲಾಕೃತಿಗಳಲ್ಲಿ ನಾವು ಎರಡು ಭಾಗಗಳಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. 1. ರೇಖಾ ಚಿತ್ರಗಳು 2. ವರ್ಣಚಿತ್ರಗಳು. ರೇಖಾಚಿತ್ರಗಳಲ್ಲಿ ಪೆನ್ಸಿಲ್‌ನಿಂದ ಮಾಡಿದ ಚಿತ್ರಗಳು ಮತ್ತು ಇಂಕನಿಂದ ಮಾಡಿದ ಚಿತ್ರಗಳು. ವರ್ಣಚಿತ್ರಗಳಲ್ಲಿ ಜಲವರ್ಣಚಿತ್ರಗಳು ಮತ್ತು ತೈಲವರ್ಣಚಿತ್ರಗಳು. ಮೇಲಿನ ಎರಡೂ ಮಾಧ್ಯಮಗಳ ಕಲಾಕೃತಿಗಳ ವಸ್ತುವಿಷಯಗಳಲ್ಲಿ ವ್ಯಕ್ತಿ ಚಿತ್ರಗಳು, ಪ್ರಕೃತಿ ಚಿತ್ರಗಳು, ನೈಜಸಂಯೋಜನಾ ಚಿತ್ರಗಳು, ಆಧುನಿಕ ಸಮ್ಮಿಶ್ರಣ ಸಂಯೋಜನಾ ಚಿತ್ರಗಳು , ಅಮೂರ್ತಸಂಯೋಜನಾ ಚಿತ್ರಗಳು ಮತ್ತು ಗ್ರಂಥಗಳಿಗೆ ಒದಗಿಸಿಕೊಟ್ಟ ಚಿತ್ರಗಳು ಎಂಬಂತೆ ವಿಂಗಡಿಸಿಕೊಂಡು ಪ್ರತ್ಯೇಕವಾದ ವಿಸ್ತ್ರ ಅಧ್ಯಯನಮಾಡಲಾಗಿದೆ.

ಅಧ್ಯಾಯ ಆರು :

ಇಂದು ಎಷ್ಟೋ ಕಲಾವಿದರು ಒಂದೇ ಶೈಲಿಗೆ ಅಂಟಿಕೊಂಡಿದ್ದಾರೆ. ಅವರ ಕಲಾಕೃತಿಗಳನ್ನು ನೋಡಿದಾಕ್ಷಣ ಇದು ಇಂತಹ ಕಲಾವಿದರದೇ ಎಂದು ಗುರುತಿಸುವಷ್ಟು ಶೈಲಿಗೆ ಒತ್ತು ಕೊಟ್ಟು ಸ್ಥಿರವಾಗಿದ್ದಾರೆ. ಆದರೆ ಖಂಡೇರಾವರು

ಯಾವುದೇ ಒಂದು ಶೈಲಿಗೆ ಬದ್ಧರಾಗಿಲ್ಲ. ವಿಭಿನ್ನನೋಟಗಳ, ಶೈಲಿಗಳ ಅಭಿವ್ಯಕ್ತಿಯನ್ನೇ ಪ್ರತ್ಯೇಕ ಶೈಲಿಯೆಂದು ನಾವು ಗುರುತಿಸಬಹುದಾಗಿದೆ.

ಹಲವಾರು ಶೈಲಿಗಳಲ್ಲಿ ಕೃತಿರಚನಾತಂತ್ರ ಅವರಲ್ಲಿರುವುದರಿಂದ ಕಾಲಕಾಲಕ್ಕೆ ವಿವಿಧ ರೀತಿಯ ಕಲಾಕೃತಿಗಳು ರೂಪುಗೊಂಡಿವೆ. ಈ ಹಿನ್ನೆಲೆಯಲ್ಲಿ ಅವರ ಕಲಾಕೃತಿಗಳಿಂದ , ಕಲಾಶಿಕ್ಷಣದ ಮೇಲಾದ ಪ್ರಭಾವ- ಪ್ರೇರನೆಗಳ ಕುರಿತು ಈ ಅಧ್ಯಾಯದಲ್ಲಿ ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಏಳು :

ಜಿ.ಎಸ್. ಖಂಡೇರಾವರು ಕರ್ನಾಟಕ ಸರಕಾರದ ರಾಜ್ಯೋತ್ಸವ ಪ್ರಶಸ್ತಿ ಪಡೆದ ಪ್ರಮುಖ ಕಲಾವಿದರು. ಕರ್ನಾಟಕ ಲಲಿತಕಲಾ ಆಕಾಡೆಮಿಯ ಸದಸ್ಯರಾಗಿ, ಮುಂಬೈನ ಬಾಂಬೆ ಆರ್ಟ ಸೊಸಾಯಿಟಿಯ ಅಜೀವ ಸದಸ್ಯರಾಗಿ, ಆಮಂತ್ರಿತ ಉಪನ್ಯಾಸಕರಾಗಿ, ಕಲಾಪ್ರದರ್ಶನಗಳ ನಿರ್ಣಾಯಕರಾಗಿ, 1991 ಟ್ರಿನಾಲೆ ಅಂತರರಾಷ್ಟ್ರೀಯ ಚಿತ್ರಕಲಾ ಪ್ರದರ್ಶನದ ವಿಶೇಷ ಆಮಂತ್ರಿತರಾಗಿ, 1970 ರ ದಶಕದಲ್ಲಿ ಮೈಸೂರು ಆರ್ಟ ಕೌನ್ಸಿಲ್ ಎಂಬ ಸಂಸ್ಥೆಯಲ್ಲಿ ಕ್ರಿಯಾಶೀಲ ಸದಸ್ಯರಾಗಿ ಸೇವೆಸಲ್ಲಿಸಿದ್ದಾರೆ. ಅನೇಕ ಕಲಾಪ್ರದರ್ಶನಗಳು, ಸಾಂಸ್ಕೃತಿಕ ಸಂಘಟನೆಗಳ ಮೂಲಕ ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಶ್ರೀಮಂತಗೊಳಿಸಿದ್ದಾರೆ.

1999 ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ಜಿ.ಎಸ್. ಖಂಡೇರಾವ ಎಂಬ ಪುಸ್ತಕವನ್ನು ಹೊರತಂದಿದೆ. ಹಲವಾರು ಪತ್ರಿಕೆಗಳಲ್ಲಿ ಇವರನ್ನು ಕುರಿತು ಲೇಖನಗಳು ಬಂದಿವೆ. ಸ್ವತಃ ತಾವೇ ಬರೆದ ಪ್ರಾಕ್ಟಿಕಲ್ ಜಾಮೆಟ್ರಿ ಅ್ಯಂಡ್ ಪರ್ಸಪೆಕ್ಟಿವ್ ಮತ್ತು ವರ್ಣಸಿದ್ದಾಂತ ಎಂಬ ಕೃತಿಗಳನ್ನು ಪ್ರಕಟಿಸುವ ಸಿದ್ದತೆಯಲ್ಲಿದ್ದಾರೆ.

ಈ ಅಧ್ಯಾಯದಲ್ಲಿ ಜಿ.ಎಸ್. ಖಂಡೇರಾವರ ಕುರಿತಾದ ಗ್ರಂಥಗಳು, ಲೇಖನಗಳು, ಪತ್ರಿಕಾ ವರದಿಗಳು ಒಂದು ಬಗೆಯ ವಿಷಯವಾದರೆ ಅವರ ಕಲಾಚಟುವಟಿಕೆಗಳ ಬಗ್ಗೆ ಕಲಾಪ್ರದರ್ಶನಗಳು, ಕಲಾಶಿಬಿರಗಳು, ಕಾರ್ಯಾಗಾರಗಳು, ಪ್ರಾತ್ಯಕ್ಷಿಕೆಗಳು ಮತ್ತು ವಿಚಾರ ಸಂಕೀರ್ಣಗಳನ್ನೊಳಗೊಂಡ ಸಮಗ್ರ ವಿವರಗಳನ್ನು ಈ ಅಧ್ಯಾಯವು ಹೊಂದಿರುತ್ತದೆ.

ಅಧ್ಯಾಯ ಎಂಟು :

ಈ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡ ವಿವರಗಳನ್ನು ಸಮೀಕ್ಷಿಸಲಾಗಿದೆ.

ಅಧ್ಯಾಯ ಎರಡು :

ಜಿ.ಎಸ್.ಖಂಡೇರಾವ : ಸಾಂಸ್ಕೃತಿಕ ಪರಿಸರ ಮತ್ತು ಬಾಲ್ಯಜೀವನ


ಕಲಬುರ್ಗಿಯು ನಿಜಾಮನ ಕಾಲದಿಂದಲೂ ಒಂದು ದೊಡ್ಡ ಮತ್ತು ಪ್ರಮುಖ ಪಟ್ಟಣ ಕೇಂದ್ರವಾಗಿತ್ತು. ಇಂಥ ಒಂದು ಪ್ರಮುಖ ಪಟ್ಟಣವು ಅಂದು ನಿಜಾಮನ ಆಳ್ವಿಕೆಯ ಕಾಲದಲ್ಲಿ ಭಾಷೆ, ಆಚಾರ-ವಿಚಾರಗಳಿಗೆ ಮುಸ್ಲಿಂ ಕೇಂದ್ರಿಕೃತವಾದ ಪ್ರದೇಶವಾಗಿತ್ತು. ಆಗ ನಗರದಲ್ಲಿ ರಾಜಕೀಯ ಆಡಳಿತದ ದೃಷ್ಟಿಯಿಂದ ಕೆಲವು ಮುಖ್ಯವಾದ ವಾರ್ಡ ಗಳಂತೆ ಮಾಡಿಕೊಂಡಿದ್ದರು. ಅವುಗಳಲ್ಲಿ ಎಂಟನೇಯ ನಂ. ವಾರ್ಡಿಗೆ ಆಸಫಗಂಜ್ ಎಂದು ಕರೆಯುತ್ತಿದ್ದರು. ಇಲ್ಲಿ ಹೆಚ್ಚು ಲಿಂಗಾಯತ ಸಮಾಜದವರು ವಾಸಿಸುತ್ತಿದ್ದರು.

ಮನೆತನ

ಧಾರ್ಮಿಕ, ಸಾಂಸ್ಕೃತಿಕ ಆಚರಣಗೆ ದ್ಯೋತಕವೆಂಬಂತೆ ಈ ವಿಭಾಗದಲ್ಲಿ ಮಲ್ಲಿಕಾರ್ಜುನ ಪಂಚಮಂಡಳಿ ಎಂದು ಒಂದು ಕಮೀಟಿಯನ್ನು ಮಾಡಿಕೊಂಡಿದ್ದರು. ಅದರ ಹಿರಿಯ ಮುಖಂಡರಾಗಿ ಶಂಕರಪ್ಪ ಖಂಡೇರಾವರು ಪಾತ್ರವಹಿ-ಸುತ್ತಿದ್ದರು. ಇಲ್ಲಿ ಪ್ರತಿವರ್ಷ ಶ್ರಾವಣಮಾಸದಲ್ಲಿ ಭಜನೆ, ಕೀರ್ತನೆ, ಪಲ್ಲಕ್ಕಿ ಉತ್ಸವ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡುತ್ತಿದ್ದರು. ಇವೆಲ್ಲ ಕಾರ್ಯಕ್ರಮಗಳು ಶಂಕರಪ್ಪ ಖಂಡೇರಾವರ ಮುಖ್ಯ ನೇತೃತ್ವದಲ್ಲಿ ನಡೆಯುತ್ತಿದ್ದವು. ಇಂಥ ಒಂದು ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳ ಮುಖಂಡರಾದ ಶಂಕರಪ್ಪ ಖಂಡೇರಾವರು ಸರಳರು, ಸಜ್ಜನರು, ಹಿರಿಯರ ಮಾತು ವೇದವಾಕ್ಯದಂತೆ ಪಾಲಿಸುತ್ತಿದ್ದರು. ಶಂಕರಪ್ಪನವರ ಪ್ರತಿಯೊಂದು ಕಾಯಕದಲ್ಲಿ ಅವರ ಶ್ರೀಮತಿಯವರಾದ ಬಸಮ್ಮನವರು ಭಾಗಿಯಾಗುತ್ತಿದ್ದರು.

ಶಂಕ್ರಪ್ಪನವರು ತಮ್ಮ ವ್ಯಾಪಾರದ ಜೊತೆಗೆ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಗಳನ್ನು ಮಾಡುತ್ತ ತಮ್ಮ ಭಾಗದಲ್ಲಿ ಜನಮನರಿಗೆ ಮೆಚ್ಚುಗೆಯಾಗಿದ್ದರಲ್ಲದೇ ಪ್ರಮುಖ ಧಾರ್ಮಿಕ ನೇತಾರರಾಗಿದ್ದರು ಇವರ ನಾಲ್ಕನೆಯಮಗನಾಗಿ ಜಗದೇವಪ್ಪನವರು 1940 ನವೆಂಬರ ಒಂದರಂದು ಜನಿಸಿದರು. ಇವರ ತಾಯಿಯ ಹೆಸರು ಬಸಮ್ಮ. ಜಗದೇವಪ್ಪನವರು ಜನಿಸಿದ ಮರುದಿನವೇ ತಾಯಿಯಾದ ಬಸಮ್ಮನವರು ಹೆರಿಗೆಯ ನೋವಿನಿಂದ ತಮ್ಮ ಕೊನೆಯುಸಿರೆಳೆದರು. ಆಗಿನ್ನು ಜಗದೇವಪ್ಪನವರು ಕೇವಲ ಒಂದೇ ದಿನದ ಹಸುಗೂಸು. ತಾಯಿಯ ಪ್ರೀತಿಯನ್ನೇ ಕಾಣದ ಕಂದನ ಆರೈಕೆಯು ತುಂಬಾ ಜವಾಬ್ದಾರಿಯುತವಾಗಿತ್ತು. ಸೊದರತ್ತೆಯವರು ಕಂದನ ಆರೈಕೆಯ ಜವಾಬ್ದಾರಿಯನ್ನು ಹೊತ್ತುಕೊಂಡರು ಆಗಿನ್ನು ಒಂದು ತಿಂಗಳ ಹಸುಗೂಸಾಗಿದ್ದ ಜಗದೇವಪ್ಪನನ್ನು ಅವರ

ಖಂಡೇರಾವರ ವಂಶಾವಳಿ.



● ಕಲಾವಿದರು.

ಸೋದರತ್ತೆಯವರು ಖಾಜಾಕೋಟ್ನುರಿಗೆ ಕರೆದುಕೊಂಡು ಬಂದು ಇವರ ಸೋದರತ್ತೆಯವರದು ಖಾಜಾಕೋಟ್ನುರಿ - ನಲ್ಲಿ ದೊಡ್ಡ ಮನೆತನವಾಗಿತ್ತು. ಗೌಡರ ಮನೆಯಂತಲೇ ಎಲ್ಲರೂ ಅದನ್ನು ಕರೆಯುತ್ತಿದ್ದರು.

ತಾಯಿಯ ಪ್ರೀತಿ , ಮಮತೆಯಿಂದ ವಂಚಿತರಾದ ಜಗದೇವಪ್ಪನವರು ತಮ್ಮ ಸೋದರತ್ತೆಯವರಿಂದ ಇದೆಲ್ಲವನ್ನು ಪಡೆದುಕೊಂಡು ಬೆಳೆದರು. ಸೋದರತ್ತೆಯ ಆರೈಕೆಯಲ್ಲಿ ಬೆಳೆದ ಖಂಡೇರಾವರನ್ನು ಅವರ ತಂದೆ ಎರಡನೆಯ ಹೆಂಡತಿ ಶಿವಮ್ಮಳ ಮಡಿಲಿಗೆ ಒಪ್ಪಿಸಿದರು. ಶಂಕ್ರಪ್ಪನವರಿಗೆ ಮೊದಲ ಹೆಂಡತಿಯಾದ ಬಸಮ್ಮಳಿಂದ ಮೂರು ಜನ ಹೆಣ್ಣು ಮಕ್ಕಳಿ- ದ್ದರು. ಅವರೊಂದಿಗೆ ಈ ಕಂದನನ್ನು ತಾಯಿ ಶಿವಮ್ಮಳು ಆರೈಕೆಯ ಜವಾಬ್ದಾರಿಯನ್ನು ಹೊತ್ತುಕೊಂಡಳು ಹೀಗೆ ದಿನ ಕಳೆದಂತೆ ಎಲ್ಲ ಮಕ್ಕಳು ತಾಯಿ ಶಿವಮ್ಮಳ ಆರೈಕೆಯಲ್ಲಿ ಬೆಳೆದವು. ತಾಯಿ ಶಿವಮ್ಮಳೂ ಕೂಡ ಮಲತಾಯಿಯೆನ್ನುವ ಮಾತು ಬರದ ಹಾಗೆ ಮಕ್ಕಳನ್ನು ಬಹಳ ಮುದ್ದಾಗಿ ಬೆಳೆಸಿದಳು. ಅಲ್ಲದೇ ಆರು ಜನ ಗಂಡುಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳಿಗೆ ಜನ್ಮವಿತ್ತಳು ಮೊದಲ ಹೆಂಡತಿಯ ಮೂರು ಜನ ಹೆಣ್ಣುಮಕ್ಕಳು ಮತ್ತು ಜಗದೇವಪ್ಪನವರು ಹೀಗೆ ಒಟ್ಟು ಹನ್ನೆರಡು ಮಕ್ಕಳ ಲಾಲನೆ ಪಾಲನೆಯ ಜವಾಬ್ದಾರಿಯು ಇವಳ ಮೇಲೆ ಬಿತ್ತು. ಜಗದೇವಪ್ಪನವರು ನಾಲ್ಕು ವರ್ಷದ- ವರಾದರೂ ಇನ್ನೂ ಮಾತೇ ಬರುತ್ತಿರಲಿಲ್ಲ. ಮುಖವನ್ನು ನೋಡಿದರೆ ಮುಗ್ಧ ಬಾಲಕನಂತೆ ತೋರುತ್ತಿತ್ತು. ತಂದೆಯವ ರಾದ ಶಂಕರಪ್ಪನವರು ಇದೆಲ್ಲವನ್ನು ಗಮನಿಸಿ ಮಗ ಹೀಗೇಕೆ ಮಾಡುತ್ತಿದ್ದಾನೆ. ಮಗನ ಆರೈಕೆಯಲ್ಲಿ ಏನಾದರೂ ಹೆಚ್ಚು ಕಡಿಮೆಯಾಯಿತೆ ? ಎಂಬ ವಿಚಾರಗಳು ತಲೆಯಲ್ಲಿ ಹೊಳೆಯಲಾರಂಭಿಸಿದವು. ಆದರೆ ಮನೆಯ ಅಕ್ಕಪಕ್ಕದವರು , ಹಿರಿಯರು, " ನೋಡು ಇದಕ್ಕೇನು ಆಶ್ಚರ್ಯಪಡಬೇಕಿಲ್ಲ ಪ್ರಾರಂಭದಲ್ಲಿ ಕೆಲವು ಮಕ್ಕಳಿಗೆ ಹೀಗೆ ಆಗೋದು ನಂತರದಲ್ಲಿ ಎಲ್ಲ ಸರಿ ಹೋಗುತ್ತೆ " ಎಂದು ಹೇಳಿ ಸಮಾಧಾನ ಪಡಿಸುತ್ತಿದ್ದರು. ಮಗನನ್ನು ಶಾಲೆಗಾದರೂ ಕಳಿಸಿದರೆ ಸರಿಹೋಗಬಹುದೆಂದುಕೊಂಡು ಅಲ್ಲೇ ಹತ್ತಿರದಲ್ಲೇ ಇದ್ದ ಒಂದು ಶಾಲೆಗೆ ಸೇರಿಸಿದರು. ಆಗಿನ್ನೂ ಕಾನಗಿ ಶಾಲೆಯೆಂದೇ ಇವುಗಳನ್ನು ಕರೆಯುತ್ತಿದ್ದರು. ತಂದೆಯವರು ಬಾಲಕ ಜಗದೇವಪ್ಪನನ್ನು ಕರೆದುಕೊಂಡು ಶಾಲೆಗೆ ಹೋಗಿ ಕೂಡಿಸಿಬರುವದು ಆದರೆ ಜಗದೇವಪ್ಪನವರಿಗೆ ಇದರಲ್ಲಿ ಆಸಕ್ತಿಯಿಲ್ಲದ ಕಾರಣ ಅರ್ಧಕ್ಕೆ ಬಿಟ್ಟು ಮನೆಗೆ ಬರುತ್ತಿದ್ದರು. ದಿನಾಲು ಇದು ಹೀಗೆಯೇ ಮುಂದುವರೆಯಿತು. ಮಗನನ್ನು ಶಾಲೆಗೆ ಕರೆದುಕೊಂಡು ಹೋಗಿ ಕೂಡಿಸಿಬರುವದು. ಜಗದೇವಪ್ಪನವರು ಅರ್ಧಕ್ಕೆ ಬಿಟ್ಟು ಮನೆಗೆ ಬರುವದು. ಮಗನ ಈ ಒಂದು ನಡವಳಿಕೆಯನ್ನು ಕಂಡು, ಗುರುಗಳಿಗೆ ಶಾಲೆಬಿಡುವವರೆಗೆ ಇವನನ್ನು ಮನೆಗೆ ಬಿಡಬೇಡಿ ಎಂದು ತಾಕೀತು ಮಾಡಿಬಿಟ್ಟರು. ಬನಸಿ ಮಾಸ್ತರರು ಎಂದು ಇವರನ್ನು ಕರೆಯುತ್ತಿದ್ದರು. ಇವರು ಈ ಕಾನಗಿ ಶಾಲೆಯನ್ನು ನಡೆಸುತ್ತಿದ್ದರು ಇವರು ಮಕ್ಕಳಿಗೆ ಅಭ್ಯಾಸದ ಜೊತೆ ಸಣ್ಣಪುಟ್ಟಕಥೆಗಳನ್ನು ಹೇಳುತ್ತಿದ್ದರಂತೆ ಅಭ್ಯಾಸದ ದೃಷ್ಟಿಯಿಂದ ಇಲ್ಲಿ ಹೆಚ್ಚಾಗಿ ಮರಾಠಿಯನ್ನು ಕಲಿಸುತ್ತಿದ್ದರು. ಯಾಕೆಂದರೆ ಆಗ ಇಲ್ಲಿ ಮರಾಠಿಯ ಪ್ರಭಾವ ಹೆಚ್ಚಾಗಿತ್ತು. ತಂದೆಯವರು ಮಾಡಿದ ತಾಕೀತಿಗೆ ಜಗದೇವಪ್ಪನವರು ಶಾಲೆ ಬಿಡುವವರೆಗೂ ಕೂಡುತ್ತಿದ್ದರಾದರೂ ವಿದ್ಯಾಭ್ಯಾಸ ಅವರಿಗೆ ಒಲ್ಲದ ವಿಷಯವಾಯಿತು. ಅದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಇಲ್ಲಿ ಕೆಲವು ದಿನಗಳು ಕಳೆದವು ಆದರೆ ಶಂಕರಪ್ಪನವರಿಗೆ ಮಗನ ವಿದ್ಯಾಭ್ಯಾಸದ ಪ್ರಗತಿಯ ಸೂಚನೆಗೆ ಏನೂ ತಿಳಿಯದಾಯಿತು. ಹೀಗೆ ಐದಾರು ವರ್ಷವಾದರೂ ಇವರಿಗೆ ಒಲವು ವಿದ್ಯಾಭ್ಯಾಸದ ಕಡೆ ಗಮನಹರಿಯಲಿಲ್ಲ. ಯಾವ ಆಸಕ್ತಿಯಿಲ್ಲದೇ ಕೇವಲ ಒಬ್ಬಂಟಿಗನಾಗಿಯೇ ಕಾಲ ಕಳೆಯುತ್ತಿದ್ದರು. ಮಗನ ನಿರಾಸಕ್ತಿಯು ತಂದೆಯವರಿಗೆ ಒಂದು ಚಿಂತೆಯಾಗಿಬಿಟ್ಟಿತು. ಹೇಗಾದರೂ ಮಾಡಿ ಇವನನ್ನು ವಿದ್ಯಾಭ್ಯಾಸದ ಕಡೆಗೆ ಕೊಂಡೊಯ್ಯಬೇಕೆಂಬ ಅವರ ಆಸೆಯು ಇಮ್ಮಡಿಸಿತು.

ಮುಂದೆ ಮುಮಿನಪುರ ಎಂಬಲ್ಲಿನ ಒಂದು ಶಾಲೆಗೆ ಜಗದೇವಪ್ಪನವರನ್ನು ಪ್ರವೇಶಮಾಡಿಸಲಾಯ್ತು. ಇಲ್ಲಿ ಜಗದೇವಪ್ಪನವರ ಮೂವರು ಅಕ್ಕಂದಿರರು ಅಭ್ಯಾಸ ಮಾಡುತ್ತಿದ್ದರು. ಇವರ ಜೊತೆ ದಿನಾಲು ಶಾಲೆಗೆ ಬರುತ್ತಿದ್ದರು. ಇಲ್ಲಿ ಉರ್ದುವನ್ನು ಹೆಚ್ಚಾಗಿ ಕಲಿಸುತ್ತಿದ್ದರು ಏಕೆಂದರೆ ಈ ಭಾಗದಲ್ಲಿ ನಿಜಾಮನ ಆಡಳಿತ ನಡೆಯುತ್ತಿತ್ತು. ಉರ್ದು ಭಾಷೆಗೆ ಇಲ್ಲಿ ಮೊದಲ ಆದ್ಯತೆಯಿತ್ತು. ಹೀಗೆ ಉರ್ದು ವಿಷಯದೊಂದಿಗೆ ಮರಾಠಿ , ಮೋಡಿ ಈ ವಿಷಯಗಳನ್ನು ಹೇಳಿ ಕೊಡುತ್ತಿದ್ದರು. ಇದೇ ಸಂದರ್ಭದಲ್ಲಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆಯಿತು. ಈ ಒಂದು ದೃಷ್ಟಿಯಿಂದ ಇಲ್ಲಿ ಕನ್ನಡಕ್ಕೆ ಸ್ವಲ್ಪ ಪ್ರಾಧಾನ್ಯತೆದೊರೆಯಿತು. ಇದರಿಂದ ಕನ್ನಡವನ್ನು ಇತರ ವಿಷಯಗಳೊಂದಿಗೆ ಕಲಿಸುತ್ತಿದ್ದರು. ಇಲ್ಲಿ ಇತರ

ವಿಷಯಗಳೊಂದಿಗೆ ಉರ್ದುವನ್ನು ಅಭ್ಯಾಸ ಮಾಡಿದರು. ಮಗನ ಈ ಒಂದು ಉತ್ಸಾಹವನ್ನು ಇವರ ತಂದೆಯವರಿಗೆ ಮನಸ್ಸಿನಲ್ಲಿ ಸಮಾಧಾನ ಮೂಡಿಸುತ್ತಿತ್ತು. ಈ ಒಂದು ಹಂತದಲ್ಲಿ ತಂದೆಯವರು ವ್ಯಾಪಾರದಲ್ಲಿ ಸಕ್ರೀಯವಾಗಿ ತೊಡಗುತ್ತಿದ್ದರು. ವ್ಯಾಪಾರಕ್ಕೆಂದು ಆಗಾಗ್ಗೆ ಮುಂಬೈಯಿಂದ ಕೆಲವು ಕಾಳು ಕಡಿ ವ್ಯಾಪಾರಿಗಳು ಇಲ್ಲಿಗೆ ಬರುತ್ತಿದ್ದರು. ಅವರೊಂದಿಗೆ ಶಂಕರಪ್ಪನವರ ಸ್ನೇಹ ಬೆಳೆಯಿತು. ಅವರೊಂದಿಗೆ ವ್ಯಾಪಾರವನ್ನು ಕುರಿತು ಚರ್ಚಿಸುವದು, ಪರಸ್ಪರ ವ್ಯಾಪಾರದ ಕುಂದು ಕೊರತೆಗಳನ್ನು ತಿಳಿದುಕೊಳ್ಳುವುದು, ಮುಂಬೈಯಲ್ಲಿಯ ವ್ಯಾಪಾರದ ವಾತಾವರಣವನ್ನು ವಿಚಾರಿಸಿ ತಿಳಿದುಕೊಳ್ಳವದು ಮಾಡುತ್ತಿದ್ದರು. ಇದರೊಂದಿಗೆ ಇವರ ಎಂದಿನ ಕಾಯಕಗಳಲ್ಲಿ ತೊಡಗುತ್ತಿದ್ದರು.

ಜಗದೇವಪ್ಪನವರು ಮುಮಿನಪುರ ಶಾಲೆಯಲ್ಲಿ ಎರಡು ವರ್ಷ ಅಭ್ಯಾಸ ಮಾಡಿದರು. ಮುಂದೆ ಹೆಚ್ಚಿನ ಶಿಕ್ಷಣವನ್ನು ಪಡೆಯಲು ತಂದೆಯವರು ಅಲ್ಲೇ ಆಸಫ್‌ಗಂಜಿನಲ್ಲಿರುವ ಒಂದು ಶಾಲೆಗೆ ಸೇರಿಸಿದರು. ಮೊದಲೇ ಧಾರ್ಮಿಕ ಮುಖಂಡರೆನಿಸಿಕೊಂಡಿದ್ದ ಶಂಕ್ರಪ್ಪನವರಿಗೆ ಈ ಶಾಲೆಯಲ್ಲಿರುವ ಎಲ್ಲ ಶಿಕ್ಷಕರು ಪರಿಚಿತರಾಗಿದ್ದರು. ಈ ಶಾಲೆಯು ಹೆಚ್ಚು ಜನ ಶಿಕ್ಷಕರಿಂದ ಕೂಡಿತ್ತು. ಇಲ್ಲಿ ಕನ್ನಡ, ವಿಜ್ಞಾನ , ಇತಿಹಾಸ, ಗಣೀತ, ಹೀಗೆ ಎಲ್ಲ ವಿಷಯಗಳನ್ನು ಹೇಳುತ್ತಿದ್ದರು. ಅಲ್ಲದೇ ಭೂಗೋಳಕ್ಕೆ ಸಂಬಂಧಪಟ್ಟಂತೆ ಕೆಲವು ಡ್ರಾಯಿಂಗಗಳನ್ನು ತಿಳಿಸುತ್ತಿದ್ದರು. ಹೀಗೆಯೇ ಇವರ ವಿದ್ಯಾಭ್ಯಾಸ ಒಂದು ಮಟ್ಟದಲ್ಲಿ ನಡೆಯಹತ್ತಿತ್ತು. ಇವರು ನಾಲ್ಕನೇಯ ತರಗತಿಯಲ್ಲಿ ಓದುತ್ತಿರುವಾಗ ಶಂಕರರಾವ ಎಂಬ ಮೇಷ್ಟ್ರು ಇತಿಹಾಸ ವಿಷಯವನ್ನು ಹೇಳುತ್ತಿದ್ದರು. ಇದರಲ್ಲಿ ಭೂಗೋಳಕ್ಕೆ ಸಂಬಂಧಪಟ್ಟಂತೆ ಕೆಲವು ಡ್ರಾಯಿಂಗ್‌ಗಳನ್ನು ಮಾಡಿ ತಿಳಿಸುತ್ತಿದ್ದರು. ಇವುಗಳಲ್ಲಿ ರಾಜ್ಯಗಳ ನಕಾಶೆ, ದೇಶ-ವಿದೇಶಗಳ ನಕಾಶೆ ಅವುಗಳಲ್ಲಿ ಜಿಲ್ಲೆಗಳನ್ನು ಗುರುತಿಸುವುದು, ನದಿಗಳನ್ನು ಗುರುತಿಸುವುದು , ಮಳೆ-ಬೆಳೆಗಳನ್ನು ಗುರುತಿಸುವುದು, ಹವಾಮಾನವನ್ನು ಗುರುತಿಸುವುದು ಹೀಗೆ ಎಲ್ಲ ರೀತಿಯಿಂದಲೂ ನಕ್ಷೆಗಳನ್ನು ಬಿಡಿಸಲು ಸೂಚಿಸುತ್ತಿದ್ದರು. ಈ ವಿಷಯದಿಂದ ಜಗದೇವಪ್ಪನವರಲ್ಲಿ ಅಭ್ಯಾಸದ ಆಸಕ್ತಿ ಹೆಚ್ಚಾಯಿತು.

ಕ್ಲಾಸಿನಲ್ಲಿ ಎಲ್ಲ ವಿಷಯಗಳನ್ನು ತುಂಬ ವಿಶೇಷವಾಗಿ ಅಭ್ಯಾಸವನ್ನು ಮಾಡುತ್ತಿದ್ದರು. ಹೆಚ್ಚಿನ ಒಲವು ರೇಖಾ-ಗಣೀತ ಮತ್ತು ಭೂಗೋಳಕ್ಕೆ ತೋರಿಸುತ್ತಿದ್ದರು. ಇವರು ಗುರುಗಳು ಹೇಳಿದ ವಿಷಯಕ್ಕೆ ಸಂಬಂಧಪಟ್ಟಂತೆ ನಕ್ಷೆಗಳನ್ನು ಬಿಡಿಸುವುದು ಅವುಗಳಲ್ಲಿ ಆಯಾ ವಿಷಯಗಳಿಗೆ ಸಂಬಂಧಪಟ್ಟಂತೆ ಭಾಗಗಳನ್ನು ಸೂಚಿಸುವುದು, ತುಂಬಾ ಚನ್ನಾಗಿ ಚಿತ್ರಿಸುತ್ತಿದ್ದರು. ಇವರು ತಾವು ಮಾಡಿದ ನಕ್ಷೆಗಳನ್ನು ಡ್ರಾಯಿಂಗಗಳನ್ನು ಗುರುಗಳಿಗೆ ತೋರಿಸಿದಾಗ,ಅವರು ಅದನ್ನು ನೋಡಿ ಒಂದೊಂದು ಸಾರಿ ಗುಡ್ ಎಂದು ಬರೆಯುತ್ತಿದ್ದರು ಇದರಿಂದ ಜಗದೇವಪ್ಪನವರಿಗೆ ಒಂದು ರೀತಿಯ ಖುಷಿ ಯಾಕೆಂದರೆ ಗುರುಗಳಿಗೆ ಯಾರಾದರೂ ತೋರಿಸಿದರೆ ಅದು ಹೀಗೆ ಬರಬೇಕು ಹಾಗೆ ಬರಬೇಕು ಎಂದು ಹೇಳುತ್ತಿದ್ದರೇ ಹೊರತು ಸಹಿ ಹಾಕುತ್ತಿರಲಿಲ್ಲ. ಆದರೆ ಇವರಿಗೆ ಕೆಲವೊಂದು ಸಾರಿ ಗುಡ್ ಎಂದು ಹಾಕಿರುವುದರಿಂದ ಇವರಿಗೆ ಆನಂದವಾಗುದಷ್ಟೆ ಅಲ್ಲ ಡ್ರಾಯಿಂಗ್ ಬಗ್ಗೆ ಹೆಚ್ಚಿನ ಒಲವು ಮೂಡಲಿಕ್ಕೆ ಪ್ರಾರಂಭವಾಯಿತು. ಇದು ಮುಂದೆ ಇವರಿಗೆ ಚಿತ್ರಕಲೆಯಲ್ಲಿ ಆಸಕ್ತಿ ಮೂಡಿಸಲಿಕ್ಕೆ ಒಂದು ಕಾರಣವೂ ಆಗಿದೆಯನ್ನಬಹುದು ಇದಲ್ಲದೇ ಗುರುಗಳಾದ ಶಂಕರರಾವರು ಇವರಿಗೆ ನಕ್ಷೆಗಳ ಚಾರ್ಟ ಮಾಡಲು ಹೇಳುತ್ತಿದ್ದರು ಸ್ವತಃ ತಾವೂ ಕೂಡ ವಿದ್ಯಾರ್ಥಿಗಳೊಂದಿಗೆ ಚಾರ್ಟಗಳನ್ನು ಮಾಡುತ್ತಿದ್ದರು. ಇದರಿಂದ ವಿದ್ಯಾರ್ಥಿಗಳು ಈ ವಿಷಯಕ್ಕೆ ಹೆಚ್ಚಿನ ಗಮನವನ್ನು ಹರಿಸುತ್ತಿದ್ದರು. ಕೆಲವೊಂದು ಸಲ ತಪ್ಪಿದಲ್ಲಿ ಕೆಲವು ಸೂಚನೆಗಳನ್ನು ನೀಡುತ್ತಿದ್ದರು. ದಿನದ ಕೊನೆಯ ಕ್ಲಾಸು ಚಿತ್ರಕಲೆಯ ವಿಷಯದ ಅವಧಿಯಾಗಿತ್ತು. ಇದು ಕಡೆಯ ವೇಳೆಯಾಗಿದ್ದರಿಂದ ಕೆಲವೊಂದು ಹುಡುಗರು ಅಷ್ಟೊತ್ತಿಗೆ ಮನೆಗೆ ಹೋಗಿರುತ್ತಿದ್ದರು. ಒಂದು ಕ್ಲಾಸಿನಲ್ಲಿ ಸುಮಾರ ಇಪ್ಪತ್ತೈದರಿಂದ ಮೂವತ್ತು ಜನ ವಿದ್ಯಾರ್ಥಿಗಳು ಇರುತ್ತಿದ್ದರು. ಆದರೆ ಚಿತ್ರಕಲೆಯ ವಿಷಯದ ವೇಳೆಯಲ್ಲಿ ಕೇವಲ ಎಂಟು ಹತ್ತು ಜನ ವಿದ್ಯಾರ್ಥಿಗಳ ಮಾತ್ರ ಇರುತ್ತಿದ್ದರು. ಅವರಲ್ಲಿ ಜಗದೇವಪ್ಪನವರು ಒಂದೂ ದಿನ ಈ ಕ್ಲಾಸನ್ನು ತಪ್ಪಿಸುತ್ತಿರಲಿಲ್ಲ. ಶಾಲೆ ಬಿಡುವವರೆಗೂ ಅಲ್ಲಿಂದ ಕದಲುತ್ತಿರಲಿಲ್ಲ. ಯಾವದಾದರೊಂದು ಚಿತ್ರಗಳನ್ನು ಬಿಡಿಸುವ-ದರಲ್ಲಿಯೇ ಮಗ್ನರಾಗಿರುತ್ತಿದ್ದರು. ಇವರು ಎಷ್ಟೋ ಸಾರಿ ರಾತ್ರಿ ವೇಳೆಯಲ್ಲೂ ಶಾಲೆಗೆ ಬಂದು ಕಲಾಅಭ್ಯಾಸದಲ್ಲಿ ತೊಡಗುತ್ತಿದ್ದರು. ಪುಟಾಣಿಗಲ್ಲಿಯಲ್ಲಿ ಲಕ್ಷ್ಮಿ ಸಿನೇಮಾ ಮಂದಿರವೊಂದಿತ್ತು. ಅಲ್ಲಿ ಯಾವಾಗಲೂ ಹಳೆಯ ಕನ್ನಡ—

ಚಿತ್ರಗಳು ಬರುತ್ತಿದ್ದವು. ಪ್ರದರ್ಶಿತವಾಗುವ ಸಿನೇಮಾದ ಪೋಸ್ಟರ ಹೊರಗಡೆ ಹಚ್ಚಿರುತ್ತಿದ್ದರು. ಅಲ್ಲಿ ಹಚ್ಚಿರುವ ಸಿನೇಮಾ ಪೋಸ್ಟರಗಳನ್ನು ನೋಡಿಯೂ ಚಿತ್ರಬಿಡಿಸುವ ಹಂಬಲ ಹೊಂದಿದ್ದರು ಇದೂ ಕೂಡ ಇವರಿಗೆ ಕಲೆಯಲ್ಲಿ ಆಸಕ್ತಿಯನ್ನು ಮೂಡಿಸಲು ಒಂದು ಕಾರಣವಾಗಿರಲೂಬಹುದು. ಖ್ಯಾತ ಕಲಾವಿದ ಎಸ್. ಎಮ್.ಪಂಡೀತ್‌ರ ಮನೆ-ಯಿರುವುದು ಇಲ್ಲಿಯೇ. ಜಗದೇವಪ್ಪನವರು ಸಿನೇಮಾ ಪೋಸ್ಟರ ಮೂಲಕ ಆಕರ್ಷಿತರಾದರು. ಇವರು ಈ ವಿಷಯವನ್ನೆ ಬಳಸಿಕೊಂಡು ಭಾವಚಿತ್ರಗಳನ್ನು ಚಿತ್ರಿಸುವುದು ಕಲಿತರು. ಸಿನೇಮಾ ಮಂದಿರದ ಹೊರಗಿನ ದೃಶ್ಯವನ್ನು ದಿನಾಲು ನೋಡುವದು ಒಂದು ಹವ್ಯಾಸ ಮಾಡಿಕೊಂಡಿದ್ದರೇ ವಿನಃ ಸಿನೇಮಾಮಂದಿರದ ಒಳಗಿನ ದೃಶ್ಯವನ್ನು ಎಂದೂ ನೋಡಿರಲಿಲ್ಲ. ಮನೆಯಲ್ಲಿ ಸಿನೇಮಾ ನೋಡಲಿಕ್ಕೆ ಆಸ್ಪದವಿರಲಿಲ್ಲ. ಅದೂ ಭಕ್ತಿಪ್ರಧಾನವಾದ, ಸಂಸಾರಿಕ ಚಿತ್ರವಿದ್ದರೆ ಮಾತ್ರ ಅಂದೊ ಇಂದೋ ಎನ್ನುವ ಹಾಗೆ ಹೋಗುತ್ತಿದ್ದರು. ಕೆಲವೊಂದು ಸಾರಿ ಮನೆಯವರ ಜೊತೆ ಹೋದರೂ ಹೋಗಿರಬಹುದು. ಹೀಗೆ ಜಗದೇವಪ್ಪನವರಿಗೆ ಸಿನೇಮಾದ ಪೋಸ್ಟರ ಭಾವಚಿತ್ರ ರಚಿಸುವುದಕ್ಕೆ ಪ್ರೇರಣೆ ನೀಡಿತಲ್ಲದೇ ಚಿತ್ರ ಕಲೆಯಲ್ಲಿ ಆಸಕ್ತಿಯನ್ನು ಹೆಚ್ಚಿಸಿತು. ಹೀಗೆ ಇವರು ಸಿನೇಮಾಮಂದಿರ ಕಡೆ ಹೋಗುವದು ಅಥವಾ ಹೋಟೆಲೊಂದರ ಕಡೆ ಹೋಗುವುದು ಅಲ್ಲಿ ಕಂಡ ದೃಶ್ಯದ ಅನುಕರಣೆ ಮಾಡುವುದು ಇದು ಇವರ ದಿನನಿತ್ಯದ ಒಂದು ಕೆಲಸವಾಗಿಬಿಟ್ಟಿತು.

ಶಾಲೆಯ ವರ್ಷದ ಕೊನೆಯ ಭಾಗದಲ್ಲಿ ಕಲಾಗುರುಗಳಾದ ಶಂಕರರಾವರು ತಾವು ತೆಗೆದ ನಕ್ಷೆಗಳು, ಚಿತ್ರಗಳನ್ನು ಸುತ್ತಲೂ ಚೆನ್ನಾಗಿ ಕತ್ತರಿಸಿ ಬಂದು ಬಿಳಿ ಹಾಳೆಯ ಮೇಲೆ ಅವುಗಳನ್ನು ಅಂಟಿಸಿ ಗೋಡೆಗೆ ತಗುಲಿಸುತ್ತಿದ್ದರು. ಇವರ ಜೊತೆ ವಿದ್ಯಾರ್ಥಿಗಳೂ ಕೂಡ ತಮ್ಮ ತಮ್ಮ ಚಿತ್ರಗಳನ್ನು ಗೋಡೆಗೆ ತಗುಲಿಸಿ ಒಂದು ಚಿತ್ರಕಲಾ ಪ್ರದರ್ಶನವೆಂಬಂತೆ ಇತರ ಕಾರ್ಯಕ್ರಮಗಳೊಂದಿಗೆ ಆಯೋಜಿಸುತ್ತಿದ್ದರು. ಜಗದೇವಪ್ಪನವರು ಯಾವ ಮನರಂಜನಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸುತ್ತಿರಲಿಲ್ಲ. ಮತ್ತು ಅದರ ಬಗ್ಗೆ ಆಸಕ್ತಿಯೂ ಇವರಲ್ಲಿರಲಿಲ್ಲ.ಕೇವಲ ಚಿತ್ರಕಲೆಯ ವಿಷಯ ಬಂದಾಗ ಮಾತ್ರ ಜಗದೇವಪ್ಪನವರ ಹೆಸರು ಕೇಳಿಬರುತ್ತಿತ್ತು. ಇಲ್ಲಿ ಇವರದೇ ಪಾಲು ಹೆಚ್ಚಾಗಿರುತ್ತಿತ್ತು. ಇವರು ಪ್ರದರ್ಶನದಲ್ಲಿ ಹೆಚ್ಚಿದ ಚಿತ್ರಗಳನ್ನು ಕಂಡು ಕಾರ್ಯಕ್ರಮಕ್ಕೆ ಬಂದಿದ್ದ ಎಲ್ಲ ಗಣ್ಯರು, ಕಲಾಸಕ್ತರು ಅವುಗಳನ್ನು ಕಂಡು ಮೆಚ್ಚಿಕೊಂಡಿದ್ದರು. ಈ ಒಂದು ಸಂದರ್ಭದಲ್ಲಿ ಕಾರ್ಯಕ್ರಮದಲ್ಲಿ ಜಗದೇವಪ್ಪನವರಿಗೆ ಬಹುಮಾನವನ್ನು ಕೊಟ್ಟಿದ್ದರು. ಇದರಿಂದ ಜಗದೇವಪ್ಪನವರ ಮನಸ್ಸಿನಲ್ಲಿ ಹೇಳಿಕೊಳ್ಳಲಾರದಷ್ಟು ಸಂತೋಷ. ಇಂತಹ ಅನೇಕ ಪ್ರಸಂಗಗಳು ಆಗಾಗ ಇವರಿಗೆ ಒದಗಿಬಂದಿದ್ದವು ಇದರಿಂದ ಇವರಿಗೆ ಕಲೆಯಲ್ಲಿ ಆಸಕ್ತಿ ಮೂಡಿಸಲು ಈ ಸಂದರ್ಭಗಳೇ ಕಾರಣವಾದವು. ಈ ಒಂದು ಅವಧಿಯಲ್ಲಿ ಅವರು ಲೋಯರ್ ಮತ್ತು ಹೈಯರ್ ಗ್ರೇಡ್ ಡ್ರಾಯಿಂಗ ಪರೀಕ್ಷೆಗಳನ್ನು ಕಟ್ಟುವ ಸಲುವಾಗಿ ಕಲೆಯ ಅಭ್ಯಾಸದಲ್ಲಿ ತೊಡಗುತ್ತಿದ್ದರು. ಅಂದು ಈ ಲೊಯರ್ ಮತ್ತು ಹೈಯರ್ ಗ್ರೇಡ್ ಡ್ರಾಯಿಂಗ ಪರೀಕ್ಷೆಗಳು ಪೂರಕ-ವೆಂಬಂತೆ ಕಲಾ ಶಿಕ್ಷಣವನ್ನು ನೀಡುವಲ್ಲಿ ಪ್ರಮುಖ ಪಾತ್ರವಹಿಸಿದ್ದವು. ಇಲ್ಲಿ ಅನೇಕ ವಿಷಯಗಳೊಂದಿಗೆ ಕಲೆಯ ಅಭ್ಯಾಸದಲ್ಲಿ ತೊಡಗಬೇಕಾಗುತ್ತದೆ. ತಮ್ಮ ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತದ ಶಿಕ್ಷಣದ ಕೊನೆಯಲ್ಲಿ ಅವರು ಕ್ರೀಡೆಗಳಲ್ಲಿಯೂ ಭಾಗವಹಿಸತೊಡಗಿದರು. ಹೆಚ್ಚಾಗಿ ಟೇಬಲ್ ಟೆನಿಸ್ ಆಟವನ್ನು ಆಡುತ್ತಿದ್ದರು. ಇದರೊಂದಿಗೆ ಬಾಸ್ಕೆಟ್ ಬಾಲ್ ಕೂಡ ಆಡುವ ಹವ್ಯಾಸವನ್ನಿಟ್ಟುಕೊಂಡಿದ್ದರು. ಅಂದಿನ ಕಾಲದಲ್ಲಿ ಸರಕಾರಿ ಶಾಲೆಗಳಲ್ಲಿ ಇಂಥ ವ್ಯವಸ್ಥೆಗಳಿರುತ್ತಿದ್ದವು. ಹೀಗೆ ಈ ಶಾಲೆಯಲ್ಲಿ ಕೆಲವೊಂದು ಸಣ್ಣಪುಟ್ಟ ಚಟುವಟಿಕೆಗಳೊಂದಿಗೆ ಜಗದೇವಪ್ಪನವರು ತಮ್ಮ ಪ್ರಾಥಮಿಕ , ಮಾಧ್ಯಮಿಕ ಹಂತದ ಶಿಕ್ಷಣವನ್ನು ಪಡೆದುಕೊಂಡರು.

ಮುಂದೆ ತಮ್ಮ ಹೈಸ್ಕೂಲ್ ಶಿಕ್ಷಣಕ್ಕಾಗಿ ನಗರದ ಈಗಿನ ಎಂ.ಪಿ.ಎಚ್.ಎಸ್. ಶಾಲೆಗೆ ಸೇರಿಕೊಂಡರು. ಮೊದಲು ಇದನ್ನು ಎಚ್.ಎಸ್.ಸಿ.ಎಂ. ಪಿ ಯೆಂದು ಕರೆಯುತ್ತಿದ್ದರು. ಇಲ್ಲಿ ಸೈಯದ್ ಹುಸೇನ್‌ರೆಂಬ ಕಲಾಶಿಕ್ಷಕರಿದ್ದರು. ಜಗದೇವಪ್ಪನವರಿಗೆ ಇವರ ಸಂಗ ಹೆಚ್ಚಾಗಿ ಬೆಳೆಯಿತು. ಇದಕ್ಕೊಂದು ಕಾರಣವು ಇದೆ. ಜಗದೇವಪ್ಪನವರು ಪ್ರಾಥಮಿಕ ಕಲಾಶಾಲೆಯಲ್ಲಿ ಲೋಯರ್ ಹೈಯರ್ ಗ್ರೇಡ್ ಡ್ರಾಯಿಂಗ್ ಪರೀಕ್ಷೆಗಳನ್ನು ಕಟ್ಟಿದ್ದರು. ಅದರ ಒಂದು ಹೆಚ್ಚಿನ ಅಭ್ಯಾಸಕ್ಕೆಂದು ಆಗಾಗ ಇವರ ಹತ್ತಿರ ಬಂದು ಗ್ರೇಡ್ ಪರೀಕ್ಷೆಯ ದೃಷ್ಟಿಯಿಂದ ಕೆಲವು ಮಾಹಿತಿಗಳನ್ನು ಪಡೆದುಕೊಳ್ಳುತ್ತಿದ್ದರು. ಇದರಿಂದ ಸೈಯದ್ ಹುಸೇನರ ಜೊತೆ ಇವರಿಗೆ ಸ್ವಲ್ಪ ಸಲುಗೆಯಿತ್ತು. ಇಲ್ಲಿ ತಮ್ಮ ಅಭ್ಯಾಸದಲ್ಲಿ ಹೆಚ್ಚಿನ

ಅವಧಿಯನ್ನು ಕಲೆಯಲ್ಲಿಯೇ ತೊಡಗಿಸಿಕೊಳ್ಳುತ್ತಿದ್ದರು. ಈ ಒಂದು ಸಂದರ್ಭದಲ್ಲಿ ನಗರದಲ್ಲಿ ಯಾವುದಾದರೂ ಒಂದು ಕಲಾಸ್ಪರ್ಧೆಯು ನಡೆದರೆ ಈ ಶಾಲೆಗೊಂದು ನೋಟೀಸು ಬರುತ್ತಿತ್ತು. ಶಾಲೆಯಿಂದ ಸ್ಪರ್ಧೆಗೆ ಹೆಸರುಗಳನ್ನು ಕಳುಹಿಸ ಬೇಕಾದರೆ ಅದರಲ್ಲಿ ಜಗದೇವಪ್ಪನವರ ಹೆಸರನ್ನು ಸೂಚಿಸುವುದು ಮರೆಯುತ್ತಿರಲಿಲ್ಲ. ಇವರು ಸ್ಪರ್ಧೆಯಲ್ಲಿ ಕುಳಿತು ಕೊಂಡರೆ ಬಹುಮಾನ ಖಂಡಿತವೆಂದು ಎಲ್ಲರಿಗೂ ಒಂದು ಮನವರಿಕೆಯಾಗಿಬಿಡುತ್ತಿತ್ತು. ಎಷ್ಟೋ ಸ್ಪರ್ಧೆಗಳಲ್ಲಿ ಇವರು ಭಾಗವಹಿಸುವ ಅವಕಾಶಗಳು ಬಂದಿದ್ದವು. ಅವುಗಳಲ್ಲಿ ಅರಣ್ಯ ಇಲಾಖೆಯವರು ಏರ್ಪಡಿಸಿದ 'Wild life' ಎಂಬ ಚಿತ್ರಕಲಾ ಸ್ಪರ್ಧೆಯಲ್ಲಿ ಇವರಿಗೆ ಬಹುಮಾನ ದೊರೆಯಿತು. ಕನ್ನಡ ಸಾಹಿತ್ಯ ಸಂಘದವರು ಏರ್ಪಡಿಸಿದ ಚಿತ್ರಕಲಾ ಸ್ಪರ್ಧೆಯಲ್ಲಿ ಬಹುಮಾನದೊಂದಿಗೆ ಪ್ರಶಸ್ತಿ ಪತ್ರ ದೊರೆಯಿತು. ಇವರು ಓದುತ್ತಿದ್ದ ಎಚ್. ಎಸ್. ಸಿ. ಎಂ.ಪಿ ಪ್ರೌಢಶಾಲೆಯಲ್ಲಿ ವೀರಯ್ಯಸ್ವಾಮಿ ಎನ್ನುವ ಮುಖ್ಯೋಪಾಧ್ಯಾಯರಿದ್ದರು. ಇವರು ಶಿಸ್ತಿನ ಸಿಪಾಯಿಗಳಾಗಿದ್ದರು. ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವವರಾಗಿದ್ದರು. ವಿದ್ಯಾರ್ಥಿಗಳು ಇತರ ಸಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಅನೇಕ ರೀತಿಯಿಂದ ಸಹಾಯವನ್ನು ಮಾಡುತ್ತಿದ್ದರು. ಅನುಕೂಲವನ್ನು ಒದಗಿಸಿಕೊಡುತ್ತಿದ್ದರು. ಇವರು ಯಾರಾದರು ವಿದ್ಯಾರ್ಥಿಗಳು ಹೊರಗೆ ಹೋಗಿ ಪ್ರಶಸ್ತಿಯನ್ನು ಬಹುಮಾನವನ್ನು ತಂದರೆ ತುಂಬ ಖುಷಿಪಡುತ್ತಿದ್ದರು. ಅಷ್ಟೇ ಅಲ್ಲದೆ ಅವರಿಗೆ ಪ್ರೋತ್ಸಾಹಿಸುತ್ತಿದ್ದರು. ಜಗದೇವಪ್ಪನವರು ಬಹುಮಾನವನ್ನು ಪಡೆದುಕೊಂಡು ಬಂದಿದ್ದನ್ನು ನೋಡಿ ಇವರನ್ನು ಹೋಗಳತ್ತಾ ಶಾಲೆಯಲ್ಲಿದ್ದ ಎಲ್ಲಾ ವಿದ್ಯಾರ್ಥಿಗಳನ್ನು ಪರಿಚಯಿಸುತ್ತಿದ್ದರು. ಅವರು ಜಗದೇವಪ್ಪನವರಿಗೆ ಈ ಶಾಲೆಯಲ್ಲಿ ಸಂಪೂರ್ಣ ಸಹಕಾರವನ್ನು ಕೊಟ್ಟರು. ಇದೇ ವೇಳೆಯಲ್ಲಿ ಶರಣಬಸವೇಶ್ವರ ಶಾಲೆಯಲ್ಲಿ ಭಂಕೂರಕರ್ ಎನ್ನುವ ಚಿತ್ರಕಲಾಶಿಕ್ಷಕರಿದ್ದರು. ಇವರು ಕಲೆಯ ಬಗ್ಗೆ ಹೆಚ್ಚು ತಿಳಿದುಕೊಂಡವರಾಗಿದ್ದರು. ಆಗಿನ ಕಲಬುರ್ಗಿಯ ಸಮಕಾಲೀನ ಕಲಾವಿದರಾದ ಶಂಕರರಾವ ಆಳಂದಕರ್, ಎಂ.ಟಿ. ಭೋಪಲೆ, ಶಾಂತಲಿಂಗಪ್ಪಾ ಪಾಟೀಲ, ಶಂಕರಗೌಡ ಬೆಟ್ಟದೂರ, ಎಸ್. ಎಂ. ಪಂಡೀತರವರಂಥವರನ್ನು ಚನ್ನಾಗಿ ಬಲ್ಲವರಾಗಿದ್ದರು. ಅಲ್ಲದೆ ಕಲೆಯ ಆಗು ಹೋಗುಗಳನ್ನು ತಿಳಿದುಕೊಂಡವರಾಗಿದ್ದರು. ಒಳ್ಳೆಯ ಕಲಾಕೃತಿಗಳನ್ನು ರಚಿಸುತ್ತಿದ್ದರು. ಇವರಿಂದಲೂ ಜಗದೇವಪ್ಪನವರು ಕಲೆಯ ಬಗ್ಗೆ ಹೆಚ್ಚು ವಿಷಯಗಳನ್ನು ತಿಳಿದುಕೊಂಡರು ಇಂಥ ಒಂದು ಸಂದರ್ಭದಲ್ಲಿ ಮಹಾರಾಷ್ಟ್ರ ಸರಕಾರದವರು ಸೊಲಾಪುರದಲ್ಲಿ ಲೊಯರ್ ಮತ್ತು ಹೈಯರ್ ಗ್ರೇಡ್ ಪರಿಕ್ಷೆಗಳನ್ನು ನಡೆಸುತ್ತಿದ್ದರು. "Nature, Drawing, Geometry, Free-hand, Prespective, Memory " ಎಂದು ಆರು ವಿಷಯಗಳಿಂದ ಕೂಡಿದ ಇವು ಮೂರು ದಿನಗಳ ಪರ್ಯಂತ ಇವುಗಳ ಪರೀಕ್ಷೆಗಳು ನಡೆಯುತ್ತಿದ್ದವು. ಪರೀಕ್ಷೇಗೆ ಕುಳಿತುಕೊಂಡ ಎಲ್ಲ ವಿದ್ಯಾರ್ಥಿಗಳನ್ನು ಸೊಲಾಪೂರಕ್ಕೆ ಭಂಕೂರ ಮಾಸ್ತರರು ಕರೆದುಕೊಂಡು ಹೋಗುತ್ತಿದ್ದರು. ಈ ಎರಡೂ ಪರೀಕ್ಷೆಗಳಲ್ಲಿ ಜಗದೇವಪ್ಪನವರು ಒಳ್ಳೆಯ ಅಂಕಗಳೊಂದಿಗೆ ತೇರ್ಗಡೆಯಾದರು. ಇದನ್ನು ಕಂಡು ಭಂಕೂರ ಮಾಸ್ತರರು ಜಗದೇವಪ್ಪನವರನ್ನು ಕುರಿತು " ನಿನ್ನ ಡ್ರಾಯಿಂಗ್ ಚೆನ್ನಾಗಿದೆ , ನೀನು ಇದನ್ನು ಹೀಗೆ ಮುಂದುವರೆಸು ಬಿಡಬೇಡ " ಎಂದು ಹೇಳುತ್ತಿದ್ದರಂತೆ. ಜಗದೇವಪ್ಪನವರೂ ಕೂಡ ಹೆಚ್ಚಿನ ಕಲಾಸೃಷ್ಟಿಯಲ್ಲಿ ತೊಡಗುತ್ತಿದ್ದರು ಹೀಗಿದ್ದಾಗ ಇವರು ಎಂಟನೇ ತರಗತಿ ಓದುತ್ತಿದ್ದಾಗ ಇದೇ ಮಹಾರಾಷ್ಟ್ರ ಸರಕಾರವು ಮುಂಬೈಯಲ್ಲಿ ಇಂಟರಮೀಡಿಯಟ್ ಎಂಬ ಡಿಪ್ಲೋಮಾ ಕೋರ್ಸುಗಳನ್ನು ನಡೆಸುತ್ತಿದ್ದರು. ಈ ಪರೀಕ್ಷೆಯನ್ನು ಮುಂಬೈಯಲ್ಲಿ ಹೋಗಿ ಕುಳಿತುಕೊಳ್ಳಬೇಕಾಗುತ್ತಿತ್ತು. ಎರಡು ವರ್ಷದ ಗ್ರೇಡ್ ಪರೀಕ್ಷೆಗಳಲ್ಲಿ ಪಾಸು ಮಾಡಿದ ನಂತರವೇ ಈ ಇಂಟರಮೀಡಿಯಟ್ ಪರೀಕ್ಷೆಯಲ್ಲಿ ಕುಳಿತುಕೊಳ್ಳಲು ಅವಕಾಶವಿರುತ್ತಿತ್ತು. ಇಲ್ಲಿ ಎಲೆಮಂಟರಿ, ಇಂಟರಮೀಡಿಯಟ್, ಅಡ್ವಾನ್ಸ ಮತ್ತು ಡಿಪ್ಲೋಮಾ ಎಂಬ ನಾಲ್ಕು ವರ್ಷದ ಡಿಪ್ಲೋಮಾ ಕೋರ್ಸಿನ ಕ್ಲಾಸುಗಳು ಗುಲಬರ್ಗಾದ ಶರಣಬಸವೇಶ್ವರ ಶಾಲೆಯಲ್ಲಿ ಮತ್ತು ಎನ್.ವಿ. ಶಾಲೆಯಲ್ಲಿ ನಡೆಸುತ್ತಿದ್ದರು. ಆಗ ಇವುಗಳನ್ನು ಖಾಸಗಿಯಾಗಿ ನಡೆಸುತ್ತಿದ್ದರು. ಶರಣಬಸವೇಶ್ವರ ಹೈಸ್ಕೂಲನಲ್ಲಿ ಭಂಕೂರಕರ್ ಮಾಸ್ತರರು ಈ ಕ್ಲಾಸುಗಳನ್ನು ತೆಗೆದುಕೊಳ್ಳುತ್ತಿದ್ದರೆ ಎನ್.ವಿ. ಹೈಸ್ಕೂಲ್‌ನಲ್ಲಿ ಶಂಕರರಾವ ಆಳಂದಕರ್, ಕೃಷ್ಣ ಕಾನಿಹಾಳ, ಶಿವಶರಣಪ್ಪ ಮಾಸ್ತರ ಎಂಬುವವರು ಈ ವಿಷಯ ಗಳನ್ನು ಹೇಳುತ್ತಿದ್ದರು. ಜಗದೇವಪ್ಪನವರು ತಾವು ಮಾಡಿದ ಚಿತ್ರಗಳನ್ನು ಭಂಕೂರ ಮಾಸ್ತರರಿಗೆ ತೋರಿಸುತ್ತಿದ್ದರು. ಭಂಕೂ ರ ಮಾಸ್ತರರು ಆ ಚಿತ್ರಗಳನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು. ಒಮ್ಮೆ ಹೀಗೆ ನೀನು ವರ್ಕ ಚನ್ನಾಗಿ ಮಾಡ್ತಿಯಾ ,

ಡಿಪ್ಲೋಮಾ ಕೋರ್ಸನ್ನು ಮಾಡು ಎಂದು ಜಗದೇವಪ್ಪನವರನ್ನು ಹೇಳಿದರು. ·ಗುರುಗಳು ಹೀಗೆ ಹೇಳುತ್ತಿದ್ದಾರಲ್ಲ ಎನ್ನು ವ ಸಂತೋಷ ಒಂದೆಡೆಯಾದರೆ, ಆ ಕೋರ್ಸನ್ನು ನಾನು ಹೇಗೆ ಮಾಡಬೇಕು ನನ್ನಿಂದ ಆ ಕೋರ್ಸ ಮಾಡಲು ಆಗುತ್ತದೆಯೇ ಎಂಬ ಆತಂಕ ಒಂದು ಕಡೆ, ಅಂತೂ ಡಿಪ್ಲೋಮಾ ಕೋರ್ಸನ್ನು ಕಟ್ಟಿದರು. ಇದನ್ನು ಎಲಿಮೆಂಟರಿ ಪೇಯಿಂಟಿಂಗ್ ಎಂತಲೂ ಕರೆಯುತ್ತಿದ್ದರು. ಈ ಪರೀಕ್ಷೆಗಳನ್ನು ಕಟ್ಟಬೇಕಾದರೆ ಎರಡು ವರ್ಷದ ಗ್ರೇಡ್ ಪರೀಕ್ಷೆಗಳನ್ನು ಪಾಸು ಮಾಡಿರಲೇಬೇಕು. ಈ ಪರೀಕ್ಷೆಗಳನ್ನು ಮುಂಬೈಯಲ್ಲಿ ನಡೆಸುತ್ತಿದ್ದರು. ಇದರ ಸಲುವಾಗಿ ವಿದ್ಯಾರ್ಥಿಗಳು ಮುಂಬೈಗೆ ಹೋಗಿ ಬರಬೇಕಾಗುತ್ತಿತ್ತು. ಈ ಒಂದು ಹಂತದಲ್ಲಿ Perspective ಮಹತ್ವದ ವಿಷಯವಾಗಿತ್ತು. ಆಗ ಈ ವಿಷಯವನ್ನು ಯಾರೂ ಸರಿಯಾಗಿ ಹೇಳುಕೊಡುವವರಿದ್ದಿಲ್ಲ. ಜಗದೇವಪ್ಪನವರು ಕೆಲವು ದಿನಗಳನ್ನು ಹೈದರಾಬಾದನಲ್ಲಿ ಇದ್ದು Perspective ದ ಬಗ್ಗೆ ತಿಳಿದುಕೊಂಡಿದ್ದರು. ಇದರಿಂದ Perspective ವಿಷಯವು ಇವರಿಗೆ ಸುಲಭವಾದ ವಿಷಯವಾಗಿತ್ತು.

ಎಲಿಮೆಂಟರಿ ಪೇಯಿಂಟಿಂಗ್ ಡಿಪ್ಲೋಮಾ ಪರೀಕ್ಷೆಗೆ ಶರಣಬಸವೇಶ್ವರ ಹೈಸ್ಕೂಲಿನಿಂದ ಐದು ಜನ, ಎನ್.ವಿ. ಶಾಲೆಯಿಂದ ಆರು ದಿನ ಪರೀಕ್ಷೆಗೆ ಕುಳಿತುಕೊಂಡಿದ್ದರು. ಶರಣಬಸವೇಶ್ವರ ಶಾಲೆಯಿಂದ ಪರೀಕ್ಷೆಗೆ ಕುಳಿತುಕೊಂಡ ಐದು ಜನರಲ್ಲಿ ಪೋದ್ದಾರ, ಶರಣಪ್ಪ ತಿಪ್ಪಣ್ಣ ಎಂಬ ಐದು ಜನರಲ್ಲಿ ಜಗದೇವಪ್ಪನವರೂ ಒಬ್ಬರಾಗಿ ಪರೀಕ್ಷೆಗೆ ಕುಳಿತುಕೊಂಡಿದ್ದರು. ಭಂಕೂರ ಮಾಸ್ತರರು ಇಲ್ಲಿ Still life, portrait, Geometry, Perspective, Design ಮತ್ತು Composition. Composition ಅನ್ನು Creative design ಎಂದೂ ಕರೆಯುತ್ತಿದ್ದರು. ಈ ಎಲ್ಲ ವಿಷಯಗಳನ್ನು ಭಂಕೂರ ಮಾಸ್ತರರು ಎಲಿಮೆಂಟರಿ ಪೇಯಿಂಟಿಂಗ್ ಡಿಪ್ಲೋಮಾ ಪರೀಕ್ಷೆಯ ಮುನಾವಿಷಯ-ಗಳಂತೆ ಹೇಳಿಕೊಡುತ್ತಿದ್ದರು.ಇದಲ್ಲದೇ ಜಗದೇವಪ್ಪನವರು ಹೆಚ್ಚಿನ ಅಭ್ಯಾಸಕ್ಕಾಗಿ ಕೆಲವು Magazine's ನಲ್ಲಿ ಬರುವ ಚಿತ್ರಗಳನ್ನು ನೋಡಿ ಚಿತ್ರಿಸುವದು ಮಾಡುತ್ತಿದ್ದರು. ಈ ಪರೀಕ್ಷೆಗಳನ್ನು ಮುಂಬೈಯ ಜೆ. ಜೆ. ಕಲಾಶಾಲೆಯಲ್ಲಿ ನಡೆಸುತ್ತಿದ್ದರು. ಆಗ ಮುಂಬೈ ಎಂದೊಡನೆಯೇ ಒಂದು ಹೆದರಿಕೆ. ಅಷ್ಟು ದೊಡ್ಡ ಸಿಟಿಗೆ ಹೇಗೆ ಹೋಗುವುದು. ಎಂಬ ಭಯ ವಿದ್ಯಾರ್ಥಿಗಳಿಗೆ ಆಗಿನ ಕಾಲದಲ್ಲಿತ್ತು. ಮನೆಯಲ್ಲಿಯೂ ಕೂಡ ಪಾಲಕರು ತಮ್ಮ ಮಕ್ಕಳಿಗೆ ಮುಂಬೈಗೆ ಹೇಗೆ ಕಳಿಸುವದು ಎಂದು ವಿಚಾರ ಮಾಡುತ್ತಿದ್ದರು. ಎನ್.ವಿ. ಶಾಲೆಯ ಭೀಮಸೇನರಾವ ಮಾಸ್ತರರು ವಿದ್ಯಾರ್ಥಿಗಳನ್ನು ಪರೀಕ್ಷೆಗಾಗಿ ಮುಂಬೈಗೆ ಕರೆದುಕೊಂಡು ಹೋಗಲು ತಯಾರಿದ್ದರು. ಆಗ ವಿದ್ಯಾರ್ಥಿಗಳ ಪಾಲಕರು ಭೀಮಸೇನರಾವ ಮಾಸ್ತರರಿಗೆ ತಮ್ಮ ತಮ್ಮ ಮಕ್ಕಳನ್ನು ಅವರ ಜೊತೆ ಕಳಿಸಲು ತಯಾರಾದರು. ಭಿಮಸೇನ ಮಾಸ್ತರರು ಎಲ್ಲ ವಿದ್ಯಾರ್ಥಿ-ಗಳನ್ನು ಕರೆದುಕೊಂಡು ಮುಂಬೈಗೆ ಹೋದರು. ಈ ಪರೀಕ್ಷೆಗಳನ್ನು ಕುಳಿತುಕೊಳ್ಳಲೆಂದೇ ನಾಡಿನ ಹಲವಾರು ಕಡೆಯಿಂದ ವಿದ್ಯಾರ್ಥಿಗಳು ಜೆ.ಜೆ. ಕಲಾಶಾಲೆಗೆ ಬಂದಿದ್ದರು. ನಿಜಕ್ಕೂ ಆದೊಂದು ದೊಡ್ಡ ಕಲಾಶಾಲೆ . ಇಲ್ಲಿ ನಡೆಯುವ ಪರೀಕ್ಷೆಗಳು , ಎರಡುದಿನದ ನಾಲ್ಕು ಪತ್ರಿಕೆಗಳು ಒಂದು ದಿನದ ಒಂದು ಪತ್ರಿಕೆಯನ್ನೊಳಗೊಂಡಿತ್ತು. ಪರೀಕ್ಷೆಯಲ್ಲಿ ನೊಂದಣಿ ಸಂಖ್ಯೆಯು ಅಡ್ಡ ಹೆಸರಿಗೆ ಸಂಬಂಧಪಟ್ಟಂತೆ ಹಾಕುತ್ತಿದ್ದರು. ಒಂದು ವೇಳೆ ಖಂಡೇರಾವ ಎಂದಿದ್ದರೆ ಕೆ.ದಿಂದ ಪ್ರಾರಂಭವಾಗುತ್ತಿತ್ತು. ಇಲ್ಲಿ ಪರೀಕ್ಷೆಗೆ ಬರುವವರು ಕಾರಿನಲ್ಲಿ ಬರುವರು, ಅವರು ಧರಿಸಿದ ಉಡುಪು, ಪರೀಕ್ಷೆಯು ಮುಗಿದ ಕೂಡಲೆ ಎಲ್ಲರೂ ಒಟ್ಟಿಗೆ ಗುಂಪು ಗುಂಪಾಗಿ ಮಾತನಾಡಿಕೊಳ್ಳುತ್ತಾ ಹೋಗುವುದು. ಇದೆಲ್ಲವನ್ನು ನೋಡಿ ಹುಚ್ಚಿ ಹಿಡಿದಂತಾಗುತ್ತಿತ್ತು. ಪರೀಕ್ಷೆಯ ಸಮಯದಲ್ಲಿ ಜಗದೇವಪ್ಪನವರ ಪಕ್ಕದಲ್ಲಿ ಕೇವಲ್ ರಮಣಿ ಎನ್ನುವವರು ಪರೀಕ್ಷೆಗೆ ಕುಳಿತಿರುವವರಲ್ಲಿ ಒಬ್ಬರಾಗಿದ್ದರು. ಇವರು ಒಮ್ಮೆ ಜಗದೇವಪ್ಪನವರಿಗೆ ಒಂದು ಸಾರಿ ರಬ್ಬರ್ ಕೊಡಿ ಎಂದು ಕೇಳಿದ್ದಕ್ಕೆ ಒಂದು ರೀತಿಯ ಮುಜುಗರ ಪಡುತ್ತಿದ್ದರು. ಪರೀಕ್ಷೆಯ ಸಮಯದಲ್ಲಿ ಯಾರೂ ಮಾತನಾಡುವ ಹಾಗಿರಲಿಲ್ಲ. ತುಂಬ ಸ್ಟ್ರಿಕ್ಟ್ ಆಗಿ ನಡೆಯುತ್ತಿದ್ದವು. ಎಲ್ಲರೂ ಪರೀಕ್ಷೆಯು ಮುಗಿದ ನಂತರ ಹೊರಗೆ ಬಂದು ಏನನ್ನಾದರೂ ಚರ್ಚಿಸುತ್ತಿರುತ್ತಿದ್ದರು. ಅವರ ಉಡುಪು, ನಡೆ-ನುಡಿಯನ್ನು ನೋಡಿದರೆ ಒಂದು ಸಿನಿಮಾದಲ್ಲಿ ನೋಡಿದ ದೃಶ್ಯದಂತೆ ಕಾಣುತ್ತಿತ್ತು. ಯಾಕೆಂದರೆ ನಾವು ಒಮ್ಮೆಯೂ ಕೂಡ ಇಲ್ಲಿಗೆ ಬಂದಿರಲಿಲ್ಲ. ಆಮೇಲೆ ಕಲಬುರ್ಗಿ ಆಗಿನ್ನು ಒಂದು ಹಳ್ಳಿಯಂತಿತ್ತು. ಆದಕ್ಕೆ ಇನ್ನೊಂದು ಕಾರಣವೂ ಇತ್ತು. ಆಗ ನಮ್ಮ ಕಡೆ ಕಲಾಶಾಲೆಗಳು ಇರಲಿಲ್ಲ

ಶಿಕ್ಷಣವು ಅಷ್ಟು ಸರಿಯಾಗಿ ದೊರೆಯುತ್ತಿರಲಿಲ್ಲ. ಸ್ವತಃ ನಾವೆ ಗುರುಗಳ ಮನೆಗೆ ಹೋಗಿ ಕೀಲಿತಂದು ಡಿಪಾರ್ಟಮೆಂಟ ತೆರೆದು ಬರ್ರಿಸರ್ ಎಂದು ಕರೆದುಕೊಂಡು ಬರಬೇಕು. ಶರಣಬಸವೇಶ್ವರ ಶಾಲೆಯಲ್ಲಿ ಒಂದ ಸ್ವಲ್ಪ ಹೋಗೊದು, ಎಸ್.ವಿ. ಶಾಲೆಯಲ್ಲಿ ಒಂದು ಸ್ವಲ್ಪ ಹೋಗೊದು ಮಾಡಿ ಅಲ್ಲಿ ವರ್ಕಗಳನ್ನು ಮಾಡೊದನ್ನ ನೋಡಿ ಕಲಿತಿವಿ ಹೆಚ್ಚಾಗಿ ನಮ್ಮಷ್ಟಕ್ಕೆ ನಾವೇ ಹೆಚ್ಚಾಗಿ ಕಲಿತಿದ್ವಿ. ಈ ಒಂದು ಪರಸ್ಥಿತಿಯು ಕಲಬುರ್ಗಿಯಷ್ಟೇ ಅಲ್ಲ ಈ ಭಾಗದಲ್ಲೆಲ್ಲ ಇತ್ತು. ಎಂದು ಜಗದೇವಪ್ಪನವರು ತಮ್ಮ ಮನಸ್ಸಿನಲ್ಲಾದ ಭಾವನೆಗಳನ್ನು ಹಂಚಿಕೊಳ್ಳುತ್ತಾರೆ.

ಒಟ್ಟು ಒಂಬತ್ತು ದಿನಗಳಿಂದ ಕೂಡಿದ ಎಲೆಮೆಂಟರಿ ಡಿಪ್ಲೋಮಾ ಪರೀಕ್ಷೆಯನ್ನು ಕೊಟ್ಟು ಕಲಬುರ್ಗಿಗೆ ಬಂದರು. ಈ ಅವಧಿಯಲ್ಲಿ ಹೈಸ್ಕೂಲಿನ ಕಡೆಯಿಂದ ವಿದ್ಯಾರ್ಥಿಗಳಿಗೆ ವಾರ್ಷಿಕ ಪ್ರವಾಸಗಳಂತೆ ಒಂದು ಬಾರಿ ಹೈದರಾಬಾಗೆ ಕರೆದುಕೊಂಡು ಹೋಗಿದ್ದರು. ಇದರಲ್ಲಿ ಜಗದೇವಪ್ಪನವರೂ ಇದ್ದರು. ಹೈದರಾಬಾದಿನಲ್ಲಿ ಸಾಲಾರ ಜಂಗ್ ಮ್ಯುಸಿಯಂ, ಗೊಲ್ಕುಂಡಗಳಲ್ಲದೇ ಅಲ್ಲಿರುವ ಎಲ್ಲ ಪ್ರೇಕ್ಷಣೀಯ ಸ್ಥಳಗಳನ್ನು ತೋರಿಸಿಕೊಂಡು ಗುರುಗಳು ವಿದ್ಯಾರ್ಥಿಗಳಿಗೆ ಕಲಬುರ್ಗಿಗೆ ಕರೆದುಕೊಂಡು ಬಂದರು. ಹೈದರಾಬಾದಿನ ಸಾಲರಜಂಗ ಮ್ಯುಸಿಯಂನಲ್ಲಿರುವ ಪಾಶ್ಚಿಮಾತ್ಯರ ನೈಜ ಸಂಯೋಜನಾ ಕಲಾಕೃತಿಗಳು ಜಗದೇವಪ್ಪನವರ ಮನಸ್ಸಿನ ಮೇಲೆ ಬಹಳ ಪರಿಣಾಮ ಬೀರಿದವು. ಕಲಬುರ್ಗಿಯಲ್ಲಿ ಬಂದಾಗ ಅವುಗಳ ಫೋಟೋಕಾರ್ಡ ಸೈಜ್‌ನ ಚಿತ್ರವನ್ನು ನೋಡಿ ಅನುಕರಣೆಯನ್ನು ಮಾಡುತ್ತಿದ್ದರು. ಇದಲ್ಲದೇ ಇವರು ಚಿಕ್ಕಂದಿನಿಂದಲೇ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಒಲವು ಹೊಂದಿದವರಾಗಿದ್ದರು. ಇವರ ತಂದೆಯವರು ಮಲ್ಲಿಕಾರ್ಜುನ ಪಂಚಮಂಡಳಿಯ ಹಿರಿಯ ಮುಖಂಡರಾಗಿದ್ದರು. ಇವರು ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಪುರಾಣ, ಪ್ರವಚನಗಳಂತಹ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾಗ ಜಗದೇವಪ್ಪನವರು ಮನೆಯ ಮಾಳಿಗೆಯ ಮೇಲೆ ಕುಳಿತುಕೊಂಡೇ ನೋಡುತ್ತಿದ್ದರು. ಎಲ್ಲರ ಜೊತೆ ಕೂಡುವುದನ್ನು ಎಂದಿಗೂ ಇಷ್ಟಪಡುತ್ತಿರಲಿಲ್ಲ. ಅಷ್ಟೇ ಅಲ್ಲದೇ ಆ ಒಂದು ದೃಶ್ಯದ ಚಿತ್ರವೂ ಸಹ ಬಿಡಿಸುತ್ತಿದ್ದರು. ಸಣ್ಣ ಪುಟ್ಟ ಕಾರ್ಯಕ್ರಮಗಳು, ಆಗಾಗ ನಾಟಕಗಳನ್ನು ನೋಡುವ ಹವ್ಯಾಸವನ್ನಿಟ್ಟುಕೊಂಡಿದ್ದರು. ನಾಟಕಗಳನ್ನು ನೋಡಿ ಅದರಲ್ಲಿ ಬರುವ ದೃಶ್ಯಗಳನ್ನು ಹಾಗೇ ಚಿತ್ರಿಸುತ್ತಿದ್ದರು. ಮನೆಯ ಅಕ್ಕಪಕ್ಕದ ಹುಡುಗರ ಸಂಗ ಅಷ್ಟೇನೂ ಇರಲಿಲ್ಲವಾದರೂ ಪುಟ್ಟ ಮಕ್ಕಳನ್ನು ಎದುರಿಗೆ ಕೂಡಿಸಿಕೊಂಡು ಸಿನೇಮಾದ ಪತ್ತಿಗಳನ್ನು ಒಂದಕ್ಕೊಂದು ದಾರದಿಂದ ಜೋಡಿಸಿ, ಆಕಡೆ, ಈಕಡೆ ಒಂದು ಕಟ್ಟಿಗೆಗೆ ಸುತ್ತಿಕೊಂಡು ಎದುರು ಗಡೆಯ ಗೋಡೆಗೆ ಒಂದು ತೆಳ್ಳನೆಯ ಬಿಳಿ ಬಟ್ಟೆಯನ್ನು ತೂಗುಬಿಟ್ಟು ಅದರ ಮೇಲೆ ಬ್ಯಾಟರಿಯಿಂದ ಬೆಳಕನ್ನು ಬಿಟ್ಟು ಸಿನೇಮಾದಂತೆ ತೋರಿಸುತ್ತಿದ್ದರು.

ಇವರ ಮನೆಯ ಪಕ್ಕದಲ್ಲಿ ಜಾಧವ ಎನ್ನುವ ಒಬ್ಬ ಮರಾಠಿ ಹುಡುಗನಿದ್ದ. ನೋಡುವದಕ್ಕೆ ಜಗದೇವಪ್ಪನವರಿಗಿಂತ ನಾಲ್ಕೈದು ವರ್ಷ ದೊಡ್ಡವನಾಗಿದ್ದ. ಅವನು ಚಿತ್ರಕಲೆಯನ್ನು ಬಲ್ಲವನಾಗಿದ್ದನು. ಸ್ಕೆಚ್‌ಗಳನ್ನು ಮಾಡುವದು, ಬೇರೆ ಬೇರೆ ಕಲಾಕೃತಿಗಳನ್ನು ಅನುಕರಣೆ ಮಾಡುವದು, ನಿಸರ್ಗ ಚಿತ್ರಗಳನ್ನು ಬಿಡಿಸುವದು. ಹೀಗೆವಿವಿಧ ರೀತಿಯಲ್ಲಿ ಚಿತ್ರಗಳನ್ನು ಚಿತ್ರಿಸುತ್ತಿದ್ದನು. ಕಲಾಸಕ್ತಿಯನ್ನು ಹೊಂದಿದ ಜಗದೇವಪ್ಪನವರು ಜಾಧವ ಎನ್ನುವ ಮರಾಠಿ ಹುಡುಗನ ಮನೆಗೆ ಹೋಗಿ ಅವನು ಚಿತ್ರಿಸಿದ ಚಿತ್ರಗಳನ್ನು ನೋಡುತ್ತಿದ್ದರು. ಇದರಿಂದ ಜಗದೇವಪ್ಪನವರಲ್ಲಿ ಕಲೆಯ ಆಸಕ್ತಿಯು ಬೆಳೆಯಲು ಇದೂ ಕೂಡ ಒಂದು ರೀತಿಯ ಪ್ರೇರಣೆ ನೀಡಿತ್ತೆಂದರೆ ತಪ್ಪಾಗಲಾರದು.

ಜಗದೇವಪ್ಪನವರು ಮುಂಬೈಯಲ್ಲಿ ಎಲಿಮಂಟರಿ ಡಿಪ್ಲೋಮಾ ಪರೀಕ್ಷೆಯನ್ನು ಕೊಟ್ಟು ಬಂದಾಗಿನಿಂದ ಅವರಿಗೆ ಮುಂಬೈಯ ಜೆ.ಜೆ. ಕಲಾಶಾಲೆಯ ವಾತಾವರಣವನ್ನು ಒಂದು ಮರೆಯದ ಘಟನೆಯಾಯ್ತು. ದಿನಾಲು ನಿಂತರೂ, ಕೂತರೂ, ಅಲ್ಲಿ ನಡೆದ ಒಂದೊಂದು ಸನ್ನಿವೇಶವು ಅವರ ಕಣ್ಮುಂದೆ ದೃಶ್ಯಗಳಾಗಿ ಬಂದು ನಿಲ್ಲುತ್ತಿದ್ದವು. ಇವರು ಪರೀಕ್ಷೆಯನ್ನು ಕೊಟ್ಟು ಬಂದ ನಂತರ ನಲವತ್ತು ದಿನಗಳ ಮೇಲೆ ತೇರ್ಗಡೆಯಾದ ವಿಷಯ ಪತ್ರದ ಮೂಲಕ ತಿಳಿಸಲಾಯ್ತು. ಇದನ್ನು ಜೆ.ಜೆ. ಕಲಾಶಲೆಯು ತನ್ನದೇ ಆದ ಒಂದು ಜರನಲ್ ಎಂಬ ಪತ್ರಿಕೆಯಲ್ಲಿ ಪ್ರಕಟಮಾಡಿತು. ಆದರೆ ಆಶ್ಚರ್ಯಕರ ಘಟನೆಯೆಂದರೆ ಕಲಬುರ್ಗಿಯಿಂದ ಒಟ್ಟು ಹನ್ನೊಂದು ಜನ ಪರೀಕ್ಷೆಗೆಕುಳಿತುಕೊಂಡಿದ್ದರು. ಅದರಲ್ಲಿ ಜಗದೇವಪ್ಪನವರು ಒಬ್ಬರೇ ಪಾಸಾಗಿದ್ದರು. ಈ ವಿಷಯವನ್ನು ತಿಳಿದಕೂಡಲೆ ಇವರ ಮನೆಯಲ್ಲಿ ಎಲ್ಲೆಲ್ಲೂ ಸಂತಸದ ಕ್ಷಣಗಳು, ಅದರಲ್ಲೂ ಒಬ್ಬನೇ ಪಾಸಾಗಿದ್ದಾನೆಂದ ಕೂಡಲೇ ಇವರ ಸಂತೋಷಕ್ಕೆ ಪರಿವೇ ಇರಲಿಲ್ಲ. ತಮ್ಮ ಮಗನ

ಈ ಸಾಧನೆಯನ್ನು ಮನೆಯಲ್ಲಿ ಎಲ್ಲರೂ ಮೆಚ್ಚಿಕೊಂಡಿದ್ದರು. ಜಗದೇವಪ್ಪನವರಿಗಂತೂ ಎಲ್ಲಿಲ್ಲದ ಖುಷಿ. ಆದನ್ನು ವ್ಯಕ್ತಪಡಿಸುತ್ತಿರಲಿಲ್ಲವಷ್ಟೆ. ಎಲ್ಲರೂ ಜಗದೇವಪ್ಪನವರನ್ನು ಅಭಿನಂದಿಸಿದರು. ಗುರುಗಳು ಕೂಡ ಜಗದೇವಪ್ಪನವರ ಈ ಸಾಧನೆಯನ್ನು ಮೆಚ್ಚಿಕೊಂಡರು. ಅಲ್ಲದೇ ಇವರ ಮೇಲೆ ಹಚ್ಚಿನ ಒಲವು ತೋರಿಸಲು ಪ್ರಾರಂಭಿಸಿದರು. ಇದರಿಂದ ಜಗದೇವಪ್ಪನವರಿಗೆ ಕಲಾಶಿಕ್ಷಣವನ್ನು ಪಡೆಯುವ ಆಸೆಯು ಹೆಚ್ಚಾಯಿತು. ಈ ಒಂದು ಆನಂದದಿಂದ ಎಂದಿನಂತೆ ತಮ್ಮ ಕಲಾ ಕಾರ್ಯವನ್ನು ಮುಂದುವರೆಸಿದರು. ದಿನಾಲು ಬೆಳಿಗ್ಗೆ ಐದು ಗಂಟೆಗೆ ಏಳುವುದು. ಅಲ್ಲೇ ಸಮಿಪದಲ್ಲಿರುವ ಶಹಾಬಜಾರ, ರಾಮತೀರ್ಥಗಳ ಕಡೆಗೆ ಹೋಗಿ ನಿಸರ್ಗಚಿತ್ರಗಳನ್ನು ಚಿತ್ರಿಸುವದು ದಾರಿಯಲ್ಲಿ ಹೋಗುವಾಗ ಕಾಣುವ ದೃಶ್ಯಗಳು ದನಕರುಗಳ ಗುಂಪು , ಇವೆಲ್ಲವುಗಳ ಸ್ಕೆಚ್‌ಗಳನ್ನು ಮಾಡುವದು ಇದು ಇವರ ದೈನಂದಿನದ ಬೆಳಗಿನ ಕೆಲಸವಾಗಿಬಿಟ್ಟಿತು. ಹಂತ್ತುಗಂಟೆಗೆ ಶಾಲೆಗೆ ಹೋಗುವದು ತಾವು ಮಾಡಿದ್ದ ಸ್ಕೆಚ್‌ಗಳನ್ನು, ನಿಸರ್ಗ ಚಿತ್ರವನ್ನು ಗುರುಗಳಿಗೆ ತೋರಿಸುವದು, ಗುರುಗಳು ಅದನ್ನು ನೋಡಿ ಸರಿ ಇರುವುದನ್ನು ಹೊಗಳುತ್ತಾ ಕೆಲವು ಎನಾದರೂ ತಪ್ಪಿದ್ದರೆ ತಿದ್ದುತ್ತಿದ್ದರು. ಅಲ್ಲದೇ ಅವುಗಳ ಬಗ್ಗೆ ಸೂಚನೆಯನ್ನು ನೀಡುತ್ತಿದ್ದರು. ಇದಕ್ಕೆಲ್ಲ ಸ್ಪೂರ್ತಿ ಎಲೆಮೆಂಟರಿ ಡಿಪ್ಲೋಮಾ ಪರೀಕ್ಷೆಯಲ್ಲಿ ಪಾಸಾಗಿದ್ದು ಒಂದು ಕಾರಣವಾಯಿತು.

ಹೀಗೆ ಇವರು ಕಲೆಯ ಬಗ್ಗೆ ಹೆಚ್ಚು ತಿಳಿದು ಕೊಳ್ಳಲಾರಂಭಿಸಿದಂತೆ ಎರಡು ವರ್ಷಗಳು ಕಳೆದವು. ಮೆಟ್ರಿಕ್ ಅಭ್ಯಾಸದ ದೃಷ್ಟಿಯಿಂದ ಓದಿನ ಕಡೆಗೆ ಹೆಚ್ಚು ಗಮನ ಕೊಡುತ್ತಿದ್ದರು. ಈಗಿನ ಮೆಟ್ರಿಕ್ ಎಂದು ನಾವೇನು ಕರೆಯುತ್ತೇವೆ. ಆಗ ಹನ್ನೊಂದನೇ ವರ್ಷಕ್ಕೆ ಮೆಟ್ರಿಕ್ ಎಂದು ಕರೆಯುತ್ತಿದ್ದರು. ಎಚ್. ಎಸ್.ಸಿ.ಎಂ.ಪಿ. ಯಲ್ಲಿ ತಮ್ಮ ಮೆಟ್ರೀಕ್‌ನ್ನು ಮುಗಿಸಿದರು. ಮುಂದೆ ಕಲಾಶಿಕ್ಷಣದ ಕಡೆಗೆ ಗಮನ ಹರಿಸಿದರು. ಇಲ್ಲಿರುವ ಕಲಾಶಿಕ್ಷಣದ ಮಾದರಿಯನ್ನು ತುಲನಾತ್ಮಕವಾಗಿ ಗಮನಿಸಿದಾಗ ಮುಂಬೈಯಲ್ಲಿರುವ ಜೆ.ಜೆ.ಕಲಾಶಿಕ್ಷಣದ ಮಾದರಿಯು ಅವರಿಗೆ ತುಂಬ ಹಿಡಿಸಿತು. ಅಲ್ಲಿಯೇ ತಮ್ಮ ಕಲಾಶಿಕ್ಷಣವನ್ನು ಮುಂದುವರೆಸಬೇಕೆಂಬ ದೃಢ ಸಂಕಲ್ಪ ಮಾಡಿದರು. ಇತ್ತ ಇವರ ಮನೆಯಲ್ಲಿ ಇವರ ತಂದೆಯವರಿಗೆ ಕಲಾ ಶಿಕ್ಷಣವನ್ನು ಕೂಡಿಸಬೇಕೆಂಬುದು ಇಷ್ಟವಿರಲಿಲ್ಲ. ಅವರು ತಮ್ಮ ಮಗ ಪಾಲಿಟೆಕ್ನಿಕ್ ಮಾಡಬೇಕೆಂದುಕೊಂಡಿದ್ದರು. ಆಗ ಕಲಬುರ್ಗಿಯಲ್ಲಿ ಎಚ್.ಕೆ.ಇ. ಸೊಸಾಯಿಟಿಯು ಒಂದು ಪ್ರತಿಷ್ಠಿತ ಸಂಸ್ಥೆಯಾಗಿತ್ತು. ಮಹಾದೇವಪ್ಪ ರಾಂಪುರೆಯವರು ಆಗ ಈ ಸಂಸ್ಥೆಯ ಚೇರಮನ್‌ರಾಗಿದ್ದರು. ಇವರು ಶಂಕರಪ್ಪ ಖಂಡೇರಾವರಿಗೆ ತುಂಬ ಹತ್ತಿರದ ವ್ಯಕ್ತಿಯಾಗಿದ್ದರು. ಅವರ ಸಂಸ್ಥೆಯಡಿಯಲ್ಲಿ ಬರುವ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಜಗದೇವಪ್ಪನವರನ್ನು ಸೇರಿಸಬೇಕೆಂದುಕೊಂಡಿದ್ದರು ಆದರೆ ಜಗದೇವಪ್ಪನವರಿಗೆ ಕಲಾಶಿಕ್ಷಣ ಪಡೆಯಬೇಕೆಂಬ ಹಂಬಲ , ಅವರಿಗೆ ಈ ಪಾಲಿ ಟೆಕ್ನಿಕ್ ಇಷ್ಟವಿರಲಿಲ್ಲ. ತಂದೆಯವರು ಇವರನ್ನು ಕುರಿತು " ನೋಡಪ್ಪಾ ಪಾಲಿಟೆಕ್ನಿಕ್ ಒಲ್ಲೆಂದರೆ ಇಂಜಿನೀಯರಿಂಗ್ ಅಥವಾ ಯಾವದಾದರೂ ಒಂದು ಕೋರ್ಸ ಇಲ್ಲೆ ಇದ್ದಕೊಂಡ ಓದು, ಅಷ್ಟುದೂರ ಹೋಗಿ ನೀನ್ಯಾಕೆ ಓದ್ತಿಯಾ ಅಂಥದ್ದೇನಾದ ಚಿತ್ರಕಲೆಯಲ್ಲಿ. ಇಲ್ಲೇ ಇದ್ದು ಪಾಲಿಟೆಕ್ನಿಕೋ, ಇಂಜಿನೀಯರಿಂಗೋ ಮುಗಿಸಿ ನಮ್ಮ ಕಣ್ಣೆದುರಿಗೆ ಇದ್ದು ಒಂದು ನಾಲ್ಕು ದುಡ್ಡು ಸಂಪಾದಿಸುವಂತೆ ಹೇಗಿದ್ದರೂ ನಿನ್ನೆಲ್ಲ ಗೆಳೆಯರು ಇಲ್ಲೇ ಓದ್ತಿದ್ದಾರೆ. ಅವರೊಂದಿಗೂಡಿ ದಿನಾಲು ಕಾಲೇಜಿಗೆ ಹೋಗಿ ಅಭ್ಯಾಸ ಮಾಡು." ಎಂದು ತಂದೆಯವರು ಬಿಡಿ ಬಿಡಿಯಾಗಿ ತಿಳಿಸಿ ಹೇಳಿದರೂ ಜಗದೇ ವಪ್ಪನವರು ಜುಮ್ಮೆನ್ನಲಿಲ್ಲ. "ಇಲ್ಲನಾನು ಹೋದರೆ ಮುಂಬೈಗೆ ಹೋಗಿ ಕಲಾಶಿಕ್ಷಣವನ್ನು ಪಡೆಯುತ್ತೇನೆ ನೀವು ಕಳಿಸಲಿಲ್ಲವೆಂದರೆ ನಾನು ಅಭ್ಯಾಸವನ್ನು ಮುಂದುವರೆಸುವದಿಲ್ಲ ಆಮೇಲೆ ನನಗೆ ಈ ಪಾಲಿಟೆಕ್ನಿಕ್, ಇಂಜೇನಿಯರಿಂಗ್ ಯಾವೂದರಲ್ಲೂ ಆಸಕ್ತಿಯಿಲ್ಲವೆಂದ ಮೇಲೆ ನನಗ್ಯಾಕೆ ಬಲವಂತ ಮಾಡ್ತಿರಿ ." ಎಂದು ಪ್ರತ್ಯುತ್ತರವಿತ್ತಾಗ ತಂದೆಯವರು ನೊಡಪ್ಪಾ ನೀನು ಮುಂಬೈಗೆ ಹೋಗಿ ಕಲಿಯುತ್ತೇನೆಂದರೆ ನನಗೆ ಅಷ್ಟೊಂದು ದುಡ್ಡು ಕೊಡುವುದಾಗೊಲ್ಲಾ ಎಂದು ಹೇಳಿದರು. ಮನೆಯಲ್ಲಿ ಆರ್ಥಿಕ ದೃಷ್ಟಿಯಿಂದ ಯಾವತೊಂದರೆಯು ಇರಲಿಲ್ಲವಾದರೂ, ಹೀಗೆ ಹೇಳಿದರೆ ಮಗನು ಇಲ್ಲೆ ಇದ್ದುಕೊಂಡು ಓದುತ್ತಾನೆ ಎಂಬ ಆಸೆಯಿಂದ ಇವರ ತಂದೆಯವರು ಸುಮ್ಮನೆ ಹೆದರಿಸಲು ನೋಡಿದರು. ಆದರೆ ಜಗದೇವಪ್ಪನವರು ಇದಾವುದಕ್ಕೂ ಬಗ್ಗಲಿಲ್ಲ. ತಂದೆಯವರು ಮನೆಯ ಅಕ್ಕಪಕ್ಕದವರಿಂದಲೂ ಹೇಳಿಸಿ ನೋಡಿದರು. ಜಗದೇವಪ್ಪನವರು ಜಿದ್ದು ಹಿಡಿದುಬಿಟ್ಟಿದ್ದರು. ಕೊನೆಗೆ ಪಕ್ಕದ ಮನೆಯವರಾದ ಶಂಕ್ರಪ್ಪನವರ ಸ್ನೇಹಿತರಾದ,

ಐನಾಪೂರ ರವರು "ನೋಡಪ್ಪಾ ಅವನಿಗ್ಯಾಕೆ ಒತ್ತಾಯ ಮಾಡ್ತಿಯಾ ಪಾಲಿಟೆಕ್ನಿಕ್ಕೋ, ಇಂಜಿನಿಯರಿಂಗೋ ಅವನಿಗೆ ಇಷ್ಟವಿಲ್ಲವಂತೆ ಚಿತ್ರಕಲೆಯ ಬಗ್ಗೆ ತುಂಬ ಆಸಕ್ತಿ ಹೊಂದಿದ್ದಾನೆ. ಅಷ್ಟಕ್ಕೂ ಚಿತ್ರಕಲೆಯೆಂದರೆ ಸಾಮಾನ್ಯದ ವಿಷಯವಲ್ಲ ವೆಂದು ತಿಳಿದುಕೊಳ್ಳಬೇಡ. ಅವನ್ಯಾವುದು ಕಲಿತಿನಂತಾನ ಕಲಿಲಿ ಬಿಡು. ಅವರವರ ಹಣೆಬರಹದಲ್ಲಿ ಏನುಬರದಿರುತ್ತೇ ಅದಾಗುತ್ತೆ ಅದಕ್ಕೆ ನೀವೇನು ಮಾಡಲಿಕ್ಕೆ ಸಾಧ್ಯ". ಎಂದು ಹೇಳಿದರಾದರೂ ಜಗದೇವಪ್ಪನರ ತಂದೆಯವರಿಗೆ ಮಾತ್ರ ಯಾರೂ ಏನೇ, ಎಷ್ಟೇ ಹೇಳಿದರೂ ಸಾಮಾಧಾನವಿಲ್ಲ. ಹೀಗೆ ಕೆಲವು ದಿನಗಳು ಕಳೆದವು.

ಜಗದೇವಪ್ಪನವರು ಮನೆಯಲ್ಲಿ ಯಾರಜೊತೆಯೂ ಸರಿಯಾಗಿ ಮಾತನಾಡದೇ , ಬೇರೆ ವಿಷಯದಲ್ಲಿ ಆಸಕ್ತಿ ತೋರಿಸದೇ ಸುಮ್ಮನ್ನೆ ತಮ್ಮಷ್ಟಕ್ಕೆ ತಾವೇ ಇರುತ್ತಿದ್ದರು. ಹೀಗಿದ್ದರೂ ಇವರ ತಂದೆಯವರು ಇದನ್ನು ಲೆಕ್ಕಿಸದೇ ಹೋದರು. ಜಗದೇವಪ್ಪನವರಿಗೆ ಏನು ಮಾಡಬೇಕೆಂಬುದು ತೋಚಲಿಲ್ಲ. ಕೊನೆಗೆ ಅವರು ತಮ್ಮ ಗುರುಗಳಾದ ಮಹ್ಮದ ಷರೀಫರವರ ಹತ್ತಿರ ಹೋಗಿ ತಮ್ಮ ಮನೆಯ ವಾತಾವರಣವನ್ನು ಅವರೆದುರಿಗೆ ಬಿಡಿಸಿ ಹೇಳಿದರು. ಮಹ್ಮದ ಷರೀಫರು ಮೂಲತಃ ಶಹಾಬಾದದವರು. ಇವರೂ ಕೂಡ ಜಗದೇವಪ್ಪನವರಲ್ಲಿ ಕಲಾ ಆಸಕ್ತಿಯನ್ನು ಹೆಚ್ಚಿಸುವಲ್ಲಿ ಪ್ರಮುಖಪಾತ್ರವಹಿಸಿದವರಲ್ಲಿ ಒಬ್ಬರಾಗಿದ್ದರು. ಇವರು ಒಂದು ದಿನ ಜಗದೇವಪ್ಪನವರ ಮನೆಗೆ ಬಂದರು. ಶಂಕರಪ್ಪನವರನ್ನು ಕಂಡು ನೋಡಿ ಗೌಡ್ರೆ ಇವನಿಗೆ ಚಿಕ್ಕಂದಿನಿಂದಲೂ ಕಲೆಯಲ್ಲಿ ಆಸಕ್ತಿಯಿದೆ ಇದು ನಿಮಗೂಗೊತ್ತಿದ್ದ ವಿಷಯ, ಅವನಿಗೆ ಒಲ್ಲದ ವಿಷಯವನ್ನು ನಾವೇಕೆ ಬಲವಂತಪಡಿಸಬೇಕು ಹಾಗಾದರೆ ಅವನೇನು ಸರಿಯಾಗಿ ಕಲಿಯುತ್ತಾನೆಂದು ನಾವು ಭಾವಿಸಬೇಕು ? ಓದುವದು ಬಿಟ್ಟು ನಾಪಾಸ ಆದರೆ ಫಲವೇನು ? ಅದಕ್ಕಾಗಿ ಅವನಿಗೇನಿಷ್ಟವೋ ಅದನ್ನು ಕಲಿಯಲಿ ಬಿಡಿ, ಅದೂ ಅಲ್ಲದೇಅವನಿಗೆ ಚಿತ್ರಕಲೆಯಲ್ಲಿ ತುಂಬಾ ಆಸಕ್ತಿಯಿದೆ. ಅವನು ಚನ್ನಾಗಿ ಕಲಿತು, ಒಳ್ಳೆಯ ಹೆಸರು ತರುತ್ತಾನೆಂಬ ಭರವಸೆ ನನಗಿದೆ. ನೀವು ಮುಂಬೈಗೆ ಕಳುಹಿಸಿಯಾದರೂ ನೋಡಿ. ಒಂದ ಸ್ವಲ್ಪ ವಿಚಾರ ಮಾಡಿ ಒಂದು ನಿರ್ಧಾರಕ್ಕೆ ಬನ್ನಿ ಎಂದು ಶಂಕ್ರಪ್ಪನವರಿಗೆ ಜಗದೇವಪ್ಪನವರಲ್ಲಿರುವ ಕಲೆಯ ಆಸಕ್ತಿ ಮತ್ತು ವಿದ್ಯಾಭ್ಯಾಸವನ್ನು ಕುರಿತು ಧೀರ್ಘಕಾಲದವರೆಗೆ ಚರ್ಚಿಸಿದರು.ಶಂಕ್ರಪ್ಪನವರಿಗೆ ಏನು ಮಾಡಬೇಕೆಂಬುದೇ ತೋಚದಾಯ್ತು. ಒಳ್ಳೆಯ ವ್ಯಾಪಾರಸ್ಥರಾಗಿದ್ದರು. ಜಗದೇವಪ್ಪನವರು ಮನೆಯ ಹಿರಿಯ ಗಂಡು ಮಗನಾಗಿದ್ದರು. ಮನೆಯಬಗ್ಗೆ ವಿಚಾರ ಮಾಡಬೇಕೋ, ವ್ಯಾಪಾರದ ಬಗ್ಗೆ ವಿಚಾರ ಮಾಡ ಬೇಕೋ ಅಥವಾ ಮಗನ ವಿದ್ಯಾಭ್ಯಾಸದ ಬಗ್ಗೆ ವಿಚಾರ ಮಾಡಬೇಕೋ ಒಂದೂ ತಿಳಿಯದಾಯಿತು. ಮನೆಯಲ್ಲಿರುವ ಗಂಡುಮಕ್ಕಳಲ್ಲಿ ಜಗದೇವಪ್ಪನವರೇ ಹಿರಿಯರು. ಉಳಿದೆಲ್ಲ ಮಕ್ಕಳು ಇನ್ನೂ ಚಿಕ್ಕವರಾಗಿದ್ದರು. ಜಗದೇವಪ್ಪನವರು ಮೊದಲೇ ಮುಗ್ದರು ಮುಂಬೈಯಂಥ ಮಹಾನಗರದಲ್ಲಿ ಹೋಗಿ ಅಲ್ಲಿ ಹೇಗೆ ಅಭ್ಯಾಸ ಮಾಡುತ್ತಾನೆ ಅದೊಂದು ಸಣ್ಣ ಊರೆ. ಜನಜಂಗುಳಿಯಿಂದ ಕೂಡಿದ ಆ ನಗರದಲ್ಲಿ ಇವನಿಗೆ ಇರಲು ಸಾಧ್ಯವಾದೀತಾ ? ಇವನು ಅಷ್ಟೊಂದು ಚುರುಕು ಬುದ್ದಿಯವನೆ ? ಎಂಬ ಅನೇಕ ವಿಚಾರಗಳು ಅವರ ತಲೆಯಲ್ಲಿ ಹೊಯ್ದಾಡಹತ್ತಿದವು. ಸ್ವಲ್ಪ ದಿನ ಹೀಗೆ ಬಿಟ್ಟರೆ ಏನಾದರೂ ಸರಿಯಾಗಬಹುದು ಎಂದುಕೊಂಡರು . ತಮಗೆ ತಮ್ಮ ಮಗ ತಮ್ಮ ಕಣ್ಣೆದುರೇ ಇದ್ದುಕೊಂಡು ಅಭ್ಯಾಸಮಾಡಿ, ತಮ್ಮ ವ್ಯಾಪಾರದಲ್ಲಿ ಸಹಾಯಕನಾಗುತ್ತಾನೆಂಬ ಬಯಕೆ ಅವರ ಮನಸ್ಸಿನಲ್ಲಿತ್ತು. ಮನೆಯಲ್ಲಿ ಇವನೇ ಹಿರಿಯವ ಇವನೇ ಹೋದರೆ ಮನೆಯಲ್ಲಿ ಯಾರೂ ದೊಡ್ಡ ಮಕ್ಕಳು ಇಲ್ಲದಂತಾಗುತ್ತದೆ. ಎಂಬ ಯೋಚನೆ ಒಂದು. ಜಗದೇವಪ್ಪನವರು ಎಂದಿನಂತೆ ತಮ್ಮ ಕಲಾಚಟುವಟಿಕೆಗಳಲ್ಲಿ ನಿರತರಾದರು. ದಿನಾಲು ಸ್ಕೆಚ್ ಮಾಡುವುದು, ಡ್ರಾಯಿಂಗ್‌ಗಳನ್ನು ಮಾಡುವುದು, ಶ್ರೇಷ್ಟ ಕಲಾವಿದರ ಕಲಾಕೃತಿಗಳ ಅನುಕರಣೆ ಮಾಡುವದು. ಇವೆಲ್ಲವೂ ಅವರ ಕಲಾಕ್ರಿಯೇಗಳಾಗಿದ್ದವು. ಸ್ವತಃ ಜಗದೇವಪ್ಪನವರೇ ಹೇಳುವ ಹಾಗೆ "ನಾನು ನನ್ನ ಕಲಾ ಅಭ್ಯಾಸದ ದೃಷ್ಟಿಯಿಂದ ಈ ಚಿತ್ರಕಲೆಯಲ್ಲಿಯೇ ಏನನ್ನಾದರು ಸಾಧನೆಮಾಡಬೇಕು , ಇದರಲ್ಲಿಯೇ ನಾನು ಪಳಗಬೇಕು. ಅಂದಿನ ಪ್ರಮುಖ ಕಲಾವಿದರಾದ ಎಸ್. ಎಂ. ಪಂಡೀತರಂತೆ , ಶಂಕರರಾವ ಆಳಂದಕರ್‌ರಂತೆ ನಾನು ಒಬ್ಬ ಶ್ರೇಷ್ಠ ಕಲಾವಿದನಾಗಬೇಕು" ಎಂದುಕೊಂಡಿದ್ದರು. ಅಂತೆಯೇ ಎಸ್. ಎಂ. ಪಂಡೀತರಂತಹ ಶ್ರೇಷ್ಟ ಕಲಾವಿದರ ಕೆಲವು ನೈಜ ಸಂಯೋಜನಾ ಕಲಾಕೃತಿಗಳ ಅನುಕರಣೆ ಮಾಡುತ್ತಿದ್ದರು. ಆಗಿನ ಸಮಯದಲ್ಲಿ ಎಸ್. ಎಮ್. ಪಂಡೀತರು ಭಾರತದ ಒಬ್ಬ ಶ್ರೇಷ್ಠ ಕಲಾವಿದರಲ್ಲೊಬ್ಬರಾಗಿದ್ದರು. ಅವರು ಹೆಚ್ಚಾಗಿ ಮುಂಬೈಯಲ್ಲಿ ವಾಸಿಸುತ್ತಿದ್ದರು. ತುಂಬಾ ಶ್ರೀಮಂತರಾಗಿದ್ದರು. ಈಗಲೂ

ಕಲಬುರ್ಗಿಯ ಪುಟಾಣಿಗಲ್ಲಿಯಲ್ಲಿ ಅವರ ಮನೆಯಿದೆ. ಜಗದೇವಪ್ಪನವರು ಪಂಡಿತರು ಕಲಬುರ್ಗಿಗೆ ಬಂದರೆ ಅವರನ್ನು ಕಾಣುವದು, ತಾವು ಬಿಡಿಸಿದ ಚಿತ್ರಗಳನ್ನು ಅವರಿಗೆ ತೋರಿಸುವದು , ಅವರೊಂದಿಗೆ ಕಲೆಯ ಬಗ್ಗೆ ಚರ್ಚಿಸುವದು , ಅವರಿಂದ ಕಲೆಯ ಬಗ್ಗೆ ಮಾಹಿತಿಗಳನ್ನು ತಿಳಿದುಕೊಳ್ಳುವದು, ತಮ್ಮ ಮುಂಬೈಕಲಾಶಿಕ್ಷಣದ ಆಸೆಯನ್ನು ಅವರೆದುರು ಹೇಳಿಕೊಳ್ಳುವದು , ಅದರ ಸಲುವಾಗಿ ಮುಂಬೈನ ವಾತಾವರಣದ ಬಗ್ಗೆ ತಿಳಿದುಕೊಳ್ಳುತ್ತಿದ್ದರು. ಹೀಗೆ ಮೆಟ್ರಿಕ್ ಮುಗಿದ ನಂತರ ಕೆಲವು ದಿನಗಳು ಕಳೆದವು. ಜೆ. ಜೆ. ಕಲಾಶಾಲೆಯಲ್ಲಿ ಪ್ರವೇಶ ದೊರೆಯಬೇಕಾದರೆ ಮೊದಲು ಸಾಮಾನ್ಯ ಪರೀಕ್ಷೆಗಳನ್ನು ನಡೆಸುತ್ತಿದ್ದರು. ಅದು ಮೇ/ಜೂನ ತಿಂಗಳಲ್ಲಿ ಬರುತ್ತದೆ. ಆಗ ಇದರ ಸಲುವಾಗಿ ಅರ್ಜಿಗಳು ತುಂಬಿ ಕಳಿಸಬೇಕಾಗುತ್ತಿತ್ತು. ಜಗದೇವಪ್ಪನವರು ತಾವೊಂದು ಅರ್ಜಿಯನ್ನು ತರಿಸಿಕೊಂಡು ಅದನ್ನು ತುಂಬಿ ಕಳುಹಿಸಿದರು. ಕೆಲವು ದಿನಗಳ ನಂತರ ಜೆ.ಜೆ.ಕಲಾಶಾಲೆಯಲ್ಲಿ ಪ್ರವೇಶದ ಸಲುವಾಗಿ ಸಂದರ್ಶನ ಮತ್ತು ಪ್ರವೇಶ ಪರೀಕ್ಷೆಯ ದಿನಾಂಕವನ್ನು ಸೂಚಿಸಿದ ಒಂದು ಪತ್ರ ಬಂತು ಜಗದೇವಪ್ಪನವರು ಪ್ರವೇಶ ಪರೀಕ್ಷೆಯ ಸಲುವಾಗಿ ಹಾಜರಾಗಲು ಮುಂಬೈಗೆ ತೆರಳಬೇಕಾಗಿತ್ತು. ಇದನ್ನು ತಮ್ಮ ತಂದೆಯವರಿಗೆ ತಿಳಿಸಿದರು. ಇದಕ್ಕೆ ಶಂಕರಪ್ಪನವರು " ನಾನೆಷ್ಟು ಹೇಳಿದರೂ ನೀನು ಮತ್ತೆ ಅಲ್ಲಿಗೆ ಹೋಗುತ್ತೇನೆಂತೆಲ್ಲ. ನೀನು ನಿನ್ನ ಹಟವನ್ನು ಬಿಡುವುದಿಲ್ಲವೇನು ? ಒಂದು ವೇಳೆ ನೀನು ಮುಂಬೈಗೆ ಹೋದರೆ ಅಲ್ಲಿನ ಖರ್ಚಿಗೆನೀನೇನು ಮಾಡ್ತಿಯಾ ನನಗೆ ಅಷ್ಟೊಂದು ದುಡ್ಡು ಕೊಡಲು ಆಗುವುದಿಲ್ಲ" ವೆಂದು ಹೆದರಿಸಿ ನೋಡಿದರು. ಆಗ ಜಗದೇವಪ್ಪನವರು ನಿಮಗೆಷ್ಟು ಸಾಧ್ಯವಾಗುತ್ತೊ ಅಷ್ಟು ಕೊಡಿ ಉಳಿದದ್ದು ನಾನು ಹೇಗಾದರೂ ಮಾಡಿಕೊಳ್ಳುತ್ತೇನೆ . ನಾನು ಹೇಗಾದರೂ ಮಾಡಿ ಮುಂಬೈಗೆ ಹೋಗುತ್ತೇನೆ. ಇಲ್ಲಿದ್ದುಕೊಂಡು ನನಗೆ ಅಭ್ಯಾಸ ಮಾಡಲು ಇಷ್ಟವಿಲ್ಲ ಎಂದು ನುಡಿದರು. ತಮ್ಮ ಮಗ ಇನ್ನೇನು ಹೇಳಿದರೂ ಕೇಳುವ ಸ್ಥಿತಿಯಲ್ಲಿಲ್ಲ. ಮುಂಬೈಗೆ ಹೋಗಿಯೇ ಅಭ್ಯಾಸ ಮಾಡುತ್ತೇನೆಂದರೆ ಮಾಡಲಿ ಬಿಡಿ ಅವನ ಹಣೆಬರಹದಂತೆ ಆಗುತ್ತದೆ. ನಿವೇಷ್ಟು ಹೇಳಿದರೂ ಅವನು ಬಿಡುವುದಿಲ್ಲ ಅವನನ್ನು ಮುಂಬೈಗೆ ಕಳಿಸಿಬಿಡಿ ಎಂದು ಮನೆಯವರೆಲ್ಲರೂ ಹೇಳಿದವರು.

ಮನೆಯವರೆಲ್ಲರ ಮಾತಿಗೆ ಶಂಕರಪ್ಪನವರು ಒಪ್ಪಲೇಬೇಕಾಯಿತು. ಮನಸ್ಸಿಲ್ಲದಿದ್ದರೂ ತಮ್ಮ ಮಗನನ್ನು ಮುಂಬೈಗೆ ಕಳಿಸಲು ಒಪ್ಪಿಕೊಂಡರು. ತಮ್ಮ ತಂದೆಯವರು ಒಪ್ಪಿಗೆಯನ್ನು ಸೂಚಿಸಿದನ್ನು ಕಂಡು ಜಗದೇವಪ್ಪನವರಿಗೆ ಎಲ್ಲಿಲ್ಲದ ಸಂತೋಷ. ಅಂತೂ ಮುಂಬೈಗೆ ಹೋಗುವದು ನಿರ್ಧಾರವಾಯಿತು. ಮುಂಬೈಗೆ ಹೋಗಬೇಕಾದರೆ ತಾವು ಪಾಸಾಗಿದ್ದ ಅಂಕಪಟ್ಟಿಗಳು, ಎಲಿಮೆಂಟರಿ ಸರ್ಟಿಫಿಕೆಟ್ ಮತ್ತು ತಮ್ಮ ಕೆಲವು ಉತ್ತಮ ಕಲಾಕೃತಿಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬೇಕೆಂದು ಅದರಲ್ಲಿ ಸೂಚಿಸಲಾಗಿತ್ತು. ಜಗದೇವಪ್ಪನವರು ತಾವು ಎಲಿಮೆಂಟರಿ ಪರೀಕ್ಷೆಯ ಸಂಧರ್ಭದಲ್ಲಿ ಮಾಡಿದ ಕೆಲವು ಕಲಾಕೃತಿಗಳನ್ನು ತೆಗೆದುಕೊಂಡು ಮುಂಬೈಗೆ ಪಯಣ ಬೆಳಸಲು ತಯಾರಾದರು ಹೋಗುವಾಗ ಇವರ ತಂದೆಯವರು ನೂರು ರೂಪಾಯಿಯನ್ನು ಖರ್ಚಿಗಾಗಿ ಕೊಟ್ಟಿದ್ದರು. ಆಗ ಮುಂಬೈಗೆ ಹೋಗಲು ಕೇವಲ 18 ರೂಪಾಯಿ ದರವಿತ್ತು. ಅದೂ ರಿಸರವೇಶನ್ ಭೋಗಿಗಳಲ್ಲಿ ಕುಳಿತು ಪ್ರಯಾಣಿಸಬಹುದಿತ್ತು. ಜಗದೇವಪ್ಪನವರು ಮುಂಬೈಗೆ ತೆರಳಿದರು. ಮುಂಬೈ ಬಂದಕೂಡಲೇ ರೈಲಿನಿಂದಿಳಿದು ನೇರವಾಗಿ ಹೋರಗೆ ನಡೆದರು ಇವರ ಜೊತೆ ಇವರ ಆಪ್ತರು ಬಂದಿದ್ದರು. ಮುಂಬೈನಗರವನ್ನು ಮೊದಲಬಾರಿಗೆ ನೋಡಿದ ಇವರು ಒಮ್ಮೆಲೆ ಆಶ್ಚರ್ಯಗೊಂಡರು ಸದಾ ಜನಜಂಗುಳಿಯಿಂದ ತುಂಬಿರುತ್ತಿದ್ದ, ದೊಡ್ಡ ದೊಡ್ಡ ಕಟ್ಟಡಗಳಿಂದ ಕೂಡಿದ್ದ ಮುಂಬೈ ದೊಡ್ಡ ಸಿಟಿ ಇವರ ಜೊತೆಗಿದ್ದ ಇವರ ಆಪ್ತರಿಗೆ ಮುಂಬೈ ಚಿರಪರಿಚಿತವಾಗಿದ್ದರಿಂದ ಇಬ್ಬರೂ ಕೂಡಿ ನೇರವಾಗಿ ಜೆ.ಜೆ. ಕಲಾಶಾಲೆಗೆ ಹೋದರು. ನಾಡಿನ ಅನೇಕ ಕಡೆಗಳಿಂದ ವಿದ್ಯಾರ್ಥಿಗಳು ಸಂದರ್ಶನಕ್ಕೆಂದೇ ಬಂದಿದ್ದರು. ಇಲ್ಲಿ ಜಗದೇವಪ್ಪನವರು ಸಂದರ್ಶನದಲ್ಲಿ ತಾವು ತೆಗೆದುಕೊಂಡು ಹೋಗಿದ್ದ ಎಲ್ಲ ಉತ್ತಮ ಕಲಾಕೃತಿಗಳನ್ನು ಮೂಲಅಂಕಪಟ್ಟಿಗಳೊಂದಿಗೆ ತೋರಿಸಿದರು. ಸಂದರ್ಶನವನ್ನು ಮಾಡಲು ಬಂದಿದ್ದ ಹಿರಿಯ ಕಲಾವಿದರಲ್ಲಿ ಜೆ.ಜೆ.ಕಲಾಶಾಲೆಯ ಆಗಿನ ಕಲಾವಿಭಾಗದ ಮುಖ್ಯಸ್ಥರಾಗಿದ್ದ ಶಿರಗಾಂವಕರ್ ಎಂಬುವವರೂ ಇದ್ದರು. ಇವರು ತಳ್ಳಗೆ, ಎತ್ತರವುಳ್ಳ ವ್ಯಕ್ತಿಯಾಗಿದ್ದರು. ಇವರನ್ನು ನೋಡಿದರೆ ಎಂಥವರೂ ಹೆದರಬೇಕು ಅಂಥ ಒಂದು ವ್ಯಕ್ತಿತ್ವವನ್ನು ಹೊಂದಿದ್ದರು ಅವರು ಜಗದೇವಪ್ಪನವರನ್ನುದ್ದೇಶಿಸಿ ಮಾತನಾಡಿದ

ಸಂಭಾಷಣೆ ಹೀಗಿದೆ. ನೀನು ಯಾಕೆ ಈ ಕೋರ್ಸ ಮಾಡ್ತಿಯಾ ? ಎಂದು ಶಿರಗಾಂವಕರ್‌ರವರು ಕೇಳಿದಾಗ ಜಗದೇವಪ್ಪನವರು ನನಗೆ ಚಿತ್ರಕಲೆಯಲ್ಲಿ ಆಸಕ್ತಿಯಿದೆ. ಅದಕ್ಕೆ ಈ ಕೋರ್ಸನ್ನು ಮಾಡಬೇಕೆಂದಿದ್ದೇನೆ. ಎಂದು ಉತ್ತರಿಸಿದರು ಮತ್ತೆ ಮಾತು ಮುಂದುವರೆಸಿದ ಶಿರಗಾಂವಕರ್‌ರವರು ನಿನಗೆ ಇಂಗ್ಲೀಷ್, ಹಿಂದಿ ಮಾತನಾಡಲು ಓದಲು ಬರುತ್ತದೆ ಎಂಬ ಮರು ಪ್ರಶ್ನೆಗೆ ಜಗದೇವಪ್ಪನವರು ನನಗೆ ಹಿಂದಿ ಮಾತನಾಡಲು ಓದಲು ಬರುತ್ತದೆ. ಆದರೆ ಇಂಗ್ಲೀಷ್ ಅಷ್ಟು ಸರಿಯಾಗಿ ಬರುವುದಿಲ್ಲ ಎಂದು ಉತ್ತರಿಸಿದರು. ಹೀಗೆ ಸಂದರ್ಶನವೆಲ್ಲವೂ ಹಿಂದಿಯಲ್ಲಿಯೇ ನಡೆಯಿತು. ಶಿರಗಾಂವಕರ್‌ರವರು ಇವರು ತೆಗೆದುಕೊಂಡು ಹೋಗಿದ್ದ ಕಲಾಕೃತಿಗಳನ್ನು ನೋಡಿ ಮೆಚ್ಚಿಕೊಂಡಿದ್ದರು. ಸಂದರ್ಶನವನ್ನು ತೆಗೆದುಕೊಂಡ ಮರುದಿನವೇ ಅದರ ಫಲಿತಾಂಶವನ್ನು ಪ್ರಕಟಮಾಡಿದರು. ಅದರಲ್ಲಿ ಜಗದೇವಪ್ಪನವರು ಜೆ.ಜೆ. ಕಲಾಶಾಲೆಯಲ್ಲಿ ಪ್ರವೇಶ ಪಡೆಯಲು ಆಯ್ಕೆಯಾಗಿದ್ದರು. ತಕ್ಷಣವೇ ಇಪ್ಪತ್ತು ರೂಪಾಯಿಯ ಪ್ರವೇಶಶುಲ್ಕವನ್ನು ತುಂಬಿ ಅಂದೇ ಮರಳಿ ಕಲಬುರ್ಗಿಗೆ ಬಂದರು.

ಜೆ.ಜೆ.ಕಲಾಶಾಲೆಯಲ್ಲಿ ತಮಗೆ ಪ್ರವೇಶ ದೊರಕಿದ್ದನ್ನು ಮನೆಯವರಿಗೆಲ್ಲ ತಿಳಿಸಿದರು. ಹದಿನೈದು ದಿನಗಳೊಳಗಾಗಿ ಮುಂದಿನ ಅಧ್ಯಯನಕ್ಕೆ ಮುಂಬೈಗೆ ಹೋಗುವದಾಗಿಯೂ ಹೇಳಿದರು. ಪ್ರವೇಶವೇನೋ ದೊರೆಯಿತು. ಆದರೆ ಮುಂಬೈಯಲ್ಲಿ ಎಲ್ಲಿ ಇದ್ದುಕೊಂಡು ಅಭ್ಯಾಸ ಮಾಡ್ತಾನೆ. ಇದೊಂದು ದೊಡ್ಡ ಚಿಂತೆಯಾಯಿತು. ತಂದೆಯವರಾದ ಶಂಕರಪ್ಪನವರಿಗೆ ಕಲಬುರ್ಗಿಯಲ್ಲಿರುವ ತಮ್ಮ ಬಾರದಾನಿಯ ವ್ಯಾಪಾರದ ದೃಷ್ಟಿಯಿಂದ ಮುಂಬೈಯಲ್ಲಿರುವ ಕಮಿಷನ್ ಎಜೆಂಟ್‌ರವರು ಆಗಾಗ ಇಲ್ಲಿಗೆ ಬಂದು ವ್ಯವಹಾರ ನಡೆಸುತ್ತಿದ್ದರಿಂದ ಇವರಿಗೂ ಮತ್ತು ಶಂಕರಪ್ಪನವರಿಗೂ ಪರಿಚಯವಿತ್ತು. ಅಲ್ಲಿ ಇವರನ್ನು ಪೇಠಿಯೆಂದು ಕರೆಯುತ್ತಿದ್ದರು. ಅಂದರೆ ದಲಾಲಿ ಎಂಬರ್ಥದಲ್ಲಿ ಶಂಕರಪ್ಪನವರು ಪೇಠಿಯವರನ್ನು ಸಂಪರ್ಕಿಸಿ ತಮ್ಮ ಮಗನಿಗೆ ಅವರ ಅಂಗಡಿಯಲ್ಲಿ ಇದ್ದುಕೊಂಡು ವಿಧ್ಯಾಭ್ಯಾಸವನ್ನು ಮಾಡಲು ಒಂದು ಮಾರ್ಗವನ್ನು ಕಂಡುಕೊಂಡರು. ಜಗದೇವಪ್ಪನವರು ತಮ್ಮ ಕೆಲವು ಉತ್ತಮ ಕಲಾಕೃತಿಗಳೊಂದಿಗೆ ತಮ್ಮಲ್ಲಿರುವ ಕುಂಚ , ಬಣ್ಣ, ಇತರ ಸಾಮಗ್ರಿಗಳೊಂದಿಗೆ, ಬಟ್ಟೆಬರೆಗಳನ್ನು ಪ್ಯಾಕಮಾಡಿಕೊಂಡು ಉನ್ನತ ಕಲಾ ಶಿಕ್ಷಣವನ್ನು ಪಡೆಯಲು ಮುಂಬೈಗೆ ಪ್ರಯಾಣ ಬೆಳೆಸಿದರು.

ಅಧ್ಯಾಯ ಮೂರು :

ಜೆ.ಎಸ್.ಖಂಡೇರಾವ : ಕಲಾಶಿಕ್ಷಣ

ಖಂಡೇರಾವರು ತಮ್ಮ ಆಸಕ್ತಿಯ ಕ್ಷೇತ್ರವಾದ ಚಿತ್ರಕಲಾ ಶಿಕ್ಷಣವನ್ನು ಪಡೆಯಲು ಮುಂಬೈನ ವಿಕ್ಟೋರಿಯಾ ಟರ್ಮಿನಲ್ ರೈಲು ನಿಲ್ದಾಣದಲ್ಲಿ ಬಂದಿಳಿದರು.

ಮುಂಬೈ ವಾತಾವರಣ :

ಖಂಡೇರಾವರೇ ಹೇಳುವಂತೆ ರೈಲಿನಿಂದ ಕೆಳಗೆ ಇಳಿಯುತ್ತಿದ್ದಂತೆಯೇ ಅಲ್ಲಿಯ ಭವ್ಯವಾದ ಕಟ್ಟಡ , ಜನಜಂಗುಳಿಯಿಂದ ಗಿಜುಗುಟ್ಟುತ್ತಿರುವ ಆ ವಾತಾವರಣವನ್ನು ನೋಡಿದ ಕೂಡಲೆಯೇ ಎದೆಯಲ್ಲಿ ಒಂದು ರೀತಿಯ ನಡುಕ ಹುಟ್ಟುತ್ತಿತ್ತು. ಹ್ಯಾಗಪ್ಪಾ ಇಂಥ ಒಂದು ದೊಡ್ಡ ನಗರದಲ್ಲಿದ್ದುಕೊಂಡು ಅಭ್ಯಾಸ ಮಾಡೋದು ? ಎಂಬ ನೂರಾರು ಆಲೋಚನೆಗಳು ಮನಸ್ಸಿನಲ್ಲಿ ಹೊಯ್ದಾಡಹತ್ತಿದವು. ಇದಕ್ಕೂ ಮೊದಲು ಒಂದೆರಡು ಸಲ ಪರೀಕ್ಷೆಯ ಸಲುವಾಗಿ ಖಂಡೇರಾವರು ಮುಂಬೈಗೆ ಬಂದಿದ್ದರು ಆಗ ಅವರ ಜೊತೆ ಅವರ ಗುರಗಳಾದ ಭಂಕೂರಕರ್‌ರವರು ಬಂದಿದ್ದರು. ಆದರೆ ಈಗ ಮಾತ್ರ ಜಗದೇವಪ್ಪನವರು ಒಬ್ಬರೆ ಬಂದಿದ್ದಾರೆ. ಇವರಿಗೆ ಏನು ಮಾಡಬೇಕೆಂಬುದೇ ತೋಚಲಿಲ್ಲ. ತಾವು ಸೇರಬೇಕಾದ ಸ್ಥಳವಾದ ಪೇಠಿಯವರ ಅಂಗಡಿಯ ವಿಳಾಸದ ಒಂದು ಚೀಟಿಯನ್ನು ಕೈಯಲ್ಲಿ ಹಿಡಿದುಕೊಂಡು ಸುಮ್ಮನೆ ನಿಂತುಬಿಟ್ಟರು. ಅಷ್ಟರೊಳಗೆ ಕೂಲಿಯವನು ಬಂದು ' 'ಕಿದರಜಾನಾ ಬೈಸಾಬ ' ಎಂದು ಹಿಂದಿಯಲ್ಲಿ ಕೇಳಿದನು. ಅದಕ್ಕೆ ಪ್ರತ್ಯುತ್ತರವಾಗಿ ಜಗದೇವಪ್ಪನವರು ತಮ್ಮ ಕೈಯಲಿದ್ದ ಚೀಟಿಯನ್ನು ತೋರಿಸಿದರು. ಅದಕ್ಕೆ ಕೂಲಿಯವನು ಆ ಚೀಟಿಯನ್ನು ನೋಡಿ ಬಹಾರಗಾಡಿ ಟೈರಾಹುವಾಹೈ ಮೈ ಆಪಕೊ ವಹಾಂ ತಕ ಚೋಡದೇತಾಹುಂ ಎಂದು ಹೇಳಿದವನೇ ಲಗೇಜಗಳನ್ನು ಹೊತ್ತುಕೊಂಡು ರೈಲುನಿಲ್ದಾಣದ ಹೊರಗೆ ನಡೆದನು. ಹೊರಗೆ ಸಾಲಾಗಿ ನಿಂತುಕೊಂಡಿದ್ದ ಗಾಡಿಯಲ್ಲಿ ಒಂದು ಗಾಡಿಯನ್ನು ಕೈಸನ್ನೆಯಿಂದ ಕರೆದನು. ತಕ್ಷಣ ಗಾಡಿಯನ್ನು ಇವರೆದುರು ತಂದು ನಿಲ್ಲಿಸಿದನು. ಕಿದರ ಜಾನಾಹೈ ಆಪ ಕೋ ಎಂದು ಡ್ರೈವರ ಕೇಳಿದನು. ಕೂಲಿಯವನೇ ಚೀಟಿಯನ್ನು ತೋರಿಸಿ ಈ ವಿಳಾಸಕ್ಕೆ ಕರೆದುಕೊಂಡು ಹೋಗು ವಂತೆ ತನ್ನ ಮರಾಠಿ ಭಾಷೆಯಲ್ಲಿಯೇ ಡ್ರೈವರನಿಗೆ ಹೇಳಿದನು. ತಾನೇ ಬಾಡಿಗೆಯನ್ನು ಮುಗಿಸಿ ಜಗದೇವಪ್ಪನವರನ್ನು ಗಾಡಿಯಲ್ಲಿ ಕೂಡಿಸಿ ಲಗೇಜಗಳನ್ನು ಒಳಗೆ ಇಟ್ಟನು. ಜಗದೇವಪ್ಪನವರು ಕೂಲಿಯವನಿಗೆ ಎರಡು ರೂಪಾಯಿಗಳನ್ನು

ಕೊಟ್ಟರು. ಅವನು ಅಷ್ಟು ಇಷ್ಟು ಎನ್ನದೇ ಆ ಎರಡು ರೂಪಾಯಿಯನ್ನು ತೆಗೆದುಕೊಂಡನು ಗಾಡಿಯು ಮುಂದೆ ಸಾಗಿತು. ಅಷ್ಟರೊಳಗೆ ಇವರು ಸೇರಬೇಕಾದ ಸ್ಥಳ ಬಂದು ಬಿಟ್ಟಿತು. ತಾವು ಕೆಳಗಿಳಿದರು. ಡ್ರೈವರನು ಇವರ ಎಲ್ಲ ಲಗೇಜಗಳನ್ನು ಗಾಡಿಯಿಂದ ಕೆಳಗಿಟ್ಟನು. ಜಗದೇವಪ್ಪನವರು ಗಾಡಿಯ ಡ್ರೈವರನಿಗೆ ಕಿತನಾಹುವಾ ಎಂದು ಕೇಳಿದಾಗ ದೊರೂಪಾಯಾ ಮಾಲಿಕ ಎಂದು ಡ್ರೈವರನು ಹೇಳಿದನು. ಜಗದೇವಪ್ಪನವರು ಅವನಿಗೆ ಎರಡು ರೂಪಾಯಿಗಳನ್ನು ಕೊಟ್ಟು ತಮ್ಮ ಲಗೇಜಗಳನ್ನು ತೆಗೆದುಕೊಂಡು ಪೇಠಿಯವರ ಅಂಗಡಿಗೆ ಹೋದರು. ಪೇಠಿಯವರ ಹೆಸರು ಕಾಂತಿಲಾಲ ಎಂದಿತ್ತು. ಇವರು ಗುಜರಾತಿಯವರಾಗಿದ್ದರು. ಇವರಿಗೂ ಜಗದೇವಪ್ಪನವರ ತಂದೆಯವರಿಗೂ ಆತ್ಮೀಯ ಸ್ನೇಹವಿತ್ತು. ಪೇಠಿಯವರ ಅಂಗಡಿಯಿರುವ ಸ್ಥಳಕ್ಕೆ ಕೊಲಬಾ ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಇಲ್ಲಿ ಕಾಳುಕಡ್ಡಿಯ ವ್ಯಾಪಾರ ವಹಿವಾಟು ನಡೆಯುತ್ತಿದ್ದವು. ಜಗದೇವಪ್ಪನವರು ತಮ್ಮ ಲಗೇಜಗಳನ್ನೆಲ್ಲ ಒಂದೆಡೆ ಇಟ್ಟು ಅಂಗಡಿಯ ಮಾಲಿಕರಾದ ಕಾಂತಿಲಾಲರವರಿಗೆ ಭೆಟ್ಟಿಯಾದರು. ಜಗದೇವಪ್ಪನವರು ಬರುವದನ್ನು ಮೊದಲೇ ತಂದೆಯವರಾದ ಶಂಕರಪ್ಪನವರು ತಿಳಿಸಿದ್ದರಿಂದ ಅವರು ಜಗದೇವಪ್ಪನವರನ್ನು ಉಳಿದುಕೊಳ್ಳವಸಲುವಾಗಿ ತಮ್ಮ ಅಂಗಡಿಯ ಒಂದು ಭಾಗದಲ್ಲಿ ಸ್ವಚ್ಛ ಮಾಡಿಸಿಕೊಟ್ಟರು. ಖಂಡೇರಾವರ ಮುಂಬೈ ಜೀವನ ಇಲ್ಲಿ ಪ್ರಾರಂಭವಾಯಿತು.

ಜೆ.ಜೆ. ಕಲಾಶಾಲೆಯ ವಾತಾವರಣ

ಮರುದಿನ ಬೆಳಗ್ಗೆ ಜೆ.ಜೆ. ಕಲಾಶಾಲೆಗೆ ನಡೆದರು. ನಿಜಕ್ಕೂ ಅದೊಂದು ದೊಡ್ಡ ಕಲಾಶಾಲೆ ಸ್ವಾತಂತ್ರ್ಯಕ್ಕಿಂತಲೂ ಮೊದಲು ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಮತ್ತು ಭಾರತೀಯ ಕಲಾಸಂಪ್ರದಾಯದ ಅಧಃಪತನ ಸಂಕ್ರಮಣದ ಕಾಲದಲ್ಲಿ ಈ ಕಲಾಶಾಲೆ ಪ್ರಾರಂಭವಾಯಿತು. ಲಂಡನ್ನಿನ ರಾಯಲ್ ಅಕಾಡೆಮಿ ಆಫ್ ಆರ್ಟ ಸಂಸ್ಥೆಯ ಮಾದರಿಯಲ್ಲಿ ಬ್ರಿಟೀಷರು ಸ್ಥಾಪನೆ ಮಾಡಿದ ಭಾರತದ ಏಕೈಕ ಕಲಾಶಾಲೆಯೆಂದರೆ ಮುಂಬೈನ ಸರ್. ಜೆ.ಜೆ. ಸ್ಕೂಲ್ ಆಫ ಆರ್ಟ ಆ್ಯಂಡ್ ಕ್ರಾಫ್ಟ್ ಕಲಾವಿದನಾಗುವ ಆಪೇಕ್ಷೆಯುಳ್ಳ ಪ್ರತಿಯೊಬ್ಬರಿಗೂ ಜೆ.ಜೆ. ಕಲಾಶಾಲೆ ಮಹತ್ತರವಾದ ಆಕರ್ಷಣೆ ಈ ಕಲಾಶಾಲೆಯ ಸ್ಥಾಪನೆಗೆ ಮೊದಲೇ ಭಾರತೀಯ ಕಲಾಸಂಪ್ರದಾಯ ಅಧೋಗತಿಯ ಹಂತ ತಲುಪಿತ್ತು. ಇಷ್ಟ ಇಂಡಿಯಾ ಕಂಪನಿಯು ಬರುವುದಕ್ಕೂ ಮೊದಲು ನಮ್ಮಲ್ಲಿ ರೂಢಿಯಲ್ಲಿದ್ದ ಜೈನ್, ರಜಪೂತ ಮತ್ತು ಮೋಘಲ್ ಕಲೆಯಲ್ಲಿ ತನ್ನ ಪರಮೋಕ್ಷ ಸಿದ್ಧಿಯನ್ನು ಪಡೆದಿದ್ದ ಭಾರತೀಯ ಕಲಾಪರಂಪರೆ ಕಡಿದು ಹೋಗಿತ್ತು.[1] ಇಂಥ ಒಂದು ಪರಿಸ್ಥಿತಿಯಲ್ಲಿ 1857 ಮಾರ್ಚ 2 ರಂದು ಅಸ್ತಿತ್ವಕ್ಕೆ ಬಂದ ಈ ಕಲಾಶಾಲೆಗೆ ಮೂಲ ಕಾರಣಪುರುಷ ಪಾರ್ಸಿ ಜನಾಂಗದ, ನೇಕಾರರ ಮನೆತನದಲ್ಲಿ ಹುಟ್ಟಿದ ಜೀಜಾಭಾಯಿ ಜೆಮಶೇಡಜಿ . ಇವರು ಹಡಗುಗಳಿಗೆ ನೆಲಹಾಸಿಗೆಗಳನ್ನು ತಯಾರಿಸಿ ಕೊಡುತ್ತಿದ್ದರಲ್ಲದೇ, ಹೊರದೇಶಗಳಿಗೂ ವ್ಯಾಪಾರಕ್ಕಾಗಿ ಹೋಗುತ್ತಿದ್ದರು. ಆಗ ಚೈನಾದೇಶದ ಕರಕುಶಲ ಕಲೆಯಿಂದ ಪ್ರಭಾವಿತರಾಗಿ ಅವರ ಮನಸ್ಸಿನಲ್ಲಿ ಹಾಗೆ ಅದು ರೂಪ ತಾಳುತ್ತಾ ಬಂತು. 1851 ರಲ್ಲಿ ಲಂಡನ್‌ನಲ್ಲಿ ಅಂತರರಾಷ್ಟ್ರೀ ಯ ಚಿತ್ರಕಲಾ ಪ್ರದರ್ಶನ ನಡೆದಿತ್ತು. ಅದನ್ನು ನೋಡಲು ಜೀಜಾಭಾಯಿ ಜೇಮಶೇಡಜಿ ಅವರೂ ಹೋಗಿದ್ದರು. ಅವರೆ ಮನಸ್ಸಿನಲ್ಲಿಯೂ ಸಹ ಇಂತಹ ಕಲಾಶಾಲೆಯನ್ನು ನಮ್ಮ ಭಾರತದಲ್ಲು ಪ್ರಾರಂಭಿಸಬೇಕೆಂಬ ಇಚ್ಛೆಯುಂಟಾಯಿತು. ಇದರ ಪರಿಣಾಮವೇ ಇಂದಿನ ಜೆ.ಜೆ. ಕಲಾಶಾಲೆಯ ಸ್ಥಾಪನೆ.[2] ಈ ಕಲಾ ಶಾಲೆ ಭಾರತದಲ್ಲಿ ಅದರಲ್ಲೂ ಕರ್ನಾಟಕದ ಕಲಾವಿದರಿಗೆ ಕಲಾ ಶಿಕ್ಷಣದ ಒಂದು ಮಹತ್ವದ ಕೇಂದ್ರವಾಗಿತ್ತು, ಈಗ ಅದೊಂದು ಇತಿಹಾಸವಾಗಿದೆ. ಸಂಪೂರ್ಣ ಬ್ರಿಟೀಷರ ಪ್ರಭಾವದಿಂದ ಕೂಡಿದ ಈ ಕಲಾಶಾಲೆಗೆ ಅಭ್ಯಾಸ ಮಾಡಲು ಬರುವ

---

1. ಲಕ್ಷ್ಮಿ ಗವಾಯಿಯವರ : ಕಲಾವಿದ ಎಮ್.ಎ ಚಟ್ಟಿ ಜೀವನ, ಕಲಾಕೃತಿಗಳು ಒಂದು ಅಧ್ಯಯನ ಅಪ್ರಕಟಿತ ಪಿ. ಎಚ್.ಡಿ. ಮಹಾಪ್ರಬಂಧ, ಪುಟ 46
2. N.N. Kelkar : Sir . J.J. School of Art Bombay A Hundred Years of its career, Page No. 5

ವಿದ್ಯಾರ್ಥಿಗಳು ಒಳ್ಳೊಳ್ಳೆ ಪ್ಯಾಂಟು, ಶರ್ಟು, ಟೈಕಟ್ಟಿಕೊಂಡು ಕಾರಿನಲ್ಲಿ ಬರುತ್ತಿದ್ದರು. ಒಬ್ಬರ ಮೇಲೊಬ್ಬರು ಕೈಹಾಕಿಕೊಂಡು ಗುಂಪು ಗುಂಪಾಗಿ ಬರುವದು ಇವೆಲ್ಲವೂ ನೋಡಿದರೆ ಸಿನೇಮಾದ ಒಂದು ದೃಶ್ಯದಂತೆ ತೋರುತ್ತಿತ್ತು.ನನ್ನ ಅಲಂಕಾರ ನೋಡಿದ್ದರೆ ಮೈಮೇಲೆ ಬಿಳಿಬಣ್ಣದ ಒಂದು ಶರ್ಟು ಕೆಳಗೆ ಪೈಜಾಮ ಹಾಕಿಕೊಂಡು ಹಳ್ಳಿಹುಡುಗನಂತೆ ಕಾಣುತ್ತಿದ್ದ. ಇದೆಲ್ಲಾ ನೋಡಿದರೆ ನಾನು ಹ್ಯಾಗಪ್ಪಾ ಇಲ್ಲಿ ಅಭ್ಯಾಸ ಮಾಡೋದು ? ಎಂದು ಆಶ್ಚರ್ಯಪಡುತ್ತಿದ್ದೆ.ಇಂಥ ಒಂದು ಕಾಲೇಜಿನಲ್ಲಿ ಪ್ರವೇಶಪಡೆದ ನಾನು ಮೊದಲನೇ ದಿನದಲ್ಲಿ ಚಿತ್ರಕಲಾ ವಿಭಾಗದಲ್ಲಿ ಹೋದೆ. ಮೋದಲೇ ನಾನು ಶರ್ಟು, ಪೈಜಾಮ ಹಾಕಿಕೊಂಡಿದ್ದೆ. ಎಲ್ಲರೂ ನನ್ನನ್ನೇ ನೋಡುತ್ತಿದ್ದರು. ನನಗೆ ಒಂದು ರೀತಿ ಮುಜುಗರವಾಗುತ್ತಿತ್ತು. ಅರೇ ಇದೇನಪ್ಪಾ ಎಲ್ಲರೂ ನನ್ನನ್ನೇ ನೋಡುತ್ತಿದ್ದಾರೆ ಎಂದುಕೊಂಡು ಹಿಂದೆ ಹೋಗಿ ಕುಳಿತುಕೊಂಡೆ.

ಈ ಕಲಾಶಾಲೆಗೆ ಶಿಕ್ಷಣವನ್ನು ಪಡೆಯಲು ಬರುವವರಲ್ಲಿ ಶ್ರೀಮಂತರ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿರುತ್ತಿದ್ದರು. ನಾನು ಪೈಜಾಮ ಶರ್ಟು ಹಾಕಿಕೊಂಡು ಇರುವವ ಅವರಿಗೆ ಮಾತನಾಡುವ ಧೈರ್ಯ ಮಾಡಲಿಲ್ಲ. ಮೊದಮೊದಲಲ್ಲಿ ನಾನು ಯಾರಿಗೂ ಮಾತನಾಡಿಸುತ್ತಿರಲಿಲ್ಲ. ಒಬ್ಬನೇ ದೂರದಲ್ಲಿ ಕುಳಿತುಕೊಳ್ಳುತ್ತಿದ್ದೆ. ಹೀಗಾಗಿ ನನಗೆ ಯಾರೂ ಪರಿಚಯವಾಗಿರಲಿಲ್ಲ. ಕ್ಲಾಸಿನಲ್ಲಿ ಗುರುಗಳು ಏನಾದರೂ ಹೇಳಿದ್ದರೆ ಅದನ್ನು ಮಾಡುವದು. ಕ್ಲಾಸು ಮುಗಿದ ಕೂಡಲೆ ಸೀದಾ ಹೋರಗೆ ಬಂದು ನಡೆದುಕೊಂಡೆ ಹೊರಗೆ ಹೋಗುತ್ತಿದ್ದೆ. ಉಳಿದವರೆಲ್ಲರೂ ತಮ್ಮ ತಮ್ಮ ಕಾರಿನೊಳಗೆ ಕುಳಿತುಕೊಂಡು ಹೋಗುತ್ತಿದ್ದರು. ಇಂಥ ಒಂದು ವಾತವರಣ ಜೆ.ಜೆ. ಕಲಾಶಾಲೆಯಲ್ಲಿತ್ತು. ನಾನು ಮನೆಗೆ ಬರುವ ಹೊತ್ತಿಗೆ ಅಂಗಡಿಯಲ್ಲಿ ವ್ಯಾಪಾರಗಳು ಮುಗಿದಿರುತ್ತಿದ್ದವು. ಊಟ ಮುಗಿಸಿಕೊಂಡು ಬಂದು ಗುರುಗಳು ಕ್ಲಾಸಿನಲ್ಲಿ ಹೇಳಿದ ಕೆಲಸವನ್ನು ಮಾಡಿ ರಾತ್ರಿ ಹನ್ನೊಂದರ ವರೆಗೆ ಏನಾದರೂ ಸ್ಕೆಚ್‌ಗಳನ್ನು ಮಾಡುತ್ತಾ ಕುಳಿತುಕೊಂಡು ಹನ್ನೊಂದು ಗಂಟೆಗೆ ಮಲಗಿಬಿಡುತ್ತಿದ್ದೆ. ಇದು ನನ್ನ ಮೊದಲ ದಿನದ ದಿನಚರಿಯಾಗಿತ್ತು. ಎಂದು ಜಗದೇವಪ್ಪನವರು ತಮ್ಮ ಮೊದಲ ದಿನದ ಅನುಭವವನ್ನು ಹೇಳುತ್ತಾರೆ. ಇವರ ಅಭ್ಯಾಸದ ಮೊದಲಿನ ಕೆಲವು ದಿನಗಳು ಹೀಗೆಯೇ ಕಳೆದವು.

ಮುಂಜಾನೆ ಎದ್ದು ಎಲ್ಲ ಕೆಲಸಗಳನ್ನು ಬೆಳಗಿನ ಒಂಬತ್ತು ಗಂಟೆಯೊಳಗೆ ಮುಗಿಸಬೇಕಾಗುತ್ತಿತ್ತು. ಏಕೆಂದರೆ ಪೇಠಿಯವರ ಅಂಗಡಿಯಲ್ಲಿ ಹತ್ತು ಗಂಟೆಯಿಂದ ಕಾಳುಕಡ್ಡಿಯ ವ್ಯಾಪಾರ ಪ್ರಾರಂಭವಾಗುತ್ತಿತ್ತು. ಇದರಿಂದ ಅಂಗಡಿಯಲ್ಲಿ ವ್ಯಾಪಾರಿಗಳು ಸೇರುತ್ತಿದ್ದರು. ಇದರಿಂದ ಅಂಗಡಿಯಲ್ಲಿ ಗದ್ದಲದ ವಾತಾವರಣವಾಗುತ್ತಿತ್ತು. ಈ ದಿಸೆಯಿಂದ ಜಗದೇವಪ್ಪನವರು ದಿನಾಲು ಒಂಬತ್ತು ಗಂಟೆಯೊಳಗೆ ಎಲ್ಲ ಕೆಲಸಗಳನ್ನು ಮುಗಿಸಿಕೊಂಡು ಕಲಾಶಾಲೆಗೆ ಹೋದರೆಂದರೆ ಸಾಯಂಕಾಲ ಐದು-ಆರು ಗಂಟೆಯ ನಂತರ ಅಂಗಡಿಗೆ ಬರುತ್ತಿದ್ದರು. ಆಗ ಅಂಗಡಿಯಲ್ಲಿ ವ್ಯಾಪಾರದ ವಾತಾವರಣವು ಮುಗಿದು ಸ್ಥಬ್ಧವಾಗಿರುತ್ತಿತ್ತು. ಆಗ ಸ್ಕೆಚ್‌ಗಳನ್ನು ಮಾಡುವುದು ಬೇರೆಬೇರೆ ಕಲಾಕೃತಿಗಳನ್ನು ಅನುಕರಣೆಮಾಡುವದು ಗುರುಗಳು ಹೇಳಿದ ವಿಷಯಗಳ ಬಗ್ಗೆ, ಚಿತ್ರ ಬಿಡಿಸುವದು ಮಾಡುತ್ತಿದ್ದರು. ಇದು ಇವರ ದಿನದ ಕಾರ್ಯಕ್ರಮವಾಗಿತ್ತು.

ಬೆಳಗಿನ ಐದು ಗಂಟೆಗೆ ಏಳುವದು ಒಂದು ತಾಸು ಸ್ಕೆಚ್‌ಗಳನ್ನು ಮಡುವದು, ನಂತರ ಸ್ನಾನ ಸಂಧ್ಯಾವಂದನೆಗಳನ್ನು ಮುಗಿಸಿಕೊಂಡು ತಮ್ಮ ಕಲಾಸಾಮಗ್ರಿಗಳ ಚೀಲದೊಂದಿಗೆ ಹೊರನಡೆಯುವದು ಶಾಲೆಗೆ ಹೋಗುವಾಗ ಹಾದಿಯಲ್ಲಿ ಕಂಡ ದೃಶ್ಯದ ಸ್ಕೆಚ್‌ಗಳನ್ನು ಮಾಡುತ್ತಿದ್ದರು. ಇದಕ್ಕಾಗಿಯೇ ತಮ್ಮ ಚೀಲದಲ್ಲಿ ಕೆಲವು ಬಿಳಿ ಹಾಳೆಗಳನ್ನು ಪೆನ್ಸಿಲನ್ನು ಇಟ್ಟುಕೊಂಡಿರುತ್ತಿದ್ದರು. ಬೆಳಗಿನ ಉಪಹಾರಕ್ಕಾಗಿ ಒಂದು ಗ್ಲಾಸು ಹಾಲು ಕುಡಿದುಕೊಂಡು ಹತ್ತು ಗಂಟೆಯನ್ನುವಷ್ಟರಲ್ಲಿ ಜೆ.ಜೆ. ಕಲಾಶಾಲೆಗೆ ತಲುಪುತ್ತಿದ್ದರು. ಹತ್ತು ಗಂಟೆಗೆ ತರಗತಿಗಳು ಪ್ರಾರಂಭವಾಗುವ ಮೊದಲು ವಿದ್ಯಾರ್ಥಿಗಳು ಮಾಡಿಕೊಂಡು ಬಂದಿದ್ದ ಸ್ಕೆಚ್‌ಗಳನ್ನು ನೋಡಿ ಅದರ ಮೇಲೆ ಸಹಿ ಹಾಕುತ್ತಿದ್ದರು. ಒಂದು ವೇಳೆ ಸ್ಕೆಚ್‌ಗಳನ್ನು ಮಾಡಿಕೊಂಡು ಹೋಗಲಿಲ್ಲವೆಂದರೆ ಅಂದು ನಮಗೆ ಹಾಜರಿಯು ಹಾಕುತ್ತಿರಲಿಲ್ಲ. ಶೇಕಡಾ 75% ರಷ್ಟು ಹಾಜರಾತಿ ಇರಲಿಲ್ಲವೆಂದರೆ ಪರೀಕ್ಷೆಗೆ ಕೂಡಲು ಅನುಮತಿ ಕೊಡುತ್ತಿರಲಿಲ್ಲ. ಇಂಥ ಒಂದು ಕಟ್ಟುನಿಟ್ಟಿನ, ಶಿಸ್ತಿನ ಕ್ರಮ ಅಲ್ಲಿತ್ತು.

[illegible]

ಪಠ್ಯಕ್ರಮ

ಜೆ.ಜೆ. ಕಲಾಶಾಲೆಯಲ್ಲಿ ಮೊದಲು ಎಲಿಮೆಂಟರಿ ಡ್ರಾಯಿಂಗ್ ಮತ್ತು ಡಿಸೈನ್ ನಿಂದ ವರ್ಗಗಳನ್ನು ಪ್ರಾರಂಭಿಸಿದರು. ಒಂದೇ ವಿಭಾಗದಿಂದ ಪ್ರಾರಭವಾದ ಸಂಸ್ಥೆ ಮುಂದೆ ಉಪಶಾಖೆಗಳನ್ನು ಹೊಂದಿ ಬೆಳೆಯಿತು. ಅವುಗಳೆಂದರೆ ಮಾಡೆಲಿಂಗ್ ವಿಭಾಗ, ವಾಸ್ತುಶಿಲ್ಪವಿಭಾಗ, ಶಿಲ್ಪಕಲಾ ವಿಭಾಗ, ಟೀಚರ್ ಟ್ರೇನಿಂಗ್ ವಿಭಾಗ , ಆರ್ಟ ಆ್ಯಂಡ ಕ್ರಾಫ್ಟ ಆಫ್ ಇಂಡಿಯಾ ಮತ್ತು ಲಾರ್ಡರೇ ವರ್ಕಶಾಪ್ ಅಲ್ಲದೇ ಆಪ್ಲೈಡ್ ಆರ್ಟ (ವಾಣಿಜ್ಯ ಚಿತ್ರಕಲೆ) ವಿಭಾಗಗಳು ಪ್ರಾರಂಭಗೊಂಡವು ಮೊದಲನೆ ಮೂರು ಗ್ರೇಡ್ ಪರೀಕ್ಷೆಗಳ ಕೋರ್ಸ ಇದಾಗಿತ್ತು. ಪ್ರವೇಶ ಪಡೆದ ತಕ್ಷಣ ಇವರಿಗಿರುವ ಪಾಠವೆಂದರೆ ಒಂದು ಘನಾಕೃತಿಯನ್ನು ಇವರ ಮುಂದೆ ಇರಿಸುತ್ತಿದ್ದರು. ಅದನ್ನು ಏನಿಲ್ಲವೆಂದರೂ 35 ಬಾರಿ ರೇಖಾ ಚಿತ್ರಗಳನ್ನು ಚಿತ್ರಿಸಿದ ನಂತರ ಅದನ್ನು ಸಂಪೂರ್ಣವಾಗಿ ನೆರಳು- ಬೆಳಕಿನ ಛಾಯೆಯಿಂದ ಚಿತ್ರಿಸಿದಾಗಲೇ ಮುಂದಿನ ವಸ್ತುವನ್ನು ಚಿತ್ರಿಸಲು ಅವಕಾಶ ದೊರೆಯುತಿತ್ತು. ಎರಡನೇ ವರ್ಷಕ್ಕೆ ಸರಳಗೈ ಚಿತ್ರ (Freehand) ಜಾಮಿತಿಯ ಚಿತ್ರ(Geometry) ಮೂರ್ತಿಶಿಲ್ಪ(Modelling) ಮತ್ತು ದೃಗ್‌ದರ್ಶನ(Perspective) ಇವುಗಳ ಪೂರ್ವಸಿದ್ಧತೆಯ ಚಿತ್ರವನ್ನು (Speciman) ಮೊದಲು ಮಾಡಿತೋರಿಸಬೇಕು. ಅವು ಮಾನ್ಯತೆ ಪಡೆದರೆ ಮಾತ್ರ ಅವುಗಳನ್ನು ಪೂರ್ತಿ ಅಳತೆ (Impiral) ಯಲ್ಲಿ ಚಿತ್ರಿಸುವದು ಅದರಲ್ಲಿ ಯಾವುದಾದರೂ ಒಂದು ಮಾನ್ಯತೆ ಪಡೆಯದಿದ್ದರೆ ಅವರು ಮರುವರ್ಷಕ್ಕೆ ಮತ್ತೆ ಪರೀಕ್ಷೆಗೆ ಕುಳಿತುಕೊಳ್ಳಬೇಕು. ಈ ಪದ್ಧತಿ ಥರ್ಡಗ್ರೇಡ್ ಪರೀಕ್ಷೆಗೂ ಇತ್ತು.[3] ಮೂರನೆಯ ಪರೀಕ್ಷೆಯಲ್ಲಿ ಛಾಯೆಯಲ್ಲಿ ಚಿತ್ರ (Shading) ಇದ್ದಿಲು ಕಡ್ಡಿಯಿಂದ ಚಿತ್ರರಚಿಸಿ, ಪುಡಿಬಣ್ಣಗಳಿಂದ ಛಾಯಾಪ್ರಕಾಶವನ್ನು ವ್ಯಕ್ತಗೊಳಿಸುವದು (Foliage) ಮಣ್ಣಿನ ಶಿಲ್ಪ ಇರಿಸಿ ಮಸಿಕಡ್ಡಿಯಿಂದ ಹೊರರೇಖೆ ಹಾಕಿಪುಡಿಬಣ್ಣಗಳನ್ನು ಹಚ್ಚಿ , ಶಿಲ್ಪದ ಉಬ್ಬು-ತಗ್ಗುಗಳನ್ನು ಗುರುತಿಸುವದು. ಛಾಯಾಚಿತ್ರದಂತೆ ನೆರಳು-ಬೆಳಕನ್ನು ತೋರಿಸುವ ಮಾದರಿ (Out line from cast) ಮತ್ತು (ಅರ್ಥೋಗ್ರಾಫಿಕ್ ಪ್ರೊಜೆಕ್ಷನ್) ಇಷ್ಟು ವಿಷಯಗಳು ಇರುತ್ತಿದ್ದವು. ಯಾರು ಈ ಮೂರು ಪರೀಕ್ಷೆಗಳನ್ನು ಪಾಸಾಗುವರೂ ಅವರು ಎಂಥ ಚಿತ್ರಗಳನ್ನು ಬಿಡಿಸಬಲ್ಲಷ್ಟು ಸಾಮರ್ಥ್ಯವನ್ನು ಹೊಂದಿರುತ್ತಿದ್ದರಲ್ಲದೇ ಅವರು ಜೆ.ಜೆ. ಕಲಾಶಾಲೆಯ ಬೇರೆ ಬೇರೆ ವಿಭಾಗಗಳಿಗೆ ಕಲಿಸಲು ಯೋಗ್ಯ ಎಂದು ತಿಳಿಯುತ್ತಿದ್ದರು. ಇಂಥ ಒಂದು ಉನ್ನತ ಕಲಾಶಾಲೆಯಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿ ಮೆಟ್ರಿಕ್ ಪಾಸಾಗಿರಬೇಕು. ಹೈಸ್ಕೂಲನಲ್ಲಿ ಇಂಟರಮಿಡಿಯಟ್ ಪರೀಕ್ಷೆಯಲ್ಲಿ ಪಾಸಾಗಿರಲೇಬೇಕು. ಇಂಗೀಷ ಮಾತನಾಡಲು, ಓದಲು ಬರೆಯಲು ಬರುತ್ತಿರಬೇಕು. ಇಂಥ ಒಂದು ಶಿಸ್ತು ನಾವು ಇಲ್ಲಿ ಕಾಣಬಹುದು.

ಮದ್ರಾಸ್ ಮತ್ತು ಕಲ್ಕತ್ತಾ ಕಲಾಶಾಲೆಗಳು ಪಠ್ಯಕ್ರಮದ ಪಟ್ಟಿಯನ್ನು ತಯಾರಿಸುತ್ತಿದ್ದವು. ಇದರಿಂದ ಕಲ್ಕತ್ತಾ ಕಲಾಶಾಲೆಯ ಪ್ರಭಾವ ಮೊಟ್ಟಮೊದಲಿಗೆ ತಕ್ಕಮಟ್ಟಿಗೆ ಇದರ ಮೇಲಾಯಿತು. ಯಾಕೆಂದರೆ ಕಲ್ಕತ್ತಾ ಆಕಾಲಕ್ಕೆ ಇಡೀ ದೇಶದ ರಾಜಧಾನಿಯಾಗಿತ್ತು. ಸಾಂಸ್ಕೃತಿಕ ಕೇಂದ್ರ, ರಾಜಕೀಯ ಆಂದೋಲನ ನೆಲಮನೆ , ಐರೋಪ್ಯ ಸಂಸ್ಕೃತಿಯ ಪ್ರಭಾವ ಪ್ರಬಲವಾಗಿದ್ದುದು ಅಲ್ಲಿ. ಅಲ್ಲಿನ ಕಲಾಶಾಲೆ 1854 ರಷ್ಟು ಹಿಂದೆಯೇ ಖಾಸಗಿ ಶಾಲೆಯಾಗಿ ಆರಂಭವಾಯಿತು. ಇಂಡಸ್ಟ್ರಿಯಲ್ ಆರ್ಟಸೊಸಾಯಿಟಿ ಎಂಬ ಔದ್ಯಮಿಕ ಆಸಕ್ತಿಯುಳ್ಳ ಸಂಸ್ಥೆಯು ಒಡಮೂಡಿಸಿದ ಶಾಲೆ ಅದು. ಈ ಶಾಲೆಯಲ್ಲಿ ಶಿಕ್ಷಣ ವಿಷಯಗಳೆಲ್ಲ ಮೊದಲು ಕೈಗಾರಿಕೆಗೆ ಸಂಬಂಧಪಟ್ಟವೇ ಆಗಿರುತ್ತಿದ್ದವು. ಮುಖ್ಯವಾಗಿ ಮರದಲ್ಲಿ ಕೆತ್ತನೆ, ಲಿಥೋಗ್ರಾಫಿ ಇವುಗಳೊಂದಿಗೆ ಅಲಂಕರಣೆಯನ್ನು ಆದೆಷ್ಟು ಕೂಡಿಸುತ್ತಿದ್ದರು. ಶಾಲೆಗಳಲ್ಲಿ ಆರ್ಥಿಕ ದೃಷ್ಟಿಯಿಂದ ಕರಕುಶಲ ಕೈಗಾರಿಕೆಗಳನ್ನೇ ಕಲಿಸಬೇಕೆಂಬುದು ಆಗ ನಾಡಿನ ಒಡೆಯನಾಗಿದ್ದ ಲಾರ್ಡಕರ್ಜನ್‌ನ ಆಗ್ರಹವಾಗಿತ್ತು. ಇದರಿಂದಾಗಿ ಆಗ ಕಲ್ಕತ್ತಾದಲ್ಲಿ ಕಲಿಸತಕ್ಕಂತ ವಿಷಯಗಳು ಇವುಗಳಾಗಿದ್ದವು. ಆಭರಣನ ರೇಖಾ ಚಿತ್ರ (Ornamental Drawing) ಪ್ಲಾಸ್ಟರನಿಂದ ಮೂರ್ತಿರಚನೆ (Modelling and Casting in plaster), ಕುಂಭಕಲೆ (Manufacture of pottery), ಮರಕೆತ್ತನೆ ಕೆಲಸ (Wood engraving), ಅಚ್ಚುತೆಗೆಯುವದು

---

3. N.N. Kelkar : Sir . J.J. School of Art Bombay A Hundred Years of its career, Page No. 73

(Lithography) ಹಾಗೂ ಛಾಯಾಚಿತ್ರ(Photography) ಈ ಎಲ್ಲ ವಿಷಯಗಳನ್ನೊಳಗೊಂಡ ಮದ್ರಾಸ ಹಾಗೂ ಕಲ್ಕತ್ತಾ ಕಲಾಶಾಲೆಯ ಪ್ರಭಾವವನ್ನು ನಾವು ಮುಂಬಯಿಯ ಜೆ.ಜೆ. ಕಲಾಶಾಲೆಯ ವಿಷಯಗಳಲ್ಲಿ ಅತ್ಯಂತ ಸುಲಭವಾಗಿ ಗುರುತಿಸಬಹುದಾಗಿದೆ. ಆದ್ದರಿಂದ ಎಲ್ಲ ಹಾಗೂ ಕರಕುಶಲ ಕಲೆಗಳಿಗೂ ಮೂಲಭೂತವಾದ ಶಾಖೆ ಇದಾದ್ದರಿಂದ ರೇಖಾಚಿತ್ರ ಹಾಗೂ ವರ್ಣಚಿತ್ರಗಳ (Department of Drawing and painting) ವಿಭಾಗವನ್ನು ಪ್ರಾರಂಭಿಸಿದ್ದರು.[4]

ಕ್ಲಾಸನಲ್ಲಿ ನಮಗೆ Angular perpective, Anatomy, Composition, portrait and life painting ಈ ವಿಷಯಗಳನ್ನು ನಮಗೆ ಪಠ್ಯಕ್ರಮವಾಗಿ ಹೇಳಿಕೊಡುತ್ತಿದ್ದರು. ಪಠ್ಯಕ್ರಮವನ್ನು ಬ್ರಿಟಿಷರು ಯಾವ ರೀತಿ ಮಾಡುತ್ತಿದ್ದರೋ ಅದೇ ರೀತಿಯಲ್ಲಿ ಮುಂದುವರಸಿಕೊಂಡು ಬಂದರು. ರೇಖಾಚಿತ್ರಗಳ ಅಭ್ಯಾಸ, ಅನಾಟಮಿಯ ಅಭ್ಯಾಸ, ಹೊರ ಗಡೆ ಹೋಗಿ ಚಿತ್ರಗಳನ್ನು ರಚಿಸುವದು (Outdoor sketches), ಸ್ಥಿರರೂಪಚಿತ್ರಣ, ಮೂರ್ತಿಶಿಲ್ಪಚಿತ್ರಣ, ಜೀವಮಾದರಿಯ (Life) ಚಿತ್ರಗಳಂತೆ ಮುಂತಾದವುಗಳು ವಿಷಯಗಳಾಗಿದ್ದವು. ಆಗಲೂ ಸಹ ಮನುಷ್ಯಾಕೃತಿಗೆ ಬಹಳ ಪ್ರಾಮುಖ್ಯತೆ ಕೊಡುತ್ತಿದ್ದದ್ದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಇವರು ಸ್ವತಃ ಸತ್ತ ಮನುಷ್ಯರ ದೇಹಗಳನ್ನು ಕತ್ತರಿಸಿ ಪ್ರತಿಯೊಂದು ಮಾಂಸಖಂಡಗಳ ಆಕಾರಗಳನ್ನು ತಿಳಿದುಕೊಳ್ಳಬೇಕಾಗುತ್ತಿತ್ತು. ಇದರ ಸಲುವಾಗಿಯೇ ವಾರಕ್ಕೊಂದು ಸಾರಿಯಂತೆ ಜೆ.ಜೆ. ಆಸ್ಪತ್ರೆಗೆ ಹೋಗಬೇಕಾಗುತ್ತಿತ್ತು. ಅನಾಟಮಿ ಪುಸ್ತಕಗಳಲ್ಲಿರುವ ಚಿತ್ರಗಳನ್ನು ಸ್ಟಡಿ ಮಾಡಿದರೆ ಮಾನವನ ದೇಹದಲ್ಲಿರುವ ಭಾಗಗಳನ್ನು ಅಷ್ಟು ಸರಿಯಾಗಿ ತಿಳಿದುಕೊಳ್ಳಲು ಸಾಧ್ಯವಾಗದು. ಈ ದೃಷ್ಟಿಯಿಂದ ಶವಗಳನ್ನು ಕೊಯ್ದು ಪ್ರತಿಯೊಂದು ಭಾಗವನ್ನು ವೀಕ್ಷಿಸಿ ಅಭ್ಯಾಸ ಮಾಡುವದರಿಂದ ಅನಾಟಮಿಯ ಬಗ್ಗೆ ಸಂಪೂರ್ಣವಾಗಿ ಮಾಹಿತಿಯಾಗುತ್ತದೆ. ಇದರಿಂದ ಮನುಷ್ಯನ ಯಾವುದೇ ಭಾಗವನ್ನು ಸರಾಗವಾಗಿ ಚಿತ್ರಿಸಬಹುದು. ಇದರಿಂದ ಚಿತ್ರತಗೊಂಡ ಆ ಚಿತ್ರದಲ್ಲಿ ವ್ಯಕ್ತಿಯ ಪ್ರತಿಯೊಂದು ಅವಭಾವಗಳನ್ನು ನಾವು ಗುರುತಿಸಲಿಕ್ಕೆ ಸಾಧ್ಯವಾಗುತ್ತದೆ. ಎಂದು ಅಧ್ಯಾಪಕರು ಹೇಳುತ್ತಿದ್ದರು. ಇಲ್ಲಿ ಪ್ರತಿಯೊಂದು ವಿಷಯವೂ ಕೂಡ ಇದೇ ರೀತಿಯ ಕಲಿಕೆಯಿಂದ ಕೂಡಿತ್ತು. ನಿಸರ್ಗಚಿತ್ರದಲ್ಲಿಯೂ ಕೂಡ ಹಿನ್ನಲೆಯ ವಿಷಯವಾಗಿ ಕಲಿಸುತ್ತಿದ್ದರು. "ಬಣ್ಣಗಳ ದೃಷ್ಟಿಯಿಂದ ದೃಗ್‌ದರ್ಶನದ ದೃಷ್ಟಿಯಿಂದ ದೂರ, ಸಮೀಪ ಅರ್ಥೈಸಿಕೊಳ್ಳಲು ನಿಸರ್ಗದ ಸಮೀಪಕ್ಕೆ ಹೋಗಿ ಬಣ್ಣಗಳ ನೆರಳು-ಬೆಳಕಿನ ರೀತಿಯಲ್ಲಿ ತಿಳಿದುಕೊಳ್ಳುವಸಲುವಾಗಿ ಈ ನಿಸರ್ಗ ಚಿತ್ರಗಳು ರಚನೆಯಿರುತ್ತಿತ್ತು. ಇದು ಕಲಾಕಾರನ ಬೆಳವಣಿಗೆಗೆ ಅವಶ್ಯವೂ ಆಗಿತ್ತು." ಇಂಥ ಒಂದು ಶಿಸ್ತಿನ ಪಠ್ಯಕ್ರಮ ಅಲ್ಲಿತ್ತು.

ಮಧ್ಯಾಹ್ನದ ವೇಳೆಯಲ್ಲಿ ಅರ್ಧಗಂಟೆ ಊಟಕ್ಕೆಂದು ವಿರಾಮ ವಿರುತ್ತಿತ್ತು. ಈ ಅವಧಿಯಲ್ಲಿ ಮಧ್ಯಾಹ್ನದ ಊಟವನ್ನು ಮುಗಿಸಿಕೊಂಡು ಕಲಾಶಾಲೆಗೆ ಬರುತ್ತಿದ್ದರು. ಕಲಾಶಾಲೆಯಲ್ಲಿ ಪ್ರವೇಶ ದೊರೆತ ಎರಡು ಮೂರು ತಿಂಗಳವರೆಗೂ ಜಗದೇವಪ್ಪನವರು ಯಾರಿಗೂ ಮಾತನಾಡಿಸುತ್ತಿರಲಿಲ್ಲ. ಒಬ್ಬರೇ ಇರುತ್ತಿದ್ದರು. ಅಲ್ಲಿರುವ ಎಲ್ಲ ವಿದ್ಯಾರ್ಥಿಗಳು ಹಿಂದಿ ಮತ್ತು ಮರಾಠಿಯಲ್ಲಿ ಮಾತನಾಡುತ್ತಿದ್ದರು. ಒಮ್ಮೆ ಹೀಗೆ ಮಧ್ಯಾಹ್ನದ ವೇಳೆಯಲ್ಲಿ ಕರ್ನಾಟಕದವರೇ ಆದ ಜಿ. ಎಸ್. ಶೆಣೈರವರನ್ನು ಕಂಡರು. ಶೆಣೈರವರು ಕರ್ನಾಟಕದ ಉಡುಪಿಯವರು. ಅವರು ಜೆ.ಜೆ. ಕಲಾಶಾಲೆಯಲ್ಲಿ ತುಂಬ ಹುರುಪಿನಿಂದ ಓಡಾಡುತ್ತಿದ್ದರು. ಎಲ್ಲರ ಜೊತೆ ಬರೆಯುವದು, ಎಲ್ಲರ ಜೊತೆ ನಗುವಿನ ಚಟಾಕೆಗಳನ್ನು ಹರಿಸುವದು, ಇದು ಅವರ ಸ್ವಭಾವವಾಗಿತ್ತು. ಚಿತ್ರಬಿಡಿಸುವದರಲ್ಲಿಯೂ ಕೂಡ ಅವರು ಮುಂದಿದ್ದರು. ಯಾವಾಗಲೂ ಏನಾದರೂ ಒಂದು ಕ್ರಿಯೇಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಂಥವರು ಆಗಿದ್ದರು. ಶೆಣೈರವರು ಕೂಡ ಜಗದೇವಪ್ಪನವರು ಯಾವಾಗಲು ಒಬ್ಬಂಟಿಗನಾಗಿರುವುದನ್ನು ಕಂಡು ಇವರ ಹತ್ತಿರ ಬಂದು ವಿಚಾರಿಸಿದರು. ಜಗದೇವಪ್ಪನವರು ನಾನು ಗುಲ್ಬರ್ಗಾದಿಂದ ಬಂದಿದ್ದೇನೆ. ಇಲ್ಲೆ ಒಬ್ಬ ಪೇಠಿಯವರ ಅಂಗಡಿಯಲ್ಲಿದ್ದುಕೊಂಡಿದ್ದೇನೆ.

---

4. ಲಕ್ಷ್ಮಿ ಗವಾಯಿಯವರ : ಕಲಾವಿದ ಎಮ್.ಎ ಚಟ್ಟಿ ಜೀವನ, ಕಲಾಕೃತಿಗಳು ಒಂದು ಅಧ್ಯಯನ ಅಪ್ರಕಟಿತ ಪಿ. ಎಚ್.ಡಿ. ಮಹಾ ಪ್ರಬಂಧ, ಪುಟ 47

ಎಂದು ತಮ್ಮನ್ನು ಪರಿಚಯಿಸಿಕೊಂಡರು . ಇಲ್ಲಿ ಯಾರೂ ಕನ್ನಡ ಮಾತನಾಡುವವರಿಲ್ಲಾ ಬರಿ ಹಿಂದಯಲ್ಲಿ ಮಾತಾನಾಡಿ ಬೇಜಾರಾಗಿತ್ತು . ಶೆಣೈರವರು ಕರ್ನಾಟಕದವರಾಗಿದ್ದರಿಂದ ಅವರೊಂದಿಗೆ ಕನ್ನಡದಲ್ಲಿ ಮಾತನಾಡಲಾರಂಭಿಸಿದರು. ಅಂತೂ ಕನ್ನಡದಲ್ಲಿ ಮಾತನಾಡುವ ಗೆಳೆಯ ಸಿಕ್ಕನೆಂದು ನಾನು ಖುಷಿಪಟ್ಟೆ ಶೆಣೈರವರು ಜಗದೇವಪ್ಪನವರೊಡನೆ ಮಾತನಾಡುವದನ್ನು ಕಂಡು ಶೆಣೈರವರ ಗೆಳೆಯರು ಏಕೌನ್ ಹೈ ಕಹಾಂಸೆ ಆಯಾ, ಕ್ಯಾ ಆಪಕು ಎ ಪಹಚಾನತ ಹೈ ಕ್ಯಾ ಎಂದು ಕೇಳಲಾರಂಭಿಸಿದರು. ಆಗ ಶೆಣೈರವರು ಜಗದೇವಪ್ಪನವರನ್ನು ತಮ್ಮ ಗೆಳೆಯರೆದುರು ಕರೆದುಕೊಂಡು ಹೋಗಿ" ಎ ಖಂಡೇರಾವ ಬೋಲಕೆ ಹಮಾರೆ ಕರ್ನಾಟಕ ಕೆ ಹಿ ಹೈ " ಎಂದು ಹಿಂದಿಯಲ್ಲಿ ಅವರ ಸ್ನೇಹಿತರಿಗೆ ಪರಿಚಯಿಸಿದರು, ಅಲ್ಲಿ ಎಲ್ಲರಿಗೂ ಅವರವರ ಅಡ್ಡ ಹೆಸರಿನಿಂದ ಕರೆಯಲಾಗುತ್ತಿದ್ದರಿಂದ ಜಗದೇವಪ್ಪನವರಿಗೆ ಖಂಡೇರಾವ ಎಂದು ಕರೆಯಲಾರಂಭಿಸಿದರು.

ಹೀಗೆ ಖಂಡೇರಾವರಿಗೆ ಕಾಲೇಜಿನಲ್ಲಿ ಕೆಲವು ಸ್ನೇಹಿತರ ಪರಿಚಯವಾಯ್ತು ಜೆ.ಜೆ. ಕಲಾಶಾಲೆಯಲ್ಲಂತೂ ದಿನಾಲು ಒಂದಿಲ್ಲದ ಒಂದು ಕಾರ್ಯಕ್ರಮಗಳು ನಡೆಯುತ್ತಿದ್ದವು. ಯಾವುದೇ ಕಾರ್ಯಕ್ರಮವಿರಲಿ ಶೆಣೈರವರ ಪಾಲು ಇದ್ದೆ ಇರುತ್ತಿತ್ತು. ತಮ್ಮ ಕಾರ್ಯಚಟುವಟಿಕೆಗಳಿಂದ ಶೆಣೈರವರು ಎಲ್ಲರಿಗೂ ಪರಿಚಿತರಾಗಿದ್ದರು. ಹೀಗಾಗಿ ಶೆಣೈರವರು ಕೈಗೊಳ್ಳುತ್ತಿದ್ದ ಸಣ್ಣಪುಟ್ಟ ಕಲಾಚಟುವಟಿಕೆಗಳಲ್ಲಿ ಖಂಡೇರಾವರೂ ಸಹ ಭಾಗವಹಿಸುತ್ತಿದ್ದರು, ಹೀಗೆ ನಾಲ್ಕು, ಐದು ಗಂಟೆಯವರೆಗೆ ಕ್ಲಾಸಿನಲ್ಲಿ ಅಭ್ಯಾಸ ಮಾಡಿ ಐದುಗಂಟೆಯಿಂದ ಅಲ್ಲೆ ಹತ್ತಿರದಲ್ಲೇ ಇದ್ದ ವಿ.ಟಿ ಸ್ಟೇಷನ್‌ಗೆ ಹೋಗಿ ಅಲ್ಲಿ ಸ್ಕೇಚ್‌ಗಳನ್ನು ಮಾಡುತ್ತಿದ್ದರು. ಅಲ್ಲಿ ನಿಂತುಕೊಂಡಿರುವ ರೈಲು, ಟಿಕೇಟು ತೆಗೆಯಲು ನಿಂತಿರುವ ಪ್ರಯಾಣಿಕರು, ಅಲ್ಲಲ್ಲಿ ನಿಂತುಕೊಂಡಿರುವವರು, ಇವರು ಹೆಚ್ಚಾಗಿ ಕಾಯುತ್ತಿದ್ದ ಪ್ರಯಾಣಿಕರ ಚಿತ್ರಗಳನ್ನು ಚಿತ್ರಿಸುತ್ತಿದ್ದರು. ಒಂದೊಂದು ಸಾರಿ ಇವರು ಸ್ಕೇಚ್‌ಗಳನ್ನು ಮಾಡುವದು ರೈಲ್ವೆ ಅಧಿಕಾರಿಗಳ ಕಣ್ಣಿಗೂ ಬೀಳುತ್ತಿತ್ತು. ಆದರೂ ಅವರು ಯಾರಿಗೂ ಏನೂ ಅಂತಿರಲಿಲ್ಲ ಯಾಕೆಂದರೆ ಅವರಿಗೆ ಇದು ಗೊತ್ತಾಗಿಯೇ ಬಿಟ್ಟಿತ್ತು ಇವರು ಕಲಾಶಾಲೆಯ ವಿದ್ಯಾರ್ಥಿಗಳೆಂದು ದಿನಾಲು ನೂರಾರು ವಿದ್ಯಾರ್ಥಿಗಳು ಅಲ್ಲಿಗೆ ಬಂದು ಸ್ಕೇಚ್‌ಗಳನ್ನು ಮಾಡುತ್ತಿದ್ದರು. ಹೀಗೆ ಒಂದು ಒಂದುವರೆ ತಾಸು ಸ್ಕೇಚ್‌ಗಳನ್ನು ಮಾಡಿಕೊಂಡು ತಾವಿರುವ ಸ್ಥಳಕ್ಕೆ ಹೋಗುತ್ತಿದ್ದರು. ಒಂದೊಂದು ಸಲ ಇಲ್ಲೆ ಸಮೀಪದಲ್ಲೆ ಇರುವ ಚೌಪಾಟಿಯಲ್ಲಿಯೂ ಕೂಡ ಹೋಗಿ ಅಲ್ಲಿಯೂ ಸ್ಕೇಚ್‌ಗಳನ್ನು ಮಾಡುತ್ತಿದ್ದರು ಈ ಸ್ಥಳದಲ್ಲಿ ವ್ಯಾಪಾರಗಳು ನಡೆಯುತ್ತಿದ್ದವು. ಇಲ್ಲಿ ತರಕಾರಿ ಅಂಗಡಿಗಳು, ಮೀನು ಮಾರುವವರು , ತರಕಾರಿಗಳನ್ನು ತೆಗೆದುಕೊಂಡು ಹೋಗಲು ಬರುತ್ತಿದ್ದ ಜನರು, ಮೀನುಗಳನ್ನು ಬುಟ್ಟಿಯಲ್ಲಿಟ್ಟುಕೊಂಡವರು, ತಲೆಯಮೇಲೆ ಹೊತ್ತುಕೊಂಡು ಹೋಗುತ್ತಿರುವವರು ಹೀಗೆ ಹಲವಾರು ರೀತಿಯಿಂದಲೂ ಬೇರೆ ಬೇರೆ ವಿಷಯಗಳಿಂದ ಕೂಡಿದ ಸ್ಕೇಚ್‌ಗಳನ್ನು ಮಾಡಿಕೊಂಡು ಸಾಯಂಕಾಲವಾದ ಕೂಡಲೆ ತಾವಿರುವ ಸ್ಥಳಕ್ಕೆ ತೆರಳುವದು. ಸಾಯಂಕಾಲ ಏಳು- ಎಂಟು ಗಂಟೆಗೆ ತಾವು ದಿನಾಲು ಹೋಗುವ ಖಾನಾವಳಿಗೆ ಹೋಗುತ್ತಿದ್ದರು. ತಿಂಗಳಿಗೆ ನಲವತ್ತು ರೂಪಾಯಿಯನ್ನು ಕೊಟ್ಟರೆ ತಿಂಗಳಿಗಾಗುವಂತೆ ಅರವತ್ತು ಟೋಕನ್‌ಗಳನ್ನು ಕೊಡುತ್ತಿದ್ದರು. ಅಂದರೆ ದಿನಾಲು ಎರಡು ಊಟ ಕೊಡುತಿದ್ದರು. ಇವರು ರಾತ್ರಿ ಹನ್ನೊಂದು ಗಂಟೆಯವರೆಗೆ ಚಿತ್ರಬಿಡಿಸುವದರಲ್ಲಿ ನಿರತರಾಗಿರುತ್ತಿದ್ದರು. ಕೆಲವೊಂದು ಬಾರಿ ಅಲ್ಲೆ ಅಂಗಡಿಯಲ್ಲಿದ್ದ ಪಟ್ಟಿಗೆಗಳು , ಕಂದಿಲುಗಳು, ಕಟ್ಟಿಗೆಯ ಮಣಿಗಳಂತಹ ಸಾಮಾನುಗಳನ್ನು ತೆಗೆದುಕೊಂಡು ಎದುರಿಗಿಟ್ಟುಕೊಂಡು ಸ್ಥಿರ ಚಿತ್ರಗಳನ್ನು ಚಿತ್ರಿಸುತ್ತಿದ್ದರು. ಏನಾದರು ಓದುವದಿದ್ದರೆ ಓದಿ ಹನ್ನೊಂದು ಗಂಟೆಗೆ ಮಲಗುತ್ತಿದ್ದರು. ಬೆಳಿಗ್ಗೆ ಐದುಗಂಟೆಗೆ ಎದ್ದು ತಮ್ಮ ಮುಂಜಾನೆಯ ಕಾರ್ಯಗಳನ್ನೆಲ್ಲಾ ಮುಗಿಸಿಕೊಂಡು ಏಳು ಗಂಟೆಯಿಂದ ಒಂಬತ್ತು ಗಂಟೆಯವರೆಗೆ ಹೊರಗಡೆ ಹೋಗಿ ಸ್ಕೇಚ್‌ಗಳನ್ನು ಮಾಡುವದು , ನಂತರ ಜೆ.ಜೆ ಕಲಾಶಾಲೆಗೆ ಹೋಗುವದು ಇದು ಇವರ ದೈನಂದಿನ ಕೆಲಸವಾಗಿ ಬಿಟ್ಟಿತು. ವರ್ಷದ ಮಧ್ಯಾವಧಿಯ ರಜಾ ದಿನಗಳಲ್ಲಿ ಮಾತ್ರ ಕಲಬುರ್ಗಿಗೆ ಹೋಗಿಬಂದು ಮಾಡುತ್ತಿದ್ದರು.

ನೂತನ ಕಲಾ ಮಂದಿರ :

ಮುಂಬೈಯಲ್ಲಿ ಇನ್ನೊಂದು ಕಲಾಶಾಲೆಯಿತ್ತು ಅದನ್ನು ನೂತನ ಕಲಾ ಮಂದಿರವೆಂದು ಕರೆಯುತ್ತಿದ್ದರು. ನಮ್ಮ

ಕರ್ನಾಟಕದವರೇ ಆದ ಖ್ಯಾತ ಕಲಾವಿದರಾದ ಕಲಾಗುರು ಎಂದೇ ಪ್ರಸಿದ್ಧಿ ಪಡೆದ ದಂಡಾವತಿ ಮಠರವರು ಈ ಕಲಾಶಾಲೆಯ ರೂವಾರಿಗಳಾಗಿದ್ದರು. ಇವರೆ ಈ ಕಲಾಶಾಲೆಯನ್ನು ನಡೆಸುತ್ತಿದ್ದರು. ಇವರು ಕರ್ನಾಟಕದವರಾಗಿದ್ದರಿಂದ ಖಂಡೇರಾವರು ಕೆಲವೊಮ್ಮೆ ಇವರ ಬಗ್ಗೆ ಕೇಳಿ ತಿಳಿದಿದ್ದರಿಂದ ಖಂಡೇರಾವರು ಒಮ್ಮೆ ದಂಡಾವತಿಮಠರವರನ್ನು ಕಂಡು ಅವರಿಗೆ ತಮ್ಮ ಪರಿಚಯವನ್ನು ಮಾಡಿಕೊಂಡರು. ದಂಡಾವತಿಮಠರವರು ಇವರನ್ನು ಕರೆದುಕೊಂಡು ಕಲಾಶಾಲೆಯನ್ನೆಲ್ಲಾ ಸುತ್ತಾಡಿಸಿದರು. ಖಂಡೇರಾವರೆ ಹೇಳುವಂತೆ ಅದೊಂದು ದೊಡ್ಡದಾದ, ಒಂದೇ ಹಾಲನ್ನು ಕೂಡಿದ್ದು ಅದರಲ್ಲಿಯೇ ಬೇರೆ ಬೇರೆ ವಿಭಾಗಗಳಂತೆ ಮಾಡಿಕೊಂಡಿದ್ದರು. ಪಕ್ಕದಲ್ಲಿ ಒಂದರ ಹಿಂದೊಂದರಂತೆ ಮೂರು ಮೆಟ್ಟಿಲುಗಳಿಂದ ಕೂಡಿದ ಎತ್ತರವಾದ ಅಗಲವಾದ ಕಟ್ಟಿಗೆಯಿಂದ ಮಾಡಿದ ಕಟ್ಟೆಯಂತಿತ್ತು. ಅದರ ಮೇಲೆ ಒಬ್ಬ ವ್ಯಕ್ತಿಯನ್ನು ಕೂಡಿಸಿ, ಅವನ ಕೈಯಲ್ಲಿ ಒಂದು ಉದ್ದವಾದ ಸ್ಟೀಲಿನ ಕೋಳೆಯನ್ನು ಕೊಟ್ಟಿದ್ದರು. ಕುಳಿತಿರುವ ವ್ಯಕ್ತಿಯ ಮೈಮೇಲೆ ಒಂದು ಪಂಚೆಯನ್ನು ಬಿಟ್ಟರೆ ಮತ್ತೇನೂ ಇರಲಿಲ್ಲ. ಕುಳಿತಿರು ವ್ಯಕ್ತಿಯ ಹಿಂದುಗಡೆ ಒಂದು ಸ್ಟ್ಯಾಂಡಗೆ ಬಣ್ಣ ಬಣ್ಣದ ಬಟ್ಟೆಗಳನ್ನು ಇಳಿಬಿಟ್ಟದ್ದರು. ಎದುರಿಗೆ ಸುಮಾರು ಹದಿನೈದರಿಂದ ಇಪ್ಪತ್ತು ವಿದ್ಯಾರ್ಥಿಗಳು ಡಾಂಕಿಚೇರ್ ಎಂಬ ಕುರ್ಚಿಯ ಮೇಲೆ ಕುಳಿತುಕೊಂಡು ತಮ್ಮೆದುರಿನ ಬೋರ್ಡಿಗೆ ಹಾಳೆಯನ್ನು ಹಚ್ಚಿಕೊಂಡು ಕುಳಿತಿರುವ ವ್ಯಕ್ತಿಯ ಚಿತ್ರವನ್ನು ಬಿಡಿಸುತ್ತಿದ್ದರು. ಇವರಲ್ಲಿ ಕೆಲವರು ರೇಖಾಚಿತ್ರಗಳನ್ನು ಮಾಡುತ್ತಿದ್ದರೆ, ಇನ್ನೂ ಕೆಲವರು ಜಲವರ್ಣದಿಂದ , ತೈಲವರ್ಣದಿಂದ ಜೀವಮಾದರಿಯ ಚಿತ್ರವನ್ನು ಬಿಡಿಸುತ್ತಿದ್ದರು. ಇನ್ನೊಂದು ಭಾಗದಲ್ಲಿ ಒಂದು ಉದ್ದವಾದ ಕಟ್ಟಿಗೆಯ ಮೇಜಿನ ಮೇಲೆ ವಿದ್ಯಾರ್ಥಿಗಳು ಮಣ್ಣಿನಿಂದ ಮಾಡಿದ ಮೂರ್ತಿಗಳನ್ನು ತೋರಿಸಿದರು. ಇದರಲ್ಲಿ ಕೆಲವು ಮೂರ್ತಿಗಳನ್ನು ಹೊರಗಿನಿಂದ ಕೊಂಡು ತಂದಿದ್ದವಾಗಿದ್ದವು. ಅದರ ಪಕ್ಕದಲ್ಲಿಯೇ ವಿದ್ಯಾರ್ಥಿಗಳು ಮಣ್ಣಿನಿಂದ ಮೂರ್ತಿಗಳನ್ನು ಮಾಡುವದರಲ್ಲಿ ನಿರತರಾಗಿದ್ದರು. ಇವರಲ್ಲಿ ಒಬ್ಬ ವಿದ್ಯಾರ್ಥಿಯು ಕುಳಿತಿರುವ ಕುದುರೆಯ ಆದೀಗ ಏಳಬೇಕು ಎನ್ನುವಂತಿರುವ ಮೂರ್ತಿಯಂತೂ ಎಷ್ಟು ಚನ್ನಾಗಿತ್ತೆಂದರೆ ನನಗೆ ಅಲ್ಲಿಂದ ಮುಂದಕ್ಕೆ ಹೋಗಲು ಮನಸ್ಸು ಬರುತ್ತಿರಲಿಲ್ಲ. ಅಷ್ಟೊಂದು ನೈಜವಾಗಿ ಆ ಮೂರ್ತಿಯು ಮೂಡಿಬಂದಿತ್ತು. ಅದರ ಮುಖದಲ್ಲಿರುವ ಕಳೆ, ಮೈಕೈಯಿಂದ ತುಂಬಿಕೊಂಡಿರುವ ಹಾಗೆ ಮೇಲೆ ಏಳುವಾಗ ಅದರ ತೊಡೆಭಾಗಗಳಲ್ಲಿರುವ ಮೂಳೆಗಳು ಹೊರಗೆ ಬರುತ್ತವೆ. ಎನ್ನುವಷ್ಟರ ಮಟ್ಟಿಗೆ ಸಂಪೂರ್ಣ ಅನಾಟಮಿಯಿಂದ ಕೂಡಿದ ಮಣ್ಣಿನಿಂದ ತಯಾರಿಸುತ್ತಿದ್ದ ಆ ಒಂದು ಕುದುರೆಯನ್ನು ನೋಡಿದರೆ ಏನು ಈಗಲೆ ಎದ್ದು ಬರುತ್ತದೆ, ಎನ್ನುವಷ್ಟರ ಮಟ್ಟಿಗೆ ಜೀವಕಳೆಯನ್ನು ಆ ಮೂರ್ತಿಯಲ್ಲಿ ತುಂಬಿದ್ದರು. ಇದೆಲ್ಲವನ್ನು ನೋಡಿ ನಾನು ದಂಗಾಗಿಬಿಟ್ಟೆ ಕೇವಲ ಒಂದೇ ಬಂದು ಹಾಲಿನಲ್ಲಿ ಇಷ್ಟೊಂದು ಅಚ್ಚುಕಟ್ಟಾಗಿ ವ್ಯವಸ್ಥಿತ ರೂಪದಲ್ಲಿ ಅಭ್ಯಾಸ ಮಾಡುವದನ್ನು ನೋಡಿದರೆ ನಿಜಕ್ಕೂ ನಾವು ಮೆಚ್ಚಲೇ ಬೇಕು. ಆ ಒಂದು ವ್ಯವಸ್ಥೆಯನ್ನು ದಂಡಾವತಿಮಠರವರು ಕಲಾಶಾಲೆಯಲ್ಲಿ ನಿರ್ಮಾಣ ಮಾಡಿದರು.

ಹೀಗಿರುವಾಗ ದಂಡಾವತಿಮಠರವರು ಅಲ್ಲಿರುವ ಎಲ್ಲಾ ವಿಧ್ಯಾರ್ಥಿಗಳಿಗೆ ನನ್ನನ್ನು ಪರಿಚಯಿಸಿದರು. ನಾನು ದಂಡಾವತಿಮಠರವರಿಗೆ ಒಂದು ಮಾತನ್ನು ಕೇಳಿದೆ ಸರ್ ನಾನು ಜೆ.ಜೆ. ಕಲಾಶಾಲೆಗೆ ದಿನಾಲು ಒಂಬತ್ತು ಮೂವತ್ತಕ್ಕೆ ಹೋಗುತ್ತೇನೆ. ಅದಕ್ಕಾಗಿ ಮುಂಜಾನೆಯ ಕ್ಲಾಸಿಗೆ ಇಲ್ಲಿಗೆ ಬಂದು ಅಭ್ಯಾಸ ಮಾಡಬೇಕೆಂದಿದ್ದೇನೆ. ಎಂದು ಕೇಳಿಕೊಂಡೆ. ಮೊದಲೇ ನಾನು ಹೊರಗಡೆ ಎಲ್ಲಿಗಾದರೂ ಹೋಗಬೇಕಾದರೆ ಒಂದು ಫೈಲ್ ಮತ್ತು ಅದರಲ್ಲಿ ಬಿಡಿ ಹಾಳೆಗಳು ಇರುತ್ತಿದ್ದವು. ದಂಡಾವತಿಮಠರವರು ನೋಡೋಣ ಆ ಫೈಲಕೊಡು ಎಂದು ನನ್ನನ್ನು ಕೇಳಿದರು. ನಾನು ಅವರಿಗೆ ಆ ಫೈಲನ್ನು ಕೊಟ್ಟೆ, ಅವರು ನಾನು ಅದರಲ್ಲಿ ಹಾಕಿರುವ ಸ್ಕೆಚ್ ಗಳನ್ನು ನೋಡಿದರು. ನಾನು ಏನನ್ನು ತ್ತಾರೋ ಎಂದು ಗಾಬರಿಪಟ್ಟೆ ಆದರೆ ಅವರು ಆಗಲಿ ದಿನಾಲು ಬಂದು ವರ್ಕಮಾಡು ಎಂದು ಹೇಳಿಬಿಟ್ಟರು. ಇದರಿಂದ ನನಗಂತೂ ತುಂಬಾ ಸಂತೋಷವಾಯಿತು. ಪ್ರತಿ ದಿನ ಬೆಳಗ್ಗೆ ಎದ್ದು ನನ್ನ ಎಲ್ಲ ಕೆಲಸಗಳನ್ನು ಮುಗಿಸಿಕೊಂಡು ಏಳು ಗಂಟೆಗೆ ನೂತನ ಕಲಾಮಂದಿರಕ್ಕೆ ಬಂದು ವರ್ಕ ಮಾಡಹತ್ತಿದ್ದೆ ಈ ಕಲಾಶಾಲೆಯ ಸಮಯ ಬೆಳಗ್ಗಿ ಎಂಟು ಗಂಟೆಯಿಂದ ಮಧ್ಯಾಹ್ನ ಒಂದು ಗಂಟೆಯವರೆಗೆ ಇತ್ತು. ನಾನು ದಿನಾಲು ಬೆಳಗ್ಗೆ ಏಳು ಗಂಟೆಗೆ ಹೋಗಿ ಒಂದು ಹಳೆ ಬಟ್ಟೆಯನ್ನು ತೆಗೆದುಕೊಂಡು ಮಣ್ಣಿನಿಂದ ಮಾಡಿದ ಮೂರ್ತಿಗಳನ್ನು ಜಾಡಿಸಿ, ಅವುಗಳಲ್ಲಿ ಒಂದನ್ನು ನನ್ನೆದುರಿಗೆ ಕಾಣುವಂತೆ ಇಟ್ಟುಕೊಂಡು ದಿನಾಲು ಪೆನ್ಸಿಲ್ ಡ್ರಾಯಿಂಗ್ ನಿಂದ, ನಂತರ ಜಲವರ್ಣದಿಂದ ಅಭ್ಯಾಸ ಮಾಡುತ್ತಿದ್ದೆ. ದಂಡಾವತಿಮಠರವರು

ಅದರಲ್ಲೇನಾದರೂ ತಪ್ಪುಗಳಿದ್ದರೆ ಆಗಾಗ ಬಂದು ತಿಳಿ ಹೇಳುತ್ತಿದ್ದರು. ಎಂಟು ಗಂಟೆಯಾದ ಕೂಡಲೆ ಒಬ್ಬೊಬ್ಬರು ಕಲಾಶಾಲೆಗೆ ಬರುತ್ತಿದ್ದರು. ಅವರು ಬರುವಷ್ಟರೊಳಗೆ ನಾನು ನಿನ್ನ ಅರ್ಧವರ್ಕ ಮುಗಿಸಿಬಿಟ್ಟಿರುತ್ತಿದ್ದೆ. ಆಗ ಎಲ್ಲ ವಿಧ್ಯಾರ್ಥಿಗಳು ಬಂದು ತಮ್ಮ ತಮ್ಮ ಕೆಲಸಗಳಲ್ಲಿ ತೊಡಗುತ್ತಿದ್ದರು. ನಾನು ಒಂಬತ್ತು ಗಂಟೆಯವರೆಗೆ ಅಲ್ಲಿ ವರ್ಕಮಾಡಿ ಒಂಬತ್ತು ಗಂಟೆಗೆ ಅಲ್ಲಿಂದ ನೇರವಾಗಿ ಜೆ.ಜೆ.ಕಲಾಶಾಲೆಗೆ ಹೊರಟು ಬಿಡುತ್ತಿದ್ದೆ ಹೀಗೆ ನನ್ನ ಬೆಳಗಿನ ಅಭ್ಯಾಸಕ್ಕೆ ದಂಡಾವತಿಮಠರವರು ಒಂದು ಅವಕಾಶವನ್ನು ಮಾಡಿಕೊಟ್ಟರು ಎಂದು ಖಂಡೇರಾವರು ಈಗಲೂ ಅದನ್ನು ನೆನಪಿಸಿಕೊಳ್ಳುತ್ತಾರೆ. ಪ್ರಾರಂಭದ ದಿನಗಳಲ್ಲಿ ಖಂಡೇರಾವರು ಆರ್ಥಿಕವಾಗಿ ಬಿಕ್ಕಟ್ಟನ್ನು ಎದುರಿಸಬೇಕಾಯಿತು. ಇವರ ತಂದೆಯವರು ಇವರಿಗೆ ತಿಂಗಳ ಖರ್ಚಿಗಾಗಿ ಕೇವಲ ನೂರು ರೂಪಾಯಿಗಳನ್ನು ಕೊಡುತ್ತಿದ್ದರು. ಅದರಲ್ಲೇ ಇವರು ಎಲ್ಲ ಖರ್ಚುಗಳನ್ನು ನಿಭಾಯಿಸಬೇಕಾಗುತ್ತಿತ್ತು. ಇದರಿಂದ ಖಂಡೇರಾವರಿಗೆ ಏನು ಮಾಡಬೇಕೆಂಬುದು ತೋಚುತ್ತಿರಲಿಲ್ಲ. ಇವರು ಆಗಾಗ ತಮ್ಮ ನೋವು-ನಲಿವುಗಳನ್ನು ದಂಡಾವತಿಮಠರವರೆದುರು ಹೇಳಿಕೊಳ್ಳುತ್ತಿದ್ದರು. ದಂಡಾವತಿಮಠರವರೂ ಖಂಡೇರಾವರಿಗೆ ಎಷ್ಟೋ ಸಲ ಸಹಾಯ-ಸಹಕಾರ ನೀಡಿದ್ದುಂಟು ಇದನ್ನು ಸ್ವತಃ ಖಂಡೇರಾವರೇ ಹೇಳಿಕೊಳ್ಳುತ್ತಾರೆ.

ಖಂಡೇರಾವರು ಅಭ್ಯಾಸದಲ್ಲಿ ತೊಡಗಿ ಒಂದು ವರ್ಷವನ್ನು ಕಳೆಯುತ್ತಿದ್ದಂತೆಯೇ ಇವರ ದಿನನಿತ್ಯದ ಕೆಲಸಗಳಲ್ಲಿಯೂ ವೃದ್ಧಿಯಾಗತೊಡಗಿತ್ತು. ಪೇಠಿಯವರು ಅಂಗಡಿಯಲ್ಲಿದ್ದುಕೊಂಡು ಇವರಿಗೆ ವರ್ಕ ಮಾಡುವದಕ್ಕೆ ಸ್ಥಳದ ಅಭಾವ , ಆ ಜಾಗ ತುಂಬ ಇಕ್ಕಟ್ಟಾಗಿತ್ತು. ಅಲ್ಲಿ ವರ್ಕ ಮಾಡಲು ಸಾಧ್ಯವಾಗುತ್ತಿಲ್ಲವಾದಕಾರಣ ಮಿತ್ರರಾದ ಶಂಕರ ಪುಣಂಚಿತ್ತಾಯಾ , ಶರ್ಮಾ ಇವರು ರಾಜಸ್ಥಾನದವರು. ಮತ್ತು ಖಂಡೇರಾವರು ಮೂರು ಜನ ಕೂಡಿಕೊಂಡು ಒಬ್ಬ ಪರಿಚಿತದವರನ್ನು ಕರೆದುಕೊಂಡು ರೂಮು ನೋಡಲು ಹೋದರು ಜೆ.ಜೆ.ಕಲಾಶಾಲೆಯ ಸಮಿಪದಲ್ಲೇ ಚೀರಾಬಜಾರ ಎನ್ನುವ ಏರಿಯಾದಲ್ಲಿ ಗಿರಗಾಂವ ಎಂಬಲ್ಲಿ ಒಂದು ರೂಮನ್ನು ನೋಡಿದರು. ಆಗ ಮುಂಬೈಯಲ್ಲಿ ಯಾರೂ ಬಾಡಿಗೆಗೆಂದು ರೂಮುಗಳು ಕೊಡುತ್ತಿರಲಿಲ್ಲ ರೂಮು ಸಿಗಬೇಕೆಂದರೆ ಬಹಳ ಕಷ್ಟವಿತ್ತು. ಅದೂ ಪರಿಚಿತದವರನ್ನು ಕರೆದುಕೊಂಡು ಹೋಗಿದ್ದರಿಂದ ಬಾಡಿಗೆಗೆ ರೂಮು ದೊರೆಯಿತು. ಜೆ.ಜೆ. ಕಲಾಶಾಲೆಗೆ ಹೋಗಲು ಹತ್ತಿರವಾಗುತ್ತಿತ್ತು. ಅಲ್ಲದೇ ಸ್ಕೆಚ್‌ಗಳನ್ನು ಮಾಡಲು ವಿ.ಟಿ ಸ್ಟೇಷನ್‌ಗೆ ಹೋಗಲು ಸಮೀಪವಾಗುತ್ತಿತ್ತು. ಎಲ್ಲ ರೀತಿಯಿಂದಲೂ ಸಮೀಪವಾಗುತ್ತಿತ್ತು. ಇವರ ಎಲ್ಲ ಸ್ನೇಹಿತರಿಗೆ ಇವರು ರೂಮು ಹಿಡಿದಿದ್ದನ್ನು ನೋಡಿ ಅವರಿಗೆ ಆಶ್ಚರ್ಯವಾಗುತ್ತಿತ್ತು. ಯಾಕೆಂದರೆ ಅಭ್ಯಾಸಕ್ಕೆಂದು ಬೇರೆ ಬೇರೆ ಕಡೆಗಳಿಂದ ಬಂದ ಎಲ್ಲರೂ ಯಾರಾದರೂ ಪರಿಚಿತದವರ ಮನೆಯಲ್ಲಿ ಉಳಿದುಕೊಳ್ಳುತ್ತಿದ್ದರು. ಆಗ ಮುಂಬೈಯಂಥ ದೊಡ್ಡ ಸಿಟಿಯಲ್ಲಿ ರೂಮುಗಳನ್ನು ಹಿಡಿದುಕೊಂಡು ಓದುವದು ಸುಲಭದ ಮಾತಾಗಿರಲಿಲ್ಲ.

ಸ್ನೇಹಿತರ ಬಳಗ :

ತಮ್ಮ ಒಂದು ವರ್ಷದ ಅಭ್ಯಾಸದ ಅವಧಿಯನ್ನು ಕಳೆದು ,ಮುಂದೆ ಎರಡನೇ ವರ್ಷಕ್ಕೆ ಕಾಲಿಟ್ಟರು. ಈ ಅವಧಿಯಲ್ಲಿ ಅವರಿಗೆ ಮೃಘಾಂಕ ಜೋಷಿ, ಗೋಪಾಲ ಅಡಿವೀರೇಕರ್, ಚವ್ಹಾಣ, ವರ್ಮಾ, ಮೆನನ್, ಪರದೇಶಿ , ವಾಮನ್ ಚಿಂಚೋಳಕರ್ ಇಂಥ ಹಲವಾರು ಸ್ನೇಹಿತರ ಪರಿಚಯವಾಯ್ತು. ಇವರಲ್ಲಿ ಹೆಚ್ಚಿನವರು ಮುಂಬೈನವರೇ ಆಗಿದ್ದರು. ಶೆಣೈರವರ ಪರಿಚಯವಂತೂ ಮೊದಲೇ ಇತ್ತು. ಇವರೆಲ್ಲರ ಒಡನಾಟದಿಂದ ಖಂಡೇರಾವರು ಅಭ್ಯಾಸ ಮಾಡುವದರಲ್ಲಿಯೂ ಯಾರಿಗೇನು ಕಮ್ಮಿ ಇಲ್ಲ ಎನ್ನುವಷ್ಟರ ಮಟ್ಟಿಗೆ ತಮ್ಮನ್ನು ತೊಡಗಿಸಿಕೊಂಡಿದ್ದರು.

ಅಧ್ಯಾಪಕವರ್ಗ, ಬೋಧನಾಪದ್ದತಿ :

ಸರ್.ಜೆ.ಜೆ. ಕಲಾಶಾಲೆಯಲ್ಲಿಯ ಅಧ್ಯಾಪಕ ವರ್ಗ ಬ್ರಿಟಿಷ ಡೈರೆಕ್ಟರರವರ ಕೆಳಗೆ ಪಳಗಿದಂಥವರಾಗಿದ್ದರಿಂದ ಅದೇಶಿಸ್ತು ,ರೀವಿ, ಕಾರ್ಯನಿಷ್ಟೆ ಯಾವುದೇ ಕಾರ್ಯಗಳಿರಲಿ ನಿಯಮಬದ್ದವಾಗಿ ನಡೆಯಬೇಕು ಮತ್ತು



ಚಿತ್ರ 1. ಖ್ಯಾತ ಕಲಾವಿದ ಎಂ.ಎಫ್.ಹುಸೇನ್ ಮತ್ತು ಸಹಕಲಾವಿದರೊಂದಿಗ ಜಿ .ಎಸ್. ಖಂಡೇರಾವ



ಚಿತ್ರ 2. ಖ್ಯಾತ ಕಲಾವಿದ ಎಸ್. ಎಂ.ಪಂಡಿತರಿಂದ ಸಲಹೆ ಪಡೆಯುತ್ತಿರುವ ಖಂಡೇರಾವ

ಅಹಿತಕರ ವಾತಾವರಣವನ್ನು ಎಂದೂ ಸಹಿಸುವಂಥವರಲ್ಲ ಸರ್. ಜೆ.ಜೆ. ಸ್ಕೂಲ್ ಆಫ ಆರ್ಟನ ನಿಯಮಕ್ಕೆ ಅನುಗುಣ ವಾಗಿ ಮನಸ್ಸುಕೊಟ್ಟು ಕಲಿಯುತ್ತಿದ್ದರು. ಇವರಿಗೆ ಕಲಿಸತಕ್ಕ ಗುರುಗಳು ಸಹ ಅಂಥವರೆ, ದಪ್ಪ ಮೀಸೆಯ ಅವರ ಗಂಭೀ ರ ಮುಖ ಮುದ್ರೆಯನ್ನು ನೋಡಿದರೆ ಸಾಕು, ಭಯ ಭಕ್ತಿಯಿಂದ ಮಸ್ತಕವು ತಾನೇ ತಾನಾಗಿ ಬಾಗುತ್ತಿತ್ತು. ಅಂದಿನ ಆಗು ರುಗಳ ಪೋಷಾಕು ಸಹಿತ ಅಷ್ಟೇ ರೀವಿಯಿಂದ ಇರುತಿತ್ತು. ಆಗ ನಮಗೆ ಸೋಲಾಪುರಕರ್, ಪಳಸೀಕರ್, ಬಾಬುರಾವ ಸಡವೇಲ್‌ಕರ್, ಕದಮ್ ಎಂಬುವವರು ಗುರುಗಳಾಗಿದ್ದರು. ಖಂಡೇರಾವರು ಮೊದಮೊದಲು ಒಬ್ಬಂಟಿಗರಾಗಿಯೇ ತಮ್ಮ ಕಲಾಕ್ರೀಯೆಯಲ್ಲಿ ತೊಡಗುತ್ತಿದ್ದರು. ಆದರೆ ಎರಡನೆ ವರ್ಷಕ್ಕೆ ಬಂದ ಮೇಲೆ ಗುರುಗಳ ಜೊತೆ ಮಾತನಾಡುವ ದು, ಅವರು ಹೇಳಿಕೊಟ್ಟ ವರ್ಕನ್ನು ಮಾಡಿ ತೋರಿಸುವದು. ಇವುಗಳ ಜೊತೆಗೆ ಮಣ್ಣಿನಿಂದ ತಯಾರಿಸಿದ ಮೂರ್ತಿ ಗಳನ್ನು ಎದುರಿಗಿಟ್ಟುಕೊಂಡು ಚಿತ್ರಿಸುವದು. ಆ ಒಂದು ಚಿತ್ರವನ್ನು ಬೇರೆ ಬೇರೆ ರೀತಿಯಿಂದ ಹತ್ತು ಹದಿನೈದು ಸಲ ವಾದರು ಚಿತ್ರಿಸಬೇಕಾಗುತ್ತಿತ್ತು. ಮೊದಲು ರೇಖೆಯಿಂದ ಮೂರ್ತಿಯ ಹೊರಮೈಯನ್ನು ಚಿತ್ರಿಸುವದು. ಐದಾರು ಬಾರಿ ರೇಖೆಗಳಿಂದ ಚಿತ್ರಿಸಿದ ಮೇಲೆ ಅದು ಸರಿಯೆಂದು ತೀರ್ಮಾನವಾದ ಮೇಲೆ ಮತ್ತೆ ಅದರಲ್ಲಿ ಬೆಳಕು-ನೆರಳುಗಳ ನ್ನು ಮಾಡಲು ತಿಳಿಸುತ್ತಿದ್ದರು. ಹೀಗೆ ಇಲ್ಲಿ ಯಾವುದೇ ಚಿತ್ರವಿರಲಿ, ಚಿತ್ರಿಸಬೇಕಾದರೆ ಮೊದಲು ಅದರ ಗುಣಗಳನ್ನು ಸಂಪೂರ್ಣವಾಗಿ ತಿಳಿದುಕೊಳ್ಳಬೇಕು. ತಿಳಿದುಕೊಂಡ ಮೇಲೆ ಚಿತ್ರಗಳ ರಚನೆಯಲ್ಲಿ ತೊಡಗಬೇಕು ಎಂಬುದು ಗುರು ಗಳ ಕಟ್ಟುನಿಟ್ಟಾದ ಆಜ್ಞೆಯಾಗಿತ್ತು. ಇದಲ್ಲದೆ ಸಂಯೋಜನೆಗೆ (Composition)ಇಲ್ಲಿ ಹೆಚ್ಚು ಮಹತ್ವವನ್ನು ಕೊಡುತ್ತಿದ್ದರು. ಸಂಯೋಜನೆ ಇದು ಮೇಜರ ಸಬಜಕ್ಟ ಆಗಿತ್ತು. ಇದರಲ್ಲಿ ಹೆಚ್ಚಾಗಿ ಮನುಷ್ಯರ ಚಿತ್ರಗಳಿಂದ ಕೂಡಿದ ಚಿತ್ರಗಳನ್ನು ಚಿತ್ರಿಸುತ್ತಿದ್ದೆವು. ಅಂದರೆ ಚಿತ್ರದಲ್ಲಿ ಯಾವಭಾಗ ಎಲ್ಲಿ ಹೇಗೆ ಕೂಡಿಸಬೇಕೆಂಬುದು ಹೇಳಿಕೊಡುತ್ತಿದ್ದರು. ಸಂಯೋಜನ ಚಿತ್ರಗಳನ್ನುಮಾಡುವ ಮೊದಲು ಪೆನ್ಸಿಲ್ ನಿಂದ ಡ್ರಾಯಿಂಗ್ ಮಾಡಿಕೊಳ್ಳಬೇಕು ನಂತರದಲ್ಲಿ ನೆರಳು-ಬೆಳಕಿನ ಭಾಗವನ್ನು ತೋರಿಸಿ ಒಂದು ಚಿತ್ರವನ್ನು ಮಾಡಿ ಆಮೇಲೆ ಜಲವರ್ಣದಲ್ಲಿ, ತೈಲವರ್ಣದಲ್ಲಿ ಚಿತ್ರಗಳನ್ನು ರಚಿಸುತ್ತಿದ್ದೆವು. ಇಲ್ಲಿ ಯಾವುದೇ ಚಿತ್ರವನ್ನು ನಾವು ಚಿತ್ರಸಬೇಕಾದರೆ ಮೊದಲು ಆ ಚಿತ್ರವನ್ನು ಪೆನ್ಸಿಲ್ ನಿಂದ ರಚಿಸಿ ತೋರಿಸಬೇಕು. ಗುರುಗಳು ಅದನ್ನು ನೋಡಿದ ಮೇಲೆ ಯಾವ ಯಾವ ಭಾಗಕ್ಕೆ ಯಾವ ಯಾವ ಬಣ್ಣಗಳನ್ನು ಬಳಸಿಕೊಂಡು ಚಿತ್ರಸಬೇ ಕೆಂಬುದನ್ನು ನಮಗೆ ಹೇಳುತ್ತಿದ್ದರು. ಸ್ವತಃ ಗುರುಗಳೂ ಕೂಡ ವಿಧ್ಯಾರ್ಥಿಗಳ ಜೊತೆ ಕುಳಿತುಕೊಂಡು ವರ್ಕಮಾಡುತ್ತಿದ್ದ ರು. ಇಂಥ ಒಂದು ಶಿಸ್ತಿನ ಭೋಧನಾ ಕ್ರಮ ಅಲ್ಲಿತ್ತು. ಎಂದು ಖಂಡೇರಾವರು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ.

ಗುರುಗಳಾದ ಪಳಸೀಕರ್‌ರವರು ಹೆಚ್ಚಾಗಿ ಜಲವರ್ಣದಿಂದ ಚಿತ್ರಗಳನ್ನು ಚಿತ್ರಿಸುತ್ತಿದ್ದರು ಇವರು ಅಂದಿನ ಪ್ರಮುಖ ಸಮಕಾಲೀನ ಕಲಾವಿದರಲ್ಲಿ ಒಬ್ಬರಾಗಿದ್ದರು. ಅವರು ಭೋಧನೆಯನ್ನು ಮಾಡುವಾಗ ಹೆಚ್ಚಾಗಿ ಜಲವರ್ಣ ದ ಬಳಕೆಯ ಬಗ್ಗೆ ಹೇಳುತ್ತಿದ್ದರು. ಯಾವ ಯಾವ ಚಿತ್ರಗಳಿಗೆ ಯಾವ ಯಾವ ರೀತಿ ಬಣ್ಣಗಳನ್ನು ಬಳಸಿಕೊಂಡು ಚಿತ್ರಿಸ ಬೇಕು. ಒಂದು ವೇಳೆ ನಿಸರ್ಗಚಿತ್ರವಿದ್ದರೆ ಆ ಒಂದು ದೃಶ್ಯದ ದೂರ ಸಮೀಪಗಳನ್ನು ಸೂಚಿಸುವಂತೆ ಪಾರದರ್ಶಕ ವರ್ಣ ಗಳನ್ನು ಬಳಸಿ ಚಿತ್ರರಚಿಸಬೇಕು. ನಿಸರ್ಗದಲ್ಲಿರುವ ವಸ್ತುಗಳನ್ನು ಗಿಡ- ಮರ ಹೂ-ಬಳ್ಳಿ ಮೇಲಿನ ಆಕಾಶದ ಭಾಗದ ಲ್ಲಿ ಯಾವ ರೀತಿಯಾಗಿ ಬಣ್ಣಗಳನ್ನು ಲೇಪಿಸಬೇಕೆನ್ನುವದನ್ನು ಕ್ಲಾಸಿನಲ್ಲಿ ಸ್ವತಃ ತಾವೇ ಒಂದು ಚಿತ್ರದ ಉದಾಹರಣೆ ಯೊಂದಿಗೆ ಚಿತ್ರಿಸಿ ತೋರಿಸುತ್ತಿದ್ದರು. ಖಂಡೇರಾವರು ಮೊದಲಿನಿಂದಲೇ ನಿಸರ್ಗ ಚಿತ್ರದಲ್ಲಿ ಒಲುವು ಹೊಂದಿದವರಾ ಗಿದ್ದರಿಂದ ಗುರುಗಳಾದ ಪಳಸೀಕರವರು ನಿಸರ್ಗ ಚಿತ್ರದ ಬಗ್ಗೆ ಅದರ ಪ್ರತಿಯೊಂದು ಗುಣಗಳು, ಬಣ್ಣಗಳನ್ನು ಬಳಸುವ ರೀತಿಯನ್ನು ಹೇಳಿಕೊಟ್ಟಿದ್ದರಿಂದ ಖಂಡೇರಾವರಿಗೆ ನಿಸರ್ಗಚಿತ್ರಗಳ ರಚನೆಯಲ್ಲಿ ಆಸಕ್ತಿಯು ಹೆಚ್ಚಾಯಿತು. ಹೀಗಾಗಿ ಅವರು ಬೆಳಗ್ಗೆ ಬೇಗನೆ ಎದ್ದು ತಮ್ಮ ಬೆಳಗಿನ ಎಲ್ಲ ಕೆಲಸಗಳನ್ನು ಮುಗಿಸಿಕೊಂಡು ಬೆಳಗ್ಗೆ ಏಳು ಗಂಟೆಗೆ ನಿಸರ್ಗಚಿತ್ರರ ಚನೆಗಾಗಿ ರೂಮಿನಿಂದ ಹೊರಬೀಳುತ್ತಿದ್ದರು.

ಮುಂಬೈಮಹಾನಗರದ ಪ್ರಮುಖ ಬೀದಿಗಳು, ಸುಂದರವಾದ ಕಟ್ಟಡಗಳ ಅವಶೇಷಗಳು ಇವರ ನಿಸರ್ಗ ಚಿತ್ರ ದ ಪ್ರಮುಖ ತಾಣಗಳಾದವು. ಇದಲ್ಲದೇ ಮುಂಬೈಯಲ್ಲಿ ಚೌಪಾಟಿಯೆಂದು ಬಂದು ಭಾಗದ ಹೆಸರು ಇಲ್ಲಿ ಅನೇಕ ಹಳೆ ಯಕಾಲದ ಕಟ್ಟಡಗಳ ಅವಶೇಷಗಳಿದ್ದವು. ಖಂಡೇರಾವರು ಇಲ್ಲಿಯೂ ಕೂಡ ಒಂದು ಭೂ ದೃಶ್ಯವನ್ನು ಚಿತ್ರಸುವ

ರೂಡಿಯಾಗಿಸಿಕೊಂಡಿದ್ದರು ದಿನಾಲು ಬೆಳಗ್ಗೆ ಏಳು ಗಂಟೆಯಿಂದ ಒಂಬತ್ತು ಗಂಟೆಯವರೆಗೆ ಒಂದು ನಿಸರ್ಗಚಿತ್ರವನ್ನು ಮಾಡಿಕೊಂಡೇ ಜೆ.ಜೆ.ಕಲಾಶಾಲೆಗೆ ಹೋಗುತ್ತಿದ್ದರು. ಕ್ಲಾಸಿನಲ್ಲಿ ಗುರುಗಳಾದ ಪಳಸೀಕರ್‌ರವರಿಗೆ ತಾವು ತೆಗೆದ ಭೂದೃಶ್ಯದ ಚಿತ್ರವನ್ನು ತೋರಿಸುತ್ತಿದ್ದರು. ಗುರುಗಳಾದ ಪಳಸೀಕರ್‌ರವರು ಕೆಲವೊಂದು ಸಲ ಇವರ ಭೂ ದೃಶ್ಯದ ಚಿತ್ರಗಳನ್ನು ನೋಡಿ ಆಶ್ಚರ್ಯವೂ ಪಟ್ಟಿದ್ದುಂಟು. ಹೀಗೆ ದಿನಾಲು ನಿಸರ್ಗಚಿತ್ರದ ಜೊತೆಗೆ ಕ್ಲಾಸಿನಲ್ಲಿ ಹೇಳುತ್ತಿದ್ದ ವರ್ಕಗಳನ್ನು ಮಾಡುತ್ತಾ ಕಾಲ ಕಳೆಯುವದು ಮಧ್ಯಾಹ್ನವಾದ ಮೇಲೆ ಊಟಕ್ಕೆಂದು ಗೆಳೆಯರಾದ ಎ.ಎಸ್. ಪಾಟೀಲರೊಂದಿಗೆ ಕೂಡಿಕೊಂಡು ತಮ್ಮ ಮಾಮೂಲಿ ಖಾನಾವಳಿಗೆ ಹೋಗುತ್ತಿದ್ದರು. ಊಟವನ್ನು ಮುಗಿಸಿ ಮತ್ತೆ ಕಾಲೇಜಿಗೆ ಬಂದರೆಂದರೆ ಐದು ಗಂಟೆಯವರೆಗೂ ಕೆಲಸ ಮಾಡುತ್ತಿದ್ದರು ಐದು ಗಂಟೆಗೆ ಕಾಲೇಜು ಅವಧಿ ಮುಗಿತೆಂದರೆ ಅಲ್ಲಿಂದ ಸಿದಾ ವಿ.ಟಿ. ಸ್ಟೇಷನಗೆ ಬರುವದು, ಸಾಯಂಕಾಲ ಏಳು ಗಂಟೆಯವರೆಗೆ ಅಲ್ಲಿ ಸ್ಕೆಚ್‌ಗಳನ್ನು ಮಾಡಿಕೊಂಡು , ಬರುವಾಗ ಊಟವನ್ನು ಮುಗಿಸಿಕೊಂಡು ರೂಮಿನ ಕಡೆಗೆ ಹೊರಟುಬಿಡುವರು. ಮಿತ್ರರಾದ ಪುಣಂಚಿತ್ತಾಯ ಮತ್ತು ಶರ್ಮಾರವರ ಜೊತೆ ಕೂಡಿಕೊಂಡು ರಾತ್ರಿ ಹತ್ತುಗಂಟೆಯವರೆಗೆ ಬೇರೆ ಬೇರೆ ವಿಷಯಗಳ ಬಗ್ಗೆ ಚರ್ಚೆ ಮಾಡುವದು , ಕಲೆಯ ಆಗುಹೋಗುಗಳ ಬಗ್ಗೆತಿಳಿದುಕೊಳ್ಳುವದು , ಅಂದು ತಾವು ಚಿತ್ರಿಸಿದ ಚಿತ್ರಗಳ ಬಗ್ಗೆ ಅವಲೋಕಿಸುವದು ಇದು ಇವರೆಲ್ಲರ ರಾತ್ರಿ ಮಲಗುವ ಮೊದಲಿನ ಕಾರ್ಯಕ್ರಮಗಳಾಗಿದ್ದವು.

ಮುಂಬೈನ ಸಾಂಸ್ಕೃತಿಕ ವಾತಾವರಣ :

ಆಗಿನ ಕಾಲದಲ್ಲಿ ಮಹಾರಾಷ್ಟ್ರ ರಾಜ್ಯವಂತೂ ಇಡೀ ದೇಶದಲ್ಲೇ ಸಾಂಸ್ಕೃಸತಿಕ ಕೇಂದ್ರವೆನಿಸಿಕೊಂಡಿತ್ತು. ಆಗಿನ ಅವಧಿಯಲ್ಲಿ ಮುಂಬೈಯಲ್ಲಿ ದಿನಾಲು ಏನಾದರು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಇವುಗಳಲ್ಲಿ ರಾಷ್ಟ್ರದ ಮಹಾನ ಸಂಗೀತಕಲಾವಿದರಿಂದ ಶಾಸ್ತ್ರೀಯ ಸಂಗೀತ, ಹಿಂದೂಸ್ಥಾನಿ ಸಂಗೀತ, ಲಘುಸಂಗೀತ, ಜುಗಲ್‌ಬಂದಿ ಹೀಗೆ ಹತ್ತು ಹಲವು ರೀತಿಯ ಕಾರ್ಯಕ್ರಮಗಳು, ಸಮಾರಂಭಗಳು ದಿನಾಲು ಒಂದಲ್ಲ ಒಂದು ಕಡೆ ನಡೆಯುತ್ತಿದ್ದವು. ಇವುಗಳಲ್ಲದೇ ಮುಂಬೈಯಲ್ಲಿ ಹಲವಾರು ಕಲಾಗ್ಯಾಲರಿಗಳಿವೆ. ಇಂದಿಗೂ ಮುಂಬೈಯನ್ನು ಕಲಾ ಗ್ಯಾಲರಿಗಳ ನಗರವೆಂದೇ ಕರೆಯುವಷ್ಟುಹೆಸರುವಾಸಿಯಾಗಿದೆ. ಕಲಾಗ್ಯಾಲರಿಗಳಲ್ಲಿ ಹಿರಿಯಕಲಾವಿದರ ಸಮಕಾಲಿನ ಕಲಾವಿದರೆ ಕಲಾ ಪ್ರದರ್ಶನಗಳು ನಡೆಯುತ್ತಿದ್ದವು. ಅಲ್ಲದೇ ಪ್ರಾತ್ಯಕ್ಷಿಕೆಗಳು ನಡೆಯುತ್ತಿದ್ದವು. ಮುಂಬೈಯಲ್ಲಿ ಯಾವುದೇ ರೀತಿಯ ಕಲಾ ಚಟುವಟಿಗಳು ನಡೆದರೆ ಜೆ.ಜೆ.ಕಲಾಶಾಲೆಗೆ ಒಂದು ನೋಟಿಸು ಬರುತ್ತಿತ್ತು. ಇದರಿಂದ ಕಲಾಶಾಲೆಯ ವಿದ್ಯಾರ್ಥಿಗಳೆಲ್ಲರೂ ಕಲಾ ಗ್ಯಾಲರಿಗಳಿಗೆ ಭೇಟಿಕೊಟ್ಟು ಹಿರಿಯ ಕಲಾವಿದರು ರಚಿಸಿದ ಕಲಾಕೃತಿಗಳನ್ನು ನೋಡುವದು, ಕಲಾವಿದರು ಮಾಡುವ ಪ್ರಾತ್ಯಕ್ಷಿಕೆಗಳನ್ನು ನೋಡುವದು ಸ್ವತಃ ಕಲಾವಿದರಿಂದ ಕಲೆಯ ಬಗ್ಗೆ ಚರ್ಚೆ ಮಾಡುವದರ ಮೂಲಕ ಏನಾದರೂ ತಿಳಿದುಕೊಳ್ಳುವದು ಇಂಥ ಒಂದು ವ್ಯವಸ್ಥಿತವಾದ ಅವಕಾಶ ಮುಂಬೈಯಲ್ಲಿತ್ತು.

ಖಂಡೇರಾವರು ಹೇಳುವ ಹಾಗೆ ಮುಂಬೈಯಲ್ಲಿ ಜಹಾಂಗೀರ ಆರ್ಟಗ್ಯಾಲರಿ ತುಂಬ ಪ್ರಸಿದ್ದಿಪಡೆದ ಗ್ಯಾಲರಿಯಾಗಿದೆ. ಇಲ್ಲಿ ದೇಶದ ಅನೇಕ ಕಡೆಗಳಲ್ಲಿರುವ ಕಲಾವಿದರು ತಮ್ಮ ಕಲಾಕೃತಿಗಳ ಪ್ರದರ್ಶನಗಳನ್ನು ಏರ್ಪಡಿಸುತ್ತಿದ್ದರು. ಕಾಲೇಜಿನಲ್ಲಿ ಗುರುಗಳು ಹೇಳುವ ಹಾಗೆ ಕಲಾಗ್ಯಾಲರಿಗಳಲ್ಲಿ ನಡೆಯುವ ಹಿರಿಯ ಕಲಾವಿದರ ಕಲಾ ಪ್ರದರ್ಶನಗಳು, ಪ್ರಾತ್ಯಕ್ಷಿಕೆಗಳನ್ನು ನೋಡುವುದರಿಂದ ಇಂದಿನ ಸಮಕಾಲೀನ ಕಲೆಯ ವಾತಾವರಣ , ಕಲೆಯ ಆಗು ಹೋಗುಗಳ ಬಗ್ಗೆನಮಗೆ ಅರಿವಾಗುವುದಲ್ಲದೇ ಇಂದಿನ ಆಧುನಿಕ ಯುಗದಲ್ಲಿ ಕಲೆಯು ಯಾವ ರೀತಿಯಲ್ಲಿ ವ್ಯಾಪಕವಾಗಿ ಬೆಳೆಯುತ್ತಿದೆ. ಇದನ್ನು ನಾವು ಯಾವ ರೀತಿಯಾಗಿ ಅಳವಡಿಸಿಕೊಳ್ಳಬೇಕು ಎಂದು ತಿಳಿಯುವದು ಹಾಗೂ ನಾವು ಆ ವಾತಾವರಣದಲ್ಲಿ ಕಾಲಿಡುವುದ ಕ್ಕೆ ಒಂದು ಅನುಕೂಲ ಮಾಡಿಕೊಡುತ್ತವೆ. ಎಂದು ಗುರುಗಳು ಹೇಳುತ್ತಿದ್ದುದ್ದನ್ನು ಖಂಡೇರಾವರು ನೆನಪಿಸಿಕೊಳ್ಳುತ್ತಾರೆ.

ಬಿ. ಪ್ರಭಾ , ಆಲ್‌ಮೇಲ್‌ಕರ್, ಎನ್.ಎಸ್.ಬೇಂದ್ರೆ ಬಾಬುರಾವ್ ಸಡ್ವೆಲ್‌ಕರ್, ಮಾಧವರಾವ ಸಾತ್ವೋಲೆಕರ್, ಪಳಸೀಕರ್, ಕೆ.ಕೆ. ಹೆಬ್ಬಾರ , ಎಂ. ಎಫ್ ಹುಸೇನ್, ಎಸ್. ಎಂ.ಪಂಡಿತರಂತಹ ಮುಂತಾದ ಕಲಾವಿದರು ಆಗಿನ ಕಾಲದ ಪ್ರಸಿದ್ಧಕಲಾವಿದರಾಗಿದ್ದರು. ಇವರು ಅಲ್ಲಲ್ಲಿ ಕಲಾಪ್ರದರ್ಶನಗಳನ್ನು, ಪ್ರಾತ್ಯಕ್ಷಿಕೆಗಳನ್ನು ಮಾಡುತ್ತಾ ಯಾವಾಗಲೂ ಕ್ರೀಯಾಶೀಲರಾಗಿರುತ್ತಿದ್ದರು. ಇಂಥ ಕಲಾವಿದರು ಕೈಗೊಂಡ ಕಲಾಪ್ರದರ್ಶನಗಳನ್ನು ನೋಡುವುದೆಂದರೇ ಒಂದು ಭಾಗ್ಯವೆನಿಸುತ್ತಿತ್ತು. ಆಗ ಇನ್ನೊಂದು ಬಹುಮುಖ್ಯ ಪದ್ಧತಿಯೇನಿತ್ತಂದರೆ ಕಲ್ಯಾಗ್ಯಾಲರಿಗಳಲ್ಲಿ ಪ್ರದರ್ಶನಗಳನ್ನು ಮಡಬೇಕೆಂದ್ದಿರೆ ಬರೀ ಉನ್ನತ ಕಲಾವಿದರಿಗೆ ಮಾತ್ರ ಗ್ಯಾಲರಿಯಲ್ಲಿ ಕಲಾಪ್ರದರ್ಶನಗಳನ್ನು ಮಾಡುವ ಅವಕಾಶ ಕೊಡುತ್ತಿದ್ದರು. ಗ್ಯಾಲರಿಯಲ್ಲಿ ಕಲಾ ಪ್ರದರ್ಶನಗಳನ್ನು ಮಾಡಬೇಕಾದರೆ ಆ ಕ್ಷೇತ್ರದಲ್ಲಿ ಅವರು ತುಂಬಾ ಸಾಧನೆ ಮಾಡಿರಬೇಕು. ಅಂಥವರಿಗೆ ಮಾತ್ರ ಗ್ಯಾಲರಿಗಳು ಪ್ರದರ್ಶನಕ್ಕೆಂದು ಕೊಡುವ ಪದ್ಧತಿ ಆಗಿನ ಕಾಲದಲ್ಲಿತ್ತು. ಈ ನಿಯಮವನ್ನು ಅಲ್ಲಿ ಪಾಲಿಸಲೇಬೇಕಾಗುತ್ತಿತ್ತು. ಕೆ.ಕೆ. ಹೆಬ್ಬಾರರು ಆಗ ಸಮಕಾಲೀನ ಕಲಾವಿದರಲ್ಲಿ ಒಬ್ಬರಾಗಿದ್ದರು . ಇವರು ಕರ್ನಾಟಕದವರೆ ಆದರೂ ಮುಂಬೈಯಲ್ಲಿ ವಾಸವಾಗಿದ್ದರು. ಇವರು ಯಾವಾಗಲೂ ಕಲಾಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಿದ್ದರು. ಇವರ ರೇಖಾಚಿತ್ರಗಳಂತೂ ತಮ್ಮದೇ ಆದ ಶಕ್ತಿಯುತ ಶೈಲಿಯಿಂದ ಕೂಡಿದ್ದವು. ಅವುಗಳನ್ನು ನೋಡಿದ ಕೂಡಲೇ ಇವು ಹೆಬ್ಬಾರರ ರೇಖಾ ಚಿತ್ರಗಳು ಎನ್ನುವ ಮಟ್ಟಿಗೆ ಅವು ಗುರುತಿಸಿಕೊಂಡಿದ್ದವು. ಆಲ್‌ಮೆಲಕರ್‌ರವರೂ ಕೂಡ ಜಲವರ್ಣದಿಂದ ಚಿತ್ರಬಿಡಿಸುವಲ್ಲಿ ತುಂಬಾ ನಿಸ್ಸೀಮರು . ಇವರು ಆಗಾಗ ಜಲವರ್ಣದಿಂದ ಚಿತ್ರಿಸಿದ ನಿಸರ್ಗ ಚಿತ್ರ, ಸಂಯೋಜನೆಯಿಂದ ಕೂಡಿದ ಕಲಾಕೃತಿಗಳ ಪ್ರದರ್ಶನಗಳನ್ನು ಏರ್ಪಡಿಸುತ್ತಿದ್ದರು. ಇವರ ನಿಸರ್ಗಚಿತ್ರಗಳ ರಚನೆಯ ವೈಶಿಷ್ಟ್ಯವೇನೆಂದರೆ ಫುಲ್ ಇಂಪಿರಿಯಲ್‌ನ ಒಂದು ಹಾಳೆಯನ್ನು ತೆಗೆದುಕೊಂಡು ಅದನ್ನು ನೀರಿನಿಂದ ವದ್ದೆಮಾಡಿ ಮೇಲಿನಿಂದ ಬಣ್ಣವನ್ನು ಇಳಿಬಿಡುತ್ತಾ ಹೋದಂತೆಲ್ಲಾ ನೇರವಾಗಿ ಅಲ್ಲಲ್ಲಿ ಬಣ್ಣಗಳ ಚುಕ್ಕೆಗಳನ್ನಿಟ್ಟು, ದೂರ ಸಮೀಪದ ಛಾಯೆಯನ್ನು ಮೂಡಿಸುತ್ತಿದ್ದರು. ಇದು ಇವರು ಜಲವರ್ಣದಿಂದ ಚಿತ್ರಿಸುವ ಒಂದು ವೈಶಿಷ್ಟ್ಯವಾಗಿತ್ತು. ಇದಲ್ಲದೇ ಇವರು ರೇಖಾ ಚಿತ್ರಗಳನ್ನು ಚಿತ್ರಿಸುವಲ್ಲಿ ತುಂಬಾ ಪ್ರವೀಣರು.

ಬಿ.ಪ್ರಭಾರವರೂ ಆಗಾಗ್ಗೆ ತಮ್ಮ ಕಲಾ ಪ್ರದರ್ಶನಗಳಿಂದ, ಪ್ರಾತ್ಯಕ್ಷಿಕೆಗಳಿಂದ, ಸದಾ ಕಲಾಚಟುವಟಿಕೆಗಳಲ್ಲಿ ತೊಡಗುತ್ತಿದ್ದರು. ಎಂ. ಎಫ್. ಹುಸೇನರಂತೂ ಅಂದಿನ ಸಮಕಾಲಿನ ಕಲೆಯ ಪ್ರಮುಖ ಕಲಾವಿದರಲ್ಲೊಬ್ಬರಾಗಿದ್ದರು. ಮುಂಬೈಯಲ್ಲಿ ಇವರ ಕಲಾಪ್ರದರ್ಶನಗಳಂತೂ ಒಂದಲ್ಲ ಒಂದು ಗ್ಯಾಲರಿಗಳಲ್ಲಿ ನಡೆದೇ ಇರುತ್ತಿದ್ದವು. ಇವರು ಹೆಚ್ಚಾಗಿ ಹೊರದೇಶಗಳಲ್ಲಿಯೇ ಸುತ್ತಾಡುತ್ತಿದ್ದರು. ಇದಲ್ಲದೇ ಎನ್. ಎಸ್. ಬೇಂದ್ರೆ. ಇವರೂ ಕೂಡ ಅಂದಿನ ಪ್ರಮುಖ ಕಲಾವಿದರಲ್ಲೊಬ್ಬರಾಗಿದ್ದರು. "ಒಮ್ಮೆ ಇವರ ಆಧುನಿಕ ಸಂಯೋಜನಾಕಲಾಕೃತಿಗಳ ಪ್ರದರ್ಶನ ಗ್ಯಾಲರಿಯೊಂದರಲ್ಲಿ ನಡೆದಿತ್ತು. ನಾನು ಅಂದು ಆ ಗ್ಯಾಲರಿಗೆ ಕಲಾ ಪ್ರದರ್ಶನವನ್ನು ನೋಡಲಿಕ್ಕೆ ಹೋಗಿದ್ದೆ. ಗ್ಯಾಲರಿಯ ಒಳಗೆ ಹೋದೆ, ಅಲ್ಲಿ ತೂಗು ಹಾಕಿರುವ ಎಲ್ಲ ಕಲಾಕೃತಿಗಳನ್ನು ಒಂದೊಂದಾಗಿ ವೀಕ್ಷಿಸುತ್ತಾ ನಡೆದೆ. ಎಲ್ಲಾ ಕಲಾಕೃತಿಗಳನ್ನು ನೋಡಿದ ನನಗೆ ಅದರಲ್ಲಿರುವ ಕೆಲವು ಕಲಾಕೃತಿಗಳಂತೂ ತುಂಬ ಹಿಡಿಸಿದವು. ನಾನು ಗ್ಯಾಲರಿಯ ಒಳಗೆ ಹೋಗುವ ಮೊದಲು ಬೇಂದ್ರೆಯವರ ಕಲಾಕೃತಿಗಳ ಪ್ರದರ್ಶನ ನಡೆದಿದೆಯೆಂದು ಅಂದುಕೊಂಡಿರಲಿಲ್ಲ . ಪ್ರತಿದಿನ ಹ್ಯಾಗೆ ಹೋಗುತ್ತಿದ್ದೆನೋ ಹಾಗೆ ಒಳಗೆ ಹೋಗಿದ್ದೆ. ಇದಕ್ಕೂ ಮೊದಲು ಬೇಂದ್ರೆಯವರ ಹೆಸರು, ಅವರ ಬಗ್ಗೆ ಬೇರೆಯವರಿಂದ ನಾನು ತಿಳಿದುಕೊಂಡಿದ್ದೆ. ಅವರನ್ನು , ಅವರ ಕಲಾಕೃತಿಗಳನ್ನು ನಾನೆಂದೂ ನೋಡಿರಲಿಲ್ಲ. ಆದಿನ ಇದ್ದಕ್ಕಿದ್ದ ಹಾಗೆ ಗ್ಯಾಲರಿಯ ಒಳಗೆ ಹೋದ ನಾನು ಕಲಾಕೃತಿಗಳನ್ನು ನೋಡಿದರೆ ಅವು ಬೇಂದ್ರೆಯವರ ಕಲಾಕೃತಿಗಳಾಗಿದ್ದವು. ಅರೆ ಇದೆನಪ್ಪಾಸುಮ್ಮನೆ ದಿನಾಲು ಬರುವ ಹಾಗೆಬಂದಿದ್ದೆ, ಒಳಗೆ ನೋಡಿದರೆ ಬೇಂದ್ರೆಯವರ ಕಲಾಕೃತಿಗಳನ್ನು ನೋಡಿ ನನಗೆ ಒಂದು ರೀತಿಯ ಆಶ್ಚರ್ಯವೂ ಆಯಿತು ಮತ್ತು ಮನಸ್ಸಿನಲ್ಲಿ ಅಷ್ಟೇ ಸಂತೋಷವೂ ಆಯಿತು.

ನಾನು ಹೆಚ್ಚಾಗಿ ಸಂಯೋಜನಾ ಚಿತ್ರಗಳನ್ನು ಬಿಡಿಸುತ್ತಿದ್ದೆ. ಮನುಷ್ಯರ ಚಿತ್ರಗಳಿರಬಹುದು, ಪ್ರಾಣಿಗಳ ಚಿತ್ರಗಳಾಗಿರಬಹುದು. ಸಂಯೋಜನೆ ನನ್ನ ನೆಚ್ಚಿನ ವಿಷಯವಾಗಿತ್ತು. ಬೇಂದ್ರೆಯವರ ಸಂಯೋಜನಾ ಕಲಾಕೃತಿಗಳನ್ನು ನೋಡಿದ ಕೂಡಲೇ ನಾನು ಅವರ ಕಲಾಕೃತಿಗಳನ್ನು ಅನುಕರಣೆ ಮಾಡುತ್ತಿದ್ದೆ. ಇದಲ್ಲದೆ ನಾನು ನನ್ನ ಸಂಯೋಜನಾ

ಚಿತ್ರಗಳಲ್ಲಿ ಅವರ ಶೈಲಿಯನ್ನು ಅಳವಡಿಸಿಕೊಂಡೆ. ನಿಜ ಹೇಳಬೇಕಾದರೆ ಅಂದಿನ ಕಾಲದಲ್ಲಿ ಮುಂಬೈಯಲ್ಲಿ ಹಲವಾರು ಕಲಾವಿದರ ಕಲಾಕೃತಿಗಳನ್ನು ನಾನು ಅನುಕರಣೆ ಮಾಡುತ್ತಿದ್ದೆ. ಕೆಲವು ಕಲಾವಿದರ ಶೈಲಿಗಳನ್ನು ನಾನು ಮೆಚ್ಚಿಕೊಂಡಿದ್ದೆ. ಮತ್ತು ಅವುಗಳಿಂದ ನಾನು ಪ್ರಾಭಾವಿತಗೊಂಡಿದ್ದೇನೆ. ಆದರೆ ಹೆಚ್ಚಿನ ಒಂದು ಪ್ರಮಾಣದಲ್ಲಿ ನಾನು ಬೇಂದ್ರೆಯವರ ಕಲಾಕೃತಿಗಳಿಂದ ಪ್ರಾಭಾವಿತಗೊಂಡಿದ್ದೇನೆ. " ಎಂದು ಖಂಡೇರಾವರು ಹೇಳುತ್ತಾರೆ. ಇವರ ಮೊದಲಿನ ಸಂಯೋಜನಾ ಕಲಾಕೃತಿಗಳಲ್ಲಿ ನಾವು ಬೇಂದ್ರೆಯವರ ಶೈಲಿಯನ್ನು ಕಾಣಬಹುದು. ಇದಲ್ಲದೇ ಮುಂಬೈಯಲ್ಲಿ ಆಗಾಗ ಸಂಗೀತಕಲಾವಿದರು ಮತ್ತು ಚಿತ್ರಕಲಾವಿದರ ನಡುವೆ ಗಾಯನದ ಮೂಲಕ ಕಲಾಕೃತಿ ರಚಿಸುವ ಕಾರ್ಯಕ್ರಮಗಳು ನಡೆಯುತ್ತಿದ್ದವು. ಈ ರೀತಿಯಾಗಿ ಮುಂಬೈ ಮಾಹಾನಗರವು ಒಂದು ಸಾಂಸ್ಕೃತಿಕ ಕೇಂದ್ರವಾಗಿ ಬೆಳೆದು ಬಿಟ್ಟಿತ್ತು. ಹೀಗೆ ಎಲ್ಲ ರೀತಿಯಿಂದಲೂ ನಡೆಯುತ್ತಿದ್ದ ಕಲಾಚಟುವಟಿಕೆಗಳನ್ನು ನೋಡುವ ಮತ್ತು ಅದರಲ್ಲಿ ಭಾಗವಹಿಸುವ ಅವಕಾಶ ಜೆ.ಜೆ.ಕಲಾಶಾಲೆಯ ವಿದ್ಯಾರ್ಥಿಗಳಿಗಿತ್ತು. ಇಂಥ ಒಂದು ಅವಕಾಶವನ್ನು ಉಪಯೋಗಿಸಿ ಕೊಂಡ ಖಂಡೆರಾವರು ಹೆಚ್ಚಿನ ರೀತಿಯಲ್ಲಿ ಚಿತ್ರರಚನೆಯಲ್ಲಿ ತೊಡಗಿದರು. ಕೆಲವು ದಿನಗಳ ನಂತರ ಕಲಬುರ್ಗಿಯ ಇವರ ಮಿತ್ರರಾದ ಎ.ಎಸ್.ಪಾಟೀಲರವರು ಇವರ ರೂಮಿನಲ್ಲಿಯೇ ಇರತೊಡಗಿದರು. ಶಂಕರ ಪುಣಂಚಿತ್ತಾಯರವರು ಬೇರೆಕಡೆ ರೂಮು ಮಾಡಿಕೊಂಡಿದ್ದರಿಂದ ಶರ್ಮಾ, ಎ. ಎಸ್.ಪಾಟೀಲ ಮತ್ತು ಖಂಡೇರಾವರು ಮೂವರು ಜನ ಸೇರಿಕೊಂಡು ದಿನಾಲು ಬೆಳಿಗ್ಗೆ ಎದ್ದು ನಿಸರ್ಗ ಚಿತ್ರಗಳನ್ನು ಚಿತ್ರಿಸಲು ಹೋಗುತ್ತಿದ್ದರು. ಒಂದೊಂದು ಸಾರಿ ನಿಸರ್ಗಚಿತ್ರಗಳನ್ನು ಬಿಡಿಸಲಾರದ ಸಮಯದಲ್ಲಿ ಖಂಡೇರಾವರು ನೂತನಕಲಾಮಂದಿರಕ್ಕೆ ಹೆಚ್ಚಿನ ಆಭ್ಯಾಸಕ್ಕೆಂದು ಹೋಗುತ್ತಿದ್ದರು. ಅಲ್ಲಿ ಪುಣಂಚಿತ್ತಾಯ, ಶರ್ಮಾರಂತಹ ಅನೇಕ ಸ್ನೇಹಿತರೊಂದಿಗೆ ಅಭ್ಯಾಸದಲ್ಲಿ ತೊಡಗುತ್ತಿದ್ದರು ಒಂಬತ್ತುವರೆ ಯಾಯಿತೆಂದರೆ ನೇರವಾಗಿ ಜೆ.ಜೆ.ಕಲಾಶಾಲೆಗೆ ಬಂದು ಅಲ್ಲಿಯ ಕಲಾಭ್ಯಾಸದಲ್ಲಿ ತೊಡಗುತ್ತಿದ್ದರು.

ಹೀಗೆಯೇ ಒಂದೆರಡು ವರ್ಷಗಳು ಕಳೆದವು. ಖಂಡೇರಾವರು ನಿಸರ್ಗ ಚಿತ್ರಗಳನ್ನು ರಚಿಸುವದನ್ನು ರೂಢಿಯಾಗಿಸಿಕೊಂಡಿದ್ದರು. ದಿನಾಲು ಒಂದಾದರೂ ನಿಸರ್ಗ ಚಿತ್ರವನ್ನು ಚಿತ್ರಿಸುತ್ತಿದ್ದರು. ಶನಿವಾರ ಮತ್ತು ರವಿವಾರ ಬಂತೆಂದರೆ ಮಲ್‌ಬಾರ್ ಹಿಲ್ಸ್ ಎನ್ನುವ ಪ್ರದೇಶದಲ್ಲಿ ಹೋಗಿ ಸಂಜೆಯವರೆಗೂ ನಿಸರ್ಗಚಿತ್ರಗಳನ್ನು ಚಿತ್ರಿಸುತ್ತಿದ್ದರು. ಉಳಿದ ದಿನಗಳಲ್ಲಿ ಅಲ್ಲೇ ಸಮೀಪದಲ್ಲಿರುವ ಮೈದಾನಗಳಿಗೆ ಹೋಗಿ ನಿಸರ್ಗ ಚಿತ್ರಗಳನ್ನು ಚಿತ್ರಿಸುತ್ತಿದ್ದರು. ಈಗ ಖಂಡೇರಾವರ ದಿನನಿತ್ಯದ ಕೆಲಸಗಳಲ್ಲಿ ಬದಲಾವಣೆಗಳಾದವು. ದಿನಾಲು ಬೆಳಿಗ್ಗೆ ಎದ್ದಕೂಡಲೆ ನಿಸರ್ಗ ಚಿತ್ರ ರಚಿಸಲು ಹೊರಡುತ್ತಿದ್ದರು. ಊಟದಲ್ಲಿಯೂ ಸಹಿತ ಬದಲಾವಣೆಗಳಾದವು. ಅಲ್ಲೇ ಗಿರಗಾಂವ ಪ್ರದೇಶದಲ್ಲಿ ತಮ್ಮ ರೂಮಿನ ಸಮೀಪದಲ್ಲೇ ಸುಧಾಶಾಂತಿ ಎಂಬ ಹೋಟೆಲೊಂದಿತ್ತು. ಇಲ್ಲಿಯೂ ಕೂಡ ತಿಂಗಳಿಗೆ ಅರವತ್ತು ಟೋಕನ್‌ಗಳಂತೆ ಕೊಡುತ್ತಿದ್ದರು. ತಮ್ಮ ರೂಮಿನ ಸಮೀಪದಲ್ಲಿಯೇ ಈ ಹೋಟೆಲ್ ಇರುವದರಿಂದ ಖಂಡೇರಾವರು ಕೆಲವು ದಿನಗಳಿಂದ ಇಲ್ಲಿಯೇ ಊಟಮಾಡುತ್ತಿದ್ದರು. ಇಲ್ಲಿ ಊಟಮುಗಿಸಿಕೊಂಡು ಹೊರಬರುತ್ತಿದ್ದರು. ಆಗ ಧೂಧವಾಲಾ ಎಂಬ ಅಂಗಡಿಗಳು ಇರುತ್ತಿದ್ದವು. ಇಲ್ಲಿ ಐವತ್ತು ಪೈಸೆಯನ್ನು ಕೊಟ್ಟರೆ ಒಂದು ದೊಡ್ಡ ಗ್ಲಾಸ್‌ತುಂಬ ಬಿಸಿಹಾಲನ್ನು, ಅದರ ಮೇಲೆ ಕೆನೆಯನ್ನು ಹಾಕಿ ಕೊಡುತ್ತಿದ್ದರು. ಖಂಡೇರಾವರು ಹಾಲು ಕುಡಿದುಕೊಂಡು ಕಾಲೇಜಿಗೆ ಹೋಗುತ್ತಿದ್ದರು. ಮಧ್ಯೆ ವಿರಾಮದ ವೇಳೆಯಲ್ಲಿ ಹೊರಗಡೆ ಏನೂ ತಿನ್ನುತ್ತಿರಲಿಲ್ಲ. ಇದು ಇವರಲ್ಲಿ ಕಾಣುವ ಒಂದೆರಡು ವರ್ಷಗಳ ನಂತರದ ಬದಲಾವಣೆಗಳು.

ಕಲಾ ಚಟುವಟಿಕೆಗಳು :

ಅಧ್ಯಯನದ ಪ್ರಾರಂಭದಲ್ಲಿ ಖಂಡೇರಾವರು ಹೆಚ್ಚಾಗಿ ಕಲಾಪ್ರದರ್ಶನಗಳಲ್ಲಿ, ಕಲಾಸ್ಪರ್ಧೆಗಳಲ್ಲಿ ಭಾಗವಹಿಸುತ್ತಿರಲಿಲ್ಲ. ಒಂದೆರೆಡು ವರ್ಷಗಳು ಕಳೆಯುತ್ತಿದ್ದಂತೆಯೇ ಖಂಡೇರಾವರು ಮುಂಬೈಯಲ್ಲಿ ನಡೆಯುತ್ತಿರುವ ಬಾಂಬೆ ಆರ್ಟ ಸೊಸಾಯಿಟಿ ಆಫ್ ಇಂಡಿಯಾ, ಮಹಾರಾಷ್ಟ್ರ ಸ್ಟೇಟ್ ಆರ್ಟ ಎಗ್ಜಿಬಿಷನ್‌ಗಳಂತಹ ಅನೇಕ ಕಲಾ ಪ್ರದರ್ಶನ

ಮತ್ತು ಕಲಾ ಸ್ಪರ್ಧೆಗಳಿಗೆ ಕಲಾಕೃತಿಗಳನ್ನು ಕಳಿಸುತಿದ್ದರು. ಸ್ಪರ್ಧೆಗೆ, ಪ್ರದರ್ಶನಕ್ಕೆ ಕಳಿಸುತ್ತಿದ್ದ ಕಲಾಕೃತಿಗಳಲ್ಲಿ ನಿಸರ್ಗ ಚಿತ್ರಗಳನ್ನೇ ಹೆಚ್ಚಾಗಿ ಕಳಿಸುತ್ತಿದ್ದರು. ಇವರು ರಚಿಸಿದ ಮಲ್‌ಬಾರ್‌ಹಿಲ್ಸ್ ಎಂಬ ನಿಸರ್ಗಚಿತ್ರವು ಮಹಾರಾಷ್ಟ್ರ ಆರ್ಟ ಎಗ್ಷಿಬಿಷನ್ ಕಲಾ ಪ್ರದರ್ಶನದಲ್ಲಿ ಆಯ್ಕೆಯಾಗಿತ್ತು. ಆಗ ಪ್ರದರ್ಶನ ನೋಡಲಿಕ್ಕೆಂದು ಬಂದಿದ್ದ ಕೆಲವರಂತೂ ಇವರು ರಚಿಸಿದ ನಿಸರ್ಗಚಿತ್ರವನ್ನು ನೋಡಿ ತುಂಬ ಮೆಚ್ಚುಗೆ ಸೂಚಿಸಿದರು. ಆರ್ಟ ಸೊಸಾಯಿಟಿ ಆಫ್ ಇಂಡಿಯಾ ಎನ್ನುವ ಕಲಾ ಪ್ರದರ್ಶನದಲ್ಲೂ ಇವರು ಕಳಿಸಿದ ನಿಸರ್ಗ ಚಿತ್ರ ಆಯ್ಕೆಯಾಯಿತು. ಆಗಂತೂ ಖಂಡೇರಾವರಿಗೆ ಎಲ್ಲಿಲ್ಲದ ಸಂತೋಷ ಯಾಕೆಂದರೆ ಆಗಿನ ಕಾಲದಲ್ಲಿ ಇಂಥಹ ಒಂದು ದೊಡ್ಡ ಕಲಾಪ್ರದರ್ಶನದಲ್ಲಿ ಕಲಾಕೃತಿಯು ಆಯ್ಕೆಯಾಗುವದು ಅಷ್ಟುಸುಲಭದ ಮಾತಾಗಿದ್ದಿಲ್ಲ. ಇಂಥ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಕಲಾಪ್ರದರ್ಶನದಲ್ಲಿ ಕಲಾಕೃತಿಯು ಆಯ್ಕೆಯಾದರೆ ಬಹುಮಾನ ಗಳಿಸಿದಷ್ಟು ಸಂತೋಷ ಆಗುತ್ತಿತ್ತು.ಇದಲ್ಲದೇ ನೂತನ ಕಲಾ ಮಂದಿರದಲ್ಲಿ ಏರ್ಪಡಿಸುವ ಶಾಲಾ ವಾರ್ಷಿಕ ಕಲಾಪ್ರದರ್ಶನದಲ್ಲಿ ಇವರು ಸ್ಕೆಚ್‌ಗಳಿಗೆ ಮತ್ತು ನಿಸರ್ಗ ಚಿತ್ರಕ್ಕೆಂದು ಎರಡುಬಾರಿ ಬಹುಮಾನವನ್ನು , ಪ್ರಶಸ್ತಿ ಪತ್ರದೊಂದಿಗೆ ಪಡೆದಿದ್ದರು. ಈ ಒಂದು ಸಂದರ್ಭದಲ್ಲಿ ಜಿ.ಜಿ. ಕಲಾಶಾಲೆಯಲ್ಲಿಯೂ ಹಲವಾರು ಕಲಾಚಟುವಟಿಕೆಗಳು ನಡೆಯುತ್ತಿದ್ದವು. ಖಂಡೇರಾವರು ಮಿತ್ರರೊಂದಿಗೆ ಕೂಡಿಕೊಂಡು ಕಲಾಶಾಲೆಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಶೆಣೈರವರೇ ಹೆಚ್ಚಾಗಿ ಕಾರ್ಯಕ್ರಮದ ಮುಂಚೂಣಿಯಲ್ಲಿರುತ್ತಿದ್ದರು. ಈ ಎಲ್ಲಾ ಚಟುವಟಿಕೆಗಳ ಜೊತೆಗೆ ಕಲಾಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನವನ್ನು ಆಚರಿಸುತ್ತಿದ್ದರು, ಇದನ್ನು ಅತ್ಯಂತ ಅಧ್ದೂರಿಯಾಗಿ ಆಚರಿಸುತ್ತಿದ್ದರು. ವಿದ್ಯಾರ್ಥಿಗಳ ಕಲಾಕೃತಿಗಳ ಪ್ರದರ್ಶನ, ಪ್ರದರ್ಶನದಲ್ಲಿ ಉತ್ತಮವಾದ ಕಲಾಕೃತಿಗೆ ಬಹುಮಾನ ವಿತರಣೆ, ಸಮಾರಂಭದ ಕೊನೆಯಲ್ಲಿ ಮನರಂಜನೆ ಕಾರ್ಯಕ್ರಮಗಳು ಎಲ್ಲವೂ ಏರ್ಪಡಿಸಲಾಗುತ್ತಿತ್ತು. 1917ರಲ್ಲಿ ಜೆ.ಜೆ.ಕಲಾಶಾಲೆಯಲ್ಲಿ ನಡೆದ ವಾರ್ಷಿಕ ಸ್ನೇಹ ಸಮ್ಮೇಳನದ ಬಗ್ಗೆ ಧುರಂಧರ ಅವರು ಈ ರೀತಿ ಹೇಳುತ್ತಾರೆ. ಈ ವರ್ಷ ಸ್ನೇಹ ಸಮ್ಮೇಳನದ ಕೆಲಸ ನನ್ನ ಕೈಯಲ್ಲಿತ್ತು. ಮುಂಬೈಯಲ್ಲಿರುವ ಎಲ್ಲ ಕಲಾವಿದರಿಗೆ , ಹಳೆಯ ವಿದ್ಯಾರ್ಥಿಗಳಿಗೆ ಎಲ್ಲರಿಗೂ ಆಮಂತ್ರಣ ಕಳಿಸಲಾಗಿತ್ತು. ಅಲ್ಲದೇ ಪೂನಾ, ನಾಸಿಕ, ಸತಾರಾ, ಅಹ್ಮದಾಬಾದ ಎಲ್ಲ ಕಡೆಗಳಿಂದಲೂ ಚಿತ್ರಕಲಾ ಶಿಕ್ಷಕರು ಬಂದಿದ್ದರು.[5] ಎಂದು ಆ ಒಂದು ಸಂದರ್ಭವನ್ನು ನೆನಪಿಸಿಕೊಳ್ಳುತ್ತಾರೆ.

ಇದಲ್ಲದೆ 1889ರಲ್ಲಿ ಪ್ರಾರಂಭವಾದ ಬಾಂಬೆ ಆರ್ಟ ಸೊಸಾಯಿಟಿಯು ಅಸಂಖ್ಯಾತ ಕಲಾವಿದರನ್ನು , ಅವರ ಪ್ರದರ್ಶನಗಳ ಮೂಲಕ ಮೊಟ್ಟಮೊದಲಿಗೆ ಬೆಳಕಿಗೆ ತಂದಿರುವ ಸಂಸ್ಥೆಯಾಗಿತ್ತು. ರಾವಬಹಾದ್ದೂರ ಧುರಂಧರ ಅವರು 1895ರಲ್ಲಿ ತಮ್ಮ ಕಲಾಕೃತಿಗೆ ಮೊದಲ ಚಿನ್ನದ ಪದಕ ಪಡೆದರು. ಇಂದಿಗೂ ಸಹಿತ ಬಾಂಬೆ ಆರ್ಟ ಸೊಸಾಯಿಟಿ ಕಲಾಕೃತಿಗಳ ಪ್ರದರ್ಶನಗಳನ್ನು ಮಾಡುತ್ತಲೇ ಇದೆ. 1989ನೇ ವರ್ಷದಲ್ಲಿ ಬಾಂಬೆ ಆರ್ಟ ಸೊಸಾಯಿಟಿಯ ಶತಾಬ್ದಿ ವರ್ಷವೆಂದು ಆಚರಿಸಲ್ಪಟ್ಟಿತ್ತು. ಆ ವರ್ಷ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಅದರಲ್ಲಿ ಎಲ್ಲಕ್ಕಿಂತ ಮಹತ್ವದ್ದೆನಿಸಬಹುದಾದ ಪ್ರದರ್ಶನವೊಂದು ಏರ್ಪಡಿಸಿತ್ತು. ಕಳೆದ ಒಂದು ನೂರು ವರ್ಷಗಳಲ್ಲಿನ ಭಾರತೀಯ ದೃಶ್ಯ ಕಲೆಯ ಇತಿಹಾಸವನ್ನೇ ಹಿಂತಿರುಗಿಸಿ ತೋರಿಸುವ ಕೆಲಸವನ್ನು ಬಾಂಬೆ ಆರ್ಟ ಸೊಸಾಯಿಟಿ ಈ ಪ್ರದರ್ಶನದಲ್ಲಿ ಮಾಡಿತು. ಇದರಿಂದ ಹಳೆಯ ಪದ್ಧತಿಯ ಹಾದಿಯಲ್ಲೇ ಕಲಾಭ್ಯಾಸ ಮಾಡಿದ ಜೆ.ಜೆ.ಕಲಾಶಾಲೆಯ ವಿದ್ಯಾರ್ಥಿಗಳ ಸಾಧನೆಯನ್ನು ಈ ಪ್ರಶಸ್ತಿಗಳೇ ಅಲ್ಲಿಯ ಕಲಾ ಶಿಕ್ಷಣದ ಬಗ್ಗೆ ಸಾರಿ ಹೇಳುತ್ತವೆ. ಹೀಗಾಗಿ ಎಲ್ಲಾ ವಿದಾರ್ಥಿಗಳಿಗೂ ಅಲ್ಲಿ ನಡೆಯುವ ಕಲಾಪ್ರದರ್ಶನಗಳಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಿದಂತಾಯಿತು.

ಜೆ.ಜೆ.ಕಲಾಶಾಲೆಯಲ್ಲಿ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಯ ಹಿನ್ನೆಲೆಯಾಗಿ ಅನೇಕ ಚಟುವಟಿಕೆಗಳು ನಡೆಯುತ್ತಿದ್ದವು. ಶೈಕ್ಷಣಿಕ ಪ್ರವಾಸ, ಕಲಾ ಶಾಲೆಯಲ್ಲಿ ಕಲಾಕೃತಿಗಳ ಪ್ರದರ್ಶನಗಳನ್ನು ಏರ್ಪಡಿಸುವದು, ಬಾಂಬೆ ಆರ್ಟ ಸೊಸಾಯಿಟಿ ಅಥವಾ ಇನ್ನಿತರ ಸೊಸಾಯಿಟಿಗಳು ನಡೆಸುವ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸುವದು. ನಾಡಿನ

---

5. ಲಕ್ಷ್ಮಿ ಗವಾಯಿಯವರ : ಕಲಾವಿದ ಎಮ್.ಎ ಚಟ್ಟಿ ಜೀವನ, ಕಲಾಕೃತಿಗಳು ಒಂದು ಅಧ್ಯಯನ ಅಪ್ರಕಟಿತ ಪಿ. ಎಚ್.ಡಿ. ಮಹಾ ಪ್ರಬಂಧ, ಪುಟ 66

ಹಿರಿಯ ಕಲಾವಿದರನ್ನು ಕರೆಸಿ ಅವರಿಂದ ಪ್ರಾತ್ಯಕ್ಷಿಕೆಗಳನ್ನು ಮತ್ತು ಉಪನ್ಯಾಸಗಳನ್ನು ನಡೆಸುವದು, ವಿದೇಶಗಳಿಂದಲೂ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆಗಳನ್ನು ನೀಡಲು ನುರಿತ ಕಲಾವಿದರನ್ನು, ಕಲಾಇತಿಹಾಸಕಾರರನ್ನು ಕರೆಸುತ್ತಿದ್ದರು. ಹೀಗೆ ಹಲವಾರು ರೀತಿಯಿಂದ ಸ್ಫೂರ್ತಿ ನೀಡುವ ಕಲಾವಾತಾವರಣವನ್ನು ನಾವು ಇಲ್ಲಿ ಕಾಣುತ್ತೇವೆ. ಕಲಾಶಾಲೆಯ ವಾರ್ಷಿಕ ಪರೀಕ್ಷೆಗಳಲ್ಲಿ ಚೆನ್ನಾಗಿ ರಚಿಸಿದ ಚಿತ್ರಗಳಿಗೂ ಬಹುಮಾನವನ್ನು ನೀಡಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಿದ್ದರು. ನಮ್ಮ ದೇಶದಲ್ಲಷ್ಟೆ ಅಲ್ಲ ವಿದೇಶಗಳಲ್ಲಿಯೂ ಕಲಾಪ್ರದರ್ಶನಗಳನ್ನು ಏರ್ಪಡಿಸುತ್ತಿದ್ದರು. ಈ ರೀತಿ ಜೆ.ಜೆ. ಕಲಾಶಾಲೆಯು ಪಠ್ಯಕ್ರಮದ ಅಭ್ಯಾಸದೊಂದಿಗೆ ಅದಕ್ಕೆ ವ್ಯಾಪಕವಾಗುವಂತಹ ಕಲಾವಾತಾವರಣವನ್ನು ನಿರ್ಮಾಣ ಮಾಡಿತ್ತಲ್ಲದೇ, ಅನೇಕ ವಿದ್ಯಾರ್ಥಿಗಳು ದೇಶ ವಿದೇಶಗಳಲ್ಲಿ ಹೆಸರುವಾಸಿಯಾಗುವಂತಹ ಕಲಾಶಿಕ್ಷಣ ನೀಡಿತು.[6] ಇಂಥಹ ಒಂದು ಪ್ರತಿಷ್ಠಿತ ಕಲಾಶಾಲೆಯಲ್ಲಿ ಖಂಡೇರಾವರು ತಮ್ಮ ಡಿಪ್ಲೋಮಾ ಕೋರ್ಸನ್ನು 1963ರಲ್ಲಿ ಮುಗಿಸಿಕೊಂಡರು. ಹೀಗೆ ಖಂಡೇರಾವರು ತಮ್ಮ ಆಸಕ್ತಿಯ ಕ್ಷೇತ್ರವಾದ ಚಿತ್ರಕಲೆಯ ಉನ್ನತ ವ್ಯಾಸಂಗಕ್ಕಾಗಿ ಮುಂಬೈಗೆ ತೆರಳಿ, ಅಲ್ಲಿಯ ಜೆ.ಜೆ.ಕಲಾಶಾಲೆಯಲ್ಲಿ ಡ್ರಾಯಿಂಗ ಮತ್ತು ಪೇಯಿಂಟಿಂಗ್ ವಿಷಯವನ್ನು ಆರಿಸಿಕೊಂಡು ಅಧ್ಯಯನ ಮಾಡಿದರು. ಈ ಹಂತದಲ್ಲಿ ಅವರಿಗೆ ಬಾಬುರಾವ ಸಡ್ವೇಲಕರ್, ಪಳಸೀಕರ್‌ರಂತಹ ಗುರುಗಳು ಅನೇಕ ರೀತಿಯಲ್ಲಿ ಸಲಹೆ ಸೂಚನೆಗಳನ್ನು ಕೊಡುತ್ತಾ ಒಳ್ಳೆಯ ಮಾರ್ಗದರ್ಶನದೊಂದಿಗೆ, ಒಳ್ಳೆಯ ಶಿಕ್ಷಣವನ್ನು ನೀಡಿದರು. ಅಲ್ಲದೇ ಮುಂಬೈನ ಇನ್ನೊಂದು ಪ್ರತಿಷ್ಠಿತ ಕಲಾಶಾಲೆಯಾದ ಜೆ. ಎಸ್. ದಂಡಾವತಿಮಠರವರ ನೂತನ ಕಲಾಮಂದಿರದಲ್ಲಿ ಹೆಚ್ಚಿನ ಅಭ್ಯಾಸಕ್ಕೆಂದು ಹೋಗುತ್ತಿದ್ದರು. ಅಲ್ಲಿ ದಂಡಾವತಿಮಠರವರು ಖಂಡೇರಾವರಿಗೆ ಹಲವಾರು ರೀತಿಯಿಂದ ಸಹಾಯವನ್ನು ಮಾಡುತ್ತಾ ಪ್ರೇರಣೆಯನ್ನು ನೀಡಿದರು. ಆಗ ಮುಂಬೈ ಮಹಾನಗರ ಒಂದು ಸಾಂಸ್ಕೃತಿಕ ಕೇಂದ್ರವೆನಿಸಿಕೊಂಡಿತ್ತು. ಅಲ್ಲಿ ದಿನಾಲು ಏನಾದರೂ ಒಂದು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದೇ ಇರುತ್ತಿದ್ದವು. ಇಂಥ ಒಂದು ಸಾಂಸ್ಕೃತಿಕ ವಾತಾವರಣವು ಖಂಡೇರಾವರಿಗೆ ಯಾವ ರೀತಿಯ ಪರಿಣಾಮ ಬೀರಿತ್ತು, ಖಂಡೇರಾವರು ಯಾವ ರೀತಿಯಾಗಿ ಅವುಗಳೊಂದಿಗೆ ಸ್ಪಂದಿಸುತ್ತಿದ್ದರು ಮತ್ತು ಈ ಅವಧಿಯಲ್ಲಿ ಅವರು ತಮ್ಮ ಸಹಪಾಟಿಗಳಾದ ಅಡಿವಿರೇಕರ್, ಮೃಘಾಂಕ ಜೋಷಿ, ಜೆ. ಎಸ್. ಶೆಣೈರವರ ಜೊತೆಗೂಡಿ ಹಲವಾರು ಕಲಾಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದಾರೆ. ಹೀಗಾಗಿ ಈ ಅಧ್ಯಾಯದಲ್ಲಿ ನಾವು ಕಂಡುಕೊಳ್ಳಬಹುದಾದ ವಿಷಯವೇನೆಂದರೆ ಮುಂಬೈನ ಸರ್ ಜೆ.ಜೆ.ಕಲಾಶಾಲೆ ಮತ್ತು ನೂತನ ಕಲಾಮಂದಿರವೆಂಬ ಎರಡು ಪ್ರತಿಷ್ಠಿತ ಕಲಾಶಾಲೆಗಳಲ್ಲಿ ಕಲಾ ಶಿಕ್ಷಣವನ್ನು ಪಡೆದುಕೊಂಡು, ಮುಂಬೈನ ನವ್ಯ, ಸಮಕಾಲೀನ ಕಲಾಬೀಸುಗಳಿಗೆ ಸ್ಪಂದಿಸುತ್ತಿದ್ದರೂ ತಮ್ಮ ಅಕಾಡೆಮಿಕ್ ಕಲಾಶೈಲಿಯನ್ನು ಯಾವರೀತಿಯಾಗಿ ಉಳಿಸಿಕೊಂಡುಬಂದರು ಎಂಬುದನ್ನು ಈ ಅಧ್ಯಾಯದಿಂದ ತಿಳಿದುಬರುತ್ತದೆ.

---

6. ಲಕ್ಷ್ಮಿ ಗವಾಯಿಯವರ : ಕಲಾವಿದ ಎಮ್.ಎ ಚಟ್ಟಿ ಜೀವನ, ಕಲಾಕೃತಿಗಳು ಒಂದು ಅಧ್ಯಯನ ಅಪ್ರಕಟಿತ ಪಿ. ಎಚ್.ಡಿ. ಮಹಾ ಪ್ರಬಂಧ, ಪುಟ 62

ಅಧ್ಯಾಯ ನಾಲ್ಕು

ಜೆ.ಎಸ್. ಖಂಡೇರಾವ : ವೃತ್ತಿ ಜೀವನ ಮತ್ತು ಕಲಾಬದುಕು

ಖಂಡೇರಾವರು ಮುಂಬೈನ ಸರ್.ಜೆ.ಜೆ. ಕಲಾಶಾಲೆಯಲ್ಲಿ 1963 ರಲ್ಲಿ ಡಿಪ್ಲೋಮಾ ಪದವಿಯನ್ನು ಮುಗಿಸಿಕೊಂಡು ಕಲಬುರ್ಗಿಗೆ ಬಂದರು. ಕಲಾಶಿಕ್ಷಣವನ್ನುಮುಗಿಸಿಕೊಂಡು ಬಂದ ನಂತರ ಎರಡು ಮೂರು ತಿಂಗಳುಗಳು ಕಳೆದವು. ಇವರ ಮನೆಯಲ್ಲಿ ಇವರಿಗೆ ಯಾವುದಾದರೂ ವೃತ್ತಿಯಲ್ಲಿ ತೊಡಗಿಸಿಕೊಳ್ಳಲು ಹೇಳುತ್ತಿದ್ದರು. ಆದರೆ ಖಂಡೇರಾವರಿಗೆ ಇನ್ನೂ ಚಿತ್ರಕಲೆಯಲ್ಲಿಯೇ ಹೆಚ್ಚಿನ ಅಭ್ಯಾಸವನ್ನು ಮಾಡಬೇಕೆಂಬುದು ಮತ್ತು ಕಲಾ ಶಾಲೆಯನ್ನು ತೆರೆಯಬೆಕೆಂಬುದು ಇವರ ಆಸೆಯಾಗಿತ್ತು. ಇವರ ಮನೆಯಲ್ಲಿ ಮತ್ತು ಇವರ ತಂದೆಯವರಿಗೆ ಮುಂಬೈಗೆ ಓದಲು ಕಳಿಸಲು ಇಷ್ಟವಿರಲಿಲ್ಲ. ಅವರು ವಿಚಾರಮಾಡಿ ಇದು ಹೀಗೆ ಬಿಟ್ಟರೆ ತೀರ ಗಂಬಿರಸ್ಥಿತಿಗೆ ಕಾರಣವಾಗುತ್ತದೆ. ಎಂದು ಕೊಂಡು ಹೆಣ್ಣನ್ನು ನೋಡುತ್ತಿದ್ದರು. ಖಂಡೇರಾವರ ಇನ್ನೊಬ್ಬ ತಮ್ಮನಾದ ವೀರಣ್ಣನಿಗೂ ವಧುವನ್ನು ನೋಡುತ್ತಿದ್ದರು. ಈ ಒಂದು ಸಂದರ್ಭದಲ್ಲಿ ವೀರಣ್ಣನವರಿಗೆ ಮದುವೆಗೆ ಕನ್ಯೆಯನ್ನು ನೋಡಿ ನಿಶ್ಚಯವೂ ಆಯಿತು. ಮನೆಯಲ್ಲಿ ಹಿರಿಯ ಮಗನನ್ನು ಬಿಟ್ಟು ಚಿಕ್ಕವನಿಗೆ ಹೇಗೆ ಮದುವೆ ಮಾಡುವದು ಎಂದು ಕೊಂಡು ಕಲಬುರ್ಗಿಯ ಗಾಜಿಪೂರ ಬಡವಣೆಯ ಬಸವಣ್ಣಪ್ಪ ಆಡಿಕೆನವರ ಎನ್ನುವ ಮನೆಗೆ ಜಗದೇವಪ್ಪ ಖಂಡೇರಾವರನ್ನು ಹೆಣ್ಣು ನೋಡಲು ಕರೆದುಕೊಂಡು ಹೋದರು. ಅಡಿಕೆನವರ ಮನೆತನವು ತುಂಬ ಶ್ರೀಮಂತರು , ಮೇಲಾಗಿ ಅಷ್ಟೆ ಸುಸಂಸ್ಕೃತ ಮನೆತನವಾಗಿತ್ತು. ಈ ಮನೆಯಲ್ಲಿ ಬಸವಣ್ಣಪ್ಪನವರ ಮಗಳಾದ ವೀರಮ್ಮನವರನ್ನು ನೋಡಿ ಮದುವೆಗೆ ನಿಶ್ಚಯ ಮಾಡಿದರು. ಬಸವಣ್ಣಪ್ಪ ಅಡಿಕೆನವರ ಇವರದು ದೊಡ್ಡಕುಟುಂಬವಾಗಿತ್ತು. ನಾಲ್ಕು ಜನ ಗಂಡು ಮಕ್ಕಳು ಮತ್ತು ಒಬ್ಬಳೇ ಹೆಣ್ಣು ಮಗಳಾದ ವೀರಮ್ಮನವರು, ಇವರು ಕೊನೆಯ ಮಗಳಾಗಿದ್ದರು.

ವೀರಮ್ಮನವರೊಡನೆ ನಿಶ್ಚಯವೇನೋ ಆಯಿತು. ಆದರೆ ಜಗದೇವಪ್ಪ ಖಂಡೇರಾವರಿಗೆ ಇಷ್ಟು ಬೇಗ ಮದುವೆಗೆಇಷ್ಟವಿರಲಿಲ್ಲ. ಮನೆಯವರ ಒತ್ತಾಸೆಯ ಮೇರೆಗೆ ಮದುವೆಗೆ ಒಪ್ಪಿಕೊಂಡಿದ್ದರು. ಮನೆಯವರಿಗೆ ನಾನಿನ್ನು ಚಿತ್ರಕಲೆ

ಯಲ್ಲಿಯೇ ಹೆಚ್ಚಿನದನ್ನು ಅಭ್ಯಾಸಮಾಡಬೇಕೆಂದಿದ್ದೇನೆ ಎಂದು ಖಂಡೇರಾವರು ಹೇಳಿದಾಗ ಮನೆಯವರೆಲ್ಲರೂ ನೀನು ಮೊದಲು ಮದುವೆಯಾಗು ಆಮೇಲೆ ನಿನ್ನ ಅಭ್ಯಾಸವನ್ನು ಮುಂದುವರೆಸಬಹುದಲ್ಲವೆ ? ಎಂದು ಹೇಳಿ ಸಂತೈಸಿದರು. ಇಷ್ಟರಲ್ಲೇ ಇವರಿಗೆ ಮುಂಬೈಯಿಂದ ಉನ್ನತ ಕಲಾವ್ಯಾಸಂಗದ ಸಂದರ್ಶನದ ಪತ್ರವೊಂದು ಬಂದುಬಿಟ್ಟಿತು. ಅದು ಜೂನ ಕೊನೆಯ ವಾರದಲ್ಲಿ ನಡೆಯುತ್ತಿತ್ತು. ಇವರ ಮನೆಯಲ್ಲಿ ಜೂಲೈ ಮೂರರಂದು ಮದುವೆಗೆ ನಿಶ್ಚಯ ಮಾಡಿಬಿಟ್ಟರು. ಮದುವೆಯ ಓಡಾಟದ ಕೆಲಸದಲ್ಲಿ ಈ ವಿಷಯವನ್ನು ಮರೆದತೆಬಿಟ್ಟರು. ಮುಂಬೈಗೆ ಹೋಗಲು ಆಗಲಿಲ್ಲ. ಮದುವೆಯ ನಿಶ್ಚಯವಾದ ಮರುದಿನವೇ ಸಿ.ವಿ. ಕರಡಗಿಯವರು ಖಂಡೇರಾವರಿಗೆ ಒಂದು ಪತ್ರವನ್ನು ಹಾಕಿದ್ದರು. ಸಿ.ವಿ. ಕರಡಗಿಯವರು ಬೆಂಗಳೂರಿನಲ್ಲಿರುವ "Art and craft" ನಲ್ಲಿ ನಿರ್ದೇಶರಾಗಿ ಕೆಲಸಮಾಡುತ್ತಿದ್ದರು. ಅವರು ಖಂಡೇರಾವರಿಗೆ ಬರೆದ ಪತ್ರದಲ್ಲಿ ಎಲ್ಲ ಮೂಲ ಅಂಕಪಟಿಟಗಳೊಂದಿಗೆ ಕೆಲವು ಉತ್ತಮವಾದ ಕಲಾಕೃತಿಗಳನ್ನು ತೆಗೆದುಕೊಂಡು ಸಂದರ್ಶನಕ್ಕೆ ಬರಬೇಕೆಂದು ಸೂಚಿಸಿದ್ದರು. ಪತ್ರದಲ್ಲಿ ಸೂಚಿಸಿದಂತೆ ತಮ್ಮ ಮೂಲ ಅಂಕಪಟ್ಟಿಗಳೊಂದಿಗೆ ಕೆಲವು ಒಳ್ಳೆಯ ರೀತಿಯಿಂದ ತೆಗೆದ ಕಲಾಕೃತಿಗಳನ್ನು ತೆಗೆದುಕೊಂಡು ಬೆಂಗಳೂರಿಗೆ ಪಯಣ ಬೆಳೆಸಿದರು. ಬೆಂಗಳೂರನ್ನು ತಲುಪಿದ ಕೂಡಲೆ ಸಿ.ವಿ. ಕರಡಗಿಯವರನ್ನು ಭೇಟಿಯಾದರು. ಸಿ.ವಿ. ಕರಡಗಿಯವರು. ಖಂಡೇರಾವರನ್ನು "Information and Broad casting "ವಿಭಾಗಕ್ಕೆ ಕರೆದುಕೊಂಡು ಹೋದರು. ಈ ವಿಭಾಗದಲ್ಲಿ ಒಂದು ಕಲಾವಿದರ ಪೋಸ್ಟ ಖಾಲಿಯಿತ್ತು. ಆ ವಿಭಾಗದಲ್ಲಿ ಕರಡಗಿಯವರಿಗೆ ಪರಿಚಿತದವರಿದ್ದರು. ಅವರಿಗೆ ಖಂಡೇರಾವರರನ್ನು ಬೆಟ್ಟಿಮಾಡಿಸಿದರು. ಅವರು ಖಂಡೇರಾವರು ತೆಗೆದುಕೊಂಡು ಹೋಗಿದ್ದ ಎಲ್ಲ ಉತ್ತಮವಾದ ಕಲಾಕೃತಿಗಳನ್ನು ನೋಡಿದರು. ಕರಡಗಿಯವರಂತೂ ಮೊದಲೇ ಇವರ ಕಲಾಕೃತಿಗಳನ್ನು ನೋಡಿದವರಾಗಿದ್ದರು. ಇಲ್ಲಿ ಸಂದರ್ಶನಕ್ಕಿಂತಲೂ ಹೆಚ್ಚಾಗಿ ಪರಿಚಯವರಾದರಿಂದ ಕರಡಗಿಯವರು ಮೊದಲೇ ಹೇಳಿ ಇಟ್ಟಿದ್ದರಿಂದ ಖಂಡೇರಾವರನ್ನು ಆ ವಿಭಾಗದಲ್ಲಿ ಖಾಲಿಯಿದ್ದ ಕಲಾವಿದರ ಹುದ್ದೆಗೆ ಆಯ್ಕೆ ಮಾಡಿದರು.

ಇಲ್ಲಿ ಖಂಡೇರಾವರು ಕಲಾವಿದರಾಗಿ ಕೆಲಸ ಮಾಡತೊಡಗಿದರು. ಕೆಲವು ದಿನಗಳು ಕಳೆದವು ಒಂದು ದಿನ ಸಿ.ವಿ ಕರಡಗಿಯವರು ಖಂಡೇರಾವರನ್ನುದ್ದೇಶಿಸಿ ಅಲ್ಲನೀನು ಚಿತ್ರಕಲೆಯ ಬಗ್ಗೆತುಂಬಾ ಚನ್ನಾಗಿ ತಿಳಿದುಕೊಂಡಿದ್ದಿಯಾ, ನೀನು ಅಲ್ಲಿ ಇಲ್ಲಿ ಕೆಲಸ ಮಾಡುವ ಬದಲು ನೀನೆ ಏಕೆ ಕಲಬುರ್ಗಿಯಲ್ಲಿ ಒಂದು ಈ ಕಲಾಶಾಲೆಯನ್ನು ತೆರೆಯಬಾರದು? ಅದಕ್ಕೆ ಏನೇನು ಸೌಲಭ್ಯಗಳು ಬೇಕು ಅದನ್ನು ನಾನು ಒದಗಿಸಿಕೊಡುವೆ ಯಾಕೆಂದರೆ ಕಲಬುರ್ಗಿಯಲ್ಲಿ ಒಂದು ಸ್ವತಂತ್ರ ಕಲಾಶಾಲೆಯಿಲ್ಲ. ನೀನು ಅಲ್ಲೊಂದು ಕಲಶಾಲೆಯನ್ನು ತೆರೆದರೆ ಆ ಭಾಗದ ವಿದ್ಯಾರ್ಥಿಗಳು ತಮ್ಮ ಕಲಾಶಿಕ್ಷಣಕ್ಕಾಗಿ ಮುಂಬೈಗೋ ಅಥವಾ ಬೇರೆ ಕಡೆಗೆ ಹೋಗಿ ಅಭ್ಯಾಸ ಮಾಡುವದು ತಪ್ಪುತ್ತದೆ. ಮೇಲಾಗಿ ಅವರು ಇಲ್ಲೆ ಇದ್ದುಕೊಂಡು ಅಭ್ಯಾಸದಲ್ಲಿ ತೊಡಗಬಹುದು. ಮೊದಲೇ ಈ ಕಡೆ ಜನರು ಅಷ್ಟು ಶ್ರೀಮಂತರಿಲ್ಲ ಮುಂಬೈಯಂಥ ದೊಡ್ಡ ಸಿಟಿಯಲ್ಲಿ ಓದಲಿಕ್ಕಾಗುವದಿಲ್ಲ. ಒಂದು ವೇಳೆ ನೀನು ಕಲಬುರ್ಗಿಯಲ್ಲೊಂದು ಕಲಾ ಶಾಲೆಯನ್ನು ತೆರೆದರೆ ಈ ಭಾಗದ ಕಲಾಸಕ್ತರಿಗೆ ಒಂದು ಸಹಾಯವನ್ನು ಮಾಡಿದಂತಾಗುತ್ತದೆ. ಎಂದು ಸಿ.ವಿ. ಕರಡಗಿಯವರು ಖಂಡೇರಾವರ ಜೊತೆ ಚರ್ಚಿಸಿದರು.

ಈ ಕಡೆ ಖಂಡೇರಾವರಿಗೆ ಬೆಂಗಳೂರಿನಲ್ಲಿ ಕೆಲಸವೇನೋ ಸಿಕ್ಕಿತು. ಆದರೆ ಬೆಂಗಳೂರಿನ ದೊಡ್ಡ ಸಿಟಿಯಲ್ಲಿ ಸಂಸಾರ ಸಮೇತ ಹೇಗೆ ಇರೊದು, ಅಷ್ಟಕ್ಕೂ ಸಿ.ವಿ. ಕರಡಗಿಯವರು ಹೀಗೆ ಹೇಳುತ್ತಿದ್ದಾರಲ್ಲ ಕರಡಗಿಯವರು ಹೇಳಿದ್ದು ಖಂಡೇರಾವರಿಗೆ ಒಳ್ಳೆಯದೇ ಎನಿಸಿತು. ಏಕೆಂದರೆ ಖಂಡೇರಾವರಿಗೆ ಬೋಧನೆಯನ್ನು ಮಾಡುವ ಆಸೆಯು ಯಾವಾಗಲೋ ಮನೆಮಾಡಿಬಿಟ್ಟಿತ್ತು. ವಿದ್ಯಾರ್ಥಿಗಳ ಜೊತೆ ಕೂಡಿಕೊಂಡು ಕಲಾಕೃತಿ ರಚನೆಯ ಹಂತದಲ್ಲಿದ್ದು ವಿದ್ಯಾರ್ಥಿಗಳಿಗೆ ಏನಾದರೂ ಹೇಳಿಕೊಡುತ್ತಾ ಇರೋದೆ ಒಳ್ಳೆಯದು. ಅದಕ್ಕಾಗಿ ಒಂದು ಕಲಾಶಾಲೆಯುನ್ನು ತೆರೆದರೆ ಒಂದು ರೀತಿಯಲ್ಲಿ ಒಳ್ಳೆಯದೇ ಎನಿಸುತ್ತದೆ. ಮನೆಯ ಮಂದಿಯವರ ಜೊತೆ ಅವರೆದುರಿಗೆ ಇದ್ದುಕೊಂಡು ಕಲಬುರ್ಗಿಯಲ್ಲೇ ಇದ್ದರೆ ಆಯಿತು. ಎಂದುಕೊಂಡು ನೇರವಾಗಿ ಕಲಬುರ್ಗಿಗೆ ಬಂದರು. ಆ ಒಂದು ಸಂದರ್ಭದಲ್ಲಿ ಖಂಡೇರಾವರಿಗೂ ಶಿಕ್ಷಕವೃತ್ತಿಯ ಹಂಬಲವಿತ್ತು. ತಾವೇನು ಜೆ.ಜೆ. ಕಲಾಶಾಲೆಯಲ್ಲಿ ಕಲಾಶಿಕ್ಷಣವನ್ನು ಪಡೆದುಕೊಂಡಿದ್ದರೋ ಅದೇ ರೀತಿಯಿಂದ

ಇಲ್ಲಿಯೂ ಒಂದು ಕಲಾಶಾಲೆಯನ್ನು ತೆರೆಯಬೇಕೆಂಬ ಹಂಬಲ ಹೆಚ್ಚಾಯಿತು. ಇದಕ್ಕೆಂದೇ ಅವರು ಆಗಾಗ ಶರಣಬಸವೇಶ್ವರ ಹೈಸ್ಕೂಲಿಗೆ ಹೋಗುತ್ತಿದ್ದರು. ಅಲ್ಲಿ ಭಂಕೂರಕರ ಮಾಸ್ತರರು ವಿದ್ಯಾರ್ಥಿಗಳಿಗೆ ಚಿತ್ರಕಲೆಯನ್ನು ಹೇಳಿಕೊಡುತ್ತಿದ್ದರು. ಖಂಡೇರಾವರೂ ಇವರೊಂದಿಗೆ ಸೇರಿ ಅಲ್ಪಸ್ವಲ್ಪ ಚಿತ್ರಕಲೆಯ ಬಗ್ಗೆ ಹೇಳಿಕೊಡಲು ಪ್ರಾರಂಭಿಸಿದರು. ಇವರು perspective ಎಂದರೆ ಚನ್ನಾಗಿಬಲ್ಲವರಾಗಿದ್ದರು. ಮತ್ತು ಇದು ಇವರ ನೆಚ್ಚಿನ ವಿಷಯುವಾಗಿತ್ತು. ಇದರಲ್ಲಿ ಅವರು ಪರಿಣಿತಿಯನ್ನು ಹೊಂದಿದ್ದರು. ಆಗ ಕಲಬುರ್ಗಿಯಲ್ಲಿ ಈ ವಿಷಯವು ಅಷ್ಟು ಚನ್ನಾಗಿ ಯಾರೂ ಹೇಳಿಕೊಡುವವರಿದ್ದಿಲ್ಲ. ಇದೇ ವಿಷಯದಲ್ಲಿ ಹೆಚ್ಚು ಜನರು ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಿದ್ದರು. ಈ ಉದ್ದೇಶದಿಂದಲೇ ಖಂಡೇರಾವರು ಆಗಾಗ ಶರಣಬಸವೇಶ್ವರ ಹೈಸ್ಕೂಲಿಗೆ ಹೋಗಿ ವಿದ್ಯಾರ್ಥಿಗಳಿಗೆ perspective ದ ಬಗ್ಗೆ ಹೇಳಿಕೊಡುತ್ತಿದ್ದರು. ಈ ಹಂತದಲ್ಲೆ ಬಸವರಾಜ ಉಪ್ಪನ, ಮೋಹನ ಸೀತನೂರರಂತಹ ವಿದ್ಯಾರ್ಥಿಗಳ ಪರಿಚಯವಾಯಿತು. ಮೋಹನ ಸೀತನೂರವರ ತಂದೆಯವರು ಸರಾಫ ಬಜಾರನಲ್ಲಿ ಬೆಳ್ಳಿ-ಬಂಗಾರದ ವ್ಯಾಪಾರವನ್ನು ಮಾಡಿಕೊಂಡಿದ್ದರು. ವ್ಯಾಪಾರಸ್ಥರು, ಮೇಲಾಗಿ ಶ್ರೀಮಂತ ಮನೆತನೆದವರು. ಇವರಿಗೂ ಖಂಡೇರಾವರಿಗೂ ಹತ್ತಿರದ ಸ್ನೇಹವಿತ್ತು. ಇವರು ತಮ್ಮ ಮಗನಾದ ಮೋಹನರವರನ್ನು ಖಂಡೇರಾವರ ಬಳಿ ಹೋಗಿ ಕಲಾಶಿಕ್ಷಣವನ್ನು ಪಡೆಯಲು ಕೇಳಿಕೊಂಡರು ಖಂಡೇರಾವರು ಇದಕ್ಕೆ ಒಪ್ಪಿಕೊಂಡರು. ಹೀಗೆ ಮೊಹನರವರು ಖಂಡೇರಾವರ ಹತ್ತಿರ ಬಂದು ಚಿತ್ರಕಲೆಯ ಬಗ್ಗೆ ತಿಳಿದುಕೊಳ್ಳಲಾರಂಭಿಸಿದರು. ಇದಕ್ಕೂ ಮೊದಲೇ ಬಸವರಾಜ ಉಪ್ಪಿನ, ಎಂ.ಬಿ.ಮೋಹಾರ , ವಿ.ಜಿ. ಅಂದಾನಿ, ಶಿವಶರಣಪ್ಪ ಉಪ್ಪಿನರಂತಹ ಅನೇಕ ವಿದ್ಯಾರ್ಥಿಗಳು ಖಂಡೇರಾವರ ಮನೆಗೆ ಚಿತ್ರಕಲೆಯನ್ನು ತಿಳಿದುಕೊಳ್ಳಲು ಬರುತ್ತಿದ್ದರು. ಒಮ್ಮೆ ಖಂಡೇರಾವರ ಮನೆ ಎದುರಿಗೆ ಸೈಕಲ್‌ಮೇಲೆ ಹೋಗುತ್ತಿದ್ದಾಗ ಖಂಡೇರಾವರು ಬಸವರಾಜ ಉಪ್ಪನರವರನ್ನುದ್ದೇಶಿಸಿ ಏನಪ್ಪಾ ನನ್ನ ಹತ್ತಿರ ಚಿತ್ರಕಲೆಯನ್ನು ಕಲಿಯಲು ಬಾ ಬೇಕಿದ್ದರೆ ನಿನ್ನ ಸ್ನೇಹಿತರಿಗೂ ಕರೆದುಕೊಂಡು ಬಾ ಎಂದು ಹೇಳಿದ್ದು ಬಸವರಾಜ ಉಪ್ಪಿನವರವರ ಇಂದಿಗೂ ನೆನಪಿಸಿಕೊಳ್ಳುತ್ತಾರೆ.

ಈ ಹಂತದಲ್ಲಿ ಖಂಡೇರಾವರ ಮನೆಯಲ್ಲಿ ಮದುವೆಯ ಸಂಭ್ರಮದ ವಾತಾವರಣವಿತ್ತು. 1964 ಜೂನ ಮೂರರಂದು ಖಂಡೇರಾವರ ಮದುವೆಯು ವೀರಮ್ಮನವರೊಡನೆ ನಡೆಯಿತು.


ಮದುವೆಯಾಗಿ ಕೆಲವು ದಿನಗಳು ಹೀಗೆ ಕಳೆದವು ಖಂಡೇರಾವರು ಸಂಸಾರದ ಜವಾಬ್ದಾರಿಯನ್ನು ಹೊತ್ತಿರುವದರಿಂದ ಜೀವನೋಪಾಯಕ್ಕಾಗಿ ಏನಾದರೂ ಒಂದು ಕೆಲಸವನ್ನು ಮಡಲೇಬೇಕಾದ ಅನಿವಾರ್ಯತೆ ಎದುರಾಯಿತು. ಇವರ ತಂದೆಯವರು ತಮ್ಮ ವ್ಯಾಪಾರದಲ್ಲಿ ಸಹಾಯಕನಾಗುವಂತೆ ಖಂಡೇರಾವರವರನ್ನು ಕೇಳಿಕೊಂಡರು ಆದರೆ ಖಂಡೇರಾವರಿಗೆ , ವ್ಯಾಪಾರದಲ್ಲಿ ಆಸಕ್ತಿಯಿರಲಿಲ್ಲ. ನಾನು ಬೇರೆ ಯಾವುದಾದರು ಒಂದು ಕೆಲಸವನ್ನು ಮಾಡುತ್ತೇನೆ. ಆದರೆ ವ್ಯಾಪಾರದಲ್ಲಿ ತೊಡಗುವದು ನನಗೆ ಇಷ್ಟವಿಲ್ಲ ಎಂದು ಹೇಳಿದರು. ಆದರೆ ಕೆಲಸಕ್ಕೆ ಸೇರುವದಂತೂ ಅವಶ್ಯವಾಗಿತ್ತು. ಇದಕ್ಕೂ ಮೊದಲು ಸಿ.ವಿ. ಕರಡಗಿಯವರು ಹೇಳಿದ ಹಾಗೆ ಇಲ್ಲೊಂದು ಕಲಾಶಾಲೆಯನ್ನು ತೆರೆಯವದು ಸೂಕ್ತವೆನಿಸಿದರೂ ಅದನ್ನು ಹೇಗೆ? ಯಾರ ಸಹಾಯದಿಂದ ಮಾಡುವದು ಕಲಾಶಾಲೆಯನ್ನು ತೆರೆಯಬೇಕಾದರೆ ಅದೊಂದು ಸಣ್ಣ ಕೆಲಸವೇ ಎಂದು ಯೋಚಿಸತೊಡಗಿದರು. ಈ ಹಂತದಲ್ಲಿ ಶಂಕರರಾವ ಅಳಂದಕರರವರು ಕಲಬುರ್ಗಿಯ ನೂತನ ವಿದ್ಯಾಲಯದಲ್ಲಿ ಚಿತ್ರಕಲೆಯ ವಿಭಾಗದಲ್ಲಿ ಉಪನ್ಯಾಸಕರಾಗಿ ನಿವೃತ್ತಿ ಹೊಂದಿದ್ದರು. ಶಂಕರರಾವ ಆಳಂದಕರರವರು ಮುಂಬೈನ ಸರ್. ಜೆ.ಜೆ. ಕಲಾಶಾಲೆಯಲ್ಲಿ ಕಲಾಶಿಕ್ಷಣವನ್ನು ಪಡೆದುಕೊಂಡಿದ್ದರು. ಮತ್ತು ನುರಿತ ಕಲಾವಿದರು ಕಲಾ ಪೋಷಕರೂ ಆಗಿದ್ದರು. ಖಂಡೇರಾವರು ಇವರನ್ನು ಬೆಟ್ಟಿಯಾಗಿ ತಾವು ಕಲ್ಪಿಸಿಕೊಂಡಂತೆ ನಾನೊಂದು ಕಲಾಶಾಲೆಯನ್ನು ತೆರೆಯಬೇಕೆಂದಿದ್ದೆನೆ. ಅದಕ್ಕೆ ನಿಮ್ಮ ಸಲಹೆಗಳನ್ನು ಕೇಳಲಿಚ್ಚಿಸಿದ್ದೇನೆ. ಎಂದುತಮ್ಮ ಆಸಕ್ತಿಯನ್ನು ಅವರೆದುರು ಬಿಚ್ಚಿಕೊಂಡರು ಅದಕ್ಕೆ ಪ್ರತ್ಯುತ್ತರವಾಗಿ ಅಳಂದಕರ್‌ರವರು ಒಪ್ಪಿಗೆಯೆನೋ ಸೂಚಿಸಿದರು. ಆದರೆ ಕಲಾಶಾಲೆಯನ್ನು ನಡೆಸುವಲ್ಲಿ ಎದುರಾಗುವ ಅನೇಕ ಸಮಸ್ಯೆಗಳನ್ನು ಖಂಡೇರಾವರಿಗೆ ಬಿಡಿ ,ಬಿಡಿಯಾಗಿ ಹೇಳಿದರು. ಯಾಕೆಂದರೆ ಮೊದಲೇ ಇದೊಂದು ಹಿಂದುಳಿದ ಪ್ರದೇಶವಾಗಿತ್ತು. ಇಲ್ಲಿ ಕಲೆಯಂದರೆ ಯಾರಿಗೂ ಗೊತ್ತಿಲ್ಲದ ವಿಷಯವಾಗಿತ್ತು. ಮೇಲಾಗಿ ಕೇವಲ ಡಿಪ್ಲೋಮಾ , ಪಾಲಿಟೆಕ್ನಿಕ್‌ವೆಂದರೆ ಗೌರವ ಕೊಡುತ್ತಿದ್ದರು. ಈ ಕೊರ್ಸುಗಳಿಗೆ ಆಗ ತುಂಬ ಬೇಡಿಕೆಯಿತ್ತು. ಅಳಂದಕ

ರವರು ಖಂಡೇರಾವರನ್ನುದ್ದೇಶಿಸಿ ನೋಡು ನಾನು ಹೀಗೆ ಹೇಳುತ್ತೇನೆಂತ ನೀನು ಮನಸ್ಸಿಗೆ ಬೇಜಾರು ಮಾಡಿಕೋಬೇಡ ಆದರೆ ನಿಜ ಸಂಗತಿಯನ್ನು ನಿನ್ನೆದುರಿಗೆ ಹೇಳುತ್ತಿದ್ದೇನೆ. ಆ ಮೇಲೆ ಏನೂ ಹೇಳಿಲ್ಲವೆಂದು ಅನಕೊಬಾರ್ದು ಅಂತ ಹೇಳ್ತಿದ್ದಿನಿ. ಎಂದು ಖಂಡೇರಾವರವರಿಗೆ ಸಮಝಾಯಿಸಿದರು. ಎಂದು ಅಳಂದಕರ್ ಹೇಳಿರುವುದನ್ನು ಖಂಡೇರಾವರು ಈಗಲೂ ನೆನೆಪಿಕೊಳ್ಳುತ್ತಾರೆ. ಮನುಷ್ಯನ ಬದುಕಿಗೊಂದು ಮಹೋನ್ನತ ಗುರಿಯಿದ್ದಾಗ ಆತ ಅದನ್ನು ಪಡೆಯಲು ಕಲ್ಲುಮುಳ್ಳುಗಳಲ್ಲಿತಗ್ಗುದಿನ್ನೆಗಳಲ್ಲಿ ಎಲ್ಲವನ್ನು ಸಹಿಸಿಕೊಂಡು ಸಾಗುತ್ತಾನೆ. ಅದಕ್ಕೆ ಅಡ್ಡಿ ಬರುವ ಸಣ್ಣಪುಟ್ಟ ಸುಖ ಸಂತೋಷಗಳನ್ನು ನಿರ್ದಾಕ್ಷಿಣ್ಯವಾಗಿ ಬಲಿಕೊಡುತ್ತಾನೆ. ಕೊನೆಗೆ ಗುರಿ ತಲುಪಿದಾಗ ಆತನಿಗಾಗುವ ಆನಂದ, ಸಂತೋಷ , ಅಪಾರ. ಬರೀ ಯೋಚನೆ ಮಾಡುತ್ತಾ ಕುಳಿತ್ರೆ ಏನೂ ಆಗುವದಿಲ್ಲವೆಂದು ಧೈರ್ಯವನ್ನು ತಂದುಕೊಂಡು ತಮ್ಮ ಮನೆಯಲ್ಲಿಯೇ ಒಂದು ಸಣ್ಣ ಕೋಣೆಯನ್ನು ನೋಡಿ ಅದರಲ್ಲಿ ನಾಲ್ಕಾರು ವಿದ್ಯಾರ್ಥಿಗಳಿಗೆ ಚಿತ್ರಕಲೆಯನ್ನು ಹೇಳಿಕೊಡಲು ಪ್ರಾರಂಭಿಸಿದರು. ಆಗ ವಿ.ಜಿ. ಅಂದಾನಿ, ಎಂ.ಬಿ. ಲೋಹಾರ, ಬಸವರಾಜ ಉಪ್ಪಿನ , ಶಿವಶರಣಪ್ಪ ಉಪ್ಪಿನ, ಮಂಗಳಾ ಉಪ್ಪಿನರವರಂತಹ ವಿದ್ಯಾರ್ಥಿಗಳಿಂದ ಮೊದಲಿಗೆ ಪ್ರಾರಂಭವಾಯಿತು.

ಕೆಲವು ದಿನಗಳು ಹೀಗೆ ಕಳೆದವು ಆದರೆ ಖಂಡೇರಾವರ ಮನೆಯಲ್ಲಿ ಯಾರಿಗೂ ಇದು ಸರಿಬರಲಿಲ್ಲ ಅದೇನು ನಾಲ್ಕಾರು ವಿದ್ಯಾರ್ಥಿಗಳಿಗೆ ಏನು ಹೇಳುತ್ತಿ ಯಾವುದಾದರೂ ಒಂದು ಕೆಲಸಕ್ಕೆ ಸೇರಿಕೋ, ಇದರಿಂದ ನಿನಗೇನು ಸಿಗುತ್ತೇ , ಒಂದು ಒಳ್ಳೆಯ ಕೆಲಸವನ್ನಾದರೂ ನೊಡಿಕೊಂಡು ನಿನ್ನ ಸಂಸಾರವನ್ನು ಸಾಗಿಸು. ಎಂದು ಹೇಳುತ್ತಿದ್ದರು. ಮನೆಯಲ್ಲಿ ನೋಡಿದರೆ ಹೀಗೆ ಹೇಳುತ್ತಾರೆ ಎಂದುಕೊಂಡು ಖಂಡೇರಾವರಿಗೆ ಏನು ಮಾಡಬೇಕೆಂಬುದೇ ತೋಚಲಿಲ್ಲ ಮೊದಲೇ ಬೆಂಗಳೂರಿನಲ್ಲಿ ಸಿಕ್ಕಿದ ಕೆಲಸವನ್ನು ಬಿಟ್ಟು ಬಂದಿದ್ದರು. ಮತ್ತೇ ಇಲ್ಲೂ ಏನು ಕೆಲಸ ಮಾಡೊದು ಒಂದು ವೇಳೆ ನಾನು ಕೆಲಸವೇ ಮಾಡಬೇಕಾದರೆ ನಾನೇಕೆ ಬೆಂಗಳೂರಿನಲ್ಲಿ ಸಿಕ್ಕಿದ್ದ ಕೆಲಸವನ್ನು ಬಿಟ್ಟು ಬರುತ್ತಿದ್ದೆ. ಹಿಗಾಗಿ ಇವರಿಗೆ ಕಲಾಶಿಕ್ಷಕ ವೃತ್ತಿಯಲ್ಲೇ ಹೆಚ್ಚಿನ ಆಸಕ್ತಿಯಿದ್ದುದ್ದರಿಮದ ಕೆಲಸವನ್ನು ಬಿಟ್ಟು ಕಲಬುರ್ಗಿಗೆ ಬಂದಿದ್ದರು. ಅದಕ್ಕೆ ಇನ್ನೊಂದು ಕಾರಣವು ಇತ್ತು. ಮುಂಬೈಯ ಜೆ.ಜೆ. ಕಲಾಶಾಲೆಯಲ್ಲಿ ಶಿಕ್ಷಣಪಡೆದುಕೊಂಡು ಬಂದಿದ್ದರೋ ಅಲ್ಲಿಯಶಿಸ್ತು , ಸಂಯಮ, ಗುರುಗಳು , ಅಲ್ಲಿಯ ಪಠ್ಯಕ್ರಮದಿಂದ ಪ್ರಭಾವಿತರಾಗಿ ತಾವು ಕಲಿತದ್ದನ್ನು ನಾಲ್ಕಾರು ವಿದ್ಯಾರ್ಥಿಗಳಿಗೆ ಹೇಳಿಕೊಟ್ಟರೆ ತಾವು ಕಲಿತು ಬಂದಿದ್ದಕ್ಕೆ ಸಾರ್ಥಕ ವಾಗುತ್ತದೆ. ಎಂದು ಕಲಾಶಾಲೆಯನ್ನು ತೆರೆಯುವಂತೆ ದೃಢವಾಗಿ ನಿಶ್ಚಯ ಮಾಡಿದರು.

ಖಂಡೇರಾವರು ತಮ್ಮ ತಂದೆಯವರ ಪರಿಚಯದಿಂದ ಕಿರಾಣಾ ಬಜಾರನಲ್ಲಿಯೇ ಒಂದು ದೊಡ್ಡ ಕೋಣೆಯನ್ನು ಬಾಡಿಗೆಗೆ ತೆಗೆದುಕೊಂಡರು. ಈ ಕೋಣೆಯ ಮಾಲಿಕರು ಮುಸ್ಲಿಂ ಸಮುದಾಯಕ್ಕೆ ಸೇರಿದವರಾಗಿದ್ದರು. ಮಣಿಯಾರ ಎಂದು ಇವರನ್ನು ಕರೆಯುತ್ತಿದ್ದರು. ಇವರು ಕಲಬುರ್ಗಿಯಲ್ಲಿ ದೊಡ್ಡ ಹಾರ್ಡವೇರ ವ್ಯಾಪಾರಿಗಳಾಗಿದ್ದರು. ಖಂಡೇರಾವರ ತಂದೆಯವರಾದ ಶಂಕರಪ್ಪನವರೂ ವ್ಯಾಪಾರಿಗಳಾಗಿದ್ದರಿಂದ ಮಣಿಯಾರರ ಜೊತೆ ಹೆಚ್ಚು ಸಂಪರ್ಕವಿತ್ತು. ಆದರೆ ಬಾಡಿಗೆಯ ವಿಷಯದಲ್ಲಿ ಮಾತ್ರ ತುಂಬಾ ಸ್ಟ್ರಿಕ್ಟ ಆಗಿದ್ದರು. ಖಂಡೇರಾವರು ಈ ಕೋಣೆಯನ್ನು ವರ್ಷಕ್ಕೆ 800 ರೂಪಾಯಿಯಂತೆ ಬಾಡಿಗೆಗೆ ತೆಗೆದುಕೊಂಡರು. ಖಂಡೇರಾವರು ,500 ರೂಪಾಯಿಯ ಬಂಡವಾಳವನ್ನು ಹಾಕಿ ಈ ಕಲಾಶಾಲೆಯುನ್ನುಪ್ರಾರಂಭಿಸಲು ಸಿದ್ದರಾದರು. ಇಷ್ಟೇ ಹಣದಲ್ಲಿಯೇ ವಿದ್ಯಾರ್ಥಿಗಳಿಗೆ ಕಲಾ ಉಪಕರಣಗಳನ್ನು ಮಾಡಿಸಿದ್ದರು. ನವೆಂಬರ ಹದಿನಾಲ್ಕು 1965 ರಂದು ಖಂಡೇರಾವರ ಬದುಕಿನಲ್ಲಿ ಹೊಸ ಆಯಾಮವನ್ನು ಸೃಷ್ಟಿಸಿದ ದಿನವದು. ಜೀವನದ ಆದರ್ಶಗಳಿಗೆ ಪಟ್ಟು ಬಿದ್ದು ಆದರ್ಶ ಕಲಾಮಂದಿರವೆಂಬ ಕಲಾಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿದರು. ಈ ಕಲಾಶಾಲೆಯ ಉದ್ಘಾಟನೆಗೆಂದಲೆ ಆಗಿನ ಶಿಕ್ಷಣಮಂತ್ರಿಗಳಾಗಿದ್ದ ಎಸ್.ಆರ ಕಂಠಿಯ ವರನ್ನು ಕರೆಸಲಾಗಿತ್ತು. ಮುಖ್ಯ ಅತಿಥಿಗಳಾಗಿ ನಾಡಿನ ಸಾಹಿತಿಗಳು ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದ ಮ.ಗು. ಬಿರಾದರರವರು ವಹಿಸಿದ್ದರು. ಇದಲ್ಲದೇ ಹಿರಿಯ ವ್ಯಾಪಾರಿಗಳು ಈ ಒಂದು ಕಲಾಶಾಲೆಯ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು. ಅಷ್ಟೊತ್ತಿಗೆ ಮೊದಲನೆ ವರ್ಷದ ವಿದ್ಯಾರ್ಥಿಗಳು ಪಾಸಾಗಿ ಎರಡನೆ ವರ್ಷಕ್ಕೆ ಕಾಲಿಟ್ಟಿದ್ದರು. ಈ ವಿದ್ಯಾರ್ಥಿಗಳನ್ನು ಕೂಡಿಸಿಕೊಂಡು ಇನ್ನು ಐದಾರು ವಿದ್ಯಾರ್ಥಿಗಳನ್ನು ಜಮಾಯಿಸಿ ಪ್ರವೇಶವನ್ನು ಮಾಡಿಸಿದರು. ಆಗ

[illegible]



ಚಿತ್ರ 3. ಆದರ್ಶ ಕಲಾ ಮಂದಿರದ ಉದ್ಘಾಟನಾ ಸಮಾರಂಭದ ಬಗ್ಗೆ

ವಿದ್ಯಾರ್ಥಿಗಳ ಮನೆಗೆ ಹೋಗಿ ಅವರಿಗೆ ಚಿತ್ರಕಲೆಯ ಬಗ್ಗೆ ತಿಳಿ ಹೇಳಿ ಪ್ರವೇಶಕ್ಕೆಂದು ಕರೆದುಕೊಂಡು ಬರಬೇಕಾಗುತ್ತಿತು.

ಏಕೆಂದರೆ ಆಗ ಕಲಬುರ್ಗಿಯಲ್ಲಿ ಚಿತ್ರಕಲೆಯೆಂದರೆ ಯಾರಿಗೂ ಗೊತ್ತಿರಲಿಲ್ಲ. ಆದ್ದರಿಂದ ಅವರು ಚಿತ್ರಕಲೆಗೆ ಅಷ್ಟೊಂದು ಪ್ರೋತ್ಸಾಹ ಕೊಡುತ್ತಿರಲಿಲ್ಲ. ಖಂಡೇರಾವರು ಎಷ್ಟೋ ಸಾರಿ ವಿದ್ಯಾರ್ಥಿಗಳ ಶುಲ್ಕವನ್ನು ತಾವೇ ಕಟ್ಟಿ ಪರೀಕ್ಷೆಗೆ ಕೂಡಿಸುತ್ತಿದ್ದರು. ಪ್ರಾರಂಭದ ದಿನಗಳಲ್ಲಿ ಖಂಡೇರಾವರು ಕಲಾ ಶಾಲೆಯನ್ನು ನಡೆಸಲು ತುಂಬಾ ಪರಿಶ್ರಮ ಪಡಬೇಕಾಯಿತು. ಸಿ.ವಿ ಕರಡಗಿಯವರು ಹೇಳಿದ ಹಾಗೆ ಅವರಿಂದ ಯಾವ ಸೌಲಭ್ಯಗಳೂ ಖಂಡೇರಾವರು ನಡೆಸುವ ಆದರ್ಶ ಕಲಾ ಮಂದಿರಕ್ಕೆ ದೊರೆಯಲಿಲ್ಲ. ಈ ವೇಳೆಯಲ್ಲಿ ಅವರು (Art abd Craft) ವಿಭಾಗದಿಂದ ನಿವೃತ್ತಿಯನ್ನು ಹೊಂದಿದ್ದರು. ಖಂಡೇರಾವರಿಗೆ ಕಲಾಶಾಲೆಯನ್ನು ಮುನ್ನಡೆಸುವಲ್ಲಿ ಕಷ್ಟಗಳು ಒಂದರಂತೆ ಒಂದು ಹೆಚ್ಚತೊಡಗಿದವು. ವಿದ್ಯಾರ್ಥಿಗಳು ಕೊಡುವ ಫೀಸು ಶಾಲೆ ನಡೆಸುವ ಕೋಣೆಯ ಬಾಡಿಗೆಗೆ ಸಾಕಾಗುತ್ತಿರಲಿಲ್ಲ. ಮನೆಯಿಂದ ತಂದು ಮತ್ತೊಬ್ಬರ ಕಡೆಯಿಂದ ಸಾಲ ಸೋಲ ಮಾಡಿಕೊಂಡು ಕಲಾಶಾಲೆಯನ್ನು ನಡಸಹತ್ತಿದ್ದರು. ಇದೇ ವೇಳೆಯಲ್ಲಿ ಎ.ಎಸ್. ಪಾಟೀಲರು ಮುಂಬೈನ ಜೆ. ಜೆ. ಕಲಾಶಾಲೆಯಲ್ಲಿ ಡಿಪ್ಲೋಮಾವನ್ನು ಮುಗಿಸಿಕೊಂಡು ಬಂದಿದ್ದರು. ಎ.ಎಸ್. ಪಾಟೀಲರು ಚಿತ್ತಾಪೂರ ತಾಲೂಕಿನ ಭಂಕೂರದವರು ಶ್ರೀಮಂತ ಕುಟುಂಬದವರಾಗಿದ್ದು ಮೇಲಾಗಿ ಗೌಡರ ಮನೆತನದವರು . ಇವರ ತಂದೆಯವರಾದ ಶಿವಶಂಕ್ರಪ್ಪ ಪಾಟೀಲರು ತಂಬಾ ಬೇಕಾದ ವ್ಯಕ್ತಿಗಳಾಗಿದ್ದರು. ಎ.ಎಸ್. ಪಾಟೀಲರಿಗೆ ಮನೆಯಲ್ಲಿ ಆರ್ಥಿಕವಾಗಿ ಯಾವ ತೊಂದರೆಯಿಲ್ಲದಿದ್ದರು ಸುಮ್ಮನೆ ಕೂಡುವ ಬದಲು ಯಾವುದಾದರೂ ಒಂದು ನೌಕರಿಯನ್ನು ಮಾಡಬೇಕು ಎಂದುಕೊಂಡು ಖಂಡೇರಾವರು ನಡೆಸುತ್ತಿದ್ದ ಆದರ್ಶ ಕಲಾಮಂದಿರವೆಂಬ ಕಲಾಶಾಲೆಗೆ ಕಲಾ ಶಿಕ್ಷಕರೆಂದು ಸೇವೇಯನ್ನು ಮಾಡುವ ಉತ್ಸಾಹ ಹೊಂದಿದವರಾಗಿದ್ದರು. ಇವರು ಖಂಡೇರಾವರ ಜೊತೆಗೂಡಿಕೊಂಡು ವಿದ್ಯಾರ್ಥಿಗಳಿಗೆ ಕಲಾಶಿಕ್ಷಣದ ಜೊತೆಗೆ , ಕಲೆಯ ಮೌಲ್ಯಗಳನ್ನು ತಿಳಿಸುತ್ತಾ ಆದರ್ಶ ಕಲಾಮಂದಿರವನ್ನು ನಡೆಸಿಕೊಂಡು ಹೊಗುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಕಲಬುರ್ಗಿಯಲ್ಲಿ ಕಲಾಶಿಕ್ಷಣಕ್ಕಾಗಿ ಕಲಾವಿದರ ನಿರ್ಮಾಣಕ್ಕಾಗಿ ಪ್ರಾರಂಭಗೊಂಡ ಈ ಕಲಾಶಾಲೆ ಬಹಳಷ್ಟು ಆಗ್ನಿಪರೀಕ್ಷೆಗಳನ್ನು ಎದುರಿಸಬೇಕಾಯಿತು. ಈ ಸಂಸ್ಥೆಯ ಅಧ್ಯಕ್ಷರಾಗಿ ಊರಿನ ಗಣ್ಯವ್ಯಕ್ತಿಗಳಾಗಿದ್ದ ಕರಣಪ್ಪ ಅಂದೋಲಾ ಅವರು ಕಾರ್ಯನಿರ್ವಹಿಸುತ್ತಿದ್ದರು. ಇದಲ್ಲದೇ ಅನೇಕ ಜನ ಸದಸ್ಯರಾಗಿ ,ಸಲಹೆಗಾರರಾಗಿ ನೇಮಕಗೊಂಡರು. ಕಲಾಸಂಸ್ಥೆಯ ಕಾರ್ಯಕಾರಿ ಸಮಿತಿ ಕೇಲವು ಹೆಸರಿಗೋಸ್ಕರವಾಯಿತು. ವ್ಯಾಪಾರಿ ಮನೋಭಾವನೆಯ ಸದಸ್ಯರು ಯಾವ ಲಾಭವಿಲ್ಲದೆ ತಮ್ಮಿಂದ ಹಣ ಕೈಬಿಡುವ ಪ್ರಸಂಗ ಬರಬಹುದೆಂದು ದೂರ ಸರಿಯಹತ್ತಿದ್ದರು. ಕ್ರಮೇಣ ಪೂರ್ತಿಭಾರ ಖಂಡೇರಾವರ ಮೇಲೆ ಬಿಳಹತ್ತಿತ್ತು. ಎಲ್ಲಾ ರೀತಿಯ ಸಹಾಯ ಸಹಕಾರ ನೀಡುವ ಭರವಸೆಯನ್ನು ಕೊಟ್ಟಿದ್ದು ಆರ್ಟ ಆ್ಯಂಡ್ ಕ್ರಾಫ್ಟ ಡೈರೆಕ್ಟರ ಆಗಲೇ ನಿವೃತ್ತಿಯನ್ನು ಹೊಂದಿದ್ದರು. ಆರ್ಥಿಕ ದೃಷ್ಟಿಯಿಂದ ದುರ್ಬಲಗೊಳ್ಳುತ್ತಾ ಸಾಗಿದೆ ಕಲಾಶಾಲೆ ಕುಂಟುತ್ತಾ ಸಾಗಿತು. ಒಂದು ಇಡೀ ಸಂಸ್ಥೆಯನ್ನು ಯಾರ ಸಹಾಯ ಸಹಕಾರವಿಲ್ಲದೆ ನಡೆಸುವಮಾತು ಸಣ್ಣದಲ್ಲ. ಖಂಡೇರಾವರು ತನ್ನ ಶಿಶು ಉಳಿದು ಬೆಳದು ಬರಬೇಕೆಂಬ ಹೆಬ್ಬಯಕೆಯಲ್ಲಿ ತನ್ನನ್ನೇ ತಾನು ಮುಡುಪಾಗಿಟ್ಟುಕೊಳ್ಳಲು ಮುಂದಾದರು. ಸಂಸ್ಥೆಯ ಮುನ್ನಡೆ ಖಂಡೇರಾವರಿಗೆ ಸತ್ವ ಪರೀಕ್ಷೆಯನ್ನು ಒದಗಿಸಿತು. ಮನೆಯಿಂದ ಸ್ಥಿತಿವಂತರಿದ್ದರೂ, ಕಲಾಮಂದಿರಕ್ಕೆ ಹಣದ ಸಹಾಯ ದೊರೆಯಲಿಲ್ಲ. ಖಂಡೇರಾವರು ತಮ್ಮ ಮದುವೆಗೆಂದು ಹಾಕಿದ ಕೊರಳಲ್ಲಿರುವ ಬಂಗಾರದ ಚೈನು ಹಾಗೂ ಕೈಯಲ್ಲಿರುವ ಉಂಗುರವನ್ನು ಒತ್ತೆಯಿಟ್ಟು ಹಣತಂದರು. ಮುಂದೆ ಶ್ರೀಮಂತರ ಸಾಲಗಾರರಾದರು. ಅವರು ಈ ಕಷ್ಟಗಳನ್ನು ಅನುಭವಿಸಿದ್ದು ತಮ್ಮೊಬ್ಬರ ಸುಖಕ್ಕಾಗಿ ಅಲ್ಲ. ಹತ್ತು ಜನ ಕಲಾವಿದರ ನಿರ್ಮಾಣಕ್ಕಾಗಿ , ಈ ಕಷ್ಟಗಳು ಇನ್ನೂ ಹೆಚ್ಚಿಸಿದವು. ಖಂಡೇರಾವರು ಒಂದೆಡೆ ಹಣಕ್ಕಾಗಿ ಶ್ರೀಮಂತರ ಬಾಗಿಲುಗಳಿಗೆ ಎಡತಾರದ್ದರಲ್ಲದೇ ಕಲಾವಿದ್ಯಾರ್ಥಿಗಳ ಮನೆ ಮನೆಗೆ ತಿರುಗುವ ಪ್ರಸಂಗವು ಬಂದಿತು. [1]

---

1. ಗವೀಶ ಹಿರೇಮಠ : ಕಲಾವಿದರು ನಡೆದು ಬಂದ ದಾರಿ , ಪುಟ 38

ಖಂಡೇರಾವರ ಆಪ್ತರಾಗಿದ್ದ ತಿಪ್ಪಣ್ಣ ಮಾಸ್ತರರೆಂಬುವರು ಆಗಾಗ ಅಲ್ಪ-ಸ್ವಲ್ಪ ಸಹಾಯ- ಸಹಕಾರದೊಂದಿಗೆ ಸಹಕರಿಸುತ್ತಿದ್ದರು. ಹೀಗೆ ಎ.ಎಸ್.ಪಾಟೀಲರು ಒಂದೆರಡು ವರ್ಷಗಳು ಆದರ್ಶ ಕಲಾಮಂದಿರದಲ್ಲಿ ಕೆಲಸ ಮಾಡಿದರು. ನಾಲ್ಕು ವರ್ಷದ ಡಿಪ್ಲೋಮಾ ಕೋರ್ಸನ್ನು ಇಲ್ಲಿ ಪ್ರಾರಂಭಿಸಲಾಗಿತ್ತು. ಇದಲ್ಲದೆ ಎರಡು ವರ್ಷದ ಗ್ರೇಡ ಪರೀಕ್ಷೆಗಳನ್ನು ಸಹ ಕೊಡಲು ಇಲ್ಲಿ ಅವಕಾಶ ಕಲ್ಪಿಸಿಕೊಡಲಾಗಿತ್ತು. ಎರಡು ವರ್ಷದ ಗ್ರೇಡ ಪರೀಕ್ಷೆಗಳ ನಂತರ ನಾಲ್ಕು ವರ್ಷದ ಡಿಪ್ಲೋಮಾ ಕೊರ್ಸಗಳನ್ನು ಆದರ್ಶಕಲಾಮಂದಿರದಲ್ಲಿ ಬೋಧಿಸಲಾಗುತ್ತಿತ್ತು. ಮತ್ತು ಹೆಚ್ಚಿನ ವಿಷಯಗಳಾಗಿ ಆಗಾಗ ನಿಸರ್ಗಚಿತ್ರಗಳನ್ನು ಚಿತ್ರಿಸಲು ವಿದ್ಯಾರ್ಥಿಗಳಿಗೆ ಕಲಬುರ್ಗಿಯ ಸಮೀಪ ಅಕ್ಕ-ಪಕ್ಕದ ಹಳ್ಳಿಗಳಿಗೆ ಹೋಗಿ ಅಲ್ಲಿ ಎಲ್ಲಾ ವಿದ್ಯಾರ್ಥಿಗಳನ್ನು ಗುಂಪು ಕೂಡಿಸಿಕೊಂಡು ಅವರಿಗೆ ನಿಸರ್ಗಚಿತ್ರಗಳನ್ನು ಹೇಗೆ ರಚಿಸುವದೆಂದು ಸ್ವತಃ ತಾವೇ ಒಂದು ನಿಸರ್ಗಚಿತ್ರವನ್ನು ರಚಿಸುವದದೊಂದಿಗೆ ತಿಳಿಸುತ್ತಿದ್ದರು.

ಇದಲ್ಲದೆ ವಿದ್ಯಾರ್ಥಿಗಳಿಗೆ ಕಲಾಶಾಲೆಯಲ್ಲಿ ಸಾಂಸ್ಕೃತಿಕ ಚಟುವಟಿಕೆಗಳನ್ನು ಏರ್ಪಡಿಸುತ್ತಿದ್ದರು. ಇದರಲ್ಲಿ ನಾಡಿನ ಹಿರಿಯ ಸಾಹಿತಿಗಳು, ಕವಿಗಳು, ಕಲಾವಿದರನ್ನು ಕರೆಸಿ ಉಪನ್ಯಾಸವನ್ನು ನೀಡಿಸುವದಾಗಲಿ ಪ್ರಾತ್ಯಕ್ಷಿಕೆಗಳನ್ನು ಮಾಡಿಸುವದಾಗಲಿ, ಮಾಡುವದರಿಂದ ವಿದ್ಯಾರ್ಥಿಗಳಲ್ಲಿ ಕಲೆಯಲ್ಲದೆ , ಸಾಂಸ್ಕೃತಿಕ ಅರಿವು ಮೂಡಿಸುವಲ್ಲಿ ಸಕ್ರೀಯವಾದ ಕಲಾಚಟುವಟಿಕೆಗಳನ್ನು ನಡೆಸುತ್ತಿದ್ದರು. ಕಲಾಶಾಲೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಂದ ಕಲಾಕೃತಿಗಳನ್ನು ರಚಿಸುವ ಸ್ವರ್ಧೆಯನ್ನು ಏರ್ಪಡಿಸಿ, ಅವುಗಳಲ್ಲಿ ಉತ್ತಮವಾದವುಗಳನ್ನು ಪ್ರದರ್ಶನಗಳ ಮೂಲಕ ವಾರ್ಷಿಕ ಸಮಾರಂಭವನ್ನು ವೀಕ್ಷಿಸಲು ಬಂದವರಿಗೆ ವೀಕ್ಷಣೆಗಿಡಲಾಗುತ್ತಿತ್ತು. ಇವುಗಳಲ್ಲಿ ಮೂರು ಕಲಾಕೃತಿಗಳಿಗೆ ಪ್ರಥಮ ದ್ವಿತೀಯ ಮತ್ತು ತೃತೀಯ ವೆಂದು ಮೂರು ಬಹುಮಾನಗಳನ್ನು ಕೊಡಲಾಗುತ್ತಿತ್ತು. ಈ ಬಹುಮಾನವನ್ನು ಕಾರ್ಯಕ್ರಮವೊಂದರಲ್ಲಿ ಬಂದಥ ಅತಿಥಿಗಳಿಂದ ಕೊಡಿಸಲಾಗುತಿತ್ತು. ಕಲಬುರ್ಗಿಯಲ್ಲಿ ನಡೆಯುವ ಪ್ರತಿಯೊಂದು ಕಲಾಸ್ಪರ್ಧೆಗೆ ಖಂಡೇರಾವರು ತಮ್ಮ ಕಲಾಶಾಲೆಯಿಂದ ವಿದ್ಯಾರ್ಥಿಗಳನ್ನು ಕಳಿಸುತ್ತಿದ್ದರು.

ಮುಂಬೈನ ಸರ್.ಜೆ.ಜೆ.ಕಲಾಶಾಲೆಯಲ್ಲಿ ಕಲಾಶಿಕ್ಷಣವನ್ನು ಪಡೆದಿದ್ದ ಖಂಡೇರಾವರು ಅಲ್ಲಿಯ ಕಲಾಶಿಕ್ಷಣದ ಮಾದರಿಯಲ್ಲೇ ಆದರ್ಶಕಲಾ ಮಂದಿರವನ್ನು ಪ್ರಾರಂಭಿಸಿದ್ದರು. ಜೆ.ಜೆ. ಕಲಾಶಾಲೆಯಲ್ಲಿರುವ ಪಠ್ಯಕ್ರಮವನ್ನೇ ಇಲ್ಲಿಯೂ ಅಳವಡಿಸಲಾಗಿತ್ತು. ಜೆ.ಜೆ.ಕಲಾಶಾಲೆಯಲ್ಲಿ ಕಲಿತ ಖಂಡೇರಾವರು ಅಲ್ಲಿ ತಾವು ಕಲಿತ ಶಿಸ್ತು ಸಂಯಮವನ್ನೇ ತಮ್ಮ ಕಲಾಶಾಲೆಯಲ್ಲಿಯೂ ವಿದ್ಯಾರ್ಥಿಗಳಿಗೆ ಹೇಳಿಕೊಡುತ್ತಿದ್ದರು. ಹೀಗಿದ್ದಾಗ 1968 ರಲ್ಲಿ ಬಸವಕಲ್ಯಾಣದಲ್ಲಿ ಬಸವಣ್ಣನವರ ಅಷ್ಟಶತಮಾನೋತ್ಸವ ಎಂದು ಸಮ್ಮೇಳನವು ನಡೆಯಿತು. ಇದು ಭಾರಿ ದೊಡ್ಡಪ್ರಮಾಣದಲ್ಲಿ ನಡೆಯಿತು. ಈ ಸಮ್ಮೇಳನದಲ್ಲಿ ನಮ್ಮ ಕಲಾಶಾಲೆಯ ವಿದ್ಯಾರ್ಥಿಗಳು ಚಿತ್ರಕಲಾ ಪ್ರದರ್ಶನದಲ್ಲಿ ಭಾಗವಹಿಸಿದ್ದರು. ಇವರಲ್ಲಿ ಕೆಲವರು ಶರಣರ ಜೀವನಚರಿತ್ರೆಳನ್ನಾಧರಿಸಿದ ಚಿತ್ರಗಳು, ರಂಗೋಲಿ ಚಿತ್ರಗಳು, ನಿಸರ್ಗಚಿತ್ರಗಳು ಹೀಗೆ ಹಲವು ಕಲಾಶಾಲೆಯ ವಿದ್ಯಾರ್ಥಿಗಳಿಂದ ಏರ್ಪಡಿಸಿದವು ಇದರಲ್ಲಿ ಈಗಿನ ಖ್ಯಾತ ಕಲಾವಿದರಾದ ವಿ.ಜಿ. ಅಂದಾನಿಯವರೂ ಭಾಗವಹಿಸಿದ್ದರು.

ಆದರ್ಶಕಲಾಮಂದಿರದಲ್ಲಿ ನಾಡಿನ ಬೇರೆ ಬೇರೆ ಕಡೆಗಳಿಂದ ನುರಿತ ಕಲಾವಿದರನ್ನು ಕರೆಸಿ ಅವರಿಂದ ಪ್ರಾತ್ಯಕ್ಷಿಕೆಗಳನ್ನು ನಡೆಸುತ್ತಿದ್ದರು. ಖಂಡೇರಾವರೇ ಹೇಳುವ ಹಾಗೆ ಆಗಿನ ಒಂದು ಪರಿಸ್ಥಿತಿಯಲ್ಲಿ ನಾವು ಕಲಾವಿದರಿಗೆ ದುಡ್ಡು ಕೊಟ್ಟು ಕರೆಸುವದು ಅಷ್ಟೊಂದು ಸಾಧ್ಯವಿಲ್ಲದ ಮಾತಾಗಿತ್ತು. ಅವರು ಸ್ನೇಹಪೂರ್ವಕವಾಗಿಯೇ ಬಂದು ಪ್ರಾತ್ಯಕ್ಷಿಕೆಗಳನ್ನು ಮಾಡಿಹೋಗುತ್ತಿದ್ದರು. ಅಂಥವರಲ್ಲಿ ಡಿ.ಬಿ. ಅಮೀನವರು ಸ್ಟಿಲ್ ಲೈಫ್ ಮಾಡಿ ತೋರಿಸಿದರು. ವಿ.ಕೆ ಬಾರಸ್ಕರ ಇವರೊಂದು ಪೊರಟ್ರೇಟ್ ಡೆಮಾನ್‌ಸ್ಟ್ರೇಷನ ಮಾಡಿ ತೋರಿಸಿದರು. ವಿಜಯ ಸಿಂಧೂರರವರು ಒಂದು ಪೊರಟ್ರೇಟ್ ಡೆಮಾನಸ್ಟ್ರೇಷನ್ ಮಾಡಿತೋರಿಸಿದರು. ಇವರೆಲ್ಲರೂ ನನ್ನ ಮೇಲಿದ್ದ ಅಭಿಮಾನಕ್ಕೆ ಬಂದು ಹೋಗುತ್ತಿದ್ದರು. ನೋಡ್ರಪ್ಪಾ ನಾನಂತು ಈಗ ಹೊಸದಾಗಿ ಕೆಲಸ ಮಾಡಿದ್ದಿನಿ ನನಗೆ ಅಷ್ಟೊಂದು ದುಡ್ಡು ಕೊಡೋದು ಆಗೋದಿಲ್ಲ. ವಿದ್ಯಾರ್ಥಿಗಳಿಗೆ ಏನೋ ಒಂದು ರೀತಿಯ ನಿಮ್ಮಿಂದ ಸಹಾಯವಾಗ್ತದಂತ ತಿಳಕೊಂಡಿನಿ ಎಂದು ಹೇಳುತ್ತಿದ್ದೆ ಆದರೆ ಅವರು ಎಲ್ಲರೂ ತುಂಬು ಮನಸ್ಸಿನಿಂದ ಬಂದು ವರ್ಕಮಾಡಿ ತೊರಿಸಿದ್ರು ಎಂದು ಖಂಡೇರಾವರು ತಮ್ಮ ಆಪ್ತ ಕಲಾವಿದರು ತಮ್ಮ ಮೇಲಿಟ್ಟಿರುವ ಅಭಿಮಾನವನ್ನು ವ್ಯಕ್ತಪಡಿಸುತ್ತಾರೆ. ಹೀಗೆ ಹಲವಾರು ಕಲಾವಿದರನ್ನು ಕಲಾಶಾಲೆಗೆ ಕರೆಸಿ



ಪೂಜ್ಯ ಅಪ್ಪಗಳವರು ಕಲಾಪ್ರದರ್ಶನವನ್ನು ವೀಕ್ಷಿಸುತ್ತಿರುವುದು.



ಚಿತ್ರ 4. ರಾಮಕೃಷ್ಣ ಹೆಗಡೆಯವರು ಕಲಾಪ್ರದರ್ಶನವನ್ನು ವೀಕ್ಷಿಸುತ್ತಿರುವುದು.

ಅವರಿಂದ ಉಪನ್ಯಾಸ ಪ್ರಾತ್ಯಕ್ಷಿಕೆಗಳನ್ನು ಮಾಡಿಸುತ್ತಿದ್ದರು.

ಹೀಗೆ ಆದರ್ಶಕಲಾಮಂದಿರವನ್ನು ಮುನ್ನಡೆಸುವ ಪ್ರಯತ್ನದೊಂದಿಗೆ ಕಾಲಕಳೆಯುತ್ತಾ ತಮ್ಮ ಕಲಾಚಟುವಟಿಕೆಗಳನ್ನು ಮುಂದುವರೆಸಿಕೊಂಡು ಬರುತ್ತಿದ್ದರು. ಇವರು ಹೆಚ್ಚಾಗಿ ನಿಸರ್ಗಚಿತ್ರಗಳನ್ನು ರಚಿಸುತ್ತಿದ್ದು, 1968 ರಲ್ಲಿಯೇ ಕರ್ನಾಟಕ ಲಲಿತಕಲಾ ಅಕಾಡಿಮಿಯಿಂದ ಆಫ್ಟರ್ ರೇನ್ ಎಂಬ ನಿಸರ್ಗ ಚಿತ್ರಕ್ಕೆ ಮೊದಲ ಬಾರಿಗೆ ಪ್ರಸ್ತಿಯನ್ನು ಪಡೆದುಕೊಂಡರು. ಈ ಕಲಾಕೃತಿಯು ಮಲೆಯ ನಂತರ ಸೃಷ್ಟಿಯನ್ನು ಸೂಚಿಸುತ್ತದೆ. ಕೆಲವೆಡೆ ಮೋಡ ಇಳಿಯುತ್ತಿರುವುದು. ಮತ್ತೊಂದೆಡೆ ಭೂಮಿಯ ಮೇಲೆ ಬಿದ್ದ ಹೊಂಬಿಸಿಲು, ಅದರಲ್ಲೂ ಗೋಡೆಯ ಮೇಲೆ ಬಿದ್ದ ಬಿಸಿಲು, ಆಗೋಡೆಯು ನೀರಿನಿಂದ ವದ್ದೆಯಾಗಿರುವದು. ದಾರಿಯಲ್ಲಿ ತಿರುಗಾಡುತ್ತಿರುವ ವಾಹನಗಳು, ಮನುಷ್ಯರು, ಅಲ್ಲಲ್ಲಿ ಕಾಣುವ ತಗ್ಗುಗಳು, ತಗ್ಗುಗಳಲ್ಲಿ ನಿಂತುಕೊಂಡಿರುವ ನೀರು. ಒಟ್ಟಿನಲ್ಲಿ ಮಳೆಯ ನಂತರದ ವಾತಾವರಣವನ್ನು ಪರಿಣಾಮಕಾರಿಯಾಗಿ ವ್ಯಕ್ತಪಡಿಸುವ ಚಿತ್ರವಿದು. ಈ ಕಲಾಕೃತಿಯು ಜಲವರ್ಣದಿಂದ ರಚಿಸಲಾಗಿದೆ. 1969 ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಬಹುಮಾನ ಗಳಿಸಿದ ಚಿತ್ರ ಬೀಳು ಬಿದ್ದ ಹಳ್ಳಿ . ಇದು ಕಲಬುರ್ಗಿ ಪರಿಸರದ ಒಂದು ಹಳ್ಳಿಯ ನಿಸರ್ಗಚಿತ್ರ ಜಲವರ್ಣದಿಂದ ಚಿತ್ರಿಸಲಾದ ಚಿತ್ರದಲ್ಲಿ ಹಳ್ಳಿಯಲ್ಲಿ ಅಲ್ಲಲ್ಲಿ ಬಿದ್ದುಕೊಂಡಿರುವ ದೊಡ್ಡ ದೊಡ್ಡ ಮರದ ಕಟ್ಟಿಗೆ ತುಂಡುಗಳು, ಯಾರೂ ತಿರುಗಾಡದ, ಹಾಳಾದ ದಾರಿ, ದಾರಿಯಲ್ಲಿ ಕಸಕಡ್ಡಿ, ಎದುರಿಗೆ ಯಾರೂ ವಾಸವಾಗಿರದದ ಮನೆ ಈ ಮನೆ ಹಳೆಯ ತಲೆಮಾರಿನ ಮನೆಯಂತೆ ತೋರುವದು. ಧೂಳು ಹಿಡಿದ ಮನೆ ಗೋಡೆಗಳು , ಕಟ್ಟಿಗೆಯ ಸುಂದರ ಅಲಂಕಾರಿಕ ಕಂಬಗಳು, ಅರ್ಧಭಾಗವನ್ನು ಬಿದ್ದ ಕೊಂಡಿರುವ ದಶ್ಯ ಎಲ್ಲವನ್ನು ನೋಡಿದಾಗ ಈ ಚಿತ್ರವು ಬೀಳು ಬಿದ್ದಿರುವ ಹಳ್ಳಿಯ ಸಂಪೂರ್ಣನೋಟವನ್ನು ಪ್ರತಿಬಿಂಬಿಸುತ್ತದೆ. ಮತ್ತು 1970ರಲ್ಲಿ ಕರ್ನಾಟಕ ಲಲಿತ ಕಲಾ ಅಕಾಡೆಮಿಯಿಂದ ಬಹುಮಾನವನ್ನು ಗಳಿಸಿದ ಚಿತ್ರ ವೇ ಟು ದರ್ಗಾ, ಇದೂ ಕೂಡ ಜಲವರ್ಣದಿಂದ ಚಿತ್ರಿಸಿದ ನಿಸರ್ಗಚಿತ್ರವಾಗಿದೆ. ಇದು ಕಲಬುರ್ಗಿಯ ಖಾಜಾಬಂದೇನವಾಜರ ದರ್ಗಾಕ್ಕೆ ಹೋಗುವ ದಾರಿ . ಇಲ್ಲಿ ಚಿತ್ರದ ವಸ್ತು ಬಹು ಸಾಮಾನ್ಯ . ಮಧ್ಯದಲ್ಲಿ ಒಂದು ಉದ್ದವಾದ ರಸ್ತೆ ಅದರ ಎರಡೂ ಬದಿಯಲ್ಲಿ ಗಿಡಗಂಟೆಗಳು ಅವುಗಳ ಮಧ್ಯೆ ಒಂದೆರಡು ಕಟ್ಟಡಗಳು ಈ ಚಿತ್ರವನ್ನು ನಾವು ಸಂಪೂರ್ಣವಾಗಿ ಗಮನಿಸಿದಾಗ ಈ ಚಿತ್ರದಲ್ಲಿ ಹೆಚ್ಚು ಭಾಗ ಹಸಿರು ವರ್ಣದಿಂದ ಕೂಡಿದ್ದು ಕಂಡು ಬರುತ್ತದೆ. ನೋಡಲು ಸಾಮಾನ್ಯ ಚಿತ್ರವೆನಿಸಿದರೂ ಬಳಸಿಕೊಂಡ ಬಣ್ಣ ಮತ್ತು ಅದರ ಹದ ಮುಖ್ಯ. ಈ ಚಿತ್ರ ಕಲಬುರ್ಗಿಯ ಸ್ಥಳವನ್ನು ಗುರುತುಮಾಡಿ ಕೊಡುವಲ್ಲಿ ಯಶಸ್ವಿಯಾಗುತ್ತದೆ. ಹೀಗೆ 1968,69,70 ಸತತ ಮೂರು ಬಾರಿ ಲಲಿತ ಕಲಾ ಅಕಾಡೆಮಿಯಿಂದ ನಿಸರ್ಗ ಚಿತ್ರಕ್ಕೆ ಪ್ರಶಸ್ತಿಯನ್ನು ಪಡೆದುಕೊಂಡಿದ್ದರು. ಖಂಡೇರಾವರು ವೃತ್ತಿ ಜೀವನದ ಜೊತೆಗೆ ತಮ್ಮ ಕಲಾ ಚಟುವಟಿಕೆಗಳನ್ನು ಸಹ ಮುಂದುವರೆಸಿಕೊಂಡು ಹೋಗುತ್ತಿದ್ದರು.

ಒಂದೇರಡು ವರ್ಷಗಳು ಕಳೆದವು ಆದರ್ಶ ಕಲಾ ಮಂದಿರವು ಉನ್ನತಿಯ ಹಾದಿಯ ತನ್ನ ಒಂದೊಂದೆ ಹೆಜ್ಜೆಯನ್ನು ಇಡಲಾರಂಬಿಸಿತು. ಹೈದರಾಬಾದ ಕರ್ನಾಟಕ ಸೊಸಾಯಿಟಿಯ ವ್ಯಾಪ್ತಿಯಲ್ಲಿ ಬರುವ ಮಹಾದೇವಪ್ಪಾ ರಾಂಪೂರೆ ಮೆಡಿಕಲ್ ಕಾಲೇಜನಲ್ಲಿ ಕಲಾವಿದ ಹುದ್ದೆಗೆ ಅರ್ಜಿಯನ್ನು ಕರೆದಿದ್ದರು. ಎ.ಎಸ್. ಪಾಟೀಲರು ಆಹುದ್ದೆಗಾಗಿ ಅರ್ಜಿಯನ್ನು ಸಲ್ಲಿಸಿದರು ಅಲ್ಲಿ ಎ.ಎಸ್.ಪಾಟೀಲರಿಗೆ ಕಲಾವಿದರ ಹುದ್ದೆಗೆ ಆಯ್ಕೆ ಮಡಿದರು. ಹೀಗಾಗಿ ಎ.ಎಸ್.ಪಾಟೀಲರು ಕೆಲಸವನ್ನು ದೊರೆತ ಮೇಲೆ ಆದರ್ಶಕಲಾಮಂದಿರವನ್ನು ಅನಿವಾರ್ಯವಾಗಿ ಬಿಡಲೇ ಬೇಕಾಯಿತು. ಮೊದಲೇ ಆದರ್ಶ ಕಲಾಮಂದಿರವು ಆದೀಗ ತಾನೆ ಸ್ವಲ್ಪ ಚೇತರಿಸಿಕೊಳ್ಳುವ ಹಂತದಲ್ಲಿತ್ತು. ಖಂಡೇರಾವರು ಮತ್ತು ಪಾಟೀಲರು ಕೂಡಿಕೊಂಡು ಅಲ್ಪಸ್ವಲ್ಪ ಸುಧಾರಣೆಯತ್ತ ಮುನ್ನಡೆಸುತ್ತಿದ್ದರು. ಅಂಥದರಲ್ಲಿ ಪಾಟೀಲರು ಆದರ್ಶ ಕಲಾಮಂದಿರವನ್ನು ಬಿಟ್ಟುಕೊಟ್ಟಾಗ ಅದರ ಸಂಪೂರ್ಣ ಜವಾಬ್ದಾರಿಗಳು ಖಂಡೇರಾವರಿಗೆ ಬಿದ್ದವು. ಖಂಡೇರಾವರಿಗೆ ಕಲಾಶಾಲೆಯುನ್ನು ಮುನ್ನಡೆಸುವ ಜವಾಬ್ದಾರಿಯು ಕಷ್ಟಕರವಾಗಿಯೇ ಪರಿಣಮಿಸಿತು. ತಾವೊಬ್ಬರೇ ಎಲ್ಲವನ್ನು ನಿಭಾಯಿಸಿಕೊಂಡು ಹೋಗಬೇಕು. ಇಷ್ಟೆಲ್ಲಾ ಆದರೂ ಬೋಧನಾ ಕ್ರಮದಲ್ಲಿ ಯಾವ ರೀತಿಯೂ ಏರುಪೇರುಗಳಾಗಲಿಲ್ಲ. ವಿದ್ಯಾರ್ಥಿಗಳಿಗೆ ಯಾವ ರೀತಿಯಿಂದಲೂ ತೊಂದರೆಯಾಗದೆ ನೋಡಿಕೊಂಡು ಹೋಗುತ್ತಿದ್ದರು.

ಕಲಾಶಾಲೆಯಲ್ಲಿ ಮಧ್ಯೆ ಮಧ್ಯೆ ಗ್ರೇಡ್ ಪರೀಕ್ಷೆಗಳನ್ನು ಏರ್ಪಡಿಸುತ್ತಿದ್ದರು. ಈ ಪರೀಕ್ಷೆಯಲ್ಲಿ ಕುಳಿತುಕೊಂಡ

ಹುಡುಗರ ಬಳಿ ಅಷ್ಟು ಇಷ್ಟು ಎನ್ನದೇ ಅವರು ಕೊಟ್ಟಷ್ಟು ದುಡ್ಡು ಪಡೆದು ಕಲಾಶಾಲೆಯ ಕೋಣೆಯ ಬಾಡಿಗೆಗೆ ಹಾಕುತ್ತಿದ್ದರು. ಕೆಲವೊಂದು ಸಾರಿ ಮನೆ ಮನೆಗೆ ಹೋಗಿ ವಿದ್ಯಾರ್ಥಿಗಳ ತಂದೆ ತಾಯಿಯವರಿಗೆ ಹೇಳಿ , ಅವರಿಗೆ ಕಲೆಯ ಬಗ್ಗೆ ತಿಳುವಳಿಕೆ ಮೂಡಿಸಿ ಅವರ ಮಕ್ಕಳಿಗೆ ಪರೀಕ್ಷೆಗಳನ್ನು ಕಟ್ಟಲು ಒತ್ತಾಯಿಸುತ್ತಿದ್ದರು. ಯಾಕೆಂದರೆ ಕಲಬುರ್ಗಿಯು ಆಗ ಅಷ್ಟೊಂದು ದೊಡ್ಡ ಪಟ್ಟಣವಾಗಿರಲಿಲ. ಒಂದು ಸಣ್ಣ ಊರಿನಂತಿತ್ತು. ಹಿಗಾಗಿ ಇಲ್ಲಿ ಕಲೆಯ ಬಗ್ಗೆ ಯಾರಿಗೂ ಅಷ್ಟೊಂದು ತಿಳುವಳಿಕೆ ಇರಲಿಲ್ಲ. ಕೇವಲ ಬ್ಯಾನರ ಬರೆಯುವರು, ಬೊರ್ಡ ಬರೆಯುವುದೇ ಕಲೆಯೆಂದು ಕೊಂಡಿದ್ದರು. ಇಂಥ ಒಂದು ವಾತಾವರಣದಲ್ಲಿ ಕಲಾಶಾಲೆಯು ನಡೆಸುವುದು ಕಷ್ಟಕರವಾದ ಕೆಲಸವಾಗಿತ್ತು. ಅಂಥ ಒಂದು ಕೆಲಸ ಖಂಡೇರಾವರು ಮಾಡಿದರು. ಆದರೆ ದಿನ ಕಳೆದಂತೆ ಕಲಾಶಾಲೆಯ ಬೆಳವಣಿಗೆಯಲ್ಲಿ ಕುಂಠಿತ ಬರಲು ಪ್ರಾರಂಭಿಸಿತು. ಆರ್ಥಿಕ ದೃಷ್ಟಿಯಿಂದಲೂ ಯಾವ ಲಾಭವಿರಲಿಲ್ಲ. ವಿದ್ಯಾರ್ಥಿಗಳು ಕೊಟ್ಟ ಫೀಸು ಕಲಾಶಾಲೆಯ ಕೋಣೆಯ ಬಾಡಿಗೆಗೆ ಸಾಲುತ್ತಿರಲಿಲ್ಲ. ಮನೆಯಿಂದಲೇ ದುಡ್ಡು ತೆಗೆದುಕೊಂಡು ಬಂದು ಕಲಾಶಾಲೆಗೆ ಸುರುವುಬೇಕಾಗುತ್ತಿತ್ತು. ಇವರ ಮನೆಯಲ್ಲಿಯೂ ಎಲ್ಲರಿಗೂ ಸಾಕಾಗಿಬಿಟ್ಟಿತ್ತು. ಕಲಾಶಾಲೆಯನ್ನು ನಡೆಸುವುದು ಇವರ ಮನೆಯವರಿಗೆ ಇಷ್ಟವಿರಲಿಲಲ್ಲ ಅವರು ಖಂಡೇರಾವರಿಗೆ ಕಲಾಶಾಲೆಯ ಜವಾಬ್ದಾರಿಯನ್ನು ಒಟ್ಟು ಬೇರೆಯಾವುದಾದರು ನೌಕರಿಯನ್ನು ಮಾಡಲು ಪದೇ ಪದೇ ಹೇಳುತ್ತಲೇ ಇದ್ದರು ಯಾಕೆಂದರೆ ಖಂಡೇರಾವರಿಗೆ ಮದುವೆಯಾಗಿ ಒಂದೆರಡು ಮಕ್ಕಳಾಗಿದ್ದರು. ಸಂಸಾರದ ಜವಾಬ್ದಾರಿಯನ್ನು ಹೊರಬೇಕಲ್ಲವೆ ಮಕ್ಕಳ ಲಾಲನೆ ಪಾಲನೆಯ ಕಡೆಗೆ ಗಮನ ಹರಿಸುವುದು , ಇವರು ಮನೆಗೆ ಹೋದರೆಂದರೆ ದಿನಾಲು ಯಾವುದಾದರು ಒಂದು ಪ್ರತಿಕ್ರಿಯೆ ಇದ್ದೇ ಇರುತ್ತಿತ್ತು. ಒಂದೊಂದು ಸಾರಿ ಮನೆಗೆ ಹೋಗದೆ , ಕಲಾಶಾಲೆಯಲ್ಲಿಯೇ ಉಳಿದುಕೊಂಡು ಕಲಾಸೃಷ್ಟಿಯಲ್ಲಿ ತೊಡಗುತ್ತಿದ್ದರು. ಏನೇ ಆದರೂ ಖಂಡೇರಾವರಿಗೆ ಈ ಕಡೆ ಮನೆಯ ಸಂಸಾರದ ಜವಾಬ್ದಾರಿ ಮತ್ತು ಕಲಾಶಾಲೆಯ ಜವಾಬ್ದಾರಿ ಎರಡೂ ಕಡೆಯಿಂದಲೂ ಒತ್ತಡ ಜಾಸ್ತಿಯಾಯಿತು. ಈ ಕಡೆ ಸಂಸಾರದ ಜವಾಬ್ದಾರಿಯೂ ಬಿಡುವ ಹಾಗಿಲ್ಲ. ಕಲಾಶಾಲೆಯೂ ಬಿಡುವ ಹಾಗಿಲ್ಲ . ಇದರಿಂದ ಖಂಡೇರಾವರಿಗೆ ಏನು ಮಾಡಬೇಕೆಂಬುದೇ ತೋಚದಂತಾಯಿತು.

ಇದೇ ವೇಳೆಯಲ್ಲಿ ಕಲಬುರ್ಗಿಯ ಎಂಟನೇಯ ಪೀಠಾದಿಪತಿಗಳಾಗಿದ್ದ ಡಾ॥ ಶರಣಬಸಪ್ಪಾ ಅಪ್ಪಾ ಅವರು ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ ಸದಸ್ಯರಾಗಿದ್ದರು. ಅವರು ಕಲಬುರ್ಗಿಯಲ್ಲಿರುವ ತಮ್ಮ ಸಂಸ್ಥೆಯ ಅಡಿಯಲ್ಲಿರುವ ಶರಣಬಸವೇಶ್ವರ ಮಹಾವಿದ್ಯಾಲಯದಲ್ಲಿ ಚಿತ್ರಕಲಾ ಪದವಿಯನ್ನು ಪ್ರಾರಂಭಿಸಬೇಕೆಂಬ ಆಸೆಯನ್ನು ಹೊಂದಿದವರಾಗಿದ್ದರು. ಕರ್ನಾಟಕ ವಿಶ್ವವಿದ್ಯಾಲಯಲ್ಲಿ ಈ ವಿಷಯವನ್ನು ಕುರಿತು ಚರ್ಚಿಸಿ ವಿಶ್ವವಿದ್ಯಾಲಯದ ಒಪ್ಪಿಗೆಯನ್ನು ಪಡೆದುಕೊಂಡರು . ಮೊದಲು ಮೈನರ್ ಎಂದು ಕೊರ್ಸಗಳನ್ನು ಕರೆಯುತ್ತಿದ್ದರು. ಅಂದರೆ ಇತರ ವಿಷಯಗಳೊಂದಿಗೆ ಚಿತ್ರಕಲೆಯನ್ನು ಐಚ್ಚಿಕ ವಿಷಯವನ್ನಾಗಿ ಅಳವಡಿಸಲಾಗಿತ್ತು. ಹೀಗೆ ಶರಣಬಸಪ್ಪಾ ಅಪ್ಪ ಅವರು ತಮ್ಮ ಸಂಸ್ಥೆಯಲ್ಲಿ ಚಿತ್ರಕಲಾವಿಷಯವನ್ನು ಬಿ.ಎ. ಪದವಿಯಲ್ಲಿ ಪರಿಚಯಸಿದರು. ಈ ವಿಭಾಗವನ್ನು ನೋಡಿಕೊಳ್ಳುವವರು, ಈ ವಿಷಯವನ್ನು ಹೇಳಿಕೊಡುವವರು ಬೇಕಾದಾಗ ಅವರಿವರನ್ನು ಹುಡುಕುತ್ತಿದ್ದರರು.ಅಲ್ಲದೇ ಸಂದರ್ಶವನ್ನು ಕರೆದಿದ್ದರು. ಖಂಡೇರಾವರು ಈ ಒಂದು ಸಂದರ್ಶಕ್ಕೆ ಹೋಗಿದ್ದರು. ಅಲ್ಲಿ ಪೂಜ್ಯ ಅಪ್ಪ ಅವರು ಮತ್ತು ಕೆಲವು ಉನ್ನತ ಜನರೊಂದಿಗೆ ಸಂದರ್ಶನ ನಡೆಯಿತು. ಇದಕ್ಕೂ ಮೊದಲು ಖಂಡೇರಾವರು ನಡೆಸುತ್ತಿದ್ದ ಆದರ್ಶ ಕಾಲ ಮಂದಿರವನ್ನು ಮತ್ತು ಅದರ ಕಾರ್ಯ ಚಟುವಟಿಕೆಗಳನ್ನು ಶರಣಬಸಪ್ಪಾ ಅಪ್ಪಾ ಅವರು ಗಮನಿಸಿದರು. ಖಂಡೇರಾವರು ಸಂದರ್ಶನಕ್ಕೆಂದೇ ಕೆಲವು ಉತ್ತಮ ಕಲಾಕೃತಿಗಳನ್ನು ತೆಗೆದುಕೊಂಡು ಹೋಗಿದ್ದರು. ಶರಣಬಸಪ್ಪಾ ಅವರು ಖಂಡೇರಾವರು ತೆಗೆದುಕೊಂಡು ಹೋಗಿದ್ದ ಕಲಾಕೃತಿಗಳನ್ನು ವೀಕ್ಷಿಸಿದರು. ಮತ್ತು ತಮ್ಮ ಸಂಸ್ಥೆಯಲ್ಲಿ ಖಂಡೇರಾವರಿಗೆ ಚಿತ್ರಕಲಾ ಉಪನ್ಯಾಸಕರೆಂದು ನೇಮಿಸಿಕೊಂಡರು. ಇದನ್ನು ಕಂಡು ಖಂಡೇರಾವರ ಮನೆಯಲ್ಲಿ ಎಲ್ಲರೂ ಸಂತೋಷಗೊಂಡರು. ಅಂತು ತಮ್ಮ ಮಗನಿಗೆ ಒಳ್ಳೆಯ ಕಡೆ ಕೆಲಸವನ್ನು ದೊರೆಯಿತು ಎಂದುಕೊಂಡು ಇವರ ತಂದೆಯವರು ತುಂಬಾ ಸಂತೋಷ ಪಟ್ಟುಕೊಂಡರು. ಖಂಡೇರಾವರಿಗೆ ತಮಗೆ ಕೆಲಸ ಸಿಕ್ಕಿದು ಒಂದು ಕಡೆ ಸಂತೋಷವಾದರೆ. ತಮ್ಮ ಕನಸಿನ ಕೂಸಾದ ಕಲಾಮಂದಿರದ ಕಡೆಗೆ ಹೆಚ್ಚು ಗಮನಹರಿಸುವದು ಆಗುವದಿಲ್ಲವಲ್ಲ ಎಂಬ ದುಃಖವೊಂದುಕಡೆ ಈ ಸಂದರ್ಶನಕ್ಕೆ ಎಂಟು ಜನರು ಬಂದಿದ್ದರು.

ಅವರಲ್ಲಿ ಖಂಡೇರಾವರ ಶಿಷ್ಯರಾಗಿದ್ದ ವಿ.ಜಿ.ಅಂದಾನಿಯವರೂ ಬಂದಿದ್ದರು. ಖಂಡೇರಾವರು ಸಂದರ್ಶನಕ್ಕೆ ಬಂದಿದನ್ನು ಕಂಡು ಅಂದಾನಿಯವರು ಸ್‌ರ್. ನೀವು ಸಂದರ್ಶನಕ್ಕೆ ಬಂದಿದ್ದು ತಿಳಿದಿದ್ದರೆ ನಾನು ಬರುತ್ತಿರಲಿಲ್ಲ ಎಂದು ಹೇಳಿ ಸಂದರ್ಶನದಿಂದ ನಿರ್ಗಮಿಸಿದರಂತೆ. ಆಯ್ಕೆ ಮಂಡಳಿಯ ಎದುರಿನಲ್ಲಿಯೇ ಹೇಳಿದೆ ನಾನು ಆದರ್ಶ ಕಲಾಮಂದಿರವನ್ನು ನಡೆಸುತ್ತಿದ್ದೇನೆ. ಅದಗೋಸ್ಕರ ನನಗೆ ದಿನವಿಡಿ ಇಲ್ಲೇ ಕೆಲಸ ಮಾಡುವದು ಕಷ್ಟವಾಗುತ್ತೇ ಅದ್ದರಿಂದ ಪಾರ್ಟಟೈಮ ಕೆಲಸ ಕೊಟ್ಟರೆ ಅನುಕೂಲವಾಗುತ್ತದೆ. ಎಂದು ಹೇಳಿದಾಗ , ಆಯ್ಕೆ ಮಂಡಲಿಯವರು ಇರಲಿ ವಾರದಲ್ಲಿ 3 ದಿನ ಬಂದು ಕ್ಲಾಸು ಹೇಳಿದರಾಯಿತು. ಎಂದು ಸಮ್ಮತಿಸಿದರು. ಹೀಗಾಗಿ ಖಂಡೇರಾವರು ವಾರದಲ್ಲಿ 3 ದಿನ ಮಾತ್ರ ಶರಣಬಸವೇಶ್ವರ ಕಲಾ ಮಹಾ ವಿದ್ಯಾಲಕ್ಕೆ ಬಂದು ಚಿತ್ರಕಲೆಯನ್ನು ಬೋಧಿಸುತ್ತಿದ್ದರು. ಆಗ ಖಂಡೇರಾವರಿಗೆ ತಿಂಗಳಿಗೆ 100 ರೂ. ಯಂತೆ ಸಂಭಾವನೆಯನ್ನು ಕೊಡುತ್ತಿದ್ದರು. ಬೆಳಗ್ಗೆ 8 ಗಂಟೆಗೆ ಬಂದು ಮದ್ಯಾಹ್ನ ಒಂದು ಗಂಟೆಯವರೆಗೆ ವಿದ್ಯಾರ್ಥಿಗಳಿಗೆ ಚಿತ್ರಕಲೆಯನ್ನು ಹೇಳಿಕೊಟ್ಟು ಮದ್ಯಾಹ್ನದ ನಂತರ ಆದರ್ಶಕಲಾ ಮಂದಿರದ ಕಡೆ ಹೋಗಿ ಅಲ್ಲಿ ವಿದ್ಯಾರ್ಥಿಗಳ ಜೊತೆ ಕಾಲ ಕಳೆಯವದು ಇದು ಖಂಡೇರಾವರ ದೈನಂದಿನ ಕೆಲಸವಾಯಿತು. ಹಾಗೇಯೇ ಒಂದು ವರ್ಷ ಕಳೆಯಿತು. ಆದರ್ಶ ಕಲಾ ಮಂದಿರದ ಕಲಾಚಟುವಟಿಕೆಗಳಲ್ಲಿ ಉತ್ಸಾಹ ಕಡಿಮೆಯಾಗುತ್ತಾ ಬಂತು. ಖಂಡೇರಾವರನ್ನು ಬಿಟ್ಟರೆ ಅಲ್ಲಿ ಬೋಧಿಸುವವರು ಯಾರು ಇರಲಿಲ್ಲ. ಇತ್ತ ಖಂಡೇರಾವರಿಗೆ ಶರಣಬಸವೇಶ್ವರ ಕಲಾಮಹಾವಿದ್ಯಾಲಯದಲ್ಲಿ 3 ದಿನಗಳು ಬಂದು ಹೋಗಬೇಕಾಯಿತು. ಖಂಡೇರಾವರಿಗೆ ಶರಣಬಸವೇಶ್ವರ ಸಂಸ್ಥೆಯಲ್ಲಿ ಕೆಲಸವನ್ನು ಸಿಕ್ಕ ಮೇಲೆ ಮನೆಯಲ್ಲಿ ಇವರಿಗೆ ಹೆಚ್ಚಿನ ಮರ್ಯಾದೆಯು ಸಿಗುತ್ತಿತ್ತು. ಅಂತೂ ತಮ್ಮ ಮಗ ಇಂಥ ಒಂದು ದೊಡ್ಡ ಸಂಸ್ಥೆಯಲ್ಲಿ ಉಪನ್ಯಾಸಕನಾಗಿದ್ದಾನೆ. ಎಂಬುದೇ ಅವರಿಗೆ ಸಂತೋಷ. ಖಂಡೇರಾವರಿಗೆ ಇದು ಇಷ್ಟ ವಿರಲಿಲ್ಲ ವಾದರೂ ಆರ್ಥಿಕ ದೃಷ್ಟಿಯಿಂದ ಈ ಕೆಲಸಕ್ಕೆ ಒಪ್ಪಲೇಬೇಕಾಯಿತು. ಇನ್ನೇನು ಆರ್ಥಿಕವಾಗಿ ಅನುಕೂಲವಾಯಿತು. ಆದರ್ಶಕಲಾಮಂದಿರವನ್ನು ಸರಿಯಾಗಿ ಮುನ್ನಡೆಸಿಕೊಂಡು ಹೋಗಬಹುದೆಂದು ಯೋಚಿಸಿದರೆ ಸಮಯದ ಅಭಾವ ಅದಕ್ಕೆ ಅಡ್ಡಿ ಬರಹತ್ತಿತ್ತು. ಒಂದು ವರ್ಷ ಕಳೆಯುತ್ತಿದ್ದಂತೆಯೇ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಚಿತ್ರಕಲೆಯನ್ನು ಮೇಜರ್ ಸಬಜೆಕ್ಟ ಆಗಿ ಕಲಿಸಬೇಕಾಗಿ ಬಂತು. ಅಂದರೆ ದಿನಾಲು ಕ್ಲಾಸುಗಳನು ನಡೆಸುವುದು ಈ ದೃಷ್ಟಿಯಿಂದ ಶರಣಬಸವೇಶ್ವರ ಸಂಸ್ಥೆಯ ಆಡಳಿತ ಮಂಡಳಿಯವರು ಖಂಡೇರಾವರಿಗೆ ದಿನಾಲು ಕಾಲೇಜಿಗೆ ಬರಲು ಸೂಚಿಸಿದರು. ಅದಕ್ಕಾಗಿ ಚಿತ್ರಕಲೆಯ ಒಂದು ಪ್ರತ್ಯೇಕ ವಿಭಾಗವನ್ನೇ ತೆರೆದರು. ಖಂಡೇರಾವರಿಗೆ ಚಿಂತೆ ಶುರುವಾಯಿತು. ನಾನು ಇಲ್ಲಿ ಪೂರ್ತಿದಿನ ದುಡಿದರೆ ಆದರ್ಶ ಕಲಾ ಮಂದಿರದ ಗತಿ ಏನು? ಆ ಕಲಾಶಾಲೆಯನ್ನು ಹೇಗೆ ನೋಡಿಕೊಳ್ಳಬೇಕು. ಈ ಕಡೆ ಸಿಕ್ಕ ಕೆಲಸವೂ ಬಿಡುವ ಹಾಗಿಲ್ಲ. ಒಂದು ವೇಳೆ ಕಲಾಶಾಲೆಯ ಜವಬ್ದಾರಿಯನ್ನು ಯಾರಿಗಾದರೂ ವಹಿಸಿದರೆ ಹೇಗೆ? ಯಾರು ಅದನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಹೋಗಬಲ್ಲರೆಂಬ ಅನೇಕ ಆಲೋಚನೆಗಳು ಮನಸ್ಸಿನಲ್ಲಿ ಮನೆ ಮಾಡಿಬಿಟ್ಟವು. ಇರಲಿ ಹೇಗಾದರೂ ಮಾಡಿ ಯಾರಿಗಾದರೂ ಒಳ್ಳೆಯವರಿಗೆ ಇದನ್ನು ಒಪ್ಪಿಸಿದರಾಯಿತು. ಎಂದುಕೊಂಡು ಇವರ ಶಿಷ್ಯರಾದ ಶಿವಶರಣಪ್ಪ ಉಪ್ಪಿನರವರನ್ನು ಕೇಳಿದಾಗ ಅವರು ಸರ್ ನಾನು ಇನ್ನು ಚಿಕ್ಕವನು ಅಷ್ಟೊಂದು ದೊಡ್ಡ ಭಾರವನ್ನು ನನ್ನಿಂದ ಹೊರಲು ಸಾಧ್ಯವೆ . ಒಂದು ಕಲಾಶಾಲೆಯನ್ನು ನಡೆಸಿಕೊಂಡು ಹೋಗುವ ಮಾತು ಸಣ್ಣದಲ್ಲ ಎಂದು ಖಂಡೇರಾವರನ್ನು ಪ್ರತ್ಯುತ್ತರಿಸಿದಾಗ ಖಂಡೇರಾವರು ನೋಡಪ್ಪಾ ನೀನು ಸಾದ್ಯವಾಗುವ ಮಟ್ಟಿಗೆ ಇದನ್ನು ನೋಡಿಕೊ ನಾನು ಯಾವಾಗಲೂ ನಿನ್ನ ಬೆನ್ನ ಹಿಂದೆ ಇರುತ್ತೇನೆ. ನಾನೇನು ಪೂರ್ತಿಯಾಗಿ ಬಿಟ್ಟುಹೋಗುತ್ತಿಲ್ಲಾ. ನೀನಗೇನೂ ತೊಂದರೆಯಾಗದ ಹಾಗೆ ನಾನು ನೋಡಿಕೊಳ್ಳುತ್ತೇನೆ. ನೀನೇನು ಹೆದರಬೇಡ ಎಂದು ಸಮಝಾಯಿಸಿ ಶಿವಶರಣಪ್ಪ ಉಪ್ಪಿನರವರಿಗೆ ಆದರ್ಶಕಲಾ ಮಂದಿರದ ಜವಾಬ್ದಾರಿಯನ್ನು ಒಪ್ಪಿಸುತ್ತಾರೆ. ಶಿವಶರಣಪ್ಪ ಉಪ್ಪಿನರವರು ಶ್ರೀಮಂತ ಮನೆತನದವರು. ಮೇಲಾಗಿ ಕಲೆಯ ಬಗ್ಗೆ ತುಂಬಾ ಆಸಕ್ತಿಯನ್ನು ಹೊಂದಿದವರಾಗಿದ್ದರು. ಇವರು ಆದರ್ಶಕಲಾಮಂದಿರದ ಜವಾಬ್ದಾರಿಯನ್ನು ಹೊತ್ತುಕೊಂಡ ಮೇಲೆ ಕಿರಾಣಾ ಬಜಾರನಲ್ಲಿರುವ ಕೋಣೆಯನ್ನು ಬಿಟ್ಟು ಈಗಿನ ಕೆ.ಇ.ಬಿ. ಕಟ್ಟಡದ ಹಿಂದುಗಡೆ ಕೋರ್ಟಿಗೆ ಹೋಗುವ ಮಾರ್ಗದಲ್ಲಿ ಎರಡು ಕೋಣೆಗಳಿರು ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ಆದರ್ಶಕಲಾ ಮಂದಿರವನ್ನು ನಡೆಸಹತ್ತಿದ್ದರು. ಖಂಡೇರಾವರಿಗೆ ಸ್ವಲ್ಪ ವಿಶ್ರಾಂತಿಯು ಸಿಕ್ಕಿತು. ಅವರು ನೆಮ್ಮದಿಯ ಉಸಿರುಬಿಟ್ಟರು.

ಈ ಕಡೆ ಶರಣಬಸವೇಶ್ವರ ಕಲಾಮಹಾವಿದ್ಯಾಲಯದಲ್ಲಿ ಚಿತ್ರಕಲೆಯನ್ನು ಮೇಜರ್ ವಿಷಯವಾಗಿ ಹೇಳಿಕೊಡಲು ಮುಂದಾದರು. ಇಲ್ಲಿ ಚಿತ್ರಕಲೆಯದ್ದೇ ಆದ ಒಂದು ಪ್ರತ್ಯೇಕವಾದ ವಿಭಾಗವನ್ನು ಪ್ರಾರಂಭ ಮಾಡಿ ಅಲ್ಲಿ ವಿಧ್ಯಾರ್ಥಿಗಳಿಗೆ Portrait, Landscape, still life, Graphics, composition, mural ಗಳಂತ ವಿಷಯಗಳನ್ನು ಹೇಳಿಕೊಡುತ್ತಿದ್ದರು. ವಿದ್ಯಾರ್ಥಿಗಳಿಗೆ ಪ್ರತಿ ರವಿವಾರ ವಾರಕ್ಕೊಮ್ಮೆಯಂತೆ ಕಲಬುರ್ಗಿಯ ಸುತ್ತಮುತ್ತಲಿನ ಹಳ್ಳಿಗಳಿಗೆ ಕರೆದುಕೊಂಡು ಹೋಗಿ ಅಲ್ಲಿ ಅವರಿಗೆ ಸ್ಕೆಚ್‌ಗಳನ್ನು ಮಾಡುವದು ನಿಸರ್ಗಚಿತ್ರಗಳನ್ನು ಬಿಡಿಸುವುದು ಹೇಳಿಕೊಡುತ್ತಿದ್ದರು. ಸ್ವತಃ ತಾವೇ ಒಂದು ನಿಸರ್ಗಚಿತ್ರವನ್ನು ಸಂಪೂರ್ಣವಾಗಿ ಚಿತ್ರಿಸಿ ತೋರಿಸುತ್ತಿದ್ದರು. ಆದರೆ ಖಂಡೇರಾವರಿಗೆ ಸಂತೋಷದ , ಸುಖದ ಕ್ಷಣಗಳು ಬರುವದು ಕಡಿಮೆ ಇನ್ನೇನು ಎಲ್ಲವೂ ಸರಿಯಾಗಿ ನಡೆದು ಹೋಯಿತಲ್ಲ ಎಂದು ನೆಮ್ಮದಿಯ ನಿಟ್ಟುಸಿರು ಬಿಟ್ಟಾಗ ,ಮತ್ತೇ ಆದರ್ಶ ಮಂದಿರದ ಚಿಂತೆ ಶುರುವಾಯಿತು.

19 71-72 ರಲ್ಲಿ ಎಂ. ಆರ್.ಎಮ್.ಸಿ. ಮೆಡಿಕಲ್ ಕಾಲೇಜನಲ್ಲಿ Modeller ಎಂಬ ಹುದ್ದೆಗೆ ಸಂದರ್ಶನವೊಂದನ್ನು ಕರೆದಿದ್ದರು. ಶಿವಶರಣಪ್ಪ ಉಪ್ಪಿನರವರು ಅಲ್ಲಿ ಸಂದರ್ಶನಕ್ಕೆ ಹೋಗಿದ್ದರು. Modeller ಹುದ್ದೆಗೆ ಆಯ್ಕೆಯಾದರು. ಇವರು Diploma in Modelling ವಿಷಯದಲ್ಲಿ ತೆರ್ಗಡೆಯಾಗಿದ್ದರು. ಈ ಒಂದು ಸಂಸ್ಥೆಯಲ್ಲಿ ಕೆಲಸವನ್ನು ದೊರೆತ ಕಾರಣ ಶಿವಶರಣಪ್ಪ ಉಪ್ಪಿನರವರು ಆದರ್ಶ ಕಲಾ ಮಂದಿರದ ಜವಾಬ್ದಾರಿಯನ್ನು ಇನ್ನೊಬ್ಬರಿಗೆ ಒಪ್ಪಿಸುವ ಪ್ರಸಂಗ ಬಂತು. ಖಂಡೇರಾವರಿಗೆ ಸಮಸ್ಯೆಗಳು ಒಂದು ಹಿಂದೊಂದರಂತೆ ಬರ ಹತ್ತಿದವು. ಅವು ಖಂಡೇರಾವರ ಬೆನ್ನು ಬಿಡಲಿಲ್ಲ. ಒಂದೊಂದಾಗಿ ಬರುವ ಸಮಸ್ಯೆಗಳನ್ನು ಎದುರಿಸುವುದು ಖಂಡೇರಾವರಿಗೆ ರೂಢಿಯಾಗಿತ್ತು. ತಮ್ಮ ಆದರ್ಶ ಕಲಾಮಂದಿರದ ಜವಾಬ್ದಾರಿಯನ್ನು ಯಾರಿಗೆ ಒಪ್ಪಿಸುವುದು. ಇದನ್ನು ನಡೆಸಿಕೊಂಡು ಹೋಗುವ ಜವಾಬ್ದಾರಿಯುತನನ್ನು ಹುಡುಕುತ್ತಿದ್ದಾಗ ಒಮ್ಮೆಲೆ ವಿ.ಜಿ. ಅಂದಾನಿಯವರ ನೆನಪು ಹೊಳೆಯಿತು. ವಿ.ಜಿ. ಅಂದಾನಿಯವರು ಡಿಪ್ಲೋಮಾವನ್ನು ಮುಗಿಸಿದರು. ಇವರು ನಿರಂತರವಾಗಿ ತಮ್ಮನ್ನು ಕಲಾಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಯಾವಾಗಲೂ ಇವರು ಗಡಿಬಿಡಿಯ ವ್ಯಕ್ತಿಗಳಾಗಿದ್ದರು. ಕಲಬುರ್ಗಿಯಲ್ಲಿ ನಡೆಯುವ ಯಾವುದೆ ಕಲಾ ಚಟುವಟಿಕೆಗಳು ನಡೆದರೆ ಅಲ್ಲಿ ಅಂದಾನಿಯವರು ಇದ್ದೇ ಇರುತ್ತಿದ್ದರು. ಯುವ ಉತ್ಸಾಹಿ ಕಲಾವಿದರಾಗಿದ್ದರು. ಒಳ್ಳೆಯ ಆಡಳಿತವನ್ನು ಮಾಡುವಂಥವರಾಗಿದ್ದರು. ಅವರ ನಡೆ ನುಡಿಗಳೆಲ್ಲವೂ ನೇರವಾಗಿರುತ್ತಿದ್ದವು. ಕಲಬುರ್ಗಿಯ ಗಾಜಿಪೂರ ಬಡಾವಣೆಯಲ್ಲಿ ಇವರ ಮನೆ ಇತ್ತು. ಖಂಡೇರಾವರು ಒಮ್ಮೆ ಅಂದಾನಿಯವರ ಮನೆಗೆ ಬಂದರು.

ವಿ.ಜಿ. ಅಂದಾನಿಯವರು ಖಂಡೇರಾವರ ನೆಚ್ಚಿನ ಶಿಷ್ಯರಾಗಿದ್ದರು. ಮತ್ತು ಆದರ್ಶ ಕಲಾಮಂದಿರದಿಂದ ಹೊರ ಬಂದ ಮೊದಲ ಬ್ಯಾಚಿನ ವಿದ್ಯಾರ್ಥಿಯಾಗಿದ್ದರು. ಖಂಡೇರಾವರು ಅಂದಾನಿಯವರನ್ನುದ್ದೇಶಿಸಿ ನಾನು ನಿನ್ನ ಹತ್ತಿರ ಒಂದು ಕೆಲಸದ ಮೇಲೆ ಬಂದಿದ್ದೇನೆ ಎಂದು ಹೇಳಿದಾಗ ಅಂದಾನಿಯವರು ಎನ್ ಹೇಳಿ ಸಾರ್ ಅದೂ ನಮ್ಮ ಮನೆಯವರೆಗೂ ಬಂದಿದ್ದಿರಿ. ಎಂದು ಖಂಡೇರಾವರು ಮನೆಯವರೆಗೂ ಬಂದಿರುವುದನ್ನು ಕಂಡು ಆಶ್ಚರ್ಯಚಕಿತರಾದರು. ನಮ್ಮ ಮನೆಯವರೆಗೂ ಬಂದಿದ್ದಿರಿ ಎಂದ ಮೇಲೆ ಅಂಥಾ ವಿಷಯ ಏನಿದೆ ಸಾರ್ ? ಎಂದು ಖಂಡೇರಾವರನ್ನು ಕೇಳಿದರು. ಆದಕ್ಕೆ ಖಂಡೇರಾವರು ನೀನು ಆದರ್ಶ ಕಲಾ ಮಂದಿರವನ್ನು ನಡೆಸಿಕೊಂಡು ಹೋಗಬೇಕು. ನಿನ್ನಲ್ಲಿ ಆ ಒಂದು ಸಾಮರ್ಥ್ಯವಿದೆ ಎಂದು ನೇರವಾಗಿ ಹೇಳಿಬಿಟ್ಟರು ಈ ಮಾತನ್ನು ಕೇಳಿದ ಕೂಡಲೆ ಅಂದಾನಿಯವರು ಒಮ್ಮೇಲೆ ವಿಚಲಿತರಾದರು. ಎನ್ ಸಾರ್ ನಿವೇನ ಹೇಳ್ತಿದ್ದಿರಿ ಎಂದು ಖಂಡೇರಾವರನ್ನು ಕೇಳಿದರು. ಆದಕ್ಕೆ ಖಂಡೇರಾವರು ಹೌದು ನನಗೆ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಫುಲ್ ಟೈಮ ಕಲಿಸಬೇಕಾಗಿದೆ. ಆದಕ್ಕೆ ಆದರ್ಶ ಕಲಾಮಂದಿರವನ್ನು ನನ್ನಿಂದ ನೋಡಿಕೊಳ್ಳಲು ಆಗುತ್ತಿಲ್ಲ. ಶಿವಶರಣಪ್ಪಾ ಉಪ್ಪಿನರವರನ್ನು Modeller ಹುದ್ದೆಗೆ ಆಯ್ಕೆ ಮಾಡಿದ್ದಾರೆ. ಅವರು ಬಿಟ್ಟು ಹೋಗುತ್ತಿದ್ದಾರೆ. ಆದಕ್ಕಾಗಿ ಯಾರೂ ಇಲ್ಲವೆಂದರೆ ಈ ಕಲಾಶಾಲೆ ನಡೆಯುವುದು ಹೇಗೆ ಒಮ್ಮೆ ಈ ಕಲಾಶಾಲೆಯನ್ನು ತೆರೆದಿದ್ದೆವೆ ಯಾವುದೇ ಕಾರಣಕ್ಕೆ ಅದು ಅರ್ಧಕ್ಕೆ ನಿಲ್ಲಬಾರದು. ಅದು ಮುಂದುವರೆಯಬೇಕು. ಈ ಕೆಲಸ ನೀನು ಮಾಡುತ್ತಿಯೆಂಬ ಭರವಸೆ ನನಗಿದೆ. ಆದಕ್ಕೆ ನಿನ್ನ ಮನೆಯವರೆಗೂ ಬರಬೇಕಾಯಿತು. ಎಂದು ಖಂಡೇರಾವರು ಅಂದಾನಿಯವರ ಎದುರಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಸುಮಾರು ಎರಡು -ಮೂರು

[illegible]

ಗಂಟೆಗಳ ವರೆಗೆ ಒಬ್ಬರಿಗೊಬ್ಬರು ಪರಸ್ಪರ ಚರ್ಚಿಸಿದರು. ಕೊನೆಗೆ ಅಂದಾನಿಯವರು ಒಂದು ತೀರ್ಪಿಗೆ ಬಂದರು. ಸರ್ ನಾನೇನು ಕಲಾಶಾಲೆಯನ್ನು ಮುಂದುವರೆಸಿಕೊಂಡು ಹೋಗುತ್ತೇನೆ. ಆದರೆ ಸಂಪೂರ್ಣವಾಗಿ ಕಲಾಶಾಲೆಯನ್ನು ನನಗೆ ಒಪ್ಪಿಸಬೇಕು. ಯಾವ ರಿತಿಯಿಂದಲೂ ನನಗೆ ತಕರಾರುಗಳು ಬರಬಾರದು. ಇದಕ್ಕೆಲ್ಲಾ ನೀವು ಒಪ್ಪಿದರೆ ಮಾತ್ರ ನಾನು ಆದರ್ಶ ಕಲಾಮಂದಿರದ ಜವಾಬ್ದಾರಿಯನ್ನು ಹೊರುತ್ತೇನೆ. ಎಂದು ಖಡಾಖಂಡಿತವಾಗಿ ಹೇಳಿಬಿಟ್ಟರು ಆದಕ್ಕೆ ಖಂಡೇರಾವರು ನೊಡಪ್ಪ ನಿನಗೆ ಯಾವರೀತಿಯ ಸಂಕೋಚ ಬೇಡ ನಮ್ಮಿಂದ ನೀನಗೆ ಯಾವ ರೀತಿಯ ತಕರಾರಿಲ್ಲ. ನೀನು ಹೇಗಾದರೂ ಮಾಡು ಒಟ್ಟಿನಲ್ಲಿ ಕಲಾಶಾಲೆಯು ಅರ್ಧಕ್ಕೆ ನಿಲ್ಲಿಸದೇ ಅದನ್ನು ಮುಂದುವರೆಸಿಕೊಂಡು ಹೋದರೆ ಸಾಕು. ನೀನು ಈ ಕೆಲಸ ಮಾಡುತ್ತೇನೆಂದರೆ ಅದರ ಸಂಪೂರ್ಣ ಜವಾಬ್ದಾರಿಯನ್ನು ನಿನಗೆ ಒಪ್ಪಿಸಲು ನಾನು ಸಿದ್ದನಿದ್ದೇನೆ ಎಂಬ ಭರವಸೆಯೊಂದಿಗೆ ತಮ್ಮ ಕನಸಿನ ಕೂಸಾದ ಆದರ್ಶ ಕಲಾ ಮಂದಿರವನ್ನು ವಿ.ಜಿ . ಆಂದಾನಿಯವರಿಗೆ ಒಪ್ಪಿಸುತ್ತಾರೆ. ಯಾವುದೆ ಕಲೆಗಾದರೂ ತಳಪಾಯದಲ್ಲಿ ಶುದ್ಧ ಶಿಕ್ಷಣ ಬೇಕೆ ಬೇಕು. ಒಬ್ಬ ಕಲಾವಿದನಿಗೆ ಕಲೆಯ ರಸಸ್ವಾದತೆಯನ್ನು ಪಡೆಯಲು ಮೂರು ಮೂಲೆಯ ತ್ರಿಕೋನದಂತಿರುವ ಸಂಸಾರ ಫಲ ಅಭ್ಯಾಸ ಮತ್ತು ಅವಕಾಶ ಪಡೆದಾಗ ಮಾತ್ರ ಕಲೆಯ ಸಿದ್ಧಿ ಪಡೆಯಲು ಸಾಧ್ಯ. ಅವಕಾಶದಿಂದ ಅಭ್ಯಾಸ ಮಾಡುವ ಹುಮ್ಮಸ್ಸು ಬರುತ್ತದೆ. ಆ ಹುಮ್ಮಸ್ಸಿನಿಂದ ಸಾಧಿಸುವ ಫಲ ರೂಪ ಪಡೆಯುತ್ತದೆ. ರೂಪ ಪಡೆದ ಫಲ ಸಂಸಾರ ಫಲವಾಗುತ್ತದೆ. ಅದುವೇ ಮುಂದಿನ ಪೀಳಿಗೆಗೆ ಹರಡಲು ಸಾಧ್ಯ.

ಖಂಡೇರಾವರು ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಚಿತ್ರಕಲಾ ವಿಭಾಗಕ್ಕೆನಿರ್ದೇಶಕರಾಗಿ ಸೇರಿಕೊಂಡಾಗ ಬಿ.ಎ. ಪದವಿಯಲ್ಲಿ ಇತರ ವಿಷಯಗಳೊಂದಿಗೆ ಚಿತ್ರಕಲೆಯನ್ನು ಐಚ್ಛಿಕ ವಿಷಯವನ್ನಾಗಿ ಇಲ್ಲಿ ಹೇಳಿಕೊಡಲಾಗುತ್ತಿತ್ತು. 1971 ರಿಂದ ಪ್ರಾರಂಭವಾದ ಈ ವಿಭಾಗದಲ್ಲಿ 7-8 ವರ್ಷಗಳ ವರೆಗೆ ಖಂಡೇರಾವರು ಒಬ್ಬರೆ ಉಪನ್ಯಾಸಕರಾಗಿದ್ದರು. ಇವರೊಬ್ಬರೆ ಎಲ್ಲಾ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಹೇಳಿಕೊಡುತ್ತಿದ್ದರು. ಪ್ರಾರಂಭದಲ್ಲಿ 7-8 ವಿದ್ಯಾರ್ಥಿಗಳಿಂದ ಈ ವಿಭಾಗವು ಪ್ರಾರಂಭಗೊಂಡಿತು. ವಿದ್ಯಾರ್ಥಿಗಳಿಗೆ ಅಭ್ಯಾಸದ ಪ್ರಾರಂಭದಲ್ಲಿ ದಿನಾಲು ಸ್ಕೆಚ್‌ಗಳನ್ನು ಮಾಡಲು ತಿಳಿಸುತ್ತಿದ್ದರು. ದಿನಾಲು 20 ರಿಂದ 30 ಸ್ಕೆಚ್‌ಗಳನ್ನಾದರೂ ವಿದ್ಯಾರ್ಥಿಗಳು ಮಾಡಲೇ ಬೇಕಾಗುತ್ತಿತ್ತು. ಸ್ಕೆಚ್‌ಗಳನ್ನು ಮಾಡಲು ಬಸ್ ನಿಲ್ದಾಣ , ರೈಲು ನಿಲ್ದಾಣ, ಮಾರುಕಟ್ಟೆ, ಶರಣಬಸವೇಶ್ವರ ದೇವಾಲಯ ಈ ಎಲ್ಲಾ ಸ್ಥಳಗಳು ಪ್ರಮುಖವಾಗಿದ್ದವು. ಸಾಯಂಕಾಲವಾಯಿತ್ತೆಂದರೆ ಕಲಾಶಾಲೆಗಳ ವಿದ್ಯಾರ್ಥಿಗಳ ಕೈಯಲ್ಲಿ ಒಂದು ನೋಟಬುಕ್ ಪೆನ್ಸಿಲನ್ನು ಹಿಡಿದುಕೊಂಡಿರುತ್ತಿದ್ದರು. ಖಂಡೇರಾವರು ಮುಂಬೈನ ಸರ್ ಜೆ.ಜೆ. ಕಲಾಶಾಲೆಯಲ್ಲಿ ಅಭ್ಯಾವನ್ನು ಮಾಡಿ ಬಂದಿದ್ದರಿಂದ ಅಲ್ಲಿಯ ಶಿಕ್ಷಣದ ಮಾದರಿಯಲ್ಲಿಯೇ ಇವರು ವಿದ್ಯಾರ್ಥಿಗಳಿಗೆ ಚಿತ್ರಕಲೆಯನ್ನು ಹೇಳಿಕೊಡುತ್ತಿದ್ದರು. ಜೆ.ಜೆ. ಕಲಾಶಾಲೆಯ ಶಿಸ್ತು ಸಂಯಮ ಅಲ್ಲಿಯ ವಾತಾವರಣದ ಬಗ್ಗೆ ವಿದ್ಯಾರ್ಥಿಗಳಿಗೆ ಮನ ಮುಟ್ಟುವಂತೆ ಮನವರಿಕೆ ಮಾಡಿಕೊಡುತ್ತಿದ್ದರು. ಕಲಬುರ್ಗಿಯಲ್ಲಿ ಕಲೆಯ ವಾತಾವರಣವನ್ನು ನಿರ್ಮಿಸಬೇಕೆಂಬುದು ಇವರ ಮಹಾದಾಸೆಯಾಗಿತ್ತು. ಈ ಹಿನ್ನಲೆಯಲ್ಲಿಯೇ ಇವರು ಆದರ್ಶ ಕಲಾ ಮಂದಿರವನ್ನು ಸ್ಥಾಪನೆ ಮಾಡಿದರು. ಈಗ ಶರಣಬಸವೇಶ್ವರ ಕಲಾ ಮಹಾ ವಿದ್ಯಾಲಯದಲ್ಲಿ ನಿರ್ದೇಶಕರಾಗಿ ಕೆಲಸ ಮಾಡುವಾಗ ಇಂಥದೊಂದು ದೊಡ್ಡ ಸಂಸ್ಥೆಯಲ್ಲಿ ಚಿತ್ರಕಲೆಯ ವಿಭಾಗವನ್ನು ಪ್ರಾರಂಭ ಮಾಡಿದ್ದಾರೆ. ಎಂದರೆ ಹೇಗಾದರೂ ಮಾಡಿ ಅದನ್ನು ಒಂದು ಮಟ್ಟಕ್ಕೆ ತರಬೇಕೆಂದುಕೊಂಡ ಬಯಸಿದವರಾಗಿದ್ದರು. ಪೂಜ್ಯ ಶರಣಬಸಪ್ಪಾ ಅಪ್ಪಾ ಅವರು ಕಲೆಯ ಬಗ್ಗೆ ತುಂಬಾ ಆಸಕ್ತಿಯನ್ನು ಹೊಂದಿದವರಾಗಿದ್ದರು. ಅವರು ಕೂಡ ಕಲಬುರ್ಗಿಯಲ್ಲಿ ಕಲಾವಾತಾವರಣವನ್ನು ಮೂಡಿಸಲು ತುಂಬ ಶ್ರಮಿಸಿದ್ದಾರೆ. ಇವರು ಮುಂಬೈನ ಸರ್ ಜೆ.ಜೆ. ಕಲಾಶಾಲೆ, ಅಲ್ಲಿಯ ವಾತಾವರಣವನ್ನು ತಿಳಿದುಕೊಂಡಿದ್ದರು. ಅಲ್ಲದೇ ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿದ್ದರಿಂದ ಆಗಾಗ ಧಾರವಾಡಕ್ಕೆ ಹೋಗುತ್ತಿದ್ದರು. ಅಲ್ಲಿಯ ಕಲಾವಾತಾವರಣ , ಅಲ್ಲಿಯ ಕಲಾಶಾಲೆಗಳು , ಕಲಾವಿದರು ಇವೆಲ್ಲವನ್ನು ಗಮನಿಸಿಯೇ ತಮ್ಮ ಸಂಸ್ಥೆಯಲ್ಲಿಯೂ ಇಂಥದೊಂದು ಚಿತ್ರಕಲಾ ವಿಭಾಗವನ್ನು ಏಕೆ ತೆರೆಯಬಾರದು ಎಂದುಕೊಂಡೆ ಈಗಿರುವ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದ ಲಲಿತ ಕಲಾ ವಿಭಾಗವನ್ನು ಪ್ರಾರಂಭಿಸಿದರು. ಅಂದು ಕಲಬುರ್ಗಿಯು ನಿಜಾಮ ಸರಕಾರದ ಒಂದು ಪ್ರಮುಖ ಪಟ್ಟವಾಗಿತ್ತಾದರೂ ಅಷ್ಟೊಂದು ಮುಂದುವರೆದ ಪ್ರದೇಶವಾಗಿದ್ದಿರಲಿಲ್ಲ. ಇಲ್ಲಿಯ ಸಾಂಸ್ಕೃತಿಕ ಬದುಕು ಭಿನ್ನವಾಗಿರುತ್ತಿತ್ತು. ಕಲೆಯ

ಬಗ್ಗೆ ಅಷ್ಟೇನು ಮಹತ್ವವನ್ನು ಗೊತ್ತಿರಲಿಲ್ಲ. ಮುಂಬೈನ ಸರ್.ಜೆ.ಜೆ. ಕಲಾಶಾಲೆಯಿಂದ ಅನೇಕ ಜನರು ಕಲಾಶಿಕ್ಷಣವನ್ನು ಪಡೆದುಕೊಂಡು ಕಲಬುರ್ಗಿಯಲ್ಲಿ ಕಲಾವಾತಾವರಣವನ್ನು ಮೂಡಿಸಲು ತುಂಬಾ ಶ್ರಮಪಟ್ಟವರಾಗಿದ್ದಾರೆ. ಅಂಥವರಲ್ಲಿ ಶಾಂತಲಿಂಗಪ್ಪಾ ಪಾಟೀಲ , ಶಂಕರಗೌಡ ಬೆಟ್ಟದೂರ, ಪರೂತೆ, ಶಂಕರರಾವ ಆಳಂದಕರ್ , ಎಂ.ಟಿ. ಭೋಪಲೆ, ಎಸ್. ಎಂ. ಪಂಡಿತರಂತಹ ಪ್ರಮುಖ ಕಲಾವಿದರು ತುಂಬ ಪ್ರಸಿದ್ಧ ಪಡೆದ ಕಲಾವಿದರಾಗಿದ್ದರು. ಆದರೆ ಯಾರೂ ಇಲ್ಲಿ ಕಲಾಶಾಲೆಯನ್ನು ತೆರೆಯುವ ಗೋಜಿಗೆ ಹೋಗಲಿಲ್ಲ ಎಸ್.ಎಂ. ಪಂಡಿತರಂತು ಹೆಚ್ಚಾಗಿ ಮುಂಬೈಯಲ್ಲಿಯೇ ವಾಸಿಸುತ್ತಿದ್ದರು. ಅವರು ಮುಂಬೈ ಮಹಾನಗರವನ್ನು ತಮ್ಮ ಕಲಾಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡಿದ್ದರು. ಹೀಗಾಗಿ ಈ ಭಾಗದಲ್ಲಿ ಕಲೆಯು ಬೆಳೆಯಲು ಕಲಾವಾತಾವರಣವನ್ನು ಮೂಡಲು ಸಮಯಬೇಕಾಯಿತು.

ಖಂಡೇರಾವರು ಆದರ್ಶ ಕಲಾ ಮಂದಿರವನ್ನು ಸ್ಥಾಪಿಸಿದ ಮೇಲೆ ಈ ಭಾಗದ ಕಲಾವಿದರು ಬೇರೆ ಕಡೆಗೆ ಹೋಗಿ ತಮ್ಮ ಆಸಕ್ತಿಯ ಕ್ಷೇತ್ರವಾದ ಚಿತ್ರಕಲಾ ಶಿಕ್ಷಣವನ್ನು ಪಡೆಯುವುದು ನಿಂತಿತು. ಬದಲಾಗಿ ಅವರು ಕಲಬುರ್ಗಿಯಲ್ಲಿಯೇ ಇದ್ದುಕೊಂಡು ತಮ್ಮ ಕಲಾಶಿಕ್ಷಣವನ್ನು ಪಡೆಯುವಂತ ಸೌಕರ್ಯವನ್ನು ಖಂಡೇರಾವರು ಮಾಡಿಕೊಟ್ಟರು. ನಿಜಕ್ಕೂ ಅವರಿಗೆ ನಾವು ನೆನೆಯಲೇಬೇಕು. ಅವರು ಅಂದು ಬಿತ್ತಿದ ಬೀಜಗಳೂ ಮೊಳಕೆಯೊಡೆದು ರಾಷ್ಟ್ರಮಟ್ಟದವರೆಗೆ ವ್ಯಾಪಿಸಿವೆ ಎಂದರೆ ನಾವೆಲ್ಲರೂ ತುಂಬ ಹೆಮ್ಮೆಯನ್ನು ಪಡಬೇಕು. ಇದರಲ್ಲಿ ವಿ.ಜಿ . ಅಂದಾನಿಯವರ ಶ್ರಮವೂ ನಾವು ಮರೆಯುವಂತಿಲ್ಲಾ ಯಾಕೆಂದರೆ ಬೀಜ ಬಿತ್ತಿದರೆ ಅದಕ್ಕೆ ನೀರು ಗೊಬ್ಬರವನ್ನು ಹಾಕಿ ಅದನ್ನು ಪೋಷಿಸಿ ಇಂದು ವಿಶಾಲ ಮರವನ್ನಾಗಿ ಮಾಡಿದ ಕೀರ್ತಿ ಅಂದಾನಿಯವರಿಗೆ ಸಲ್ಲುತ್ತದೆ. ಹೀಗಾಗಿ ಕಲಬುರ್ಗಿಯಲ್ಲಿ ಇಂದು ಆದರ್ಶಕಲಾ ಮಂದಿರ , ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದ ಲಲಿತ ಕಲಾ ವಿಭಾಗ ಪ್ರಾರಂಭಗೊಂಡು ಕಲಬುರ್ಗಿಯಲ್ಲಿ ಹೊಸ ಅಲೆಯನ್ನೇ ಎಬ್ಬಿಸಿವೆ. ಎಂದರೆ ಅತಿಶಯೋಕ್ತಿಯಾಗಲಾರದು. ಈ ಒಂದು ತಳಪಾಯದಿಂದಲೇ ಇಂದು ಹಲವಾರು ಹೊಸ ಹೊಸ ಕಲಾಶಾಲೆಗಳು ಹುಟ್ಟಿಕೊಂಡಿವೆ ಇನ್ನೂ ಹುಟ್ಟಿಕೊಳ್ಳುತ್ತಲೇ ಇವೆ. ಆದರ್ಶ ಕಲಾ ಮಂದಿರವನ್ನು ಅಂದಾನಿಯವರು ನಡೆಸಿಕೊಂಡು ಬಂದ ಮೇಲೆ ಅದರ ಸಮುಚ್ಚಾಯದಲ್ಲೆ ಎಂ.ಎಂ.ಕೆ. ಕಾಲೇಜ ಆಪ್ ವಿಜುವಲ್ ಆರ್ಟ ಎಂಬ ವಿಭಾಗವನ್ನು ತೆರೆದಿದ್ದರಿಂದ ಆ ಸಮುಚ್ಚಾಯವನ್ನು ಇಂದು ಕಲಾನಿಕೇತನ ಎಂಬ ಹೆಸರಿನಿಂದ ಕರೆಯಲಾಗುತ್ತಿದೆ.

ಚಿತ್ರಕಲೆ ಜೀವನದ ಕೈಗನ್ನಡಿಯಷ್ಟೇ ಅಲ್ಲ. ಅದು ನಮ್ಮ ಬದುಕಿನ ಮುನ್ನಡೆಗೂ ಕಾರಣವಾಗಬಲ್ಲದು ಒಂದು ರೀತಿಯಲ್ಲಿ ಜೀವನದ ಪ್ರತಿಬಿಂಬವೂ ಹೌದು ಅಷ್ಟೆ ಅಲ್ಲ ಅದು ಗತಿಬಿಂಬವೂ ಹೌದು ಜನಸಾಮಾನ್ಯರಿಗೆ ಸುಲಭವಾಗಿ ಅನುಭವ ವಾಗಬಲ್ಲ ಕಲಾಮಾಧ್ಯಮದಲ್ಲಿ ಚಿತ್ರಕಲೆ ಪ್ರಮುಖವಾದುದ್ದು , ಇದಕ್ಕೆ ಕಾಲ, ದೇಶ ಭಾಷೆ, ಪ್ರದೇಶಗಳನ್ನು ಮೀರಿದ ವ್ಯಾಪ್ತಿ ಇದೆ. ಹೀಗಾಗಿ ಚಿತ್ರಕಲೆಯನ್ನು ಅಂತರರಾಷ್ಟ್ರಿಯ ಭಾಷೆಯೆಂದು ಕರೆಯಲಾಗುತ್ತಿದೆ. ಚಿತ್ರಕಲೆ ಇಲ್ಲದ ಶಿಕ್ಷಣವೂ ಕಿಟಕಿಗಳಿಲ್ಲದ ಮನೆಯ ಹಾಗೆ ಎಂಬ ಮಾತು ಚಿತ್ರಕಲೆ ಹಾಗೂ ಶಿಕ್ಷಣದ ಸಾಮರಸ್ಯದ ಕುರಿತಾದ ಮಾತಾಗಿದೆ. ಬರ್ನಾಡ ಶಾ ಹೇಳುವಂತೆ ನೋಯಿಸದೇ ವಿದ್ಯೆಯನ್ನು ನೀಡಬಲ್ಲ ಶಿಕ್ಷಕನೆಂದರೆ ಕಲೆಯು ಮಾತ್ರ ಎಂಬುದರಲ್ಲಿ ಔಚಿತ್ಯವಿದೆ. ಕಲೆಯು ಮಾನವನನ್ನು ಅತಿಮಾನವನನ್ನಾಗಿ ಮಾಡುವ ಸಾಧನವಾಗಿದೆ. ಅಷ್ಟೆ ಅಲ್ಲಾ ಒಂದು ಚಿತ್ರಕ್ಕೆ ಸಾವಿರ ಶಬ್ದಗಳ ಶಕ್ತಿಯಿದೆ. ಹೀಗಾಗಿ ಅದೊಂದು ದೃಶ್ಯಕಾವ್ಯ ಎನ್ನಬಹುದು.[2] ಇಂಥ ಒಂದು ಚಿತ್ರಕಲಾ ಶಿಕ್ಷಣವನ್ನ ನೀಡುವ ದೇಸೆಯಿಂದ ಖಂಡೇರಾವರು ಶಿಕ್ಷಕ ವೃತ್ತಿಯನ್ನು ಆರಿಸಿಕೊಂಡವರು ಇವರೇ ಹೇಳುವ ಹಾಗೆ ಕೇವಲ ಕಲಾವಿದನಾದರೆ ನಾವು ನಮ್ಮ ಒಂದು ಚೌಕಟ್ಟಿನೊಳಗೆ ಇರುತ್ತೇವೆ. ಬರಿ ಕಲಾಕೃತಿಗಳನ್ನು ಮಾಡುವುದು, ಕಲಾಪ್ರದರ್ಶನಗಳನ್ನು ಮಾಡುವದು ನಮ್ಮ ಒಂದು ಹಿತಕ್ಕಾಗಿ , ನಮಗಾಗಿಯೇ ಮಾಡುವದಾಗುತ್ತದೆ. ಆದರೆ ಕಲಾಶಿಕ್ಷಕನಾದರೆ ತಾನು ತಿಳಿದಿರುವುದನ್ನು

---

2. ಡಾ. ಎಸ್.ಸಿ.ಪಾಟೀಲ (ಸಂ.) : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ 116

ಇನ್ನೊಬ್ಬರಿಗೆ ಹೇಳುವ ಒಂದು ಅವಕಾಶವನ್ನು ಒದಗಿಬಂದಂತಾಗುತ್ತದೆ. ಉದಾಹರಣೆಯಾಗಿ ಹೇಳಬೇಕಾದರೆ ನಾನು ಏನು ಕಲಿಯುತ್ತಿದ್ದೆನೆ. ಯಾವ ರೀತಿಯಾಗಿ ಅಭ್ಯಾಸವನ್ನು ಮಾಡುತ್ತಿದ್ದೆನೆ. ನಾನು ಏನಾದರೂ ಕಲಿಯುತ್ತಿದ್ದರೆ ಅದರಲ್ಲಿ ಸ್ವಲ್ಪವಾದರೂ ವಿದ್ಯಾರ್ಥಿಗಳಿಗೆ ಹೇಳಿಕೊಡುವ ಅವಕಾಶ ಶಿಕ್ಷಕರದಾಗಿರುತ್ತದೆ. ಒದೊಂದು ಸಾರಿ ವಿದ್ಯಾರ್ಥಿಗಳಿಂದ ಲೂ ನಾವು ತಿಳಿದುಕೊಳ್ಳಬಹುದು. ಹೀಗಾಗಿ ಇಲ್ಲಿ ನಿರಂತರವಾಗಿ ನಾವು ಕಲಾಕ್ರಿಯೇಯಲ್ಲಿತೊಡಗಿದಂತಾಗುತ್ತದೆ. ಮತ್ತು ನಾವು ಕಲಿತಿದ್ದನ್ನು ನಮ್ಮ ಹತ್ತಿರ ಉಳಿಯದೆ ಅದು ಇನ್ನೊಬ್ಬರಿಗೂ ಸಹಾಯವಾಗುತ್ತದೆ. ಆದ್ದರಿಂದ ಶಿಕ್ಷಕನ ಪಾತ್ರ ತುಂಬ ಪ್ರಮುಖವಾದದ್ದು. ಈ ದಿಸೆಯಿಂದ ನಾನು ಕಲಾವಿದನಿಗಿಂತಲೂ ಕಲಾಶಿಕ್ಷಕನೆಂದು ಹೇಳಲು ಇಷ್ಟಪಡುತ್ತೇನೆಂದು ಖಂಡೇರಾವರು ಕಲಾವಿದನಿಗೂ ಮತ್ತು ಕಲಾಶಿಕ್ಷಕನಿಗು ಇರುವ ವ್ಯತ್ಯಾಸ ಮತ್ತು ಶಿಕ್ಷಕ ವೃತ್ತಿಯು ಹೇಗೆ ಇಷ್ಟ ಯಾಕೆ ಇಷ್ಟವೆಂಬುದನ್ನು ಮನಬಿಚ್ಚಿ ಹೇಳುತ್ತಾರೆ.

1971 ರಲ್ಲಿ ಶರಣಬಸವೇಶ್ವರ ಕಲಾಮಹಾವಿದ್ಯಾಲಯದ ಲಲಿತ ಕಲಾ ವಿಭಾಗದಲ್ಲಿ ಸೇರಿಕೊಂಡ ಖಂಡೇರಾವರು 8 ವರ್ಷಗಳ ಕಾಲ ಅಲ್ಲಿ ವಿದ್ಯಾರ್ಥಿಗಳಿಗೆ ಚಿತ್ರಕಲೆಗಳ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪರಿಚಯಿಸುತ್ತಿದ್ದರು. ಶರಣವಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ದಿನಾಲು ಒಂದಾದರೂ ಕಾರ್ಯಕ್ರಮಗಳು ನಡೆದ ಇರುತ್ತಿದ್ದವು. ಇಲ್ಲಿ ನಡೆಯುತ್ತಿದ್ದ ಪ್ರತಿಯೊಂದು ಕಾರ್ಯಕ್ರಮದಲ್ಲಿಯೂ ಲಲಿತಕಲಾ ವಿಭಾಗದ ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದರು. ಸಮಾರಂಭಗಳಲ್ಲಾಗಲಿ , ಕಾರ್ಯಕ್ರಮಗಳಲ್ಲಾಗಲಿ ಚಿತ್ರಕಲೆಗೆ ಸಂಬಂಧಪಟ್ಟ ಕೆಲಸಗಳನ್ನು ವಿಭಾಗದ ವಿದ್ಯಾರ್ಥಿಗಳೆ ಮಾಡುತ್ತಿದ್ದರು. ಇಲ್ಲಿ ನಡೆಯುವ ಪ್ರತಿಯೊಂದು ಕಾರ್ಯಕ್ರಮಗಳು ತಪ್ಪಿಸುತ್ತಿರಲಿಲ್ಲ. ಹೀಗಾಗಿ ಈ ವಿಭಾಗದ ವಿದ್ಯಾರ್ಥಿಗಳಿಗೆ ಚಿತ್ರಕಲೆಯಲ್ಲದೆ ಇತರ ವಿಷಯಗಳಲ್ಲಿ ಆಸಕ್ತಿ ಬೆಳೆಯಲು ಕಾರಣವಾಯಿತು. ಮಹಾವಿದ್ಯಾಲಯಲ್ಲಿ ಆಗಾಗ ಚಿತ್ರಕಲಾ ಪ್ರದರ್ಶನಗಳು ಮತ್ತು ಸ್ಪರ್ಧೆಗಳನ್ನು ಏರ್ಪಡಿಸುತ್ತಿದ್ದರು. ಪ್ರತಿ ವರ್ಷ ಹಮ್ಮಿಕೊಳ್ಳುವ ವಾರ್ಷಿಕೋತ್ಸವ ಸಮಾರಂಭದ ಅಂಗವಾಗಿ ಚಿತ್ರಕಲಾ ಸ್ಪರ್ಧೆಯನ್ನು ವಿಭಾಗದ ವತಿಯಿಂದ ಏರ್ಪಡಿಸಿ ಅವುಗಳಲ್ಲಿ ಉತ್ತಮವಾದುದಕ್ಕೆ ಪ್ರಶಸ್ತಿಪತ್ರವನ್ನು ಕೊಡುವ ಪದ್ಧತಿಯು ಮಹಾವಿದ್ಯಾಲಯದಲ್ಲಿತ್ತು. ಶರಣವಸವೇಶ್ವರ ಸಂಸ್ಥೆಯ ಅಡಿಯಲ್ಲಿ ಬರುವದರಿಂದ ಇಲ್ಲಿ ಶರಣರ ಜೀವನವನ್ನು ಕುರಿತಾದ ವಾಸ್ತವಿಕತೆಯಿಂದ ಕೂಡಿದ ಕಲಾಕೃತಿಗಳನ್ನು ಇಲ್ಲಿ ವಿದ್ಯಾರ್ಥಿಗಳಿಗೆ ರಚಿಸಲು ಹೇಳಿಕೊಡುತ್ತಿದ್ದರು. ಇದಲ್ಲದೆ ಗ್ರೇಟ್‌ಮಾಸ್ಟರ್ ಸಿರೀಜ್ ಹಿರಿಯ ಕಲಾವಿದರ ಕಲಾಕೃತಿಗಳನ್ನು ಅನುಕರಣೆ ಮಾಡುವದು ಹೇಳಿಕೊಡುತ್ತಿದ್ದರು. ಸ್ವತಃ ಖಂಡೇರಾವರೇ ಹೇಳುವ ಹಾಗೆ ವಿದ್ಯಾರ್ಥಿಗಳಿಗೆ ಕಲಾಕೃತಿಗಳ ಅನುಕರಣೆಯನ್ನು ಮಾಡಿಸುವದು ತಪ್ಪಲ್ಲ ಯಾಕೆಂದರೆ ಅನುಕರಣೆಯಲ್ಲಿ ನಾವು ತಿಳಿದುಕೊಳ್ಳುವುದು ಕಲಿಯುವುದು ತುಂಬಾ ಇದೆ ಹಿರಿಯ ಕಲಾವಿದರ ಕಲಾಕೃತಿಗಳನ್ನು ಅನುಕರಣೆ ಮಾಡಿದರೆ ಅವರು ರಚಿಸಿದ ಕಲಾಕೃತಿಗಳಲ್ಲಿ ಅವರು ಕಂಡುಕೊಂಡ ಮಾರ್ಗ ಚಿತ್ರಿಸಿದ ವಿಧಾನ ಬಳಸಿಕೊಂಡ ವರ್ಣಗಾರಿಕೆಯ ಪ್ರಭಾವ, ಸಂಯೋಜನ ,ತಂತ್ರಗಾರಿಕೆ ಅವರ ಶೈಲಿ ಇವೆಲ್ಲವನ್ನು ನಾವು ಗಮನಿಸಿದಾಗ ಅದರಂತೆಯೇ ಅನುಕರಣೆ ಮಾಡಿದಾಗ , ಕಲಾವಿದನಿಗೆ ಈ ಎಲ್ಲ ಅಂಶಗಳ ಅರಿವುಂಟಾಗುತ್ತದೆ. ಈ ಎಲ್ಲ ವಿಷಯಗಳನ್ನು ಅವನು ತಿಳಿದುಕೊಳ್ಳಲು ಪ್ರಯತ್ನಿಸುತ್ತಾನೆ. ಹೀಗಾಗಿ ಪ್ರಾರಂಭದ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ಕಲಾಕೃತಿಗಳ ಅನುಕರಣೆ ಮಾಡುವದು ಸಹಜ. ಅದು ತಪ್ಪಲ್ಲ. ಮೇಲಾಗಿ ಅವರು ಅನುಕರಣೆ ಮಾಡುವದರಿಂದ ಎಷ್ಟೋ ವಿಷಯಗಳನ್ನು ಕಲಿಯುತ್ತಾರೆ. ಎಂದು ಖಂಡೇರಾವರು ಅನುಕರಣೆಯ ಬಗ್ಗೆ ವಿವರಿಸುತ್ತಾರೆ.

ಖಂಡೇರಾವರು ವಿದ್ಯಾರ್ಥಿಗಳಿಗೆ ವಾರಕ್ಕೊಮ್ಮೆಯಂತೆ ಹೊರಗಡೆ ಕರೆದುಕೊಂಡು ಹೋಗಲು ಕೆಲವು ಸ್ಥಳಗಳನ್ನು ಮರೆಯುತ್ತಿರಲಿಲ್ಲ. ಕಾಳಗಿ, ಚಿತ್ತಾಪೂರ, ಜಲಸಂಗ್ವಿ,ಶಿರವಾಳ, ಕೆರೂರ, ಭೂಸಗಾ, ಮಳಖೇಡ, ಸೇಡಂ ಇಂತಹ ಅನೇಕ ಸ್ಥಳಗಳು ಖಂಡೇರಾವರು ವಿದ್ಯಾರ್ಥಿಗಳಿಗೆ ಕರೆದುಕೊಂಡು ಹೋಗುವ ಪ್ರಮುಖ ತಾಣಗಳಾಗಿದ್ದವು. ಇಲ್ಲಿ ವಿದ್ಯಾರ್ಥಿಗಳಿಗೆ ಕರೆದುಕೊಂಡು ಬಂದು ಅವರಿಗೆ ನಿಸರ್ಗ ಚಿತ್ರಗಳನ್ನು ಚಿತ್ರಿಸಲು ಹೇಳುತ್ತಿದ್ದರು. ಚಿತ್ರವನ್ನು ಚಿತ್ರಿಸಬೇಕಾದರೆ ಪ್ರಾರಂಭದಲ್ಲಿ ದೃಶ್ಯವನ್ನು ಯಾವ ರೀತಿ ನೋಡಬೇಕು ಎನ್ನುವ ಸಲುವಾಗಿ ಒಂದು ರಟ್ಟನ್ನು ತೆಗೆದುಕೊಂಡು ಅದರಲ್ಲಿ ಸಣ್ಣದಾಗಿ ಆಯತಾಕಾರವಾಗಿ ಕತ್ತರಿಸಿ, ಎದುರಿಗೆ ಕಾಣುವ ದೃಶ್ಯವನ್ನು ಯಾವ ರೀತಿಯಾಗಿ ನೋಡಬೇಕು ಎನ್ನುವಂತೆ ಮೊದಲು ಪೆನ್ಸಿಲ್‌ನಿಂದ ಚಿತ್ರಿಸಿ ತೋರಿಸುತ್ತಿದ್ದರು. ನಂತರದಲ್ಲಿ ವರ್ಣವನ್ನು ತೆಳುವಾಗಿ

ಮಿಶ್ರಣ ಮಾಡಿಕೊಂಡು ಯಾವ ರೀತಿಯಿಂದ ಲೇಪನ ಮಾಡಬೇಕೆಂದು ಹೇಳಿಕೊಡುತ್ತಿದ್ದರು. ಯಾವ ರೀತಿ ವರ್ಣವನ್ನು ಮಿಶ್ರಣ ಮಾಡಿಕೊಳ್ಳಬೇಕು. ಎಷ್ಟು ಪ್ರಮಾಣದಲ್ಲಿ ನೀರನ್ನು ಉಪಯೋಗಿಸಬೇಕು. ಎಂದು ಒಂದು ಬಾರಿ ಲೇಪನ ಮಾಡಿ, ಅದು ಆರಿದ ಮೇಲೆ ಅದರ ಮೇಲೆ ಎರಡನೆ ಬಾರಿಯಂತೆ ಆ ಚಿತ್ರವನ್ನು ಯಾವ ರೀತಿಯಾಗಿ ಪೂರ್ತಿಯಾಗಿ ರಚಿಸಬೇಕು ಎಂದುಕೊಂಡು ತಿಳಿಸುತ್ತಿದ್ದರು. ಇದು ನಿಸರ್ಗಚಿತ್ರವನ್ನು ರಚಿಸುವಾಗಿನ ವಿಧಾನವಾದರೆ, ಇನ್ನು ದೇವಸ್ಥಾನಗಳ, ದೇಗುಲಗಳ, ದೊಡ್ಡ ದೊಡ್ಡ ಕಟ್ಟಡಗಳ ಅವಶೇಷಗಳನ್ನು ದೇವಾಲಯಗಳಲ್ಲಿಯ ಶಿಲ್ಪಗಳನ್ನು ಯಾವ ರೀತಿಯಾಗಿ ಚಿತ್ರಿಸಬೇಕು ಎಂದು ಕೊಂಡು ವಿದ್ಯಾರ್ಥಿಗಳಿಗೆ ಪೆನ್ಸಿಲ್ ಅಥವಾ ಚಾರಕೊಲ್ (ದೀಪದ ಕಡ್ಡಿ) ಯಿಂದ ಚಿತ್ರಿಸಿ ತೋರಿಸುತ್ತಿದ್ದರು. ಇದಲ್ಲದೆ ಎದುರಿಗೆ ಕಾಣುವ ದೃಶ್ಯವನ್ನು ದೂರ, ಸಮೀಪವೆಂಬಂತೆ ದೃಗ್‌ದರ್ಶನದ ಪ್ರಮಾಣಬದ್ಧ ಆಕಾರವನ್ನು ಚಿತ್ರಿಸಿ ತೋರಿಸುತ್ತಿದ್ದರು. ದೃಗ್‌ದರ್ಶನದಲ್ಲಿ (Perspective) ಖಂಡೇರಾವರು ಎತ್ತಿದ ಕೈ ಹೈದರಾಬಾದನಲ್ಲಿ ಈ ವಿಷಯವನ್ನು ಕಲಿತುಕೊಂಡು ಬಂದಿದ್ದರು.

1980-81 ರಲ್ಲಿನ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ವಾಣಿಜ್ಯ ಚಿತ್ರಕಲೆ, ಎಂಬ ಹೊಸ ಕೋರ್ಸನ್ನು ಪ್ರಾರಂಭಿಸಿದರು. ಇದು ಎರಡು ವರ್ಷದ ಕೊರ್ಸ ಇದರಲ್ಲಿರುವ ವಿಷಯಗಳು ಹೆಚ್ಚಾಗಿ ವ್ಯವಹಾರಿಕ ವಿಷಯಗಳಿಗೆ ಸಂಬಂಧಪಟ್ಟವುಗಳಾಗಿದ್ದವು. ಅವುಗಳಲ್ಲಿ (Lettering, Geometry, Design, Memory, Nature, Still life, portrait, ಈ ಎಲ್ಲಾ ವಿಷಯಗಳನ್ನು ಹೇಳಿಕೊಡಲಾಗುತ್ತಿತ್ತು. ಪ್ರಾರಂಭದಲ್ಲಿ ಈ ಎಲ್ಲ ವಿಷಯಗಳನ್ನು ಖಂಡೇರಾವರು ಒಬ್ಬರೇ ಹೇಳಿಕೊಡುತ್ತಿದ್ದರು. ನಂತರದಲ್ಲಿ ಎಸ್.ಎಂ. ನೀಲಾ ಮತ್ತು ಎ.ಡಿ ಪತ್ತಾರರವರು ನೇಮಕಗೊಂಡರು. ಇಲ್ಲಿ ಖಂಡೇರಾವರು ವಿದ್ಯಾರ್ಥಿಗಳಿಗೆ Geometry ವಿಷಯವನ್ನು ಹೇಳಿಕೊಡುತ್ತಿದ್ದರಲ್ಲದೇ , ನಿಸರ್ಗಚಿತ್ರಗಳನ್ನು ಭಾವಚಿತ್ರಗಳನ್ನು ಹೇಗೆ ಬಿಡಿಸಬೇಕೆಂಬುದನ್ನೂ ಸಹ ತಿಳಿಸಿಕೊಡುತ್ತಿದ್ದರು. ಇವೆಲ್ಲವುಗಳ ನಡುವೆಯೂ ತಮ್ಮ ಕಲಾಚಟುವಟಿಕೆಗಳನ್ನು ಮುಂದುವರೆಸಿಕೊಂಡು ಬಂದವರಾಗಿದ್ದರು. ನಿರಂತರವಾಗಿ ತಮ್ಮನ್ನು ಕಲಾಸೃಷ್ಟಿಯಲ್ಲಿ ತೊಡಗಿಸಿಕೊಂಡವರಾಗಿದ್ದರು. 1980 ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಬಹುಮಾನವನ್ನು ಪಡೆದರು. ಬಹುಮಾನಿತವಾದ ಕಲಾಕೃತಿಯು "Through the broken glass" ಎಂಬ ಶಿರ್ಷಿಕೆಯಿಂದ ಕೂಡಿತ್ತು. ಈ ಕಲಾಕೃತಿ ಹೊರನಾಡಿನ ವಿದ್ವಾಂಸರನ್ನು, ಕಲಾತಜ್ಞರನ್ನು, ಕಲಾವಿಮರ್ಶಕರನ್ನು ಬೆರಗುಗೊಳಿಸಿದಲ್ಲದೇ , ಖಂಡೇರಾವರಿಗೆ ಒಂದು ಮಟ್ಟವನ್ನು ತರುವಲ್ಲಿ ಪ್ರಮುಖ ಪಾತ್ರವಹಿಸಿದೆಯೆಂದರೆ ತಪ್ಪಾಗಲಾರದು. ಈ ಕಲಾಕೃತಿಯು ಒಡೆದು ಗ್ಲಾಸಿನ ಮುಖಾಂತರ ಹೊರಗಡೆ ಕಾಣುವ ದೃಶ್ಯವನ್ನು, ವಸ್ತುಗಳನ್ನು ಪ್ರತಿಬಿಂಬಿಸುತ್ತದೆ. ಇಲ್ಲಿ ಪಾರದರ್ಶಕದ ಪರಿಣಾಮದಲ್ಲಿ ರೂಪುಗೊಂಡ ಈ ಚಿತ್ರ ಸ್ಪರ್ಧೆಗೆ ಬಂದ ನಿರ್ಣಾಯಕರನ್ನೇ ಮೋಸ ಹೋಗುವಂತೆ ಮಾಡಿದ್ದು ಚಿತ್ರದ ವಿಶೇಷತೆಯನ್ನಬಹುದು. ನಿರ್ಣಾಯಕರಲ್ಲೊಬ್ಬರು ಎಲ್ಲಾ ಕಲಾಕೃತಿಗಳನ್ನು ವೀಕ್ಷಿಸುತ್ತಾ ಬರುವಾಗ ಖಂಡೇರಾವರ ಕಲಾಕೃತಿಗಳನ್ನು ಕಂಡು ಅಲ್ಲೊಂದು ಗ್ಲಾಸು ಒಡೆದಿದೆ ನೋಡಿ ಅದನ್ನು ಹೊರಗೆ ತೆಗೆದಿಡಿ ಎಂದು ಹೇಳಿದ್ದರಂತೆ. ಇನ್ನೊಬ್ಬ ನಿರ್ಣಾಯಕರು ಕಲಾಕೃತಿಗಳನ್ನು ನೋಡುತ್ತಾ ಸಾಗಿದಾಗ ಈ ಕಲಾಕೃತಿಯು ಮುಸುಕಾಗಿ ಕಾಣುವುದನ್ನು ನೋಡಿ ಆ ಪೆಂಟಿಂಗ್‌ಗೆ ಇದ್ದ ಬಟರ ಪೇಪರ ತೆಗೆಯಿರಿ ಎಂದಿದ್ದರಂತೆ ಅಂದರೆ ಅಷ್ಟೊಂದು ಪರಿಣಾಮಕಾರಿಯಾಗಿ ಆ ಕಲಾಕೃತಿಯು ಮಾಡಿಬಂದಿತ್ತು. ಕಲಾಕೃತಿಯು ಬಹುಮಾನಕ್ಕೆ ಆಯ್ಕೆಯಾದಾಗ ಪ್ರದರ್ಶಜನದಲ್ಲಿ ಅದನ್ನು ತೂಗು ಹಾಕಿದ್ದರು. ಪ್ರದರ್ಶನಕ್ಕೆ ಬಂದ ಎಲ್ಲರೂ ಆ ಕಲಾಕೃತಿಯನ್ನು ನೋಡಿ ದಿಗ್ಭ್ರಮೆಗೊಳ್ಳುತ್ತಿದ್ದರು. ಕೆಲವರಂತೂ ಅಯ್ಯೋ ಗ್ಲಾಸ ಒಡೆದ ಪೆಂಟಿಂಗ್ ತೂಗು ಹಾಕಿದ್ದಾರಲ್ಲ. ಎಂದು ಹೇಳುತ್ತಿದ್ದರಂತೆ. ಅವರು ಸಮೀಪ ಬಂದು ನೋಡಿದಾಗ ಮಾತ್ರ ನಿಜಸ್ಥಿತಿ ಅರಿವಾಗುತ್ತಿತ್ತು. ಪ್ರದರ್ಶನ ನೋಡಲಿಕ್ಕೆ ಬಂದಿದ್ದ ಆಗಿನ ಕರ್ನಾಟಕದ ರಾಜ್ಯಪಾಲರೂ ಸಹಿತ ಈ ಕಲಾಕೃತಿಯು ಹೀಗೆ ಮೂಡಿಬಂದಿರುವುದನ್ನು ಮೆಚ್ಚಿಕೊಂಡಿದ್ದರಂತೆ. ಅಂಥ ಒಂದು ತಂತ್ರವಿಧಾನ ಆ ಕಲಾಕೃತಿಯಲ್ಲಿ ಮೂಡಿ ಬಂದಿತ್ತು. ಖಂಡೇರಾವರು ಈ ಕಲಾಕೃತಿಯಿಂದಲೇ ನಾಡಿನ ಹಲವಾರು ಕಡೆ ಜನರನ್ನು ಪರಿಚಯಿಸಿಕೊಂಡರು. ಈ ಕಲಾಕೃತಿಯಿಂದ ಖಂಡೇರಾವರು ನಾಡಿನಾದ್ಯಾಂತ ಚಿರಪರಿಚಿತರಾದರು. ಇವರ ಕಾರ್ಯವೈಖರಿಯನ್ನು ಕಂಡು ಸ್ವತಃ ಶರಣಬಸಪ್ಪ ಅಪ್ಪ ಅವರೇ ಮೆಚ್ಚಿಕೊಂಡು ಹೊಗಳುತ್ತಿದ್ದರು. ಖಂಡೇರಾವರ ಪ್ರತಿಭೆಗೆ ಇಷ್ಟು ಸಾಕಲ್ಲವೆ ?

ಹೀಗೆ ಖಂಡೇರಾವರು ವೃತ್ತಿಜೀವನದ ಜೊತೆಗೆ ಕಲಾಕ್ರಿಯೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಈ ಅವಧಿಯಲ್ಲಿ ಖಂಡೇರಾವರು ಹೆಚ್ಚಾಗಿ ನಿಸರ್ಗಚಿತ್ರಗಳನ್ನು ಚಿತ್ರಿಸುತ್ತಿದ್ದರು. ಇದಲ್ಲದೆ ಶರಣರ ಕುರಿತಾದ ಚಿತ್ರಗಳು, ಪುರಾಣಿಕ ಚಿತ್ರಗಳು, ಧಾರ್ಮಿಕ ಚಿತ್ರಗಳು ಈ ಹಂತದಲ್ಲಿ ಚಿತ್ರಿಸಿದ್ದಾರೆ. ಈ ಒಂದು ಸಂದರ್ಭದಲ್ಲಿ ಅವರು ಚಿತ್ರಿಸಿದ ಕಲಾಕೃತಿ ಮಕ್ಕಳಿಂದ ಮುದುಕನವರೆಗೆ , ಸಾಮನ್ಯನಿಂದ ಬುದ್ಧಿಜೀವಿಗಳವರೆಗೆ ಎಲ್ಲರ ಮೆಚ್ಚುಗೆ ಪಡೆದ ಕಿತ್ತೂರು ಚನ್ನಮ್ಮನ ಚಿತ್ರ. ಇದೊಂದು ದೊಡ್ಡ ಅಳತೆಯಿಂದ ಕೂಡಿದ ಸಂಯೋಜನಾ ಕಲಾಕೃತಿಯಾಗಿದೆ. ಇದನ್ನು ತೈಲವರ್ಣದಿಂದ ಚಿತ್ರಿಸಿದ್ದಾರೆ. ತದ್ರೂಪ ಚಿತ್ರಣವಾಗಿದ್ದರೂ ಕೂಡ ಸಂಯೋಜನೆ ದೃಷ್ಟಿಯಿಂದ ಒಂದು ಉನ್ನತ ಮಟ್ಟದ ಕಲಾಕೃತಿಯಾಗಿದೆ. ಐದು ಅಡಿ ಎತ್ತರ ಹದಿನೈದು ಅಡಿ ಅಗಲದಿಂದ ಕೂಡಿದ ಕಲಾಕೃತಿಯಾಗಿದೆ. ಮಕ್ಕಳ ವರ್ಷದ ಅಂಗವಾಗಿ ನಿರ್ಮಿತಗೊಂಡ ಈ ಕಲಾಕೃತಿಯು " ವೈರಿಗಳ ಮಕ್ಕಳು ವೈರಿಗಳಲ್ಲ" ಎನ್ನುವ ಅರ್ಥಗರ್ಭಿತ ತಲೆಬರಹವು ಈ ಚಿತ್ರದಷ್ಟೇ ಅರ್ಥಗರ್ಭಿತ. ಬ್ರಿಟೀಷರ ಮಕ್ಕಳನ್ನು ಸೇವಕರು ಎದುರಿಗೆ ತಂದು ನಿಲ್ಲಿಸಿದಾಗ ಅವು ವೈರಿಗಳ ಮಕ್ಕಳಲ್ಲ, ಎಲ್ಲರಿಗೂ ಮಕ್ಕಳು, ವೈರಿಗಳು ಮಾಡಿದ ತಪ್ಪಿಗೆ ಈ ಎಳೆಯ ಕಂದಮ್ಮಗಳಿಗೇಕೆ ಶಿಕ್ಷೆ ಎನ್ನುವ ಉನ್ನತ ಮನೋಭಾವನೆಯ ಈ ಕಲಾಕೃತಿಯು ಚೆನ್ನಮ್ಮನ ಮಕ್ಕಳ ಮೇಲಿನ ಅಪಾರ ಪ್ರೀತಿಯನ್ನು , ಔದಾರ್ಯವನ್ನು ಸ್ಪಷ್ಟಪಡಿಸುತ್ತದೆ. ಇದೊಂದೆ ಅಲ್ಲ ಇಂತಹ ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ. ಇವರು ರಚಿಸಿದ ಶರಣರ ಕುರಿತಾದ ಕಲಾಕೃತಿಗಳು ಶರಣಬಸವೇಶ್ವರ ಸಂಸ್ಥಾನದಲ್ಲಿ ಸಾಕಷ್ಟು ಸಂಖ್ಯೆಯಲ್ಲಿರುವುದನ್ನು ನಾವು ಅವುಗಳನ್ನು ನೋಡಬಹುದು. ಆದರೆ ತಮ್ಮ ಹೆಚ್ಚಿನ ಒಂದು ಸಮಯವನ್ನು ವಿಧ್ಯಾರ್ಥಿಗಳೊಂದಿಗೆ, ಬೋಧನೆಯಲ್ಲಿಯೇ ಕಳೆಯುತ್ತಿದ್ದರು. ಇದಕ್ಕೆ ಇನ್ನೊಂದು ಕಾರಣವೂ ಇತ್ತು. ಅದೇನೆಂದರೆ ಬಿ.ಎ. ಲಲಿತಕಲೆಯಲ್ಲಿ ಖಂಡೇರಾವರು ಒಬ್ಬರೇ ಉಪನ್ಯಾಸಕರಾಗಿರುವುದರಿಂದ ಅವರಿಗೆ ಹೆಚ್ಚಿನ ಬಿಡುವು ಸಿಗುತ್ತಿರಲಿಲ್ಲ. ಹೀಗಾಗಿ ಎಲ್ಲ ಕೆಲಸಗಳನ್ನು ಇವರೊಬ್ಬರೇ ನಿರ್ವಹಿಸಬೇಕು. ಹೀಗಿರುವುದರಿಂದ ಖಂಡೇರಾವರಿಗೆ ವೃತ್ತಿಜೀವನದ ಸಮಯದಲ್ಲಿ ಕಲಾಕೃತಿಗಳ ರಚನೆಗೆ ಹೆಚ್ಚಿನ ಸಮಯವನ್ನು ದೊರೆಯಲಿಲ್ಲ.

ಮುಂದೆ 1983 ರಲ್ಲಿ ಸ್ನಾತಕೋತ್ತರ ಲಲಿತಕಲಾ ವಿಭಾಗವನ್ನು ಪ್ರಾರಂಭಿಸಿದರು. ಮೊದಲನೇ ವರ್ಷದಲ್ಲಿ ವಿ.ಬಿ. ಬಿರಾದಾರ, ಪತ್ತಾರ ರೆಡ್ಡಿ, ಚಿತ್ರಲೇಖಾ ಪಾಟೀಲ, ಶಾಂತಲಾ ನಿಷ್ಠಿ , ಶಂಕರ ನವಲಬಾ ಹೀಗೆ ಏಳು ಜನ ವಿದ್ಯಾರ್ಥಿಗಳಿಂದ ಪ್ರಾರಂಭಗೊಂಡಿತು. ಈ ವಿಭಾಗದಲ್ಲಿ ಖಂಡೇರಾವರನ್ನು ನಿರ್ದೇಶಕರನ್ನಾಗಿ ಮಾಡಿದರು. ಹೀಗಾಗಿ ಖಂಡೇರಾವರು ಬಿ.ಎ. ಮತ್ತು ಎಂ.ಎ. ಲಲಿತಕಲೆ ಈ ಎರಡೂ ವಿಭಾಗಗಳನ್ನು ನೋಡಿಕೊಳ್ಳುವ ಹೊಣೆಯನ್ನು ಹೊತ್ತುಕೊಂಡರು ಇದರಿಂದ ಖಂಡೇರಾವರಿಗೆ ವೈಯಕ್ತಿಕವಾಗಿ ಕಲಾಕ್ರಿಯೆಯಲ್ಲಿ ತೊಡಗಲು ಸಾಧ್ಯವಾಗಲಿಲ್ಲ. ವಿಧ್ಯಾರ್ಥಿಗಳನ್ನು ಜೊತೆಗೂಡಿಯೇ, ಅವರಿಗೆ ಬೋಧನೆಯನ್ನು ಮಾಡುವಾಗ ಮಾತ್ರ ಕೆಲವು ಸಾರಿ ಕಲಾಕೃತಿಗಳನ್ನು ಚಿತ್ರಿಸುತ್ತಿದ್ದರು. ಸ್ನಾತಕೋತ್ತರ ಲಲಿತಕಲಾ ವಿಭಾಗವು ಪ್ರಾರಂಭವಾದ ಮೇಲೆ ಖಂಡೇರಾವರ ದಿನನಿತ್ಯದ ಕಾರ್ಯಕ್ರಮಗಳು ಇಮ್ಮಡಿಸಿದವು. ಇವರು ಬಿ. ಎ. ಮತ್ತು ಎಂ.ಎ. ಲಲಿತಕಲೆ ವಿಧ್ಯಾರ್ಥಿಗಳನ್ನು ವಾರಕ್ಕೊಮ್ಮೆಯಂತೆ ಹೊರಗಡೆ (Outdoor) ಕರೆದುಕೊಂಡು ಹೋಗಿ ಅವರಿಗೆ ನಿಸರ್ಗಚಿತ್ರಗಳನ್ನಾಗಲಿ, ಸ್ಕೆಚ್‌ಗಳನ್ನಾಗಲಿ, ಚಿತ್ರಿಸುವದು ಹೇಳಿಕೊಡುತ್ತಿದ್ದರು. ಅಲ್ಲದೆ ವರ್ಷಕ್ಕೊಂದು ಬಾರಿಯಂತೆ ಹದಿನೈದರಿಂದ ಮೂವತ್ತು ದಿನಗಳವರೆಗೆ (Outdoor)ಕ್ಯಾಂಪಗಳನ್ನು ಮಾಡುತ್ತಿದ್ದರು. ಹಂಪಿ, ಬಾದಾಮಿ, ಐಹೊಳೆ, ಪಟ್ಟದಕಲು,ಬೇಲೂರು- ಹಳೆಬಿಡು ಇಂತಹ ಪ್ರಮುಖ ತಾಣಗಳನ್ನು ತಮ್ಮ ಕ್ಯಾಂಪಗಳಿಗೆ ಆರಿಸಿಕೊಂಡಿದ್ದರು. ಕ್ಯಾಂಪನಲ್ಲಿ ಹೋದಾಗ ವಿಧ್ಯಾರ್ಥಿಗಳಿಗೆ ಬೆಳಗ್ಗೆ ಐದು ಗಂಟೆಗೆ ಎಬ್ಬಿಸಿ , ಬೆಳಗಿನ ಎಲ್ಲ ಕಾರ್ಯಕ್ರಗಳನ್ನು ಮುಗಿಸಿಕೊಂಡು , ಬೆಳಗ್ಗೆ ಆರು ಗಂಟೆಗೆ ಸೂರ್ಯ ಉದಯವಾಗುವದಕ್ಕೆ ಮುಂಚೆಗೆ Spot ನ್ನು ಹುಡುಕಿ ಕುಳಿತು ಬಿಡುತ್ತಿದ್ದರು. ಮೊದಲು ಆ ದೃಶ್ಯವನ್ನು ಪೇನ್ಸಿಲ್‌ನಿಂದ ಡ್ರಾಯಿಂಗ್ ಮಾಡಿಕೊಂಡು ಸೂರ್ಯ ಉದಯವಾಗುತ್ತಿದ್ದಂತೆಯೇ ಬಣ್ಣವನ್ನು ತೆಗೆದುಕೊಂಡು ತಮಗೆ ಇಷ್ಟವಾಗುವ ರೀತಿಯಲ್ಲಿ ನೀರನ್ನು ಮಿಶ್ರಣಮಾಡಿಕೊಂಡು ಲೇಪನ ಮಾಡುತ್ತಿದ್ದರು. ಮೊದಲು ಒಂದು ಬಾರಿಯಂತೆ ಬಣ್ಣವನ್ನು ಲೇಪನ ಮಾಡಿ ನಂತರದಲ್ಲಿ ಅದು ಆರಿದ ಮೇಲೆ ಇನ್ನೂ ಎಲ್ಲೆಲ್ಲಿ ವರ್ಕಮಾಡಬೇಕೆನಿಸುತ್ತೋ ಅಲ್ಲಿ ಬಣ್ಣವನ್ನು ಲೇಪಿಸುತ್ತಿದ್ದರು.

ಕೊನೆಯದಾಗಿ ಅಂತಿಮ Strokes ನ್ನು ಇಡುತ್ತಿದ್ದರು. ಹೀಗೆ ಒಂದು ನಿಸರ್ಗಚಿತ್ರವನ್ನು ರಚಿಸಬೇಕಾದರೆ ಮೂರು ಬಾರಿ ಅದನ್ನು ಬಣ್ಣದಿಂದ ಲೇಪಿಸುತ್ತಿದ್ದರು. ಇಂಥ ಒಂದು ತಂತ್ರ ಮತ್ತು ರಚನಾ ವಿಧಾನವನ್ನು ಖಂಡೇರಾವರು ವಿದ್ಯಾರ್ಥಿಗಳಿಗೆ ಹೇಳಿಕೊಡುತ್ತಿದ್ದರು. ಯಾಕೆಂದರೆ ಕೆಲವು ವಿದ್ಯಾರ್ಥಿಗಳು ಮೊದಲ ಬಾರಿಗೆ ಕ್ಯಾಂಪಿಗೆ ಬಂದಿರುವದರಿಂದ ಅವರಿಗೆ ನಿಸರ್ಗ ಚಿತ್ರವನ್ನು ಚಿತ್ರಿಸಲು ಬರುತ್ತಿರಲಿಲ್ಲ. ಆದ್ದರಿಂದ ಖಂಡೇರಾವರು ಮೊದಲು ಒಂದು ಕಲಾಕೃತಿಯನ್ನು ಮಾಡಿ ತೋರಿಸುತ್ತಿದ್ದರು. ನಂತರದಲ್ಲಿ ವಿದ್ಯಾರ್ಥಿಗಳು ಚಿತ್ರಿಸಿದ್ದನ್ನು ವೀಕ್ಷಿಸುತ್ತಾ ಅವುಗಳಲ್ಲಿ ತಪ್ಪಿದ್ದುದನ್ನು ಸರಿಪಡಿಸಿಕೊಳ್ಳಲು ತಿಳಿಹೇಳುತ್ತಿದ್ದರು. ಇದು ಖಂಡೇರಾವರು ಹೊರಗಡೆ ಕ್ಯಾಂಪಿಗೆ ಕರೆದುಕೊಂಡು ಹೋದಾಗ ಬೋಧಿಸುವ ಪದ್ದತಿಯಾಗಿತ್ತು. ಇನ್ನು ಕ್ಲಾಸಿನಲ್ಲಿ ಬೋಧನೆಯನ್ನು ಮಾಡುವ ಪದ್ದತಿಯೇ ಬೇರೆಯಾಗಿರುತ್ತಿತ್ತು. ಖಂಡೇರಾವರು ಕ್ಲಾಸಿನಲ್ಲಿ ವಿದ್ಯಾರ್ಥಿಗಳಿಗೆ Portrait, Still life, Lifepainting, Mural, Composition ಮತ್ತು Graphics ಈ ಎಲ್ಲ ವಿಷಯಗಳನ್ನು ಹೇಳಿಕೊಡುತ್ತಿದ್ದರು. ಭಾವಚಿತ್ರಗಳಂತೂ ದಿನಾಲು ಒಂದಾದರೂ ತಿಳಿಸುತ್ತಿದ್ದರು. ಕೇವಲ ಮೂವತ್ತರಿಂದ ನಲವತ್ತು ನಿಮಿಷಗಳಲ್ಲಿ ಚಿತ್ರಿಸಿ ತೋರಿಸುತ್ತಿದ್ದರು. ಉಳಿದ ಸಮಯದಲ್ಲಿ ಮಿಕ್ಕೆಲ್ಲವಿಷಯಗಳ ಬಗ್ಗೆ ಹೇಳಿಕೊಡುತ್ತಿದ್ದರು. ಗ್ರಾಫಿಕ್ಸನಲ್ಲಿ ಲಿನೋಕಟ್, ವುಡ್‌ಕಟ್, ಲಿಥೊಗ್ರಾಫಿ, ಎಚ್ಚಿಂಗ್, ಸೆರಿಗ್ರಾಫಿ, ಕೊಲೋಗ್ರಾಫಿ ಮುಂತಾದ ವಿಷಯಗಳನ್ನು ಹೇಳಿಕೊಡುತ್ತಿದ್ದರು. ಈ ಎಲ್ಲ ವಿಷಯಗಳು ಕೇವಲ ಪ್ರಾಯೋಗಿಕ ವಿಷಯಗಳಾದರೆ, ಇನ್ನು ಥೆಯರಿಯೂ ಕೂಡ ತಾವೇ ಹೇಳಿಕೊಡುತ್ತಿದ್ದರು. ಈ ಎಲ್ಲ ವಿಷಯಗಳನ್ನು ಒಬ್ಬರೇ ಹೇಳುವದಕ್ಕೆ ಸಮಯ ಸಿಗುತ್ತಿರಲಿಲ್ಲವಾದ್ದರಿಂದ ಎಸ್.ಎಸ್. ಪಾಟೀಲರಿಗೆ ಸೌಂದರ್ಯಶಾಸ್ತ್ರವಿಷಯವನ್ನು ಹೇಳುವಸಲುವಾಗಿ ನೇಮಿಸಿದರು. ಇವರು ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಬಿ. ಎ. ಪದವಿ ವಿದ್ಯಾರ್ಥಿಗಳಿಗೆ ತತ್ವಶಾಸ್ತ್ರವಿಷಯವನ್ನು ಹೇಳಿಕೋಡುತ್ತಿದ್ದರು. ಇದಲ್ಲದೆ ' ಹಿಸ್ಟರಿ ಆಫ್ ಆರ್ಟ್ಸ ' ವಿಷಯವನ್ನು ಹೇಳಲಿಕ್ಕೆ ಎ.ಸ್. ಪಾಟೀಲರನ್ನು ನೇಮಿಸಿದರು. ಎ.ಎಸ್. ಪಾಟೀಲರು. ಗೋದುತಾಯಿ ಮಹಿಳಾ ಮಹಾವಿಧ್ಯಾಲಯದ ಚಿತ್ರಕಲಾ ವಿಭಾಗಕ್ಕೆ ಮುಖ್ಯ ಗುರುಗಳಾಗಿದ್ದರು. ಇವರೀರ್ವರನ್ನು ಥೇಯರಿ ವಿಷಯವನ್ನು ಹೇಳಿಕೊಡುವ ಸಲುವಾಗಿ ಶರಣಬಸವೇಶ್ವರ ಕಲಾ ಮಹಾವಿಧ್ಯಾಲಯದ ಚಿತ್ರಕಲಾ ವಿಭಾಗಕ್ಕೆ ನೇಮಿಸಲಾಯ್ತು.

ಹೀಗೆ ಖಂಡೇರಾವರು ಬಿಡುವಿಲ್ಲದ ವ್ಯಕ್ತಿಗಳಾಗಿದ್ದರು. ಇವರು ವಿದ್ಯಾರ್ಥಿಗಳನ್ನು ಗಮನದಲ್ಲಿರಿಸಿಕೊಂಡು ಹಲವಾರು ರೀತಿಯಿಂದ ಕಲಾ ಚಟುವಟಿಕೆಗಳನ್ನು ವಿಭಾಗದಲ್ಲಿ ಏರ್ಪಡಿಸಲು ಶ್ರಮಿಸಿದರು. ಇದಕ್ಕೆ ಪೂಜ್ಯ ಶರಣಬಸಪ್ಪ ಅಪ್ಪ ಅವರೂ ಸಹಕರಿಸುತ್ತಿದ್ದರು. ಪೂಜ್ಯ ಶರಣಬಸಪ್ಪ ಅಪ್ಪ ಅವರನ್ನು ನಾವು ಇಂದು ನೆನೆಯಲೇಬೇಕಾಗುತ್ತದೆ. ಒಬ್ಬ ಕಲಾವಿದರನ್ನು ಕರೆಸಿ, ಅವರಿಂದ ಪ್ರಾತ್ಯಕ್ಷಿಕೆಗಳನ್ನು ಮಾಡಿಸುವದು ಅಷ್ಟೊಂದು ಸುಲಭದ ಮಾತಾಗಿಲ್ಲ. ಒಬ್ಬರನುಕರೆಸಿದರೆ ಸುಮಾರು ಐದು ಸಾವಿರ ರೂಪಾಯಿಯವರೆಗೆ ಖರ್ಚು ಬರುತ್ತಿತ್ತು. ಆದರೂ ವಿದ್ಯಾರ್ಥಿಗಳಿಗೆ ಇದರಿಂದ ಒಳ್ಳೆಯ ದಾಗುತ್ತದೆಯೆಂದರೆ ದುಡ್ಡು ಎಷ್ಟು ಬೇಕಾದಷ್ಟು ಖರ್ಚಾಗಲಿ ನೀವು ಆ ಕೆಲಸವನ್ನು ಮಾಡಿ ಎಂದು ಪೂಜ್ಯ ಅಪ್ಪಾರವರು ಖಂಡೇರಾವರಿಗೆ ಆಗಾಗ ಹೇಳುತ್ತಿದ್ದರಂತೆ ಈ ದೃಷ್ಟಿಯಿಂದ, ಈ ವಿಭಾಗದಲ್ಲಿ ರಾಜ್ಯದಲ್ಲಿ ಅಲ್ಲದೇ ರಾಷ್ಟ್ರದ ಅನೇಕ ಕಡೆಗಳಿಂದ ಹಿರಿಯ ಮತ್ತು ನುರಿತ ಕಲಾವಿದರು ಬಂದು, ತಮ್ಮ ಉಪನ್ಯಾಸವನ್ನು ಮತ್ತು ಪ್ರಾತ್ಯಕ್ಷಿಕೆಗಳನ್ನು ನೀಡಿ ಹೋಗಿದ್ದಾರೆ. ಅಂಥವರಲ್ಲಿ ಮುಂಬೈನ ಪಳಸೀಕರ್, ಮೃಘಾಂಕ ಜೋಶಿ, ವಾಮನ್ ಚಿಂಚೋಳಕರ್ , ಎಸ್.ಕೆ.ಲಾವಟೆ ಸುಹಾಸ ಬಾಹುಲಕರ್, ಅನೀಲ ನಾಯಕ , ಬಿ.ಎ. ಶಟ್ಟಿ, ಹೈದರಾಬಾದಿನ ಪಿ. ಗೌರಿಶಂಕರ ಇವರು ಗ್ರಾಫಿಕ್ ವಿಷಯವನ್ನು ತಿಳಿಸುತ್ತಿದ್ದರು. ರಾಜಸ್ಥಾನದ ಪಿ.ಎನ್.ಚಾಯಲ್, ಮದ್ರಾಸನ ಕೆ.ಎಸ್. ರಾವ , ಭೂಪಾಲನ ಸಚ್ಚಿದೆ ನಾಗದೇವ , ಕೊಲ್ಹಾಪೂರದ ಮಜ್‌ಗಾಂವಕರ್. ಇದಲ್ಲದೇ ರಾಜ್ಯದವರಾದ ಆರ್. ಎಮ್. ಹಡಪದ , ವಿಜಯಸಿಂಧೂರ, ಜಿ. ಎಮ್.ಎಸ್.ಮಣಿ, ಎಮ್‌ಸಿ . ಚಟ್ಟಿ, ರಮೇಶ ರಾವ ರಂತಹ ಅನೇಕ ಕಲಾವಿದರು ಈ ವಿಭಾಗಕ್ಕೆ ಬಂದು ಕಲಾ ಪ್ರಾತ್ಯಕ್ಷಿಕೆಗಳನ್ನು ಮತ್ತು ಉಪನ್ಯಾಸಗಳನ್ನು ನೀಡಿದ್ದಾರೆ. ಇವರಲ್ಲಿ ಕೆಲವರು ತಮ್ಮ ಕಲಾತಿಗಳ ಸ್ಲಾಯಿಡ್‌ಗಳನ್ನು ಹಾಕಿ , ವಿದ್ಯಾರ್ಥಿಗಳಿಗೆ ಕಲೆಯ ಮೂಲ, ಆಳವನ್ನು ತಿಳಿಸಲು ಪ್ರಯತ್ನಿಸಿದ್ದಾರೆ. ಹೀಗೆ ಖಂಡೇರಾವರು ದಿನಾಲು ಏನೆಲ್ಲಾ ಕಾರ್ಯಕ್ರಮಗಳನ್ನು ವಿಭಾಗದಲ್ಲಿ ಏರ್ಪಡಿಸುತ್ತಿದ್ದರು. ಇಷ್ಟೆಲ್ಲಾ ಕೆಲಸಗಳನ್ನು ಖಂಡೇರಾವರು ಒಬ್ಬರೇ ನಿರ್ವಹಿಸುತ್ತಿ

ದ್ದರು. ಖಂಡೇರಾವರ ಕಾರ್ಯವೈಖರಿಯನ್ನು ಕಂಡು ಪೂಜ್ಯ ಅಪ್ಪಾ ಅವರು ಖಂಡೇರಾವರಿಗೆ ಬಿಡುವು ಸಿಗದಿದ್ದನ್ನು ಕಂಡು ಇನ್ನೊಬ್ಬ ಉಪನ್ಯಾಸಕನನ್ನು ನೇಮಿಸಿಕೊಂಡರು. 1985 ರಲ್ಲಿ ಆಂದ್ರದ ಪೋಪುರಿ ರಾಜಾರಾವ ಎಂಬುವ ಯುವ ಕಲಾವಿದರನ್ನು ಸ್ನಾತಕೋತ್ತರ ವಿಭಾಗಕ್ಕೆ ನೇಮಿಸಿಕೊಂಡರು. ರಾಜಾರಾವ ಪೋಪುರಿಯವರು ಒಳ್ಳೆಯ ಕಲಾವಿದರಾಗಿದ್ದರು. ಇವರು ತಮ್ಮ ಕಲಾ ಶಿಕ್ಷಣವನ್ನು ಮದ್ರಾಸಿನಲ್ಲಿ ಮುಗಿಸಿದವರಾಗಿದ್ದರು. ಮೇಲಾಗಿ ಇವರು ಭಾರತ ಸರಕಾರದಿಂದ ಮೂರು ವರ್ಷಗಳ ಕಾಲ ಪಾಶ್ಚಿಮಾತ್ಯ ರಾಷ್ಟ್ರವಾದ ಸ್ಕಾಟಲೆಂಡಿನಲ್ಲಿ ಉನ್ನತ ಕಲಾಶಿಕ್ಷಣವನ್ನು ಪಡೆದುಕೊಂಡು ಬಂದವರಾಗಿದ್ದರು. ಪೋಪುರಿಯವರು ಪೂಜ್ಯ ಶರಣಬಸವಪ್ಪ ಅಪ್ಪ ಅವರನ್ನು ಸಂದರ್ಶಿಸಿದಾಗ ಇವರ ಸಾಧನೆಯನ್ನು ನೋಡಿಯೇ ಇವರನ್ನು ತಮ್ಮ ಸಂಸ್ಥೆಯಲ್ಲಿ ಉಪನ್ಯಾಸಕರಾಗಿ ನೇಮಿಸಿಕೊಂಡಿದ್ದರು. ಹೀಗೆ ರಾಜಾರಾವ ಪೋಪುರಿಯವರು ಖಂಡೇರಾವರನ್ನು ಕೂಡಿಕೊಂಡು ಲಲಿತಕಲಾ ವಿಭಾಗವನ್ನು ಉನ್ನತ ಮಟ್ಟಕ್ಕೆ ಒಯ್ಯಲು ಬಹಳ ಪರಿಶ್ರಮ ಪಟ್ಟಿದ್ದಾರೆ. ರಾಜರಾವ ಪೋಪುರಿಯವರು ಬಂದ ಮೇಲೆ ಖಂಡೇರಾವರಿಗೆ ಸ್ವಲ್ಪ ಬಿಡುವು ಸಿಗುತ್ತಿತ್ತು. ಈ ಹಂತದಲ್ಲಿ ಖಂಡೇರಾವರು ವಿದ್ಯಾರ್ಥಿಗಳಿಂದ ಹಲವಾರು ಕಡೆ ಭಿತ್ತಿಚಿತ್ರಗಳನ್ನು ಮಾಡಿಸಿದ್ದಾರೆ. ಇವರ ನೇತೃತ್ವದಲ್ಲಿ ಅನೇಕ ಭಿತ್ತಿಚಿತ್ರಗಳು ಸಿದ್ಧವಾದವು. ಅವುಗಳನ್ನು ಪ್ರಮುಖವಾದ ಒಂದು ಭಿತ್ತಿಚಿತ್ರ ಶರಣಬಸವೇಶ್ವರ ಕಲಾಮಹಾವಿದ್ಯಾಲದ ಲಲಿತಕಲಾ ವಿಭಾಗಕ್ಕೆ ಹೋಗುವ ಮಾರ್ಗದಲ್ಲಿ ನಾವು ಇಂದಿಗೂ ಕಾಣಬಹುದಾಗಿದೆ. ಅಲ್ಲದೆ ಸ್ನಾತಕೋತ್ತರ ಲಲಿತಕಲಾ ವಿಭಾಗದ ವಿದ್ಯಾರ್ಥಿಗಳಿಗೆ ಶರಣರ ಜೀವನಕ್ಕೆ ಸಂಬಂಧಿಸಿದಂತೆ ಕಲಾಕೃತಿಗಳನ್ನು ರಚಿಸಲು ಪೂಜ್ಯ ಅಪ್ಪ ಅವರು ಆದೇಶಿಸಿದ್ದರು. ಆದ್ದರಿಂದ ಇಲ್ಲಿಯ ವಿದ್ಯಾರ್ಥಿಗಳು ಆಧುನಿಕ ಗಾಳಿಗೆ ಸಿಲುಕದೇ ವಾಸ್ತವಿಕತೆಯಲ್ಲಿ ಕಲಾಕೃಗಳನ್ನು ರಚಿಸಿದ್ದು ಕಂಡುಬರುತ್ತದೆ.

ಮುಂದೆ ಖಂಡೇರಾವರ ಶಿಷ್ಯರಾದ ವಿ.ಬಿ. ಬಿರಾದರರವರು ಲಲಿತಕಲಾ ವಿಭಾಗಕ್ಕೆ ಉಪನ್ಯಾಸಕರಾಗಿ ನೇಮಕಗೊಂಡರು. ಈ ಒಂದು ಸಂದರ್ಭದಲ್ಲಿ ಖಂಡೇರಾವರಿಗೆ ವೈಯಕ್ತಿಕ ಕಲಾಕ್ರೀಯೆಯಲ್ಲಿ ತೊಡಗಲು ಸಹಾಯಕಾರಿಯಾಯಿತು. ಖಂಡೇರಾವರು ಕಾಲೇಜಿನಲ್ಲಿಯೇ ವಿದ್ಯಾರ್ಥಿಗಳೊಂದಿಗೆ ಕುಳಿತುಕೊಂಡು ತಮ್ಮ ವೈಯಕ್ತಿಕ ಕಲಾಕೃತಿಗಳನ್ನು ಚಿತ್ರಿಸುತ್ತಿದ್ದರು. ಖಂಡೇರಾವರು ಈ ಒಂದು ಅವಧಿಯಲ್ಲಿ ವಿಂಡೋಸರಣಿಯ ಮೇಲೆ ಅನೇಕ ಅಮೂರ್ತ ಸಂಯೋಜನಾ ಕಲಾಕೃತಿಗಳನ್ನು ಚಿತ್ರಿಸಿದ್ದಾರೆ. ಈ ಒಂದು ಅವಧಿಯಲ್ಲಿ ಅವರು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲದೇ ಅಂತರರಾಷ್ಟ್ರೀಯ ಮಟ್ಟದಲ್ಲಿ ಕಲಾಕೃತಿಗಳನ್ನು ಪ್ರದರ್ಶನಕ್ಕೆ ಸ್ಪರ್ಧೆಗೆ ಕಳುಹಿಸಿದ್ದರು. ಅಲ್ಲಿ ಇವರ ಕಲಾಕೃತಿಗಳು ಆಯ್ಕೆಗೊಂಡವು. ಕೆಲವು ಕಲಾಕೃತಿಗಳಿಗೆ ಬಹುಮಾನಗಳೂ ಸಹ ದೊರೆತಿವೆ. ಖಂಡೇರಾವರು ವೃತ್ತಿಜೀವನದ ಅವಧಿಯಲ್ಲಿಯೇ ಹೆಚ್ಚಿನ ಬಹುಮಾನಗಳನ್ನು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ವೈಯಕ್ತಿಕ ಸಾಧನೆಯೊಂದಿಗೆ ವಿದ್ಯಾರ್ಥಿಗಳಿಗೆ ನಾನಾ ರೀತಿಯಿಂದ ಕಲೆಯ ಮೌಲ್ಯಗಳನ್ನು ತಿಳಿಹೇಳುತ್ತಿದ್ದರು. ಅಲ್ಲದೇ ವಿದ್ಯಾರ್ಥಿಗಳಿಗೆ ಬೇರೆ ಬೇರೆ ಕಡೆ ಏರ್ಪಡಿಸುವ ಕಲಾ ಸ್ಪರ್ಧೆಗಳಿಗೆ ಕಲಾಕೃತಿಗಳನ್ನು ಕಳಿಸುವಂತೆ ವಿದ್ಯಾರ್ಥಿಗಳಲ್ಲಿ ಸ್ಪೂರ್ತಿಯನ್ನು ತುಂಬುತ್ತಿದ್ದರು. ಮತ್ತು ದೇಶದ ಬೇರೆ ಬೇರೆ ಕಡೆಗಳಲ್ಲಿರುವ ಕಲಾಗ್ಯಾಲರಿಗಳಲ್ಲಿ ತಮ್ಮ ವಿಭಾಗದ ವಿದ್ಯಾರ್ಥಿಗಳಿಂದ ಕಲಾಪ್ರದರ್ಶನಗಳನ್ನು ಮಾಡಿಸುತ್ತಿದ್ದರು. ಒಂದೊಂದು ಸಾರಿ ಕಲಾಪ್ರದರ್ಶನದ ಎಲ್ಲ ವೆಚ್ಚವನ್ನು ಸಂಸ್ಥೆಯವರೇ ವಹಿಸಿಕೊಳ್ಳುವ ವ್ಯವಸ್ಥೆಯನ್ನು ಖಂಡೇರಾವರು ವಿದ್ಯಾರ್ಥಿಗಳಿಗೆ ಒದಗಿಸಿಕೊಟ್ಟಿದ್ದರು. ಪೂಜ್ಯ ಶರಣಬಸವಪ್ಪ ಅಪ್ಪ ಅವರು ಖಂಡೇರಾವರನ್ನು ಸಂಪೂರ್ಣವಾಗಿ ನಂಬಿದ್ದರು. ಅವರು ಯಾವಾಗಲೂ ಹೇಳುತ್ತಿದ್ದಂತೆ ದುಡ್ಡು ಎಷ್ಟು ಬೇಕು ಅಷ್ಟು ಖರ್ಚುಮಾಡಿರಿ ಒಟ್ಟಿನಲ್ಲಿ ಚಿತ್ರಕಲಾ ವಿಭಾಗವು ಬೆಳೆದರೆ ಸಾಕು ಎನ್ನುತ್ತಿದ್ದರಂತೆ. ಇದಕ್ಕೆ ಖಂಡೇರಾವರೂ ಹೊರತಾಗಿದ್ದಿಲ್ಲ. ಪೂಜ್ಯ ಅಪ್ಪ ಅವರ ಸಹಾಯ-ಸಹಕಾರವನ್ನು ಅವರು ದುರುಪಯೋಗಪಡಿಸಿಕೊಳ್ಳದೇ ಅದನ್ನು ಸಂಪೂರ್ಣವಾಗಿ ವಿದ್ಯಾರ್ಥಿಗಳ ಏಳಿಗಾಗಿ ವಿನಿಯೋಗಿಸುತ್ತಿದ್ದರು.

ಖಂಡೇರಾವರ ಕೈಯಲ್ಲಿ ಪಳಗಿದ ಅನೇಕ ವಿದ್ಯಾರ್ಥಿಗಳು ಇಂದು ಉನ್ನತವಾದ ಒಂದು ಮಟ್ಟಕ್ಕೆ ತಲುಪಿದ್ದಾರೆ. ಇದರ ಹಿಂದೆ ಖಂಡೇರಾವರ ಪರಿಶ್ರಮದ ಬೆವರಿದೆ. ಅನೇಕ ವಿದ್ಯಾರ್ಥಿಗಳು ರಾಷ್ಟ್ರಮಟ್ಟದವರೆಗೂ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಅವರು ಅನೇಕ ಕಲಾ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಇವುಗಳಲ್ಲಿ ಕಲಾಪ್ರದರ್ಶನಗ

ಳು ಮತ್ತು ಕಲಾಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದರು. ರಾಷ್ಟ್ರೀಯ ಕಲಾಮೇಳದಲ್ಲಿ ಈ ವಿಭಾಗದ ವಿದ್ಯಾರ್ಥಿಗಳು ಭಾಗವ ಹಿಸುತ್ತಿದ್ದರು. ಇದರಲ್ಲಿ ಮದ್ರಾಸ, ದೆಹಲಿ ಬೆಂಗಳೂರುಗಳಲ್ಲಿ ನಡೆದ ಕಲಾಮೇಳದಲ್ಲಿ ವಿಭಾಗದ ವಿದ್ಯಾರ್ಥಿಗಳಿಂದ Stall ಗಳನ್ನು ಹಾಕಿ, ಅಲ್ಲಿ ಚಿತ್ರಕಲಾ ಪ್ರದರ್ಶನವನ್ನು ಮಾಡಿದವರಾಗಿದ್ದಾರೆ. ರಾಜ್ಯ ಲಲಿತಕಲಾ ಅಕಾಡೆಮಿಯಿಂದ ಪ್ರಶಸ್ತಿಯನ್ನು ಪಡೆದುಕೊಂಡವರಾಗಿದ್ದಾರೆ. ಅಂಥವರಲ್ಲಿ ಶಂಕರ ನವಲಬಾ, ಎ.ಎಸ್.ಪಾಟೀಲ, ಶಿವಾನಂದ ಬಂಟ ನೂರ, ವಿ.ಬಿ. ಬಿರಾದರ, ಮುಂತಾದವರು. ಇದಲ್ಲದೇ ಮೈಸೂರ ದಸರಾ ಕಲಾ ಪ್ರದರ್ಶನದಲ್ಲಿ ಈ ವಿಭಾಗದ ವಿದ್ಯಾ ರ್ಥಿನಿ 1994 ರಲ್ಲಿ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾಳೆ. ರಾಜ್ಯ ಲಲಿತಕಲಾ ಅಕಾಡೆಮಿಯಿಂದ ಸಿದ್ದು ಹೀರೆಮಠ, ಮಲ್ಲಿಕಾರ್ಜುನ ಭಾಗೋಡಿ, ರೇಖಾ ಘಂಟಿ ಇವರಲ್ಲದೇ ಇನ್ನೂ ಹಲವಾರು ವಿದ್ಯಾರ್ಥಿಗಳು ಕಲಾವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಧನಸಹಾಯವನ್ನು ಪಡೆದುಕೊಂಡಿದ್ದಾರೆ. ಗುಲಬರ್ಗಾ ವಿಶ್ವವಿಧ್ಯಾಲಯವು ಪ್ರತಿವರ್ಷ ರಾಜ್ಯೋತ್ಸವದ ಅಂಗವಾಗಿ ಏರ್ಪಡಿಸುವ ಚಿತ್ರಕಲಾ ಪ್ರದರ್ಶನದಲ್ಲಿ ವಿಭಾಗದ ವಿದ್ಯಾರ್ಥಿಗಳು ಭಾಗವಹಿಸಿ ಬಹುಮಾನವನ್ನು ಪಡೆದು ಕೊಂಡಿದ್ದಾರೆ. ಅಂಥವರಲ್ಲಿ ವಿ.ಬಿ . ಬಿರಾದರ , ಎಸ್.ಎಮ್.ನೀಲಾ, ನಾಗರತ್ನಾ ಸಾಹು , ಗೌರಿಶಂಕರ, ರಾಜೇಂದ್ರ ಪೋದ್ದಾರ , ಓಂಪ್ರಕಾಶ ಮಠಪತಿ, ಮಲ್ಲಿಕಾರ್ಜುನ ಭಾಗೋಡಿ, ರೇಖಾ ಘಂಟಿ, ಮಲ್ಲಿಕಾರ್ಜು ಕೊರಳ್ಳಿ, ಜಿತೇಂದ್ರ ಮುಂತಾದ ವಿದ್ಯಾರ್ಥಿಗಳು ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಗುಲಬರ್ಗಾ ವಿಶ್ವವಿಧ್ಯಾಲಯವು ಪ್ರತಿ ವರ್ಷ ನಡೆಸು ವ ಬಿ.ಎ ಮತ್ತು ಎಮ್.ಎ. ಸ್ನಾತಕೋತ್ತರ ಲಲಿತಕಲೆ ಪದವಿ ಪರೀಕ್ಷೆಗಳನ್ನು ನಡೆಸುತ್ತಿದ್ದು, ಈ ಪರೀಕ್ಷೆಗಳಲ್ಲಿ ಶರಣಬಸವೇ ಶ್ವರ ಮಹಾ ವಿಧ್ಯಾಲಯದ ಲಲಿತಕಲಾ ವಿಭಾಗದ ವಿದ್ಯಾರ್ಥಿಗಳು ಎಲ್ಲಾ ವಿಭಾಗದ ವಿದ್ಯಾರ್ಥಿಗಳಿಗಿಂತ ಹೆಚ್ಚು ಅಂಕ ಗಳನ್ನು ಪಡೆದುಕೊಂಡು ಪ್ರಥಮ ರ್‍ಯಾಂಕನೊಂದಿಗೆ ತೇರ್ಗಡೆಯನ್ನು ಹೊಂದಿದ್ದಾರೆ. ಇವರಲ್ಲಿ ಉಮೇಶ, ವೀರೇಂದ್ರ ಪಂಚಾಳ , ಓಂಪ್ರಕಾಶ ಮಠಪತಿ, ಸಿದ್ದು ಹೀರೆಮಠ , ಶರಣಗೌಡ ಕೆಳಗೇರಿ , ಮಲ್ಲಿಕಾರ್ಜುನ ಭಾಗೋಡಿ,ಮಲ್ಲಿಕಾ ರ್ಜುನ ಕೊರಳ್ಳಿ , ರಾಜಕುಮಾರ ಕಾಳೆ, ರಾಜಕುಮಾರ ಭಾರಸಿಂಗಿ, ಮುಂತಾದ ವಿದ್ಯಾರ್ಥಿಗಳನ್ನು ಹೆಸರಿಸಬಹುದು. ಇದಲ್ಲದೇ ಇನ್ನೂ ಹಲವಾರು ರೀತಿಯ ಕಲಾಚಟುವಟಿಕೆಗಳಲ್ಲಿ ಈ ವಿಭಾಗದ ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದರು. ಇದಲ್ಲದಕ್ಕೂ ಖಂಡೇರಾವರು ಪಟ್ಟ ಶ್ರಮ, ತ್ಯಾಗ- ಮನೋಭಾವವನ್ನು ನಾವು ಯಾರೂ ಮರೆಯುವಂತಿಲ್ಲ. ಈ ವಿಭಾಗವನ್ನು ಕಟ್ಟಿ ಬೆಳೆಸಲು ಅವರು ತಮ್ಮ ಕನಸಿನ ಕೂಸಾದ ಆದರ್ಶ ಕಲಾ ಮಂದಿರವನ್ನೇ ಬಿಡಬೇಕಾಯಿತು. ಅದಕ್ಕೇ ಹೇಳೊದು ಏನಾದರೂ ಪಡೆಯಬೇಕಾದರೆ ಏನನ್ನಾದರೂ ಕಳೆದುಕೊಳ್ಳಬೇಕಾಗುತ್ತದೆ. ಈ ಮಾತು ಸತ್ಯ. ಖಂಡೇರಾ ವರು ಆದರ್ಶ ಕಲಾ ಮಂದಿರವನ್ನು ಬಿಟ್ಟು ಈ ವಿಭಾಗವನ್ನು ಉನ್ನತ ಸ್ಥಾನಕ್ಕೆ ತರಲು ಶ್ರಮಿಸಿದರು. ಆದರೆ ಅಂದಾನಿಯ ವರು ಈ ಕಾರ್ಯವನ್ನು ನಿಭಾಯಿಸಿಕೊಂಡು ಹೋಗುವಲ್ಲಿ ಹಿಂದೆ ಸರಿಯಲಿಲ್ಲ. ಖಂಡೇರಾವವರು ತಮಗೆ ವಹಿಸಿಕೊಟ್ಟ ಆದರ್ಶ ಕಲಾ ಮಂದಿರದ ಜವಾಬ್ದಾರಿಯನ್ನು ಅಚ್ಚು ಕಟ್ಟಾಗಿ ನಿಭಾಯಿಸಿಕೊಂಡು ಬಂದಿದ್ದಾರೆ.

ಖಂಡೇರಾವರು ಕೇವಲ ಒಬ್ಬ ಕಲಾಶಿಕ್ಷಕರಾಗಿಲ್ಲದೇ ಒಬ್ಬ ದಕ್ಷ ಆಡಳಿತಗಾರರೂ ಆಗಿದ್ದರು. ಅದಕ್ಕೆಂತಲೇ ಅವರು ಈ ವಿಭಾಗವನ್ನು ತಾವೊಬ್ಬರೆ ನಡೆಸಿಕೊಂಡು ಬಂದಿದ್ದರು. ಅವರು ಎಂಥ ಕಾರ್ಯಗಳಿರಲಿ ಅದನ್ನು ಮಾಡಿ ಯೇ ತೀರುತ್ತಿದ್ದರು. ಇವರು ತುಂಬ ಶಾಂತ ಸ್ವಭಾವದಂತೆ ತೋರಿದರೂ ತಮ್ಮ ಛಲವನ್ನು ಬಿಡದವರಾಗಿದ್ದರು. ಇವರು ಜೀವನದಲ್ಲಿ ನೋವು ನಲಿವುಗಳನ್ನು ಸವಿದವರಾಗಿದ್ದರು. ಅದಕ್ಕಾಗಿಯೇ ಪೂಜ್ಯ ಅಪ್ಪಾ ಅವರು ಈ ಕಲಾವಿಭಾಗದ ಸ ಮಸ್ತ ಜವಾಬ್ದಾರಿಯನ್ನು ಖಂಡೇರಾವರಿಗೆ ಒಪ್ಪಿಸಿಬಿಟ್ಟಿದ್ದರು. ಇಂದಿಗೂ ಪೂಜ್ಯ ಅಪ್ಪಾ ಅವರು ಖಂಡೇರಾವರನ್ನು ಬಿಡ ಲೊಲ್ಲರು. ಪೂಜ್ಯ ಅಪ್ಪಾ ಅವರೇ ಹೇಳುವ ಹಾಗೆ " ಖಂಡೇರಾವರು ಒಬ್ಬ ಚಾಣಾಕ್ಷ ಆಡಳಿತಗಾರ, ಮೇಲಾಗಿ ಶಾಂ ತ ಸ್ವಭಾವದ ಮನುಷ್ಯ. ಎಲ್ಲವನ್ನು ಸಲೀಸಾಗಿ ನಿಭಾಯಿಸಿಕೊಂಡು ಹೋಗಬಲ್ಲ ಸಾಮರ್ಥ್ಯವನ್ನು ಹೊಂದಿದವರು. ನೋಡುವದಕ್ಕೆ ಸಾಧಾರಣ ವ್ಯಕ್ತಿಗಳಂತೆ ಕಂಡರೂ ಅವರಲ್ಲಿ ಕಲಾಶಕ್ತಿಯು , ಕಲಾಸಂಪತ್ತು ಅಪಾರವಾಗಿ ಅಡಗಿದೆ. ಸದ್ದು ಗದ್ದಲವಿಲ್ಲದೆ ಎಲ್ಲಾ ಕೆಲಸಗಳನ್ನು ಮಾಡಿ ಮುಗಿಸುವವರು. ಯಾವದಕ್ಕೂ ಬೊಟ್ಟು ಮಾಡಿ ಹೇಳಿಸಿಕೊಂಡವರಲ್ಲ. ಈಗಿನ ಕಾಲದಲ್ಲಿ ಸ್ವಲ್ಪ ಹೆಸರು ಬಂತೆಂದರೆ ಸಾಕು ಅವರು ತಮ್ಮತನವನ್ನು ಸ್ಪಷ್ಟಪಡಿಸಲು ತಮ್ಮದೇ ಆದ ಒಂದು ಶೈಲಿಯ ನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುತ್ತಾರೆ. ಆದರೆ ಖಂಡೇರಾವರು ಅದ್ಯಾವದೇ ಗೊಜಿಗೆ ಹೋಗಲಿಲ್ಲ. ಇಂಥ

ಒಂದು ಅಸಾಮಾನ್ಯ ಕಲಾವಿದರು ನಮ್ಮ ಸಂಸ್ಥೆಗೆ ಸಿಕ್ಕಿರುವದು ನಮಗೆ ಹೆಮ್ಮೆಯ ವಿಷಯವಾಗಿದೆ." ಎಂದು ಪೂಜ್ಯ ಅಪ್ಪಾ ಅವರು ಖಂಡೇರಾವರ ಕಾರ್ಯವೈಖರಿಯನ್ನು , ವ್ಯಕ್ತಿತ್ವನ್ನು ಕುರಿತು ಹೇಳುತ್ತಾರೆ.

ಖಂಡೇರಾವರು ನಾಡಿನ ಹಲವಾರು ಸಂಘ ಸಂಸ್ಥೆಯವರನ್ನು ಕೂಡಿಕೊಂಡ ಅವರ ಸಹಯೋಗದೊಂದಿಗೆ ಹಲವಾರು ಕಾರ್ಯಾಗಾರಗಳನ್ನು ಯಶಸ್ವಿಯಾಗಿ ಆಯೋಜಿಸಿದ್ದಾರೆ. ಶರಣಬಸವೇಶ್ವರ ಸಂಸ್ಥೆ ಮತ್ತು ನಾಗಪೂರದ ಎಸ್.ಸಿ.ಝಡ್.ಸಿ.ಸಿ. ಯವರ ಸಹಯೋಗದೊಂದಿಗೆ ಕಲಬುರ್ಗಿಯಲ್ಲಿ ಒಂದು ಪೊರ್ಟ್ರೇಟ್ ಕ್ಯಾಂಪನ್ನು ಏರ್ಪಡಿಸಿದರು. ಹೀಗೆ ಒಂದೆ , ಎರಡೆ , ಹೇಳುತ್ತಾ ಹೋದರೆ ಅದಕ್ಕೆ ಕೊನೆಯೆ ಇಲ್ಲ. 1995 ರಲ್ಲಿ ಇವರ ನೇತೃತ್ವದಲ್ಲಿ ನಡೆದ ರಾಷ್ಟ್ರಮಟ್ಟದ ಕ್ಯಾಂಪನ್ನು ಶರಣಬಸವೇಶ್ವರ ಸಂಸ್ಥೆಯ ಅಡಿಯಲ್ಲಿ ಬರುವ ದೊಡ್ಡಪ್ಪ ಅಪ್ಪ ಸಭಾಮಂಟಪದಲ್ಲಿ ಸುಮಾರು ಇಪ್ಪತ್ತು ದಿನಗಳ ವರೆಗೆ ನಡೆಸಲಾಗಿತ್ತು. ಈ ಒಂದು ಕ್ಯಾಂಪಿಗೆ ದೇಶದ ಹಲವಾರು ಕಡೆಗಳಿಂದ ಕಲಾವಿದರನ್ನು ಕರೆಸಿದ್ದರು. ಸುಮಾರು ಐದು ಲಕ್ಷ ರೂಪಾಯಿಯವರೆಗೆ ಇದರ ವೆಚ್ಚತಗುಲಿತು. ಪೂಜ್ಯ ಅಪ್ಪ ಅವರೆ ಇದರ ವೆಚ್ಚವನ್ನು ಭರಿಸಿದರು. ಇಲ್ಲಿ ಚಿತ್ರಿತಗೊಂಡ ಎಲ್ಲಾ ಕಲಾಕೃತಿಗಳು ಶರಣರ ಜೀವನಕ್ಕೆ , ಅವರ ಬದುಕಿಗೆ ಸಂಬಂಧ ಪಟ್ಟ ವಿಷಯಗಳಿಂದ ಕೂಡಿದ್ದವು. ಸ್ವತಃ ಖಂಡೇರಾವರೆ ಹೇಳುವ ಹಾಗೆ " ಈ ಒಂದು ಕ್ಯಾಂಪ ನನ್ನ ಜೀವಮಾನದಲ್ಲೇ ಒಳ್ಳೆಯದೆನಿಸಿದೆ. ದೇಶದ ಹಲವಾರು ಕಡೆಗಳಿಂದ ಕಲಾವಿದರನ್ನು ಅಹ್ವಾನಿಸಿದ್ದೆ. ಅವರೆಲ್ಲರೂ ನನ್ನ ಕರೆಯನ್ನು ಒಪ್ಪಿಕೊಂಡು ಬಂದು ತಮ್ಮ ಉನ್ನತ ಕಲಾಕೃತಿಯನ್ನು ಇಂದು ನಮ್ಮಲ್ಲಿ ಬಿಟ್ಟು ಹೋಗಿದ್ದಾರೆ. ಅವರೆಲ್ಲರಿಗೂ ನಾನು ಕೃತಜ್ಞ. ಈ ಕ್ಯಾಂಪ ಇಷ್ಟೊಂದು ಸುಜ್ಜತವಾಗಿ ನೆರವೇರಲು ಪೂಜ್ಯ ಅಪ್ಪ ಅವರು ತುಂಬ ಸಹಕರಿಸಿದ್ದಾರೆ. ಅಲ್ಲದೇ ಕಲಾ ವಿಭಾಗದ ವಿದ್ಯಾರ್ಥಿಗಳು ಸುಮಾರ ಒಂದು ತಿಂಗಳ ವರೆಗೆ ಹಗಲು-ಇರುಳು ಎನ್ನದೇ ಬಂದಂತ ಕಲಾವಿದರಿಗೆ ಉಪಚಾರದಿಂದ ಹಿಡಿದು ಅವರಿಗೆ ಎಲ್ಲಾ ರೀತಿಯಿಂದಲೂ ನೆರವಾಗುತ್ತಿದ್ದರು. ಹೀಗೆ ಹಲವಾರು ರೀತಿಯಿಂದ ಸಹಕಾರವನ್ನು ಕೊಟ್ಟಿದ್ದಾರೆ. ಅವರೆಲ್ಲರನ್ನು ಈ ಸಂದರ್ಭದಲ್ಲಿ ನೆನೆಯಲೆ ಬೇಕು. ಸುಮಾರು ಇಪ್ಪತ್ತರಿಂದ ಇಪ್ಪತ್ತೈದು ಜನ ಕಲಾವಿದರು ಈ ಒಂದು ಕ್ಯಾಂಪನಲ್ಲಿ ಭಾಗವಹಿಸಿದ್ದರು. ಪ್ರತಿಯೊಬ್ಬ ಕಲಾವಿದನಿಗೆ ತಲಾ ಐದು ಸಾವಿರ ರೂಪಾಯಿಯಂತೆ ಗೌರವ ಧನವನ್ನು ಪೂಜ್ಯ ಅಪ್ಪ ಅವರು ನೀಡಿದರು. ಒಟ್ಟಿನಲ್ಲಿ ಆ ಒಂದು ಕ್ಷಣ ನಾನು ಇಂದಿಗೂ ಮರೆಯುವದಿಲ್ಲ." ವೆಂದು ಖಂಡೇರಾವರು ಅಂದಿನ ಕ್ಷಣವನ್ನು ನೆನೆಯುತ್ತಾರೆ.

ಹೀಗೆ ಖಂಡೇರಾವರು ಒಬ್ಬ ಕಲಾವಿದರಾಗಿ , ಕಲಾಶಿಕ್ಷಕನಾಗಿ, ವಿಭಾಗದ ನಿರ್ದೇಶಕರಾಗಿ , ಒಳ್ಳೆಯ ಆಡಳಿತಗಾರರಾಗಿ ಸುಮಾರು ಮೂರು ದಶಕಗಳ ವರೆಗೆ ಶರಣಬಸವೇಶ್ವರ ಮಹಾವಿಧ್ಯಾಲಯದಲ್ಲಿ ವೃತ್ತಿ ಜೀವನವನ್ನು ನಿರ್ವಹಿಸಿ 1998 ರಲ್ಲಿ ವೃತ್ತಿಯಿಂದ ನಿವೃತ್ತಿಯನ್ನು ಹೊಂದಿದರು.

ಕಲಾ ಬದುಕು

ಖಂಡೇರಾವರು ವೃತ್ತಿಯಿಂದ ನಿವೃತ್ತಿಯನ್ನು ಹೊಂದಿದರೂ. ಪ್ರವೃತ್ತಿಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಇವರೆ ಹೇಳುತ್ತಾರೆ "ಒಬ್ಬ ಕಲಾವಿದನಿಗೆ ಯಾವಾಗ ಬಿಡುವು ಸಿಗುತ್ತದೆಂದರೆ ಅವನು ವೃತ್ತಿಯಿಂದ ನಿವೃತ್ತಿಯನ್ನು ಹೊಂದಿದಾಗಲೆ ಹೆಚ್ಚಿನ ಕಲಾಕ್ರಿಯೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ನಾನಂತು ನಿವೃತ್ತಿಯನ್ನು ಹೊಂದಿದ ಮೇಲೆಯೆ ಹೆಚ್ಚಿನ ಕಲಾಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದೇನೆ. ಈಗ ನಾನು ಇನ್ನೂ ಏನನ್ನಾದರೂ ಸಾಧಿಸಬೇಕೆಂದುಕೊಂಡಿದ್ದೇನೆ. ಕಲಾವಿದನಿಗೆ ವಯಸ್ಸು ಮುಖ್ಯವಲ್ಲ, ಅವನಿಗೆ ಮನಸ್ಸು ಮುಖ್ಯ. ಒಳ್ಳೆಯ, ಪರಿಶುದ್ಧ ಮನಸ್ಸಿದ್ದರೆ ನಾವು ಯಾವಾಗಲೂ ಕಲಾಕ್ರಿಯೆಯಲ್ಲಿ ತೊಡಗಬಹುದು. ಅದಕ್ಕಾಗಿಯೇ ಹೆಳುವ್ರುದು ಕಲಾವಿದನಾದವನು ಮಾನಸಿಕವಾಗಿ ತಯಾರಿರಬೇಕು. " ಎಂದು ಖಂಡೇರಾವರು ಈ ವಯಸ್ಸಿನಲ್ಲಿ ತಮಗಿರುವ ಕಲಾ ಇಂಗಿತವನ್ನು ವ್ಯಕ್ತಪಡಿಸುತ್ತಾರೆ. ಖಂಡೇರಾವರ ಸಮಸ್ತ ಬದುಕನ್ನು ನಾವು ನೊಡಿದಾಗ ಅದು ಕಲಾತ್ಮಕವಾಗಿ ರೂಪುಗೊಂಡದ್ದು ಕಂಡು ಬರುತ್ತದೆ. ಇವರು ಬಾಲ್ಯದಿಂದ ಹಿಡಿದು ಇಲ್ಲಿಯವರೆಗೆ ತಮ್ಮನ್ನು ಕಲಾಸೃಷ್ಟಿಯಲಿ, ಕಲಾಲೋಕದಲ್ಲಿ ತೊಡಗಿಸಕೊಂಡವರಾಗಿದ್ದಾರೆ. ಸ್ವತಃ ತಾವೇ ಎಂದುಕೊಳ್ಳುವ ಹಾಗೆ "ಬಹುಶಃ ನನಗೆ ಶಿಕ್ಷಕ ವೃತ್ತಿಯನ್ನು ಸಿಗಲಿಲ್ಲವೆಂದರೆ ನಾನು ಈ ಒಂದು ಮಟ್ಟಕ್ಕೆ ಬರಲು ಆಗುತ್ತಿರಲಿಲ್ಲವೆಂದು ನನಗನಿಸುತ್ತದೆ. ಯಾಕೆಂದರೆ ಕಲಾಶಿಕ್ಷಕ ವೃತ್ತಿಯಲ್ಲಿದ್ದರೆ. ಈ ಕ್ಷೇತ್ರಕ್ಕೆಯಾವಾಗಲೂ ನಂಟು



ಚಿತ್ರ 5. ಕಲಾ ಸೃಷ್ಟಿಯಲ್ಲಿ ತೊಡಗಿರುವ ಜೆ.ಎಸ್. ಖಂಡೇರಾವರು

ಇದ್ದೇ ಇರುತ್ತದೆ. ಅದು ಹೇಗೆಂದರೆ ದಿನಾಲು ಕ್ಲಾಸಿನಲ್ಲಿ ವಿದ್ಯಾರ್ಥಿಗಳಿಗೆ ಬೋಧನೆಯನ್ನು ಮಾಡುವ ಸಂದರ್ಭದಲ್ಲಿ ನಾವು ಕಲಾಕೃತಿಗಳನ್ನು ಚಿತ್ರಿಸಬಹುವುದು. ಒಟ್ಟಿನಲ್ಲಿ ಈ ಕ್ಷೇತ್ರದಲ್ಲಿಯೇ ನಾವು ಇರುವುದರಿಂದ ನಮಗೆ ಚಿತ್ರಕಲೆಯ ಮೌಲ್ಯಗಳು ಮರೆಯಲಾಗುವುದಿಲ್ಲ. ಒಂದು ವೇಳೆ ಬೇರೆ ಯಾವುದೇ ವಿಭಾಗದಲ್ಲಿ ಕೆಲಸವನ್ನು ದೊರಕಿದ್ದರೆ ಮುಂಜಾನೆಯಿಂದ ಸಂಜೆಯವರೆಗೂ ಆಕೆಲಸವನ್ನು ನಿರ್ವಹಿಸಬೇಕು. ಹೀಗಾಗಿ ನಾವು ಚಿತ್ರಕಲೆಯನ್ನು ಒಂದೊಂದು ಸಾರಿ ಸಂಪೂರ್ಣವಾಗಿ ಮರೆತುಬಿಡಬಹುದು. ಅದಕ್ಕಾಗಿ ಕಲಾಶಿಕ್ಷಕ ವೃತ್ತಿಯಲ್ಲಿದ್ದರೆ, ಆ ವಿಷಯಕ್ಕೆ ಸಂಬಂಧಪಟ್ಟಂತೆ ಏನಾದರೂ ಒಂದು ಕಾಯಕದಲ್ಲಿ ನಾವು ತೊಡಗಬಹುದು.'' ಎಂದು ಖಂಡೇರಾವರು ತಾವು ಇಷ್ಟೊಂದು ಬೆಳೆಯಲು ಶಿಕ್ಷಕ ವೃತ್ತಿಯೇ ಕಾರಣವೆನ್ನುತ್ತಾರೆ. ಹೀಗಾಗಿ ಇವರು ತಮ್ಮ ಬದುಕನ್ನೇ ಕಲಾತ್ಮಕ ಬದುಕನ್ನಾಗಿ ಪರಿವರ್ತಿಸಿಕೊಂಡವರಾಗಿದ್ದಾರೆ. ಸಧ್ಯದಲ್ಲಿ ಇವರು ವೃತ್ತಿಯಿಂದ ನಿವೃತಿಯಾಗಿದ್ದಾರೆ. ಆದರೆ ನಿವೃತ್ತಿಯಾದರೂ ತಮ್ಮನ್ನು ಇಂದಿಗೂ ಕಲಾಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಹೀಗೆ ಇವರ ಬದುಕಿನ ಒಂದೊಂದು ಘಳಿಗೆಯು ಕಲಾತ್ಮಕತೆಯಿಂದ ಕೂಡಿದ್ದಾಗಿದೆ.

ಖಂಡೇರಾವರು ಒಳ್ಳೆಯ ವ್ಯಕ್ತಿತ್ವವುಳ್ಳವರಾಗಿದ್ದಾರೆ ಮತ್ತು ಸ್ನೇಹಮಯ ಜೀವಿಗಳೂ ಆಗಿದ್ದಾರೆ. ಸ್ನೇಹದಿಂದ ವ್ಯಕ್ತಿತ್ವ ರೂಪಗೊಳ್ಳುತ್ತದೆ. '' ಸ್ನೇಹದಿಂದ ಬದುಕಿನಲ್ಲಿ ಯಶಸ್ಸು, ಒಳ್ಳೆಯ ಸ್ನೇಹಅನೇಕ ಗುಣಗಳನ್ನು ಬೇಡುತ್ತದೆ. ನಿಷ್ಕಪಟ, ನೇರವಿರುವ ಸ್ವಾರ್ಥಕರಹಿತವಾದ ಸ್ನೇಹ ಅಂಥಃಕರಣವನ್ನು ಯಾಚಿಸುತ್ತದೆ. ತ್ಯಾಗವನ್ನು ಕೇಳುತ್ತದೆ. ಹೊಂದಾಣಿಕೆಯನ್ನು ಬಯಸುತ್ತದೆ. ಲಾಭವನ್ನು ನೋಡುವ ಸ್ನೇಹ ಶಾಸ್ವತವಲ್ಲ. ಹಾನಿಯಲ್ಲೂ ಒಂದಾಗುವ ಸ್ನೇಹವು ಸ್ನೇಹದ ನೈಜತೆ, ಸತ್ಯತೆಯನ್ನು ಅಬಿವ್ಯಕ್ತಗೊಳಿಸುತ್ತದೆ. ಈ ಸ್ನೇಹ ಸಂಬಂಧಕ್ಕಿಂತಲೂ ದೊಡ್ಡದು.''[3] ಸರಳತೆಗೆ ಸೌಜಬನ್ಯಕ್ಕೆ, ಮುಗ್ದತೆಗೆ ಮತ್ತೊಂದು ಹೆಸರು ಜಗದೇವಪ್ಪ ಖಂಡೇರಾವ. ಸರಳತೆ ಸೌಜ್ಯನತೆಯಲ್ಲಿರುವ ಬದುಕು ಪರಿಶುದ್ಧ ಬದುಕು. ಮನುಷ್ಯನ ಶ್ರೇಷ್ಟತೆಯೆಲ್ಲವೂ ಅವನ ಸರಳತೆಯಲ್ಲಿಯೇ ವ್ಯಕ್ತವಾಗುತ್ತದೆ. ಉನ್ನತವಾದ ಬುದ್ಧಿ, ಉನ್ನತವಾದ ಆಲೋಚನೆ, ಉನ್ನತವಾದ ಬದುಕು ಇರುವಲ್ಲಿ ಸರಳತೆ ಜೊತೆಯಾಗಿರುವುದು. ಸ್ವಾಭಾವಿಕ. ಮೃದು ಮಧುರಮಾತುಗಳ ಖಂಡೇರಾವ ಅವರನ್ನು ಸ್ಮರಿಸಿಕೊಂಡಾಗ ಉದ್ದನ್ನ ಮೂಗು, ವಿಶಾಲ ಹಣೆ ಕಣ್ಣು ತೇಜಸ್ಸಿನ ಶಾಂತ ಸ್ವಾಭಾವದ ದುಂಡು ಮುಖ ಎದುರು ನಿಲ್ಲುತ್ತದೆ. ತೀರ ಎತ್ತರವಿರದ- ತೀರ ಕುಳ್ಳಗಿರದ ಆಕರ್ಷಕ ವ್ಯಕ್ತಿತ್ವ ಹೊಂದಿದ ಖಂಡೇರಾವ ಈ ನಾಡಿನ - ಈ ಭಾಗದ ಹೆಸರಾಂತ ಕಲಾವಿದರಲ್ಲೊಬ್ಬರು. ಅಸಾಧಾರನ ಪ್ರತಿಭೆಯಿರುವ ಖಂಡೇರಾವ ಕೀರ್ತಿಗಾಗಿ ಸ್ಥಾನಮಾನಕ್ಕಾಗಿ ಲೆಕ್ಕಿಸಲಿಲ್ಲ. ತಪ್ಪಿಕೂಡ ಹೆಸರು - ಪ್ರಚಾರ ಬಯಸಿದವರಲ್ಲ.''[4]

ಖಂಡೇರಾವರು ಗುರಿ ತಲುಪಲು ಪಟ್ಟ ಪಾಡು- ನೋವು ಅಸಾಧಾರಣ. ಕತ್ತಲಲ್ಲಿ ನಡೆದು ಬಂದಿದ್ದಾರೆ. ದಾರಿಕಾಣದಾಗಲೂ ಬಂದಿದ್ದಾರೆ. ಕ್ರಮೇಣ ಬೆಳಕು ಇವರು ಪ್ರಯತ್ನವಾದಿ ಹೋರಾಟಗಾರರು, ಶ್ರದ್ಧಾವಂತರು,ಪ್ರತಿಭಾವಂತರು, ಇವರ ಸಮಗ್ರ ವ್ಯಕ್ತಿತ್ವವನ್ನು ಅರಿತಾಗ ಇವರ ಬದುಕು ಸುಂದರ, ಅದು ಸುಗಂಧದ ಬದುಕು, ಪರಿಮಳಬೀರುವ ಗುಲಾಬಿಯ ಬದುಕು. ಆಯಸ್ಕಾಂತದಂತೆ ಆಕರ್ಷಣೆಯ ಬದುಕು. ಖಂಡೇರಾವರು ಶಿಕ್ಷಕರಾಗಿ, ಕಲಾವಿದರಾಗಿ, ಕಲಾಶಾಲೆಯ ನಿರ್ಮಾಪರಾಗಿ, ಸಲಹೆಗಾರರಾಗಿ, ಎಲ್ಲದಕ್ಕೂ ಹೆಚ್ಚಾಗಿ ಮಾನವೀಯ ಗುಣಗಳನ್ನು ಅಳವಡಿಸಿಕೊಂಡು ಬೆಳಗುತ್ತಿರುವ ಪ್ರತಿಭಾವಂತ ಕಲಾವಿದರಾಗಿ, ಇವರ ಕಲಾಬದುಕು ಅರಿತಾಗ ಅವರ ಸೇವೆ ಯಾವ ಕಲಾವಿದರಿಗೂ ಕಡಿಮೆಯಾಗಿಲ್ಲ. ಅವರ ಕಲಾಸಂಪತ್ತು ಅಲ್ಪವೇನಲ್ಲ ಎಂಬುದು ಅರ್ಥವಾಗುತ್ತದೆ. ಅವರು ತಮ್ಮ ಆಸಕ್ತಿ ಹಾಗೂ ಪ್ರವೃತ್ತಿಗೆ ಅನುಸಾರವಾಗಿ ಕೆಲಸ ಮಾಡುತ್ತಾ ಬಂದಿದ್ದಾರೆ ಇಂಥ ಕಲಾವಿದರ ಸಂಸಾರದ ಬದುಕನ್ನು ಕಂಡಾಗ ಅಲ್ಲಿಯೂ ,ಶಾಂತಿ, ಸಂತಸ , ತೃಪ್ತಿ ನೆಲೆಸಿದುದು ಸ್ವಾಭಾವಿಕ.

ಖಂಡೇರಾವರ ನಿವೃತ್ತಿಯ ನಂತರದಲ್ಲಿಯ ಅಂದರೆ ಸದ್ಯದ ಹಂತದಲ್ಲಿಯ ಕಲಾಬದುಕನ್ನು ನಾವು ಅವಲೋಕಿಸಿದಾಗ ಅವರು ಪ್ರತಿಯೊಂದು ಹಂತದಲ್ಲಿಯೂ ವಿವಿಧ ರೀತಿಯ ಕಲಾ ಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದುಕಂಡು ಬರು

---

3. ಕಾವೆಂಶ್ರೀ : ಒಡನಾಟ , ಪುಟ 7

4. ಗವೀಶ ಹಿರೇಮಠ : ಕಲಾವಿದರು ನಡೆದು ಬಂದ ದಾರಿ, ಪುಟ 33

ತ್ತದೆ. ಬಹುಶಃ ಬೇರೆ ವಿಭಾಗಗಳನ್ನು ನಾವು ಹೋಲಿಸಿ ನೋಡಿದಾಗ , ಬೇರೆ -ವಿಭಾಗದಲ್ಲಿ ವೃತ್ತಿಯಿಂದ ನಿವೃತ್ತಿಯನ್ನು ಹೊಂದಿದ ಮೇಲೆ ಅವರು ವಿಶ್ರಾಂತಿ ಜೀವನವನ್ನು ನಡೆಸುತ್ತಾರೆ. ಆದರೆ ಚಿತ್ರಕಲಾ ಕ್ಷೇತ್ರ ಹಾಗಲ್ಲ ಇಲ್ಲಿ ವೃತ್ತಿಯಿಂದ ನಿವೃತ್ತಿಯನ್ನು ಹೊಂದಿದ ಮೇಲೆಯೇ ಹೆಚ್ಚಿನ ಒಂದು ಕಲಾಕ್ರಿಯೆಯಲ್ಲಿ ತೊಡಗುವದಕ್ಕೆ ಸಾಧ್ಯವಾಗುತ್ತದೆ. ಇದಕ್ಕೆ ಖಂಡೇರಾವರೂ ಹೊರತಾಗಿಲ್ಲ. ಇವರೇ ಹೇಳುವ ಹಾಗೆ " ನಾನು ವೃತ್ತಿಯಿಂದ ನಿವೃತ್ತನಾಗಿರಬಹುದು ಆದರೆ ಪ್ರವೃತ್ತಿಯಿಂದ ಇನ್ನೂ ನಿವೃತ್ತಿಯನ್ನು ಹೊಂದಿಲ್ಲ. ಮೇಲಾಗಿ ನನಗೆ ಈಗ ಹೆಚ್ಚಿನ ಒಂದು ಸಮಯವನ್ನು ಕಲಾಕೃತಿ ರಚನೆಗೆ ದೊರಕುತ್ತಿದೆ. ನಾನೇನು ಸಾಧಿಸಬೇಕೆಂದಿದ್ದರೆ ಅದನ್ನು ಈಗ ನೆರವೇರಿಸುವೆ. ಕಲಾವಿದನು ಎಲ್ಲವನ್ನು ಕಲಿತವನಲ್ಲ. ಅವನು ಕಲಿಯುವದು ಮುಗಿಯಿತೆಂದು ಹೇಳುವ ಹಾಗಿಲ್ಲ. ಅವನು ಯಾವಾಗಲೂ ಕಲಿಯುವ ದಾರಿಯಲ್ಲೇ ಸಾಗುತ್ತಿರುತ್ತಾನೆ. ಎಲ್ಲವನ್ನು ನಾನು ಕಲಿತಿದ್ದೆನೆ. ಎನ್ನಲಿಕ್ಕೆ ಆಗುವದಿಲ್ಲ. ಎಲ್ಲಿಯವರೆಗೆ ಅವರು ಜೀವಿತನಿರುತ್ತಾನೆ ಅಲ್ಲಿಯವರೆಗೆ ಅವನು ಇನ್ನೂ ಕಲಿಯುವ ಹಂತದಲ್ಲಿರುತ್ತಾನೆ. ಯಾವಾಗ ಅವನ ಮರಣ ಹೊಂದುತ್ತಾನೆ ಆವಾಗ ಸಂಪೂರ್ಣ ಕಲಿತಂತೆ. ಯಾಕೆಂದರೆ ಆವಾಗ ಅವನು ಜಡವಸ್ತುವಾಗಿ ಬಿಡುತ್ತಾನೆ." ಎಂದು ಖಂಡೇರಾವರು ಕಲಿಯುವುದಕ್ಕೆ ವಯಸ್ಸು ಮುಖ್ಯವಲ್ಲ. ಮನಸ್ಸು ಮುಖ್ಯ. ಅದಕ್ಕಾಗಿ ಕಲಾವಿದನಾದವನಿಗೆ, ನಾನು ಸಂಪೂರ್ಣವಾಗಿ ಕಲಿತಿದ್ದೇನೆ ಎನ್ನುವ ಮಾತು ಸರಿಯೆನಿಸುವದಿಲ್ಲವೆಂದು ಹೇಳುತ್ತಾರೆ. ಖಂಡೇರಾವರ ಈ ಹಂತದಲ್ಲಿ ಯ ಕಲಾಬದುಕು, ಅಧ್ಯಯನ ಕಾಲದಲ್ಲಿಯ ಕಲಾಬದುಕು ಮತ್ತು ಅಧ್ಯಾಪಕ ವೃತ್ತಿಯ ಹಂತದಲ್ಲಿಯ ಕಲಾಬದುಕಿಗಿಂತ ಸ್ವಲ್ಪ ಭಿನ್ನವಾಗಿರುವುದು ಕಂಡು ಬರುತ್ತದೆ.

ಇಲ್ಲಿ ಖಂಡೇರಾವರು ಇನ್ನೊಬ್ಬರ ಆದೇಶದ ಮೇರೆಗಲ್ಲದೇ ತಮ್ಮದೇ ಆದ ಒಂದು ಶೈಲಿಯಲ್ಲಿ ಕಲಾಕೃತಿಗಳನ್ನು ರಚಿಸಿದ್ದು ಕಂಡು ಬರುತ್ತದೆ. ಅಂದರೆ ಒಂದು ರೀತಿಯಲ್ಲಿ ಸ್ವತಂತ್ರ ಜೀವಿಯಾಗಿ ಬೆಳಗ್ಗೆ ಐದುಗಂಟೆಗೆ ಎದ್ದು ವಾಯು ವಿಹಾರಕ್ಕೆ ಹೊರಡುವದು. ಅವರು ಯಾವಾಗಲೂ ಒಬ್ಬಂಟಿಗರಾಗಿರುವುದನ್ನು ರೂಢಿಸಿಕೊಂಡಿದ್ದರು. ಆರು ಮೂವತ್ತು ಗಂಟೆಯವರೆಗೆ ವಾಯು ವಿಹಾರವನ್ನು ಮುಗಿಸಿಕೊಂಡು ಬಂದರೆ ನೇರವಾಗಿ ತಮ್ಮ ಕಲಾಕೋಣೆಗೆ ಹೋಗಿ, ಒಳಗಡೆ ಬಾಗಿಲು ಹಾಕಿ ಕುಳಿತರೆಂದರೆ ಒಂಬತ್ತು ಗಂಟೆಯವರೆಗೂ ಅದನ್ನು ತೆರೆಯುತ್ತಿರಲಿಲ್ಲ. ಇಲ್ಲಿ ಸ್ಕೆಚ್ ಗಳನ್ನು ಮಾಡುವದಾಗಲಿ, ಅಥವಾ ಕಲಾಕೃತಿಗಳನ್ನು ರಚಿಸುವದಾಗಲಿ ಮಾಡುತ್ತಿದ್ದರು. ಈ ಹಂತದಲ್ಲಿ ಇವರು ಹೆಚ್ಚಾಗಿ ತೈಲಚಿತ್ರಗಳನ್ನು ಚಿತ್ರಿಸಿದ್ದಾರೆ. ನಂತರ ಕಾಲೇಜಿಗೆ ಬರುವದು ಇವರು ಮಾಡಿಕೊಂಡ ದಿನಚರಿ ಯಾಗಿತ್ತು. ಮದ್ಯಾಹ್ನ ಸರಿಯಾಗಿ ಹನ್ನೆರಡು ಗಂಟೆಯಾಯಿತೆಂದರೆ ಯಾವುದೇ ಕೆಲಸವಿರಲಿ ಅದನ್ನು ಬಿಟ್ಟು ಊಟಕ್ಕೆ ಹೋಗುವರು. ಈ ಸಮಯವನ್ನು ಅವರು ತಪ್ಪಿಸುತ್ತಿರಲಿಲ್ಲ. ಹನ್ನೆರಡು ರಿಂದ ಒಂದು ಗಂಟೆಯ ಒಳಗೆ ಊಟವನ್ನು ಮಾಡಿಕೊಂಡು ಮತ್ತೇ ತಮ್ಮ ಕೋಣೆಗೆ ಹೋಗುತ್ತಿದ್ದರೆಂದು ಎರಡು ತಾಸುಗಳ ಕಲಾ ಸೃಷ್ಟಿಯಲ್ಲಿ ತೊಡಗುವರು. ಏಳು ಗಂಟೆಯಿಂದ ಎಂಟು ಗಂಟೆಯವರೆಗೆ ಮಕ್ಕಳು ಮೊಮ್ಮಕ್ಕಳೊಂದಿಗೆ ಟಿ.ವಿ. ನೋಡುತ್ತಾ ಕಾಲ ಕಳೆಯುತ್ತಿವದು. ಟೆಲಿವಿಸನ್ ನಲ್ಲಿ ಇವರು Animal planet, national Geography, Discovery ಚಾನಲಗಳನ್ನು ಹೆಚ್ಚಾಗಿ ನೋಡುತ್ತಿದ್ದರು. ಸಾಯಂಕಾಲ ಎಂಟು ಗಂಟೆಯಾದರೆ ಊಟವನ್ನು ಮಾಡಿಕೊಂಡು ಸ್ವಲ್ಪೊತ್ತು ಅಡ್ಡಾಡಿ 9 ಗಂಟೆಗೆ ತಮ್ಮಕೋಣೆಗೆ ಹೋದರೆ ರಾತ್ರಿ ಹನ್ನೊಂದರಿಂದ ಹನ್ನೇರಡರವರೆಗೆ ಕಲಾಕೃತಿಗಳ ರಚನೆಯಲ್ಲಿ ಕಾಲಕಳೆಯುತ್ತಿದ್ದರು. ಇವರು ಇಂದಿಗೂ ರೇಖಾಚಿತ್ರಗಳನು ಚಿತ್ರಿಸುತ್ತಾರೆ. ಹೀಗೆ ಇದು ಖಂಡೇರಾವರ ಕಲಾಬದುಕಿನ ದೈನಂದಿನ ಕೆಲಸವಾಗಿದೆ.

ಕಲಾವಿದ ಖಂಡೇರಾವರದು ಸುಸಂ ಸ್ಕೃತ ಕುಟುಂಬ. ಇಂದು ಖಂಡೇರಾವರು ತಮ್ಮ ಪರಿವಾರದೊಂದಿಗೆ ಸುಂದರಮಯ, ಸಾಂಸ್ಕೃತಿಕ ಬದುಕನ್ನು ನಡೆಸುತ್ತಿದ್ದಾರೆ. ಇವರಿಗೆ ಒಬ್ಬ ಗಂಡು ಮಗ ಮತ್ತು ಇಬ್ಬರು ಹೆಣ್ಣುಮಕ್ಕಳಿದ್ದಾರೆ. ಸರಳ ನಿರಾಡಂಬರ ವ್ಯಕ್ತಿತ್ವದ ಇವರ ಶ್ರೀಮತಿಯವರಾದ ವೀರಮ್ಮನವರು ಕಲೆಯ ಬಗ್ಗೆ ಜ್ಞಾನವನ್ನು ಹೋಂದದೇ ಇದ್ದರು, ಕಲಾವಿದ ಪತಿಯ ಇಷ್ಟಾನಿಷ್ಟಗಳನ್ನು ಅರಿತು ಸಾಧನೆಯ ಹಾದಿಯಲ್ಲಿ ಸಹಕಾರಿಯಾಗಿ ನಿಂತು, ಕಲಾವಿದರ ಅಭ್ಯುದಯ ಕ್ಕೆ ಕಾರಣರಾಗಿದ್ದಾರೆ. ಇವರ ಹಿರಿಯ ಮಗ ಬಸವರಾಜ ಖಂಡೇರಾವರು ಇಂಜಿನೀಯರಿ ಂಗ್ ಪದವಿಧರ ಇವರು ಕಲಬುರ್ಗಿಯಲ್ಲಿ ಶರಣಕುಮಾರ ಪಾಟೀಲ ಮತ್ತು ಭರತಭೂಷಣ ಎಂಬ ಸ್ನೇಹಿತರೊಂದಿಗೆ ಕೂಡಿಕೊಂಡು " ಆಕೃತಿ ವಾಸ್ತುಶಿಲ್ಪ ಸಂಸ್ಥೆ" ಯನ್ನು ಹುಟ್ಟುಹಾಕಿ ಸುಮಾರು ಹನ್ನೆರಡು ವರ್ಷಗಳಿಂದ ಈ ಕೆಲಸವನ್ನು ನಿರ್ವಹಿಸುತ್ತಾ

ಬಂದಿದ್ದಾರೆ. ಇವರ ಕಾರ್ಯಕ್ಷೇತ್ರ ಹೆಚ್ಚಾಗಿ Research oriented type of works ಇವರು ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ,ವಿಜಯನಗರ ವಾಸ್ತುಶಿಲ್ಪ ಮಾದರಿಯಲ್ಲಿ ಕಾಯಕದ ಮನೆ, ಪ್ರಸಾರಂಗ ಇಂತಹ ಅನೇಕ ಸುಂದರವಾದ ಕಟ್ಟಡಗಳನ್ನು ನಿರ್ಮಿಸಿದವರಾಗಿದ್ದಾರೆ. ಮಗಳಾದ ಗಂಗಾಂಬಿಕೆ ಇವರು ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ವಿವಾಹವಾಗಿ ಇಂದು ಮುಂಬೈಯಲ್ಲಿ ನೆಲೆಸಿದ್ದಾರೆ. ಇವರ ಪತಿಯವರು ಮುಂಬೈಯಲ್ಲಿ ದೊಡ್ಡ ಸಂಸ್ಥೆಯೊಂದರಲ್ಲಿ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾರೆ. ಖಂಡೇರಾವರ ಕಿರಿಯ ಮಗಳಾದ ಬಸಮ್ಮ ಇವಳು ಇಂಜಿನೀಯರಿಂಗ್ ಪದವಿಧರೆ ಸಧ್ಯಕ್ಕೆ ಕಲಬುರ್ಗಿಯಲ್ಲಿ ಎಂ.ಟೆಕ್ ಕಂಪ್ಯೂಟರ ಸಾಯಿನ್ಸನಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. ಕುಟುಂಬದ ಸದಸ್ಯರೊಡನೆ ಸ್ನೇಹಮಯವಾಗಿ ಬೆರೆತು ಸರಳ ಜೀವನದಲ್ಲಿಯೇ ಸಂತೃಪ್ತಿಯನ್ನು ಕಂಡುಕೊಂಡಿರುವ ಖಂಡೇರಾವರದು ಆದರ್ಶ ಕುಟುಂಬ [5]

ಹೀಗೆ ಖಂಡೇರಾವರು ತಮ್ಮ ಬದುಕನ್ನೇ ಕಲೆಯನ್ನಾಗಿಸಿಕೊಂಡು ಇಂದಿಗೂ ನಿರಂತರವಾಗಿ ತಮ್ಮನ್ನು ಕಲಾಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇವರ ಸಾರ್ಥಕತೆಯ ಕಲಾ ಬದುಕನ್ನು ಕಂಡು ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ. ಪತ್ರಿಕೆಗಳು ಇವರನ್ನು ಕುರಿತುಕೊಂಡಾಡಿವೆ. ಹಲವಾರು ಜನ ಮಹನೀಯರು ಇವರ ಕಲಾಬದುಕನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ಹೀಗೆ ವ್ಯಕ್ತಪಡಿಸುತ್ತಾರೆ.

"ಖಂಡೇರಾವರು ಪ್ರಾತ್ಯಕ್ಷಿಕೆಗಳನ್ನು ಮಾಡುತ್ತಾ ಇರಬೇಕಾದರೆ ಕಿರಿಯ ಹಾಗೂ ಹಿರಿಯ ಕಲಾವಿದರು ಕಣ್ಣಲ್ಲಿ ಕಣ್ಣಿಟ್ಟು ಹಾಗೂ ಕಣ್ಣಲ್ಲಿ ಇಡೀ ವ್ಯಕ್ತಿತ್ವ ಇಟ್ಟು ನೋಡುವ ರೀತಿ ನನಗೆ ಕುತೂಹಲ ಹುಟ್ಟಿಸಿದೆ. ಶರಣರ ಬದುಕು-ವಿಚಾರಗಳ ಕುರಿತ ಹಲವು ವಚನಗಳನ್ನೇ ಬಣ್ಣವಾಗಿಸಿದ ಇವರ ಕಲಾಕೃತಿಗಳು ಜನಪ್ರೀಯ ಸರಳತೆ ಒಂದೇ ತಾನೇ ತಾನಾಗಿ ಬಂದ ಮೌಲ್ಯವಲ್ಲ . ಆದರೂ ಇವರಲ್ಲಿ ಅದೊಂದು ವಿಚಿತ್ರವಾಗಿ, ರಕ್ತಗತವಾಗಿ ಬಂದ ಮೌಲ್ಯವಾಗಿದೆ. ಉದ್ದನ್ನ ಜುಬ್ಬ, ದಾಡಿ ಜೀನ್ಸ್‌ಪ್ಯಾಂಟು ಅಥವಾ ಕ್ರಾಪು ಈ ಯಾವುದರಲ್ಲಿಯೂ ಕಲಾವಿದತನ ಮೆರೆದಂತಿಲ್ಲ. ಬಿಳಿಬುಷರ್ಟಿನ ಮೇಲೇರಿಸಿದ ತೋಳು, ಪ್ಯಾಂಟು ಇವರ ದಿರಿಸು ಬೂಟು ಇನ್‌ಶರ್ಟು ಅಥವಾ ಸಫಾರಿಯಲ್ಲಿ ಇವರನ್ನು ಕಮಡವರೇ ಇಲ್ಲ. ಕಾಲೇಜಿನಲ್ಲಿ ಒಂದು ಪ್ರಾಧ್ಯಾಪಕರ ಸಂಘ . ಇಲ್ಲಿ ದಿನಾಲು ಒಂದು ಸಲ ಚಹಾಕೂಡುವ ವ್ಯವಸ್ಥೆ ಸಂಘ ಮಾಡಿಕೊಂಡಿರುತ್ತದೆ. ಖಂಡೇರಾವರು ಎಂದೂ ಚಹ ಕುಡಿದವರಲ್ಲ. ಆದರೆ ಸಹಭಾಗಿತ್ವದ ತಿಂಗಳ ಹಣ ಕೊಡಲು ಎಂದೂ ತಪ್ಪಿಸಿದವರಲ್ಲ. ನಿರಂತರವಾಗಿ ತಮ್ಮ ವಿಭಾಗದಲ್ಲಿದ್ದು ತಮ್ಮ ಬಣ್ಣ-ಕುಂಚದ ಕರಾಮತ್ತು ವಿದ್ಯಾರ್ಥಿಗಳೊಡನೆ ಸೇರಿ ನಡೆಸುತ್ತಿದ್ದರು. ಇವರು ಶಿಷ್ಯರ ಬಳಗದ ನೆಚ್ಚಿನ ಗುರುಗಳು. ಎಂದು ಕಲಬುರ್ಗಿಯ ಖ್ಯಾತ ಹಿಂದಿ ಭಾಷೆಯ ಕವಿಗಳು , ಸಾಹಿತಿಗಳೂ ಆದಂತ ಡಾ. ಕಾಶಿನಾಥ ಅಂಬಲಗೆಯವರು ಖಂಡೇರಾವರನ್ನು ತಾವು ಹತ್ತಿರದಿಂದ ಕಂಡ ಪರಿಯನ್ನು ಹೀಗೆ ವಿವರಿಸುತ್ತಾರೆ [6] ಕಲಬುರ್ಗಿಯ ಹಿರಿಯ ಮಕ್ಕಳ ಸಾಹಿತಿಗಳು ಹಾಗು ರಾಜ್ಯೋತ್ಸವ ಪ್ರಶಸ್ತಿ ವಿಜೇತರಾದ ಎ.ಕೆ. ರಾಮೇಶ್ವರರವರು ತಮ್ಮ ಅಭಿಪ್ರಾಯವನ್ನು ಹೀಗೆ ಹಂಚಿಕೊಳ್ಳುತ್ತಾರೆ. "ಸನ್ಮಾನ್ಯ ಜಿ. ಎಸ್. ಖಂಡೇರಾವರು ಹುಟ್ಟು ಕಲಾವಿದರು. ತಮ್ಮ ಕಲೆಯ ಬೆಳವಣಿಗೆಯಲ್ಲಿ ಅವರು ಗೈದ ತಪಸ್ಸು ಅವರ್ಣಯ. ಸದ್ದು ಗದ್ದಲವಿಲ್ಲದ ಅವರ ಸಾಧನೆ ಇಂದು ದೇಶದುದ್ದಕ್ಕೂ ಹರಡಿ ನಿಂತಿದೆ. ಇದು ಹೈದ್ರಾಬಾದ ಕರ್ನಾಟಕದವರಾದ ನಮಗೆ ಹೆಮ್ಮೆಯ ವಿಷಯ. ಇವರು ತುಂಬಾ ಪ್ರಭಾವಿತ ವ್ಯಕ್ತಿಗಳು. ಇವರು ಕಲೆಯಲ್ಲಿಯೇ ಕೈಲಾಸವನ್ನು ಕಂಡಂತಹ ಓರ್ವ ಮಹಾನ ತಪಸ್ವಿ. ಸದ್ದು ಗದ್ದಲವಿಲ್ಲದ ಅವರ ಕಲಾಚಟುವಟಿಕೆಗಳು ಅಷ್ಟೇ ಸತ್ವಪೂರ್ಣವಾಗಿ ಕಂಗೊಳಿಸುತ್ತವೆ. ನಾನು ಕಳೆದ ನಾಲ್ಕು ದಶಕಗಳಿಂದಲೂ ಬಲ್ಲೆ. ಅವರು ತುಂಬಾ ಸರಳರು, ಸಜ್ಜನರು. ಯಾವುದಕ್ಕೂ ಶ್ರಮದ ತಪಸ್ಸಿನ ಪ್ರಭಾವವಿದ್ದರೇನೇ ಅದು ಸತ್ವಪೂರ್ಣವೆಂದು ಹೇಳುತ್ತಾ ಅದರಂತೆ ನಡೆದು ತೋರಿಸಿದ ಈ ಶತಮಾನ್ಯದ ಗಣ್ಯ ಕಲಾವಿದರು. ಎಲ್ಲದರಲ್ಲಿಯೂ ಅರ ತ್ಯಾಗ ನಿಷ್ಠೆ ಎದ್ದು ಕಾಣುತ್ತದೆ." ಖಂಡೇರಾವರು ನಮ್ಮ ಕಂಗಳಿಗೆ ಕಾಣಿಸದ ಮತ್ತು ಇಂದ್ರೀಯ ಅನುಭವಕ್ಕೆ ನಿಲುಕದ ಸತ್ಯವನ್ನು ಕಂಡು, ಅನುಭವಿಸಿ ತಮ್ಮ ಕುಂಚದಿಂದ ಚಿತ್ರ ಬಿಡಿಸಿ ಮೂರ್ತಗೊಳಿಸುತ್ತಿದ್ದರು. ಅವರು ಬಿಡಿಸಿದ ಚಿತ್ರಗ

---

5. ಕುಪ್ಪಣ್ಣ ಕಂದಗಲ್ : ಜೆ.ಎಸ್. ಖಂಡೇರಾವ, ಪುಟ 11

6. ಡಾ. ಕಾಶಿನಾಥ ಅಂಬಲಗೆಯವರೊಂದಿಗೆ ಸಂದರ್ಶನ : ದಿನಾಂಕ 30-01-2002, ಕಲಬುರ್ಗಿ





ಚಿತ್ರ 6.   ಕಲಾಪ್ರಾತ್ಯಕ್ಷಿಕೆಯನ್ನು ನೀಡುತ್ತಿರುವ ಖಂಡೇರಾವ.

ಳನ್ನು ಸಮದೃಷ್ಟಿಯಿಂದ ಅಲೋಕಿಸಿದಾಗ ಅವರೊಬ್ಬ ಕಲೆಯ ಆರಾಧಕ ಮತ್ತು ಸೃಜನಶೀಲ ಕಲಾವಿದರೆಂದು ಸ್ಪಷ್ಟವಾಗುತ್ತದೆ." Prof. J.S. Khanderao spent his career and entire life in service of Art and painting. He participated in several Art exhibitions, seminars and conferences.

I have spent many occassions with him. He believes painting as service to God. Painting must exhibit the true life situations of Society. Paintings not onlyfor the sake of painting, but also for the sake of social reform.

I was present in a painting competition for students in our college. Teachers were requested to demonstrate their skill. prof khanderao sketched a women's models within minites" ಎಂದು ಕಲಬುರ್ಗಿಯ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದ ನಿವೃತ್ತಸಮಾಜಶಾಸ್ತ್ರದ ಪ್ರಾಧ್ಯಾಪಕರಾದ ಅಂಬಾರಾಯ ಉಪಳಾಂವಕರ್‌ರವರು ಖಂಡೇರಾವರ ಕುಂಚದ ವಸ್ತುವನ್ನು ಕಂಡು ಹೀಗೆ ಬಣ್ಣಸುತ್ತಾರೆ. ಹೀಗೆ ಹಲವಾರು ಜನರು ಖಂಡೇರಾವರ ವ್ಯಕ್ತಿತ್ವದ ಬಗ್ಗೆ, ಕಲಾಬದುಕಿಗೆ ಸಂಬಂಧ ಪಟ್ಟಂತೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ಅಧ್ಯಾಯದಲ್ಲಿ ನಾವು ತಿಳಿದುಕೊಳ್ಳಬೇಕಾದುದು ಇಷ್ಟೆ. ಖಂಡೇರಾವರು ಆದರ್ಶಕಲಾ ಮಂದಿರ ವನ್ನು ಸ್ಥಾಪಿಸಿ ವೃತ್ತಿ ಜೀವನವನ್ನು ಆರಂಭಿಸಿದವರು. ಇವರು ಒಬ್ಬ ಕಲಾವಿದರಾಗುವದಕ್ಕಿಂತ ಕಲಾಶಿಕ್ಷಕರಾಗಬೇಕೆಂದು ಬಯಸಿದ್ದರು. ಇಂದು ಹಲವಾರು ಕಲಾ ವಿದ್ಯಾರ್ಥಿಗಳನ್ನು ಈ ನಾಡಿಗೆ ಪರಿಚಯಿಸಿದ್ದಾರೆ. ಅಲ್ಲದೇ ವಿದ್ಯಾರ್ಥಿಗಳಿಗೆ ಬೋಧನೆಯನ್ನು ಮಾಡುವ ಜೊತೆಗೆ ತಾವು ಕಲಾಕ್ರಿಯೆಯಲ್ಲಿ ತೊಡಗುತ್ತಿದ್ದರು. ಈ ಹಂತದಲ್ಲಿಯೇ ಅವರು ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡರು. ಹೀಗಾಗಿ ಖಂಡೇರಾವರು ತಮ್ಮ ಜೀವನದ ಪ್ರತಿಯೊಂದು ಹಂತದಲ್ಲಿ ಬೇರೆ ಬೇರೆಯಾದ ತಂತ್ರ ರಚನಾವಿಧಾನದಿಂದ ಕಲಾಕ್ರಿಯೆಯಲ್ಲಿ ತೊಡಗಿಸಿಕೊಂಡರಾದರೂ ಆದರೆ ಇಂದಿನ ನವ್ಯಕಲೆಯ ಗಾಳಿಗೆ ಸಿಕ್ಕಿ ಬಿದ್ದು ತಮ್ಮ ಅಕಾಡೆಮಿಕ ಕಲಾಶೈಲಿಯನ್ನು ಬಿಟ್ಟು ಶೈಲಿ ಬದ್ದತೆಗೆ ಮಾರು ಹೋಗಿ ಕಂಡುಕೊಳ್ಳಲು ಪ್ರಯತ್ನಿಸಿದರು. ಹೀಗಾಗಿ ಅವರು ಇಂದು ಒಂದೇ ಶೈಲಿಗೆ ಅಂಟಿಕೊಳ್ಳದ ಹಲವಾರು ರೀತಿಯ ರಚನಾತಂತ್ರದಿಂದ ಕಲಾಸೃಷ್ಟಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಇಂದಿಗೂ ಕೂಡ ತಮ್ಮ ಕಲಾಬದುಕನ್ನು ನಿರಂತರವಾಗಿ ಮುಂದುವರೆಸಿಕೊಂಡು ಬಂದವರಾಗಿದ್ದಾರೆ. ಒಟ್ಟಾರೆಯಾಗಿ ಈ ಅಧ್ಯಾಯದಿಂದ ನಾವು ಕಂಡುಕೊಳ್ಳಬಹುದಾದ ಅಂಶವೆನೆಂದರೆ ಖಂಡೇರಾವರು ಬ್ರಿಟೀಷ ಅಕಾಡೆಮಿಕ ಕಲಾಶಿಕ್ಷಣ ಪಡೆದರೂ ನಂತರ ಅಧುನಿಕ, ಸೃಜನಶೀಲ ಕಲಾಸೃಷ್ಟಿಗೆ ತೊಡಗಿ ಹೆಸರು ಮಾಡಿದವರು. ಅಮೂರ್ತ ಶೈಲಿಯಲ್ಲಿ ತಮ್ಮ ಛಾಪು ಮೂಡಿಸಿ ಶೈಲಿಬದ್ಧತೆಗೆ ಕಟ್ಟುಬಿದ್ದವರು. ಎಂಬುದು ತಿಳಿದು ಬರುತ್ತದೆ.

ಅಧ್ಯಾಯ ಐದು :

ಜೆ.ಎಸ್. ಖಂಡೇರಾವ : ಕಲಾಕೃತಿಗಳ ವಸ್ತು ವೈವಿಧ್ಯತೆ, ತಂತ್ರ ಮತ್ತು ಶೈಲಿ

ಖಂಡೇರಾವರ ಒಟ್ಟು ಕಲಾಕೃತಿಗಳನ್ನು ಕುರಿತು ನಾವು ಇಲ್ಲಿ ಅಧ್ಯಯನವನ್ನು ಮಾಡಲಾಗಿದೆ. ಅವುಗಳನ್ನು ಇಲ್ಲಿ ಮೂರು ಭಾಗಗಳಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ.

1) ಅಧ್ಯಯನ ಕಾಲದಲ್ಲಿಯ ಕಲಾಕೃತಿಗಳು
2) ಅಧ್ಯಾಪಕ ವೃತ್ತಿಯಲ್ಲಿಯ ಕಲಾಕೃತಿಗಳು
3) ನಿವೃತ್ತಿಯ ನಂತರದಲ್ಲಿಯ ಕಲಾಕೃತಿಗಳು

1. ಅಧ್ಯಯನ ಕಾಲದಲ್ಲಿಯ ಕಲಾಕೃತಿಗಳು :

ಖಂಡೇರಾವರು ಶಿಕ್ಷಣದ ಪ್ರಾರಂಭದಲ್ಲಿ ಇತಿಹಾಸಕ್ಕೆ ಸಂಬಂಧಪಟ್ಟಂತೆ ಅವುಗಳಲ್ಲಿರುವ ನಕ್ಷೆಗಳನ್ನು ಚಿತ್ರಿಸುವದರಿಂದ ಪ್ರಾರಂಭಗೊಂಡಿದ್ದು ನಾವು ಕಾಣಬಹುದಾಗಿದೆ. ಇಲ್ಲಿ ಇವರು ರೇಖಾಗಣಿತದಲ್ಲಿ ಬರುವ ಕೋನಗಳು, ತ್ರಿಕೋನ, ತ್ರಿಭುಜ, ಆಯತಾಕಾರ ಹೀಗೆ ಹಲವು ವಿನ್ಯಾಸಗಳನ್ನು ರಚಿಸುವುದರಲ್ಲಿ ಆಸಕ್ತಿಯನ್ನು ಹೊಂದಿದವರಾಗಿದ್ದರು. ಇವರು ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿರುವಾಗ ಹೆಚ್ಚಾಗಿ Design, Geometry, ಮತ್ತು Graph ವಿಷಯಗಳ ಬಗ್ಗೆ ಹೆಚ್ಚಾಗಿ ಚಿತ್ರಿಸುತ್ತಿದ್ದರು. ನಂತರದಲ್ಲಿ ಹೆಚ್ಚು ಹೆಚ್ಚು ವರ್ಕಗಳನ್ನು ಮಾಡುತ್ತಾ ಹೊದಂತೆಲ್ಲಾ ಹೆಚ್ಚಿನ ವಿಷಯಗಳನ್ನು ತಿಳಿದುಕೊಂಡರು. ಸಿನೇಮಾ ಪೊಸ್ಟರಗಳನ್ನು ತಂದು ಅವುಗಳನ್ನು ನೋಡಿ ಚಿತ್ರವನ್ನು ಬಿಡಿಸುವದು. ಕ್ಯಾಲೆಂಡರನಲ್ಲಿ ಮೂಡಿಬಂದಿರುವ ದೇವ-ದೇವತೆಯರ ಚಿತ್ರಗಳನ್ನು ಅವುಗಳಂತೆಯೇ ಚಿತ್ರಿಸುವುದು ಮಾಡುತ್ತಿದ್ದರು. ಇವರು ಮಾಧ್ಯಮಿಕ ಶಾಲೆಯಲ್ಲಿ ಅಭ್ಯಾಸ ಮಾಡುವಾಗ ರಾತ್ರಿಯ ವೇಳೆಯಲ್ಲಿಯೂ ಕೂಡ ಸ್ನೇಹಿತರೊಂದಿಗೆ ಶಾಲೆಗೆ ಹೋಗಿ ಡ್ರಾಯಿಂಗಳನ್ನು ಮಾಡುವುದರಲ್ಲಿ ಕೂಡಿದ್ದವು. ಖಂಡೇರಾವರು ರಾತ್ರಿಯ ವೇಳೆಯಲ್ಲಿ ದಿನಾಲು ಒಂದು ಬಾರಿಯಾದರೂ ಅಲ್ಲಿಗೆ ಹೋಗಿ ಆ ಗೊಡೆಗಳ ಮೇಲೆ ಇರುವ ಸುಂದರವಾದ ಚಿತ್ರಗಳನ್ನು ನೋಡಿಕೊಂಡು ತಾವಿರುವ ಶಾಲೆಯ ಕೋಣೆಗೆ ಬಂದು ಅವುಗಳಂತೆಯೇ ಚಿತ್ರಿಸಲು ಪ್ರಯತ್ನಿಸುತ್ತಿದ್ದರು.

ಹೀಗೆ ಇವರು ಮಾಧ್ಯಮಿಕ ಶಿಕ್ಷಣದ ಹಂತದಲ್ಲಿ ನಕ್ಷೆಗಳನ್ನು ಚಿತ್ರಿಸುವದು, ಅದರಲ್ಲಿ ಜಿಲ್ಲೆಗಳ, ರಾಜ್ಯಗಳ, ದೇಶ -ವಿದೇಶಗಳನ್ನು ಗುರುತಿಸುವುದು. ಹೀಗೆ ಹತ್ತು ಹಲವು ರೀತಿಯ ಚಿತ್ರಗಳನ್ನು ಚಿತ್ರಿಸುತ್ತಿದ್ದರು. ಮುಂದೆ ಹೈಸ್ಕೂಲ್ ಶಿಕ್ಷಣದಲ್ಲಿ ಇವರ ಕಲಾವಿಷಯಗಳು ಬೇರೆಯಾಗಿದ್ದವು. ಈ ಹಂತದಲ್ಲಿ ಇವರಿಗೆ ಮಹ್ಮದ್ ಶರೀಫ್ ಎಂಬ ಡ್ರಾಯಿಂಗ್ ಟೀಚರರು ಖಂಡೇರಾವರಿಗೆ ಹೆಚ್ಚು ಪ್ರೇರಣೆಯನ್ನು ನೀಡಿದವರಲ್ಲಿ ಒಬ್ಬರು. ಇವರು ಖಂಡೇರಾವರಲ್ಲಿರುವ ಕಲಾ ಉತ್ಸಾಹವನ್ನು ಕಂಡು ಅವರಿಗೆ ಪ್ರೋತ್ಸಾಹಿಸಿದರು. ಈ ವೇಳೆಯಲ್ಲಿ ಖಂಡೇರಾವರು ಆಗ ಕಲಬುರ್ಗಿಯಲ್ಲಿರುವ ಹಿರಿಯ ಕಲಾವಿದರ ಕಲಾಕೃತಿಗಳನ್ನು ಅನುಕರಣೆ ಮಾಡುತ್ತಿದ್ದರು. ಇದಲ್ಲದೇ ನಾಟಕ ನೋಡುವ ಹವ್ಯಾಸವಿಲ್ಲದಿದ್ದರೂ ಚಿತ್ರಕಲೆಯ ದೃಷ್ಟಿಯಿಂದ ಆಗಾಗ ನಾಟಕಗಳನ್ನು ನೊಡಲು ಹೋಗುತ್ತಿದ್ದರು. ನಾಟಕವನ್ನು ನೋಡಿ ಅದರಲ್ಲಿ ಬರುವ ಪ್ರಮುಖ ಪಾತ್ರಧಾರಿಗಳು, ಸುಂದರ ವಿನ್ಯಾಸಗಳುಳ್ಳ ಪರದೆಗಳು ಈ ಎಲ್ಲ ವಿಷಯಗಳನ್ನು ಮನೆಗೆ ಬಂದ ಮೇಲೆ ಅವುಗಳಂತೆಯೇ ಚಿತ್ರಿಸುತ್ತಿದ್ದರು. ಗುರುಗಳಾದ ಮಹ್ಮದ ಷರೀಫರು ಇವರಿಗೆ ದಿನಾಲು ಸ್ಕೆಚ್ ಗಳನ್ನು ಮಾಡುವಂತೆ ಹೇಳುತ್ತಿದ್ದರು. ಇದರಿಂದ ಇವರು ದಿನಾಲು ಕಲಬುರ್ಗಿಯ ಹತ್ತಿರವಿರುವ ಫಿಲ್ಟರ್ ಬೆಡ್ ಬಳಿ ಇರುವ ಗುಡಿಸಲುಗಳು, ದಾರಿಯಲ್ಲಿ ಹೋಗುವಾಗ ಕಾಣುವ ದನಕರುಗಳ ಸ್ಕೆಚ್ ಗಳನ್ನು ಮಾಡುತ್ತಿದ್ದರು. ಈ ಹಂತದಲ್ಲಿ ಇವರು ಲೋಯರ್‌ಗ್ರೇಡ್ ಮತ್ತು ಹೈಯರ್ ಗ್ರೇಡ್ ಪರೀಕ್ಷೆಗಳು ಕಟ್ಟಿದ್ದರಿಂದ ಅವುಗಳಲ್ಲಿ ಬರುವ ವಿಷಯಗಳ ಬಗ್ಗೆ ಅಂದರೆ Drawing,Geometry, Nature Freehand, Design, Memory ಈ ವಿಷಯಗಳನ್ನು ಕುರಿತು ಚಿತ್ರಿಸುತ್ತಿದ್ದರು. ಈ ವಿಷಯಗಳ ಬಗ್ಗೆ ಹೆಚ್ಚಿನ ಅಭ್ಯಾಸದ ದೃಷ್ಟಿಯಿಂದ ವೃತ್ತಪತ್ರಿಕೆಗಳನ್ನು ಮಾಸ ಪತ್ರಿಕೆಗಳನ್ನು , ಸಿನೇಮಾ ಸಂಚಿಕೆಗಳನ್ನು ನೋಡಿ ಅವುಗಳಲ್ಲಿ ಬರುವ ಚಿತ್ರಗಳನ್ನು ಅಭ್ಯಾಸ ಮಾಡುತ್ತಿದ್ದರು. ನೇಚರ ವಿಷಯಕ್ಕೆ ಸಂಬಂಧಪಟ್ಟಂತೆ ಗಿಡದ ಟೊಂಗೆ ಹೂಬಳ್ಳಿಯನ್ನು ತಂದು ಎದುರಿಗಿಟ್ಟುಕೊಂಡು ಅದರಂತೆಯೇ ಚಿತ್ರಿಸುತ್ತಿದ್ದರು. ಕೆಲವು ಬರಿ ಡ್ರಾಯಿಂಗ್‌ನಿಂದ ರಚಿಸುತ್ತಿದ್ದರೆ ಇನ್ನು ಕೆಲವು ಚಿತ್ರಗಳಾದ ಹೂ ಬಳ್ಳಿ ಚಿತ್ರಗಳನ್ನು ಜಲವರ್ಣದಿಂದ ಚಿತ್ರಿಸುತ್ತಿದ್ದರು. Freehand ವಿಷಯವನ್ನು ಚಿತ್ರಿಸುವಾಗ ಗುರುಗಳು ಒಂದು ಸುಂದರವಾದ ಚಿತ್ರವನ್ನು ಅರ್ಧವಾಗಿ ಬರೆದು ಕೊಡುತ್ತಿದ್ದರು ಅದರಂತೆಯೇ ಇನ್ನು ಅರ್ಧಭಾಗವನ್ನು ಚಿತ್ರಿಸುವಂತೆ ಹೇಳುತ್ತಿದ್ದರು. ಇದಲ್ಲದೆ ಇಂಥ ಇನ್ನೂ ಅನೇಕ ರೀತಿಯಲ್ಲಿ ಇವರು ಚಿತ್ರಗಳನ್ನು ಚಿತ್ರಿಸಿದ್ದು ಕಂಡುಬರುತ್ತದೆ. ಹೀಗೆ ಖಂಡೇರಾವರು ತಮ್ಮ ಹೈಸ್ಕೂಲ್ ಶಿಕ್ಷಣವನ್ನು ಕಲಬುರ್ಗಿಯಲ್ಲಿಯೇ ಮುಗಿಸಿದರು. ಮುಂದೆ ಉನ್ನತ ಕಲಾಶಿಕ್ಷಣಕ್ಕಾಗಿ ಮುಂಬೈಗೆ ತೆರಳಿದರು.

ಮುಂಬೈನ ಸರ್.ಜೆ.ಜೆ. ಕಲಾಶಾಲೆಯಲ್ಲಿ ಇವರು ಹೆಚ್ಚಾಗಿ ಪಠ್ಯಕ್ರಮವನ್ನೇ ಆಧರಿಸಿ ಚಿತ್ರಗಳನ್ನು ಚಿತ್ರಿಸಿದರು. ಜೆ.ಜೆ.ಕಲಾಶಾಲೆಯಲ್ಲಿ ಇವರಿಗೆ ಕ್ಲಾಸಿನಲ್ಲಿ Angular parspective Anatorny, composition, portrait & life painting ಈ ಎಲ್ಲಾ ವಿಷಯಗಳನ್ನು ಹೇಳಿಕೊಡುತ್ತಿದ್ದರು. ಇವೆಲ್ಲವುದರ ಜೊತೆಗೆ ದಿನಾಲು ಸ್ಕೆಚ್ ಗಳನ್ನು ಮಾಡುವದು ಹೇಳಿಕೊಡುತ್ತಿದ್ದರು. ದಿನಾಲು 20 ರಿಂದ 30 ಸ್ಕೆಚ್ ಗಳನ್ನು ಮಾಡಿಕೊಂಡು ಬಂದರೆ ಮಾತ್ರ ಅಂಥವರಿಗೆ ಕ್ಲಾಸಿನಲ್ಲಿ ಕುಳಿತುಕೊಳ್ಳುವ ಅವಕಾಶವಿರುತ್ತಿತ್ತು. ಒಂದು ವೇಳೆ ಸ್ಕೆಚ್ ಗಳನ್ನು ಮಾಡಿಕೊಂಡು ಬರಲ್ಲಿವೆಂದರೆ ಅಂಥವರಿಗೆ ಕ್ಲಾಸಿನಲ್ಲಿ ಕುಳಿತುಕೊಳ್ಳುವ ಅವಕಾಶವಿರುತ್ತಿರಲಿಲ್ಲ. ಮತ್ತು ಅಂದಿನ ಹಾಜರಾತಿಯಲ್ಲಿ ಪರಿಗಣಿಸುತ್ತಿರಲಿಲ್ಲ. ಒಂದು ವೇಳೆ ಹಾಜರಾತಿಯಲ್ಲಿ ಕಡಿಮೆಯೆನಿಸಿದರೆ ಮುಂದೆ ಪರೀಕ್ಷೆಯಲ್ಲಿ ಕುಳಿತುಕೊಳ್ಳುವ ಅವಕಾಶ ಕೊಡುತ್ತಿರಲಿಲ್ಲ. ಇಂಥ ಒಂದು ಪರಿಸ್ಥಿತಿಯಲ್ಲಿ ಖಂಡೇರಾವರು ದಿನಾಲು ಸ್ಕೆಚ್ ಗಳನ್ನು ಮಾಡವದು ರೂಢಿಯಾಗಿಸಿಕೊಂಡಿದ್ದರು.

ಜೆ. ಜೆ. ಕಲಾಶಾಲೆಯಲ್ಲಿ ಅನಾಟಮಿಯ ಬಗ್ಗೆ ಹೆಚ್ಚು ಅಭ್ಯಾಸವನ್ನು ಮಾಡುತ್ತಿದ್ದರು. ಅದಕ್ಕಾಗಿಯೇ ವಿದ್ಯಾರ್ಥಿಗಳಿಗೆ ದಿನಾಲು ಸ್ಕೆಚ್ ಗಳನ್ನು ಮಾಡಿಕೊಂಡು ಬರಲು ಹೇಳುತ್ತಿದ್ದರು. ದಿನಾಲು ಸ್ಕೆಚ್ ಗಳನ್ನು ಮಾಡಿದರೆ ಕೈಯಲ್ಲಿ ಸರಳತೆಯನ್ನು ಕಂಡುಕೊಳ್ಳಬಹುದು, ಹಿಡಿತವನ್ನು ಸಿಗುತ್ತದೆ. ಎಂಬ ಉದ್ದೇಶದಿಂದ ಸ್ಕೆಚ್ ಗಳನ್ನು ಮಾಡಲು ಹೇಳುತ್ತಿದ್ದರು. ಅಲ್ಲಿ ಸತ್ತಿರುವ ಮನುಷ್ಯರ ದೇಹಗಳನ್ನು ಕೊಯ್ದು, ದೇಹದಲ್ಲಿರುವ ಅಂಗಾಂಗಳ ಬಗ್ಗೆ ಒಂದೊಂದಾಗಿ ಅಭ್ಯಾಸವನ್ನು ಮಾಡಿಸುತ್ತಿದ್ದರು. ಇಂಥ ಒಂದು ವ್ಯವಸ್ಥೆ ಜೆ.ಜೆ. ಕಲಾಶಾಲೆಯಲ್ಲಿತ್ತು. ಮತ್ತು ಇದರಿಂದಲೇ ನಾವು ತಿಳಿದುಕೊಳ್ಳಬಹುದು ಅಲ್ಲಿ Anatomy ಯ ಬಗ್ಗೆ ಎಷ್ಟು ಮಹತ್ವ ಕೊಡುತ್ತಾರೆ ಎಂಬುದನ್ನು ಇದು ಇನ್ನೊಂದು

[illegible]

ಉದ್ದೇಶವೂ ಇತ್ತು. ಪುಸ್ತಕದಲ್ಲಿರುವ Anatomy ಯ ಚಿತ್ರವನ್ನು ನೋಡಿ ಚಿತ್ರಗಳನ್ನು ಬಿಡಿಸಿದರೆ ಎಲ್ಲ ಭಾಗಗಳ ಬಗ್ಗೆ ಅಭ್ಯಾಸ ಮಾಡಿದಂತಾಗುವುದಿಲ್ಲ. ಪ್ರಾಯೋಗಿಕವಾಗಿ ನಾವು ಭಾಗಗಳ ಬಗ್ಗೆ ಅಭ್ಯಾಸವನ್ನು ಮಾಡಬೇಕಾದರೆ ಅದುಅಭ್ಯಾಸದ ದೃಷ್ಟಿಯಿಂದ ಒಳ್ಳೆಯದು ಮತ್ತು ಎಲ್ಲ ವಿಷಯಗಳನ್ನು ತಿಳಿದುಕೊಂಡತ್ತಾಗುತ್ತದೆ. Anatomy ಯ ಬಗ್ಗೆ ಇಷ್ಟೊಂದು ಮಹತ್ವ ಯಾಕೆ ಕೊಡುತ್ತಾರೆಂದರೆ, ಯಾವುದೇ ವ್ಯಕ್ತಿಯ ಚಿತ್ರವನ್ನು ಬಿಡಿಸಿದರೆ ಆ ವ್ಯಕ್ತಿಯ ಹಾವ-ಭಾವವು ಆ ಚಿತ್ರದಲ್ಲಿ ಮೂಡಿಬರಬೇಕು. ಒಟ್ಟಿನಲ್ಲಿ ಜೀವಕಳೆಯನ್ನು ಆ ಚಿತ್ರವು ಹೊಂದಿರಬೇಕು. ಇಲ್ಲದಿದ್ದರೆ ಅದು ಕಲಾಕೃತಿಯನಿಸಿಕೊಳ್ಳದು. ಈ ದೃಷ್ಟಿಯಿಂದ Anatomy ಯ ಬಗ್ಗೆ ಇಲ್ಲಿ ಹೆಚ್ಚು ಗಮನಹರಿಸುವುದುಂಟು. ಇದೊಂದೇ ಅಲ್ಲ ಇಲ್ಲಿ ಯಾವುದೇ ವಿಷಯವಿರಲಿ, ಎಲ್ಲ ವಿಷಯಗಳಿಗೂ ಇಲ್ಲಿ ಇದೇ ರೀತಿಯ ಶಿಸ್ತಿನಕ್ರಮ Model ನ್ನುಎದುರಿಗೆ ಕುಳ್ಳಿರಿಸಿಕೊಂಡು ಪೆನ್ಸಿಲ್ ನಿಂದ ಸ್ಕೆಚ್ ಗಳನ್ನು ಮಾಡುವುದು. ಕೆಲವು ವಸ್ತುಗಳನ್ನು ಎದುರಿಗೆ ಇರಿಸಿಕೊಂಡು Still life ಚಿತ್ರಗಳನ್ನು ಮಾಡುವದು. ಇವುಗಳಲ್ಲಿ ಮೊದಲು ಡ್ರಾಯಿಂಗ್ ಮಾಡಿಕೊಂಡು ನಂತರದಲ್ಲಿ ಬಣ್ಣದಿಂದ ಅದನ್ನು ಚಿತ್ರಿಸುತ್ತಿದ್ದರು. ದಿನಾಲು ಸ್ಕೆಚ್ ಗಳನ್ನು ಮಾಡಿಕೊಂಡು ಬರುತ್ತಿದ್ದ ಸ್ಕೆಚ್ ಗಳಲ್ಲೇ ಉತ್ತಮವಾದ ಕೆಲವು ಸ್ಕೆಚ್ ಗಳನ್ನು ಆರಿಸಿಕೊಂಡು ಅವುಗಳನ್ನೇ ಸಂಯೋಜನ ಚಿತ್ರಗಳಿಗೆ ಬಳಸಿಕೊಳ್ಳುತ್ತಿದ್ದರು. ಸಂಯೋಜನ ಚಿತ್ರಗಳನ್ನು ಮಾಡುವಾಗ ಮೊದಲು ಐದಾರು ಬಾರಿ ರೇಖಾಚಿತ್ರಗಳನ್ನು ಮಾಡಿ ನಂತರ ಗುರುಗಳಿಗೆ ತೋರಿಸಬೇಕು. ಅವರು ಅದು ಸರಿಯೆಂದು ಸೂಚಿದರೆ ಮಾತ್ರ ಮುಂದೆ ಬಣ್ಣದಿಂದ ಚಿತ್ರಿಸಲು ಹೇಳುತ್ತಿದ್ದರು. ಭಾವಚಿತ್ರಗಳನ್ನು ಬಿಡಿಸುವಾಗಲೂ ಕೂಡ ಕುಳಿತಿರುವ ವ್ಯಕ್ತಿಯನ್ನು ವಿಧ-ವಿಧವಾದ ಭಂಗಿಗಳಲ್ಲಿ ಕೂಡಿಸಿ ಅವರ ಭಾವಚಿತ್ರಗಳನ್ನು ಮಾಡುತ್ತಿದ್ದರು.

ಕಲಾ ಶಿಕ್ಷಣದ ಪ್ರಾರಂಭದ ಹಂತದಲ್ಲಿ ಪೆನ್ಸಿಲ್ ನಿಂದ ಚಿತ್ರಿಸುತ್ತಿದ್ದರು. ಒಂದೆರಡು ವರ್ಷಗಳು ಕಳೆದನಂತರ ಬಣ್ಣದಿಂದ ಭಾವಚಿತ್ರಗಳನ್ನು ಬಿಡಿಸಲು ಹೇಳಿಕೊಡುತ್ತಿದ್ದರು. ಇದಲ್ಲದೆ ಜೆ.ಜೆ. ಕಲಾಶಾಲೆಯಲ್ಲಿ ಆಗ ಸ್ತ್ರೀಯರನ್ನು ಕರೆಸಿ ಅವರನ್ನು ನಗ್ನ ರೂಪದಲ್ಲಿ ಕೂಡಿಸಿ ವಿವಿಧ ಭಂಗಿಗಳಲ್ಲಿ ಅವುಗಳ ಡ್ರಾಯಿಂಗಗಳನ್ನು ಅಬ್ಯಾಸದ ದೃಷ್ಟಿಯಿಂದ ವಿಧ್ಯಾರ್ಥಿಗಳಿಗೆ ಹೇಳಿ ಕೊಡುತ್ತಿದ್ದರು. ಎಲ್ಲದಕ್ಕೂ ಹೆಚ್ಚಾಗಿ ಹೇಳಬೇಕಾದರೆ ಇವರು ಭಾವ ಪ್ರಾಧನ್ಯಕ್ಕೆ ಹೆಚ್ಚು ಮಹತ್ವವನ್ನು ಕೊಡುತ್ತಿದ್ದರು. ಖಂಡೇರಾವರು ಅಧ್ಯಯನದ ಕಾಲದಲ್ಲಿ ಹೆಚ್ಚಾಗಿ ಪೆನ್ಸಿಲ್, ಚಾರ್ಕೊಲ್ ಮತ್ತು ಇಂಕಗಳ ಸಹಾಯದಿಂದ ಡ್ರಾಯಿಂಗ್ ಗಳನ್ನು ಮಾಡಿದ್ದು ಕಂಡುಬರುತ್ತದೆ. ಬಣ್ಣದಿಂದ ಕಲಾಕೃತಿಗಳನ್ನು ರಚಿಸಿದ್ದು ಬಹಳ ಕಡಿಮೆ. ಒಂದು ವೇಳೆ ಬಣ್ಣದಲ್ಲಿ ಚಿತ್ರಗಳನ್ನು ರಚಿಸಿದ್ದರೆ ಅದು ಜಲವರ್ಣದಲ್ಲಿ ಬಿಡಿಸಿದ್ದು ಕಂಡುಬರುತ್ತದೆ. ಇವರು ನಿಸರ್ಗಚಿತ್ರಗಳನ್ನು ಜಲವರ್ಣದಲ್ಲಿ ಚಿತ್ತಿಸುತ್ತಿದ್ದರು. ಹೀಗೆ ಖಂಡೇರಾವರು ತಮ್ಮ ಅಧ್ಯಯನದ ಕಾಲದಲ್ಲಿ ಈ ಎಲ್ಲ ವಿಷಯಗಳ ಬಗ್ಗೆ ಚಿತ್ರಗಳನ್ನು ರಚಿಸಿದ್ದು ನಾವು ಕಾಣಬಹುದಾಗಿದೆ. ಆದರೆ ಈ ಎಲ್ಲವನ್ನು ನಾವು ಗಮನಿಸಿದಾಗ ಪಠ್ಯಕ್ರಮ ವನ್ನು ಆಧರಿಸಿ ಚಿತ್ರಿಸಿದ್ದು ಬಿಟ್ಟರೆ ಹೆಚ್ಚಾಗಿ ನಿಸರ್ಗ ಚಿತ್ರಗಳನ್ನು ರಚಿಸಿದ್ದು ಕಂಡು ಬರುತ್ತದೆ. ನಿಸರ್ಗಚಿತ್ರಗಳನ್ನು ರಚಿಸುವುದು ಅವರು ತಮ್ಮ ದೈನಂದಿನ ಕೆಲಸದಂತೆ ರೂಢಿಸಿಕೊಂಡಿದ್ದರು. ಹೀಗೆ ಖಂಡೇರಾವರು ಅಧ್ಯಯನ ಕಾಲದಲ್ಲಿ ರೇಖಾಚಿತ್ರಗಳು ಮತ್ತು ನಿಸರ್ಗಚಿತ್ರಗಳನ್ನು ಜಾಸ್ತಿಯಾಗಿ ಚಿತ್ರಿಸಿದ್ದು ಕಂಡುಬರುತ್ತದೆ.

ವಸ್ತು ವೈವಿಧ್ಯತೆ :

ಯಾವುದೇ ಕಲಾಕೃತಿಯನ್ನು ರಚಿಸಬೇಕಾದರೆ ಚಿತ್ರಿಸುವ ಕಲಾಕೃತಿಯ ವಸ್ತುವಿನ ಆಯ್ಕೆಯೂ ಅಷ್ಟೆ ಮಹತ್ವದ್ದಾಗಿದೆ. ಖಂಡೇರಾವರು ಚಿತ್ರಿಸಿದ ಕಲಾಕೃತಿಗಳಲ್ಲಿ ಎರಡು ಬಗೆಯ ಕಲಾಕೃತಿಗಳನ್ನು ನಾವು ಗಮನಿಸಬಹುದಾಗಿದೆ.

1. ರೇಖಾಚಿತ್ರಗಳು
2. ವರ್ಣಚಿತ್ರಗಳು

ಈ ಎರಡೂ ಮಾಧ್ಯಮಗಳಲ್ಲಿ ರಚಿತಗೊಂಡಿರುವ ಕಲಾಕೃತಿಗಳ ವಸ್ತು ವೈವಿಧ್ಯತೆಯನ್ನು ಇಲ್ಲಿ ವಿವರಿಸಲಾಗಿದೆ.

ಖಂಡೇರಾವರು ಇಲ್ಲಿಯವರೆಗೆ ರಚಿಸಿರುವ ಕಲಾಕೃತಿಗಳನ್ನು ನಾವು ನೋಡಿದಾಗ ಅವುಗಳ ವಸ್ತು ವಿಷಯಗಳು ಹಂತ ಹಂತವಾಗಿ ಬದಲಾವಣೆಯನ್ನು ಹೊಂದುತ್ತಾ ಬಂದಿರುವುದು ತಿಳಿದು ಬರುತ್ತದೆ. ಇವರ ಅಧ್ಯಯನ ಕಾಲದಲ್ಲಿ ರಚಿತವಾಗಿರುವ ಕಲಾಕೃತಿಗಳ ವಸ್ತುವಿಷಯಗಳೇ ಬೇರೆ, ಅಧ್ಯಾಪಕ ವೃತ್ತಿಯಲ್ಲಿ ನಿರ್ಮಾಣಗೊಂಡಿರುವ ಕಲಾಕೃತಿಗಳ ವಸ್ತುವಿಷಯಗಳು ಮತ್ತು ಸದ್ಯದ ನಿವೃತ್ತಿಯ ನಂತರದ ಸಂದರ್ಭದಲ್ಲಿ ನಿರ್ಮಾಣಗೊಳ್ಳುತ್ತಿರುವ ಕಲಾಕೃತಿಗಳ ವಸ್ತುವಿಷಯಗಳು ಬೇರೆ ಬೇರೆಯಾಗಿ, ಆಯಾ ಹಂತಕ್ಕೆ ಸಂಬಂದ ಪಟ್ಟಂತೆ ರಚಿತಗೊಂಡಿರುವುದನ್ನು ನಾವು ಗಮನಿಸಬಹುದಾಗಿದೆ.

ಖಂಡೇರಾವರು ಅಧ್ಯಯನ ಕಾಲದಲ್ಲಿ ಪ್ರಾರಂಭದಲ್ಲಿ ಹೆಚ್ಚಾಗಿ ರೇಖಾಚಿತ್ರಗಳನ್ನು ಪೆನ್ಸಿಲ್, ಇಂಕ ಮತ್ತು ಚಾರ್ಕೋಲ ಮಾಧ್ಯಮದಿಂದ ಚಿತ್ರಿಸಿದ್ದಾರೆ. ಅವುಗಳ ವಸ್ತು ವಿಷಯವನ್ನು ಹೀಗೆ ಹೆಸರಿಸಬಹುದು. ಇವರು ಪ್ರಾಥಮಿಕ ಹಂತದ ಶಿಕ್ಷಣವನ್ನು ಪಡೆಯುವಾಗ ರಾತ್ರಿಯ ವೇಳೆಯಲ್ಲಿಯೂ ಶಾಲೆಗೆ ಹೋಗಿ ಚಿತ್ರಗಳನ್ನು ಬಿಡಿಸುತ್ತಿದ್ದರು. ಹೀಗಿರುವಾಗ ಮಧ್ಯದಲ್ಲಿ ಬೇಜಾರಾದರೆ ಪಕ್ಕದಲ್ಲಿರುವ ಹೊಟೆಲೊಂದಕ್ಕೆ ಹೊಗುತ್ತಿದ್ದರು. ಆಹೊಟೆಲಿನ ಗೋಡೆಗಳ ಮೇಲೆ ಸುಂದರವಾದ ಆಲಂಕಾರಿಕ ಚಿತ್ರಗಳನ್ನು ಕಂಡು ಅದರಂತೆಯೇ ಚಿತ್ರಿಸಲು ಪ್ರಯತ್ನಿಸುತ್ತಿದ್ದರು. ಇದಲ್ಲದೆ ಇತಿಹಾಸಕ್ಕೆ ಸಂಬಂಧಪಟ್ಟಂತೆ ನಕ್ಷೆಗಳನ್ನು ಬಿಡಿಸಿ, ಅದರಲ್ಲಿ ಭಾಗಗಳನ್ನು ತೋರಿಸುವದು. ಹೀಗೆ ಇವರು ನಕ್ಷೆಗಳನ್ನು , ಸುಂದರವಾದ ಅಲಂಕಾರಿಕ ಚಿತ್ರಗಳನ್ನು ತಮ್ಮ ವಸ್ತು ವಿಷಯಗಳನ್ನಾಗಿಸಿಕೊಂಡಿದ್ದರು. ಮುಂದೆ ಹೈಸ್ಕೂಲಿಗೆ ಬಂದಾಗ ಅಲ್ಲಿ ಗ್ರೇಡ ಪರೀಕ್ಷೆಗಳನ್ನು ಕಟ್ಟಿದ್ದರಿಂದ ಬೇರೆ ಬೇರೆ ವಿಷಯಗಳ ಬಗ್ಗೆ ಚಿತ್ರಗಳನ್ನು ಬಿಡಿಸುವದು ಇರುವುದರಿಂದ , ನೇಚರ ವಿಷಯ ಕ್ಕೆ ಸಂಬಂದ ಪಟ್ಟಂತೆ ಹೂ-ಬಳ್ಳಿ , ಎಲೆಗಳನ್ನು ವಸ್ತು ವಿಷಯಗಳನ್ನಾಗಿಸಿಕೊಂಡಿದ್ದರು. Geometry ವಿಷಯ ಬಂದಾ ಗ ಲಂಬರೇಖೆ, ತ್ರಿಕೋನ ಆಯತಾಕಾರ, ತ್ರಿಭುಜ ಇವುಗಳನ್ನು ವಸ್ತು ವಿಷಯಗಳನ್ನಾಗಿಸಿಕೊಂಡಿದ್ದರು. ಸ್ಥಿರ ಚಿತ್ರಣಕ್ಕೆ ಸಂಬಂಧ ಪಟ್ಟಂತೆ ಒಂದು ದೊಡ್ಡ ಕಟ್ಟಿಗೆಯ ಹಲಗೆ ಅಥವಾ ಮಣಿ ಅದರ ಮೇಲೆ ಬಿಸ್ಕಿಟ್ಟುಗಳ ಪೆಟ್ಟಿಗೆಗಳು, ಭರಣಿಗಳು , ಗ್ಲಾಸು, ಪಾತ್ರೆ ಇವುಗಳನ್ನು ವಸ್ತು ವಿಷಯಗಳನ್ನಾಗಿಸಿಕೊಂಡಿದ್ದರು. ಇದಲ್ಲದೆ ಸಿನೇಮಾ ಮಂದಿರಗಳ ಹತ್ತಿರ ಹೋಗಿ ಅಲ್ಲಿ ಹಚ್ಚಿರುವ ಚಲನಚಿತ್ರದ ದೊಡ್ಡ ದೊಡ್ಡ ಪೊಸ್ಟರಗಳನ್ನು ಸಹ ತಮ್ಮ ಕಲಿಕೆಯ ವಸ್ತು ವಿಸಯವಾನ್ನಾಗಿಸಿಕೊಂಡಿದ್ದರು. ಇವು ಅಭ್ಯಾಸದ ದೃಷ್ಟಿಯಿಂದಾದರೆ ಇನ್ನು ಸ್ಪರ್ಧಾತ್ಮಕ ದೃಷ್ಟಿಯಿಂದ ಹೇಳುವದಾದರೆ ನಿಸರ್ಗವನ್ನು, ಸಾಮಾಜಿಕ ವಿಷಯಗಳಾದ ರಾಷ್ಟ್ರೀಯ ಭಾವೈಕ್ಯತೆಯ ಪರಿಸರ ಮಾಲಿನ್ಯ , ವೈಜ್ಞಾನಿಕ ಉಪಕರಣಗಳು, ಮಹಾತ್ಮರ ಜೀವನವನ್ನು ಕುರಿತಾದ ಹಲವಾರು ವಿಷಯಗಳನ್ನು ತಮ್ಮ ಚಿತ್ರದ ವಸ್ತುವಾಗಿಸಿಕೊಂಡಿದ್ದರು. ಇವೆಲ್ಲವೂ ಇವರ ಪ್ರಾರಂಭಿಕ ಹಂತದಲ್ಲಿಯ ವಸ್ತು ವಿಷಯಗಳಾಗಿದ್ದವು.

ಉನ್ನತ ಶಿಕ್ಷಣಕ್ಕಾಗಿ ಮುಂಬೈನ ಸರ್.ಜೆ.ಜೆ. ಕಲಾಶಾಲೆಗೆ ತೆರಳಿದರು. ಅಲ್ಲಿ ಇವರ ಚಿತ್ರದ ವಸ್ತುಗಳು ಪ್ರತಿಯೊಂದು ವಿಷಯಕ್ಕೆ ಸಂಬಂಧಪಟ್ಟಂತೆ ಆಯಾ ವಿಷಯಗಳನ್ನು ಅಧಾರಿಸಿಯೇ ವಸ್ತುಗಳನ್ನು ಬಳಸಿಕೊಂಡು ಚಿತ್ರಗಳನ್ನು ಚಿತ್ರಿಸುತ್ತಿದ್ದರು. ರೇಖಾ ಚಿತ್ರಗಳ ದೃಷ್ಟಿಯಿಂದ ಹೇಳಬೇಕಾದರೆ ಈ ಕಲಾಶಾಲೆಯಲ್ಲಿ ದಿನಾಲು ಸ್ಕೆಚ್ ಗಳನ್ನು ಮಾಡಿಕೊಂಡು ಬರುವದು ಒಂದು ದೈನಂದಿನ ಪಠ್ಯಕ್ರಮದ ಶಿಸ್ತಿನ ಕ್ರಮವಾಗಿತ್ತು. ಈ ದೃಷ್ಟಿಯಿಂದ ಖಂಡೇರಾವರು ದಿನಾಲು ಸಾಯಂಕಾಲ ರೈಲು ನಿಲ್ದಾಣಕ್ಕೆ ಹೋಗಿ ಸ್ಕೆಚ್ ಗಳನ್ನು ಮಾಡುತ್ತಿದ್ದರು. ಅಲ್ಲಿ ರೈಲಿಗಾಗಿ ಕಾಯುತ್ತ ಕುಳಿತಿರುವವರು, ಟಿಕೇಟು ಕಿಟಕಿಯ ಬಳಿ ಸಾಲಾಗಿ ನಿಂತುಕೊಂಡಿರುವ ವ್ಯಕ್ತಿಗಳು ಕೈಯಲ್ಲಿ ಲಗೇಜಗಳನ್ನು ಹಿಡಿದುಕೊಂಡು ಹೋಗುತ್ತಿರುವವರು, ನಿಂತಿರುವ ರೈಲುಗಳು, ರೈಲಿನ ಹಳಿಗಳು, ಚಹಾವನ್ನು ಮಾರುವವರು, ತಲೆಯ ಮೇಲೆ ಸಾಮಾನುಗಳನ್ನು ಹೊತ್ತಿಕೊಂಡಿರುವ ಕೂಲಿಗಳು, ಸಾಮನುಗಳನ್ನು ಹಾಕಿಕೊಂಡು ಎಳೆಯುವ ಎರಡು ಗಾಲಿಬಂಡಿಗಳು, ಹೀಗೆ ರೈಲು ನಿಲ್ದಾಣದಲ್ಲಿಯ ಇಂಥ ಹಲವಾರು ವಿಷಯಗಳನ್ನು ತಮ್ಮ ರೇಖಾಚಿತ್ರವನ್ನು ವಿಷಯಗಳಾನ್ನಾಗಿಸಿಕೊಂಡಿದ್ದರು. ಇದಲ್ಲದೇ ಇನ್ನೊಂದು ಸ್ಥಳವಾದ ಚೌಪಾಟಿಯಲ್ಲಿಯೂ ಸ್ಕೆಚ್ ಗಳನ್ನು ಮಾಡಲು ಹೋಗುತ್ತಿದ್ದರು. ಅಲ್ಲಿ ತರಕಾರಿಯನ್ನು ತೆಗೆದು ಕೊಂಡು ಹೋಗುತ್ತಿರುವವರು, ಹಣ್ಣು ಹಂಪಲುಗಳನ್ನು ಮಾರುವವರು, ಅಲ್ಲೇ ಅಲೆದಾಡುವ ದನಕರುಗಳು, ಅದರ ಹೊರಗಡೆಯಲ್ಲಿ ಮೀನು ಮಾರುಕಟ್ಟೆಯೊಂದಿತ್ತು. ಅಲ್ಲಿ ಮೀನು ಮಾರುವವರು, ಮೀನನ್ನು ಬುಟ್ಟಿಯಲ್ಲಿ ಹಾಕಿಕೊಂಡು

ಕುಳಿತಿರುವವರು ತಲೆಯ ಮೇಲೆ ಮೀನಿನ ಬುಟ್ಟಿಯೊಂದನ್ನು ಹೊತ್ತುಕೊಂಡು ಹೋಗುತ್ತಿರುವವರು, ರಸ್ತೆಯ ಬದಿಯಲ್ಲಿ ನಿಂತುಕೊಂಡಿರುವ ವಾಹನಗಳು ಇವೆಲ್ಲ ಇವರ ದೈನಂದಿನ ಅಂಕನೆಗಳ ವಸ್ತುವಿಷಯಗಳಾದರೆ ಪಠ್ಯಕ್ರಮದಲ್ಲಿಯ ಅಭ್ಯಾಸದ ವಸ್ತುವಿಷಯಗಳು ಬೇರೆಯಾಗಿದ್ದವು. Still life ವಿಷಯಕ್ಕೆ ಸಂಬಂದ ಪಟ್ಟಂತೆ ಚೇನಿಮಣ್ಣಿನಿಂದ ತಯಾರಿಸಿದ ಪಾತ್ರೆಗಳು, ಗ್ಲಾಸುಗಳು, ಕಪ್ಪುಗಳು ಪ್ಲಾಸ್ಟರ್ ಆಪ್ ಪ್ಯಾರಿಸಿನಿಂದ ಮಾಡಿದ ಮೂರ್ತಿಗಳು ಇವು ಎದುರಿಗೆ ಇಟ್ಟುಕೊಂಡು ಚಿತ್ರಿಸುವುದಕ್ಕೆ ವಸ್ತುವಿಷಯಗಳಾಗಿದ್ದವು ಭಾವಚಿತ್ರಗಳ ಬಗ್ಗೆ ಹೇಳಬೇಕಾದರೆ ಸ್ತ್ರೀಯರನ್ನು, ಪುರುಷರನ್ನು, ಹೆಚ್ಚಾಗಿ ವಯಸ್ಸಾದವರನ್ನು ಎದುರಿಗೆ ಕೂಡಿಸಿಕೊಂಡು ಭಾವಚಿತ್ರಗಳನ್ನು ಬಿಡಿಸುತ್ತಿದ್ದರು. ಅವರಿಗೆ ಕುಳಿತುಕೊಳ್ಳಲು ದೊಡ್ಡದಾದ ಕಟ್ಟಿಗೆಯಿಂದ ಮಾಡಿದ ಕಟ್ಟೆಯಂತಿರುವ ಉಪಕರಣ, ಅದರ ಹಿಂದೆ ಎತ್ತರವಾದ ಕಟ್ಟಿಗೆಯ ಸ್ಟ್ಯಾಂಡ್, ಅದರ ಮೇಲೆ ಹಾಕಿರುವ ಬಟ್ಟೆಗಳು ಕುಳಿತಿರುವ ವ್ಯಕ್ತಿಯ ಕೈಯಲ್ಲಿ ಒಂದು ಸ್ಟೀಲಿನ ಕೊಳೆಯನ್ನು ಕೊಡುವದು. ಕೆಲವೊಂದು ಸಾರಿ ಸ್ತ್ರೀಯರನ್ನು ನಗ್ನ ರೂಪದಲ್ಲಿ ಕೂಡಿಸಿ ಸ್ಕೆಚ್‌ಗಳನ್ನು ಮಾಡುವದು. ಭಾವಚಿತ್ರಗಳನ್ನು ಚಿತ್ರಿಸುವದು ಮಾಡುತ್ತಿದ್ದರು. Anatomy ಗೆ ಸಂಬಂಧಪಟ್ಟಂತೆ ಸತ್ತಮಾನವರ ದೇಹವನ್ನು ಅಭ್ಯಾಸದ ದೃಷ್ಟಿಯಿಂದ ವಸ್ತುವಾಗಿ ಬಳಸಿಕೊಳ್ಳುತ್ತಿದ್ದರು.

ವರ್ಣಚಿತ್ರಗಳ ಮಟ್ಟಿಗೆ ಹೇಳಬೇಕಾದರೆ ನಿಸರ್ಗಚಿತ್ರಗಳನ್ನು ರಚಿಸಲು ಹಸಿರಿನಿಂದ ಕೂಡಿದ ವಿಶಾಲವಾದ ಮೈದಾನ, ಬೆಟ್ಟ ಗುಡ್ಡಗಳು, ಸುಂದರವಾದ ಮತ್ತು ಅಲಂಕಾರಿಕವಾದ ದೊಡ್ಡ ದೊಡ್ಡ ಕಟ್ಟಡಗಳು ಪ್ರಾಣಿ-ಪಕ್ಷಿಗಳು, ಗಿಡ-ಮರಗಳು,ಇವುಗಳನ್ನು ತಮ್ಮ ಕಲಾಕೃತಿಯ ವಸ್ತುವಿಷಯಗಳನ್ನಾಗಿಸಿಕೊಂಡಿದ್ದರು. ಇವೆಲ್ಲವೂ ಖಂಡೇರಾವರ ಅಧ್ಯಯನ ಕಾಲದಲ್ಲಿಯ ವಸ್ತುವಿಷಯಗಳಾಗಿದ್ದವು. ಇವರು ಅಧ್ಯಯನ ಕಾಲದಲ್ಲಿ ಹೆಚ್ಚಾಗಿ ರೇಖಾಚಿತ್ರಗಳನ್ನು ರಚಿಸಿದು ಕಂಡುಬರುತ್ತದೆ. ಒಂದು ವೇಳೆ ವರ್ಣಚಿತ್ರಗಳನ್ನು ರಚಿಸಿದಲ್ಲಿ ಅದು ಹೆಚ್ಚಾಗಿ ನಿಸರ್ಗ ಚಿತ್ರಗಳನ್ನು ರಚಿಸಿದ್ದು ನಾವು ಕಾಣಬಹುದಾಗಿದೆ. ಇದಲ್ಲದೆ ಹಿರಿಯ ಕಲಾವಿದರ ಕಲಾಕೃತಿಗಳ ಅನುಕರಣೆ ಮಾಡುವದು ಇದೂ ಕೂಡ ತಮ್ಮ ಕಲಾಕೃತಿಗಳ ರಚನೆಯಲ್ಲಿ ವಸ್ತುಗಳನ್ನಾಗಿಸಿಕೊಂಡಿದ್ದರು.

2. ಅಧ್ಯಾಪಕ ವೃತ್ತಿಯಲ್ಲಿನ ಕಲಾಕೃತಿಗಳು. :

ಖಂಡೇರಾವರು ಅಧ್ಯಾಪಕ ವೃತ್ತಿಯಲ್ಲಿ ರಚಿಸಿದ ಕಲಾಕೃತಿಗಳು ಅಭ್ಯಾಸದ ದೃಷ್ಟಿಯಿಂದ ರಚಿಸಿದ ಕಲಾಕೃತಿಗಳಿಗಿಂತ ವಿದ್ಯಾರ್ಥಿಗಳಿಗೆ ಬೋಧನಾ ದೃಷ್ಟಿಯನ್ನಿಟ್ಟುಕೊಂಡು ರಚಿಸಿದ ಕಲಾಕೃತಿಗಳನ್ನು ನಾವು ಹೆಚ್ಚಾಗಿ ಕಾಣಬಹುದು. ಈ ಹಂತದಲ್ಲಿ ಖಂಡೇರಾವರು ಅಧ್ಯಾಪಕರಾಗಿರುವುದರಿಂದ ವಿಧ್ಯಾರ್ಥಿಗಳಿಗೆ ಒಳ್ಳೆಯ ಮಾರ್ಗದರ್ಶನವನ್ನು ನೀಡುವ ದೃಷ್ಟಿಯಿಂದ ತಾವೇನು ಮುಂಬೈನ ಜೆ.ಜೆ. ಕಲಾಶಾಲೆಯಲ್ಲಿ ಕಲಾಶಿಕ್ಷಣವನ್ನು ಪಡೆದುಕೊಂಡು ಬಂದಿದ್ದರೋ ಅಲ್ಲಿಯ ಮಾದರಿಯಲ್ಲಿಯೇ ಇಲ್ಲಿಯೂ ಕಲಾಶಿಕ್ಷಣವನ್ನು ಈ ಭಾಗದ ಕಲಾವಿಧ್ಯಾರ್ಥಿಗಳಿಗೆ ಕೊಡಬೇಕೆಂದುಕೊಂಡು ಕಲಬುರ್ಗಿಯಲ್ಲಿ 1965ರಲ್ಲಿ ' ಆದರ್ಶಕಲಾ ಮಂದಿರ ' ವೆಂದು ಒಂದು ಕಲಾಶಾಲೆ ಯನ್ನು ತೆರೆದರು. ಮುಂಬೈನ ಸರ್.ಜೆ.ಜೆ.ಕಲಾಶಾಲೆಯ ಪಠ್ಯಕ್ರಮವನ್ನೇ ಇಲ್ಲಿಯೂ ವಿಧ್ಯಾರ್ಥಿಗಳಿಗೆ ಹೇಳಿಕೊಡುತ್ತಿದ್ದರು. ಜೆ.ಜೆ.ಕಲಾಶಾಲೆಯ ಪಠ್ಯಕ್ರಮವಾದ Angular perspective, Anatorny, composition, portrait & life painting ವಿಷಯಗಳ ಜೊತೆಗೆ ಗ್ರೇಡ ಪರೀಕ್ಷೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು Memory, Design, Drawing, Freehand, Nature, ಈ ವಿಷಯಗಳನ್ನು ಕೂಡ ತಮ್ಮ ಕಲಾಶಾಲೆಯಲ್ಲಿ ಪಠ್ಯಕ್ರಮದಲ್ಲಿ ಅಳವಡಿಸಿಕೊಂಡು ವಿಧ್ಯಾರ್ಥಿಗಳಿಗೆ ಬೋಧಿಸುತ್ತಿದ್ದರು. ಮುಂಬೈನ ಸರ್.ಜೆ.ಜೆ.ಕಲಾಶಾಲೆಯಲ್ಲಿ ತಮ್ಮ ಗುರುಗಳಾಗಿದ್ದ ಪಳಸೀಕರ್ ಬಾಬುರಾವ ಸಡ್ವೇಲ್ಕರ, ಸೋಲಾಪೂರಕರ್, ಕದಮ , ಇವರುಗಳ ನಡೆ, ಅವರ ರೀವಿ, ಶಿಸ್ತು, ಸಂಯಮವನ್ನು, ಅವರು ಬೋಧಿಸುವ ಪದ್ದತಿಯಿಂದ ಪ್ರಭಾವಿತರಾಗಿದ್ದರು. ಇವೆಲ್ಲವೂ ತಮ್ಮ ಆದರ್ಶಕಲಾಮಂದಿರದಲ್ಲಿ ಅಳವಡಿಸಿಕೊಂಡಿದ್ದರು. ಇವೆಲ್ಲದರಲ್ಲಿಯೂ ತಮ್ಮ ಕಲಾಕ್ರೀಯೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದರು. 1968 ರಿಂದ 1970 ರವರೆಗೆ ಸತತ ಮೂರುಬಾರಿ ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ನಿಸರ್ಗಚಿತ್ರಗಳಿಗೆ ಪ್ರಶಸ್ತಿಯನ್ನು ಪಡೆದುಕೊಂಡಿದ್ದರು.

ಇವರು ವಿಧ್ಯಾರ್ಥಿಗಳಿಗೆ ದಿನಾಲು ಸ್ಕೆಚ್‌ಗಳನ್ನು ಮಾಡಿಕೊಂಡು ಬರಲು ಹೇಳುತ್ತಿದ್ದರು. ವಾರಕ್ಕೊಮ್ಮೆಯಂತೆ ಕಲಬುರ್ಗಿಯ ಸುತ್ತಮುತ್ತಲಿನ ಹಳ್ಳಿಗಳಿಗೆ ಹೋಗಿ, ವಿದ್ಯಾರ್ಥಿಗಳಿಗೆ ಸ್ಕೆಚ್‌ಗಳನ್ನು, ನಿಸರ್ಗಚಿತ್ರಗಳನ್ನು ಮಾಡಲು ಸೂಚಿಸುತ್ತಿದ್ದರು. ಸ್ವತಃ ತಾವೆ ಸ್ಕೆಚ್‌ಗಳನ್ನಾಗಲಿ, ನಿಸರ್ಗಚಿತ್ರಗಳನ್ನಾಗಲಿ ಚಿತ್ರಿಸಿ ತೋರಿಸುತ್ತಿದ್ದರು. ಹೀಗಾಗಿ ಇವರು ಅಧ್ಯಾಪಕ ವೃತ್ತಿಯಲ್ಲಿ ತಮ್ಮ ಕಲಾಚಟುವಟಿಕೆಗಳಿಗಿಂತ ವಿಧ್ಯಾರ್ಥಿಗಳಿಗೆ ಬೋಧಿಸುವುದರಲ್ಲಿಯೇ ಹೆಚ್ಚಿನ ಕಾಲ ಕಳೆಯುತ್ತಿದ್ದರು. ಕೆಲವೊಂದು ಬಾರಿ ವಿದ್ಯಾರ್ಥಿಗಳಿಗೆ ಬೋಧಿಸುವಾಗ ಮಾತ್ರ ಒಂದೆರಡು ಚಿತ್ರಗಳನ್ನು ರಚಿಸುತ್ತಿದ್ದರು. ವಿಧ್ಯಾರ್ಥಿಗಳೊಂದಿಗೆ ಕಾಲ ಕಳೆಯುವುದೇ ಹೆಚ್ಚು. ಆಗ ಇವರಿಗೆ ಚಿತ್ರರಚಿಸಲು ವೇಳೆಯೇ ಸಿಗುತ್ತಿರಲಿಲ್ಲ. ಹೀಗೆ ಖಂಡೇರಾವರು ಅಧ್ಯಾಪಕ ವೃತ್ತಿಯಲ್ಲಿ ಬೋಧನೆಯಲ್ಲೇ ಐದಾರು ವರ್ಷಕಳೆದರು.

ಮುಂದೆ ಕಲಬುರ್ಗಿಯ ಶರಣಬಸವೇಶ್ವರ ಸಂಸ್ಥಾನದ ಎಂಟನೇಯ ಪೀಠಾಧಿಪತಿಗಳಾಗಿದ್ದ ಪೂಜ್ಯ ಶರಣ ಬಸವಪ್ಪ ಅಪ್ಪನವರು ಧಾರವಾಡದ ಕರ್ನಾಟಕದ ವಿಶ್ವವಿಧ್ಯಾಲಯದ ಸಿಂಡಿಕೇಟ್ ಸದಸ್ಯರಾಗಿದ್ದರು. ಅವರು ಧಾರವಾಡದಲ್ಲಿಯ ಕಲಾ, ಸಾಂಸ್ಕೃತಿಕ ಚಟುವಟಿಕೆಗಳನ್ನು ಕಂಡು ತಮ್ಮ ಸಂಸ್ಥೆಯಲ್ಲಿಯೂ ಈ ಚಿತ್ರಕಲಾ ವಿಷಯವನ್ನು ಪ್ರಾರಂಭಿಸಿದರೆ ಹೇಗೆ ಎಂದು ಯೋಚಿಸಿ ತಮ್ಮ ಅಭಿಪ್ರಾಯವನ್ನು ವಿಶ್ವವಿದ್ಯಾಲಯದಲ್ಲಿ ಪ್ರಸ್ತಾಪಿಸಿದಾಗ ವಿಶ್ವವಿದ್ಯಾಲಯವು ಇದಕ್ಕೆ ಅನುಮತಿ ನೀಡಿತು. ಈ ಹಿನ್ನೆಲೆಯಲ್ಲಿ 1971ರಲ್ಲಿ ಕಲಬುರ್ಗಿಯಲ್ಲಿ ಶರಣಬಸವೇಶ್ವರ ಕಲಾ ಮಹಾವಿದ್ಯಾಲದಲ್ಲಿ ಬಿ.ಎ. ಪದವಿಯಲ್ಲಿ ಚಿತ್ರಕಲೆಯನ್ನು ಇತರ ವಿಷಯಗಳೊಂದಿಗೆ ಸೇರಿಸಿ ಅಧ್ಯಯನವನ್ನು ಮಾಡುವ ಅವಕಾಶವನ್ನು ಮಾಡಿಕೊಟ್ಟರು. ಇಲ್ಲಿ ಖಂಡೇರಾವರು ಚಿತ್ರಕಲಾ ಅಧ್ಯಾಪಕರಾಗಿ ಆಯ್ಕೆಗೊಂಡರು . 1971 ರಿಂದ ಮೇಜರ್ ಮೈನರ್‌ಎಂದು ಪ್ರಾರಂಭಗೊಂಡ ಈ ಚಿತ್ರಕಲೆಯಲ್ಲಿ ಮೊದಲು ಆರು ಜನ ವಿದ್ಯಾರ್ಥಿಗಳು ಚಿತ್ರಕಲೆಯನ್ನು ಇತರ ವಿಷಯಗಳೊಂದಿಗೆ ತೆಗೆದುಕೊಂಡು ಅಭ್ಯಾಸವನ್ನುಪ್ರಾರಂಭಿಸಿದರು. ಐದಾರು ವರ್ಷಗಳನ್ನು ಕಳೆಯುತ್ತಿದ್ದಂತೆಯೇ ಈ ಚಿತ್ರಕಲೆಯನ್ನು ಬಿ.ಎ. ಫೈನ್ ಆರ್ಟ ಎಂದು ಪೂರ್ಣ ರೀತಿಯ ಕೋರ್ಸು ಆಗಿ ಪರಿಗಣಿಸಿದರು. ಇಲ್ಲಿಯ ಪಠ್ಯಕ್ರಮವು ಬೇರೆಯಾಗಿತ್ತು. ಇಲ್ಲಿ ಕನ್ನಡ ಮತ್ತು ಇಂಗ್ಲೀಷ ವಿಷಯದೊಂದಿಗೆ Drawing & painting , Graphics, History of Arts & Aesthetics ಎಂಬ ವಿಷಯಗಳನ್ನು ವಿಧ್ಯಾರ್ಥಿಗಳಿಗೆ ಹೇಳಿಕೊಡಲಾಗುತ್ತಿತ್ತು. Drawing & painting ನಲ್ಲಿ ಉಪವಿಷಯಗಳಾಗಿ Portrait, Life painting, Mural , composition, Still life ಈ ವಿಷಯಗಳನ್ನು Graphics ನಲ್ಲಿ Linocut, woodcut, etching, Serigraphy, lithography ಈ ವಿಷಯಗಳನ್ನು ಉಪ ವಿಷಯಗಳಾಗಿ ಹೇಳಿಕೊಡುತ್ತಿದ್ದರು. Drawing & painting ಮತ್ತು Graphics ಇವೆರಡು ಪ್ರಾಯೋಗಿಕ ವಿಷಯಗಳಾದರೆ History of Arts & Acesthetics ಇವು ಥೇಯರಿ ವಿಷಯಗಳಾಗಿದ್ದವು. ಖಂಡೇರಾವರು ಒಬ್ಬರೇ ಕೆಲವು ತಿಂಗಳುಗಳು ಈ ಎಲ್ಲ ವಿಷಯಗಳನ್ನು ಹೇಳುತ್ತಿದ್ದರು. ಇದಲ್ಲದೆ ವಿದ್ಯಾರ್ಥಿಗಳಿಗೆ ಆಗಾಗ ಹೊರಗಡೆ ಕರೆದುಕೊಂಡು ಹೋಗಿ ನಿಸರ್ಗಚಿತ್ರಗಳನ್ನು ಚಿತ್ರಿಸುವುದು ಹೇಳಿಕೊಡುತ್ತಿದ್ದರು. ವಿದ್ಯಾರ್ಥಿಗಳಿಗೆ ಬೋಧನೆಯನ್ನು ಮಾಡುವಾಗ ತಾವೂ ಅವರೊಂದಿಗೆ ಚಿತ್ರಗಳನ್ನು ಬಿಡಿಸುತ್ತಿದ್ದರು. ಈ ಹಂತದಲ್ಲಿ ಖಂಡೇರಾವರು ಹೆಚ್ಚಾಗಿ Portrait, Lifepainting, still life ವಿಷಯಗಳ ಮೇಲೆ ವಿದ್ಯಾರ್ಥಿಗಳಿಗೆ ಬೋಧಿಸುತ್ತಲೇ ಅವರೊಂದಿಗೆ ಕೂಡಿಯೇ ಚಿತ್ರಗಳನ್ನು ಚಿತ್ರಿಸುತ್ತಿದ್ದರು. ಇವು ಕಲಾಶಾಲೆಯಲ್ಲಿಯ ಸಮಯದಲ್ಲಿ ಚಿತ್ರಿತಗೊಂಡರೆ ಉಳಿದ ಬಿಡುವಿನ ವೇಳೆಯಲ್ಲಿ ಕಲಾಪ್ರದರ್ಶನಗಳಿಗೆ , ಕಲಾಸ್ಪರ್ಧೆಗಳಿಗೆ ಕಳಿಸುವ ಸಲುವಾಗಿ Composition ಗಳನ್ನು ಮಾಡುತ್ತಿದ್ದರು. ಆದರೂ ಅಧ್ಯಾಪಕ ವೃತ್ತಿಯ ಪ್ರಾರಂಭದ ಹಂತದಲ್ಲಿ ಸ್ಪರ್ಧೆಗಳಿಗೆ ನಿಸರ್ಗ ಚಿತ್ರಗಳನ್ನೇ ಹೆಚ್ಚಾಗಿ ಕಳಿಸುತ್ತಿದ್ದರು. 1980 ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಪ್ರಸ್ತಿಯನ್ನು Through the broken window ಎಂಬ ನಿಸರ್ಗ ಚಿತ್ರಕ್ಕೆ ಪಡೆದುಕೊಂಡರು. ಇದರಿಂದ ಇವರು ಕಲಾಕ್ರೀಯೆಯಲ್ಲಿ ತಮ್ಮನ್ನು ಹೆಚ್ಚಾಗಿ ತೊಡಗಿಸಿಕೊಂಡರು.

ಕಲಾಶಾಲೆಯಲ್ಲಿವಿದ್ಯಾರ್ಥಿಗಳಿಗೆ ಬೋಧನೆಯನ್ನು ಮಾಡುತ್ತಾ ಅವರೊಂದಿಗೆನೆ Composition, Mural ದ ಬಗ್ಗೆ ಕಲಾಕೃತಿಗಳನ್ನು ರಚಿಸುತ್ತಿದ್ದರು. ಇವೆಲ್ಲದರೊಂದಿಗೆ ಈ ಚಿತ್ರಕಲಾ ವಿಭಾಗವು ಶರಣಬಸವೇಶ್ವರ ಸಂಸ್ಥಾನದ ಅಡಿಯಲ್ಲಿರುವುದರಿಂದ ಅಂದು ಶರಣರ ಕುರಿತಾದ ಧಾರ್ಮಿಕ, ಪೌರಾಣಿಕ ಚಿತ್ರಗಳು ಹೆಚ್ಚಿನ ಪ್ರಮಾಣದಲ್ಲಿ

ನಿರ್ಮಾಣಗೊಂಡವು. ಖಂಡೇರಾವರು ಶರಣರ ಜೀವನ ಮತ್ತು ಅವರ ಬದುಕನ್ನು ಆಧರಿಸಿದ ಕಲಾಕೃತಿಗಳನ್ನು ರಚಿಸಿದ್ದಾರೆ. ಇವರು ಚಿತ್ರಿಸಿದ ಧಾರ್ಮಿಕ ಚಿತ್ರಗಳು ಶರಣಬಸವೇಶ್ವರ ಸಂಸ್ಥಾನದಲ್ಲಿ ಇಂದಿಗೂ ನಮಗೆ ನೋಡಲು ಸಿಗುತ್ತವೆ. ಇವೆಲ್ಲವೂ ನೈಜ ಸಂಯೋಜನಾ ಕಲಾಕೃತಿಗಳಾದರೆ, ಬೇರೆ ಬೇರೆ ಕಡೆಗಳಲ್ಲಿ ಕಲಾಪ್ರದರ್ಶನಗಳಿಗೆ, ಕಲಾಸ್ಪರ್ಧೆಗಳಿಗೆ ಅಮೂರ್ತದ ಕಡಗೆ ಮನವೊಲಿಸಿದರು. ಪ್ರಾರಂಭದಲ್ಲಿ ಎಸ್.ಎಸ್. ಬೇಂದ್ರೆಯವರ ಕಲಾಕೃತಿಗಳಿಂದ ಪ್ರಭಾವಿತರಾಗಿದ್ದರಿಂದ ಅವರ ಶೈಲಿಯಲ್ಲಿಯೇ ಕಲಾಕೃತಿಗಳನ್ನು ಸಂಯೋಜನಾ ಕಲಾಕೃತಿಗಳನ್ನು ರಚಿಸುತ್ತಿದ್ದರು. ಆಮೇಲೆ ಅದರಲ್ಲಿಯೇ ಒಂದು ಹೊಸತನವನ್ನು ಹುಡುಕಲು ಮತ್ತು ತಮ್ಮದೇ ಆದ ಒಂದು ಶೈಲಿಯನ್ನು ಕಂಡುಕೊಳ್ಳಲು ವಿಂಡೋ ಸಿರೀಜ್ ಎಂಬ ಹೊಸ ಶೈಲಿಯನ್ನು ಕಂಡುಕೊಂಡರು . ಈ ಶೈಲಿಯನ್ನು ಕಂಡುಕೊಂಡದ್ದು ಒಂದು ವಿಶೇಷ ಸಂದರ್ಭ ಮತ್ತು ಆಕಸ್ಮಿಕ ಘಟನೆಯಿಂದು ಅವರೇ ಹೇಳುತ್ತಾರೆ.

ಒಮ್ಮೆ ಖಂಡೇರಾವರು ರಾತ್ರಿಯ ಸಮಯದಲ್ಲಿ ದಾರಿಯಲ್ಲಿ ಹೋಗುವಾಗ ಒಬ್ಬರ ಮನೆಯ ಗಾಜಿನ ಕಿಡಕಿಯಲ್ಲಿ ಲೈಟಿನ ಬೆಳಕು ಬಿದ್ದಿದ್ದು, ಕಿಟಕಿಯ ಗಾಜು ಒಡೆದಿತ್ತು. ಒಡೆದ ಗಾಜಿನಲ್ಲಿ ಬೆಳಕು ಚೂರು ಚೂರುಗಳಂತೆ ಕಂಡು ಬಂತು. ಮನೆಗೆ ಬಂದವರೇ ತಾವು ಕಂಡ ದೃಶ್ಯವನ್ನು ಚಾರ್ಕೋಲ್‌ನಿಂದ ಐದಾರು ಡ್ರಾಯಿಂಗ್‌ಗಳನ್ನು ಮಾಡಿದರು. ಅದರಲ್ಲಿ ಒಂದನ್ನು ಆರಿಸಿಕೊಂಡು ಬಣ್ಣದಿಂದ ಚಿತ್ರಿಸಿದರು. ಅದೊಂದು ಅಮೂರ್ತ ಕಲಾಕೃತಿಯಾದರೂ, ಅದರಲ್ಲಿ ಎನೋ ಒಂದು ವಿಶೇಷತೆಯನ್ನು ಕಂಡರು. ಇದೇ ಅವರಿಗೆ ವಿಂಡೋ ಸರಣಿಗೆ ನಾಂದಿಯಾಯಿತು. ಇದೇ ಸರಣಿಯ ಮೇಲೆ ಇವರು ಇಂದು ಹಲವಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕೆಲವು ಕಲಾಕೃತಿಗಳಿಗೆ ಪ್ರಶಸ್ತಿಗಳೂ ದೊರೆತಿವೆ. ಇದಲ್ಲದೇ ಇವರು ನಾಡಿನ ಹಲವಾರು ಕಡೆಗಳ ಕಲಾಶಾಲೆಗಳಿಗೆ ಹೋಗಿ ಅಲ್ಲಿ ಪ್ರಾತ್ಯಕ್ಷಿಕೆಗಳನ್ನು ಮಾಡಿದ್ದಾರೆ. ಇವರು ಪ್ರಾತ್ಯಕ್ಷಿಕೆಗಳನ್ನು ಮಾಡುವಾಗ ಹೆಚ್ಚಾಗಿ ವಿಂಡೋ ಸರಣಿಯನ್ನು ಆಧರಿಸಿದ ಸಂಯೋಜನಾ ಚಿತ್ರ ಮತ್ತು ಭಾವಚಿತ್ರಗಳನ್ನು, ವ್ಯಕ್ತಿಚಿತ್ರಗಳನ್ನು ರಚಿಸಿದ್ದಾರೆ. ಇವರ ಭಾವಚಿತ್ರಗಳಲ್ಲಿ ಎರಡು ಬಗೆಯದ್ದಾಗಿವೆ. ಒಂದು ಪ್ರಾತ್ಯಕ್ಷಿಕೆಗಳನ್ನು ಮಾಡಿದ ಭಾವಚಿತ್ರಗಳು, ಇನ್ನೊಂದು ಬೇರೆಯವರಿಗೆ ಮಾಡಿಕೊಟ್ಟ ಭಾವಚಿತ್ರಗಳು ಹೀಗಾಗಿ ಖಂಡೇರಾವರ ಅಧ್ಯಾಪಕ ವೃತ್ತಿಯಲ್ಲಿನ ಕಲಾಕೃತಿಗಳಲ್ಲಿ ಪ್ರಾರಂಭದ ಹಂತದಲ್ಲಿ ವಿಧ್ಯಾರ್ಥಿಗಳಿಗೆ ಬೋಧನೆಯನ್ನು ಮಾಡುತ್ತಾ ಅವರೊಂದಿಗೆ ಚಿತ್ರಿಸಿದ ಕಲಾಕೃತಿಗಳಲ್ಲಿ Still life, Portrait, Life painting, Composition, Mural ಇವು ಪಠ್ಯಕ್ರಮ ವಿಷಯಗಳಾಗಿದ್ದರೆ, ಅಧ್ಯಾಪಕ ವೃತ್ತಿಯ ಮಧ್ಯದಲ್ಲಿ ಶರಣರ ಜೀವನಕ್ಕೆ ಸಂಬಂಧಪಟ್ಟಂತೆ ಧಾರ್ಮಿಕ ವಿಷಯಗಳಿಗೆ ಸಂಬಂಧಪಟ್ಟಂತೆ, ನೈಜ ಸಂಯೋಜನಾ ಕಲಾಕೃತಿಗಳನ್ನು ಚಿತ್ರಿಸಿದ್ದಾರೆ. ಅಧ್ಯಾಪಕ ವೃತ್ತಿಯ ಕೊನೆಯಲ್ಲಿ ತಮ್ಮದೇ ಆದ ಆಮೂರ್ತಕಲಾ ಶೈಲಿಯನ್ನು ಕಂಡುಕೊಂಡು ಅದರಲ್ಲಿಯೇ ಸಂಯೋಜನಾ ಕಲಾಕೃತಿಗಳನ್ನು ರಚಿಸಿದ್ದಾರೆ. ಇದಲ್ಲದೆ ಪ್ರಾತ್ಯಕ್ಷಿಕೆಗಳಿಂದ ಮತ್ತು ಬೇರೆಯವರಿಗೆ ಮಾಡಿಕೊಟ್ಟ ಭಾವಚಿತ್ರಗಳನ್ನು ಮತ್ತು ಗ್ರಂಥಗಳಿಗೆ ಒದಗಿಸಿಕೊಟ್ಟ ಚಿತ್ರಗಳಂತೆ ಹೆಸರಿಸಬಹುದು.

ಖಂಡೇರಾವರು ಅಧ್ಯಾಪಕ ವೃತ್ತಿಯಲ್ಲಿ ಕಲಾಕೃತಿಗಳನ್ನು ರಚಿಸುವದಕ್ಕಿಂತ ವಿದ್ಯಾರ್ಥಿಗಳಿಗೆ ಬೋಧಿಸುವುದರಲ್ಲಿಯೇ ಹೆಚ್ಚಿನ ಕಾಲ ಕಳೆದರು. ಪ್ರಾರಂಭದಲ್ಲಿ ಅವರು ವಿದ್ಯಾರ್ಥಿಗಳ ಜೊತೆಗೂಡಿಯೇ ಅವರಿಗೆ ಬೋಧನೆ ಮಾಡುತ್ತಾ ತಾವು ಕಲಾಕೃತಿಗಳನ್ನು ರಚಿಸುವದರಲ್ಲಿ ತೊಡಗುತ್ತಿದ್ದರು. ವಾರಕೊಮ್ಮೆಯಂತೆ ವಿದ್ಯಾರ್ಥಿಗಳನ್ನು ಹೊರಗಡೆ ಕರೆದುಕೊಂಡು ಹೋಗಿ ನಿಸರ್ಗಚಿತ್ರ ರಚಿಸುವದನ್ನು ಹೇಳಿಕೊಡುತ್ತಿದ್ದರು. ಮೊದಲು ಡ್ರಾಯಿಂಗ್ ಮಾಡಿ ಆ ದೃಶ್ಯವನ್ನು ಚಿತ್ರಿಸಿ ನಂತರದಲ್ಲಿ ಜಲವರ್ಣದಿಂದ ಚಿತ್ರಿಸುತ್ತಿದ್ದರು. ಹಳ್ಳಿಯ ವಾತಾವರಣ ಬಿದ್ದಿರುವ ಮನೆಗಳು ಹಳೆಯಕಾಲದ ಮನೆಗಳು, ದನಕರುಗಳು, ಗುಡಿಸಲುಗಳು , ದೊಡ್ಡ ದೊಡ್ಡ ಮರಗಳು, ದೂರ ವೆಂಬಂತೆ ಕಾಣುವ ಬಯಲು ಪ್ರದೇಶ, ಸ ನಿಸರ್ಗ ಚಿತ್ರವನ್ನು ಬೋಧನೆಯ ಜೊತೆಗೆ ರಚಿತಗೊಂಡಿರುವ ಕಲಾಕೃತಿಗಳ ವಸ್ತುಯಗಳಾಗಿದ್ದವು. ಇದಲ್ಲದೆ ಹಂಪಿ, ಬಾದಾಮಿ, ಐಹೊಳೆ ಪಟ್ಟದಕಲ್ಲು, ಬೇಲೂರು-ಹಳೆಬೀಡುಗಳಂತಹ ಐತಿಹಾಸಿಕ ಸ್ಥಳಗಳಿಗೆ ಹೋಗಿ ನಿಸರ್ಗಚಿತ್ರಗಳನ್ನು ಚಿತ್ರಿಸುತ್ತಿದ್ದರು. ಅಲ್ಲಿಯ ದೇವಾಲಯಗಳು, ದೇಗುಲಗಳು, ವಿಶಾಲವಾದ ಕಲ್ಲುಬಂಡೆಗಳು, ಗುಡ್ಡಗಳು, ಇವರ ಕಲಾಕೃತಿಯ ವಸ್ತು ವಿಷಯಗಳಾಗಿದ್ದವು. ಇವೆಲ್ಲವೂ ಜಲವರ್ಣದಿಂದ ರಚಿತಗೊಂಡವುಗಳಾಗಿರುತ್ತಿದ್ದವು.

ಇನ್ನು ದೇವಾಲಯದ ಶಿಲ್ಪಕಲೆ, ವಾಸ್ತುಶಿಲ್ಪಗಳು ಇವರ ರೇಖಾಚಿತ್ರಗಳ ವಸ್ತುವಿಷಯಗಳಾಗಿರುತ್ತಿದ್ದವು. ಇವು ವಿದ್ಯಾರ್ಥಿಗಳಿಗೆ ಬೋಧನೆಯ ದೃಷ್ಟಿಯಿಂದ ಮಾಡಿದ ಕಲಾಕೃತಿಗಳ ವಸ್ತುವಿಷಯಗಳಾದರೆ, ಕ್ಲಾಸಿನಲ್ಲಿ ವಿದ್ಯಾರ್ಥಿಗಳ ಜೊತೆ Still life ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ಪೆಟ್ಟಿಗೆ ವಿ ಕಾರದ ಎರಡು ಎತ್ತರವಾದ ಹಲಗೆಗಳು , ಚೀನಿಮಣ್ಣಿನ ಪಾತ್ರೆಗಳು, ಸತ್ತಪಕ್ಷಿಗಳ ದೇಹವನ್ನು ಇಟ್ಟು ಚಿತ್ರಿಸುವುದು, ಹಣ್ಣುಹಂಪಲುಗಳನ್ನು ಇಟ್ಟು ಚಿತ್ರಿಸುವುದು. ಇದಲ್ಲದೇ ಗ್ರಾಫಿಕನಲ್ಲಿಯೂ ಇವರು ಸಂಯೋಜನಾ ರೇಖಾಚಿತ್ರಗಳನ್ನು ಬಳಸಿಕೊಂಡು ಮುದ್ರಣವನ್ನು ಮಾಡಿದವರಾಗಿದ್ದಾರೆ. ಇದರಲ್ಲಿ ಹಳ್ಳಿಯ ಜನಜೀವನವನ್ನುವಸ್ತುವಿಷಯವನ್ನಾಗಿ ಬಳಸಿ ಕೊಂಡಿದ್ದಾರೆ. ಇವೆಲ್ಲ ಖಂಡೇರಾವರು ಬೋಧನೆಯ ಜೊತೆಗೆ ರಚಿಸುತ್ತಿದ್ದ ಕಲಾಕೃತಿಗಳ ವಸ್ತುವಿಷಯಗಳಾಗಿರುತ್ತಿದ್ದವು.

ಅಧ್ಯಾಪಕ ವೃತಿಯ ಕೊನೆಯಲ್ಲಿ ವಿಂಡೋಸರಣಿಯ ಮೇಲೆ ಅಮೂರ್ತ ಸಂಯೋಜನಾ ಕಲಾಕೃತಿಗಳನ್ನು ಮಾಡುತ್ತಿದ್ದರು. ಇವುಗಳಲ್ಲಿ ಕಿಟಕಿ ಮತ್ತು ಕಿಟಕಿಯ ಮುಖಾಂತರ ಬೆಳಕು ಹೇಗೆ ಹರಿದು ಬರುತ್ತದೆ. ಎಂಬ ವಿಷಯದ ಮೇಲೆ ಕಲಾಕೃತಿಗಳನ್ನು ರಚಿಸಿದ್ದಾರೆ. ಅಲ್ಲದೇ ಖಂಡೇರಾವರು ಶರಣಬಸವೇಶ್ವರ ಸಂಸ್ಥಾನದ ಅಡಿಯಲ್ಲಿ ಬರುವ ಚಿತ್ರಕಲಾವಿಭಾಗದಲ್ಲಿ ಕೆಲಸ ಮಾಡುತ್ತಿದ್ದರಿಂದ, ಶರಣಬಸವೇಶ್ವರ ಸಂಸ್ಥಾನದಲ್ಲಿ ಧಾರ್ಮಿಕ ವಿಷಯಗಳ ಮೇಲೆ ಶರಣರ ಬದುಕಿಗೆ ಸಂಬಂಧಪಟ್ಟಂತೆ ಕಲಾಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಶರಣಬಸವೇಶ್ವರರು ಪ್ರಾಣಿ ಪಕ್ಷಿಗಳಿಗೆ ತೋರಿದ ದಯೆಯಂತೆ ಶರಣಬಸವರು ತಮ್ಮ ಹೊಲದಲ್ಲಿ ಬಂದ ಪ್ರಾಣಿಪಕ್ಷಿಗಳಿಗೆ ನೀರು ಮತ್ತು ಮೇವುಗಳನ್ನು ಹಾಕುತ್ತಿರುವದು, ಶರಣಬಸವೇಶ್ವರರ ಅನುಗ್ರಹದಿಂದ ಸಂತಾನವನ್ನು ಪಡೆಯುವುದು, ದಾಸೋಹ ಮಹಾಮನೆಯಲ್ಲಿ ಕಟ್ಟಿಗೆಯು ಇಲ್ಲದಿದ್ದಾಗ ಬಂದಂಥ ಜಂಗಮರನ್ನು ಹಾಗೆಯೇ ಕುಳಿಸುವುದು ಸರಿಯಲ್ಲವೆಂದು ಕೊಂಡು ಮನೆಯ ಜಂತಿಯ ತೊಲೆಯನ್ನೇ ತೆಗೆದು ಉರುವಿ ಅಡಿಗೆಯನ್ನು ಮಾಡಿ ಜಂಗಮಸೇವೆಯನ್ನು ಮಾಡುವದು, ಶರಣಬಸವೇಶ್ವರರು ಲಿಂಗದೀಕ್ಷೆಯನ್ನು ಕೊಡುವದು , ಡಕಾಯಿತರು ಶರಣಬಸವರಿಗೆ ಶರಣಾಗತರಾಗಿರುವದು, ಶರಣಬಸವರು ಧಾರ್ಮಿಕ ವಿಷಯಗಳ ಬಗ್ಗೆ ಉಪದೇಶವನ್ನು ಮಾಡುವದು, ಶರಣಬಸವೇಶ್ವರರು ಮಹಾತ್ಮಾ ಗಾಂಧೀಜಿಯವರ ಜೊತೆ ಚರ್ಚಿಸುತ್ತಿರುವದು ಅನುಭವ ಮಂಟಪ ಇಂಥ ಹಲವಾರು ವಿಷಯಗಳು ಇವರ ಶರಣರ, ಧಾರ್ಮಿಕ ವಿಷಯಗಳ ನೈಜ ಸಂಯೋಜನಾ ಕಲಾಕೃತಿಗಳ ವಸ್ತುವಿಷಯಗಳಾಗಿದ್ದವು. ಇವುಗಳೆಲ್ಲವೂ ತೈಲವರ್ಣದಲ್ಲಿ ನಿರ್ಮಿತಗೊಂಡವುಗಳಾಗಿವೆ. ಇದಲ್ಲದೆ ನಾಡಿನ ಬೇರೆ ಬೇರೆ ಕಡೆಗಳಲ್ಲಿರುವ ಕಲಾಶಾಲೆಗಳಿಗೆ ಮತ್ತು ಇತರ ಕಡೆ ಹೋಗಿ ಅಲ್ಲಿ ಪ್ರಾತ್ಯಕ್ಷಿಕೆಗಳನ್ನು ಮಾಡಿ ಬಂದವರಾಗಿದ್ದಾರೆ. ಈ ಅವಧಿಯಲ್ಲಿ ಹೆಚ್ಚಾಗಿ ಭಾವಚಿತ್ರಗಳು ಮತ್ತು ವಿಂಡೋಸರಣಿಯ ಅಮೂರ್ತಸಂಯೋಜನಾ ಕಲಾಕೃತಿಗಳನ್ನು ರಚಿಸಿದ್ದು ಕಂಡುಬರುತ್ತದೆ. ಇದಲ್ಲದೆ ಬೇರೆಯವರಿಗೂ ವ್ಯಕ್ತಿಚಿತ್ರಗಳನ್ನು ಮಾಡಿಕೊಟ್ಟಿದ್ದಾರೆ. ಇವರು ಬೇರೆಯವರಿಗೆ ಮಾಡಿಕೊಟ್ಟ ವ್ಯಕ್ತಿಚಿತ್ರಗಳಲ್ಲಿ ಚಿತ್ರಿತಗೊಂಡಿರುವ ವ್ಯಕ್ತಿಗಳ ಅಕ್ಕಪಕ್ಕದಲ್ಲಿ ಕಟ್ಟಿಗೆಯ ಕ ಮೇಜು,ಅದರ ಮೇಲೆ ಚೀನಿಮಣ್ಣಿನ ಪಾತ್ರೆ, ಪಾತ್ರೆಯೊಳಗೆ ಹೂ ಬಳ್ಳಿಗಳು , ಪುಸ್ತಕಭಂಡಾರ, ಪಾತ್ರೆಯೊಳಗೆ ಕುಂಚಗಳು, ವ್ಯಕ್ತಿಯ ಹಿಂದೆ ಮತ್ತು ನೆಲದ ಮೇಲೆ ಹಾಸಿದ ಸುಂದರವಾದ ಚಿತ್ತಾಲಂಕಾರಗಳಿಂದ ಕೂಡಿದ ಹಾಸಿಗೆ ಇವೆಲ್ಲವೂ ವ್ಯಕ್ತಿಚಿತ್ರಗಳಲ್ಲಿ ವಸ್ತುವಿಷಯಗಳನ್ನಾಗಿ ಬಳಸಿಕೊಂಡಿದ್ದಾರೆ. ಇವರು ರಚಿಸಿದ ದೊಡ್ಡಪ್ಪ ಅಪ್ಪ ಮತ್ತು ಶರಣಬಸವಪ್ಪ ಅಪ್ಪ ಅವರು ಪೂರ್ಣ ಪ್ರಮಾಣ ಚಿತ್ರದಲ್ಲಿ ಅವರ ಕುಳಿತುಕೊಳ್ಳಲು ಬಳಸಿದ ಸಿಂಹಾಸನ, ಅದರ ಮೇಲೆ ಬೆಳ್ಳಿಯ ಕೊಡೆಗಳು, ನೆಲದ ಮೇಲೆ ರತ್ನಗಂಬಳಿ ಇವುಗಳನ್ನು ವಸ್ತುಗಳನ್ನಾಗಿ ಬಳಸಿಕೊಂಡು ಚಿತ್ರಿಸಿದ್ದಾರೆ.

3. ನಿವೃತ್ತಿಯ ನಂತರದಲ್ಲಿಯ ಕಲಾಕೃತಿಗಳು

ಖಂಡೇರಾವರು ಅಧ್ಯಾಪಕ ವೃತ್ತಿಯಲ್ಲಿದ್ದಾಗ ರಚಿಸಿದ ಕಲಾಕೃತಿಗಳಲ್ಲಿ ಪರ್ಯಕ್ರಮವನ್ನಾಧರಿಸಿದ ಕಲಾಕೃತಿಗಳನ್ನು ಹೊರತುಪಡಿಸಿ ಉಳಿದೆಲ್ಲಾ ರೀತಿಯಿಂದ ರಚಿಸಿದ ಕಲಾಕೃತಿಗಳನ್ನೇ ನಿವೃತ್ತಿಯ ನಂತರದಲ್ಲಿಯೂ ಮುಂದುವರೆಸಿಕೊಂಡು ಬಂದರು. ಖಂಡೇರಾವರು ಶರಣಬಸವೇಶ್ವರ ಕಲಾಮಹಾವಿದ್ಯಾಲಯದ ಚಿತ್ರಕಲಾ ವಿಭಾಗದಲ್ಲಿ ಇಪ್ಪತ್ತೇಳು ವರ್ಷಗಳು ಕಲಾಶಿಕ್ಷಕರಾಗಿ, ಸ್ನಾತಕೋತ್ತರ ಲಲಿತಕಲಾ ವಿಭಾಗದ ನಿರ್ದೇಶಕರಾಗಿ ಸೇವೆಯನ್ನು ಸಲ್ಲಿಸಿ, 1997 -98

ರಲ್ಲಿ ನಿವೃತಿಯನ್ನು ಹೊಂದಿದರು. ನಿವೃತ್ತಿ ಹೊಂದಿದ ನಂತರ ಖಂಡೇರಾವರು ಸ್ವತಂತ್ರರಾದರು. ಆದಕ್ಕೆ ಹೇಳೊದು ಕಲಾವಿದನು ಯಾವಾಗಲು ಸ್ವತಂತ್ರವನ್ನು ಬಯಸುತ್ತಾನೆ. ಯಾವುದೇ ಬಂಧನದಲ್ಲಿ ಸಿಲುಕುವುದನ್ನು ಕಲಾವಿದನಾದ ವನು ಇಷ್ಟಪಡುವದಿಲ್ಲ. ಸ್ವತಃ ಖಂಡೇರಾವರೇ ಹೇಳುವ ಹಾಗೆ ನಾನು ನಿವೃತ್ತಿಯಾದ ಮೇಲೆಯೇ ಕಲಾಕ್ರಿಯೆಯಲ್ಲಿ ಹೆಚ್ಚಿನ ರೀತಿಯಲ್ಲಿ ತೊಡಗುತ್ತಿದ್ದೇನೆ ಅಧ್ಯಾಪಕ ವೃತ್ತಿಯಲ್ಲಿದ್ದಾಗ ವಿಧ್ಯಾರ್ಥಿಗಳಿಗೆ ಬೋಧನೆಯನ್ನು ಮಾಡುವುದೇ ಹೆಚ್ಚಾಗಿರುತ್ತದೆ. ಇದು ಅಲ್ಲವೆಂಬಂತೆ ಅವರಿಗೆ ಆಗಾಗ ಹೊರಗಡೆ ಕರೆದುಕೊಂಡು ಹೋಗಿ ಸ್ಕೆಚ್ ಗಳನ್ನು ಮಾಡಲು ನಿಸರ್ಗಚಿತ್ರಗಳನ್ನು ಚಿತ್ರಿಸುವದು ಹೇಳಿಕೊಡುತ್ತಿದ್ದರು. ಹೀಗಾಗಿ ಅವರಿಗೆ ಕಲಾಕೃತಿಗಳನ್ನು ರಚಿಸಲು ಸಮಯವು ಸಿಗುತ್ತಿರಲಿಲ್ಲ. ವಿಧ್ಯಾರ್ಥಿಗಳಿಗೆ ಬೋಧನೆಯನ್ನು ಮಾಡುವಾಗ ಕೆಲವೊಂದು ಸಾರಿ ಕಲಾಕೃತಿಗಳನ್ನು ರಚಿಸಿದ್ದುಂಟು. ಇದಲ್ಲದೆ ಬಿಡುವಿನ ವೇಳೆಯಲ್ಲಿ ಆಗೊಮ್ಮೆ ಈಗೊಮ್ಮೆ ಯಂತೆ ಮನೆಯಲ್ಲಿ ಕುಳಿತುಕೊಂಡು ಕಲಾಕೃತಿಗಳನ್ನು ಚಿತ್ರಿಸುತ್ತಿದ್ದರು. ಇವೆಲ್ಲವುದರ ಜೊತೆಗೆ ನಾಡಿನ ಅನೇಕ ಕಡೆಗಳಲ್ಲಿರುವ ಕಲಾಶಾಲೆಗೆ ಉಪನ್ಯಾಸಕರಾಗಿ, ವಿಶೇಷ ಆಮಂತ್ರಿತರಾಗಿ ಹೋದಾಗ, ಕಲಾಶಿಬಿರಗಳಲ್ಲಿಯೂ ಹೋದಾಗ ಅಲ್ಲಿ ಪ್ರಾತ್ಯಕ್ಷಿಕೆಗಳನ್ನು ಮಾಡಿಬರುತ್ತಿದ್ದರು. ಪ್ರಾತ್ಯಕ್ಷಿಕೆಗಳನ್ನು ಮಾಡುವಾಗ ಹೆಚ್ಚಾಗಿ ಭಾವಚಿತ್ರ ಮತ್ತು ಅಮೂರ್ತ ಸಂಯೋಜನಾ ಕಲಾಕೃತಿಗಳನ್ನು ರಚಿಸುತ್ತಿದ್ದರು.

ಇವೆಲ್ಲವನ್ನು ನಾವು ಗಮನಿಸಿದಾಗ ಅವರು ನಿವೃತ್ತಿಯನ್ನು ಹೊಂದಿದ ಮೇಲೆಯೇ ಹೆಚ್ಚಿನ ರೀತಿಯಲ್ಲಿ ಕಲಾಚಟುವಟಿಕೆಗಳಲ್ಲಿ ತೊಡಗಿಕೊಂಡಿರುವದು ಕಂಡುಬರುತ್ತದೆ. ಬೇರೆ ವಿಭಾಗದವರು ನಿವೃತ್ತಿಯನ್ನು ಹೊಂದಿದಮೇಲೆ ವಿಶ್ರಾಂತಿ ಜೀವನವನ್ನು ನಡೆಸುತ್ತಾರೆ. ಆದರೆ ನಮ್ಮ ಕಲಾವಿಷಯವು ಹಾಗಲ್ಲ. ನಿವೃತ್ತಿಯಾದ ಮೇಲೆಯೇ ನಮಗೆ ಹೆಚ್ಚಿನ ರೀತಿಯಲ್ಲಿ ಕಲಾಕ್ರಿಯೆಯಲ್ಲಿ ತೊಡಗಬಹುದು. ಎಂದು ಖಂಡೇರಾವರು ತಮ್ಮಲ್ಲಿರುವ ಹುಮ್ಮಸ್ಸನ್ನು, ಕಲಾಸಕ್ತಿಯನ್ನು ಹೊರ ಹೊಮ್ಮಿಸುತ್ತಾರೆ. ಇವರು ನಿವೃತ್ತಿಯ ನಂತರದಲ್ಲಿ ರಚಿತವಾಗುತ್ತಿರುವ ಕಲಾಕೃತಿಗಳನ್ನು ನಾವು ಅವಲೋಕಿಸಿದಾಗ ಮನೆ ಮಠಗಳಿಗಾಗಿ ಖಾಸಗಿಯವರಿಗಾಗಿ, ಅನೇಕ ಭಾವಚಿತ್ರಗಳು ಪೌರಾಣಿಕ ಮತ್ತು ಧಾರ್ಮಿಕ ಕಲಾಕೃತಿಗಳನ್ನು ನಿರ್ಮಿಸಿದ್ದು ಕಂಡುಬರುತ್ತದೆ. ಇವೆಲ್ಲವೂ ನೈಜ ಸಂಜಯೊಜನಾ ಕಲಾಕೃತಿಗಳಾಗಿವೆ. ಈ ಹಂತದಲ್ಲಿ ಖಂಡೇರಾವರಿಂದ ನಿರ್ಮಿತಗೊಂಡಿರುವ ಹಲವಾರು ನೈಜ ಸಂಯೋಜನಾ ಕಲಾಕೃತಿಗಳನ್ನು ನಾವು ನಾಡಿನ ಹಲವಾರು ಕಡೆಗಳಲ್ಲಿರುವ ಮನೆ-ಮಠಗಳಲ್ಲಿ, ಮಂದಿರಗಳಲ್ಲಿ, ಖಾಸಗಿಯವರ ಮನೆಯಲ್ಲಿ ಕಾಣಬಹುದಾಗಿದೆ. ಇಂದಿಗೂ ಇವರು ನಿಸರ್ಗಚಿತ್ರಗಳನ್ನು ರಚಿಸುತ್ತಾರೆ. ಇವುಗಳಲ್ಲಿ ಬೇರೆ ಕಡೆಗೆ ಹೋಗಿ ಸ್ಥಳದಲ್ಲಿ ಕುಳಿತುಕೊಂಡು ರಚಿಸಿದ ಕಲಾಕೃತಿಗಳು ಕೆಲವಾದರೆ, ಛಾಯಾಚಿತ್ರಗಳನ್ನು ಆಧರಿಸಿದ ನಿಸರ್ಗ ಚಿತ್ರಗಳು ಕೆಲವುಗಳನ್ನು ನಾವು ಹೆಸರಿಸಬಹುದು. ಇವರು ಚಿತ್ರಿಸಿದ ಪೂಜ್ಯ ದೊಡ್ಡಪ್ಪ ಅಪ್ಪ ಮತ್ತು ಪೂಜ್ಯ ಶರಣಬಸವಪ್ಪ ಅಪ್ಪ ಅವರ ಪೂರ್ಣ ಪ್ರಮಾಣದ ವ್ಯಕ್ತಿಚಿತ್ರಗಳು ಇವರ ಕಲಾಸೃಷ್ಟಿಯ ವೈಖರಿಯನ್ನು ತಿಳಿಸುತ್ತದೆ. ಕಲಬುರ್ಗಿಯ ವಾಣಿಜ್ಯ ಮಹಾವಿಧ್ಯಾಲಯದಲ್ಲಿ ಬರುವ ಪೂಜ್ಯ ದೊಡ್ಡಪ್ಪ ಅಪ್ಪ ಸಭಾಮಂಟಪದಲ್ಲಿ ನಾವು ಈ ಎರಡೂ ಪೂರ್ಣ ಪ್ರಮಾಣದ ಕಲಾಕೃತಿಗಳನ್ನು ಕಾಣಬಹುದಾಗಿದೆ. ಇವರು ಚಿತ್ರಿಸಿದ ಭಾವಚಿತ್ರಗಳಲ್ಲಿ ನಾವು ಎರಡು ರೀತಿಯಲ್ಲಿ ವರ್ಣಗಾರಿಕೆಯ ಪ್ರಭಾವವನ್ನು ಗುರುತಿಸಬಹುದಾಗಿದೆ. ವಿಧ್ಯಾರ್ಥಿಗಳಿಗೆ ಬೋಧಿಸುವ ವೇಳೆಯಲ್ಲಿ ಮತ್ತು ಪ್ರಾತ್ಯಕ್ಷಿಕೆಗಳನ್ನು ನೀಡಲು ಹೋದಾಗ ,ಅಲ್ಲಿ ರಚಿಸುವ ಭಾವಚಿತ್ರಗಳಿಗೂ ಮತ್ತು ಬೇರೆಯವರಿಗೆ ರಚಿಸಿಕೊಟ್ಟ ಭಾವಚಿತ್ರಗಳಿಗೂ ತುಂಬ ವ್ಯತ್ಯಾಸವಿದೆ. ಪ್ರತ್ಯಕ್ಷಿಕೆಗಳನ್ನು ಮಾಡುವಾಗ ಚಿತ್ರದಲ್ಲಿ ತಮ್ಮದೇ ಆದ ಒಂದು ಶೈಲಿಯೊಂದಿಗೆ ಬಣ್ಣದಿಂದ ಭಾವಚಿತ್ರವನ್ನು ರಚಿಸುತ್ತಿದ್ದರೆ , ಬೇರೆಯವರಿಗೆ ಮಾಡಿಕೊಟ್ಟ ಭಾವಚಿತ್ರಗಳಲ್ಲಿ ನೈಜವಾಗಿ ಮೂಡಿಬರುವಂತೆ ತುಂಬ ಸುಂದರವಾಗಿ ಪರಿಪೂರ್ಣವಾದ ಆಕಾರದಲ್ಲಿ ಭಾವಚಿತ್ರಗಳು ಮೂಡಿಬಂದಿರುವುದು ನಾವು ಕಾಣಬಹುದಾಗಿದೆ. ಇದಲ್ಲದೇ ವಿಂಡೋಸರಣಿಯ ಮೇಲೆ ಹಲವಾರು ಅಮೂರ್ತ ಸಂಯೋಜನಾ ಕಲಾಕೃತಿಗಳನ್ನು ರಚಿಸಿದ್ದಾರೆ.

ಸಧ್ಯಕ್ಕೆ ಖಂಡೇರಾವರಿಗೆ 2000-01 ಮತ್ತು 2001-02 ರ ಅವಧಿಯ ಭಾರತದ ಅತ್ಯುನ್ನತ ಸಂಸ್ಥೆಯಾದ Human Resource Development ನವರು ಹಿರಿಯ ಕಲಾವಿದರಿಗೆ ನೀಡುವ ಫೆಲೋಶಿಫ ದೊರೆತಿದೆ. ಇದು ಎರಡು ವರ್ಷಗಳ ಅವಧಿಯಿಂದ ಕೂಡಿದ್ದಾಗಿದ್ದು ಮಾಸಿಕ 6,000/- ರೂ . ಯಂತೆ ಸಹಾಯಧನವನ್ನು ಒಳಗೊಂಡಿರುತ್ತದೆ. ಇಲ್ಲಿ ಜನಪದ ವಸ್ತು ವಿಷಯಕ್ಕೆ ಸಂಬಂಧಪಟ್ಟಂತೆ ಆದರಲ್ಲಿ ಸೂಚಿಸಲಾಗಿದ್ದರಿಂದ, ಜನಪದದ ಆಚಾರ, ವಿಚಾರಗಳಿಗೆ

ಸಂಬಂಧಪಟ್ಟಂತೆ ನೂರಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಈ ಕಲಾಕೃತಿಗಳು ಈ ಕಡೆ ನೈಜತೆಗೂ ಹೊಂದಿಕೊಳ್ಳದೇ, ಆಕಡೆ ಅಮೂರ್ತತೆಗೂ ಹೊಂದಿಕೊಳ್ಳದೇ ತಮ್ಮದೇ ಆದ ಒಂದು ಶೈಲಿಯೊಂದಿಗೆ ಚಿತ್ರಿಸಿದ್ದಾರೆ. ಚಿತ್ರದಲ್ಲಿ ವಸ್ತುವಿಷಯವನ್ನು ಬಿಟ್ಟು ಹಿಂದಿನ ಭಾಗದಲ್ಲಿ ವಿಂಡೋ ಸರಣಿಯಂತೆಯೆ ಬಣ್ಣವನ್ನು ವರೆಸಿ ಚಿತ್ರಿಸಿರುವುದನ್ನು ನಾವು ನೋಡಬಹುದು. ಹೀಗೆ ಖಂಡೇರಾವವರು ನಿವೃತ್ತಿಯ ನಂತರದಲ್ಲಿ ಈ ಎಲ್ಲ ವಿಷಯಗಳನ್ನಲ್ಲದೇ ಇನ್ನೂ ಹಲವಾರು ಪ್ರಯೋಗಗಳನ್ನುಮಾಡುತ್ತಾ ಇಂದಿಗೂ ದಿನಾಲು ಕಲಾಕ್ರೀಯೆಯಲ್ಲಿತಮ್ಮನ್ನುತೊಡಗಿಸಿಕೊಮಡಿದ್ದಾರೆ. ಖಂಡೇರಾವರು ಇಲ್ಲಿಯವರೆಗೆ ರಚಿಸಿದ ಕಲಾಕೃತಿಗಳಲ್ಲಿ ಅಧ್ಯಯನ ಕಾಲದಲ್ಲಿ ರಚಿಸಿದ ಕಲಾಕೃತಿಗಳು ಅಧ್ಯಾಪಕ ವೃತ್ತಿಯ ಕಾಲದಲ್ಲಿ ರಚಿಸಿದ ಕಲಾಕೃತಿಗಳು ಮತ್ತೆ ನಿವೃತ್ತಿಯ ನಂತರದಕಾಲದಲ್ಲಿ ರಚಿಸಿದ ಕಲಾಕೃತಿಗಳನ್ನು ನಾವು ಗಮನಿಸಿದಾಗ ಅವು ಕಾಲಕಾಲಕ್ಕೆ ಬದಲಾಗುತ್ತಾ ಬಂದಿರುವುದನ್ನು ಕಾಣಬಹುದಾಗಿದೆ. ಅಲ್ಲದೇ ಕಲಾಕೃತಿಗಳನ್ನು ನೋಡಿದಕೂಡಲೇ ಅವು ಯಾವ ಹಂತದಲ್ಲಿ ರಚನೆಗೊಂಡಿರುವವು ಎಂಬುದನ್ನು ಸೂಚಿಸುವಷ್ಟು ಸುಂದರವಾಗಿ ಮೂಡಿಬಂದಿರುವುದನ್ನು ನಾವು ಗಮನಿಸಬಹುದು. ಇವರು ರಚಿಸಿದ ವ್ಯಕ್ತಿ ಚಿತ್ರಗಳಲ್ಲಿ ಭಾವಪ್ರಾಧಾನ್ಯತೆಗೆ ಹೆಚ್ಚು ಮಹತ್ವವನ್ನು ಕೊಟ್ಟಿದ್ದಾರೆ

ಖಂಡೇರಾವರ ಕಲಾಕೃತಿಗಳನ್ನು ನಾವು ಗಮನಿಸಿದರೆ ಕಾಲದಿಂದ ಕಾಲಕ್ಕೆ ಅವರು ಚಿತ್ರಿಸುವ ವಸ್ತುವಿಷಯಗಳು ಬದಲಾಗುತ್ತಾ ಬಂದಿರುವುದನ್ನು ನಾವು ಕಾಣಬಹುದಾಗಿದೆ. ಅಧ್ಯಯನ ಕಾಲದಲ್ಲಿ ಚಿತ್ರಿಸಿದ ಕಲಾಕೃತಿಗಳ ವಸ್ತುವಿಷಯ, ಅಧ್ಯಾಪಕ ವೃತ್ತಿಯಲ್ಲಿಯ ಕಲಾಕೃತಿಗಳಲ್ಲಿಲ್ಲ. ಅಧ್ಯಾಪಕ ವೃತ್ತಿಯಲ್ಲಿ ರಚಿಸಿದ ಕಲಾಕೃತಿಗಳ ವಸ್ತು ವಿಷಯ ಮತ್ತು ನಿವೃತ್ತಿಯ ನಂತರದಲ್ಲಿ ರಚಿಸಿದ ಕಲಾಕೃತಿಗಳ ವಸ್ತುವಿಷಯಗಳು ಒಂದೇ ಎನಿಸಿದರೂ, ಅವುಗಳಲ್ಲಿಯೇ ಕೆಲವು ಬದಲಾವಣೆಗಳನ್ನು ಕಾಣಬಹುದು. ನಿವೃತ್ತಿಯ ನಂತರದಲ್ಲಿ ಇವರು ಪಠ್ಯಕ್ರಮವನ್ನಾಧರಿಸಿದ ಕಲಾಕೃತಿಗಳನ್ನು ಬಿಟ್ಟು ಅಧ್ಯಾಪಕ ವೃತ್ತಿಯಲ್ಲಿ ಚಿತ್ರಿಸಿದ ಕಲಾಕೃತಿಗಳೊಂದಿಗೆ ಅದೇ ವಿಷಯಗಳಿಗೆ ಸಂಬಂಧಪಟ್ಟಂತಾದರೂ ಅದರಲ್ಲಿಯೇ ಇನ್ನೂ ಹೆಚ್ಚಿನ ರೀತಿಯಲ್ಲಿ ಕಲಾಕೃತಿಗಳನ್ನು ರಚಿಸಿದ್ದು ಕಂಡುಬರುತ್ತದೆ. ಇಲ್ಲಿ ವಿಶೇಷವಾಗಿ ನಾವು ಗಮನಿಸಬಹುದಾದ ಅಂಶವೇನೆಂದರೆ ಅಧ್ಯಾಪಕ ವೃತ್ತಿಯಲ್ಲಿದ್ದಾಗ ಬೇರೆಯವರ ಆದೇಶದಂತೆ ಕಲಾಕೃತಿಗಳನ್ನು ಮಾಡುತ್ತಿದ್ದರು. ಆದರೆ ನಿವೃತ್ತಿಯ ನಂತರದಲ್ಲಿ ತಮ್ಮತನವನ್ನು ಅದರಲ್ಲಿ ತುಂಬಿ , ಕಲಾಕೃತಿಗಳನ್ನು ರಚಿಸಿದ್ದು ನಾವು ನೋಡಬಹುದು. ಉದಾಹರಣೆಯೊಂದಿಗೆ ನಾವು ತಿಳಿದುಕೊಳ್ಳಬೇಕಾದರೆ ಇವರು ಅಧ್ಯಾಪಕ ವೃತ್ತಿಯಿಂದ ನಿವೃತ್ತಿಯಾದ ಮೇಲೆ ಸ್ವತಂತ್ರವಾಗಿ ತಮಗೆ ಹೇಗೆ ಬೇಕೊ ಹಾಗೆ ತಮ್ಮತನವನ್ನು ಕಲಾಕೃತಿಗಳಲ್ಲಿ ತುಂಬಲು ಪ್ರಯತ್ನಿಸಿದ್ದಾರೆ. ಇವರಿಗೆ 2000-01 ರ ಹಿರಿಯ ಕಲಾವಿದರಿಗೆ ನೀಡುವ ಫೆಲೋಶಿಪ ದೊರೆತಿದೆ. ಇಂಥ ಒಂದು ಫೆಲೋಶಿಪನ್ನು ಪಡೆಯಲು ಇವರು ಸೂಚಿಸಿದ ವಿಷಯಗಳು ಜನಪದ ವಿಷಯಗಳಿಗೆ ಸಂಬಂಧಪಟ್ಟವುಗಳಾಗಿದ್ದವು. ಇವರು ಜನಪದವನ್ನೇ ವಸ್ತು ವಿಷಯವಾಗಿರಿಸಿಕೊಂಡು ಅದರಲ್ಲಿ ಉಪ ವಿಷಯಗಳ ಮೇಲೆ ಕಲಾಕೃತಿಗಳನ್ನು ರಚಿಸಿದ್ದಾರೆ. ಡೊಳ್ಳು ಕುಣಿತ, ನಂದಿಕೋಲು ಮೆರವಣಿಗೆ , ಜಾತ್ರೆ, ಪುರವಂತರ ಆಟ, ಜೋಕುಮಾರ, ಹುಲಿವೇಷದಾಟ , ಅಲೈ ಆಡುವದು, ಕಾಡಸಿದ್ದರು, ಸುಡುಗಾಡುಸಿದ್ದರು, ಜೋಗತಿಯರು, ಗಂಗೆತ್ತುಗಳನ್ನು ಮನೆಮನೆಗೆ ಕರೆದುಕೊಂಡು ಬರುವವರು , ಬುರಬುರಪೋಚಮ್ಮ ಇಂಥ ಅನೇಕ ಜನಪದ ವಿಷಯಗಳ ಮೇಲೆ ಕಲಾಕೃತಿಗಳನ್ನು ರಚಿಸಿದ್ದಾರೆ. ಈ ಕಡೆ ನೈಜತೆಯಿಂದ ಕೂಡಿದ ಮತ್ತು ಅಷ್ಟೆ ಅಮೂರ್ತತೆ ಗೆ ಹೋಲದಂತೆ ಕಲಾಕೃತಿಗಳು ರಚಿತಗೊಂಡಿವೆ. ಇವುಗಳಲ್ಲಿ ಆಯಾವಿಷಯಕ್ಕೆ ಸಂಬಂಧಪಟ್ಟಂತೆ ಅವರ ದೈನಂದಿನ ಬದುಕಿನ, ಕಾಯಕ ವೃತ್ತಿಯ, ಅವರ ವೇಷಭೂಷಣಗಳು , ಅವರು ಬಳಸುವ ಸಾಮಗ್ರಿಗಳು, ಗಂಗೆತ್ತು, ಜೊಳಿಗೆ, ಶಂಖ ಶಸ್ತ್ರಗಳು, ವೀರಭದ್ರನ ಅವತಾರವೆಂಬಂತೆ ರುಂಡಗಳಿಂದ ಕೂಡಿದ ಹಾರಗಳು, ಡೊಳ್ಳುಗಳು, ನಂದಿಕೋಲು, ಎಲ್ಲಮ್ಮನ ಮೂರ್ತಿ, ಜೋಕುಮಾರನ ಸಲುವಾಗಿ ಬಳಸಿದ ಬಟ್ಟೆಗಳು ಇಂಥ ಹಲವಾರು ವಸ್ತುಗಳನ್ನು ಇಲ್ಲಿರುವ ವಿಷಯಗಳಿಗೆ ಬಳಸಿಕೊಂಡು ಕಲಾಕೃತಿಗಳನ್ನು ರಚಿಸಿದ್ದಾರೆ. ಖಂಡೇರಾವರು ಆಯಾ ಹಂತಗಳಿಗೆ ತಕ್ಕಂತೆ ವಸ್ತು ವಿಷಯವನ್ನು ಬಳಸಿಕೊಂಡು ಕಲಾಕೃತಿಗಳನ್ನು ರಚಿಸಿದ್ದಾರೆ. ಇದಲ್ಲದೇ ಭಾವಚಿತ್ರಗಳನ್ನು ರಚಿಸುವದರಲ್ಲಿ ಮತ್ತು ನೈಜಸಂಯೋಜನಾ ಕಲಾಕೃತಿಗಳನ್ನು ಚಿತ್ರಿಸುವದರಲ್ಲಿ ಆಯಾ ವಿಷಯಗಳಿಗೆ ಸಂಬಂಧಪಟ್ಟಂತೆ ವಸ್ತುಗಳನ್ನು ಬಳಸಿಕೊಂಡು ಕಲಾಕೃತಿಗಳನ್ನು ರಚಿಸಿದ್ದಾರೆ. ಹೀಗೆ ಖಂಡೇರಾವ ರ ಪ್ರತಿಯೊಂದು ಹಂತದಲ್ಲೂ ನಿರ್ಮಾಣಗೊಂಡಿರುವ ಕಲಾಕೃತಿಗಳಲ್ಲಿ ಆಯಾಹಂತದಲ್ಲಿಯ ವಿಷಯಗಳನ್ನು ಮತ್ತು ವಸ್ತು ವೈಶಿಷ್ಟತೆಯನ್ನು ನಾವು ಇಲ್ಲಿ ಕಾಣಬಹುದಾಗಿದೆ.

ಖಂಡೆರಾವರು ಚಿತ್ರಿಸಿದ ಕಲಾಕೃತಿಗಳ ವರ್ಗೀಕರಣ

- 1. ರೇಖಾಚಿತ್ರಗಳು
  - 1. ಪೆನ್ಸಿಲ್ ಮಾಧ್ಯಮದ ಚಿತ್ರಗಳು
    - 1.1 ನಿಸರ್ಗಚಿತ್ರಗಳು
    - 1.2 ರೂಪದರ್ಶಿಯರನ್ನು ಬಳಸಿಕೊಂಡು ಚಿತ್ರಿಸಿದ ಚಿತ್ರಗಳು
      - i. ಮೂರು ನಾಲ್ಕಾಂಶ ಭಾಗದ ಚಿತ್ರಗಳು
      - ii ಸಂಪೂರ್ಣ ಪಾರ್ಶ್ವ(side) ಮುಖದ ಚಿತ್ರಗಳು
      - iii ಜೀವಮಾದರಿ ಚಿತ್ರಗಳು
  - 2. ಇಂಕ ಮಾಧ್ಯಮದ ಚಿತ್ರಗಳು
    - 2.1 ನಿಸರ್ಗಚಿತ್ರಗಳು
    - 2.2 ಸಂಯೋಜನಾ ಚಿತ್ರಗಳು
      - i. ದೈನಂದಿನ ಅಭ್ಯಾಸದ ಅಂಕನೆ (ಸ್ಕೆಚ್)ಚಿತ್ರಗಳು
      - ii ಭೂದೃಶ್ಯದ ಚಿತ್ರಗಳು
- 2. ವರ್ಣಚಿತ್ರಗಳು
  - 1.ಜಲವರ್ಣಚಿತ್ರಗಳು
    - 1.1 ನಿಸರ್ಗಚಿತ್ರಗಳು
    - 1.2 ಭಿತ್ತಿಚಿತ್ರಗಳು
    - 1.3 ಸ್ಥಿರ ಚಿತ್ರಗಳು
  - 2. ತೈಲವರ್ಣಚಿತ್ರಗಳು
    - 2.1 ವ್ಯಕ್ತಿಚಿತ್ರಗಳು
      - i. ಪಾತ್ರಕ್ಕೆಕೆಗಳನ್ನು ಮಾಡಿದ ಚಿತ್ರಗಳು
      - ii ಛಾಯಾ ಚಿತ್ರಗಳನ್ನು ಆಧರಿಸಿ ಚಿತ್ರಿಸಿದ ಚಿತ್ರಗಳು
    - 2.2 ಸ್ಥಿರಚಿತ್ರಗಳು
    - 2.3 ನಿಸರ್ಗ ಚಿತ್ರಗಳು
    - 2.4 ಸಂಯೋಜನಾ ಚಿತ್ರಗಳು
      - i ನೈಜ ಸಂಯೋಜನಾ ಚಿತ್ರಗಳು
      - ii ಆಧುನಿಕ ಸಮ್ಮಿಶ್ರಣ ಶೈಲಿಯ ಸಂಯೋಜನಾ ಚಿತ್ರಗಳು
      - iii ಅಮೂರ್ತ ಸಂಯೋಜನಾ ಚಿತ್ರಗಳು

1. ರೇಖಾಚಿತ್ರಗಳು :

ಮಾನವನ ಸೃಜನಶೀಲ ಮನಸ್ಸು ಅಭಿವೃದ್ಧಿಗಾಗಿ ಕಂಡುಕೊಂಡ ಹಲವಾರು ಮಾಧ್ಯಮಗಳಲ್ಲಿ ಚಿತ್ರಕಲೆಯೂ ಒಂದು ಸಾಹಿತ್ಯ, ಸಂಗೀತ, ನೃತ್ಯ, ನಾಟ್ಯ, ಶಿಲ್ಪಮುಂತಾದ ಅಭಿವ್ಯಕ್ತ ಮಾಧ್ಯಮದ ಕಲೆಗಳಂತ ಚಿತ್ರಕಲೆ ತುಂಬಾ ವಿಶಿಷ್ಟವಾದ ದೃಶ್ಯಮಾಧ್ಯಮ. ಇದರಲ್ಲಿ ಎರಡು ಪ್ರಮುಖವಾದ ಭಾಗಗಳಿವೆ. ಒಂದು ರೇಖಾಚಿತ್ರಕಲೆ. ಇನ್ನೊಂದು ವರ್ಣಚಿತ್ರಕಲೆ. ಇವು ಒಂದು ರೀತಿಯಲ್ಲಿ ವಾಸ್ತುಕಲೆ ಮತ್ತು ಶಿಲ್ಪಕಲೆಗಳಿದ್ದ ಹಾಗೆ. ಒಂದನ್ನು ಇನ್ನೊಂದರಿಂದ ಬೇರ್ಪಡಿಸಲಾರದಷ್ಟು ಇವುಗಳ ಅನ್ಯೋನ್ಯತೆ ಇದೆ. ರೇಖೆ ಮತ್ತು ವರ್ಣಚಿತ್ರಕಲೆಯಲ್ಲಿ ಜೀವ ಮತ್ತು ಆತ್ಮವಿದ್ದಂತೆ . ಪ್ರಾಚೀನ ಕಾಲದಲ್ಲಿ ರೇಖಾಚಿತ್ರ ಮತ್ತು ವರ್ಣಚಿತ್ರ ಬೇರೆ ಬೇರೆ ಎಂದು ಪರಿಗಣಿಸಿರಲಿಲ್ಲ. ಚಿತ್ರವೆಂದಾಗ ಅದೊಂದು ಸಮಗ್ರ ರಚನೆ ಎಂಬ ಭಾವನೆ ಇತ್ತು. ಗ್ರೀಕ್ ಮತ್ತು ಲ್ಯಾಟಿನ್ ಭಾಷೆಯಲ್ಲಿ ಹಾಗೆಯೇ ಚೈನಾ ಮತ್ತು ಜಪಾನ ಚಿತ್ರಕಲಾ ಸಂಗ್ರಹಾಲಯದಲ್ಲಿ ಸಹ ಚಿತ್ರಕಲೆ ಎಂದರೆ ರೇಖಾಚಿತ್ರ ಮತ್ತು ವರ್ಣಚಿತ್ರಕಲೆಗಳೆರಡನ್ನು ಕುರಿತು ಇಡಿಯಾಗಿ ಅರ್ಥೈಸಲಾಗುತ್ತದೆ. ವರ್ಣ ಚಿತ್ರಕಲೆಯಲ್ಲಿ ಕೂಡಾ ಏಕವರ್ಣರೇಖಾಚಿತ್ರಗಳು ಬಹುವರ್ಣ ರೇಖಾಚಿತ್ರಗಳು ಇದ್ದು ರೇಖಾಚಿತ್ರಕಲೆ ಬಿಡಿಯಾಗಿ ಮತ್ತು ವರ್ಣಮಾಧ್ಯಮದಲ್ಲಿ ಇಡಿಯಾಗಿ ಬಳಕೆಗೊಂಡು ಚಿತ್ರಕಲಾ ಮಾಧ್ಯಮಗಳಲ್ಲಿ ತನ್ನ ಅನನ್ಯತೆಯನ್ನು ಉಳಿಸಿಕೊಂಡು ಬಂದಿದೆ.[1]

ರೇಖೆಯು ಚುಕ್ಕೆಗಳಿಂದ ಒಂದು ಸ್ಥಳದಲ್ಲಿ ಆವೃತವಾಗಿರುತ್ತದೆ. ನಾವು ನೋಡಿದರೆ ದೃಶ್ಯ ಅಥವಾ ಮಾಡಿದ ಕಲ್ಪನೆ ರೇಖೆಯ ಮೂಲ ಆಕಾರದಷ್ಟು ಹೋಲುತ್ತದೆ. ಇದು ಆನಂತರದ ಒಂದು ಆಕಾರದ ಅಥವಾ ವಸ್ತುವಿನ ರೇಖಾಚಿತ್ರವಾಗುತ್ತದೆ. "Man's earliest artitistic endeavours were simple drawing with pigments on cave walls . That artistic urgeelicits even today the fascination and admiration of the onlooker for the discipline of the line drawing " ಹೀಗಾಗಿ ಚಿತ್ರಕಲೆ ಒಂದು ರೀತಿಯಲ್ಲಿ ಚಿತ್ತಾಪಹರಣ ಪ್ರಕ್ರಿಯೆಯನ್ನುಂಟುಮಾಡುವಂತಹದ್ದು. ಎಲ್ಲಿ ಸೋಬಗಿದೆಯೋ, ಸೌಂದರ್ಯವಿದೆಯೋ ಅಲ್ಲಿ ಹಿರಿಹಿಗ್ಗಿಸುವ ಸೌಂದರ್ಯಾನುಭೂತಿಯನ್ನುಂಟು ಮಾಡುವ ಗುಣವಿರುವದು. ಕಲೆ ಉಂಟುಮಾಡುವ ಅನುಭವ ಅನಿರ್ವಚನೀಯವಷ್ಟೆ ಅಲ್ಲ ; ಅದರ ಆಸ್ವಾದನೆಯಿಂದುಂಟಾಗುವ ಧನ್ಯತಾಭಾವ ತುಂಬಾ ಬೆಲೆಯುಳ್ಳದ್ದು ; ಹೃದಯ ವೈಶಾಲ್ಯವನ್ನುಂಟುಮಾಡುವಂಥದ್ದು[2] ಹೀಗೆ ಕಲೆಯು ಒಂದು ಕ್ರೀಯೆಯಿದ್ದಂತೆ ಈ ಕಲೆಯು ಎಂದು ಪ್ರಾರಂಬವಾದದ್ದು ಎಂದು ಹೇಳಲು ತುಂಬ ಸುಲಭದ ಮಾತಲ್ಲ. ಯಾಕೆಂದರೆ ಈ ಕಲೆಯ ಹುಟ್ಟು ಮತ್ತು ಬೆಳವಣಿಗೆಯು ಎಂದು ಮಾನವನು ಪ್ರಾಚೀನಕಾಲದಲ್ಲಿ ಗುಹೆಗಳಲ್ಲಿ ವಾಸಮಾಡತೊಡಗಿನೋ, ಮತ್ತು ಅವನು ತನ್ನ ಮನಸ್ಸಿನಲ್ಲಾದ ಭಾವನೆಗಳನ್ನು ವ್ಯಕ್ತಪಡಿಸುವದಕ್ಕೋಸ್ಕರ ಅಲ್ಲಿ ತನಗೆ ದೊರೆತ ಒಂದು ಸಾಧನದಿಂದ ಗೀಚಿದನೊ, ಕೊರೆದನೊ, ಅದೇ ಕಲೆಯ ಸೃಷ್ಟಿಯಾಯಿತು. ಎಂದು ಹೇಳಬಹುದು. ಹೀಗಾಗಿ ಕಲೆಯ ಹುಟ್ಟು ಬಹು ಪ್ರಾಚೀನವಾದದ್ದು ಎಂದಂತಾಯಿತು. ಮೊಟ್ಟಮೊದನೆದಾಗಿ ಮಾನವನಿಂದ ರಚಿತವಾದ ಕಲಾಕೃತಿಗಳನ್ನು ರೇಖೆಗಳಿಂದಲೇ ರಚಿತಗೊಂಡವೆಂದು ನಾವು ಗುರುತಿಸಬಹುದು. ತದನಂತರ ಅವನು ಅದರಲ್ಲಿಯೇ ಹೆಚ್ಚಿನದನ್ನು ಕಂಡುಕೊಂಡನೆಂದು ತಿಳಿದುಬರುತ್ತದೆ.

ಯಾವುದೇ ಒಂದು ಕಲಾಕೃತಿ ರಚಿಸಬೇಕಾದರೆ ಅದಕ್ಕೆ ಪೂರ್ವವಾಗಿ ರೇಖೆಯು ಪ್ರಮುಖ ಪಾತ್ರವಹಿಸುತ್ತದೆ. ಹೀಗೆ ರೇಖೆಗಳಿಲ್ಲದೆ ಕಲಾಕೃತಿಗಳಿಲ್ಲ. ಎಂಬ ಮಾತು ಸತ್ಯ. A.S.Raman ರವರು ರೇಖೆಯನ್ನು ಕುರಿತು ಹೀಗೆ ಹೇಳುತ್ತಾರೆ. "Line speaks its own language and speaks best through figure[3] ಎಂದು

---

1. ಡಾ. ಎಸ್.ಸಿ. ಪಾಟೀಲ : ವರ್ಣಸಂಚಯ , ಪುಟ 15
2. ಡಾ. ಎಸ್.ಸಿ. ಪಾಟೀಲ : (ಸಂ.) ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು ಪುಟ 33
3. Laxmi Venkatraman : Between the lines, Page No. 7.

ಹೇಳಿದರೆ ಲಕ್ಷ್ಮಿ ವೆಂಕಟರಾಮನ್‌ರವರು "Drawing is the basis of art, be it painting,sculpture, graphics arts like etching and engraving , Architecture or Crafts " [4] ಎಂದು ಅಭಿಪ್ರಾಯ ಪಡುತ್ತಾರೆ. Any art may be drawing or painting is not just individual stylished representation of the objects seen, it is also a mental respense to the reaction to the situation " [5] V.M. Solapurkar ರವರ ಪ್ರಕಾರ " Drawing is the motiveted action on two dimensional surface. that leaves a residual meaning or message bearing mark as a fairly permanent from of expression" [6] ಹೀಗೆ ಹಲವಾರು ಕಲಾವಿದರು ಕಲಾ ನೈಪುಣ್ಯರು ರೇಖೆಗಳ ಬಗ್ಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾ ಬಂದಿದ್ದಾರೆ. ರೇಖೆಯೆಂಬುದು ಚಿತ್ರಕಲೆಯ ಜೀವಾಳ ರೇಖೆಯಿಲ್ಲದಿದ್ದರೆ ಆ ಕಲಾಕೃತಿಯಲ್ಲಿ ಗಡುಸುತನವಿರುವುದಿಲ್ಲ. ಯಾವುದೇ ಕಲಾಕೃತಿಯಿರಲಿ , ವರ್ಣಕಲಾಕೃತಿಯಿದ್ದರೂ ಕೂಡಾ ನಾವು ಅದರಲ್ಲಿ ರೇಖೆಯ ಆಕಾರವನ್ನು ಕಾಣಬಹುದು.ಹಲವಾರು ಚಿತ್ರಕಲಾವಿದರು ತಮ್ಮ ರೇಖೆಗಳಿಂದಲೇ ಬೆಳಕಿಗೆ ಬಂದಿರುವುದನ್ನು ಮತ್ತು ಅವರು ರೇಕಾಚಿತ್ರಕಲಾವಿದರೆಂದೇ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಅಂಥವರಲ್ಲಿ ಪ್ರಮುಖ ಉದಾಹರಣೆಯಾಗಿ ಕೆ.ಕೆ. ಹೆಬ್ಬಾರ, ಶಂಕರ ಪಾಟೀಲ , ಆದಿಮೂಲಂ, ರಾಮಮೂರ್ತಿಯವರಂಥ ಹಲವಾರು ಕಲಾವಿದರನ್ನು ಹೆಸರಿಸಬಹುದು. ಕೆ.ಕೆ.ಹೆಬ್ಬಾರನ್ನು ಇಂದು ನಾವು ಗುರುತಿಸುವದು ಅವರ ರೇಖಾಚಿತ್ರಗಳಿಂದಲೇ ಅವರು ರೇಖಾಚಿತ್ರಕಲಾವಿದರೆಂದೇ ಹೆಚ್ಚು ಚಿರ ಪರಿಚಿತರು . ಅವರ ರೇಖೆಗಳು ಹೆಚ್ಚು ಶಕ್ತಿಯುತವಾದ ಸ್ಥಾನವನ್ನು ಪಡೆದಿವೆ. ಕಲಾವಿದರಿಗೆ ಅನೇಕ ವಿಧದಲ್ಲಿ ಪ್ರೇರಣೆ ದೊರಕುವದುಂಟು ಕೆಲವೊಮ್ಮೆ ಪ್ರತ್ಯೇಕವಾಗಿ ಕೆಲವೊಮ್ಮೆ ಪರೋಕ್ಷವಾಗಿ, ಆದರೆ ಕಲಾಕಾರನ ಮನಸ್ಸು ಬುದ್ಧಿಶಕ್ತಿ ಸರ್ವದಾ ಜಾಗೃತವಾಗಿದ್ದು ಸಂವೇದನಾಶೀಲವಾಗಿರಬೇಕು. ಎನ್ನುವದಂತೂ ಅತ್ಯವಶ್ಯಕ ಸಮಾಜದ ಕೋಟಲೆ, ಸಂಘರ್ಷ, ನಿರಾಶೆ ಹಾಗೂ ಉಲ್ಲಾಸ, ದ್ವಂದ್ವ-ಇವೆಲ್ಲವೂ ಕಲಾಕಾರನ ಸಂವೇದನಾ ಶೀಲ ಮನಸ್ಸನ್ನು ಉತ್ತೇಜಿಸಲುಸಮರ್ಥವಾಗುತ್ತದೆ. [7]

ಭಾರತೀಯ ಚಿತ್ರಕಲೆಯಲ್ಲಿ ರೇಖೆಗೆ ಪ್ರಥಮ ಸ್ಥಾನವನ್ನು ಕಲ್ಪಿಸಿಕೊಡಲಾಗಿದೆ. ಶಿಲ್ಪಶಾಸ್ತ್ರಗ್ರಂಥದಲ್ಲಿ ರೇಖಾ ಪ್ರಶಂಸತಿ ಆಚಾರ್ಯ ಎಂದು ಕರೆದಿವೆ. ಅಂದರೆ ಆಚಾರ್ಯರು ರೇಖೆಯನ್ನು ಪ್ರಶಂಸಿಸುತ್ತಿರುವದನ್ನು ಅವು ತಿಳಿಸುತ್ತವೆ. ಚಿತ್ರಕರ್ಮದಲ್ಲಿ ರೇಖಾಚಿತ್ರವೇ ಮೊದಲ ಹೆಜ್ಜೆಯಾಗಿದೆ. ರೇಖಾಕರ್ಮದ ವಿವರವನ್ನು ಚಿತ್ರಿಸುವದಕ್ಕೆ ರೇಖಾಪಾತವೆಂದು ಹೆಸರು. ಸೂಕ್ಷ್ಮರೇಖೆಯನ್ನು ಚಿತ್ರಿಸಿಕೊಳ್ಳುವುದಕ್ಕೆ ಕರ್ಷಕರ್ಮವೆಂದು ಶಾಸ್ತ್ರಗ್ರಂಥಗಳು ಕರೆದಿವೆ. ವಿಷ್ಣುಧರ್ಮೋತ್ತರ ಪುರಾಣದಲ್ಲಿ ಪೂರ್ವಾಚಾರ್ಯರು ರೇಖೆಯ ಪ್ರಾಚೀನತೆಯನ್ನು ಶ್ಲಾಘಿಸುವ ಉಲ್ಲೇಖವಿದೆ. ಅಭಿಲಾಷಿತಾರ್ಥ ಚಿಂತಾಮಣಿಯಲ್ಲಿ ಭಿತ್ತಿಯ ಸಿದ್ದತೆಯ ನಂತರ ಮೊದಲಿಗೆ ಹಾಕುವ ಕರಡು ನಕ್ಷೆಯನ್ನು ಆಕಾರ ಮಾತ್ರಿಕಾಲೇಖ ಎಂದೂ ಬಣ್ಣಗಳನ್ನು ತುಂಬಿದ ಮೇಲೆ ಅಂತಿಮವಾಗಿ ಹಾಕುವ ರೇಖೆಗಳನ್ನು ಆಕಾರ ಜಾನಿಕಾಲೇಖಾ ಎಂದೂ ಹೆಸರಿಸಲಾಗಿದೆ. ಅಂತಿಮ ರೇಖೆಯನ್ನು ಅರಗಿನ ಬಣ್ಣದಿಂದ ಹಾಕುತ್ತಿದ್ದು ಇದನ್ನು ಕಾವ್ಯಗಳು ಲಾಕ್ಷಾರಸರೇಖಾಸಿದ್ಧಿ ಎಂದು ಕರೆದಿವೆ. ತಿಟ್ಟ, ತಿಟ್ಟಮಿಡು ಇತ್ಯಾದಿ ಪ್ರಯೋಗಗಳು ಪ್ರಾಚೀನ ಸಾಹಿತ್ಯದಲ್ಲಿ ಪ್ರಯೋಗವಾಗಿವೆ. ಇವುಗಳಿಗೆ ಕುಂಚದಿಂದ ಬರೆದ ನಕ್ಷೆ, ರೇಖೆಗಳೆಂದು ಅರ್ಥೈಸಲಾಗುತ್ತದೆ. ಶಬ್ದಮಣಿದರ್ಪದಲ್ಲಿ ತಿಟ್ಟಮಿಡು ಚಿತ್ರಂ ಪ್ರಾರಂಭ ಎಂದು ಅರ್ಥವಿದೆ. ಅಂದರೆ ಚಿತ್ರದ ಆರಂಭದಲ್ಲಿ ಹಾಕಿಕೊಳ್ಳುವ ಕರಡು ರೇಖಾಚಿತ್ರ (Rough Sketch) ಇದಾಗಿದೆ. "Line's

---

4. Laxmi Venkatraman : Between the lines, Page No. 13
5. Shankar Patil : The living lines, Page No. 7
6. Shankar Patil : The living lines, Page No. 34
7. ಎನ್.ಮರಿಶಾಮಾಚಾರ್ : ಕೆ.ಕೆ.ಹೆಬ್ಬಾರ, ಪುಟ 17

[illegible]

not only enclose from , but develop the from lines could merely be representative , or they might be creative [8] ಪ್ರೊ.ಎಸ್.ಕೆ. ರಾಮಚಂದ್ರರಾವರು ಹೇಳುವಮಾತು ತುಂಬಾ ಔಚಿತ್ಯಪೂರ್ಣವಾಗಿದೆ. ಯಾಕೆಂದರೆ ರೇಖೆಯು ಬರೀ ರೇಖೆಯಾಗಿರದೇ ಅದು ಕಲಾಕೃತಿಯ ಇತರ ವಿಷಯಗಳಿಗೂ ಹೊಂದಿಸುವ ಕೊಂಡಿಯಂತಿದೆ. ಹೀಗಾಗಿ ರೇಖೆಯು ಕಲಾಕೃತಿಯ ಆಧಾರಸ್ಥಂಭವೆನ್ನುವ ಮಾತು ಅಕ್ಷರಶಃ ಸತ್ಯವಾಗಿದೆ. ರೇಖೆ ಅನೇಕ ಬಿಂದುಗಳಿಂದ ರಚಿತವಾಗುತ್ತದೆ. ಇದು ನಿರ್ಮಿತ ಜಾಗದಲ್ಲೇ ವರ್ಣದಲ್ಲಿ ಅಥವಾ ಛಾಯೆಯಲ್ಲಿ ತನ್ನ ಮಿತಿಯಲ್ಲೇ ಇರುತ್ತದೆ. ತನ್ನ ಮಿತಿಯಲ್ಲೇ ಇರುವ ಭಾಗಕ್ಕೆ ರೇಖೆ ಎನ್ನುತ್ತಾರೆ. ಕ್ರಮವಾದ ಜಾಮಿತಿಕ ಆಕಾರಗಳು ಸರಳವಾಗಿ ರೇಖೆಗಳಿಂದ ರಚಿಸಲ್ಪಡುತ್ತದೆ. ರೇಖೆಗಳ ವಿನ್ಯಾಸಗಳು ಅತೀ ನವೀರಾದ ರೇಖೆ, ವೀರವತ್ತಾದ ರೇಖೆ, ಲಂಬರೇಖೆ, ಓರೆಯಾದ ರೇಖೆ, ಸಮಾಂತರ ರೇಖೆ, ವಕ್ರರೇಖೆ, ಲಯಬದ್ಧವಕ್ರಾಕೃತಿರೇಖೆ, ವರ್ತುಲ ರೇಖೆ [9] ಹೀಗೆ ರೇಖಾಚಿತ್ರ ಕಲಾವಿದರಿಗೆ ಮೂಲಭೂತವಾದ ಕಲೆಯಾಗಿದೆ. ಸೃಜನಶೀಲ ಅಭಿವ್ಯಕ್ತಿಯ ಕ್ಷೇತ್ರವಾಗಿದ್ದು, ಅದು ಸ್ವಯಂ ಪ್ರೇರಿತವಾಗಿರಬಹುದು. ಸಮಯಕ್ಕೆ ತೋಚಿದುದಾಗಿರಬಹುದು. ಕಾಲ್ಪನಿಕ ಅಥವಾ ಅಮೂರ್ತವಾಗಿರಬಹುದು. ರೇಖಾ ಚಿತ್ರಗಳ ಮೂಲಕ ಕಲಾವಿದ ತನ್ನ ಅಭಿವ್ಯಕ್ತಿ ಭಾವನಾ ಲಕ್ಷಣಗಳನ್ನು ವ್ಯಕ್ತಗೊಳಿಸುತ್ತಾನೆ. ರೇಖೆಗಳಿಂದ ರೂಪಿತವಾಗಿದ್ದು, ಅವು ಜೀವಂತಿಕೆಯಿದ್ದು ಎರಡು ವಿಧವಾಗಿ ವಿಂಗಡಿಸಬಹುದು. ಒಂದು ಸಾಂಪ್ರದಾಯಿಕ, ಇನ್ನೊಂದು ಅಭಿವ್ಯಕ್ತವಾದ.[10] "A line can befirm like a pillar. A line can convey the beautiful movement of a dance. So, we can say line has life and therefore it is capable of expressing emotions and bringing out feelings variations in the thickness of a line can create depth" ಎಂದು ಹಲವಾರು ಕಲಾವಿದ್ವಾಂಸರು ಈ ರೇಖೆಗಳ ಬಗ್ಗೆ ವಿಶೇಷಗಳು ಮತ್ತು ಅದರ ಪ್ರಭಾವ ಕಲಾಕೃತಿಯ ಸಂಪೂರ್ಣ ಮೈವಳಿಕೆಯಲ್ಲಿ ಅಳವಡಿಸಿರುತ್ತದೆ. ರೇಖೆಗಳನ್ನು ಚಿತ್ರಿಸುವಾಗ ವರ್ಣಗಳಿಂದಲೂ ರೇಖೆಗಳನ್ನು ಚಿತ್ರಿಸಬಹುದು. ಕೇವಲ ಮಸಿಯಿಂದಲೂ, ಸೀಸದ ಕಡ್ಡಿಯಿಂದಲೂ ಅಥವಾ ಆದಿಮಾನವರು ಕುಟ್ಟಿಕೊರೆದ, ಗೀಚಿದ ಚಿತ್ರಗಳು ಈ ಎಲ್ಲ ಮಾಧ್ಯಮಗಳಿಂದಲೂ ನಾವು ರೇಖಾ ಚಿತ್ರಗಳನ್ನು ಚಿತ್ರಿಸಿದ್ದನ್ನು ಕಾಣಬಹುದಾಗಿದೆ. ಖಂಡೇರಾವರ ರೇಖಾಚಿತ್ರಗಳಲ್ಲಿ ನಾವು ಇವೆಲ್ಲವುಗಳ ಅಂಶಗಳನ್ನು ಗಮನಿಸಬಹುದಾಗಿದೆ.

ಕಲಾವಿದ ಜಿ. ಎಸ್. ಖಂಡೇರಾವರು ಚಿತ್ರಕಲೆಯ ಎಲ್ಲ ಮಾಧ್ಯಮಗಳಲ್ಲೂ ಕೈಚಳಕವನ್ನು ಹೊಂದಿದ ಕಲಾವಿದರೆಂದರೆ ತಪ್ಪೆನಿಲ್ಲ. ಅವರು ತಮ್ಮ ಕಲಾವಿದ್ಯಾಭ್ಯಾಸದ ಪ್ರಾಥಮಿಕಹಂತದಲ್ಲಿ ಹೆಚ್ಚು ನಿಸರ್ಗ ಚಿತ್ರಗಳನ್ನು ರಚಿಸುತ್ತಿದ್ದರೆಂದು ತಿಳಿದುಬರುತ್ತದೆ. ನಿಸರ್ಗ ಚಿತ್ರಗಳನ್ನು ರಚಿಸುವುದು, ಸ್ಕೆಚ್‌ಗಳನ್ನು ಮಾಡುವದು ತಮ್ಮ ಮುಂಜಾನೆಯ ದೈನಂದಿನ ಕೆಲಸವೆಂದೇ ಅವರು ಭಾವಿಸಿಕೊಂಡಿದ್ದರು. ನಿಸರ್ಗ ಚಿತ್ರಗಳನ್ನು ರಚಿಸುವ ಮೊದಲು ಅವರು ಎದುರಿಗಿದ್ದ ದೃಶ್ಯದ ರೇಖಾಚಿತ್ರವನ್ನು ಮಾಡಿ, ನಂತರದಲ್ಲಿ ಬೇರೆ ಹಾಳೆಯ ಮೇಲೆ ನಿಸರ್ಗ ಚಿತ್ರವನ್ನು ಚಿತ್ರಿಸುತ್ತಿದ್ದರು. ಹೀಗೆ ಇವರಿಗೆ ಪ್ರತಿದಿನ ನೂರಾರು ಸ್ಕೆಚ್‌ಗಳನ್ನು ಮಾಡುವದು ರೂಢಿಯಾಗಿತ್ತು. ಆಮೆಲೆ ಇದಕ್ಕೆ ಇನ್ನೊಂದು ಕಾರಣವೂ ಇದೆ. ಏನೆಂದರೆ ಮುಂಬೈನ ಸರ್.ಜೆ.ಜೆ.ಕಲಾಶಾಲೆಯಲ್ಲಿ ಅಭ್ಯಾಸ ಮಾಡುವಾಗಇವರಿಗೆ ಆ ಕಲಾಶಾಲೆಯಲ್ಲಿ ಪ್ರತಿದಿನ ಸ್ಕೆಚ್‌ಗಳನ್ನು ಮಾಡಿಕೊಂಡು ಬಂದವರಿಗೆ ಮಾತ್ರ ಕ್ಲಾಸಿನಲ್ಲಿ ಕುಳಿತುಕೊಳ್ಳುವ ಮತ್ತು ಹಾಜರಾತಿಯನ್ನು ಕೊಡುತ್ತಿದ್ದರು. ಎಂದು ಖಂಡೇರಾವರು ಹೇಳುತ್ತಾರೆ. ರೇಖೆಯೆಂಬುದು ಕಲೆಯ ಜೀವಾಳ. ಕಲಾಕೃತಿಯನ್ನು ರಚಿಸುವಾಗ ಅಥವಾ ರಚಿಸುವದಕ್ಕೂ ಮೊದಲು ರೇಖೆಗಳ ಸಹಾಯದ ಅವಶ್ಯಕತೆಯಿದೆ. ಅದಕ್ಕಾಗಿ ರೇಖೆಯನ್ನುದವದು ಚಿತ್ರಕಲೆಯ ಮೂಲ ಬೇರು ಎನ್ನುವದು ಇವರ ವಾದ.

---

8. Shankar Patil : The living lines, Page No. 64

9. ಪಿ.ಆರ್ ತಿಪ್ಪೆಸ್ವಾಮಿ (ಪ್ರ.ಸಂ.) : ಕಲಾಕೋಶ , ಪುಟ 287

10. ಪಿ.ಆರ್ ತಿಪ್ಪೆಸ್ವಾಮಿ (ಪ್ರ.ಸಂ.) : ಕಲಾಕೋಶ , ಪುಟ 288

ರೇಖೆಗಳಲ್ಲಿ ಜೀವಶಕ್ತಿ (Vitality) ಚಲನಶೀಲತೆ (Mobility) ಭಾವಪ್ರಕಾಶ (Expressiveness) ಇವು ಮಹತ್ವದ ಅಂಶಗಳಾಗಿವೆ. ಒಂದು ಆಕೃತಿಯನ್ನು ಪೂರ್ಣವಾಗಿ ರೇಖಿಸಬಹುದು. ಇಲ್ಲವೆ ಒಡೆದು ಅತ್ಯಲ್ಪ ಸಂಖ್ಯೆಯರೇಖೆಯಲ್ಲಿ ಚಿತ್ರಿಸಬಹುದು. ಯಾವ ಅರ್ಥವನ್ನೋ, ಭಾವವನ್ನೋ, ಮುಖದಲ್ಲಿ, ಬೆರಳುಗಳಲ್ಲಿ ಕೈ-ಕಾಲುಗಳಲ್ಲಿ ಹೀಗೆ ಬೇರೆ ಬೇರೆ ಭಾವ-ಭಂಗಿಗಳಲ್ಲಿ ಪ್ರಧಾನವಾಗಿ ಎಷ್ಟು ಬೆಕೋ ಅಷ್ಟನ್ನೆ ಮಾತ್ರ ರಚಿಸಬಹುದು ಒಟ್ಟು ಆಕೃತಿಯನ್ನು ನೆರಳು ಕತ್ತಲಲ್ಲಿ (Shade and light) ಕಾಣಿಸಬಹುದು. ರೇಖಾಚಿತ್ರವನ್ನು ನೋಡಿದಾಗ ಆಕೃತಿಯೊಂದು ಸ್ಪಷ್ಟವಾಗಿ ಕಾಣಿಸುತ್ತದೆ. ಇದಕ್ಕೆ ಕಾರಣ ಅವರದೇ ಆದ ಒಂದು ಕ್ಯಾರೆಕ್ಟರ ಇದೆಯೆಂಬುದು ಗಮನಿಸುವಂತಹ ಅಂಶ. ರೇಖೆಯಲ್ಲಿ ಮುಖ್ಯವಾಗಿ ಅಭಿವ್ಯಕ್ತಿಸುವದು, ಕಡಿಮೆ ಗೆರೆಗಳಲ್ಲಿ ವಸ್ತುವಿನ ಬಹುಮುಖ್ಯವಾದ ಗುಣ-ಲಕ್ಷಣಗಳನ್ನುಮಾತ್ರ ರೇಖೆಗೆ ಮನಸ್ಸಿನ ನೈಜ, ಭ್ರಾಮಿಕ ಕಲ್ಪನೆಗಳಿಗೆ ಮೂರ್ತರೂಪ ಕೊಡುವ ಶಕ್ತಿ ಇದೆ. ಒಂದು ಸ್ಕೆಚನಲ್ಲಿ ಕಲಾವಿದನ ಪರಿಶೀಲನಾತತ್ವ, ತಾನು ನೋಡಿದ ವಸ್ತುವಿನ ಬಗೆಗಿನ ಅವನ ಪ್ರತಿಕ್ರಿಯೆ ಮತ್ತು ಕುಂಚ, ಪೆನ್ಸಿಲ್ಲು, ಪೆನ್ನುಗಳೊಂದಿಗೆ ಬರೆದುಕೊಂಡ ಕುಶಲತೆಯನ್ನು, ಅದನ್ನು ದುಡಿಸಿಕೊಂಡ ರೀತಿ, ಇವೆಲ್ಲ ಮುಖ್ಯವಾಗುತ್ತದೆ. ಒಂದು ರೀತಿಯಲ್ಲಿ ತಾನು ಕಂಡದ್ದರ ಬಗ್ಗೆ ತನ್ನ ಕಣ್ಣು ಅಥವಾ ಕಲ್ಪನೆಯಿಂದ ಮೂಡಿಸಿದ ವೈಯಕ್ತಿಕ ಸೂತ್ರೀಕರಣವೇ ಈ ರೇಖಾ ಚಿತ್ರವೆನ್ನಬಹುದು.[11]

ಖಂಡೇರಾವರು ರೇಖಾ ಚಿತ್ರಗಳನ್ನು ಚಿತ್ರಿಸುವಾಗ ಎರಡು ರೀತಿಯಾಗಿ ಚಿತ್ರಿಸುತ್ತಿದ್ದರು. ದೈನಂದಿನ ಅಂಕನೆ (Sketch) ಗಳಂತೆ ಕೇವಲ ಗೆರೆಗಳನ್ನು ಎಳೆದು ಚಿತ್ರಗಳನ್ನು ಚಿತ್ರಿಸುತ್ತಿದ್ದರು. ಇದೊಂದು ರೀತಿಯದ್ದಾದರೆ, ಗೆರೆಗಳನ್ನು ಎಳೆದನಂತರ ಪೆನ್ಸಿಲ್‌ನಿಂದ ನೆರಳು ಬೆಳಕನ್ನು ಚಿತ್ರದಲ್ಲಿ ತೋರಿಸುವುದು ಒಂದು ತೆರನಾಗಿತ್ತು. ಇವರೇ ಹೇಳುವಹಾಗೆ ಒಬ್ಬ ಕಲಾವಿದನ ಸಾಮರ್ಥ್ಯವನ್ನು ಗುರುತಿಸಬೇಕಾದರೆ ಮೊದಲು ಕಲಾವಿದನ ರೇಖೆಗಳಿಂದ ಅವನಲ್ಲಿರುವ ಸಾಮರ್ಥ್ಯವನ್ನು ತಿಳಿಯತ್ತಿದ್ದರು. ಹೀಗಾಗಿ ರೇಖೆಗಳು ಇಂಥದೊಂದು ಶಕ್ತಿಯುತವಾದ ಸ್ಥಾನವನ್ನು ಪಡೆದುಕೊಂಡಿವೆ. ನಾವು ಎನೇ ಮಾಡಬೇಕಾದರೂ ಮೊದಲು ರೇಖೆಗಳಿಂದ ಚಿತ್ರಿಸಿ, ನಂತರದಲ್ಲಿ ಬಣ್ಣವನ್ನು ಉಪಯೋಗಿಸಬಹುದು. ರೇಖಾಚಿತ್ರದ ಬಳಕೆಯಲ್ಲಿ ಸಾಕಷ್ಟುವೈವಿಧ್ಯತೆಗಳಿವೆ. ಆದರೆ ಬಳಸುವ ಬಣ್ಣಮಾತ್ರ ಇಲ್ಲಿ ಒಂದೇ ರೀತಿಯದ್ದಾಗಿದ್ದರೂ ಅದು ಮಾಡುವ ಪರಿಣಾಮ ತುಂಬಾ ವಿಶಿಷ್ಟವಾದದ್ದು. ಇಲ್ಲಿ ಬಳಸುವ ವಸ್ತು ಕಾಗದ, ಬಟ್ಟೆ ಕಟ್ಟಿಗೆ, ಗೋಡೆ, ಲೋಹದ ವಸ್ತುಗಳನ್ನು ಇನ್ನು ಎಷ್ಟೋ ಮಾದರಿಯವು ಆಗಬಹುದು. ಲೇಖನಿ, ಬಳಪ, ಸೀಸದ ಕಡ್ಡಿ ಚಾರಕೋಲ್, ಇತ್ಯಾದಿಯಾಗಿರಬಹುದು. ಅಲ್ಲದೇ ಕುಂಚದಿಂದ ಸೂಕ್ಷ್ಮ, ಅತಿಸೂಕ್ಷ್ಮವಾದ ಚಿತ್ರವಿನ್ಯಾಸಗಳನ್ನು ರಚಿಸಬಹುದಾಗಿದೆ. ಮಾದರಿಯಾಗಿ ಹೇಳುವದಾದರೆ ರವೀಂದ್ರನಾಥ ಟ್ಯಾಗೋರ, ನಂದಲಾಲ್‌ಬೋಸ್, ಕೆ.ವೆಂಕಟಪ್ಪ, ಕೆ.ಕೆ.ಹೆಬ್ಬಾರ ವಿ.ಬಿ.ಹಿರೇಗೌಡರ, ಶಂಕರ ಪಾಟೀಲರಂತಹ ಪ್ರಮುಖ ಕಲಾವಿದರು ರೇಖೆಗಳನ್ನು ಬಳಸಿಕೊಂಡು ಚಿತ್ತೋಹಾರಿಯಾದರು.[12]

ಇತ್ತೀಚಿನ ದಿನಗಳಲ್ಲಿ ರೇಖಾಚಿತ್ರಕಲೆಯೇ ಒಂದು ಸ್ವಯಂ ಪೂರ್ಣಕಲೆಯೆಂದು ಗುರುತಿಸಲಾಗುತ್ತಿದ್ದು. ಇದರ ವ್ಯಾಪಕತೆಗೆ ಒಂದು ನಿದರ್ಶನವಾಗಿದೆ. ಚಿತ್ರಕಲೆಯ ಮೂಲ ಆಧಾರ ಸ್ಥಂಬವೇ ರೇಖೆ. ಈ ರೇಖೆಗಳು ಚಿತ್ರಕಲೆಯಲ್ಲಿ ತುಂಬಿಕೊಡುವ ಅರ್ಥಸ್ವರೂಪ, ಪ್ರಕಾರ, ಗುಣಲಕ್ಷಣ ಇತ್ಯಾದಿ ಅಂಶಗಳು ಕುತೂಹಲಕಾರಿಯಾಗಿವೆ. ರೇಖೆ ಎಂಬ ಪದ ನಮ್ಮ ದೈನಂದಿನ ಬದುಕಿನಲ್ಲಿ ಬೇರೆ ಬೇರೆ ಸಂದರ್ಭದಲ್ಲಿಯೂ ಕಂಡು ಬರುತ್ತದೆ. ಲಕ್ಷ್ಮಣರೇಖೆ, ಅಪ್ಪಾಹಾಕಿದಗೆರೆಯನ್ನು ದಾಟಬಾರದು, ಅದೃಷ್ಟರೇಖೆ, ಬಡತನರೇಖೆ, ಗರುಡರೇಖೆ, ಹಸ್ತರೇಖೆ ಇತ್ಯಾದಿಗಳಾಗಿ ಬಳಕೆಯಾಗಿರುವುದನ್ನು ಕಾಣುತ್ತೇವೆ. ರೇಖೆ ಎಂದರೆ ಬಿಂದುಗಳ ಚಲನೆಯಿಂದ ಉಂಟಾಗುವಂಥ ಬಿಂದುವೊಂದು ಚಲಿಸಿದಂತೆ ಅದರ ಪಾತ್ರವು ರೇಖೆಯಾಗುತ್ತದೆ. ಸಂಸ್ಕೃತದ ರೇಖೆ ಕನ್ನಡದಲ್ಲಿ ಗೆರೆ ಅಥವಾ ಗೀಟು ಎಂದಾಗಿದೆ.

---

11. ಡಾ. ಎಸ್.ಸಿ.ಪಾಟೀಲ : ವರ್ಣಸಂಚಯ ಪುಟ 24
12. ಡಾ. ಎಸ್.ಸಿ.ಪಾಟೀಲ : ವರ್ಣಸಂಚಯ ಪುಟ 23

ಇಂಗ್ಲೀಷನಲ್ಲಿ ಡ್ರಾಯಿಂಗ್ ಎಂದು ಇದನ್ನು ಕರೆಯಲಾಗುತ್ತದೆ. ರೇಖೆಗೆ ಉದ್ದವಿದೆ. ಆದರೆ ಅಗಲವಿಲ್ಲ ಎರಡು ಬಿಂದುಗಳ ರೇಖೆಯು ಪರಿಮಿತಿಯಾಗಿದ್ದು ಅದಕ್ಕೊಂದು ಸ್ಥಾನವಿದೆ. ಮತ್ತು ದಿಶೆಯಿದೆ.ಸೂಕ್ಷ್ಮವಾಗಿ ಪರಿಶೀಲಿಸಿದರೆ ನಿಸರ್ಗದಲ್ಲಿ ರೇಖೆ ಎಂಬ ಪದಾರ್ಥವೇ ಇಲ್ಲ. ಅದು ಒಂದು ಕಲ್ಪನೆ ಮಾತ್ರ ವಸ್ತು ಒಂದು ಮುಗಿಯುತ್ತದೆ. ಇನ್ನೊಂದು ಪ್ರಾರಂಭವಾಗುತ್ತದೆ. ಒಂದಕ್ಕೊಂದು ಎಲ್ಲಿಯಾಗಿ ಯಾವ ರೇಖೆಯೂ ಇಲ್ಲ. ಆದರೆ ಚಿತ್ರಕಾರನು ಈ ವಿಷಯವನ್ನು ರೇಖೆಯ ಮೂಲಕ ತಿಳಿಯಪಡಿಸುತ್ತಾನೆ. ಒಂದೊಂದೇ ವಸ್ತುವಿನ ಮೊದಲು ಕೊನೆ ಎಂಬ ಭ್ರಮೆಯನ್ನುಂಟು ಮಾಡುತ್ತಾನೆ. ಅವುಗಳ ವಿವರಗಳನ್ನು ವಿವಿಧ ಅಂಶಗಳನ್ನು ಸಾಂಕೇತಿಕವಾಗಿಯಾದರೂ ಚಿತ್ರಿಸಿ ನಿಜ ಸ್ಥಿತಿಯ ಕಲ್ಪನೆಯನ್ನುಂಟು ಮಾಡಲು ಪ್ರಯತ್ನಿಸುತ್ತಾನೆ [13] ಸ್ವತಃ ಖಂಡೇರಾವರೇ ಹೇಳುವಹಾಗೆ ರೇಖೆಯಂಬುದು ಕಲೆಯ ತಾಯಿ ಇದ್ದಂತೆ Drawing is mother of art . ಎಂದೂ ಕರೆಯುತ್ತಾರೆ. ಯಾವುದೇ ಕಲಾಕೃತಿಯಾಗಲಿ ಮೊದಲು ರೇಖೆಯಿಂದಲೇ ಪ್ರಾರಂಭಗೊಳ್ಳುತ್ತದೆ. ನಾನು ಮುಂಬೈನ ಸರ್.ಜೆ.ಜೆ. ಕಲಾಶಾಲೆಯಲ್ಲಿ ಕಲಾಶಿಕ್ಷಣವನ್ನು ಪಡೆದಿದ್ದರಿಂದ ಅಲ್ಲಿ ರೇಖಾಚಿತ್ರಗಳ ಬಗ್ಗೆ ಕೊಟ್ಟಿದ್ದ ಮಹತ್ವವನ್ನು ಬಲ್ಲೆ. ನಿಜ ಹೇಳಬೇಕೆಂದರೆ ರೇಖಾ ಚಿತ್ರಗಳಲ್ಲಿ ಒಂದೆರಡು ಗೆರೆಗಳಿಂದ ನಾವು ವ್ಯಕ್ತಿಯ ಭಾವನೆಗಳನ್ನು ವ್ಯಕ್ತಪಡಿಸಬಹುದು. ಇದರಲ್ಲಿ ಹಿಡಿತವನ್ನು ಕಂಡುಕೊಳ್ಳುವದು ಸುಲಭದ ಮಾತಲ್ಲ. ಇದಕ್ಕೆ ಅಭ್ಯಾಸ ಬಹಳ ಮಾಡಬೇಕಾಗುತ್ತದೆ. ಅದಕ್ಕಾಗಿ ನಾನು ವಿಧ್ಯಾರ್ಥಿಗಳಿಗೆ ಯಾವಾಗಲೂ ಹೇಳುತ್ತಿರುತ್ತೇನೆ ದಿನಾಲು ಸ್ಕೆಚ್ ಗಳನ್ನು ಮಾಡಬೇಕು. ಸ್ಕೆಚ್ ಗಳನ್ನು ಮಾಡುವುದರಿಂದ ಕೈಯಲ್ಲಿ ಹಿಡಿತವನ್ನು ಕಂಡುಕೊಳ್ಳಬಹುದು. ಒಳ್ಳೆಯ ಭಾವಪ್ರಧಾನ ರೇಖಾಚಿತ್ರಗಳನ್ನು ನಾವು ಚಿತ್ರಿಸಬಹುದು.ಇಂದು ಎಷ್ಟೋ ಕಲಾವಿದರು ಬರಿ ರೇಖಾಚಿತ್ರಗಳಿಂದಲೇ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಕೇವಲ ರೇಖಾಚಿತ್ರಗಳಿಂದಲೇ ಹಲವಾರು ಕಲಾಪ್ರದರ್ಶನಗಳನ್ನು ಮಾಡಿರುವುದನ್ನು ನಾವು ನೋಡಿದ್ದೇವೆ. ಅದಕ್ಕಾಗಿ "Drawing is the basic study of art ಎಂದು ಖಂಡೇರಾವರು ರೇಖಾಚಿತ್ರಗಳ ಬಗ್ಗೆ ಹೇಳುತ್ತಾರೆ. Art is said to intensity experience and charity it, by giving it form and rhythm. The artist has here sought to achieve this effect by links and by nothing other than them." [14] ಖಂಡೇರಾವರು ರಚಿಸಿದ ರೇಖಾಚಿತ್ರಗಳಲ್ಲಿ ಪೆನ್ಸಿಲ್ ಮಾಧ್ಯಮದ ರೇಖಾಚಿತ್ರಗಳು, ಇಂಕಮಾಧ್ಯಮದ ರೇಖಾಚಿತ್ರಗಳು ಎಂದು ಎರಡು ಭಾಗಗಳಾಗಿ ವಿಂಗಡಿಸಿಕೊಂಡು ಇಲ್ಲಿ ಅಧ್ಯಯನವನ್ನು ಮಾಡಲಾಗಿದೆ.

1. ಪೆನ್ಸಿಲ್ ಮಾಧ್ಯಮದ ರೇಖಾಚಿತ್ರಗಳು : ಖಂಡೇರಾವರು ಮುಂಬೈನ ಸರ್.ಜೆ.ಜೆ.ಕಲಾಶಾಲೆಯಲ್ಲಿ ಕಲಾಶಿಕ್ಷಣವನ್ನು ಪಡೆಯುವಾಗ ಅಲ್ಲಿ ರೇಖೆಗಳಿಗೆ ಹೆಚ್ಚು ಮಹತ್ವವನ್ನು ಕೊಡುತ್ತಿದ್ದರು. ಈ ದೃಷ್ಟಿಯಿಂದ ಜೆ.ಜೆ.ಕಲಾಶಾಲೆಯಲ್ಲಿ ಎಲ್ಲ ವಿಧ್ಯಾರ್ಥಿಗಳು ದಿನಾಲು ಸ್ಕೆಚ್ ಗಳನ್ನು ಮಾಡಿಕೊಂಡು ಬರಬೇಕೆಂಬುದು ಅಲ್ಲಿ ಕಟ್ಟುನಿಟ್ಟಿನ ಆಜ್ಞೆಯಾಗಿತ್ತು. ಒಂದು ವೇಳೆ ಸ್ಕೆಚ್ ಗಳನ್ನು ಮಾಡಿಕೊಂಡು ಬರಲಿಲ್ಲವೆಂದರೆ ಅಂದು ಅವರಿಗೆ ಹಾಜರಾತಿಗಳನ್ನು ಹಾಕುತ್ತಿರಲಿಲ್ಲ. ಈ ಹಿನ್ನಲೆಯಲ್ಲಿ ಖಂಡೇರಾವರು ದಿನಾಲು ಇಪ್ಪತ್ತರಿಂದ ಮೂವತ್ತು ಸ್ಕೆಚ್ ಗಳನ್ನು ಮಾಡುವದು ತಪ್ಪಿಸುತ್ತಿರಲ್ಲಿಲ್ಲ. ಇವರ ರೇಖಾಚಿತ್ರಗಳಲ್ಲಿ ಹೆಚ್ಚಾಗಿ ದೈನಂದಿನ ಅಭ್ಯಾಸದ ದೃಷ್ಟಿಯಿಂದ ಮಾಡಿದ ಅಂಕನೆ (ಸ್ಕೆಚ್) ಗಳು ಹೆಚ್ಚಾಗಿ ಕಂಡುಬರುತ್ತವೆ. ಇದರ ಹೊರತು ರೇಖಾಚಿತ್ರದಲ್ಲಿ ಭಾವಚಿತ್ರಗಳು, ಜೀವಮಾದರಿಯ ಚಿತ್ರಗಳು ಚಿತ್ರಿಸಿದ್ದು ಕಡಿಮೆ. ಇವರು ಅಧ್ಯಯನಕಾಲದಲ್ಲಿ ದಿನಾಲು ಚಿತ್ರಿಸಿದ ರೇಖಾಚಿತ್ರಗಳನ್ನು ತಮ್ಮ ಕೋಣೆಯಲ್ಲಿ ಒಂದು ಕಡೆ ಸಂಗ್ರಹಿಸಿಟ್ಟಿದ್ದರು. ಆದರೆ ಯಾವ ಘಳಿಗೆಯೇನೋ ಗೊತ್ತಿಲ್ಲ ಇವರು ಕೂಡಿಟ್ಟಿದ್ದ ಸ್ಕೆಚ್ ಗಳ ಒಂದು ಮೂಟೆಗೆ ಬೆಂಕಿ ತಗುಲಿಕೊಂಡು ಅವು ಎಲ್ಲವೂ ಸಂಪೂರ್ಣವಾಗಿ ಸುಟ್ಟು ಕರಕಲಾದವು . ಹೀಗಿರುವದರಿಂದ ಅಳಿದುಳಿದ ಮತ್ತು ಆ ಘಟನೆಯು ನಡೆದ

---

13. ಡಾ. ಎಸ್.ಸಿ.ಪಾಟೀಲ : ವರ್ಣಸಂಚಯ ಪುಟ 16

14. ಡಾ. ಎಸ್.ಸಿ.ಪಾಟೀಲ : (ಸಂ.)ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ 101

ನಂತರದಲ್ಲಿಯ ಹಂತದಲ್ಲಿ ಚಿತ್ರಿತಗೊಂಡ ಕೆಲವು ರೇಖಾಚಿತ್ರಗಳು ನಮಗೆ ಲಭ್ಯವಾಗಿರುವುದರಿಂದ ಅವುಗಳನ್ನೇ ಮೂಲವಾಗಿರಿಸಿಕೊಂಡು ಇಲ್ಲಿ ಅಧ್ಯಯನ ಮಾಡಲಾಗಿದೆ.ಖಂಡೇರಾವರು ಚಿತ್ರಿಸಿದ ಪೆನ್ಸಿಲ್ ಮಾಧ್ಯಮದ ರೇಖಾಚಿತ್ರಗಳಲ್ಲಿ ನಾವು ಎರಡು ರೀತಿಯಾಗಿ ವಿಂಗಡಿಸಿಕೊಳ್ಳಲಾಗಿದೆ.

1.1 ನಿಸರ್ಗಚಿತ್ರಗಳು

1.2 ರೂಪದರ್ಶಿಯರನ್ನು ಬಳಸಿಕೊಂಡು ಚಿತ್ರಿಸಿದ ರೇಖಾಚಿತ್ರಗಳು.

1.1 ನಿಸರ್ಗ ಚಿತ್ರಗಳು : ಖಂಡೇರಾವರು ದಿನಾಲು ಸ್ಕೆಚ್‌ಗಳನ್ನು ಮಾಡುವದು ಅವರ ಅಧ್ಯಯನ ಕಾಲದಲ್ಲಿಂದ ತಿಳಿದುಬರುತ್ತದೆ. ಇವರು ಸ್ಕೆಚ್‌ಗಳನ್ನು ಮಾಡಲು ಆರಿಸಿಕೊಳ್ಳುತ್ತಿದ್ದ ವಿಷಯಗಳು ಅಷ್ಟೆ ಸೊಗಸಾಗಿದ್ದು ಇವರು ಹಲವಾರು ವಿಷಯಗಳ ಮೇಲೆ ಸ್ಕೆಚ್‌ಗಳನ್ನು ಮಾಡುತ್ತಿದ್ದರು. ಅವುಗಳಲ್ಲಿ ನಿಸರ್ಗಚಿತ್ರವೂ ಒಂದು ಇವರು ಜಲವರ್ಣದಿಂದ ನಿಸರ್ಗಚಿತ್ರಗಳನ್ನು ಚಿತ್ರಿಸಬೇಕಾದರೆ ಮೊದಲು ದೃಶ್ಯದ ಒಂದು ರೇಖಾಚಿತ್ರವನ್ನು ಚಿತ್ರಿಸುವದು ಮರೆಯುತ್ತಿರಲಿಲ್ಲ. ಹೀಗಿರುವುದರಿಂದ ಇವರು ಈ ವಿಷಯಕ್ಕೆ ಸಂಬಂಧಪಟ್ಟಂತೆ ಸ್ಕೆಚ್‌ಗಳನ್ನು ಮಾಡಲು ಬೇರೆ ಸಮಯ ತೆಗೆದುಕೊಳ್ಳುತ್ತಿರಲಿಲ್ಲವೆಂದು ಗೊತ್ತಾಗುತ್ತದೆ. ಹೀಗಾಗಿ ಖಂಡೇರಾವರು ಪೆನ್ಸಿಲ್‌ನಿಂದ ಚಿತ್ರಿಸಿದ ರೇಖಾಚಿತ್ರಗಳಲ್ಲಿ ಹೆಚ್ಚಾಗಿ ನಿಸರ್ಗಚಿತ್ರಗಳನ್ನು ಚಿತ್ರಿಸಿದ್ದು ಕಂಡು ಬರುತ್ತದೆ.

1.2 ರೂಪದರ್ಶಿಯರನ್ನು ಬಳಸಿಕೊಂಡು ಚಿತ್ರಿಸಿದ ರೇಖಾಚಿತ್ರಗಳು : ಖಂಡೇರಾವರು ಮುಂಬೈನ ಸರ್.ಜೆ.ಜೆ.ಕಲಾಶಾಲೆಯಲ್ಲಿ ಓದುತ್ತಿದ್ದಾಗ ಅಲ್ಲಿ ಕ್ಲಾಸಿನಲ್ಲಿ ರೂಪದರ್ಶಿಯರನ್ನು ಎದುರುಗಡೆ ಕೂಡಿಸಿ ಸ್ಕೆಚಗಳನ್ನು ಮಾಡುವದು ಹೇಳಿ ಕೊಡುತ್ತಿದ್ದರು. ಇಲ್ಲಿ ಎದುರಿಗೆ ಒಬ್ಬ ಮಹಿಳೆಯನ್ನೊ ಅಥವಾ ಪುರುಷನನ್ನೋ ಎದುರಿಗೆ ಕೂಡಿಸಿ ಅವರ ಕೈಯಲ್ಲಿ ಒಂದು ಸ್ಟೀಲಿನ ಕೊಳೆಯನ್ನು ಅಥವಾ ಯಾವುದೇ ರೀತಿಯಕಟ್ಟಿಗೆಯ ಕೋಲು ಆಗಬಹುದು. ಇದನ್ನು ಕುಳಿತಂತ ವ್ಯಕ್ತಿಯ ಕೈಯಲ್ಲಿ ಕೊಟ್ಟು ಅವರಿಗೆ ಕೂಡಿಸಲು ಒಂದು ದೊಡ್ಡವಾದ ಕಟ್ಟಿಗೆಯ ಕಟ್ಟೆಯಂತೆ ಮಾಡಿರುತ್ತಾರೆ ಇವುಗಳಲ್ಲಿ ಕೆಲವೊಂದು ಸಾರಿ ಕುಳಿತಂತ ವ್ಯಕ್ತಿಯನ್ನು ಅರ್ಧಬತ್ತಲೆಯಾಗಿ ಕೂಡಿಸುತ್ತಾರೆ. ಅಂದರೆ ವ್ಯಕ್ತಿಯಮೈಮೇಲೆ ಅರ್ಧಭಾಗ ಬಟ್ಟೆಯನ್ನು ಧರಿಸಿ ದೇಹದಭಾಗವನ್ನು ಹಾಗೆಯೆ ಬಿಟ್ಟುಕೂಡಿಸಿರುತ್ತಾರೆ. ಹೀಗೆ ಮಾಡುವುದರಿಂದ ಅನಾಟಮಿಯ ಬಗ್ಗೆ ಚನ್ನಾಗಿ ಅಭ್ಯಾಸ ಮಾಡಿದಂತಾಗುತ್ತದೆ. ಎಂಬ ಉದ್ದೇಶ. ಇದಲ್ಲದೇ ವಿಧ್ಯಾರ್ಥಿಗಳಿಗೆ ಅಭ್ಯಾಸದ ದೃಷ್ಟಿಯಿಂದ ಸ್ತ್ರೀಯರನ್ನು ಕೆಲವು ಸಾರಿ ನಗ್ನ ರೂಪದಲ್ಲಿಯೂ ಕೂಡಿಸುತ್ತಿದ್ದರು. ಮೂರು-ನಾಲ್ಕು ಅಂಶ ಭಾಗ ಮತ್ತುಪೂರ್ಣ ಪ್ರಮಾಣದ ಜೀವಮಾದರಿಯ ಚಿತ್ರಗಳನ್ನು ಚಿತ್ರಿಸುತ್ತಿದ್ದರು. ಅಲ್ಲದೇ ಸ್ತ್ರೀಯರನ್ನು ಬೇರೆ ಬೇರೆ ಭಂಗಿಗಳಲ್ಲಿ ಕುಳ್ಳಿರಿಸಿಕೊಂಡು ಚಿತ್ರಿಸುತ್ತಿದ್ದರು ಖಂಡೇರಾವರು ಈ ರೀತಿಯ ಚಿತ್ರಗಳನ್ನು ಕೂಡ ಚಿತ್ರಿಸಿದ್ದಾರೆ. ಇಲ್ಲಿ ಮೊದಲು ಪೆನ್ಸಿಲ್‌ನಿಂದ ಹೊರರೇಖೆಯನ್ನು ಎಳೆದು ನಂತರದಲ್ಲಿ ದಪ್ಪವಾದ 6ಬಿ ಪೆನ್ಸಿಲ್‌ನಿಂದ ಒಳಗಿನ ಭಾಗದ ನೆರಳು-ಬೆಳಕನ್ನು ಯೋಜಿಸಿ ರೇಖಾಚಿತ್ರಗಳನ್ನು ಚಿತ್ರಿಸುತ್ತಿದ್ದರು. ಖಂಡೇರಾವರು ಈ ರೀತಿಯ ಚಿತ್ರಗಳನ್ನು ಅಧ್ಯಯನ ಕಾಲದಲ್ಲಿ ಹೆಚ್ಚಾಗಿ ಚಿತ್ರಿಸಿದ್ದಾರೆ.

2. ಇಂಕಮಾಧ್ಯಮದಲ್ಲಿ ರೇಖಾಚಿತ್ರಗಳು : ಖಂಡೇರಾವರು ಚಿತ್ರಿಸಿದ ಹಲವಾರು ಮಾಧ್ಯಮಗಳ ರೇಖಾಚಿತ್ರಗಳಲ್ಲಿ ಇದು ಒಂದು ಮಾಧ್ಯಮದಿಂದ ಕೂಡಿದೆ. ಇವರ ಅಧ್ಯಯನ ಕಾಲದಲ್ಲಿ ಪೆನ್ಸಿಲ್ ಮತ್ತು ಇಂಕ ಮಾಧ್ಯಮದಿಂದ ಹೆಚ್ಚಾಗಿ ರೇಖಾಚಿತ್ರಗಳನ್ನು ಚಿತ್ರಿಸಿದ್ದು ಕಂಡು ಬರುತ್ತದೆ. ಇವರೆ ಹೇಳುವ ಹಾಗೆ ರೇಖೆಯೆಂಬುದು ಚಿತ್ರಕಲೆಗೆ ತಾಯಿಯಿದ್ದಂತೆ Drawing is mother of art . ನಾವು ಏನೇ ಯಾವುದೇ ರೀತಿಯ ಚಿತ್ರ ಬರೆಯಬೇಕಾದರೆ ಮೊದಲು ಅದು ರೇಖೆಯಿಂದಲೇ ಪ್ರಾರಂಭವಾಗುತ್ತದೆ. ಇಂದು ಎಷ್ಟೋ ಜನ ಕಲಾವಿದರ ರೇಖೆಯಿಂದಲೇ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಹೀಗಾಗಿ ರೇಖೆಯು ಬಹುಮುಖ್ಯವಾದ ಮಾಧ್ಯಮಗಳಲ್ಲೊಂದು , ಕೇವಲ ರೇಖೆಗಳಿಂದಲೂ ಮನುಷ್ಯನ ಹಾವ- ಭಾವಗಳನ್ನು ಮೂಡಿಸಬಹುದು ಅಂಥ ಒಂದು ಶಕ್ತಿ ರೇಖೆಯಲ್ಲಿ ಅಡಗಿದೆ. ರೇಖೆ ಬಿಂದುಗಳಿಂದ ರೂಪಿತವಾದದ್ದು. ಹೀಗೆ ರೇಖಾಚಿತ್ರವು ತನ್ನದೇ ಆದ ಒಂದು Image ಸೃಷ್ಟಿಸಿಕೊಂಡಿದೆ. ಖಂಡೇರಾವರು ಇಂಕಮಾಧ್ಯಮದಲ್ಲಿ ಅಧ್ಯಯನ ಕಾಲದಲ್ಲಿ ಕೆಲವು ಚಿತ್ರಿಸಿದರೆ, ಇನ್ನೂ ಕೆಲವು ಅಧ್ಯಾಪಕ ವೃತಿಯ ಹಂತದಲ್ಲಿ

ಪೆನ್ಸಿಲ್ ಮಾಧ್ಯಮದ ಚಿತ್ರಗಳು:




ಸ್ವಸಂಧಿನ ಅಭ್ಯಾಸದ ಚಿತ್ರ 1



ದೈನಂದಿನ ಅಭ್ಯಾಸದ ಚಿತ್ರ ೨






ಹ್ರಸಾಂಡಿನ ಅಭ್ಯಾಸದ ಚಿತ್ರ 3




ದೈನಂದಿನ ಅಭ್ಯಾಸದ ಪ್ರಾಣಿಗಳ ಚಿತ್ರ.




ದೈನಂದಿನ ಅಭ್ಯಾಸದ ಚಿತ್ರ 1



2





4

ಚಿತ್ರಿಸಿರುವುದು ನಮಗೆ ಕಂಡು ಬರುತ್ತದೆ.

ಖಂಡೇರಾವರು ಚಿತ್ರಿಸಿದ ಇಂಕಮಾಧ್ಯಮದ ರೇಖಾಚಿತ್ರಗಳನ್ನು ಇಲ್ಲಿ ಎರಡು ರೀತಿಯಾಗಿ ವಿಂಗಡಿಸಿಕೊಳ್ಳಲಾಗಿದೆ.

2.1 ನಿಸರ್ಗ ಚಿತ್ರಗಳು

2.2 ಸಂಯೋಜನಾ ಚಿತ್ರಗಳು

2.1 ನಿಸರ್ಗ ಚಿತ್ರಗಳು : ಖಂಡೇರಾವರು ಜಲವರ್ಣದಿಂದ ನಿಸರ್ಗಚಿತ್ರಗಳನ್ನು ರಚಿಸುವ ಮೊದಲು ಒಂದು ರೇಖಾಚಿತ್ರವನ್ನು ರಚಿಸುವುದು ಮರೆಯುತ್ತಿರಲಿಲ್ಲವೆಂದು ಹಿಂದೆ ಹೇಳಲಾಗಿದೆಯಾದರೂ ಕೆಲವು ವ್ಯತ್ಯಾಸಗಳನ್ನು ನಾವು ಇಲ್ಲಿ ಕಾಣಬಹುದು. ಖಂಡೇರಾವರು ಅಧ್ಯಯನ ಕಾಲದಲ್ಲಿ ಚಿತ್ರಿಸಿರುವ ನಿಸರ್ಗ ರೇಖಾಚಿತ್ರಗಳು ಪೆನ್ಸಿಲ್ ಮಾಧ್ಯಮದಿಂದ ಕೂಡಿದ್ದರೆ ಇವರ ಅಧ್ಯಾಪಕ ವೃತ್ತಿಯ ಹಂತದಲ್ಲಿ ಚಿತ್ರಿಸಿರುವ ನಿಸರ್ಗರೇಖಾಚಿತ್ರಗಳು ಇಂಕ ಮಾಧ್ಯಮದಿಂದ ಕೂಡಿವೆ. ಇವರು ಅಧ್ಯಾಪಕ ವೃತ್ತಿಯಲ್ಲಿದ್ದಾಗ ವಿಧ್ಯಾರ್ಥಿಗಳನ್ನು ವಾರಕ್ಕೊಮ್ಮೆಯಂತೆ ಕಲಬುರ್ಗಿಯ ಸುತ್ತಮುತ್ತಲಿನ ಹಳ್ಳಿಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ಇಲ್ಲಿ ವಿಧ್ಯಾರ್ಥಿಗಳ ಜೊತೆಗೂಡಿ ಅವರಿಗೆ ಸ್ಕೆಚ್‌ಗಳನ್ನು ಮಾಡುವದಾಗಲಿ, ನಿಸರ್ಗಚಿತ್ರಗಳನ್ನು ಚಿತ್ರಿಸುವುದಾಗಲಿ ಹೇಳಿಕೊಡುವ ಸಂದರ್ಭದಲ್ಲಿ ತಾವೂ ಕೂಡ ಕೆಲವು ಸ್ಕೆಚ್‌ಗಳನ್ನು ಮಾಡುತ್ತಿದ್ದರು. ಅವು ಇಂಕ ಮಾಧ್ಯಮದಿಂದ ಕೂಡಿದ್ದಾಗಿವೆ. ಇವುಗಳನ್ನು ಕೇವಲ ಒಂದೆರಡು ನಿಮಿಷದಲ್ಲಿ ಗರಗರನೆ ಗೀಚಿ ತೋರಿಸುತ್ತಿದ್ದರು. ಆದರೆ ಚಿತ್ರಿತಗೊಂಡ ಚಿತ್ರವು ಚೈತನ್ಯಯುತ ವಾಗಿ ಕಾಣಿಸುವದು. ಅಂಥ ಒಂದು ಶಕ್ತಿ ಅವರ ಕೈಯಲ್ಲಿ ಅಡಗಿರುವದು ನಮಗೆ ತಿಳಿದು ಬರುತ್ತದೆ.

2.2 ಸಂಯೋಜನಾ ಚಿತ್ರಗಳು : ಖಂಡೇರಾವರು ಚಿತ್ರಿಸುವ ರೇಖಾಚಿತ್ರಗಳಲ್ಲಿ ಇದೂ ಒಂದು ರೀತಿಯ ರೇಖಾಚಿತ್ರಗಳು. ಖಂಡೇರಾವರು ಮುಂಬೈನ ಸರ್.ಜೆ.ಜೆ.ಕಲಾಶಾಲೆಯಲ್ಲಿ ಅಭ್ಯಾಸವನ್ನು ಮಾಡುವಾಗ ದಿನಾಲು ಸಾಯಂಕಾಲ ಅಲ್ಲೆ ಸಮೀಪದಲ್ಲಿರುವ ಚೌಪಾಟಿಗೆ ಹೋಗಿ ಸ್ಕೆಚ್‌ಗಳನ್ನು ಮಾಡುತ್ತಿದ್ದರು. ಅಲ್ಲಿ ತರಕಾರಿ ಮಾರುವವರು, ಮೀನು ಮಾರುವವರು ಮತ್ತು ಅಲಲ್ಲಿ ಓಡಾಡುತ್ತಿರುವ ದನಕರುಗಳು ಈ ವಿಷಯಗಳನ್ನು ಚಿತ್ರಿಸುತ್ತಿದ್ದರು. ಇವುಗಳಲ್ಲಿ ಪೆನ್ಸಿಲ್ ಮಾಧ್ಯಮದಿಂದ ಚಿತ್ರಿಸಿದವು ಕೆಲವಾದರೆ ಇನ್ನುಳಿದ ಕೆಲವು ರೇಖಾಚಿತ್ರಗಳು ಇಂಕ ಮಾಧ್ಯಮದಿಂದ ಕೂಡಿದ್ದಾಗಿದೆ. ಅಲ್ಲದೇ ಇವರು ವಿ.ಟಿ. ರೈಲು ನಿಲ್ದಾಣಕ್ಕೆ ಸ್ಕೆಚ್‌ಗಳನ್ನು ಮಾಡಲು ಹೋಗುತ್ತಿದ್ದರು. ಅಲ್ಲಿಯೂ ವಿಶ್ರಾಂತಿಯನ್ನು ಪಡೆಯುವವರು. ಕೂಲಿಗಳು, ನಿಂತಿರುವ ರೈಲುಗಳು, ಟಿಕೇಟು ತೆಗೆಯುತ್ತಿರುವವರು ಹೀಗೆ ಹತ್ತು ಹಲವು ವಿಷಯಗಳಿಂದ ಕೂಡಿದ ಸಂಯೋಜನಾ ರೇಖಾಚಿತ್ರಗಳನ್ನು ಚಿತ್ರಿಸುತ್ತಿದ್ದರು. ಮುಂದೆ ಅಧ್ಯಾಪಕ ವೃತ್ತಿಯ ಹಂತದಲ್ಲಿ ಖಂಡೇರಾವರು ಕೆಲವು ಕಾಲದವರೆಗೆ ಕಲಬುರ್ಗಿಯ, ರೈಲು ನಿಲ್ದಾಣ ಶರಣಬಸವೇಶ್ವರ ದೇವಾಲಯದ ಅವರಣ ಮತ್ತು ಮಾರುಕಟ್ಟೆ ಈ ಎಲ್ಲ ಕಡೆಗೆ ಹೋಗಿ ಅಲ್ಲಿ ಹೋಗಿ ರೇಖಾಚಿತ್ರಗಳನ್ನು ಮಾಡಿಕೊಂಡು ಬರುತ್ತಿದ್ದರು. ಇವೆಲ್ಲವೂ ಇಂಕ ಮಾಧ್ಯಮದಿಂದ ಚಿತ್ರಿತಗೊಂಡವು. ಒಟ್ಟಾರೆಯಾಗಿ ಖಂಡೇರಾವರ ರೇಖಾಚಿತ್ರಗಳನ್ನು ನಾವು ಗಮನಿಸಿದಾಗ ಅಲ್ಲಿ ತಮ್ಮದೇ ಆದಂತ ಒಂದು ಲಯ, ರಚನಾ ತಂತ್ರದೊಂದಿಗೆ ಆ ಒಂದು ಸನ್ನಿವೇಶವನ್ನು ಯುಥೇಚ್ಛವಾಗಿ ಮೂಡಿಸಲು ಪ್ರಯತ್ನಿಸಿರುವದು ಕಂಡು ಬರುತ್ತದೆ.

[illegible]

ಇಂಕ್ ಮಾಧ್ಯಮದ ಚಿತ್ರಗಳು.

23rd Sept. 1980



ಪ್ರತಿದಿನದ ಅಭ್ಯಾಸದ ಚಿತ್ರ. 1

25.9.80



2



3

28.9.80.



22.9.80.





26·9·80




26·9·80



7






ರೇಖಾಚಿತ್ರಗಳು. 1





2



3














8

2. ವರ್ಣಚಿತ್ರಗಳು :

ಲಲಿತಕಲೆಗಳಲ್ಲೊಂದಾದ ಚಿತ್ರಕಲೆ ತತ್‌ಕ್ಷಣಕ್ಕೆ ಕಣ್ಣಿಗೆ ಮುದವನ್ನು ನೀಡುತ್ತ ನಮ್ಮ ಭಾವ ಪ್ರಪಂಚವನ್ನು ಸೇರಿಕೊಳ್ಳುತ್ತದೆ. ಅಂತರಂಗದಲ್ಲಿ ಅದರ ಬಾಹ್ಯ ಸೌಂದರ್ಯ ಮತ್ತು ಆಂತರಿಕ ಅರ್ಥಗಳು ಬಹುಕಾಲದವರೆಗೆ ಉಳಿದುಬಿಡುತ್ತದೆ. ಈ ದೃಶ್ಯ ಪ್ರಪಂಚವೆಲ್ಲ ಸೃಷ್ಟಿಕರ್ತನ ಒಂದು ಚಿತ್ರಕಲಾಶಾಲೆಯೇ ಆಗಿದ್ದು ನಾವು ಕಣ್ಣು ತೆರೆದರೆ ಸಾಕು ಚಿತ್ರವೊಂದು ಕಣ್ಣುಮುಂದೆ ಬಂದು ನಿಂತೆಬಿಡುತ್ತದೆ. ಚಿತ್ರಕಲಾವಿದನು ರೇಖೆ ಹಾಗು ಬಣ್ಣಗಳಿಂದ ಒಂದು ವಿಶಿಷ್ಟವಾದ ವಸ್ತುವನ್ನು ಅನುಭವವನ್ನು ನಮ್ಮ ಮುಂದಿಟ್ಟು ಅಚ್ಚರಿಗೊಳಿಸುವನು. ಹಾಗೆಯೇ ಆನಂದವನ್ನುಂಟುಮಾಡುವನು. ಕೆಲವು ಚಿತ್ರಗಳು ನಮ್ಮನ್ನು ತನ್ಮಯಗೊಳಿಸಿ, ಸಮಾಧಿಸಕ್ತರನ್ನಾಗಿ ಮಾಡುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಆಗಿನ ಅನುಭವ ಅವರ್ಣನೀಯವೂ ಆಗಿರುತ್ತದೆ.[15] ಚಿತ್ರಕಲೆಯಲ್ಲಿ ರೇಖೆಯಷ್ಟು ಮಹತ್ವವುಳ್ಳದ್ದು ಬಣ್ಣ ಯಾವುದೇ ವಸ್ತುವಿನ ಆಂತರಿಕ ಹಾಗೂ ಬಾಹ್ಯ ನಿರೀಕ್ಷಣೆಯಿಂದ ಮನಸ್ಸಿನ ಮೇಲಾಗುವ ಪರಿಣಾಮವೇ ಭಾವ. ಈ ಭಾವ ಪ್ರಚೋದನೆಗೆ ವರ್ಣಗತಿಗಳು ಮುಖ್ಯ ಬಿಂದು, ರೇಖೆ, ವರ್ಣ, ಗಾತ್ರ, ರೂಪ, ಪ್ರಮಾಣ, ಭಾವ, ಸಾದೃಶ್ಯ ಮುಂತಾದವುಗಳು. ಕಲಾವಿದನಿಗೆ ಮೂಲಭೂತವಾಗಿ ಗೊತ್ತಿರಬೇಕಾದ ಅಂಶಗಳು. ಇವೆಲ್ಲ ಹಿನ್ನೆಲೆಯಾಗಿ ಬಣ್ಣ ವಹಿಸುವ ಪಾತ್ರ ಅಸದೃಶ್ಯವಾದುದು. ಕೆಲವು ಸಲ ಬಣ್ಣಗಳನ್ನು ಭಾರ, ಹಗುರ ವರ್ಣಗಳೆಂದು, ಇನ್ನೂ ಕೆಲವೊಮ್ಮೆ ಹಿಂಜರಿತ ಮತ್ತು ಮುಂಜರಿತ ವರ್ಣಗಳೆಂದು ಹೇಳಲಾಗುತ್ತದೆ. ನೀಲಿ ಬಣ್ಣಕ್ಕೆ ಹಿಂಜರಿತವೆಂದು ಕರೆಯಲಾಗುತ್ತದೆ. ಅಂದರೆ ನಿಲಾಕಾಶ ಕೈಗೆಟುಕದೆ ದೂರ ಸರಿದಂತೆ ತೋರುತ್ತದೆ. ಕೆಂಪು ಮತ್ತು ಕಂದು ಬಣ್ಣಗಳನ್ನು ಮುಂಜರಿತ ವರ್ಣಗಳೆಂದು ಕರೆಯುತ್ತಾರೆ. ಏಕೆಂದರೆ ಇವು ಇತರ ಬಣ್ಣಗಳ ಮಧ್ಯಮದಲ್ಲಿಯೂ ಕೂಡ ಮುನ್ನುಗ್ಗಿ ನಮಗೆ ಎದ್ದು ಕಾಣಿಸುತ್ತದೆ. ಕಂದು ಬಣ್ಣ ಭಾರವಾದ ಬಣ್ಣವೆಂದು, ತಿಳಿನೀಲಿ ಹಾಗೂ ಕೆನೆಬಣ್ಣವನ್ನು ಹಗುರ ಬಣ್ಣವೆಂದು ಕರೆದರೆ, ಇನ್ನೂ ಕೆಲವು ಮಂಕುಬಣ್ಣಗಳಿವೆ. ಹಾಗೆಯೇ ಉತ್ಸಾಹ ಚೈತನ್ಯಮಯಿ ಬಣ್ಣಗಳೂ ಇವೆ. ಇನ್ನು ಕೆಲವು ಗ್ರಾಮೀಣ ಬಣ್ಣಗಳೆಂದು ವಿಂಗಡಿಸಬಹುದು [16] ಹೀಗೆ ಪ್ರತಿಯೊಂದು ಬಣ್ಣಗಳೂ ತನ್ನದೇ ಆದ ಅರ್ಥವನ್ನು ಹೊಂದಿವೆ. ಹೀಗಾಗಿ ಸಂಯೋಜನಾಕಲಾಕೃತಿಗಳಲ್ಲಿ ಅವ-ಭಾವಗಲನ್ನು ಪ್ರಧಾನವಾಗಿಸಲು ವರ್ಣಗಳು ತುಂಬ ಪ್ರಮುಖ ಪಾತ್ರವನ್ನು ವಹಿಸುತ್ತವೆ.

ಪ್ರಾಗೈತಿಹಾಸಿಕ ಕಾಲದಿಂದಲೇ ಗುಹೆಗಳಲ್ಲಿ ರೇಖಾ ಹಾಗೂ ವರ್ಣಚಿತ್ರಗಳ ರಚನೆಯಾಗಿರುವುದನ್ನು ನಾವು ಕಾಣಬಹುದು. ಇದಲ್ಲದೆ ಅಜಂತಾ, ಬಾಗ ಮುಂತಾದ ಗುಹೆಗಳಲ್ಲಿಯೂ ವರ್ಣಚಿತ್ರಗಳನ್ನು ಕಾಣಬಹುದು. ಇದಲ್ಲದೆ ರಾಜಮನೆತನಗಳಲ್ಲಿ ಹಲವಾರು ಕಲಾವಿದರಿಗೆ ಆಶ್ರಯವನ್ನು ನಿಡಿದ್ದರು. ಈ ಹಂತದಲ್ಲಿ ವರ್ಣಚಿತ್ರಗಳು ಹೆಚ್ಚಿನ ಪ್ರಮಾಣದಲ್ಲಿ ರಚನೆಗೊಂಡವು. ಹೀಗೆ ರಾಜಾಶ್ರಯವನ್ನು ಪಡೆದ ಹಲವಾರು ಚಿತ್ರಕಲಾವಿದರು ರಾಜಮನೆತನದ, ರಾಜದರ್ಬಾರಿನ, ಅರಮನೆಯ ಚಿತ್ರಗಳು, ರಾಜಮಹಾರಾಜರ ಭಾವಚಿತ್ರಗಳು, ಪೂರ್ಣಪ್ರಮಾಣದ ಜೀವ ಮಾದರಿಯ ಕಲಾಕೃತಿಗಳು ಹೆಚ್ಚಿನ ಪ್ರಮಾಣದಲ್ಲಿ ರಚನೆಗೊಂಡವು. ಮುಂದೆ ಬ್ರಿಟೀಷರ ಆಗ ಮನದಿಂದಾಗಿ ನಮ್ಮ ಭಾರತದ ಕಲಾಕೃತಿಗಳಲ್ಲಿ ಪಾಶ್ಚ್ಯಾತರ ಪ್ರಭಾವವನ್ನು ಬೀರಿದ್ದುನಾವು ನೋಡಬಹುದಾಗಿದೆ. ಬ್ರಿಟಿಷರಿಂದ ಮುಂಬೈನ ಸರ್.ಜೆ.ಜೆ. ಕಲಾಶಾಲೆ, ಮದ್ರಾಸ ಕಲಾಶಾಲೆ, ಕಲ್ಕತ್ತಾ ಕಲಾಶಾಲೆ ಗಳು ಹುಟ್ಟಿಕೊಂಡವು. ದೌರ್ಭಾಗ್ಯದ ಸಂಗತಿಯೆಂದರೆ ಮುಂಬಯಿ ಕಲಾಶಾಲೆ ಪಾಶ್ಚಾತ್ಯ ವಾಸ್ತವ ಸಂಪ್ರದಾಯದ ಶಿಕ್ಷಣವನ್ನು ನೀಡುತ್ತಿತ್ತು. ಮೈಸೂರ ಅರಸರಿಂದ ಹುಟ್ಟಿಕೊಂಡ ಮೈಸೂರು ಕಲಾಶಾಲೆ ಮುಂಬಯಿ ಶಾಲೆಯ ಶಾಖೆ ಅಲ್ಲದಿದ್ದರೂ ಅಲ್ಲಿಯ ಕಲಾಸಂಪ್ರದಾಯಕ್ಕೆ ಬದ್ಧಎಂಬಂತೆ ತನ್ನ ಶಿಕ್ಷಣಕ್ರಮವನ್ನು ರೂಢಿಸಿಕೊಂಡಿತ್ತು. ಕಲ್ಕಮತ್ತೆಯ ಕಲಾಶಾಲೆಯ ಪ್ರಿನ್ಸಿಪಾಲರಾಗಿದ್ದ ಪರ್ಸಿ ಬ್ರೌನ ಭಾರತದ ಎಲ್ಲಾ ದೇಶಿಯ ಕಲಾಸಂಪ್ರದಾಯಗಳನ್ನು ಅಧ್ಯಯನ ಮಾಡಿ, ಅವನಿಂದ್ರನಾಥ ಠಾಕೂರ ಮಾರ್ಗದರ್ಶನದಲ್ಲಿ ಕಲ್ಕತ್ತ ಕಲಾಶಾಲೆ ಒಂದು ಭಾರತೀಯ ಶೈಲಿಯನ್ನು ರೂಢಿಸಿಕೊಳ್ಳಲು ಧಾರಾಳವಾಗಿ

---

15. ಡಾ. ಎಸ್.ಸಿ.ಪಾಟೀಲ : (ಸಂ.)ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ 101

16. ಡಾ. ಎಸ್.ಸಿ.ಪಾಟೀಲ : ವರ್ಣಸಂಚಯ, ಪುಟ 25

[illegible]

ಉತ್ತೇಜನ ನೀಡಿದ್ದರು. ಭಾರತೀಯ ಸಾಹಿತ್ಯ ಪ್ರಪಂಚದಲ್ಲಿ ನವೋದಯ ಕ್ರಾಂತಿ ಮೊದಲಾದದ್ದು ಬಂಗಾಳದಲ್ಲಿ ಕಲಾಪ್ರಪಂಚದಲ್ಲಿ ಮಾಡಿದ ನವೋದಯ ಕ್ರಾಂತಿಗೂ ಬಂಗಾಳವೇ ತವರು ಮನೆ. ಬಂಗಾಳಿ ಸಂಪ್ರದಾಯ ಒಂದು ಅಸ್ತಿತ್ವಕ್ಕೆ ಬರಲು ಪರ್ಸಿಬ್ರೌನ ವಾತಾವರಣವನ್ನು ಕಲ್ಪಿಸಿದರು ; ರಾಜಸ್ಥಾನದ ದೇಸಿ ಕಲಾ ಪ್ರಗತಿ , ಮುಘಲ್ ಚಿತ್ರಸಂಪ್ರದಾಯ ಅಜಂತಾ ಗುಹೆಗಳ ಭಿತ್ತಿ ಚಿತ್ರ ಸಂಪ್ರದಾಯ (Mural paintings) ಚೀನಾ ಮತ್ತು ಜಪಾನಿ ಕಲಾ ಸಂಪ್ರದಾಯ, ಇವೆಲ್ಲದರ ಸಮ್ಮಿಶ್ರ ಪ್ರಭಾವದ ಶಿಸ್ತು ಬಂಗಾಲಿ ಸಂಪ್ರದಾಯ ಇದರ ಜನ್ಮದಾತರು ಅವನೀಂದ್ರನಾಥ ಠಾಕೂರರು [17] ಇಂಥ ಒಂದು ದೇಸಿಯವಾದ ಕಲಾವಾತಾವರಣದಲ್ಲಿ ತಮ್ಮದೇ ಆದ ಒಂದು ಛಾಪನ್ನು ಮೂಡಿಸಿದ ಕಲಾವಿದರಲ್ಲಿ ರಾಜಾರವಿವರ್ಮ ಪ್ರಮುಖರು.

ಇಂದು ವರ್ಣಕಲಾಕೃತಿಗಳನ್ನು ನಾವು ರಾಜರವಿವರ್ಮನಿಂದಲೇ ಹೆಸರಿಸಬಹುದು. ಇವರು ಹೆಚ್ಚಾಗಿ ವಾಸ್ತವ ಸಂಪ್ರದಾಯದ ಚಿತ್ರಗಳ ಪ್ರಭಾವದಿಂದ ಅನೇಕ ವರ್ಣಕಲಾಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಪಾಶ್ಚಾತ್ಯರ ಪ್ರಭಾವವನ್ನು ಅಳವಡಿಸಿಕೊಂಡಿರುವುದನ್ನು ನಾವು ಕಾಣಬಹುದು. ಇದಲ್ಲದೇ ಎಸ್.ಎಂ. ಪಂಡೀತ, ವರ್ಣಶಿಲ್ಪಿ ಕೆ. ವೆಂಕಟಪ್ಪನವರನ್ನು ನಾವು ವರ್ಣಕಲೆಯ ಮಾಂತ್ರಿಕರೆಂದೇ ಹೇಳಬಹುದು. ಇವರೆಲ್ಲರೂ ಹೆಚ್ಚಾಗಿ ವಾಸ್ತವ ರೀತಿಯಲ್ಲಿ ಕಲಾಕೃತಿಗಳನ್ನು ಚಿತ್ರಿಸಿದ್ದಾರೆ ವರ್ಣಚಿತ್ರಗಳ ರಚನೆಯಲ್ಲಿ ಎರಡು ರೀತಿಯ ವರ್ಣಚಿತ್ರಗಳನ್ನು ನಾವು ಗಮನಿಸಬಹುದು. ಒಂದು ನೂತನ ಕಲಾ ಶೈಲಿಯ (ನವ್ಯಕಲೆ) ವರ್ಣಚಿತ್ರಗಳು. ಇನ್ನೊಂದು ವಾಸ್ತವ ಕಲಾಶೈಲಿಯ ವರ್ಣಚಿತ್ರಗಳು ಹೀಗೆ ಎರಡು ರೀತಿಯ ಕಲಾವಿಧಾನಗಳನ್ನು ನಾವು ಕಾಣಬಹುದು. ಖಂಡೇರಾವರು ಈ ಎರಡರಲ್ಲೂ ಕಲಾಕೃತಿಗಳನ್ನು ರಚಿಸುವ ರಚನಾ ಸಾಮರ್ಥ್ಯವನ್ನು ಹೊಂದಿದ್ದಾರೆ. ಖಂಡೇರಾವರು ಕರ್ನಾಟಕದ ಸಮಕಾಲೀನ ಕಲೆಯ ಮೊದಲ ಘಟ್ಟದ ಹೃದಯ ಪ್ರಧಾನ ಕಲಾವಿದರು. ಇವರು ಬ್ರಿಟಿಷ ಅಕಾಡೆಮಿಕ್ ಕಲಾಶಿಕ್ಷಣಪಡೆದರೂ ನಂತರ ಸೃಜನಶೀಲದೆಡೆಗೆ ತೊಡಗಿ ಹೆಸರು ಮಾಡಿದವರು. ಅಮೂರ್ತ ಶೈಲಿಯಲ್ಲಿ ತಮ್ಮ ಛಾಪು ಮೂಡಿಸಿ ಶೈಲಿಬದ್ಧತೆಗೆ ಕಟ್ಟು ಬಿದ್ದವರು. ಭಾವಚಿತ್ರ, ನಿಸರ್ಗಚಿತ್ರಗಳ ರಚನೆಯಲ್ಲಿ ಅವರ ಕುಂಚದ ಬೀಸುಗಳು ವಿಸ್ಮಯವನ್ನು ಹುಟ್ಟಿಸುತ್ತವೆ. ಎಸ್.ಎಂ. ಪಂಡಿತರ ನಂತರ ಈ ಭಾಗ ಕಂಡ ಮತ್ತೊಬ್ಬ ಕುಂಚದ ಮಾಂತ್ರಿಕನೆಂದರೆ ಪ್ರೋ.ಜಿ.ಎಸ್.ಖಂಡೇರಾವರು [18] ಇವರ ವರ್ಣಚಿತ್ರಗಳನ್ನು ನಾವು ಅವಲೋಕಿಸಿದಾಗ, ಜಲವರ್ಣ, ತೈಲವರ್ಣ ಮತ್ತು ಪೇಸ್ಟಲ್ ವರ್ಣಗಳಲ್ಲಿ ಹಲವಾರು ಕಲಾಕೃತಿಗಳನ್ನು ರಚಿಸಿದ್ದು ತಿಳಿದುಬರುತ್ತದೆ. ಇವರು ಜಲವರ್ಣ ಮತ್ತು ತೈಲವರ್ಣಗಳೆರಡರಲ್ಲೂ ತಮ್ಮದೇ ಆದ ಒಂದು ಛಾಪನ್ನು ಮೂಡಿಸಿದ್ದಾರೆ. ಇದಕ್ಕೆ ಕಾರಣ ಅವರು ಬಳಸುವ ವರ್ಣಗಾರಿಕೆಯ ಪ್ರಭಾವದಿಂದ ಇವರು ಹೆಚ್ಚಾಗಿ ನಿಸರ್ಗಚಿತ್ರಗಳನ್ನು ಮತ್ತು ಭಾವಚಿತ್ರಗಳನ್ನು ಚಿತ್ರಿಸಿದ್ದು ಕಂಡು ಬರುತ್ತದೆ. ಇಂದು ಖಂಡೇರಾವರನ್ನು ಭಾವಚಿತ್ರ ಮತ್ತು ನಿಸರ್ಗ ಚಿತ್ರ ಕಲಾವಿದರೆಂದೇ ಗುರುತಿಸಿಕೊಳ್ಳುವಷ್ಟು ಪ್ರಭಾವಶಾಲಿಯಾಗಿದ್ದಾರೆ. ಇಂದು ಇವರಿಗೆ ನಾಡಿನ ಎಲ್ಲಿಯೇ ಕಡೆ ಕರೆದರೆ ಸಮಾರಂಭಕ್ಕಾಗಲಿ ಅಥವಾ ಇನ್ನಿತರ ಕಲಾಚಟುವಟಿಕೆಗಳಲ್ಲಾಗಲಿ ಕರೆದರೆ ಅದರ ಹಿಂದೆ ಒಂದು ಉದ್ದೇಶವಿದ್ದೆ ಇರುತ್ತದೆ. ಅದೇನೆಂದರೆ ಇವರಿಂದ ಕಲಾ ಪ್ರಾತ್ಯಕ್ಷಿಕೆಯನ್ನು ಮಾಡಿಸುವದು. ಪ್ರಾತ್ಯಕ್ಷಿಕೆಗಳನ್ನು ಮಾಡುವ ಸಂದರ್ಭದಲ್ಲಿ ಒಂದು ಭಾವಚಿತ್ರ ಮತ್ತು ವಿಂಡೋ ಸರಣಿಯ ಅಮೂರ್ತ ಸಂಯೋಜನಾ ಕಲಾಕೃತಿಯೊಂದು ಸಿದ್ದವಾಗುತ್ತದೆ. ಈ ಉದ್ದೇಶವಿಟ್ಟುಕೊಂಡೆಯೇ ಇವರನ್ನು ಕಲಾಚಟುವಟಿಕೆಗಳಲ್ಲಿ ಕರೆಯುವದು ಒಂದು ವಾಡಿಕೆಯಾಗಿಬಿಟ್ಟಿದೆ. ಖಂಡೇರಾವರ ಸಾರ್ಥಕತೆಯ ಬದುಕಿನ ವ್ಯಕ್ತಿತ್ವಕ್ಕೆ ಇಷ್ಟು ಸಾಕಲ್ವೆ ?

ಖಂಡೇರಾವರ ವರ್ಣಚಿತ್ರಗಳಲ್ಲಿ ನಾವು ಎರಡು ಭಾಗಗಳನ್ನಾಗಿಸಿಕೊಂಡು ಅಧ್ಯಯನ ಮಾಡಲಾಗುವದು. ಇವುಗಳಲ್ಲಿ ಕ್ರಮವಾಗಿ

1. ಜಲವರ್ಣ
2. ತೈಲವರ್ಣ

---

17. ಎಸ್.ಎನ್.ಚಂದ್ರಶೇಖರ (ಸಂ.) : ಕೆ. ವೆಂಕಟಪ್ಪ ಸವಿನೆನಪು, ಪುಟ 8
18. ಖಂಡೇರಾವರ ಶಿಷ್ಯ ಶಿವಾನಂದ ಭಂಟನೂರರವರೊಂದಿಗೆ ಸಂದರ್ಶನ : ದಿ. 2-2-2002, ಬನಶಂಕರಿ.

1. ಜಲವರ್ಣ ಚಿತ್ರಗಳು : ಜಲವರ್ಣ ಚಿತ್ರಗಳನ್ನು ಸಾಮಾನ್ಯವಾಗಿ ಕಾಗದದ ಮೇಲೆ ಕೆಲವು ವೇಳೆ ರೇಷ್ಮೇ ಬಟ್ಟೆ ಹತ್ತಿದಂತ ಇಲ್ಲವೇ ಎಲುಬುಗಳ ಮೇಲೆ ಚಿತ್ರಿಸುತ್ತಾರೆ. ಬಣ್ಣಗಳನ್ನು ನೀರಿನಲ್ಲಿ ಮಿಶ್ರಣಮಾಡಿ ಚಿತ್ರಗಳನ್ನು ರಚಿಸುವುದೇ ಜಲವರ್ಣವಿಧಾನ ಬಹುದಿನಗಳಿಂದಲೂ ರೇಖಾಚಿತ್ರಗಳಿಗೆ (ಡ್ರಾಯಿಂಗ್) ಜಲವರ್ಣಗಳಿಂದ ಮುಕ್ತಾಯ ಸ್ಪರ್ಶ (Finishing touches.)ಗಳನ್ನು ಕೊಡಲಾಗುತ್ತಿತ್ತೆಂಬುದನ್ನು ಲಿಯೋನಾರ್ಡೋ ಡಾವಿನ್ಸಿ ಮತ್ತು ಡೂರರ ಅವರ ಅಸಂಖ್ಯಾತ ರೇಖಾಚಿತ್ರಗಳಿಂದ ತಿಳಿಯಬಹುದಾಗಿದೆ. ಇದಕ್ಕೆ ಬಳಸುವ ಕಾಗದವನ್ನು ಚಿಂದಿಯಾದ ಬಟ್ಟೆಯ ರುಬ್ಬಿದ ತಿರುಳನ್ನೆ ತನ್ನ ಬಂಡವಾಳವನ್ನಾಗಿಸಿಕೊಂಡಿರುವ ಒಂದು ಬಗೆಯ ಕಾಗದ, ಜಲವರ್ಣಮಾಧ್ಯಮಕ್ಕೆಂದೇ ವಿಶೇಷವಾಗಿ ತಯಾರಿಸಲ್ಪಡುವ ಈ ಕಾಗದವು ಸಾಕಷ್ಟು ತೂಕವನ್ನು ದೃಢತೆಯನ್ನು ಹೊಂದಿರುವುದಷ್ಟೇ ಅಲ್ಲದೆ ಬಹಳ ನೀರಾದ ಜಲವರ್ಣವನ್ನು ಬಾರಿ ಬಾರಿ ಅದರ ಮೇಲೆ ಬಳಸಿದ್ದಾಗ್ಯೂ ತಾನು ಶಿಥಿಲಗೊಳ್ಳವದಿಲ್ಲ. ಕೈಕಾಗದ (Hand made paper) ಎಂದು ಕರೆಯಿಸಿಕೊಳ್ಳುವ ಈ ಬಗೆಯ ಕಾಗದದಲ್ಲಿ ಜಲದೊಂದಿಗೆ ವರ್ಣಗಳೂ ಆಳ ಪದರಗಳಿಗೆ ಇಳಿದು ಸ್ಥಿರವಾಗಿ ನಿಲ್ಲುವಂತಾಗುತ್ತದೆ.[19] ಖಂಡೇರಾವರ ಜಲವರ್ಣಕಲಾಕೃತಿಗಳಲ್ಲಿ ಭಾವಚಿತ್ರಗಳು ನಿಸರ್ಗ ಚಿತ್ರಗಳು, ಭೂದೃಶ್ಯಚಿತ್ರಗಳು , ಭಿತ್ತಿಚಿತ್ರಗಳು, ಸ್ಥಿರಚಿತ್ರಗಳು ಮುಂತಾದವುಗಳನ್ನು ಹೆಸರಿಸಬಹುದು. ಎಲ್ಲದ್ದಕ್ಕೂ ಮುಖ್ಯವಾಗಿ ಈ ಮಾಧ್ಯಮದಲ್ಲಿ ಅವರು ಭೂದೃಶ್ಯಗಳನ್ನು ಮತ್ತು ನಿಸರ್ಗಚಿತ್ರಗಳನ್ನೇ ಹೆಚ್ಚಾಗಿ ರಚಿಸಿದ್ದು ಕಂಡು ಬರುತ್ತದೆ. "Nature never claims to present the painter with a perfect compostion [20] We have distingushed nature from art. the question will naturally arise here whether there is any need for seeking beauty in art. If it is found in nature [21] ಖಂಡೇರಾವರು ಅಧ್ಯಯನ ಕಾಲದಲ್ಲಿ ದಿನಾಲು ನಿಸರ್ಗಚಿತ್ರಗಳನ್ನು ರೂಡಿಯಾಗಿಸಿಕೊಂಡಿದ್ದರು.ಇವರಿಗೆ ನಿಸರ್ಗ ಚಿತ್ರವೆಂದರೆ ಪ್ರೀತಿ, ಒಲವು ನಿಸರ್ಗವು ಎಂಥವರನ್ನು ಮಂತ್ರಮುಗ್ಧರನ್ನಾಗಿಸಿ ಬಿಡುತ್ತದೆ. ಇವರು ನಿಸರ್ಗಚಿತ್ರರಚನೆಗೆ ಬಳಸಿಕೊಂಡು ಮಾಡಿದ್ದು. ಜಲವರ್ಣ ಮಾಧ್ಯಮ ಇವರೆ ಹೇಳುವ ಹಾಗೆ ಜಲವರ್ಣವೆಂಬುದು ಸರಳವಲ್ಲ. ಪಾರದರ್ಶಕ ವರ್ಣವಾದರೂ ಬಳಸುವಾಗ ಮಾತ್ರ ಎಚ್ಚರಿಕೆ ವಹಿಸಬೇಕು. ಯಾಕೆಂದರೆ ಒಂದು ಸಾರಿ ನಾವು ವರ್ಣವನ್ನು ಬಳಸುವಲ್ಲಿ ಹೆಚ್ಚು ಕಡಿಮೆ ಮಾಡಿದರೆ ಚಿತ್ರವು ಸಂಪೂರ್ಣವಾಗಿ ಕೆಟ್ಟುಹೋಗುತ್ತದೆ. ಈ ವರ್ಣದಲಿ ಒಮ್ಮೆ ಅದು ಕೆಟ್ಟು ಹೊದರೆ ಮತ್ತೆ ಅದನ್ನು ಸರಿಪಡಿಸಲಾಗುವುದಿಲ್ಲ. ಆದರೆ ತೈಲವರ್ಣದಲ್ಲಿ ನಾವು ಈ ಕೆಲಸವನ್ನು ಮಾಡಬಹುದು. ಹಿಗಾಗಿ ಜಲವರ್ಣವು ನಾವೇನೇ ಮಾಡಿದರೂ ಅದು ಫೈನಲ್‌ನಂತೆಯೇ ನಿಸರ್ಗಚಿತ್ರವನ್ನು ಮಾಡುವಾಗ ಜಲವರ್ಣದಿಂದಲೇ ರಚಿಸುವದು ಚೆನ್ನಾಗಿರುತ್ತದೆ. ಇದರಲ್ಲಿ ಬರುವ ಎಫೆಕ್ಟ ತೈಲವರ್ಣದಲ್ಲಿ ಬರದು. ಇದು ಪಾರದರ್ಶಕವಾಗಿ ಕಂಡರೂ ಚಿತ್ರದಲ್ಲಿ ವಿಶೇಷತೆಯನ್ನು ಮೂಡಿಸಬಲ್ಲ ಮಾಧ್ಯಮವಾಗಿದೆ. Water colour is versafite and expressive madium for dealing with all manner of subjects " The most efective method is to prepare two generous washes one for the blue of the upper sky and one of the worm colour just above horizon"[22]

1.1 ನಿಸರ್ಗಚಿತ್ರಗಳು : ನಿಸರ್ಗವು ಎಂಥವರನ್ನು ಮಂತ್ರಮುಗ್ಧರನ್ನಾಗಿಸಿಬಿಡುತ್ತದೆ. ನಿಸರ್ಗದಲ್ಲಿ ಮನುಷ್ಯನಿಗೆ ಅಂಥಃಕರಣೆಯನ್ನು ತುಂಬುವ ಶಕ್ತಿ ಇದೆ. ಕಲಾವಿದನಾದವನು ಹೆಚ್ಚಾಗಿ ನಿಸರ್ಗದಿಂದಲೇ ಪ್ರಭಾವಿತಗೊಂಡಿರುತ್ತಾನೆ. ನಿಸರ್ಗವನ್ನು ಇಷ್ಟಪಡದ ಕಲಾವಿದನಿಲ್ಲ. ರಸಋಷಿಗಳು ತಮ್ಮ ತಪೋವಿಕಾಸಕ್ಕಾಗಿ ನಿಸರ್ಗವನ್ನೇ ಹೆಚ್ಚಾಗಿ

---


19. ಪಿ. ಆರ್. ತಿಪ್ಪೆಸ್ವಾಮಿ(ಪ್ರ.ಸಂ.) : ಕಲಾಕೋಶ , ಪುಟ 161
20. Andrian Hill : Fruther Steps in oil paintings, Page No.21
21. Andrian Hill : Fruther Steps in oil paintings, Page No.21
22. Ray Campbell Smith : Developing style in water colour, Page No.62




ಚಿತ್ರ 7. ಕಾಳಗಿಯ ದೃಶ್ಯ ನಿಸರ್ಗಚಿತ್ರ, 1



ಚಿತ್ರ, 8. ನಿಸರ್ಗಚಿತ್ರ, 1



ಚಿತ್ರ 9. ಸುರಪೂರದ ದರ್ಬಾರು




ಚಿತ್ರ 10. ಐಹೊಳೆಯ ದೇವಾಲಯ




ಚಿತ್ರ 11. ಪಟ್ಟದ ಕಲ್ಲಿನ ದೇವಾಲಯ 1




ಚಿತ್ರ 12 ಪಟ್ಟದ ಕಲ್ಲಿನ ದೇವಾಲಯ 2



ಚಿತ್ರ 13. ಲಾಡಖಾನ ದೇವಾಲಯ , ಐಹೊಳೆ



ಚಿತ್ರ 14. ಪಟ್ಟದ ಕಲ್ಲಿನ ದೇವಾಲಯಗಳ ಸಮೂಚ್ಚಾಯ



ಚಿತ್ರ 15. ಪಟ್ಟದ ಕಲ್ಲಿನ ದೇವಾಲಯ 3



ಚಿತ್ರ 16. .ಪಟ್ಟದ ಕಲ್ಲಿನ ನಂದಿ ಮಂಟಪ



ಚಿತ್ರ 17. ನಿಸರ್ಗಚಿತ್ರ.




ಚಿತ್ರ 18. ಹಂಪೆಯ ಹೇಮಕೂಟದ ದೃಶ್ಯ



ಚಿತ್ರ 19 ಕಲಬುರ್ಗಿಯ ಹಳೆಯ ಜೈಲಿನ ಕಟ್ಟಡ



ಚಿತ್ರ 20. ಕಾಳಗಿಯ ದೃಶ್ಯ ನಿಸರ್ಗಚಿತ್ರ 2



ಚಿತ್ರ 21. ಚಿತ್ತಾಪೂರದ ನಾಗಾವಿಯಲ್ಲಮ್ಮನ ದೇವಸ್ಥಾನ.



ಚಿತ್ರ 22: ಹಳ್ಳಿ.



ಚಿತ್ರ 23.

ಮುಂಬೈನ ಕೆಂಪು ಹಂಚಿನ ಕಟ್ಟಡ



ಚಿತ್ರ 24. ಮುಂಬೈಯಲ್ಲಿಯ ಒಂದು ಭೂದೃಶ್ಯ 1.



ಚಿತ್ರ 25. ಮುಂಬೈಯಲ್ಲಿಯ ಒಂದು ಭೂದೃಶ್ಯ 2.



ಚಿತ್ರ 26.

ನಿಸರ್ಗಚಿತ್ರ 2



ಚಿತ್ರ 27.

ನಿಸರ್ಗಚಿತ್ರ 3



ಚಿತ್ರ 28.

ನಿಸರ್ಗಚಿತ್ರ 4



ಚಿತ್ರ 29.

ಅವಲಂಬಿಸಿಕೊಂಡಿರುವದು ನಾವು ಕಾಣಬಹುದು. ಒಂದೇ ಎರಡೇ ಇಂತಹ ಹತ್ತು ಹಲವು ಉದಾಹರಣೆಯನ್ನು ನಾವು ಕೊಡಬಹುದು "We have distingushed nature from art the question will naturally arise here whether there is any need for seeking beauty in art, if it is found in nature"[23] ಪ್ರಪಂಚದಲ್ಲಿ ನಾವು ಕಾಣದ ಬಣ್ಣವಿಲ್ಲ, ಕಾಣದ ಆಕೃತಿಗಳಿಲ್ಲ. ಇಷ್ಟೆಲ್ಲಾ ಇದ್ದರೂ ಒಬ್ಬೊಬ್ಬರಿಗೆ ಒಂದೊಂದು ಆಸಕ್ತಿಯ ಅಂಶಗಳಿರುವುದುಂಟು ಕೆಲವರಿಗೆ ದೃಶ್ಯಗಳನ್ನು ಕಾಣುವದರಲ್ಲಿ ವಿಶೇಷ ಆಸಕ್ತಿ, ಇನ್ನೂ ಕೆಲವರಿಗೆ ಕಂಡಿದ್ದನ್ನು ಅಕ್ಷರಗಳ ರೂಪಗಳಿಗೆ ಇಳಿಸುವ ಆಸಕ್ತಿ. ಒಬ್ಬ ಕವನ ರಚಿಸಿದರೆ ಮತ್ತೊಬ್ಬ ಚಿತ್ರರಚನೆ ಇಲ್ಲವೆ ಮೂರ್ತಿ ಸೃಷ್ಟಿಯಲ್ಲಿ ನಿರತನಾಗಿರುತ್ತಾನೆ. ಇಂಥ ಸೃಜನಶೀಲತೆಯಲ್ಲಿ ಸೃಜನಶೀಲ ಅಗಾಧ ಅನುಭವ, ಶ್ರಮ, ಬುದ್ದಿವಂತಿಕೆ, ಸಲಕರಣೆಗಳು ಇವೆಲ್ಲಾ ಬಳಸಿಕೊಂಡಿರುತ್ತಾನೆ. ಸೃಜನಶೀಲ ಬೌದ್ಧಿಕ ಸಾಮರ್ಥ್ಯಕ್ಕೆ ತಕ್ಕಂತೆ ವಸ್ತುವಿನ ನಿರ್ಮಾಣವಾಗುವುದುಂಟು ಕಲಾವಿದನ ಅಂತಕ್ಕರಣದ ಅನುಭಾವವನ್ನು ದೊರೆತ ಸಾಧನೆಗಳಿಂದ ರೂಪಿಸುವ ಮಾರ್ಗವೇ ಕಲಾಕೃತಿ. ಇಂಥ ಕಲಾಕೃತಿ ನಿರ್ಮಾಣಕ್ಕೆ ನೈಸರ್ಗಿಕ ಸಂಪತ್ತು ಅವಶ್ಯಕತೆಯಿರುತ್ತದೆ. ಮಣ್ಣು,ಕಲ್ಲು, ಬಂಡೆ, ಮರ, ಲೋಹ, ಕಾಗದ, ಗೋಡೆ ಇವೆಲ್ಲ ಸುಂದರ ಕಲಾಕೃತಿಗೆ ಬೇಕಾಗುವ ಸಾಮಗ್ರಿಗಳು "That most colour in our environment , especially in nature consists of mixed hues is a fact appreciaed by everyone who has tried to capture these colours on canvas or paper" ಹೀಗಾಗಿ ನಿಸರ್ಗವು ನಮಗೆನೆಲ್ಲ ಕೊಟ್ಟಿದೆ. ಇದರಿಂದ ನಾವು ನಿಸರ್ಗದಮೇಲೆ ಎಷ್ಟೋ ಅವಲಂಬಿತರಿರುವುದು ಗೋತ್ತಾಗುತ್ತದೆ.

ನಿಸರ್ಗವು ಕಲಾವಿದನಿಗೆ ಪ್ರಭಾವ ಬೀರುವ ಮೊದಲ ಸಾಧನವಾಗಿದೆ. ಈ ನಿಸರ್ಗದಿಂದ ಪ್ರಭಾವಿತರಾದ ಖಂಡೇರಾವರು ತಮ್ಮ ಪ್ರಾರಂಭಿಕ ಹಂತದ ಶಿಕ್ಷಣದಲ್ಲಿ ಹೆಚ್ಚಾಗಿ ನಿಸರ್ಗಚಿತ್ರಗಳನ್ನು ರಚಿಸಿದ್ದುಂಟು ಕೆಲವು ಸಲವಂತೂ ಅವರು ದಿನಾಲು ಒಂದಾದರೂ ನಿಸರ್ಗ ಚಿತ್ರವನ್ನು ಚಿತ್ರಿಸುವುದು ತಮ್ಮ ದೈನಂದಿನ ಕೆಲಸವಾಗಿಸಿಕೊಂಡಿದ್ದರು. ಇವರ ನಿಸರ್ಗ ಚಿತ್ರಗಳಲ್ಲಿ ಹೆಚ್ಚಿನವು ಜಲವರ್ಣದಿಂದ ಕೂಡಿದ್ದಾಗಿವೆ. ಇಲ್ಲಿ ಖಂಡೇರಾವರು ಪ್ರಾರಂಭದ ಶಿಕ್ಷಣದ ಹಂತದಲ್ಲಿ ಮುಂಬೈ ನಗರದ ಸುತ್ತಮುತ್ತಲಿನ ವಾತಾವರಣವನ್ನು ಚಿತ್ರಿಸಿದ್ದಾರೆ. ಇವುಗಳಲ್ಲಿ ಮುಂಬೈನ ಮೈದಾನಗಳು, ಮಲ್ ಬಾರ್ ಹಿಲ್ಸ್‌ಗಳಂತಹ ನಿಸರ್ಗಚಿತ್ರಗಳು ಕೆಲವಾದರೆ ಹಳೆಯ ಕಾಲದ ದೊಡ್ಡ ದೊಡ್ಡ ಕಟ್ಟಡಗಳು ದೈನಂದಿನ ಬದುಕಿಗೆ ಸಂಬಂಧಪಟ್ಟ ವಿಷಯಗಳನ್ನಿಟ್ಟುಕೊಂಡು ರಚಿಸಿದ ಭೂದೃಶ್ಯಗಳನ್ನು ಹೆಸರಿಸಬಹುದು ಭೂದೃಶ್ಯ ಮತ್ತು ನಿಸರ್ಗ ಚಿತ್ರ ಎರಡೂ ಒಂದೇಯಾದರೂ ಕೆಲವು ಸಲ ಮಾತ್ರ ಬೇರೆ ಅರ್ಥವನ್ನು ಕೊಡುತ್ತವೆ. ನಿಸರ್ಗದ ದೃಶ್ಯವನ್ನು ನಾವು ಚಿತ್ರಿಸುವಾಗ ಅಲ್ಲಿರುವ ದೃಶ್ಯವೇ ಬೇರೆ. ಭೂದೃಶ್ಯವೆಂದು ಚಿತ್ರಿಸುವಾಗ ನಿಸರ್ಗವಲ್ಲದೆ ಕಟ್ಟಡಗಳು ನಗರಗಳು ಇವುಗಳನ್ನು ಚಿತ್ರಿಸುವದಕ್ಕೆ ಒಂದೊಂದು ಸಾರಿ ಸಿಟಿಸ್ಕೇಪ ಎಂತಲೂ ಕರೆಯುತ್ತಾರೆ. ಹಳ್ಳಿಯ ವಾತಾವರಣವನ್ನು ಚಿತ್ರಿಸುವುದಕ್ಕೆ ಒಂದೊಂದು ಸಾರಿ ಭೂದೃಶ್ಯವೆಂದೂ ಕರೆಯುತ್ತಾರೆ. ಅದೇನೆ ಇರಲಿ ಎಲ್ಲದಕ್ಕೂ ಒಂದೇ ಅರ್ಥವಿದೆ. ಗ್ರಾಮೀಣ ನೆಲಕ್ಕೆ ಅಥವಾ ಪ್ರಕೃತಿಗೆ ಹತ್ತಿರವಾದ ನೇರವಾದ ಅಭಿವ್ಯಕ್ತಿಗೆ ಲ್ಯಾಂಡಸ್ಕೇಪ ಎಂದು 15ನೇ ಶತಮಾನದಿಂದಲೂ ಕರೆಯಲಾಗುತ್ತಿದೆ. ಗ್ರಾಮೀಣ ದೃಶ್ಯ ಎಂಬರ್ಥದ ಡಚ್ ಪದದಿಂದ (Landscape) ಪದ ಹುಟ್ಟಿಕೊಂಡಿದೆ. ದೃಶ್ಯಗಳ ಅಲಂಕೃತ ಚಿತ್ರಗಳಂತೆ ಇಂದು ನಾವು Landscape ಎಂದು ಕರೆಯುವ ಭೂದೃಶ್ಯಗಳು ರೋಮನ್ನರ ಕಾಲದಿಂದಲೂ ಕಾಣಿಸಿಕೊಂಡಿವೆ. ಆದರೆ ಭೂದೃಶ್ಯದ ಚಿತ್ರವು ತನ್ನದೇ ಆದ ಪೂರ್ಣ, ಸ್ವತಂತ್ರ ಆಸ್ತಿತ್ವವನ್ನು ಕಂಡುಕೊಂಡದ್ದು ಪುನರುಜ್ಜೀವನ (15-16 ನೇ ಶತಮಾನ) ಕಾಲದಲ್ಲಿ ಭಾವಚಿತ್ರಗಳ ಹಿನ್ನೆಲೆಗೆ ಸುಂದರ ಭೂದೃಶ್ಯಗಳು ಸಂಯೋಜಿಸಲ್ಪಟ್ಟರುತ್ತಿದ್ದವು. ನಮ್ಮ ಮಿನೀಯೇಚರಗಳಲ್ಲಿ ಭೂದೃಶ್ಯಗಳು ಸುಂದರವಾಗಿ, ವೈವಿಧ್ಯಮಯವಾಗಿ ಕಾಣಿಸಿಕೊಂಡಿವೆ. 19 ನೇ ಶತಮಾನದ ಅಂತ್ಯ ಹಾಗೂ 20 ನೇ ಶತಮಾನದ ಆರಂಭದಲ್ಲಿ ರಾಜಾರವಿರ್ಮನ ಚಿತ್ರತಗಳೇ ಅಲ್ಲದೇ ಓಲಿಯೋಗ್ರಾಪ ಚಿತ್ರಗಳಲ್ಲೂ ಭೂದೃಶ್ಯಕಲೆ ವೈಭವೀಕರಣಗೊಂಡಿದೆ. ಆದರೆ ಇಲ್ಲೂ ಮಾನವ ರೂಪಗಳ ಹಿನ್ನೆಲೆಯಲ್ಲಿ ಭೂದೃಶ್ಯಗಳು ಕಾಣಿ

---

23. Ray Campbell Smith : Developing style in water colour, Page No.73

ಸಿಕೊಂಡವು [24] ಹೀಗೆ ಖಂಡೇರಾವವರು ಭೂದೃಶ್ಯಗಳನ್ನು ಚಿತ್ರಿಸುತ್ತಿದ್ದರು. ಮುಂದೆ ಇದರಲ್ಲಿಯೇ ಹೆಚ್ಚಿನ ಆಸಕ್ತಿಯನ್ನು ಹೊಂದಿ ಅಭ್ಯಾಸದಲ್ಲಿ ತೊಡಗಿ ದೇವಾಲಯಗಳು ದೇಗುಲಗಳು, ಹಳ್ಳಿಯ ವಾತಾವರಣ ಬೆಟ್ಟ-ಗುಡ್ಡಗಳು ಮುಂತಾದ ಹಲವಾರು ವಿಷಯಗಳನ್ನು ತಮ್ಮ ನಿಸರ್ಗ ಚಿತ್ರಗಳಿಗೆ ಬಳಸಿಕೊಂಡು ಚಿತ್ರಗಳನ್ನು ಚಿತ್ರಿಸಿದ್ದಾರೆ. ಇದರ ನಿಸರ್ಗಚಿತ್ರಗಳ ಶೈಲಿಯೇ ಬೇರೆ ಅವುಗಳನ್ನು ನೋಡಿದ ಕೂಡಲೇ ಇದು ಖಂಡೇರಾವರಿಂದ ರಚಿತವಾದ ನಿಸರ್ಗಚಿತ್ರವೆನ್ನುವಷ್ಟು ತಮ್ಮ ತನವನ್ನು ಅದರಲ್ಲಿ ತುಂಬುತ್ತಾರೆ. ಇಂದು ಖಂಡೇರಾವರನ್ನು ನಿಸರ್ಗಚಿತ್ರ ಕಲಾವಿದರೆಂತಲೂ ಜನರು ಗುರುತಿಸುತ್ತಾರೆ "The skills and abilities required to create such art work go for beyond those needed for the average illustrations. The skill are a matter of experience and perservance ; the abilities are native gifts, although they have to be cultivated and developed " [25] ಖಂಡೇರಾವರ ಜಲವರ್ಣ ನಿಸರ್ಗ ಚಿತ್ರಗಳಲ್ಲಿ ಕೆಲವು ನೈಜತೆಗೆ ಹೋಲುವಂತಾಗಿರುವುದಲ್ಲದೆ, ಇನ್ನೂ ಕೆಲವು ಕ್ರಿಯಾತ್ಮಕತೆಯಿಂದ ರಚಿತಗೊಂಡಿವೆ. ಇವರು ನಿಸರ್ಗಚಿತ್ರಗಳ ರಚನೆಗೆ ಬಳಸುವ ವರ್ಣಗಾರಿಕೆಯು ತುಂಬ ವಿಶೇಷವಾದದ್ದು. ತೆಳುವರ್ಣದಿಂದ ಲೇಪನಮಾಡಿ ಅಲ್ಲಲ್ಲಿ ನೆರಳಿನ ಭಾಗಕ್ಕೆ ಸ್ವಲ್ಪ ಗಾಡವಾದ ವರ್ಣವನ್ನು ಬಳಸಿಕೊಂಡು ಚಿತ್ರಗಳನ್ನು ಚಿತ್ರಿಸುತ್ತಾರೆ. ಇವರ ನಿಸರ್ಗ ಚಿತ್ರಗಳಲ್ಲಿ ನೆರಳು-ಬೆಳಕಿನ ಸಂಯೋಜನೆಯು ತುಂಬ ಸ್ವಾರಸ್ಯಕರವಾದುದು. ಇವರ ನಿಸರ್ಗಚಿತ್ರಗಳನ್ನು ನೋಡಿದರೆ ಅಷ್ಟು ಅಡಂಬರಕ್ಕೆ ಹೋಗದೇ ಕೆಲವೇ ವರ್ಣಗಳಿಂದ ತೆಳುವಾಗಿ , ಅಷ್ಟೇ ಒಳ್ಳೆಯ ರೀತಿಯಿಂದ ದೂರ-ಸಮಿಪಗಳನ್ನು ಸೂಚಿಸುವಷ್ಟು ತುಂಬ ಸರಳವಾಗಿ ಚಿತ್ರತಗೊಂಡಿರುವುದನ್ನು ನಾವು ಕಾಣಬಹುದು " Any artist engaged in preseparations has to be aware of all the factors capable of influencing his colour effects in the eventual printed image [26] ಹೀಗೆ ಖಂಡೇರಾವರು ಜಲವರ್ಣದಲ್ಲಿ ಅಲ್ಲದೇ ತೈಲವರ್ಣದಲ್ಲೂ ಕೆಲವು ನಿಸರ್ಗಚಿತ್ರಗಳನ್ನು, ಭೂದೃಶ್ಯದ ಚಿತ್ರಗಳನ್ನು ಚಿತ್ರಿಸಿದ್ದಾರೆ.

1.2 ಭಿತ್ತಿಚಿತ್ರಗಳು (Mural paintings) ಇದೊಂದು ತುಂಬ ಹಳೆಯ ಕಾಲದಿಂದಲೇ ಬಂದಂಥ ವರ್ಣಸಂಯೋಜನಾ ಚಿತ್ರಕಲೆಯ ಪದ್ಧತಿಯಾಗಿದೆ. ಭಿತ್ತಿಚಿತ್ರಗಳನ್ನು mural ಎಂತಲೂ ಕರೆಯುತ್ತಾರೆ. ಅಂದರೆ ಗೋಡೆಗಳ ಮೇಲೆ ಚಿತ್ರವನ್ನು ರಚಿಸುವ ವಿಧಾನಕ್ಕೆ ಭಿತ್ತಿ ಎಂದು ಕರೆಯುತ್ತಾರೆ. ಇಲ್ಲಿ ಜಲವರ್ಣದಿಂದ ಮಿಶ್ರಮಾಧ್ಯಮಗಳಿಂದಲೂ ಚಿತ್ರವನ್ನು ರಚಿಸಬಹುದು. ಇದಲ್ಲದೇ ಹಲವಾರು ತಂತ್ರವಿಧಾನಗಳಿಂದ ಭಿತ್ತಿ ಚಿತ್ರವನ್ನು ರಚಿಸಬಹುದು. ಇವುಗಳಲ್ಲಿ ಮೊಸಾಯಿಕ, ಟೆಂಪರಾ , ಟೆರಾಕೋಟಾ ಎಂದು ಹಲವು ತಂತ್ರವಿಧಾನಗಳು. ಮೊಟ್ಟೆ ಅಥವಾ ಯಾವುದೇ ಬಗೆಯ ಅಂಟಿನೊಂದಿಗೆ ಕೆಲವು ಕರಗುವ ಮತ್ತು ಕರಗದ ಬಣ್ಣಗಳನ್ನು ಬೆರೆಸಿ ತಯಾರಿಸುವ ವಿಶೇಷ ವರ್ಣಗಳ ಮಾಧ್ಯಮ ಟೆಂಪೆರಾ. ಈಜಿಪ್ತಿಯನ್ನರು, ರೊಮನ್ನರು ಹಾಗೂ ಗ್ರೀಕರಿಂದ ಉಪಯೋಗಿಸಲ್ಪಟ್ಟ ಹಳೆಯ ಚಿತ್ರವಿಧಾನ. ಭಿತ್ತಿ ಚಿತ್ರಗಳು ಗೋಡೆ ಅಥವಾ ಪಟ್ಟಿಕೆಗಳ ಮೇಲೆ ಚಿತ್ರರಚನೆಗೆ ಉಪಯೋಗಿಸಬಹುದಾದಂಥ ಮಾಧ್ಯಮ. ಟೆಂಪೆರಾದ ವೈಶಿಷ್ಟ್ಯಗಳು : 1 ಬೇರೆ ಬೇರೆ ಮಾಧ್ಯಮಗಳ ಅನುಕರಣೆ 2. ಪರವಾಗಿ ಉಳಿಯುವಿಕೆ 3. ಹೊಳಪಿಲ್ಲದ ಮೇಲ್ಮೈ 4. ಬೇಗ ಒಣಗುವಿಕೆ. 5. ಯಾವುದೇ ಆಧಾರದ ಮೇಲೆ ಬರೆಯ ಬಹುದಾದ ಸಾಮರ್ಥ್ಯ ಇತ್ಯಾದಿ [27] ಗಳಂತಹ ವೈಶಿಷ್ಟ್ಯವನ್ನು ಟೆಂಪರಾ ಹೊಂದಿದೆ. ಈ ರೀತಿಯಾಗಿ ಇಂದು ನಾವು ಈ ಭೀತ್ತಿ ಚಿತ್ರಗಳಿಗೆ ಅಜಂತಾವನ್ನು ಹೆಸರಿಸಬಹುದು. "As works of art the Ajantha paintings like the borodobur reliefs are of

---

24. ಪಿ. ಆರ್. ತಿಪ್ಪೆಸ್ವಾಮಿ(ಪ್ರ.ಸಂ.) : ಕಲಾಕೋಶ , ಪುಟ 249

25. Hilda Simon : Colour Reproduction , Page No.89

26. Hilda Simon : Colour Reproduction , Page No.89

27. ಪಿ. ಆರ್. ತಿಪ್ಪೆಸ್ವಾಮಿ(ಪ್ರ.ಸಂ.) : ಕಲಾಕೋಶ , ಪುಟ 167



ಚಿತ್ರ 30. ಜಾಮಿತಿಯ ಶೈಲಿಯಲ್ಲಿಯ ಭಿತ್ತಿಚಿತ್ರ.

unequal merit though some are worthy to rank among the great pictures of the world" ಇಂಥ ವಿಶ್ವಶ್ರೇಷ್ಠ ಅಜಂತಾ ಭಿತ್ತಿ ಚಿತ್ರಕಲಾ ಶೈಲಿಯಿಂದ ಪ್ರಭಾವಿತರಾದ ಖಂಡೇರಾವರು ಭಿತ್ತಿ ಚಿತ್ರಗಳನ್ನು ಹೆಚ್ಚಾಗಿ ಚಿತ್ರಿಸಿಲ್ಲವಾದರೂ, ಅಧ್ಯಯನ ಕಾಲದ ಸಮಯದಲ್ಲಿ ಮುಂಬೈಯಲ್ಲಿ ಅಂದು ನಡೆಯುತ್ತಿದ್ದ ಭಿತ್ತಿಚಿತ್ರಕಲಾ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಿದ್ದರು ಮುಂಬೈನ ಜೆ.ಜೆ. ಕಲಾಶಾಲೆಯಲ್ಲಿ ಕಲಿಯುತ್ತಿರುವ ಎಷ್ಟೋ ವಿದ್ಯಾರ್ಥಿಗಳು ತಮ್ಮ ಕಲಾಕೃತಿಗಳಲ್ಲಿ ಅಜಂತಾ ಭಿತ್ತಿಚಿತ್ರಗಳ ಶೈಲಿಯನ್ನು ಅಳವಡಿಸಿಕೊಂಡಿದ್ದರು. ಖಂಡೇರಾವರೂ ಇದಕ್ಕೆ ಹೊರತಾಗಿಲ್ಲ. ಇವರು ಬೇರೆ ಬೇರೆ ಭಾಗಗಳಲ್ಲಿ ಭಿತ್ತಿಚಿತ್ರಗಳನ್ನು ರಚಿಸದೇ ಇದ್ದರೂ, ಅಧ್ಯಾಪಕ ವೃತ್ತಿಯ ವೇಳೆಯಲ್ಲಿ ವಿದ್ಯಾರ್ಥಿಗಳಿಗೆ ಬೋಧನೆಯನ್ನು ಮಾಡುವ ವೇಳೆಯಲ್ಲಿ ಕೆಲವು ಭಿತ್ತಿಚಿತ್ರಗಳನ್ನು ಚಿತ್ರಿಸಿದ್ದಾರೆ. ಅವು ಪೇಪರ ಮತ್ತು ರಟ್ಟುಗಳ ಮೇಲೆ ಮಾಡಿದವುಗಳಾಗಿವೆ. ಈ ಹಂತದಲ್ಲಿ ಅವರು ತಾವನು ಬೇಂದ್ರೆಯವರ ಶೈಲಿಯಿಂದ ಪ್ರಭಾವಿತಗೊಂಡಿದ್ದರೋ ಅದೇ ಶೈಲಿಯಲ್ಲಿ ಕೆಲವು ಭಿತ್ತಿಚಿತ್ರಗಳನ್ನು ಚಿತ್ರಿಸಿದ್ದಾರೆ. ಇವರ ಭಿತ್ತಿಚಿತ್ರಗಳಲ್ಲಿ ಜಾಮಿತಿಯ ಆಕೃತಿಗಳು ಕಾಣಬಹುದು.

1.3 ಸ್ಥಿರಚಿತ್ರಗಳು : (Still life) ಖಂಡೇರಾವರು ಜಲವರ್ಣ ಮತ್ತು ತೈಲವರ್ಣ ಈ ಎರಡೂ ಮಾಧ್ಯಮದಲ್ಲಿ ಸ್ಥಿರಚಿತ್ರ (Still life)ಗಳನ್ನು ಚಿತ್ರಿಸಿದ್ದು ನಾವು ಕಾಣಬಹುದಾಗಿದೆ. ಸಾಮನ್ಯವಾಗಿ ಈ ಸ್ಥಿರಚಿತ್ರಗಳನ್ನು ಮಾಡುವ ಉದ್ದೇಶವೆಂದರೆ ಬಣ್ಣಗಳ ಮಿಶ್ರಣ ಅದರಲ್ಲಿರುವ ವಿಶೇಷತೆಗಳು ಮತ್ತು ಶೈಲಿಯಲ್ಲಿ ಹಿಡಿತವನ್ನು ಕಂಡುಕೊಳ್ಳುವ ಸಲುವಾಗಿ ಸ್ಥಿರಚಿತ್ರಗಳನ್ನು ಚಿತ್ರಿಸುವುದು ಎನ್ನುವ ಅಂಶಗಳು ಗಮನಕ್ಕೆ ಬರುತ್ತವೆ. ಇತ್ತೀಚಿನ ದಿನಗಳಲ್ಲದೇ ಮೊದಲಿನಿಂದಲೂ ಸ್ಥಿರಚಿತ್ರಗಳನ್ನು ರಚಿಸುತ್ತಾ ಬಂದಿರುವುದನ್ನು ನಾವು ಹಲವಾರು ಕಡೆ ಗಳಿಂದ ಕಾಣಬಹುದು. ಇತ್ತೀಚಿನ ದಿನಗಳಲ್ಲಂತೂ ಈ ಸ್ಥಿರ ಚಿತ್ರಗಳ ರಚನೆಯನ್ನು ಹೆಚ್ಚಾಗಿ ಬಳಸಿಕೊಳ್ಳುತ್ತಿರುವುದು ಸರ್ವೇಸಾಮಾನ್ಯ. ಕಲಾಶಿಕ್ಷಣದ ಪ್ರಾಥಮಿಕ ಹಂತದಲ್ಲಿ ಈ ಚಿತ್ರಗಳನ್ನು ಚಿತ್ರಿಸುವದು ಮತ್ತು ಈ ವಿಷಯವನ್ನು ಅಲ್ಲಿ ಕಡ್ಡಿಯವಾಗಿರುಸಿದ್ದಾರೆ. ಇದರ ಮೂಲ ಉದ್ದೇಶವೂ ಅಷ್ಟೆ. ಇಲ್ಲಿ ಬಳಸಿಕೊಳ್ಳಲಾಗುವ ಸಾಮಗ್ರಿಗಳು ಜಡವಸ್ತುಗಳಿಂದ ಕೂಡಿದ್ದಾಗಿರುತ್ತವೆ. ಉದಾ:- ಪಂಗಾಣಿ ಪಾತ್ರೆಗಳು, ಮನೆಯಲ್ಲಿ ದೈನಂದಿನ ಕೆಲಸಕ್ಕೆ ಬಳಸುವಂತಹ, ಕೊಡ ಪಾತ್ರೆ, ಗ್ಲಾಸು, ಬಕೇಟು, ಖಾರದ ಭರಣಿ, ಅಲ್ಲದೇ ಹೂ, ಹಣ್ಣು-ಹಂಪಲುಗಳು ಈ ಎಲ್ಲ ವಸ್ತುಗಳನ್ನು ಸ್ಥಿರ ಚಿತ್ರರಚನೆಗಾಗಿ ಬಳಸಿಕೊಳ್ಳುತ್ತಾನೆ. ಹೀಗೆ ಈ ಜಡವಸ್ತುಗಳನ್ನು ಎದುರಿಗೆ ಇಟ್ಟುಕೊಂಡು ಚಿತ್ರಿಸುವುದರಿಂದ ಅಭ್ಯಾಸದ ದೃಷ್ಟಿಯಿಂದ ಒಳ್ಳೆಯದು. ಇದರಿಂದ ದೂರ, ಸಮೀಪ (Perspective) ದೃಗ್‌ದರ್ಶನವನ್ನು ಯೋಜಿಸುವಲ್ಲಿ ಸಹಕಾರಿಯಾಗಬಲ್ಲದು. ಈ ದೃಷ್ಟಿಯಿಂದ ಸ್ಥಿರಚಿತ್ರಗಳ ರಚನೆ ತುಂಬ ಅಗತ್ಯವಾಗಿದೆ.

ಖಂಡೇರಾವರು ಸ್ಥಿರಚಿತ್ರಗಳನ್ನು ಜಲವರ್ಣದಲ್ಲಿ ಹೆಚ್ಚಾಗಿ ಚಿತ್ರಿಸಿಲ್ಲದಿರುವದು ಕಂಡು ಬರುತ್ತದೆ. ಅವರು ಚಿತ್ರಿಸಿದ ಕೆಲವು ಜಲವರ್ಣಚಿತ್ರಗಳಿಗೆ ಹಣ್ಣು ಹಂಪಲು, ಪಿಂಗಾಣಿ ಪಾತ್ರೆಗಳನ್ನು ವಸ್ತುಗಳನ್ನಾಗಿ ಬಳಸಿಕೊಂಡು ಚಿತ್ರಿಸಿದ್ದಾರೆ. ಇವು ಸರಳವಾದ ಸಂಯೋಜನೆಯಿಂದ ಕೂಡಿದ ಸ್ಥಿರಚಿತ್ರಗಳಾಗಿರುವದು ಕಂಡು ಬರುತ್ತವೆ. ಇಲ್ಲಿ ಅವರು ಬಳಸುವ ವರ್ಣಗಾರಿಕೆಯ ಪ್ರಭಾವವು ತುಂಬಾ ಮಹತ್ವದ್ದಾಗಿದೆ. ಇವರು ನಿಸರ್ಗ ಚಿತ್ರವನ್ನು ಚಿತ್ರಿಸುವ ಶೈಲಿಯಲ್ಲೇ ಸ್ಥಿರಚಿತ್ರಗಳನ್ನು ಚಿತ್ರಿಸಿದ್ದಾರೆ. ಮೊದಲಿಗೆ ಬಣ್ಣವನ್ನು ದಪ್ಪದಪ್ಪವಾಗಿ ಕೊಡದೆಯೇ ತೆಳುವಾಗಿ ಲೇಪನಮಾಡಿ ನಂತರ ಅದು ಆರಿದ ಮೇಲೆ ಮತ್ತೇ ಅದರ ಮೇಲೆ ಹೆಚ್ಚಿನ ರೀತಿಯಲ್ಲಿ ನೆರಳು ಬೆಳಕಿನ ಪ್ರಭಾವವನ್ನು ಗುರುತಿಸಲಿಕ್ಕೆ ವರ್ಣವನ್ನು ತಮಗೆ ಬೇಕಾದ ಕಡೆ ಲೇಪನ ಮಾಡುತ್ತಾರೆ. ಆಮೇಲೆ ಕೊನೆಯದಾಗಿ, ಎದುರಿಗೆ ಇಟ್ಟುಕೊಂಡ ವಸ್ತುಗಳ ಮೇಲಿರುವ ಛಾಯೆಯನ್ನು ತೋರಿಸುವದಕ್ಕೆ ಕೊನೆಯ Strokes.ಗಳನ್ನು ಇಡುತ್ತಾರೆ. ಹೀಗೆ ಖಂಡೇರಾವರು ಜಲವರ್ಣಮಾಧ್ಯಮದಲ್ಲಿ ಸ್ಥಿರಚಿತ್ರಗಳನ್ನು ರಚಿಸುತ್ತಾರೆ. ಇಲ್ಲಿ ಬಳಸಿಕೊಂಡದ್ದು ವಸ್ತುಗಳೇ ಆಗಿರಬಹುದು, ಆದರೆ ನಿರ್ಮಿಸಲಿಕ್ಕೆ ಬಳಸಿಕೊಂಡು ವರ್ಣಗಾರಿಕೆಯಲ್ಲಿ ಅದು ನಿಸರ್ಗಚಿತ್ರರಚನೆ ಮಾಡುವ ಮಾದರಿಯದ್ದು. ಇಲ್ಲಿ ಖಂಡೇರಾವರು ಜಲವರ್ಣದಿಂದ ತಯಾರಿಸಿದ ಒಂದು ಸ್ಥಿರಚಿತ್ರವನ್ನು ಉದಾಹರಣೆಗಾಗಿ ತೋರಿಸಲಾಗಿದೆ.



ಚಿತ್ರ 31.　　　　ಸ್ಥಿರ ಚಿತ್ರ, 1

2 ತೈಲವರ್ಣಚಿತ್ರಗಳು : ತೈಲಚಿತ್ರರಚನೆ ಪ್ರಾರಂಭವಾದದ್ದು ಹದಿನೈದನೇ ಶತಮಾನದ ಪ್ರಾರಂಭದಲ್ಲಿ ಆಗ ಕ್ಯಾನವಾಸ ಬಟ್ಟೆಯ ಮೇಲೆ ಬಣ್ಣ ಅಥವಾ ಪ್ಲಾಸ್ಟರ ಆಫ್ ಪ್ಯಾರಿಸ್‌ನ್ನು ಲೇಪಿಸುತ್ತಿದ್ದರು. ಮೊಟ್ಟೆಯ ಬಿಳಿ ಭಾಗದೊಂದಿಗೆ ಬಣ್ಣವನ್ನು ಬೆರೆಸಿ. ಕಲಾಕೃತಿಯನ್ನು ರಚಿಸುತ್ತಿದ್ದು ಇದನ್ನು ಟೆಂಪೆರಾ ಎಂದು ಕರೆಯುತ್ತಿದ್ದರು. ಇದರ ಮೇಲೆ ಮೆರುಗೆಣ್ಣೆಯನ್ನು ಲೇಪಿಸಿದರೆ ತೈಲಚಿತ್ರ ಸಿದ್ಧವಾಗುತ್ತಿತ್ತು. ತೈಲಚಿತ್ರರಚನೆಯು ಪ್ರಾರಂಭದಲ್ಲಿ ವರ್ಣದ್ರವ್ಯದ ಪುಡಿಯನ್ನು ಅಮೃತ ಶಿಲೆಯ ಮೇಲೆ ಅರೆದು ಅದಕ್ಕೆ ಸ್ವಲ್ಪ ತೈಲವನ್ನು ಸೇರಿಸಿ. ಬೇಕಾದ ತೈಲವರ್ಣವನ್ನು ತಯಾರಿಸಿಕೊಳ್ಳುತ್ತಿದ್ದರು. ಈಗ ತೈಲವರ್ಣಟ್ಯೂಬಗಳಲ್ಲಿ ದೊರೆಯುತ್ತದೆ. ಬಣ್ಣವನ್ನು ತೆಳುಮಾಡಿಕೊಳ್ಳಲು ಟರ್ಪೆಂಟೈನ ಮತ್ತು ಅಲಿನಸಿಡ್ ಆಯಿಲ್‌ನ್ನು ಉಪಯೋಗಿಸುತ್ತಾರೆ. ತೈಲಚಿತ್ರಗಳ ಪರಿಚಯ ಭಾರತಕ್ಕೆ ಮಧ್ಯಯುಗದಿಂದಲೇ ಆದಂತೆ ಕಂಡುಬರುತ್ತದೆ. ಮೊಘಲರ ಕಾಲದಲ್ಲಿ ಬಂದ ವಿದೇಶಿ ಪ್ರವಾಸಿಗರು ಅಲ್ಲಿಂದ ತಂದು ಚಿತ್ರಗಳಲ್ಲಿ ತೈಲಚಿತ್ರಗಳು ಇದ್ದಿರಬಹುದು. ಭಾರತದಲ್ಲಿಯ ಕಲಾವಿದರಲ್ಲಿ ರವಿವರ್ಮನಿಂದ ತೈಲಚಿತ್ರ ರಚನೆ ವ್ಯಾಪಕವಾಗಿ ಆರಂಭಗೊಂಡಿತೆಂದು ಹೇಳಬಹುದು. ಇಂದು ಖಂಡೇರಾವರು ಹೆಚ್ಚಾಗಿ ತೈಲಚಿತ್ರರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.ಇವರು ಚಿತ್ರಿಸಿದ ತೈಲವರ್ಣಚಿತ್ರಗಳನ್ನು ನಾವು ಈ ಕೆಳಗಿನಂತೆ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗುವದು.ಅವುಗಳು ಕ್ರಮವಾಗಿ ಈ ರೀತಿಯಾಗಿ ವೆ. 1. ವ್ಯಕ್ತಿಚಿತ್ರಗಳು, 2. ಸ್ಥಿರಚಿತ್ರಗಳು , 3. ನಿಸರ್ಗ ಚಿತ್ರಗಳು, 4. ಸಂಯೋಜನಾ ಚಿತ್ರಗಳು.

2.1 ವ್ಯಕ್ತಿಚಿತ್ರಗಳು : ಪ್ರಾತ್ಯಕ್ಷಿಕೆಗಳಿಂದ ಮಾಡಿದ ಚಿತ್ರಗಳು ಮತ್ತು ಭಾವಚಿತ್ರಗಳನ್ನು ಹಿಂದಿನ ಕಾಲದಿಂದಲೂ ಚಿತ್ರಿಸುತ್ತ ಬಂದಿರುವುದನ್ನ ನಾವು ಕಾಣಬಹುದು. ರಾಜಮಹಾರಾಜರು ತಮ್ಮ ಆಸ್ಥಾನಗಳಲ್ಲಿ ಕಲಾವಿದರಿಗೆ ಆಶ್ರಯ ಕೊಟ್ಟದ್ದರಿಂದ ರಾಜಮಹಾರಾಜರ ಭಾವಚಿತ್ರಗಳು , ವ್ಯಕ್ತಿಚಿತ್ರಗಳು ಹೆಚ್ಚಾಗಿ ಚಿತ್ರಿತಗೊಂಡವು "Portraiture and brilliant court ceremonials were the subjects of most of the mogal miniature paintings"[28] ಚಿತ್ರಕಲೆಯಲ್ಲಿ ಕುಂಚದಿಂದ ಎಳೆಯುವಂಥ ಒಂದೊಂದು ರೇಖೆಗೂ ಅತ್ಯಮೋಘವಾದ ಅರ್ಥವಿದೆ ; ಪ್ರತಿಭೆಯ ಪ್ರಕಿಯೆಗೆ ಒಳಗಾಗಿ ಒಂದು ಆಕಾರವನ್ನು ಪಡೆಯಬೇಕಾಗುತ್ತದೆ. ಇದಕ್ಕಾಗಿ ಹಲವು ದಿನ, ತಿಂಗಳು , ಏಕೆ ವರ್ಷಗಳ ಸಾಧನೆಯಾಗಬೇಕು. ಜ್ಞಾನಸಿದ್ಧಿಯ ಜೊತೆಗೆ ಸಮಾಧಿ ಸಿದ್ಧಿ ಸಾಧಿಸಬೇಕು. ಗೌರವ ತಪಸ್ವಿಯಾಗಿರಬೇಕು. ದ್ಯಾನಮಂತ್ರಗಳ ಮೂಲಕ ಈ ಬಗ್ಗೆ ಸಮಾಧಿ ಸಿದ್ಧಿಯಲ್ಲಿ ಸಂಪೂರ್ಣನಾಗಿ ತನ್ನನ್ನು ತಾನು ಸಮರ್ಪಿಸಿಕೊಂಡು ಕಲಾಕಾರ್ಯಮಾಡಬೇಕು.[29] ಖಂಡೇರಾವರ ವ್ಯಕ್ತಿಚಿತ್ರಗಳನ್ನು ನಾವು ನೋಡಿದಾಗ ಇವುಗಳಲ್ಲಿ ಎರಡು ವಿಧಗಳಾಗಿ ವಿಂಗಡಿಸಿಕೊಳ್ಳಬಹುದಾಗಿದೆ. ಮೊದಲನೆಯದು ಪೂರ್ಣಪ್ರಮಾಣದ ಜೀವಮಾದರಿಯ ಚಿತ್ರಗಳು ಎರಡನೆಯದು ಭಾವಚಿತ್ರಗಳು ಇವುಗಳಲ್ಲಿ ರೂಪಿದರ್ಶಿಯರನ್ನು ಎದುರಿಗೆ ಕುಳ್ಳಿರಿಸಿಕೊಂಡು ರಚಿಸಿದ ಕಲಾಕೃತಿಗಳಾಗಿವೆ. ಕೆಲವು ಛಾಯಾಚಿತ್ರಗಳನ್ನು ಆಧರಿಸಿ ರಚಿಸಿದ ಕಲಾಕೃತಿಗಳಾಗಿವೆ. ಚಿತ್ರಕಲೆಯ ನೈಪುಣ್ಯತೆ ಮನೋವಿಜ್ಞಾನದ ತತ್ವಗಳ ಮೇಲೆ ಅವಲಂಬಿಸಿರುತ್ತದೆ. ಈ ಮನೋವಿಜ್ಞಾನದ ತತ್ವಗಳಲ್ಲಿ ಪ್ರತ್ಯಕ್ಷಣ ಒಂದು ಮುಖ್ಯ ತತ್ವ. ಪ್ರತ್ಯಕ್ಷಣದಲ್ಲಿ ಮೂರು ಪ್ರಕ್ರಿಯೆಗಳು ಇರುವವು. ಒಂದು ಗ್ರಾಹಕ ಎಡನೇಯದು ಸಾಂಕೇತಿಕ ಹಾಗೂ ಮೂರನೇಯದು ಭಾವನಾತ್ಮಕ[30] ಖಂಡೇರಾವರ ವ್ಯಕ್ತಿಚಿತ್ರಗಳಲ್ಲಿ ಭಾವನಾತ್ಮಕ ಸನ್ನಿವೇಶಕ್ಕೆ ಅವರು ಹೆಚ್ಚು ಮಹತ್ವ ಕೊಟ್ಟು ಚಿತ್ರಿಸುರುವುದನ್ನು ನಾವು ಕಾಣಬಹುದಾಗಿದೆ.

ಖಂಡೇರಾವರ ಅಧ್ಯಾಪಕ ವೃತ್ತಿಯಲ್ಲಿ ಹೆಚ್ಚಾಗಿ ಭಾವಚಿತ್ರಗಳನ್ನು ಚಿತ್ರಿಸಿದ್ದು ಕಂಡು ಬರುತ್ತದೆ. ಇವರು ಚಿತ್ರಿಸಿದ ಭಾವಚಿತ್ರಗಳಲ್ಲಿ ಎರಡು ಪ್ರಕಾರಗಳಿದ್ದುದು ನಾವು ನೋಡುಬಹುದು. ಒಂದು ರೂಪದರ್ಶಿಯರನ್ನು ಎದುರಿಗೆ ಕುಳ್ಳಿರಿಸಿಕೊಂಡು ಚಿತ್ರಿಸಿದ ಭಾವಚಿತ್ರಗಳಾದರೆ, ಇನ್ನೊಂದು ಛಾಯಾಚಿತ್ರಗಳನ್ನು ಆಧರಿಸಿ ಚಿತ್ರಿಸಿದ ಭಾವಚಿತ್ರಗಳಲ್ಲಿ

---


28. E.B. Havel : Indian Sulpture & Paintings , Page No. 164
29 . ಡಾ. ಎಸ್.ಸಿ.ಪಾಟೀಲ (ಸಂ.) : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, 62
30. ಡಾ. ಎಸ್.ಸಿ.ಪಾಟೀಲ (ಸಂ.) : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, 62



ಚಿತ್ರ 32.　　　　ಭಾವ ಚಿತ್ರ 1



ಚಿತ್ರ 33.　　ಭಾವ ಚಿತ್ರ 2



ಚಿತ್ರ 34.

ಭಾವ ಚಿತ್ರ 3




ಚಿತ್ರ 35.

ಭಾವ ಚಿತ್ರ 4




ಚಿತ್ರ 36.

ಭಾವ ಚಿತ್ರ 5



ಚಿತ್ರ 37.

ಭಾವ ಚಿತ್ರ 6




ಚಿತ್ರ 38.

ಭಾವ ಚಿತ್ರ 7



ಚಿತ್ರ 39.

ಭಾವ ಚಿತ್ರ 8



ಚಿತ್ರ 40.　　　　ಭಾವ ಚಿತ್ರ 9



ಚಿತ್ರ 41. ಭಾವ ಚಿತ್ರ 10



ಭಾವಚಿತ್ರ.11.

ಚಿತ್ರ 42.



ಚಿತ್ರ 43.　　ಬಸವೇಶ್ವರರ ಪೂರ್ಣ ಪ್ರಮಾಣದ ಚಿತ್ರ



ಚಿತ್ರ 44.　　ಮೃತ್ಯುಂಜಯ ಅಪ್ಪ ಅವರ ಪೂರ್ಣ ಪ್ರಮಾಣದ ಚಿತ್ರ

ಬೇರೆ ಬೇರೆ ರೀತಿಯ ಕಲಾತಂತ್ರವನ್ನು ನಾವು ಕಾಣಬಹುದಾಗಿದೆ. ಇವರು ಪ್ರಾತ್ಯಕ್ಷಿಕೆಗಳನ್ನು ಮಾಡುವ ಸಂದರ್ಭದಲ್ಲಿ ರೂಪದರ್ಶಿಯರನ್ನು ಎದುರಿಗೆ ಕೂಡಿಸಿಕೊಂಡು ಚಿತ್ರಿಸುವ ಸಂದರ್ಭದಲ್ಲಿ ಬಣ್ಣವನ್ನು ಸರಿಯಾಗಿ ಮಿಶ್ರಣಮಾಡಿಕೊಂಡು ಚಪ್ಪಟೆಯಾಗಿ, ರೆಪ್ಪೆರೆಪ್ಪೆಯಾಗಿ ಇಟ್ಟು ಕಲಾಕೃತಿಯು ನಿರ್ಮಿಸಿದಂತೆ ತೋರುತ್ತದೆ. ಚಪ್ಪಟೆಯಾದ ಕುಂಚಗಳನ್ನು ಇಲ್ಲಿ ಬಳಸಿದ್ದು ಕಂಡುಬರುವದು. "A good brush is one that is flexible and clean, and comes to a proper shape naturally [31] Brushes that are flexible and fairly long haired whether flat, round or filbert, are the only sort with which you can draw as well as lay patches of colour " [32] ಖಂಡೇರಾವರು ಭಾವಚಿತ್ರಗಳನ್ನು ರಚಿಸುವಾಗ ಬಣ್ಣವನ್ನು ಚಪ್ಪಟೆಯಾಗಿ ಬಳಸಿಕೊಂಡು ಲೇಪಿಸಿದ್ದು ಮುಖ್ಯವಲ್ಲ. ಇದು ಒಂದು ತಂತ್ರ ವಿಧಾನವಷ್ಟೆ, ಆದರೆ ಅವರು ಈ ರೀತಿಯಾಗಿ ಚಿತ್ರಿಸಿದ ಚಿತ್ರಗಳಲ್ಲಿ ಆವ-ಭಾವಗಳನ್ನು ತೋರಿಸಿರುವದು ಮುಖ್ಯವಾದುದ್ದು. ಯಾಕೆಂದರೆ ಯಾವುದೇ ಭಾವಚಿತ್ರವಾಗಲಿ ಅದರಲ್ಲಿ ಬಳಸುವ ತಂತ್ರವಿಧಾನ, ಶೈಲಿ, ಎಲ್ಲಕ್ಕಿಂತಲೂ ಮುಖ್ಯವಾದದ್ದು Expression ಎಂಬುದು ಪ್ರಮುಖವಾದದ್ದು. ವರ್ಣಗಾರಿಕೆಯ ಪ್ರಭಾವವು. ಹೆಚ್ಚು ಕಡಿಮೆಯಾದರೂ ನಡೆಯುತ್ತದೆ. ಭಾವಚಿತ್ರದಲ್ಲಿ ಭಾವವೇ ಪ್ರಧಾನವಾದದ್ದು. ಅದಕ್ಕಾಗಿಯೇ ಈ ರೀತಿಯ ಚಿತ್ರಕ್ಕೆ ಭಾವಚಿತ್ರವೆಂದು ಕರೆದಿರಬಹುದು. ಒಂದು ವೇಳೆ ಚಿತ್ರದಲ್ಲಿ ಭಾವವೇ ಇರಲಿಲ್ಲವೆಂದರೆ ಅದು ಭಾವಚಿತ್ರವೆನಿಸಲಾರದು. ಖಂಡೇರಾವರ ಚಿತ್ರವನ್ನು ರಚಿಸುವಾಗ ಯಾವರೀತಿಯಿಂದಲೂ ತಂತ್ರವಿಧಾನವು ಬಳಸಿರಲಿ, ಚಿತ್ರದಲ್ಲಿ ಭಾವ ಪ್ರಧಾನ್ಯತೆಗೆ ಹೆಚ್ಚು ಮಹತ್ವವನ್ನು ಕೊಡುತ್ತಾರೆ. "A painter need a certain temprament to do good portraits . He must be intrested in other people, get on well with them, and be prepared to adopt his methods his speed of working , perticulerly to the situatiion beside trying to paint a good picture"[33]

ಛಾಯಾಚಿತ್ರಗಳನ್ನಾಧರಿಸಿದ ಚಿತ್ರಗಳು : ಖಂಡೇರಾವರು ಇನ್ನೊಂದು ರೀತಿಯಿಂದ ರಚಿಸುವ ವ್ಯಕ್ತಿಚಿತ್ರಗಳಲ್ಲಿ ಛಾಯಾಚಿತ್ರಗಳನ್ನು ಆಧರಿಸಿ ರಚಿಸಿದ ವ್ಯಕ್ತಿಚಿತ್ರಗಳು. ಇವುಗಳಲ್ಲಿ ಪೂರ್ಣಪ್ರಮಾಣದ ಜೀವಮಾದರಿಯ ವ್ಯಕ್ತಿಚಿತ್ರವಾಗಿರಬಹುದು. ಅಥವಾ ಭಾವಚಿತ್ರಗಳಾಗಿರಬಹುದು. ಇವುಗಳಲ್ಲಿ ಬಳಸಿಕೊಂಡ ವರ್ಣಗಾರಿಕೆಯ ತಂತ್ರವಿಧಾನವೇ ಬೇರೆ. ಇಲ್ಲಿ ಖಂಡೇರಾವರು ವರ್ಣವನ್ನು ಚಪ್ಪಟೆಯಾಗಿ, ರೆಪ್ಪೆಯಾಗಿ ಕಾಣದೇ ವರ್ಣಗಳು ಒಂದು ಇನ್ನೊಂದರಲ್ಲಿ ಮಿಶ್ರಣವಾಗಿ ಒಂದೇ ವರ್ಣವೆಂಬಂತೆ ತುಂಬಾ ಮೃದುವಾಗಿ ನೈಜವಾಗಿರುವಂತೆ ಲೇಪನಮಾಡಿ ಚಿತ್ರಿಸಿದ್ದು ಕಂಡುಬರುತ್ತದೆ. "Tone (value) is so much bound up with colur that it is difficult to seperate the two" ಇಲ್ಲಿ ಕಲಾಕೃತಿಗಳನ್ನು ನೋಡಿದ ಕೂಡಲೇ ಛಾಯಾಚಿತ್ರಗಳ ಹಾಗೆಯೇ ಸ್ಪಷ್ಟವಾಗಿ ನೈಜತೆಯಿಂದ ಕೂಡಿದ್ದ ಹಾಗೆ ಚಿತ್ರಿತಗೊಂಡಿವೆ.

2.2 ಸ್ಥಿರ ಚಿತ್ರಗಳು (Still life) ಬಣ್ಣಗಳ ಮೂಲವನ್ನು ಬಣ್ಣಗಳ ಸಂಯೋಜನೆಯನ್ನು ತಿಳಿದುಕೊಳ್ಳಲು ಈ ಸ್ಥಿರಚಿತ್ರಗಳನ್ನು ರಚಿಸಲಾಗುತ್ತದೆ. ಸ್ಥಿರಚಿತ್ರಗಳನ್ನು ಹೆಚ್ಚಾಗಿ ರಚಿಸುವುದರಿಂದ ನಮಗೆ ಬಣ್ಣಗಳನ್ನು ಮಿಶ್ರಣ ಮಾಡುವದು ವರ್ಣಗಾರಿಕೆಯ ಪ್ರಭಾವ, ಬಳಸುವ ತಂತ್ರವಿಧಾನವನ್ನು ತಿಳಿದುಕೊಳ್ಳಬಹುದು. ಇವುಗಳನ್ನು ರೇಖಾಚಿತ್ರಗಳಿಂದಲೂ ಚಿತ್ರಿಸಬಹುದು. ಮತ್ತು ವರ್ಣಚಿತ್ರಗಳಿಂದಲೂ ಚಿತ್ರಿಸಬಹುದು. ಕಲಾಶಿಕ್ಷಣದ ಪ್ರಾರಂಭದ ಹಂತದಲ್ಲಿ ಈ ವಿಷಯವನ್ನು ಕಡ್ಡಾಯವಾಗಿರಿಸುತ್ತಾರೆ. ಎದುರಿಗೆ ಜಡವಸ್ತುಗಳನ್ನು ಇರಿಸಿಕೊಂಡು ಚಿತ್ರಿಸುವುದರ ಮೂಲ ಉದ್ದೇಶ ಸ್ಥಿರಚಿತ್ರಣ ಸಂಯೋಜನೆಯನ್ನು ಅಭ್ಯಸಿಸಲು ಮತ್ತು ಬಣ್ಣದ ಪರಿಣಾಮವನ್ನು ಅರಿಯಲು ವಿವಧ ವಸ್ತುಗಳ ಬೆಳಕು ಮತ್ತು ನೆರಳಿನ ಛಾಯೆಯಲ್ಲಿ ಹೊಂದುವ ಬಣ್ಣದ ಬದಲಾವಣೆ ಸಾಮರಸ್ಯ ತಿಳಿಯಲು ಸಹಕಾರಿಯಾಗಿದೆ. ಇದರಲ್ಲಿ

---

31. Bernard Daunstan : Starting to Paint a Portrait, Page No.8
32. Bernard Daunstan : Starting to Paint a Portrait, Page No.9
33. Bernard Daunstan : Starting to Paint a Portrait, Page No.4



ಚಿತ್ರ 45.

ಸ್ಥಿರ ಚಿತ್ರ 2



ಚಿತ್ರ 46. ಸ್ಥಿರ ಚಿತ್ರ 3



ಚಿತ್ರ 47. ಸ್ಥಿರ ಚಿತ್ರ 4

ಬರುವ ವಿವಿಧ ಆಕೃತಿಗಳನ್ನು ಪರಸ್ಪರ ಹೊಂದಿಕೆಯಿಂದ ತೋರಿಸಲು ವಿಶೇಷರೀತಿಯ ಕೌಶಲ್ಯಬೇಕು. ಚಿತ್ರಕಾರನು ಆಕೃತಿ ನಿರೂಪಣೆಗೆ ವಿಶೇಷ ಪ್ರಾಧನ್ಯತೆ ನೀಡುವುದಲ್ಲದೇ ರೂಪವನ್ನು ಸುಸಂಗತವಾಗಿ ನಿರೂಪಿಸುವತ್ತ ಗಮನ ನೀಡುವದು ಸಾಮನ್ಯ ಅಂಶವಾಗಿದೆ. ಈ ಸ್ಥಿರ ಚಿತ್ರದಲ್ಲಿ ಹೂ ಹಣ್ಣು-ಹಂಪಲು, ಪಿಂಗಾಣಿ ವಸ್ತುಗಳು , ಸಂಗೀತ ವಾದ್ಯಗಳು ಮತ್ತು ಇತರ ಜಡವಸ್ತುಗಳು ಕಲಾವಿದರಿಗೆ ವಿಷಯಗಳಾಗಿ ದೊರಕುತ್ತವೆ. ಆದಷ್ಟು ಮೂಲಕ್ಕೆ ಹತ್ತಿರವಾಗುವಂತೆ ನೈಜ ಶೈಲಿಯಲ್ಲಿ ರಚಿಸುವುದೇ ಅಧಿಕ .[34]

ಇಲ್ಲಿ ಖಂಡೇರಾವರು ರಚಿಸಿದ ಸ್ಥಿರ ಚಿತ್ರಗಳನ್ನು ನಾವು ನೋಡಿದಾಗ ಅಲ್ಲಿ ಇಂಪ್ಯಾಸ್ಟೋ (Thick) ವರ್ಣಗಳನ್ನು ಬಳಸಿಕೊಂಡು ಸ್ಥಿರಚಿತ್ರಗಳನ್ನು ರಚಿಸಿದ್ದು ಕಂಡುಬರುತ್ತದೆ. ಇಂಪ್ಯಾಸ್ಟೋ (Impasto) ಎಂದರೆ ಕುಂಚ ಅಥವಾ ಪ್ಯಾಲೆಟ್‌ನೈಫ್ ಬಳಸಿ ದಪ್ಪವಾದ ವರ್ಣವನ್ನು ಮೂಡಿಸಿದಾಗ ಅದನ್ನು ಇಂಪ್ಯಾಸ್ಟೋ ಎಂದು ಕರೆಯಬಹುದು. ಈ ದಪ್ಪವರ್ಣಬಳಕೆಯ ಆಳ, ಮೈವಳಕೆ (Texture) ಮುಂತಾದುವುಗಳನ್ನು ಮೂಡಿಸುತ್ತದೆ. ಈ ರೀತಿ ಇಂಪ್ಯಾಸ್ಟೋವನ್ನು ಗೌವಾಶ್ (Gouavach) ಎನ್‌ಕಾಸ್ಟಿಕ್, ಆಕ್ರಿಲಿಕ ಮುಂತಾದ ವಿವಿಧ ಮಾಧ್ಯಮಗಳಿಂದ ಮೂಡಿಸಬಹುದು[35] ಹೀಗೆ ದಪ್ಪವಾದ ವರ್ಣದಲ್ಲಿ ಸ್ಥಿರಚಿತ್ರಗಳನ್ನು ರಚಿಸಿದ್ದಾರೆ. ಇಲ್ಲಿ ಬಣ್ಣವನ್ನು ದಪ್ಪವಾಗಿ ಒಂದರ ಮಗ್ಗಲೊಂದಿಟ್ಟಂತೆ ತೋರಿದರೂ ಕೂಡ, ಕಣ್ಣನ್ನು ಸ್ವಲ್ಪ ಮಸುಕು ಮಾಡಿ ನೋಡಿದರೆ ವರ್ಣಗಳು ಒಂದು ಇನ್ನೊಂದರಲ್ಲಿ ಕೂಡಿಕೊಂಡು ಚಿತ್ರಿತಗೊಂಡಿರುವಂತೆ ತೋರುತ್ತದೆ. ಇಲ್ಲಿ ಆಕಾರ ಮತ್ತು ರೂಪಗಳ ಕಡೆಗೆ ಹೆಚ್ಚು ಗಮನ ಹರಿಸಿದ್ದಾರೆ. ಪ್ರತಿಯೊಂದು ವಸ್ತುವಿಗೂ ಆಕಾರ (Shape) ವಿರುತ್ತದೆ. ರೇಖೆಗಳಲ್ಲಿ ವ್ಯತ್ಯಾಸಗಳಿರುವಂತೆ ಆಕಾರಗಳಲ್ಲಿಯೂ ಉಂಟು. ವೈಯಕ್ತಿಕ ಗುಣಗಳನ್ನು ಒಂದೊಂದು ಆಕಾರವು ಹೊಂದಿರುತ್ತದೆ. ಆಕಾರಗಳಲ್ಲೂ ಕೆಲವು ಸುಂದರವಾಗಿದ್ದು, ಕೆಲವು ವರ್ಣ ಸಲಸಾಧ್ಯವಾಗಬಹುದು.[36] ಅಲ್ಲದೆ ಒಂದು ವಸ್ತುವಿನ ಸಂಪೂರ್ಣತೆಯನ್ನು ಒಂದು ರೇಖಾ ಚಿತ್ರದಲ್ಲಿ ನಮಗೆ ದೊರಕಿಸಿಕೊಡುವ ಪರಿಕರವನ್ನು ರೂಪ ಎನ್ನುತ್ತೇವೆ. ಆದ್ದರಿಂದ ಮೂಲಭೂತವಾಗಿ ಆಕಾರಕ್ಕಿಂತಲೂ ರೂಪ ಭಿನ್ನವಾದದ್ದು. ಆಕಾರವು ಕೇವಲ ಸಮತಟ್ಟು ಎರಡು ಆಯಾಮದ ಗುಣಗಳನ್ನು ಸೂಚಿಸುತ್ತದೆ. ಉದಾ: ಒಂದು ವಸ್ತುವನ್ನು ಚಿತ್ರಿಸುವಾಗ ಅದರ ಮೇಲೆ ಬೀಳುವ ನೆರಳು-ಬೆಳಕು ಆ ವಸ್ತುವಿನ ಚಿತ್ರಕಾರನನ್ನು ನಿರ್ಧರಿಸುವ ಅತ್ಯಂತ ಪ್ರಮುಖ ಅಂಶವಾಗುತ್ತದೆ. ಒಂದೇ ದಿಕ್ಕಿನಿಂದ ಬೆಳಕು ಬಿದ್ದಾಗ ಆಕಾರವು ಮತ್ತೊಂದರ್ಧದಲ್ಲಿ ಕಪ್ಪಾಗಿದ್ದು ಅತ್ಯಂತ ನಾಟಕೀಯತೆಯನ್ನು ಪಡೆಯುತ್ತದೆ[37] ಹೀಗಾಗಿ ಖಂಡೇರಾವರ ಪ್ರತಿಯೊಂದು ಸ್ಥಿರಚಿತ್ರಗಳಲ್ಲಿಯೂ ಕೂಡ ಆಕಾರಗಳನ್ನು ಒಳಗೊಂಡಂತೆ ಅವುಗಳಿಗೆ ತಕ್ಕಂತೆ ಬಣ್ಣಗಳ ಸಂಯೋಜನೆಯನ್ನು ಇಲ್ಲಿ ಬಳಸಿಕೊಂಡಿದ್ದು ಸ್ಪಷ್ಟವಾಗಿ ತಿಳಿಯುತ್ತದೆ. ಖಂಡೇರಾವರು ಚಿತ್ರಿಸಿದ ಚಿತ್ರಗಳಲ್ಲಿ ಪಿಂಗಾಣಿ ಪಾತ್ರೆಗಳು, ಗ್ರಂಥಗಳು, ಹಣ್ಣು -ಹಂಪಲಗಳು ಅಲ್ಲದೇ ಸತ್ತ ಪ್ರಾಣಿ ಪಕ್ಷಿಗಳ ಜಡದೇಹಗಳನ್ನು ವಸ್ತು ವಿಷಯಗಳಾಗಿ ಬಳಸಿಕೊಂಡು ಚಿತ್ರಿಸಿದ್ದಾರೆ.

2.3 ನಿಸರ್ಗ ಚಿತ್ರಗಳು : ಇದು ಖಂಡೇರಾವರಿಗೆ ಅತೀ ಇಷ್ಟವಾದ ಒಂದು ವಿಷಯವಾಗಿದೆ. ಖಂಡೇರಾವರು ಹೆಚ್ಚಾಗಿ ನಿಸರ್ಗಚಿತ್ರಗಳನ್ನು ಚಿತ್ರಿಸಿರುವುದು ತಿಳಿದುಬರುತ್ತದೆ. ನಿಸರ್ಗವು ಕಲಾವಿದನಿಗೆ ಪ್ರಭಾವವನ್ನು ಬೀರುವ ಮೊದಲ ಪ್ರಯತ್ನವಾಗಿದೆ. ನಿಸರ್ಗದ ಪ್ರೇರಣೆಯಿಂದಲೇ ಇಂದು ಎಷ್ಟೋ ಕಲಾವಿದರು ನಿಸರ್ಗ ಚಿತ್ರಗಳನ್ನು ರಚಿಸಿದವರಾಗಿದ್ದಾರೆ. ಖಂಡೇರಾವರೂ ಇದಕ್ಕೆ ಹೊರತಾಗಿಲ್ಲ. ನಿಸರ್ಗವು ಎಂಥವರನ್ನು ಮಂತ್ರಮುಗ್ದರನ್ನಾಗಿಸಿ ಬಿಡುತ್ತದೆ ಎನ್ನುವ ಮಾತು ಸುಳ್ಳಲ್ಲ. ಸಂಯೋಜನಾ ಕಲಾಕೃತಿಗಳನ್ನು ಚಿತ್ರಿಸುವಾಗ ಹಿಂಬದಿಗೆ ನಿಸರ್ಗವನ್ನು ಬಳಸಿಕೊಳ್ಳುತ್ತಾರೆ. ಖಂಡೇರಾವರು ಅಧ್ಯಯನದ ಕಾಲದಲ್ಲಿ ದಿನಾಲು ಒಂದಾದರೂ ನಿಸರ್ಗ ಚಿತ್ರವನ್ನು ಚಿತ್ರಿಸುವ ರೂಡಿಯಾಗಿಸಿ ಕೊಂಡಿದ್ದರು.

---

34. ಪಿ.ಆರ್‌ತಿಪ್ಪೆಸ್ವಾಮಿ (ಪ್ರ.ಸಂ.) : ಕಲಾಕೋಶ, 347
35. ಪಿ.ಆರ್‌ತಿಪ್ಪೆಸ್ವಾಮಿ (ಪ್ರ.ಸಂ.) : ಕಲಾಕೋಶ, 36
36. ಪಿ.ಆರ್‌ತಿಪ್ಪೆಸ್ವಾಮಿ (ಪ್ರ.ಸಂ.) : ಕಲಾಕೋಶ, 37
37. ಪಿ.ಆರ್‌ತಿಪ್ಪೆಸ್ವಾಮಿ (ಪ್ರ.ಸಂ.) : ಕಲಾಕೋಶ, 286



ಚಿತ್ರ 48. ಇಂಪ್ಯಾಸ್ಟೋ ಮಾದರಿಯ ನಿಸರ್ಗಚಿತ್ರ 1



ಚಿತ್ರ 49.

ಇಂಪ್ಯಾಸ್ಟೋ ಮಾದರಿಯ ನಿಸರ್ಗಚಿತ್ರ 2



ಚಿತ್ರ 50.

ಇಂಪ್ಯಾಸ್ಟೋ ಮಾದರಿಯ ನಿಸರ್ಗಚಿತ್ರ 3

ಖಂಡೇರಾವರು ಚಿತ್ರಿಸಿದ ಅನೇಕ ನಿಸರ್ಗಚಿತ್ರಗಳನ್ನು ನಾವು ನೋಡಿದರೆ ನಮಗೆ ತಿಳಿದುಬರುವದು. ಎರಡು ಮಾಧ್ಯಮಗಳಲ್ಲಿ ಒಂದು ಜಲವರ್ಣದಿಂದ ಚಿತ್ರಿಸಿದ ನಿಸರ್ಗಚಿತ್ರಗಳು ಮತ್ತೊಂದು ತೈಲವರ್ಣದಿಂದ ಚಿತ್ರಿಸಿದ ನಿಸರ್ಗಚಿತ್ರಗಳು. ಆದರೆ ಹೆಚ್ಚಾಗಿ ಜಲವರ್ಣದಿಂದಲೇ ನಿಸರ್ಗಚಿತ್ರಗಳನ್ನು ಚಿತ್ರಿಸಿದ್ದಾರೆ. ತೈಲವರ್ಣದಿಂದ ಚಿತ್ರಿತವಾದ ನಿಸರ್ಗಚಿತ್ರಗಳು ಕಡಿಮೆ ಬೆರಳಣಿಕೆಯಷ್ಟು ಎಂದರೂ ತಪ್ಪಲ್ಲ. ಜಲವರ್ಣದಿಂದ ತಯಾರಿಸಿದ ನಿಸರ್ಗ ಚಿತ್ರಗಳು ಮತ್ತು ತೈಲವರ್ಣದಿಂದ ಚಿತ್ರಿಸಿದ ನಿಸರ್ಗ ಚಿತ್ರಗಳನ್ನು ನಾವು ನೋಡಿದಾಗ ವರ್ಣಗಳ ಬಳಕೆಯಲ್ಲಿ ತುಂಬ ವ್ಯತ್ಯಾಸವನ್ನು ಕಾಣಬಹುದು. ಜಲವರ್ಣದಲ್ಲಿ ತುಂಬಾ ತೆಳುವಾಗಿ ಬಣ್ಣವನ್ನು ಲೇಪನಮಾಡಿದ್ದು ಕಂಡುಬಂದರೆ, ತೈಲವರ್ಣದಲ್ಲಿ ಬಣ್ಣವನ್ನು ದಪ್ಪ ದಪ್ಪವಾಗಿ ಇಂಪ್ಯಾಸ್ಟೊ ರೀತಿಯಲ್ಲಿ ರೆಪ್ಪೆ ರೆಪ್ಪೆಯಾಗಿ ಒಂದರ ಮಗ್ಗಲೊಂದು ಇಟ್ಟಂತೆ ಭಾಸವಾಗುತ್ತದೆ. ಆದರೆ ದೂರದಿಂದ ಅಥವಾ ಕಣ್ಣನ್ನು ಸ್ವಲ್ಪ ಸಣ್ಣಗೆ ಮಾಡಿ ನೋಡಿದರೆ ಬಣ್ಣಗಳು ಒಂದು ಇನ್ನೊಂದರಲ್ಲಿ ಕೂಡಿಕೊಂಡಂತೆ ಕಾಣುವದು. ಇವುಗಳನ್ನು ಚಿತ್ರಿಸುವಾಗ ಕುಂಚಗಳನ್ನು ಬಳಸದೇ ನೈಫ್ ನ್ನು ಬಳಸಿಕೊಂಡು ನಿಸರ್ಗಚಿತ್ರಗಳನ್ನು ಚಿತ್ರಿಸಿದ್ದಾರೆ. ಇದು ಇವರು ತೈಲ ಮಾಧ್ಯಮದಲ್ಲಿ ಚಿತ್ರಿಸಿದ ನಿಸರ್ಗಚಿತ್ರಗಳು. ಇವರು ಇನ್ನೊಂದು ಬಗೆಯಲ್ಲಿ ತೈಲವರ್ಣವನ್ನೇ ಬಳಸಿಕೊಂಡು ನಿಸರ್ಗಚಿತ್ರಗಳನ್ನು ಚಿತ್ರಿಸಿದ್ದು ಕಂಡುಬರುತ್ತದೆ. ಇಲ್ಲಿ ವರ್ಣವನ್ನು ದಪ್ಪ ದಪ್ಪವಾಗಿ ಬಳಸಿಕೊಳ್ಳದೆ ಕುಂಚಗಳನ್ನು ಉಪಯೋಗಿಸಿಕೊಂಡು ತೆಳುವಾಗಿ ಜಲವರ್ಣಮಾದರಿಯಲ್ಲೇ ಚಿತ್ರಿಸುವದು ಕಂಡುಬರುತ್ತದೆ. ಈ ರೀತಿಯಾಗಿ ಚಿತ್ರಿತಗೊಂಡ ನಿಸರ್ಗಚಿತ್ರವು ನೋಡಲು ಛಾಯಾಚಿತ್ರಳಂತೆ, ತುಂಬ ನೈಜವಿರುವಂತೆ ಕಾಣಿಸುತ್ತವೆ. ಖಂಡೇರಾವರ ನಿಸರ್ಗ ಚಿತ್ರಗಳಲ್ಲಿ ನೆರಳು- ಬೆಳಕಿನ ಪ್ರಭಾವ ತುಂಬಾ ಆಕರ್ಷಣಿಯವಾಗಿ ಮೂಡಿಬರುತ್ತವೆ. ಹೀಗೆ ಖಂಡೇರಾವರು ಪ್ರತಿಯೊಂದು ಮಾಧ್ಯಮದಲ್ಲೂ ಕಲಾಕೃತಿಗಳನ್ನು ರಚಿಸುವ ಕೈಚಳಕವನ್ನು ಹೊಂದಿದವರಾಗಿದ್ದಾರೆ.

2.4 ಸಂಯೋಜನಾ ಚಿತ್ರಗಳು : ಖಂಡೇರಾವರು ಚಿತ್ರಿಸಿದ ಸಂಯೋಜನಾ ಕಲಾಕೃತಿಗಳನ್ನು ನಾವು ಮೂರು ಭಾಗಗಳಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ.

i. ನೈಜ ಸಂಯೋಜನಾ ಕಲಾಕೃತಿಗಳು

ii. ಆಧುನಿಕ ಸಮ್ಮಿಶ್ರಣ ಸಂಯೋಜನಾ ಕಲಾಕೃತಿಗಳು

iii. ಅಮೂರ್ತ ಸಂಯೋಜನಾ ಕಲಾಕೃತಿಗಳು

ಚಿತ್ರಕಲಾಕೃತಿಗಲ್ಲಿ ಸಂಯೋಜನೆಯು ಪ್ರಮುಖವಾದ ಅಂಶವಾಗಿದೆ. ಯಾವುದೇ ಕಲಾಕೃತಿಯಾಗಲಿ ಅದು ಸಂಯೋಜನೆಯಿಂದ ಕೂಡಿದ್ದಿರಬೇಕು ಸಂಯೋಜನೆಯಲ್ಲದಿದ್ದರೆ ಕಲಾಕೃತಿಯು ತನ್ನ ಗುಣಮಟ್ಟವನ್ನು ಕಾಪಾಡಿಕೊಳ್ಳಲಾರದು. ಸಂಯೋಜನೆಯು ಖಂಡೇರಾವರ ಅತ್ಯಂತ ನೆಚ್ಚಿನ ವಿಷಯವಾಗಿದೆ. ಕಲಾವಿದನು ಚಿತ್ರಸಲಿರುವ ವಸ್ತುವಿಗೆ ಸಂಬಂಧಿಸಿದಂತೆ ಮಾನವಾಕೃತಿಗಳು, ಹಣ್ಣುಗಳು ಅಥವಾ ಕೇವಲ ಬೇರೆ ಬೇರೆ ಆಕೃತಿಗಳನ್ನು ಹೊಂದಿಸಿ ವರ್ಣಚಿತ್ರಗಳನ್ನು ರಚಿಸುವ ಕಲಾತ್ಮಕ ಕೃತಿ ಸಂಯೋಜನೆ ಅಥವಾ ಕಾಂಪೋಜಿಷನ್ ಎಂದು ಕರೆಯುತ್ತಾರೆ. ಚಿತ್ರ ಸಂಯೋಜನೆಯು ಚಿತ್ರಕಲೆಯ ಎಲ್ಲ ವಿಷಯಗಳಲ್ಲಿ ಅತಿ ಪ್ರಮುಖ ಹಾಗೂ ಮಹತ್ವದ ವಿಷಯಗಳಾಗಿರುತ್ತವೆ. ಕಲಾವಿದನ ಬುದ್ದಿಮತ್ತೆಯು ಚಿತ್ರಸಂಯೋಜನೆಯಿಂದಲೇ ಪ್ರಕಟಗೊಳ್ಳುತ್ತದೆ. ಕಲಾವಿದನ ರಚನಾತ್ಮಕ ಕ್ರಿಯಾತ್ಮಕ ಅಭಿವ್ಯಕ್ತಿ ಕೌಶಲ್ಯಗಳು ಚಿತ್ರ ಸಂಯೋಜನೆಯ ಮುಖಾಂತರವೇ ಬೆಳಕಿಗೆ ಬರುತ್ತದೆ. ಚಿತ್ರಸಂಯೋಜನೆಯ ಮೂಲತತ್ವಗಳಾದ ವರ್ಣ, ರೇಖೆ ಆಕೃತಿ, ವರ್ಣವಿನ್ಯಾಸ, ಮೈವಳಿಕೆ ಮತ್ತು ಸ್ಥಳಾವಕಾಶ ಮುಂತಾದವುಗಳ ಅರ್ಥವ್ಯಾಪ್ತಿಯನ್ನು ಐಕ್ಯತೆ ಸಾಮರಸ್ಯತೆ ಮತ್ತು ಪ್ರಮಾಣ ಮುಂತಾದ ಚಿತ್ರಸಂಯೋಜನೆಯ ನಿಯಮಗಳನ್ನು ತಿಳಿದಲ್ಲದೆ ಚಿತ್ರಸಂಯೋಜನೆಯ ಪರಿಪೂರ್ಣಕೃತಿಯೆನಿಸಲು ಸಾಧ್ಯವಿಲ್ಲ. ಪ್ರತಿಯೊಂದು ರೇಖೆ ವರ್ಣಗಳಿಗೆ ಪ್ರತ್ಯೇಕವಾದ ಗುಣ ಸ್ವಭಾವಗಳಿರುವುದರಿಂದ ಕಲಾವಿದರು ಚಿತ್ರಿಸಲಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಗುಣವಿಶೇಷಗಳ ವರ್ಣಗಳನ್ನು, ರೇಖೆಗಳನ್ನು ಚಿತ್ರಿಸಿದಾಗಲೇ ಚಿತ್ರವು ಅರ್ಥಪೂರ್ಣವಾಗುತ್ತದೆ. ಚಿತ್ರ ಸಂಯೋಜನೆಯು ಸಾಂಪ್ರದಾಯಿಕವಾಗಿರಲಿ, ಆಧುನಿಕವಾಗಿರಲಿ, ಸಮಕಾಲೀನ ಕೃತಿಯಾಗಿರಲಿ ಅದರಲ್ಲಿ ಚಿತ್ರ ಸಂಯೋಜನೆಯ ಮೂಲ ತತ್ವಗಳಾಗಿರಲಿ ನಿಯಮ- ನಿಭಂದನೆಗಳಾಗಲಿ ಇಲ್ಲದೇ ಹೋದಲ್ಲಿ

ಅದೊಂದು ಪರಿಪೂರ್ಣ ಕಲಾಕೃತಿಯಾಗಲಾರದು [38]

ಖಂಡೇರಾವರು ಸಂಯೋಜನಾ ಕಲಾಕೃತಿಗಳಲ್ಲಿಯೇ ಹಲವಾರು ರೀತಿಯ ವೈವಿಧ್ಯಮಯವಾದ ಕಲಾಕೃತಿಗಳನ್ನು ರಚಿಸಿದ್ದಾರೆ. ಸಂಯೋಜನೆಯಲ್ಲಿ ಹಲವಾರು ನಿಯಮ-ನಿಭಂದನೆಗಳಿರುವದು ನಾವು ಕಾಣಬಹುದಾಗಿದೆ. ಒಂದು ಕಲಾಕೃತಿಯು ಪರಿಪೂರ್ಣವೆನಿಸಿಕೊಳ್ಳಬೇಕಾದರೆ ಅದು ಕೆಲವು ಅಂಶಗಳನ್ನು ಹೊಂದಿರಬೇಕು. "Pure artistic composition has two elements : 1 The composition of the whole picture 2. The creative of the various forms which by standing in different relationship to be considered in the light of the whole. and so ordered as to suit this whole [39] ಹೀಗೆ ಸಂಯೋಜನೆಯು ಪ್ರತಿಯೊಂದರಲ್ಲೂ ಅಳವಡಿಸಿಕೊಂಡಿರುತ್ತದೆ. ಸಂಗೀತಕ್ಷೇತ್ರವಾಗಲಿ, ಮುದ್ರಣವಾಗಲಿ, ಚಿತ್ರಕಲೆಯಾಗಲಿ ಇಂಥ ಯಾವುದೇ ವಿಷಯಗಳಲ್ಲಾಗಲಿ ಸಂಯೋಜನೆಯು ಪ್ರಮುಖವಾಗಿ ಬೇಕೆ ಬೇಕು. ಒಂದು ರೀತಿಯಲ್ಲಿ ಸಂಯೋಜನೆಯೆಂದರೆ ನಾವು ಬಹಳ ಆಳವಾಗಿ ಇಳಿಯಬೇಕಾಗಿಲ್ಲ. ಅದು ಸರಳವಾದಂಥದ್ದು ಇದಕ್ಕೆ ಕೂಡಿಸು, ಜೊಡಿಸು, ಹೊಂದಿಸು, ಎಂಬೆಲ್ಲಾ ನಾನಾ ರೀತಿಯ ಅರ್ಥಗಳಿಂದ ಗುರುತಿಸಬಹುದು. ಒಟ್ಟಿನಲ್ಲಿ ಸರಿಯಾಗಿ ಹೊಂದಿಸು ಅಂದರೆ ಯಾವ ಯಾವ ಸ್ಥಳದಲ್ಲಿ ಏನೆಂದು ಕೂಡಿಸಬೇಕೋ ಅಲ್ಲಿ ಅದನ್ನು ಹೊಂದಿಸುವದು , ಲಯಬದ್ಧವಾಗಿ ಜೋಡಿಸುವದು, ಎಂದು ಸರಳವಾಗಿ ಕರೆಯಬಹುದು. ಚಿತ್ರಗಳ ಜೋಡಣಾ ವಿಧಾನದಲ್ಲಿ ಬರುವ ಇನ್ನೊಂದು ಮುಖ್ಯ ಅಂಶ ಈ ಲಯ, ಈ ಲಯ ಸಂಗೀತದಲ್ಲಿ ಬರುವ ತಾಳವನ್ನು ಹೋಲುತ್ತದೆ. ಪಾಯಶಃ ಗೆರೆಯೋ, ಆಕಾರವೋ, ಅಥವಾ ಬಣ್ಣವೋ ಮತ್ತೆಮತ್ತೆ ಚಿತ್ರದ ಒಳಹೊರಗೆ ಒಡಾಡುವಂತೆ ಚಿತ್ರಿಸಿದಾಗ ಕಣ್ಣಿಗೆ ಒಂದು ಬಗೆಯ ಅಲಂಕಾರಿಕ ವಿನ್ಯಾಸ ಗೋಚರಿಸುತ್ತದೆ. ಹೀಗೆ ಸಂಯೋಜನೆಯನ್ನು ಕುರಿತು ನಾನಾ ರೀತಿಯಾಗಿ ಅದರ ಉಪಯೋಗವನ್ನು ವಿವರಿಸಬಹುದು. ಖಂಡೇರಾವರು ಹೆಚ್ಚಾಗಿ ತೈಲವರ್ಣದಲ್ಲಿ ಸಂಯೋಜನಾ ಕಲಾಕೃತಿಗಳನ್ನು ರಚಿಸಿದವರಾಗಿದ್ದಾರೆ.

i. ನೈಜ ಸಂಯೋಜನಾ ಚಿತ್ರಗಳು : ಖಂಡೇರಾವರು ಹೆಚ್ಚಾಗಿ ಧಾರ್ಮಿಕ, ಪೌರಾಣಿಕ ಮತ್ತು ಶರಣರಬದುಕು , ಅವರ ಜೀವನವನ್ನು ಕುರಿತು ಅನೇಕ ವಿಷಯಗಳ ಮೇಲೆ ಹಲವಾರು ನೈಜ ಸಂಯೋಜನಾ ಕಲಾಕೃತಿಗಳನ್ನು ರಚಿಸಿದ್ದಾರೆ. ಸಾಮನ್ಯವಾಗಿ ನೈಜ ಎಂದರೆ ವಾಸ್ತವ ಅಂದರೆ ಇದ್ದದ್ದನ್ನು ಇದ್ದಂತೆಯೇ ಚಿತ್ರಿಸುವದು. ಇಂದ್ರಿಯ ಸುಖಗಳನ್ನು ಉತ್ಪನ್ನಗೊಳಿಸತಕ್ಕ ಕಲೆಯ ಕಾಲದೇಶ ಬಾಧಿತವಾದುದ್ದು , ನೈಜಕಲೆಯು ವಿಶ್ವ ಅಂತರಂಗವನ್ನು ಬಹಿರಂಗಪಡಿಸಿ ಮನದಟ್ಟು ಮಾಡಿ ಅದರ ಕ್ಷಣ ಭಂಗುರತೆಯಿಂದ ನಮ್ಮನ್ನು ಅನಂತತೆಗೆ ಸೆಳೆಯುವದು , ನಮ್ಮಲ್ಲೊಂದು ಅಪಾರ ಚೇತನವನ್ನು ಂಟುಮಾಡುವದು. ಅದು ನಮ್ಮನ್ನು ನಮಗಿಂತ ಮೇಲಕ್ಕೆತ್ತುವದು , ಅನಾಸಕ್ತ ನಿರಹಂಕಾರ ಭಾವಗಳಿಂದ ಅಭವ್ಯತೆಯ ಚಿಂತನೆಯನ್ನು ಅಶಾಭೀರಹಿತವಾಗಿ ಮಾಡುವವು. ಅದರಿಂದ ನಮಗೆ ಒಂದು ತಾತ್ಕಾಲಿಕ ಸಮಾಧಿಯೇ ಉಂಟಾಗುವುದು. ಅದರಿಂದೆತ್ತೆಚ್ಚು ನೋಡಲು ಪ್ರಪಂಚದ ಕಾಠಿಣ್ಯವೆಲ್ಲ ಕಣ್ಣನ್ನು ಕುಕ್ಕುವಂತಾಗುವದು [41] ನೈಜಕಲೆಯನ್ನು ಕುರಿತು ಗಾಂಧೀಜಿಯವರು ಹೀಗೆ ಹೇಳುತ್ತಾರೆ. True art takes note not merely of form but also of what its behind. There is an art kills and an art that gives life. True art must evidence of happiness" (ನೈಜಕಲೆಯು ಕೇವಲ ವಸ್ತುವಿನ ಬಾಹ್ಯರೂಪವನ್ನು ಗ್ರಹಿಸದೇ ಅದಕ್ಕೂ ಹಿಂದಿರುವ ಆಂತರ್ಯವನ್ನು ಗ್ರಹಿಸುತ್ತದೆ. ಕೊಲ್ಲುವ ಕಲೆಯು ಇದೆ. ಬದುಕಿಸುವ ಕಲೆಯೂ ಇದೆ. ನೈಜತೆಯು ಕಲಾವಿದರ ಆನಂದ ಸಂತೃಪ್ತಿ ಮತ್ತು ಪವಿತ್ರತೆಯ ಇವುಗಳ ದ್ಯೋತಿಕವಾಗಿದೆ.)[42]

---

38. ಪಿ.ಆರ್‌ತಿಪ್ಪೆಸ್ವಾಮಿ (ಪ್ರ.ಸಂ.) : ಕಲಾಕೋಶ, 331
39. Ranjan .K. Ghosh : Aesthetic Theory and Art, Page No.141.
41. ಪಿ.ಆರ್‌ತಿಪ್ಪೆಸ್ವಾಮಿ (ಪ್ರ.ಸಂ.) : ಕಲಾಕೋಶ, 10
42. ಡಾ. ಎಸ್.ಸಿ . ಪಾಟೀಲ (ಸಂ.) ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು , ಪುಟ 105



ಮಹಾತ್ಮಾ ಗಾಂಧಿಜಿಯವರೊಂದಿಗೆ ಸಮಾಲೋಚಿಸುತ್ತಿರುವ ಪೂಜ್ಯ ಶರಣಬಸವಪ್ಪನವರು. ಚಿತ್ರ 51.



ಚಿತ್ರ 52. ಬ್ರಿಟೀಷರ ಮಕ್ಕಳನ್ನು ಸೆರೆಹಿಡಿದಿರುವ ಸೇವಕರು, ಕಿತ್ತೂರು ರಾಣಿ ಚನ್ನಮ್ಮನ ಆಸ್ಥಾನದ ದೃಶ್ಯ.

ನೈಜಲೆಯು ಕಣ್ಣಿಗೆ ಸುಂದರ ಮತ್ತು ಮನಸ್ಸಿಗೆ ಆನಂದವನ್ನು ಕೊಡುವದು, ಖಂಡೇರಾವರು ಅನೇಕ ನೈಜಸಂಯೋಜನಾಕಲಾಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಶರಣರ ಕುರಿತಾದ ಕೆಲವು ಚಿತ್ರಗಳಿವೆ. ಶರಣಬಸವರು ಪ್ರಾಣಿಗಳಿಗೆ ಕುಡಿಯಲು ನೀರನ್ನು ಸುರುವುತ್ತಿರುವುದು , ನೀರಿನ ದಾಹದಿಂದ ಓಡೋಡಿ ಬರುತ್ತಿರುವ ಪ್ರಾಣಿ ಪಕ್ಷಿಗಳು ಈ ಚಿತ್ರವು ತುಂಬಾ ಚೆನ್ನಾಗಿ ಮೂಡಿಬಂದಿದೆ. ಇದಲ್ಲದೇ ಜಂಗಮರು ಬಂದಾಗ ಅವರಿಗೆ ದಾಸೋಹವನ್ನುಣ್ಣಿಸಲು ಮಹಾಮನೆಯಲ್ಲಿ ಅಡುಗೆಯನ್ನು ಮಾಡುವ ಸಲುವಾಗಿ ಉರುವಲು ಕಟ್ಟಿಗೆಯಿಲ್ಲದಿದ್ದಾಗ ಮನೆಯ ಜಂತಿಯ ತೊಲೆಯನ್ನೇ ತೆಗೆದು, ಬಂದಂಥ ಜಂಗಮರಿಗೆ ಉಣ್ಣಲು ಬಡಿಸುವ ದೃಶ್ಯ. ಅಕಡೆ ಪಕ್ಕದಲ್ಲಿ ಕಟ್ಟಿಗೆಯನ್ನು ಉರುವುತ್ತ ಅಡಿಗೆಯನ್ನು ಮಾಡುತ್ತಿರುವ ದೃಶ್ಯ. 1927ರ ಸಮಯದಲ್ಲಿ ಮಹಾತ್ಮಾಗಾಂಧಿಜಿಯವರು ಕಲಬುರ್ಗಿಗೆ ಬಂದಾಗ ಪೂಜ್ಯ ಶರಣಬಸವೇಶ್ವರರು ಅವರೊಂದಿಗೆ ಚರ್ಚೆಯಲ್ಲಿ ಕುಳಿತುಕೊಂಡಿರುವ ದೃಶ್ಯದ ಚಿತ್ರ. ಕಿತ್ತೂರು ಚೆನ್ನಮ್ಮನ ಆಸ್ಥಾನದಂತ ಹ ಇನ್ನೂ ಅನೇಕ ನೈಜ ಸಂಯೋಜನಾ ಕಲಾಕೃತಿಗಳನ್ನು ಚಿತ್ರಿಸಿದ್ದಾರೆ. ಇದರಲ್ಲಿ ಕಿತ್ತೂರು ರಾಣಿ ಚೆನ್ನಮ್ಮನ ಆಸ್ಥಾನದ ಚಿತ್ರ ತುಂಬ ಭಾವ ಪ್ರಧಾನವಾದ ಕಲಾಕೃತಿಯಾಗಿದೆ. ಇಲ್ಲಿ ಬ್ರಿಟಿಷರ ಮಕ್ಕಳನ್ನು ಸೆರೆಹಿಡಿದು ಅವಳೆದುರಿಗೆ ತಂದು ನಿಲ್ಲಿಸಿದ್ದಾರೆ. ಪಕ್ಕದಲ್ಲಿ ಸೇವಕನೊಬ್ಬನು ಮಕ್ಕಳನ್ನು ಅಟ್ಟಿಸಿಕೊಂಡು ನಿಂತಿದ್ದಾನೆ. ಪಕ್ಕದಲ್ಲಿ ಆಕಡೆ ,ಈಕಡೆ ಮಂತ್ರಿ ಮಹೋದಯರು ಕುಳಿತಿದ್ದಾರೆ. ಚೆನ್ನಮ್ಮಳು ತನ್ನ ಕೈಯನ್ನು ಮಕ್ಕಳೆಡೆಗೆ ತೋರಿಸಿದ್ದಾಳೆ. ಇದು ವೈರಿಗಳ ಮಕ್ಕಳು ವೈರಿಗ ಳಲ್ಲವೆನ್ನುವಂತೆ ವೈರಿಗಳು ಮಾಡಿದ ತಪ್ಪಿಗೆ ಈ ಮುದ್ದು ಮಕ್ಕಳಿಗೇಕೆ ಶಿಕ್ಷೆ ಎನ್ನುವ ಭಾವ ಪ್ರಧಾನವಾದ ಮನಮಿಡಿಯುವ ಸನ್ನಿವೇಶವನ್ನು ತೋರಿಸುತ್ತದೆ. ಈ ಕಲಾಕೃತಿಯು 1977 ರಲ್ಲಿ ನಡೆದ ಅಂತರರಾಷ್ಟ್ರೀಯ ಮಕ್ಕಳ ವರ್ಷದಂದು (UNESCO)ಅನೇಕರಿಂದ ಪ್ರಶಂಶೆಗೆ ಪಾತ್ರವಾಯಿತು. ಇದಲ್ಲದೆ ಮಹಾತ್ಮಾಗಾಂಧಿಜಿಯವರು ಕಲಬುರ್ಗಿಗೆ ಬಂದಾ ಗ, ಶರಣಬಸವೇಶ್ವರರು ಅವರನ್ನು ಶರಣ ಬಸವೇಶ್ವರ ಸಂಸ್ಥಾನಕ್ಕೆ ಬರಮಾಡಿಕೊಂಡು ಅವರನ್ನು ಸನ್ಮಾನಿಸಿ, ಅವರೊ ಂದಿಗೆ ಸಮಾಲೊಚಿಸುತ್ತಿರುವ ಕಲಾಕೃತಿಯು ತುಂಬ ಸುಂದರವಾಗಿ ಮೂಡಿಬಂದಿದ್ದು. ಇಲ್ಲಿ ಒಬ್ಬರನ್ನೊಬ್ಬರು ಎಷ್ಟು ಆಳ ವಾಗಿ ವಿಷಯವನ್ನು ಚರ್ಚಿಸುತ್ತಿರಬಹುದು ಎನ್ನುವಂತೆ ಭಾವಪ್ರಧಾನವಾಗಿ ಕಲಾಕೃತಿಕಯು ಮೂಡಿಬಂದಿದೆ. ಇದಲ್ಲದೆ ಇಂತಹ ಅನೇಕ ನೈಜಸಂಯೋಜನಾ ಕಲಾಕೃತಿಗಳನ್ನು ಖಂಡೇರಾವರು ರಚಿಸಿದ್ದಾರೆ.

ii . ಆಧುನಿಕ ಸಮ್ಮಿಶ್ರಣ ಸಂಯೋಜನಾ ಚಿತ್ರಗಳು : ಕಲಾವಿದ ವಸ್ತುವನ್ನು ಇರುವಂತೆಯೇ ಚಿತ್ರಿಸದೆ ಒಂದು ವಸ್ತುವನ್ನು ನೋಡಿದಾಗ ಅವನ ಮನಸ್ಸಿನ ಮೇಲಾದ ಭಾವನೆಯನ್ನು ರಚಿಸುವದು ಅಧುನಿಕ ಕಲೆಯಗು ಣ [43] ಇದೊಂದು ಅಭಿವ್ಯಕ್ತಿಯ ಮಾಧ್ಯಮ . ಅಂದರೆ ನಮ್ಮ ಮನಸ್ಸಿನಲ್ಲಿರುವುದನ್ನು ಹೊರಚೆಲ್ಲಿದಾಗ ಅಭಿವ್ಯಕ್ತಪಡಿಸಿದಾ ಗ ಅದುವೆ ಆಧುನಿಕ ಕಲೆಗೆ ನಾಂದಿ. ಕಲಾವಿದರು ತಮ್ಮ ಭಾವನೆಗಳನ್ನು ಚಿತ್ರ , ಶಿಲ್ಪ ,ಗ್ರಾಫಿಕ, ಕುಶಲಕಲೆ ಮುಂತಾ ದವುಗಳ ಮೂಲಕ ಅಭಿವ್ಯಕ್ತಪಡಿಸುತ್ತಾನೆ. ಅವರು ತಿಳಿಸಬೇಕೆಂಬುದನ್ನು ಸುಂದರವಾಗಿ ತಿಳಿಸಿದಾಗ ಅದು ಕಲಾತ್ಮಕ ಅಭಿವ್ಯಕ್ತವಾಗುವದು. ಒಂದು ಕಲಾಕೃತಿ ಮೂರು ಹಂತಗಳ ಸಮನ್ವಯದಿಂದ ಪೂರ್ಣಗಳ್ಳುವದು. ಮೊದಲನೆಯದಾಗಿ ಬಣ್ಣ ಕ್ಷವರಡನೆಯದಾಗಿ ಆಕಾರ ,ಮತ್ತು ಮೂರನೆಯದಾಗಿ ಅಭಿವ್ಯಕ್ತಿ [44] ಈ ಆಧುನಿಕ ಕಲೆಯು ಹುಟ್ಟಿಕೊಳ್ಳಲು ಇ ನ್ನೊಂದು ಕಾರಣವೆನೆಂದರೆ ಕಲಾವಿದನು ನಿರಂತರವಾಗಿ ಕಲಾಕೃತಿಗಳನ್ನು ರಚಿಸುತ್ತಾ ಹೋಗುವಾಗ ಅವನಿಗೆ ಅದರಲ್ಲಿ ಕೆಲವು ಬದಲಾವಣೆಗಳು ಕಾಣಿಸುತ್ತವೆ. ಮತ್ತು ಹೊಸ ಹೊಸ ತಂತ್ರಗಳನ್ನು ಬಳಸಲಿಕ್ಕೆ ಪ್ರಾರಂಭಿಸುತ್ತಾನೆ. ಅದರಲ್ಲಿಯೇ ಹೊಸತನವನ್ನು ಕಂಡುಕೊಳ್ಳಲು ಹೋಗುವಾಗ ಅಧುನಿಕ ಪ್ರಭಾವಕ್ಕೆ ಒಳಗಾಗುತ್ತಾನೆ. ಸಾಮಾನ್ಯವಾಗಿ ಅಧುನಿಕವೆಂದ ರೆ ಕ್ರಿಯಾತ್ಮಕವಾದಂಥದ್ದು ,Change ಅನ್ನುವಂಥದ್ದು ,Creat ಎನ್ನುವಂಥದ್ದು , ಕಲಾಸೃಷ್ಟಿ ಹೇಗಾಗುತ್ತೆ ? ಏಕೆ ಆಗುತ್ತದೆ? ಒಬ್ಬ ವ್ಯಕ್ತಿ ಅಥವಾ ಕಲಾವಿದ ತನ್ನೊಳಗಿನ ಆನಂದ ನೋವು ಇತ್ಯಾದಿ ಹಲವು ಅನುಭವಗಳ ಒತ್ತಡದಿಂದಾಗಿ ಅಭಿವ್ಯಕ್ತಗೊಳಿಸುವ ಹಲವು ರೂಪಗಳನ್ನು ಕಲೆಯನ್ನಬಹುದು. ಅದು ಚಿತ್ರ, ಶಿಲ್ಪ, ಸಂಗೀತ, ಸಾಹಿತ್ಯ ನೃತ್ಯ

---

43 . ಪಿ.ಆರ್‌ತಿಪ್ಪೆಸ್ವಾಮಿ (ಪ್ರ.ಸಂ.) : ಕಲಾಕೋಶ, ಪುಟ 31

44. ಪಿ.ಆರ್‌ತಿಪ್ಪೆಸ್ವಾಮಿ (ಪ್ರ.ಸಂ.) : ಕಲಾಕೋಶ, ಪುಟ 12



ಚಿತ್ರ 53.

ಮಹಿಳೆಯರು 1



ಚಿತ್ರ 54. ಎನ್.ಎಸ್. ಬೇಂದ್ರೆಯವರ ಶೈಲಿಯಿಂದ ಪ್ರಭಾವಿತರಾಗಿ ನಿರ್ಮಿಸಿ ಚಿತ್ರ



ಚಿತ್ರ55.

ಮಹಿಳೆಯರು 2



ಮಹಿಳೆಯರು 3

ಚಿತ್ರ56.



ಚಿತ್ರ 57. ಗಂಗೆತ್ತು 1



ಚಿತ್ರ 58. ಗಂಗೆತ್ತು 2



ಚಿತ್ರ 59. ಗಂಗೆತ್ತು 3



ಚಿತ್ರ 60. ಗಂಗೆತ್ತು 4



ಚಿತ್ರ 61. ಗಂಗೆತ್ತು 5



ಚಿತ್ರ 62. ಪೋತರಾಜ



ಚಿತ್ರ 63.　　ಕಾಯಕಕ್ಕೆ ಸನ್ನದ್ದನಾದ ಕಾಡಸಿದ್ಧ



ಚಿತ್ರ 64.　　ಕಾಡಸಿದ್ಧ

ಇತ್ಯಾದಿಗಳಾಗಿರಬಹುದು. ಹರ್ಬರ್ಟ ರೀಡ್ ಇದನ್ನು Will to form ಎನ್ನುತ್ತಾರೆ. ಫ್ರಾಯ್ಡನ ಚೆವಂತನೆಗಳೂ ಈ ಸೃಷ್ಟಿಗೆ ಪೂರಕವಾಗಿದೆ. ಮೂಲತಃ ಕಲಾವಿದನೊಬ್ಬ ತನ್ನೊಳಗಿನ Stress ನಿಂದ ಅಥವಾ Urge ನಿಂದ ಅಭಿವ್ಯಕ್ತಿಸುವ ಮೂಲಕ ಬಿಡುಗಡೆಗೊಳ್ಳುವದೇ ಕಲಾಸೃಷ್ಟಿಯೊಂದರ ಮೂಲ ಉದ್ದೇಶ[45] ಒಂದು ಕಾಲದ ನೈಜ ಬದುಕಿನ ಪ್ರಾತಿನಿಧ್ಯವನ್ನು ಹೊಂದಿರುವುದಕ್ಕಿಂತಲೂ ಕಲಾಸೃಷ್ಟಿಯೊಂದು ತನ್ನದೇ ಆದ ರೀತಿಯಲ್ಲೂ Unique ಆಗಿ(ಅಸದೃಶ್ಯ, ಅಸಾಧಾರಣ) ಉಳಿಯಬಲ್ಲದು ಎಂದು ಕ್ಯೂಬಿಷ್ಟರು ಹೇಳುವದು ಸರಿಯಾಗಿಯೇ ಇದೆ. ಕಲಾಸೃಷ್ಟಿ ಮತ್ತು ಕಲಾನುಭವವನ್ನು ತನ್ನೊಳಗಿನ ಒತ್ತಡದ ಪ್ರವೃತ್ತಿಯಿಂದ ಸಕ್ರೀಯವಾಗಿ ತೊಡಗಿಸಿಕೊಳ್ಳುವುದರ ಫಲವಾಗಿ ಆನಂದವನ್ನು ಪಡೆಯುವುದೇ ಕಲಾವಿದನೊಬ್ಬನ ಮುಖ್ಯ ಉದ್ದೇಶ[46] ಹೀಗೆ ಕಲೆಯಲ್ಲಿ ಹೆಚ್ಚಿನದನ್ನ ಕಂಡುಕೊಳ್ಳಲು ಕಲಾಕೃತಿಯನ್ನು ಸುಂದರವಾಗಿ ನೋಡುಗರ ಮನಸ್ಸನ್ನ ಆನಂದಮಯವನ್ನಾಗಿಸಲು ಕೆಲವೊಂದು ಸಾರಿ ಬೇರೆಯವರ ಕಲಾಕೃಕತಿಗಳ ಪ್ರಭಾವವು ಬೀರುವದು ಸಹಜ. ಅವರ ಕಲಾಕೃತಿಗಳ ಅನುಕರಣೆಯನ್ನು ಮಾಡುವ ಸಾಹಸಕ್ಕೂ ಅವನು ಹೋಗುತ್ತಾನೆ.

ಖಂಡೇರಾವರು ಅಧ್ಯಯನದ ಕಾಲದ ಸಮಯದಲ್ಲಿ ಆಗಿನ ಖ್ಯಾತ ಕಲಾವಿದರಾಗಿದ್ದ ಎಸ್.ಎಸ್. ಬೇಂದ್ರೆಯವರ ಕಲಾಕೃತಿಗಳಿಂದ ಪ್ರಭಾವಿತಗೊಂಡಿದ್ದರು. ಅವರ ಕಲಾಕೃತಿಗಳನ್ನು ಅನುಕರಣೆ ಮಾಡುವದು, ಅವರ ಕಲಾಶೈಲಿಗಳನ್ನು ತಮ್ಮ ಕಲಾಕೃತಿಗಳ ರಚನೆಯಲ್ಲಿ ಬಳಸಿಕೊಳ್ಳುವದು, ಕಲಾವಿದನ ಸಹಜ ಗುಣವಾಗಿದೆ. ಖಂಡೇರಾವರ ಪ್ರಾರಂಭದ ಹಂತದ ಎಲ್ಲ ಕಲಾಕೃತಿಗಳಲ್ಲೂ ಈ ರೀತಿಯ ಪ್ರಭಾವವನ್ನು ನಾವು ಕಾಣಬಹುದು. ಇವೆಲ್ಲವೂ ಆಧುನಿಕ ಸಂಯೋಜನಾ ಕಲಾಕೃತಿಗಳಾಗಿವೆ. ಇವುಗಳಲ್ಲಿ ಹೆಚ್ಚಾಗಿ ಹಳ್ಳಿಯ ವಾತಾವರಣ, ಅವರ ದೈನಂದಿನ ಬದುಕಿಗೆ ಸಂಬಂಧಪಟ್ಟಂತೆ ವಿಷಯಗಳನ್ನು ತಮ್ಮ ಕಲಾಕೃತಿಗಳಲ್ಲಿ ಬಳಸಿಕೊಂಡಿದ್ದಾರೆ. ಇಲ್ಲಿ ಎಲ್ಲವೂ ಕ್ರಿಯಾತ್ಮಕವಾದಂಥದ್ದು. Creative will in that it fact and possibility an give to very reckoning with reality, a simultaneous dimension of denial and affairmation, a yes a no, dove-tailed to form a pattern for affernative worlds : new options in the given world primal truths projects in to the new world[47] virtual space in painting cannot be seen apart from the painting it is the painting itself[48] painting we have seen creats virtual space in sculpture as in painting, should beasy to see. for actual space as such is static and to given it a semblance of movement is therefore only to create on illusion in the realm of virtual space ಹೀಗೆ ವಿಷಯಗಳು ಯಾವುದೇ ಇರಲಿ ಅಲ್ಲಿ ಬಳಸುವ ಆಕಾರ ಮಾತ್ರ ಕ್ರಿಯಾತ್ಮಕವಾಗಿರುತ್ತದೆ. 2000-01ರ ಹಿರಿಯ ಕಲಾವಿದರಿಗೆ ನೀಡುವ ಪೆಲೋಶಿಪನ್ನ ಖಂಡೇರಾವರು ಪಡೆದುಕೊಂಡಿದ್ದಾರೆ. ಇಲ್ಲಿ ಚಿತ್ರಿಸುವ ವಿಷಯಗಳು ಜನಪದೀಯ ವಿಷಯಗಳಿಗೆ ಸಂಬಂಧಪಟ್ಟವುಗಳಾಗಿವೆ. ಈ ಕಲಾ ಕೃತಿಗಳು ಆಧುನಿಕ ಕಲಾಶೈಲಿಯಲ್ಲಿ ಮೂಡಿಬಂದ ಸಂಯೋಜನಾ ಕಲಾಕೃತಿಗಳಾಗಿವೆ. ಅವು ಸಾಮಾಜಿಕ ಸ್ಥಿತಿಗತಿಗಳಿಗೆ ಸ್ಪಂದಿಸುವ ಕಲಾಕೃತಿಗಳಾಗಿವೆ.

iii. ಅಮೂರ್ತ ಸಂಯೋಜನಾ ಚಿತ್ರಗಳು : ಕಲಾವಿದನು ಅಕಾಡೆಮಿಕ ಕಲಾಶೈಲಿಯಿಂದ ಹೊರಬರಲು ಮತ್ತು ಅದರಲ್ಲಿ ಹೊಸತನವನ್ನು ಕಂಡುಕೊಳ್ಳಲು ಹಲವಾರು ಪ್ರಯೋಗಗಳನ್ನು ಮಾಡುವದುಂಟು. ಕಲಾ ವಿದನಾದವನು ಸ್ವತಂತ್ರನು. ಅವನು ತನ್ನ ಮನಸ್ಸಿನಲ್ಲಿ ಮೂಡಿದ ಭಾವನೆಗಳನ್ನು ಬಣ್ಣ ಕುಂಚಗಳ ಮೂಲಕ ಅದನ್ನು ಅಭಿವ್ಯಕ್ತಪಡಿಸುತ್ತಾನೆ. ಇಲ್ಲಿ ತಾನು ಊಹೆಮಾಡಿದ ವಿಷಯವನ್ನು ಅಮೂರ್ತತೆಯ ಮೂಲಕ ವ್ಯಕ್ತಪಡಿಸುತ್ತಾನೆ.

---

45. ಪಿ.ಆರ್‌ತಿಪ್ಪೆಸ್ವಾಮಿ (ಪ್ರ.ಸಂ.) : ಕಲಾಕೋಶ, ಪುಟ 14
46. ಪಿ.ಆರ್‌ತಿಪ್ಪೆಸ್ವಾಮಿ (ಪ್ರ.ಸಂ.) : ಕಲಾಕೋಶ, ಪುಟ 47
47. Geeta Kapoor : Contemporary Indian Artist's, Page No. 12
48. Ranjan .K. Ghosh : Aesthetic Theory and Art, Page No.142




ಚಿತ್ರ 65. ವಿಂಡೋಸರಣಿಯ ಕಿಟಕಿಯಿಂದ ತೂರಿಬರುವ ಬೆಳಕು 1



ಚಿತ್ರ 66. ವಿಂಡೋಸರಣಿಯ ಕಿಟಕಿಯಿಂದ ತೂರಿಬರುವ ಬೆಳಕು 2



ಚಿತ್ರ 67. ವಿಂಡೋಸರಣಿಯ ಕಿಟಕಿಯಿಂದ ತೂರಿಬರುವ ಬೆಳಕು 3



ಚಿತ್ರ 68. ವಿಂಡೋಸರಣಿಯ ಕಿಟಕಿಯಿಂದ ತೂರಿಬರುವ ಬೆಳಕು 4



ಚಿತ್ರ 69. ವಿಂಡೋಸರಣಿಯ ಕಿಟಕಿಯಿಂದ ತೂರಿಬರುವ ಬೆಳಕು 5



ಚಿತ್ರ 70. ವಿಂಡೋಸರಣಿಯ ಕಿಟಕಿಯಿಂದ ತೂರಿಬರುವ ಬೆಳಕು 6



ಚಿತ್ರ 71. ವಿಂಡೋಸರಣಿಯ ಕಿಟಕಿಯಿಂದ ತೂರಿಬರುವ ಬೆಳಕು 7

ಇಲ್ಲಿ ರೂಪವಿರುವುದಿಲ್ಲ. ಕಲಾಕೃತಿಯು ನೋಡಿದರೆ ಅದು ವಿರೂಪವೆನಿಸಿದರೂ, ಬಣ್ಣ ಮತ್ತು ಆಕಾರಗಳ ಸಹಾಯದಿಂದ ಅದರಲ್ಲಿ ಜೀವವನ್ನು ತುಂಬಲು ಪ್ರಯತ್ನಿಸುತ್ತಾನೆ. ಇದು ಸಾಂಕೇತಿಕವೆನಿಸಿದರೂ ಕಲಾವಂತಿಕೆ ಇದರಲ್ಲಿ ಅಳವಡಿಸಿಕೊಂಡಿರುತ್ತದೆ. ಇದನ್ನು ಇಂಗ್ಲೀಷನಲ್ಲಿ (Abstract) ಎಂತಲೂ ಕರೆಯುವರು ಅಬಸ್ಟ್ರ್ಯಾಕ್ಟ ಎಂಬುವದಕ್ಕೆ ಪದಶಃ ಎತ್ತಿಕೋ ಹೊರತೆಗೆ ಎಂದು ಅರ್ಥ. ನೈಸರ್ಗಿಕ ವಸ್ತುಗಳಿಂದ ಮಾಡಿಕೊಂಡ ಅಲಂಕಾರಿಕ ಕಲೆಯಲ್ಲಿನ ಶೈಲೀಕೃತ ಆಕೃತಿಗಳಿಗೆ ಈ ಪದ ಅನ್ವಯವಾಗುತ್ತದೆ. ನವೋದಯ ಯುಗದ ಅನಂತರದ ಕಲಾವಿದರಲ್ಲಿ ತಮ್ಮ ಭಾವನೆ ಮತ್ತು ವಿಚಾರಗಳನ್ನು ಅಭಿವ್ಯಕ್ತಿಸಲು ವರ್ಣನೆ ಹಾಗೂ ವಿವರಣೆ ಒಟ್ಟು ರೇಖೆ ಮತ್ತು ವರ್ಣಗಳನ್ನು ಬಳಸುವ ಪ್ರವೃತ್ತಿ ಹೆಚ್ಚಾಯಿತು.[50] "The imaginative act begins and ends in freedom. It is for the indian artists to define, on the basis of their own experience of reality their own approach to freedom[51] ಈ ಅಮೂರ್ತಕಲೆಯ ಆಗಮನ ಯಾವಗಲೋ ಪ್ರಾರಂಬವಾಗಿದೆ. 18-19ನೇ ಶತಮಾನದಲ್ಲಿ ಹಲವಾರು ಪಂಥಗಳು ಹುಟ್ಟಿಕೊಂಡು ನವ್ಯಕಲೆಯ ಚಳುವಳಿಯನ್ನೇ ಆರಂಭಿಸಿದ್ದವು. ಅವುಗಳಲ್ಲಿ Expressionism, Abstract expressionism, Dadaism ಗಳಂಥ ಹಲವಾರು ಪಂಥಗಳು ಹುಟ್ಟಿಕೊಂಡು ನವ್ಯಕಲೆಯ ಹೊಸ ಪೀಳಿಗೆಯೊಂದನ್ನು ಹುಟ್ಟಿಕೊಳ್ಳಲು ಪ್ರಮುಖ ಪಾತ್ರವನ್ನು ವಹಿಸಿದ್ದವು. ಇದರಲ್ಲಿ ದಾದಾಯಿಸಂ (Dadaism) ಪಂಥದವರು ಅಮೂರ್ತ ಕಲಾಕೃತಿಗಳನ್ನು ನಿರ್ಮಿಸಿಅದನ್ನು ಪ್ರದರ್ಶನ ಮಾಡುತ್ತಿದ್ದರು. ಪ್ರದರ್ಶನದ ನಂತರ ಆ ಕಲಾಕೃತಿಯನ್ನು ಹರಿದು ಹಾಕುತ್ತಿದ್ದರು. ಅಲ್ಲಿಯೂ ಅವರು ಅಮೂರ್ತತೆಯನ್ನು ವಿಷಯ ಮತ್ತು ತಂತ್ರವಿಧಾನವನ್ನಾಗಿಸಿಕೊಂಡಿದ್ದರು. ಈ ಪಂಥದ ರೂವಾರಿ ಮಾರ್ಷಲ್ ಡೊಕೆಂಪು. ಒಂದು ಕಾಲದ ನೈಜ ಬದುಕಿನ ಪ್ರಾತಿನಿಧ್ಯವನ್ನು ಹೊಂದಿರುವದಕ್ಕಿಂತಲೂ ಕಲಾಕೃತಿಯೊಂದು ತನ್ನದೇ ಆದ ರೀತಿಯಲ್ಲೂ Unique ಆಗಿ (ಅಸದೃಶ್ಯ ಅಸಾಧಾರಣ) ಉಳಿಯಬಲ್ಲದು. ಎಂದು ಕ್ಯೂಬಿಷ್ಟರು ಹೇಳಿರುವದು ಸರಿಯಾಗಿಯೇ ಇದೆ. ಒಬ್ಬ ಕಲಾವಿದ ತನ್ನ ಕಾಲದ ವಿಶಿಷ್ಟ ಜೀವಧ್ವನಿಗೆ , ಸವಾಲುಗಳಿಗೆ, ತನ್ನನ್ನು ಸಮ್ಮುಖನಾಗಿಸಿಕೊಂಡು ಅಭಿವ್ಯಕ್ತಿಸುವ ಮೂಲಕ ಆ ಕಾಲ ಕುರಿತ ಅವನ ಧೊರಣೆ ಅಥವಾ ನಿಲುವು (Pointo-fview) ಗಳನ್ನು ದಾಖಲಿಸುವ ಸಾಧ್ಯತೆಗಳಿವೆ. ಇಂಥ ಕೃತಿಯು ಸಮಕಾಲಿನ ದಾಖಲೆಯಾಗಿ ಹೆಚ್ಚು ಮಹತ್ವ ಪಡೆಯುತ್ತದೆ.[52] ಇಂದಿನ ಸಮಕಾಲೀನ ಕಲಾವಿದರಲ್ಲಿ ಖಂಡೇರಾವರು ಒಬ್ಬರು. ಇವರು ಒಂದೇ ಶೈಲಿಗೆ ಬದ್ಧರಾಗಿರದೇ ಕಾಲಕ್ರಮದಲ್ಲಿ ಹಲವಾರು ಬದಲಾವಣೆಗಳನ್ನು ತಮ್ಮ ಕಲಾಕೃತಿಯಲ್ಲಿ ಅಳವಡಿಸಿಕೊಂಡು ಕಲಾಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಂಥವರು. ಇಂದು ವಿಂಡೋ ಸರಣಿಯ ಮೇಲೆ ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ.

ಯಾವುದೇ ಕಲಾವಿದನು ತನ್ನದೇ ಆದ ಒಂದು ಶೈಲಿಯನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತಾನೆ. ಅದು ಕ್ರಿಯಾತ್ಮಕವಾಗಿರಬಹುದು, ನೈಜವಾಗಿರಬಹುದು ಅಥವಾ ಅಮೂರ್ತವಾಗಿರಬಹುದು ಖಂಡೇರಾವರು ಇಂದು ಅಮೂರ್ತತೆಯನ್ನು ತಮ್ಮ ಕಲಾಕೃತಿ ರಚನಾ ಶೈಲಿಯನ್ನಾಗಿಸಿಕೊಂಡು ಹಲವಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಇನ್ನೂ ರಚಿಸುತ್ತಲೇ ಇದ್ದಾರೆ. ಇವರ ವಿಂಡೋ ಸರಣಿಯ ಅಮೂರ್ತ ಸಂಯೋಜನಾ ಕಲಾಕೃತಿಗಳಲ್ಲಿ ಸರಳವಾದ ಆಕಾರ, ಅವಕಾಶ, ವರ್ಣಗಾರಿಕೆಯ ಪ್ರಭಾವವಿರುವದು ನಾವು ನೋಡಬಹುದಾಗಿದೆ. ಇಲ್ಲಿ ಅವರದೇ ಆದಂತಿರುವ ಕೆಲವೇ ವರ್ಣಗಳನ್ನು ತೆಗೆದುಕೊಂಡು ತೆಳುವಾಗಿ ಚಪ್ಪಟೆಯಾಕಾರದ ಅಡ್ಡ ಮತ್ತು ಉದ್ದ ಪಟ್ಟೆಗಳನ್ನು ಕೊಟ್ಟಂತೆ ತೋರಿದರೂ ಅದರಲ್ಲಿ ಸುಂದರ ಮತ್ತು ಮನಸ್ಸಿಗೆ ಆನಂದವನ್ನಾಗಿಸುವ ಚಾಕಚಕ್ಯತೆ ಅದರಲ್ಲಿ ಅಂದರೆ ಕಲಾಕೃತಿಯಲ್ಲಿ ತುಂಬಿರುತ್ತಾರೆ. ಇದು ನಿಜವಾದ ಕಲೆಯನಿಸುವದು. ನಿಜವಾದ ಕಲೆಯು ನಮ್ಮನ್ನು ಸಂಸ್ಕಾರಯಂತ್ರದಿಂದ ಸೆಳೆಯುವದು. ಅದರ ಕ್ಷುಲ್ಲತೆಗಿಂತ ನಮ್ಮ ಆತ್ಮವನ್ನು ಮೇಲೇರಿಸುವದು ಇದು ಖಂಡೇರಾವರ ಕಲಾಕೌಶಲ್ಯ.

---

50. ಪಿ.ಆರ್.ತಿಪ್ಪೆಸ್ವಾಮಿ (ಪ್ರ.ಸಂ.) : ಕಲಾಕೋಶ, ಪುಟ 16
51. Geeta Kapoor : Contemporary Indian Artist's, Page No. 12
52. ಪಿ.ಆರ್.ತಿಪ್ಪೆಸ್ವಾಮಿ (ಪ್ರ.ಸಂ.) : ಕಲಾಕೋಶ, ಪುಟ 21

ಕಲೆಯು ಸೌಂದರ್ಯ , ಸೌಂದರ್ಯವು ಆನಂದ ಎಂದು ಸೌಂದರ್ಯ ಚಿತ್ರವನ್ನು ನಮ್ಮ ಮುಂದಿರಿಸಿ ಅದನ್ನು ನಮಗಣಿಸಿ ಅದರಿಂದ ನಮಗೆ ಆನಂದ ಉಂಟಾಗದಂತೆ ಮಾಡುವವನೇ ಕಲಾಕುಶಲನು [53]The whole gonuf of modern trends in painting has generally turned its face against this kind of space, instead, there has been a constant explorations of never ways of creting space [54] ಹರ್ಬರ್ಟ ರೀಡರ ಪ್ರಕಾರ ಅವಕಾಶ ಚಿತ್ರಕಲೆಯ ಅವಿಭಾಜ್ಯ ಅಂಗಗಳಲ್ಲೊಂದು ಅವಕಾಶದ ಪೂರ್ಣ ಸಂಸ್ಥಾಪನೆಯಾಗದಿದ್ದರೆ ಚಿತ್ರ ಅಪೂರ್ಣವೆನಿಸಬಹುದು. ಘಟಕಗಳು ಚಪ್ಪಟೆ ನೆಲೆಯಿಲ್ಲದೆ ಹಿಂದೆ ಮುಂದೆ ಇದ್ದಂತೆ ಭ್ರಮೆ ಹುಟ್ಟಿಸುವಲ್ಲಿ ಅವಕಾಶದ ಹಿರಿಮೆನಿಂತಿದೆ. ಅವಕಾಶವನ್ನು ಎರಡು ಭಾಗಗಳಾಗಿ ಚರ್ಚಿಸಬಹುದು.

1. ನಿಜವಾದ 2. ಊಹಾತ್ಮಕ. ಚಿತ್ರದ ಚೌಕಟ್ಟಿನೊಳಗೆ ಇರುವ ಜಾಗದ ಪರಿಕರಣೆ ನಿಜವಾದುದು. ಇದು ವೀಕ್ಷಕನ ದೃಷ್ಟಿಯನ್ನು ಮುದಗೊಳಿಸುವಂತಿರಬೇಕು. ಇದಕ್ಕಾಗಿ ಹಲವು ಸರಳ ನಿಯಮಗಳನ್ನು ಹೇಳುತ್ತಾರೆ. ಚಿತ್ರದ ಯಾವುದೇ ಘಟಕವನ್ನು ಮಧ್ಯಭಾಗದಲ್ಲಿ ವೀಕ್ಷಕನ ನೇರದೃಷ್ಟಿಗೆ ಬೀಳದಂತೆ ಅಳವಡಿಸುವದು ಚಿತ್ರದ ಪ್ರಮುಖ ಭಾಗಕ್ಕೆ ಕೇಂದ್ರೀಕೃತವಾಗುವಂತೆ ಉಳಿದ ಘಟಕಗಳನ್ನು ರಚಿಸುವುದು ಇತ್ಯಾದಿ ಚಿತ್ರಕ್ಕೆ ಮೂರನೆಯ ಆಯಾಮ ದೊರಕಿಸಲು ಮಾಡುವ ಅವಕಾಶ ಮುಖ್ಯವಾದದ್ದು. ಇದಕ್ಕೆಂದು ಕಲಾವಿದರು ಹಲವು ತಂತ್ರಗಳ ಮೊರೆ ಹೋಗುತ್ತಾರೆ. ಅವುಗಳಲ್ಲಿ ಮುಖ್ಯವಾದದ್ದು ಬಣ್ಣ ಪರಿದೂರು (Perspective) ಹಾಗೂ ಅಳತೆ [55] ಖಂಡೇರಾವರ ಅಮೂರ್ತ ಸಂಯೋಜನಾ ಕಲಾಕೃತಿಗಳಲ್ಲಿ ನಾವು ವರ್ಣಗಳ ಸಂಯೋಜನೆಯಿಂದ ಕಲಾಕೃತಿಯಲ್ಲಿ ಪರಿದೂರ (Perspective) ವನ್ನು ಸೃಷ್ಟಿಸಿದ್ದನ್ನು ನೋಡಬಹುದಾಗಿದೆ. ಹೀಗೆ ಖಂಡೇರಾವರು ತಮ್ಮದೇ ಆದ ಕಲಾಶೈಲಿಯೊಂದಿಗೆ ವಿಂಡೋಸರಣಿಯೆಂಬ ವಸ್ತು ವಿಷಯವನ್ನಾಗಿಸಿಕೊಂಡು ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ.

ತಂತ್ರ ವಿಧಾನ :

ಕಲೆಯು ಯಾವಾಗಲೂ ಜನಗಳ ಮನಸ್ಸಿನ ಮೇಲೆ ಪ್ರಭಾವ ಬೀರುವ ಒಂದು ಮುಖ್ಯ ಸಾಧನೆಯಾಗಿದೆ. ಅದಕ್ಕಾಗಿ ಚಿತ್ರಕಲೆ ಮನೋವಿಜ್ಞಾನದ ಸಿದ್ಧಾಂತಗಳ ಮೇಲೆ ಆಧಾರವಾಗಿರುವದು. ಕಲೆಯಲ್ಲಿ ಕೇವಲ ತಾಂತ್ರಿಕ ನೈಪುಣ್ಯತೆ ಬಂದಿದ್ದರೆ ಸಾಲದು. ತಾಂತ್ರಿಕ ನೈಪುಣ್ಯತೆಯೊಂದಿಗೆ ಮನೋವಿಜ್ಞಾನದ ತತ್ವಗಳನ್ನು ಅಳವಡಿಸಿಕೊಂಡರೂ ಚಿತ್ರ ಕಲಾಕೃತಿಯ ನೈಪುಣ್ಯತೆ ಇನ್ನೂ ಹೆಚ್ಚುತ್ತದೆ. ಯಾವುದೇ ಕಲಾಕೃತಿಯ ಹಿಂದೆ ಆ ಕಲಾವಿದನ ಮನಸ್ಥಿತಿಯು ಮುಖ್ಯವಾಗಿ ಕಾರಣವಾಗಿರುತ್ತದೆ. ಹೀಗಾಗಿ ಚಿತ್ರಕಲೆ, ಮನಃಶಾಸ್ತ್ರಕ್ಕೆ ಬಿಡಲಾರದ ನಂಟುತನವಿದ್ದು ಇವು ಒಂದಕ್ಕೊಂದು ಪೂರಕ ಮತ್ತು ಪ್ರೇರಕವಾದ ಸಂಬಂಧವನ್ನು ಹೊಂದಿವೆಯೆಂದು ಹೇಳಬಹುದು. [56] ಖಂಡೇರಾವರು ಇಲ್ಲಿಯವರೆಗೆ ರಚಿಸಿದ ಕಲಾಕೃತಿಗಳನ್ನು ಮತ್ತು ಕಲಾಕೃತಿಗಳನ್ನು ರಚಿಸುವಾಗ ಅವರು ಬಳಸಿದ ತಂತ್ರವಿಧಾನವನ್ನು ನಾವು ಗಮನಿಸಿದಾಗ ಅಧ್ಯಯನ ಕಾಲದ ಹಂತದಲ್ಲಿಯ ಕಲಾಕೃತಿಗಳಲ್ಲಿ ಬಳಸಿದ ತಂತ್ರವಿಧಾನ, ವರ್ಣಗಾರಿಕೆಯ ಪ್ರಭಾವ ಮತ್ತು ಅಧ್ಯಾಪಕ ವೃತ್ತಿಯಲ್ಲಿ ನಿರ್ಮಾಣಗೊಂಡಿರುವ ಕಲಾಕೃತಿಗಳ ತಂತ್ರವಿಧಾನವಲ್ಲದೇ ಸದ್ಯದಲ್ಲಿ ನಿವೃತ್ತಿಯ ಹಂತದಲ್ಲಿ ನಿರ್ಮಾಣಗೊಂಡಿರುವ ,ನಿರ್ಮಾಣಗೊಳ್ಳುತ್ತಿರುವ ಕಲಾಕೃತಿಗಳನ್ನು ರಚಿಸುವಾಗ ಬಳಸಿದ ತಂತ್ರವಿಧಾನವನ್ನು ಗಮನಿಸಿದಾಗ ಇಲ್ಲಿಯೂ ಆಯಾ ಒಂದು ಅವಧಿಗಳಿಗೆ ಸಂಬಂಧಪಟ್ಟಂತೆ ತಂತ್ರವಿಧಾನವನ್ನು ಬಳಸಿಕೊಂಡು ಕಲಾಕೃತಿಯನ್ನು ರಚಿಸಿರುವುದನ್ನು ಕಂಡುಬರುತ್ತದೆ. ಹೀಗಾಗಿ ಇವರು ಯಾವಾಗಲೂ ಒಂದೇ ರೀತಿಯಾಗಿ ಕಲಾಕೃತಿಗಳನ್ನು ರಚಿಸಿಲ್ಲ ,ಆಯಾಹಂತಕ್ಕೆ ಸಂಬಂಧಪಟ್ಟಂತೆ ಕಲಾಕೃತಿಗಳನ್ನು ರಚಿಸಿದ್ದಾರೆ.

---

53. ಡಾ. ಶಿವರಾಂ ಕಾರಂತ : ಭಾರತೀಯ ಚಿತ್ರಕಲೆ , ಪುಟ 9
54. Ranjan .K. Ghosh : Aesthetic Theory and Art, Page No.143
55. ಪಿ.ಆರ್‌ತಿಪ್ಪೆಸ್ವಾಮಿ (ಪ್ರ.ಸಂ.) : ಕಲಾಕೋಶ, ಪುಟ 22
56. ಡಾ. ಎಸ್.ಸಿ. ಪಾಟೀಲ : (ಸಂ.) ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು ಪುಟ 49

ಅಧ್ಯಯನ ಕಾಲದಲ್ಲಿ ರಚಿತವಾದ ಕಲಾಕೃತಿಗಳನ್ನು ನಾವು ಗಮನಿಸಿದಾಗ ಇಲ್ಲಿ ರೇಖಾಚಿತ್ರಗಳನ್ನು ಹೆಚ್ಚಾಗಿ ರಚಿಸಿದ್ದು ಕಂಡುಬರುತ್ತದೆ. ಪೆನ್ಸಿಲ್‌ನಿಂದ ರೇಖಾಚಿತ್ರಗಳನ್ನು ರಚಿಸುವಾಗ ಹೆಚ್.ಬಿ. ಪೆನ್ಸಿಲನ್ನು ಚೂಪಾಗಿಸಿ ಕೊಂಡು ಆಕೃತಿಯ ಹೊರಮೈಯನ್ನು ರೇಖೆಯಿಂದ ಚಿತ್ರಿಸುತ್ತಾರೆ. ನಂತರದಲ್ಲಿ 6 ಬಿ ಎಂಬ ದಪ್ಪ ಆಕೃತಿಯ ಪೆನ್ಸಿಲ್ ಸಹಾಯದಿಂದ ನೆರಳು ಬೆಳಕನ್ನು ಮಾಡುತ್ತಾರೆ. ಇವರು ನೆರಳು ಬೆಳಕನ್ನು ಯೋಜಿಸುವಾಗ ತಮ್ಮದೇ ಆದ ಒಂದು ವಿಶೇಷವಾದ ತಂತ್ರವನ್ನು ಬಳಸಿಕೊಂಡಿದ್ದಾರೆ. ಯಾವಾಗಲೂ ಪೆನ್ಸಿಲ್‌ನ್ನು ನೇರವಾಗಿ ಹಿಡಿಯದೆ ಸ್ವಲ್ಪ ಅಡ್ಡವಾಗಿ ಹಿಡಿದು ಹಗುರವಾಗಿ , ಪೇಪರ ಮೇಲೆ ಮೂಡಿಸಬೇಕು. ಹೀಗೆ ಮೂಡಿಸುವುದರಿಂದ ಪೇಪರನ ಮೇಲೆ ಭಾರಬೀಳದೇ ಬದಲಾಗಿ ಪೆನ್ಸಿಲ್‌ನಲ್ಲಿ ಗ್ರಾಫೈಟ ಪುಡಿಯಾಗಿ ಸಣ್ಣ ಸಣ್ಣ ಕಣಗಳಾಗಿ ಪೇಪರನ ಎಲ್ಲಕಡೆ ಚದುರಿಕೊಳ್ಳತ್ತದೆ. ನಂತರದಲ್ಲಿ ಅದರ ಮೇಲೆ ಬಟ್ಟೆಯ ಸಹಾಯದಿಂದಲೋ ಅಥವಾ ರಬ್ಬರನ ಸಹಾಯದಿಂದಲೋ ಹಗುರವಾಗಿ ಉಜ್ಜಬೇಕು ಆಗ ಪೆನ್ಸಿಲನಲ್ಲಿರುವ ಗ್ರಾಫೈಟ ಪುಡಿಯು ಎಲ್ಲ ಕಡೆ ಹತ್ತಿಕೊಳ್ಳುವದು ಹೀಗೆ ಇದು ದಪ್ಪ ಛಾಯೆಯ ಒಂದು ಮಾದರಿಯಾಯಿತು. ಒಂದು ವೇಳೆ ನಮಗೆ ಎಲ್ಲಿ ಬೆಳಕು ಬೇಕೆಂದರೆ ಅಲ್ಲಿ ರಬ್ಬರನಿಂದ ನಮಗೆಷ್ಟು ಬೇಕೋ ಅಷ್ಟು ಅಳಿಸಿಕೊಳ್ಳಬೇಕು. ಆಮೇಲೆ ಹೆಚ್.ಬಿ. ಪೆನ್ಸಿಲ್‌ನ ಸಹಾಯದಿಂದ ಚಿತ್ರದ ಮುಖ್ಯ ಭಾಗಗಳಾದ ಕಣ್ಣು, ಮೂಗು, ಕಿವಿ ದೇಹದ ಭಾಗದ ಕೆಲವು ಕಡೆ ಮತ್ತೆ ಗೆರೆಗಳಿಂದ ತುಂಬಿಕೊಳ್ಳಬೇಕು. ಹೀಗಾದಾಗ ಆ ರೇಖಾಚಿತ್ರವು ನೆರಳು ಬೆಳಕಿನಿಂದ ಪರಿಪೂರ್ಣವಾಗಿರುವಂತೆ ಕಂಡುಬರುವದು . ಒಂದು ವೇಳೆ ನಮಗೆ ನೆರಳು ಬೆಳಕನ್ನು ಯೋಜಿಸುವದು ಇಷ್ಟವಿಲ್ಲವೆಂದರೆ ಕೇವಲ ಗೆರೆಗಳನ್ನು ಎಳೆದು ರೇಖಾಚಿತ್ರಗಳನ್ನು ಚಿತ್ರಿಸಬಹುದು. ಎಂದು ಖಂಡೇರಾವರು ರೇಖಾಚಿತ್ರಗಳನ್ನು ಚಿತ್ರಿಸುವ ತಂತ್ರವನ್ನು ಕುರಿತು ಹೇಳುತ್ತಾರೆ. ಇನ್ನು ವರ್ಣಚಿತ್ರಗಳನ್ನು ರಚಿಸುವಾಗ ಬಳಸುವ ತಂತ್ರವಿಧಾನವನ್ನು ನೋಡಿದಾಗ ಅಧ್ಯಯನದ ಪ್ರಾರಂಭದ ಕಾಲದಲ್ಲಿ ಹೆಚ್ಚಾಗಿ ಜಲವರ್ಣವನ್ನು ಬಳಸಿಕೊಂಡು ಕಲಾಕೃತಿಗಳನ್ನು ರಚಿಸಿದ್ದಾರೆ. ಈ ಹಂತದಲ್ಲಿ ಇವರು ಹೆಚ್ಚಾಗಿ ನಿಸರ್ಗ ಚಿತ್ರಗಳನ್ನು ರಚಿಸಿದ್ದು ಕಂಡುಬರುತ್ತದೆ. ನಿಸರ್ಗಚಿತ್ರವನ್ನು ಚಿತ್ರಿಸುವಾಗ (Hand made paper) ಹಾಳೆಯನ್ನು ತೆಗೆದುಕೊಂಡು ಅದನ್ನು ನೀರಿನಲ್ಲಿ ವದ್ದೆ ಮಾಡಕೊಂಡು ಬೊರ್ಡಿಗೆ (Land scape board) ಅದನ್ನು ಜೋಡಿಸಬೇಕು. ಅದು ಒಣಗಿದ ನಂತರ H.B. ಪೆನ್ಸಿಲನಿಂದ ಡ್ರಾಯಿಂಗ್ ಮಾಡಿಕೊಳ್ಳಬೇಕು.ಇದಾದ ಮೇಲೆ ಮೊದಲು ತೆಳುವರ್ಣದಿಂದ ಅಂದರೆ ಬಣ್ಣದಲ್ಲಿ ನೀರಿನ ಪ್ರಮಾಣವನ್ನು ಹೆಚ್ಚು ಮಾಡಿ ಯಾವ ಯಾವ ಬಣ್ಣವು ಹೋಲುತ್ತದೆ ಅಂಥಬಣ್ಣವನ್ನು ತೆಳುವಾಗಿ ಲೇಪಿಸಬೇಕು. ಇದು ಪ್ರಪ್ರಥಮವಾದ ಹಂತವಾಗಿದೆ. ಇದಾದ ಮೇಲೆ ಮತ್ತೆ ಆಯಾಭಾಗಗಳಿಗೆ ಸಂಬಂಧಪಟ್ಟಂತೆ ನೆರಳಿನ ಭಾಗಕ್ಕೆ ಮಾತ್ರ ಬಣ್ಣವನ್ನು ಲೇಪನ ಮಾಡಬೇಕು ಇದಾದಮೇಲೆ ಮೂರನೆ ಹಂತವಾಗಿ ನಮಗೆ ಕಾಣುವ ದೃಶ್ಯವನ್ನು ದೂರ ಸಮೀಪವೆಂಬಂತೆ ತೋರಿಸಲು ಬೇಕಾದ ಸ್ಥಳದಲ್ಲಿ ವರ್ಣದ ಒಂದೆರಡು ಗೆರೆಗಳನ್ನು ಎಳೆಯಬೇಕು. ನಂತರ ಅದನ್ನು ದೂರವಿಟ್ಟು ನೋಡಿದ ಕೂಡಲೆ ಅದು ನೋಡಲು ಸುಂದರವಾಗಿ ಕಾಣುವುದಲ್ಲದೇ ದೂರ ಸಮೀಪವೆಂಬಂತೆ ತೋರುತ್ತದೆ. ಇದು ಇವರ ನಿಸರ್ಗಚಿತ್ರಗಳನ್ನು ರಚಿಸುವ ಒಂದು ರಚನಾ ಮತ್ತು ತಂತ್ರವಿಧಾನವಾಗಿದೆ. ಇದಲ್ಲದೆ ಸ್ಥಿರಚಿತ್ರಗಳನ್ನು ಸಹ ಜಲವರ್ಣಗಳಲ್ಲಿ ಚಿತ್ರಿಸಿದ್ದಾರೆ. ಇಲ್ಲಿಯೂ ಕೂಡ ಇದೇ ರೀತಿಯ ತಂತ್ರವಿಧಾನದಿಂದ ಚಿತ್ರಿಸಿರುವುದನ್ನು ನಾವು ನೋಡಬಹುದಾಗಿದೆ. ಹೀಗೆ ಖಂಡೇರಾವರು ಪ್ರಾರಂಭದಲ್ಲಿ ತೈಲವರ್ಣಕ್ಕಿಂತ ಜಲವರ್ಣದಲ್ಲಿಯೇ ಹೆಚ್ಚು ಕಲಾಕೃತಿಗಳನ್ನು ರಚಿಸಿದ್ದಾರೆ.

ಅಧ್ಯಾಪಕ ವೃತ್ತಿಯ ಪ್ರಾರಂಭದ ಹಂತದಲ್ಲಿಯ ಕಲಾಕೃತಿಯಗಳಲ್ಲಿ ಹೆಚ್ಚಾಗಿ ಪಠ್ಯಕ್ರಮದ ವಿಷಯಗಳಿಗೆ ಸಂಬಂಧಪಟ್ಟಂತೆ ವಿದ್ಯಾರ್ಥಿಗಳಿಗೆ ಬೋಧಿಸುವಾಗ ರಚಿಸಿದ ಕಲಾಕೃತಿಗಳು ಮತ್ತು ಅಧ್ಯಯನ ಕಾಲದಲ್ಲಿ ರಚಿಸಿದ ಕಲಾಕೃತಿಗಳು ಒಂದೇ ರೀತಿಯಾಗಿದ್ದರಿಂದ ಬಳಸಿದ ತಂತ್ರವಿಧಾನವು ಒಂದೇ ರೀತಿಯದ್ದಾಗಿದೆ. ಆದರೆ ಅಧ್ಯಾಪಕ ವೃತ್ತಿಯ ಕೊನೆ ಹಂತದಲ್ಲಿ ರಚಿಸಿರುವಂಥ ಕಲಾಕೃತಿಗಳಲ್ಲಿ ಮುಖ್ಯವಾಗಿ ಪ್ರಾತ್ಯಕ್ಷಿಕೆಗಳನ್ನು ಮಾಡಿದ ಸಂದರ್ಭದಲ್ಲಿಯ ಕಲಾಕೃತಿಗಳ ತಂತ್ರವಿಧಾನವು ತುಂಬ ವ್ಯತ್ಯಾಸದಿಮದ ಕೂಡಿದೆ. ಜಲವರ್ಣದಲ್ಲಿ ಅವರು ಪಾರದರ್ಶಕವಾಗಿ ಚಿತ್ರಿಸಿದರೆ, ಪ್ರಾತ್ಯಕ್ಷತೆಗಳನ್ನು ಮಾಡುವಾಗ ಭಾವಚಿತ್ರಗಳನ್ನು ರಚಿಸುವಾಗ ಬಣ್ಣವನ್ನು ದಪ್ಪದಪ್ಪವಾಗಿ(Imposto) ಬಳಸಿ ರೆಪ್ಪೆರೆಪ್ಪೆಗಳಂತೆ ಇಟ್ಟಿರುವ ಹಾಗೆ ಭಾಸವಾದರೂ ಕಲಾಕೃತಿಯು ನೋಡಲು ಸುಂದರವಾಗಿ ಕಾಣುತ್ತದೆ. ಇವರು ವ್ಯಕ್ತಿಚಿತ್ರಗಳನ್ನು ರಚಿಸುವ

ಮೊದಲು ಬಣ್ಣದಿಂದಲೇ ಚಪ್ಪಟೆಯಾದ ಸಣ್ಣ ಕುಂಚದಿಂದ ಡ್ರಾಯಿಂಗನ್ನು ಮಾಡಿಕೊಳ್ಳುತ್ತಾರೆ. ಕೆಲವು ಕಲಾವಿದರು ಮೊದಲು ಪೆನ್ಸಿಲ್ ನಿಂದ ಡ್ರಾಯಿಂಗ್ ಗಳನ್ನು ಮಾಡುವದು ನಾವು ನೋಡಿದ್ದೇವೆ. ಆದರೆ ಖಂಡೇರಾವರು ಪ್ರಾತ್ಯಕ್ಷಿಕೆಗಳ ಸಂದರ್ಭದಲ್ಲಿ ಪೆನ್ಸಿಲನ್ನು ಬಳಸದೇ ನೇರವಾಗಿ ಕುಂಚದಿಂದ ಡ್ರಾಯಿಂಗನ್ನು ಮಾಡಿಕೊಂಡು ಭಾವಚಿತ್ರವನ್ನು ರಚಿಸುತ್ತಾರೆ. ಚಿತ್ರಿಸುವ ಮೊದಲು ಕುಂಚವನ್ನು ಸರಿಯಾಗಿ ತೈಲದಿಂದ ತೋಳೆದು ಶುದ್ಧವಾಗಿಸಿಕೊಂಡು ಕಲಾಕ್ರಿಯೇಯಲ್ಲಿ ತೊಡಗುತ್ತಾರೆ. "A good brush is one that is flexible and clean, and comes to a proper shape naturally"[57] ಮೊದಲು ಒಂದು ಬಾರಿಯಂತೆ ಬಣ್ಣವನ್ನು ಸ್ವಲ್ಪ ಪಾರದರ್ಶಕವಾಗಿ ಯಾವ ಯಾವ ಭಾಗಕ್ಕೆ ಯಾವ ಯಾವ ಬಣ್ಣ ಬೇಕಾಗುತ್ತದೆ. ಆ ಬಣ್ಣಗಳಿಂದ ಹಚ್ಚುತ್ತಾರೆ. ನಂತರ ಬಟ್ಟೆಯಿಂದ ಅದನ್ನು ನಿಧಾನವಾಗಿ, ಸಂಪೂರ್ಣವಾಗಿ ಒರೆಸುತ್ತಾರೆ. ಹೀಗೆ ಮಾಡುವದರಿಂದ ಬಣ್ಣವು ಎಲ್ಲ ಕಡೆ ತೆಳುವಾಗಿ ಲೇಪನಗೊಂಡಂತೆ ಆಗುತ್ತದೆಯಲ್ಲದೆ ಬಳಸಿದ ಭಾಗಕ್ಕೆ ಇದು ಸಹಾಯಕಾರಿಯಾಗಬಲ್ಲದು. ಮುಖದಲ್ಲಿ ಬೆಳಕು ಬಿದ್ದಿದ್ದರೆ ಈ ಭಾಗವನ್ನು ಹಾಗೆಯೇ ಬಿಡುತ್ತಾರೆ. ಉಳಿದ ಭಾಗದಲ್ಲಿ ಬಣ್ಣವನ್ನು ದಪ್ಪ ದಪ್ಪವಾಗಿ (Impasto) ಬಳಸಿಕೊಂಡು ಕಲಾಕೃತಿಯನ್ನು ರಚಿಸುತ್ತಾರೆ. ಇದು ಇವರ ಕಲಾತಂತ್ರದ ವೈಶಿಷ್ಟ್ಯವಾಗಿದೆ. ಕೇವಲ 30, 40 ನಿಮಿಷ ಗಳಲ್ಲಿ ಈ ಕಲಾಕೃತಿಗಳನ್ನು ಮುಗಿಸಿ ಬಿಡುತ್ತಾರೆ. ಇವರ ವರ್ಣಗಾರಿಕೆಯ ಪ್ರಭಾವವು ಅಷ್ಟೇ ಸೊಗಸಾದದ್ದು. ಭಾರತದ ಪ್ರಾಚೀನ ಚಿತ್ರಕಲಾ ಮಾಧ್ಯಮಕ್ಕೆ ಅದ್ಭುತ ಮೆರಗನ್ನು ತಂದದ್ದು ಜರ್ಮನಿಯ ಲೇಕಬಣ್ಣ ಈ ಬಣ್ಣಗಳು ಯಾವ ಪುಣ್ಯದ ಘಳಿಗೆಯಲ್ಲಿ ಜಾಗತಿಕವಾಗಿ ಬಂದವೋ ಅವು ಇಂದಿಗೂ ಅಮರವಾಗಿವೆ.

ಬಹುತೇಕ ಈ ಬಣ್ಣಗಳ ಬಳಕೆಯ ಮೊದಲು ಯಶಸ್ವಿ ಪ್ರಯತ್ನ ನಡೆದದ್ದು ರಾಜಾರವಿವರ್ಮನು ಬರೆದ ಪೌರಾಣಿಕ ಚಿತ್ರಗಳಲ್ಲಿ ನಂತರದ ಪ್ರಯತ್ನಗಳಲ್ಲಿ ಮುಂಬೈ ಕೇಂದ್ರೀಕೃತ ನಾಟಕಗಳಲ್ಲಿ ಬಂದವು [58] ಖಂಡೇರಾವರು ಬಳಸುವ ವರ್ಣಗಳು ಎಲ್ಲ ಸಾಮನ್ಯರು ಬಳಸುವ ವರ್ಣಗಳೇ ಆಗಿದ್ದರೂ, ಅವುಗಳ ಮಿಶ್ರಣ ಮಾಡುವದು ತುಂಬ ಮುಖ್ಯ ಖಂಡೇರಾವರು ಇವೇ ವರ್ಣಗಳನ್ನು ತೆಗೆದುಕೊಂಡು ಮಿಶ್ರಣಮಾಡಿ ಕಲಾಕೃತಿಗಳನ್ನು ರಚಿಸಿರುವುದನ್ನು ನೋಡಿದರೆ ಇವು ಖಂಡೇರಾವರ ವರ್ಣಗಳು ಎಂದು ಹೇಳುವಷ್ಟು ತಮ್ಮ ತನವನ್ನು ಆ ವರ್ಣಮಿಶ್ರಣದಲ್ಲಿ ಕಂಡುಕೊಂಡಿದ್ದಾರೆ. ಕಲಾಕೃತಿಯನ್ನು ನೋಡಿದ ಕೂಡಲೇ ಇದು ಖಂಡೇರಾವರದೇ ಎನ್ನುವ ಮಟ್ಟಿಗೆ ಗುರುತಿಸುವಷ್ಟು ಪ್ರಭಾವ ಶಾಲಿಯಾಗಿ ಚಿತ್ರಿಸುತ್ತಾರೆ ಇವರ ವ್ಯಕ್ತಿಚಿತ್ರಗಳಲ್ಲಿ ಭಾವಪ್ರಾಧಾನ್ಯತೆಗೆ ಹೆಚ್ಚು ಮಹತ್ವವನ್ನು ಕೊಡಲಾಗಿದೆ. ಕಲಾಕೃತಿಯನ್ನು ನೋಡಿದಕೂಡಲೆ ಅದರಲ್ಲಿ ಏನೋ ಒಂದು ರೀತಿಯ ಮನಸ್ಸನ್ನು ಸೆಳೆಯುವ ಆಕರ್ಷಣೆಯು ತನ್ನನ್ನು ತಾನೇ ಕರೆದೊಯ್ಯುತ್ತದೆ. ಇವರೇ ಹೇಳುವ ಹಾಗೆ ವ್ಯಕ್ತಿಚಿತ್ರಗಳನ್ನು ರಚಿಸುವದು ಸುಲಭವಲ್ಲ ಯಾಕೆಂದರೆ ಚಿತ್ರದಲ್ಲಿ ನಾವು ವ್ಯಕ್ತಿಯನ್ನು ತೋರಿಸಬಹುದು. ಆದರೆ ಆ ವ್ಯಕ್ತಿಯ ಹಾವ ಭಾವಗಳನ್ನು ತೋರಿಸಬೇಕು. Expression is very important in a portrait or life painting. ಒಂದು ವೇಳೆ ಅಲ್ಲಿ Expressionಇರಲ್ಲಿಲ್ಲವೆಂದರೆ ಅದು ಕಲಾಕೃತಿಯೆನಿಸಲಿಕ್ಕೆ ಯೋಗ್ಯವಲ್ಲದಂತಾಗುತ್ತದೆ. ಅದಕ್ಕೆ ವ್ಯಕ್ತಿಚಿತ್ರಗಳ ಲ್ಲಿ ಭಾವವೇ ಪ್ರಧಾನವಾಗಿರುತ್ತದೆ. ಎಂದು ಖಂಡೇರಾವರು ವ್ಯಕ್ತಿಚಿತ್ರಗಳ ಬಗ್ಗೆ ಹೇಳುತ್ತಾರೆ.

ಇದೇ ರೀತಿಯ ತಂತ್ರವಿಧಾನವನ್ನು ಬಳಸಿಕೊಂಡು ಇವರು ಕೆಲವು ನಿಸರ್ಗ ಚಿತ್ರಗಳನ್ನು ಮತ್ತು ಸ್ಥಿರ ಚಿತ್ರಗಳನ್ನು ಚಿತ್ರಿಸಿದ್ದಾರೆ. ಇವುಗಳನ್ನು ಕ್ರಮವಾಗಿ ಈ ತಂತ್ರವಿಧಾನಕ್ಕೆ ಇವರು ಬಳಸುವ ವರ್ಣಗಳು ಹೀಗಿವೆ. Burnt umber, Vyndake Brown, Cobaltblue, Sapgreen, Emarald green, yellow ochre, Crimson lake, Flake White ಮುಂತಾದ ವರ್ಣಗಳನ್ನು ಬಳಸಿಕೊಂಡು ಕಲಾಕೃತಿಗಳನ್ನು ರಚಿಸುತ್ತಾರೆ. ಇದು ಪ್ರಾತ್ಯೆಕ್ಷಿಕೆಗಳನ್ನು ಮಾಡುವ ಸಂದರ್ಭದಲ್ಲಾದ ತಂತ್ರವಿಧಾನವಾದರೆ, ಇನ್ನು ಬೇರೆಯವರಿಗೆ ಮಾಡಿಕೊಟ್ಟ

57. Bernard Daunstan : Starting to paint a portrait, Page No.8

58. ಡಾ. ಎಸ್.ಸಿ.ಪಾಟೀಲ : (ಸಂ.)ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ 71

ವ್ಯಕ್ತಿಚಿತ್ರಗಳಲ್ಲಿ ದಪ್ಪದಪ್ಪವಾಗಿ ಬಳಸದೇ ತುಂಬಾ ಮೃದುವಾಗಿ , ಒಂದೇ ತೆರನಾಗಿ ವರ್ಣ ಸಂಯೋಜನೆಯನ್ನು ನಾವು ಕಾಣಬಹುದು ಇವುಗಳಲ್ಲಿ ಹೆಚ್ಚಾಗಿ ಛಾಯಚಿತ್ರಗಳನ್ನು ಆಧರಿಸಿ ಚಿತ್ರಿಸಿದ ಕಲಾಕೃತಿಗಳಾಗಿವೆ. ಈ ಸಂದರ್ಭದಲ್ಲಿ ಛಾಯ ಚಿತ್ರವು ಚಿಕ್ಕದಾದರೆ ಅದನ್ನು ಒಂದು ಹಾಳೆಗೆ ಅಂಟಿಸಿ ಅದರ ಮೇಲೆ ಪೆನ್ಸಿಲನಿಂದ ಅದರ ಮೇಲೆ ಗೆರೆಗಳನ್ನು ಹಾಕಿ ಒಂದು ಬದಿಯಿಂದ ಇನ್ನೊಂದು ಬದಿಯಿರುವ ಗೆರೆಗಳಂತೆಯೇ ಒಂದೇ ತೆರನಾದ ಸಂಖ್ಯೆಯನ್ನು ಕೊಡುತ್ತಾ ಹೋಗಿ ಛಾಯಾಚಿತ್ರದ ತುಂಬ ಎರಡೂ ರೀತಿಯಿಂದ ಗೆರೆಗಳನ್ನು ಎಳೆದು ಸಿದ್ದಪಡಿಸಿಕ್ಕೊಳ್ಳುತ್ತಾರೆ. ನಂತರದಲ್ಲಿ ಆ ಛಾಯಾಚಿತ್ರದಲ್ಲಿರುವ ವ್ಯಕ್ತಿಯನ್ನು ಕ್ಯಾನವಾಸಿನ ಮೇಲೆ ಬಿಡಿಸುವಾಗ ಅದರ ಮೇಲೆ ಛಾಯಾಚಿತ್ರದ ಮೇಲೆ ಹಾಕಿರುವ ಬ್ಲಾಕಗಳಂತೆ ಎರಡು ಅಥವಾ ಮೂರು ಪಟ್ಟುಗಳಂತೆ ಬ್ಲಾಕುಗಳನ್ನು ಹಾಕುತ್ತಾರೆ. ನಮಗೆ ಎಷ್ಟು ದೊಡ್ಡ ಗಾತ್ರದಲ್ಲಿ ಬೇಕು , ಅಷ್ಟು ಪಟ್ಟು ಬ್ಲಾಕುಗಳನ್ನು ಹೆಚ್ಚಿಸುತ್ತಾ ಹೋಗಬೇಕು. ಹೀಗೆ ಪೆನ್ಸಿಲ್ ನಿಂದ ಬ್ಲಾಕಗಳನ್ನು ಹಾಕಿ, ನಂತರ ಅದರ ಮೇಲೆ ಸಂಪೂರ್ಣವಾಗಿ ಪೆನ್ಸಿಲ್ ನಿಂದ ವ್ಯಕ್ತಿಚಿತ್ರವನ್ನು ಇಡೀಸಬೇಕು. ಇದಾದ ಮೇಲೆ ಬಣ್ಣವನ್ನು ಬಳಸಿಕೊಂಡು ಕಲಾಕೃತಿಯನ್ನು ರಚಿಸುವದು ಇದು ಒಂದು ತಂತ್ರವಿಧಾನ. ಇಲ್ಲಿ ಬಳಸುವ ವರ್ಣಗಾರಿಕೆಯ ಪ್ರಭಾವವೇ ಬೇರೆ ಇಲ್ಲಿ ವರ್ಣವನ್ನು ದಪ್ಪದಪ್ಪವಾಗಿ ಲೇಪಿಸಿದರೆ ಕಡಿಮೆ ಪ್ರಮಾಣದಲ್ಲಿ ವರ್ಣವನ್ನು ಬಳಸಿಕೊಂಡು ಅದರಲ್ಲಿಯೇ ನೈಜತೆಯೊಂದಿಗೆ ಭಾವಪ್ರಧಾನವಾದಂಥ ಕಲಾಕೃತಿಗಳನ್ನು ರಚಿಸಿದ್ದಾರೆ.

ಈ ಹಂತದಲ್ಲಿ ಇವರು ಹೆಚ್ಚಾಗಿ ಶರಣರ ಜೀವನಕ್ಕೆ ಸಂಬಂಧಪಟ್ಟಂತೆ ಧಾರ್ಮಿಕ ವಿಷಯಗಳಿಗೆ ಸಂಬಂಧಪಟ್ಟಂತೆ ಮತ್ತು ಪೌರಾಣಿಕ ವಿಷಯಗಳಿಗೆ ಸಂಬಂಧಪಟ್ಟಂತೆ ಹಲವಾರುಕಲಾಕೃತಿಗಳು ಈ ಹಂತದಲ್ಲಿ ಇವರಿಂದ ಮೂಡಿಬಂದವು. ಅಂಥವುಗಳಲ್ಲಿ ಶರಣಬಸವರು ತಮ್ಮ ಹೊಲದಲ್ಲಿ ಬಂದ ಪ್ರಾಣಿ ಪಕ್ಷಿಗಳಿಗೆ ಕೊಡದಲ್ಲಿ ನೀರು ತಂದು ಅವುಗಳಿಗೆ ಕುಡಿಯಲು ಸುರುವುತ್ತಿರುವ ದೃಶ್ಯ, ಡಕಾಯಿತರು ಶರಣಬಸವರಿಗೆ ಶರಣಾಗತರಾಗಿರುವದು, ಶರಣಬಸವಪ್ಪನವರು ಮಹಾತ್ಮಗಾಂಧಿಜೀಯವರ ಜೊತೆ ಕುಳಿತು ಚರ್ಚಿಸುತ್ತಿರುವದು. ಕಿತ್ತೂರು ರಾಣಿ ಚೆನ್ನಮ್ಮನ ವೈರಿಗಳ ಮಕ್ಕಳ ಮಕ್ಕಳು ವೈರಿಗಳಲ್ಲ ಎನ್ನುವ ದೃಶ್ಯ.ಇವುಗಳು ಪ್ರಮುಖವಾದ ಕಲಾಕೃತಿಗಳಾಗಿವೆ. ಇವೆಲ್ಲವೂ ನೈಜ ಸಂಯೋಜನಾ ಕಲಾಕೃತಿಗಳಾಗಿವೆ. ಇವು ತೈಲವರ್ಣದಲ್ಲಿ ಮೂಡಿಬಂದ ಕಲಾಕೃತಿಗಳಾದರೂ ಪಾರದರ್ಶಕತೆಯಂತೆ ವರ್ಣವನ್ನು ತುಂಬ ತೆಳುವಾಗಿ ಮತ್ತು ಮೃದುವಾಗಿ ಬಳಸಿಕೊಂಡು ಚಿತ್ರಿಸಿದ್ದಾರೆ. ಚಿತ್ರಿಸುವಾಗ ಮೊದಲು ಸಣ್ಣ ಪ್ರಮಾಣದ ಚಿತ್ರದ ಮೇಲೆ ಪೆನ್ಸಿಲ್ ನಿಂದ ಗ್ರಾಫಗಳನ್ನು ಹಾಕಿ ನಂತರದಲ್ಲಿ ದೊಡ್ಡ ಅಳತೆಯ ಕ್ಯಾನವಾಸನ್ನು ವಸ್ತುವಾಗಿಸಿಕೊಂಡು ಅದರ ಮೇಲೆ ಚಿತ್ರಿಸಿದ್ದಾರೆ.

ಯಾವುದೇ ಕಲಾಕೃತಿಯನ್ನು ರಚಿಸುವುದಕ್ಕಿಂತ ಪೂರ್ವದಲ್ಲಿ ಅಂಕನೆ (Sketch) ಗಳನ್ನು ಮಾಡಿ ನಂತರದಲ್ಲಿ ಅದೇ ದೊಡ್ಡ ಅಳತೆಯಲ್ಲಿ ಚಿತ್ರಿಸುವದು ಇವರು ರೂಢಿಯಾಗಿಸಿಕೊಂಡಿದ್ದರು. ಇದು ಖಂಡೇರಾವರ ಶಿಸ್ತಿನ ಕ್ರಮವೂ ಆಗಿತ್ತು. ಯಾಕೆಂದರೆ ಮುಂಬೈನ ಸರ್.ಜೆ.ಜೆ. ಕಲಾಶಾಲೆಯಲ್ಲಿ ಇವರು ವಿದ್ಯಾಭ್ಯಾಸವನ್ನು ಮಾಡುವಾಗ ಅಲ್ಲಿ ಒಂದು ಕಲಾಕೃತಿಗಳನ್ನು ರಚಿಸಬೇಕಾದರೆ ಅದನ್ನು ಬೇರೆ ಬೇರೆ ರೀತಿಯಿಂದ ಐದಾರು ಬಾರಿ ಪೆನ್ಸಿಲ್ ನಿಂದ ಡ್ರಾಯಿಂಗ್ ಮಾಡಬೇಕು. ಆಮೇಲೆ ಬಣ್ಣದಿಂದ ಕಲಾಕೃತಿಯನ್ನು ರಚಿಸಬೇಕು. ಇದು ಜೆ.ಜೆ. ಕಲಾಶಾಲೆಯಲ್ಲಿನ ಶಿಸ್ತಿನ ಕ್ರಮವಾಗಿತ್ತು. ಖಂಡೇರಾವರ ಕಲಾಕೃತಿಗಳಲಿಯೂ ನಾವು ಈ ರೀತಿಯ ತಂತ್ರವಿಧಾನವನ್ನು ಕಾಣಬಹುದು. ಇವರು ಬಣ್ಣವನ್ನು ಬಳಸಿಕೊಳ್ಳುವ ಕ್ರಮವೂ ಅಷ್ಟೆ ವಿಶೇಷವಾದದ್ದು. ಇವರು ಪ್ಯಾಲೆಟನಲ್ಲಿ ಮೊದಲು ಬಣ್ಣವನ್ನು Dark ನಿಂದ ಪ್ರಾರಂಭಿಸ ಕೊನೆಲ್ಲಿ Light ನಂತೆಯೇ ಪ್ಯಾಲೆಟಿನಲ್ಲಿ ಬಣ್ಣವನ್ನು ಹಚ್ಚಿಕೊಳ್ಳುತ್ತಾರೆ. ಇದು ಇವರು ಬಳಸಿಕೊಳ್ಳುವ ವರ್ಣಗಾರಿಕೆಯ ವೈಶಿಷ್ಟ್ಯವಾಗಿದೆ.

ಖಂಡೇರಾವರು ಅಧ್ಯಾಪಕ ವೃತ್ತಿಯಲ್ಲಿ ರಚಿಸಿದ ಕಲಾಕೃತಿಗಳನ್ನೆ , ನಿವೃತ್ತಿಯ ನಂತರದಲ್ಲಿಯೂ ರಚಿಸುತ್ತ ಬಂದಿದ್ದಾರೆ. ಈ ಹಂತದಲ್ಲಿಯೂ ಇವರು ಛಾಯಾಚಿತ್ರಗಳನ್ನು ಆಧರಿಸಿ ವ್ಯೆಕ್ತಿಚಿತ್ರ'ಳನ್ನು ರಚಿಸಿದ್ದಾರೆ. ಇವುಗಳಲ್ಲಿ ಭಾವಚಿತ್ರಗಳು ಮತ್ತು ಪೂರ್ಣಪ್ರಮಾಣದ ಚಿತ್ರಗಳು ಸೇರಿವೆ. ನಾಡಿನ ಬೇರೆ ಬೇರೆ ಕಡೆಗಳಿಗೆ ಹೋಗಿ ಪ್ರಾತ್ಯಕ್ಷಿಕೆಗಳನ್ನು ಮಾಡಿದ್ದಾರೆ. ಇನ್ನೂ ಮಾಡುತ್ತಿದ್ದಾರೆ. ಖಂಡೇರಾವರು ನಿವೃತ್ತಿಯನ್ನು ಹೊಂದಿದ ಮೇಲೆಯೇ ಹೆಚ್ಚಿನ ರೀತಿಯಲ್ಲಿ ಕಲಾಕ್ರೀಯೆಯಲ್ಲಿ , ಕಲಾ ಚಟುವಟಿಕೆಗಳಲ್ಲಿ ತೋಡಗುತ್ತಿರುವುದನ್ನು ನಾವು ಗಮನಿಸಿಬಹುದು. ಈ ಹಂತದಲ್ಲಿ ಅವರು

ಹೆಚ್ಚಾಗಿ ಪ್ರಾತ್ಯಕ್ಷಿಕೆಗಳನ್ನು ಮಾಡಿದ್ದಾರೆ. ಇವುಗಳಲ್ಲಿ ವ್ಯಕ್ತಿಚಿತ್ರಗಳು ಮತ್ತು ವಿಂಡೋಸರಣಿಯ ಅಮೂರ್ತ ಸಂಯೋಜನಾ ಕಲಾಕೃತಿಗಳಾಗಿವೆ. ಕೇವಲ ರೇಖೆಗಳ ಗತಿ, ಬರಿ ಚಿತ್ರರಚನೆಯ ಪದ್ಧತಿ ಮತ್ತು ವರ್ಣ ಸಾಮರಸ್ಯದ ವಿಂಗಡನೆಗಳಿಂದಲೇ ಕಲಾಕೃತಿಗಳ ರೂಪ-ರೇಷೆಯನ್ನು ಗುರುತಿಸಲು ಅಸಾಧ್ಯವಾದದ್ದು. ಯಾವುದೇ ಕಲಾಕೃತಿಯಲ್ಲಿಯ ಆಕಾರ ವರ್ಣಗಳ ತಾಳ-ಮೇಳ ವಿಷಯಗಳ ಸ್ವಂತಿಕೆ ತಾಂತ್ರಿಕತೆ ಕಲೆಯ ಒಳಅರ್ಥಗಳನ್ನು ನಾವು ಸೂಕ್ಷ್ಮವಾಗಿ ಗುರುತಿಸಲೇಬೇಕು. ಕೇವಲ ಆಕಾರ ಪ್ರಮಾಣಬದ್ದವಾಗಿದ್ದರೆ ಮಾತ್ರ ಸಾಲದು ಬಣ್ಣಗಳ ಹರವಿಕೆಯಲ್ಲಿಯ ತಾಳ-ಮೇಳದಲ್ಲಿ ಸಮತೋಲನವೂ ಅಷ್ಟೇ ಪ್ರಧಾನ ಪಾತ್ರವಹಿಸುತ್ತದೆದ.[59] ಇವರ ವಿಂಡೋಸರಣಿಯ ಅಮೂರ್ತ ಸಂಯೋಜನಾ ಕಲಾಕೃತಿಗಳನ್ನು ನಾವು ನೋಡಿದಾಗ ಅದರಲ್ಲಿ ಆಕಾರವಿಲ್ಲ, ರೂಪವಿಲ್ಲ, ಅದು ಅಮೂರ್ತವೆನಿಸಿದರೂ ಬಳಸಿದ ವರ್ಣಗಾರಿಕೆಯ ತಂತ್ರವಿಧಾನವು ತುಂಬ ಮಹತ್ವದ್ದಾಗಿದೆ. ಇಲ್ಲಿ ದೊಡ್ಡ ಗಾತ್ರದ ಚಪ್ಪಟೆಯಾದ ಕುಂಚದಿಂದ ಬಣ್ಣವನ್ನು ತೆಳುವಾಗಿ ಒರೆಸುತ್ತಾ ಹೋಗಿದ್ದಾರೆ. ಅವು ನೋಡಿದರೆ ಅಡ್ಡದಾದ ಮತ್ತು ಉದ್ದವಾದ ಪಟ್ಟೆಗಳ ಆಕಾರಗಳಂತೆ ಕಂಡರೂ ಅವು ನೋಡುವುದಕ್ಕೆ ಕಣ್ಣಿಗೆ ಒಂದು ರೀತಿಯ ಮುದವನ್ನು ಕೊಡುತ್ತವೆ. ಅರ್ಧಚಂದ್ರಾಕೃತಿಯಂತೆ ಬಿಳಿಬಣ್ಣದಂತೆಯೇ ಕ್ಯಾನವಾಸನ್ನು ಹಾಗೆಯೇ ಬಿಟ್ಟು ಕಲಾಕೃತಿಯನ್ನು ರಚಿಸಿದ್ದಾರೆ. ಇದು ಖಂಡೇರಾವರು ವಿಂಡೋಸರಣಿಯಲ್ಲಿ ಬಳಸಿಕೊಂಡಿರುವ ತಂತ್ರವಿಧಾನ. 2000-01ನೇ ಸಾಲಿನ ಉನ್ನತಕಲಾವಿದರಿಗೆ ನೀಡುವ ಫೆಲೋಶಿಪ್ ಇವರಿಗೆ ದೊರೆತಿದ್ದು, ಇಲ್ಲಿ ಜನಪದೀಯ ವಿಷಯಗಳಿಗೆ ಸಂಬಂಧ ಪಟ್ಟಂತೆ ಕಲಾಕೃತಿಗಳನ್ನು ರಚಿಸಿದ್ದಾರೆ, ರಚಿಸುತ್ತಿದ್ದಾರೆ. ಚಿತ್ರದಲ್ಲಿರುವ ಹಿಂದಿನ ಭಾಗಕ್ಕೆ ಕಡಿಮೆ ಪ್ರಮಾಣದಲ್ಲಿ ಬಣ್ಣವನ್ನು ಬಳಸಿಕೊಂಡು ಉದ್ದ ಮತ್ತು ಅಡ್ಡವಾಗಿರುವ ಪಟ್ಟೆಯನ್ನು ಬಳಸಿಕೊಂಡು ಕಲಾಕೃತಿಗಳನ್ನು ರಚಿಸಿದ್ದಾರೆ. ಇಲ್ಲಿ ಬಳಸಿದ ತಂತ್ರವಿಧಾನವನ್ನು ನಾವು ಗಮನಿಸಿದಾಗ ವಿಂಡೋಸರಣಿಯಲ್ಲಿ ಬಳಸಿದ ತಂತ್ರವನ್ನೇ ಇಲ್ಲಿಯೂ ಬಳಸಿಕೊಂಡಿದ್ದು ಕಂಡುಬರುತ್ತದೆ. ಹೀಗೆ ಖಂಡೇರಾವರು ಪ್ರತಿಯೊಂದು ಮಾಧ್ಯಮದಲ್ಲೂ ತಮ್ಮದೇ ಆದ ತಂತ್ರ ವಿಧಾನದೊಂದಿಗೆ ಕಲಾಕೃತಿಗಳನ್ನು ರಚಿಸುತ್ತಾ ಬಂದಿರುವುದನ್ನು ನಾವು ಗಮನಿಸಬಹುದಾಗಿದೆ.

ಶೈಲಿ :

ಸೃಷ್ಟಿಯಲ್ಲಿರುವ ಪ್ರತಿಯೊಂದು ಜೀವಿಗಳಲ್ಲಿಯೂ ಅವುಗಳಿಗೆ ಚಲನವಲನಗಳನ್ನು ನಾವು ನೋಡಿದಾಗ, ಅದು ನಮಗೆ ಶೈಲಿಯಂಬಂತೆ ತೋರುತ್ತದೆ ಇದು ಸಹಜ. ಒಬ್ಬರು ಇನ್ನೊಬ್ಬರ ಹಾಗೆ ನಟನೆ ಮಾಡುವದಾಗಲಿ, ಇನ್ನೊಬ್ಬರ ಚಲನ-ವಲನಗಳನ್ನು ತಾವು ಬಳಸಿಕೊಂಡಾಗರಾಗಲಿ,ಮಾಡಿದರೆ ಏನಪ್ಪಾ ಇವನುಅವನ ಸ್ಟೈಲ ಹೊಡೆದಿದ್ದಾನೆಯಲ್ಲ ಎಂದು ಉದ್ಗರಿಸುವದು ಸಹಜವಲ್ಲವೆ. ಇದು ಕಲಾವಿದನಿಗೂ ಬಿಟ್ಟಿಲ್ಲ. ಒಬ್ಬ ಕಲಾವಿದನ ಕಲಾಕೃತಿಗಳನ್ನು ಅನುಕರಣೆ ಮಾಡುವಾಗ ಅದು ಕಲಾಕೃತಿಯ ಶೈಲಿಯನ್ನು ಬಳಸಿಕೊಂಡಿದ್ದಾನೆ. ಎನ್ನುವದು. ಬಹುಶಃ ಈ ಶೈಲಿಯನ್ನುವದು ಒಬ್ಬರಿಂದ ಇನ್ನೊಬ್ಬರು ಪ್ರಭಾವಿತಗೊಂಡಾಗ ಹುಟ್ಟಿಕೊಳ್ಳುವದು. ಇದುವೇ ಮುಂದೆ ಹೊಸತನವನ್ನು ಕಂಡುಕೊಳ್ಳಲು ಸಹಜ ಮಾರ್ಗಮಾಡಿಕೊಳ್ಳಲು ಅನುವು ಮಾಡಿಕೊಡುತ್ತದೆ. ಇಂದು ಶೈಲಿಯು ಎಷ್ಟುಪ್ರಭಾವ ಬೀರಿದೆಯೆಂದರೆ ಇದು ಕಲಾವಿದನ ಕಲಾಕೃತಿಯ ಮೇಲಿನ ಸಹಿಯಂತೆ ತೋರುತ್ತದೆ. ಅಂದರೆ ಕಲಾಕೃತಿಯನ್ನು ನೋಡಿದ ಕೂಡಲೆ ಇದು ಇವನದೇ ಕಲಾಕೃತಿಯೆಂದು ನಾವು ಸುಲಭವಾಗಿ ಹೆಸರಿಸಬಹುದಾದಷ್ಟು ಪ್ರಧಾನವಾಗಿ ರೂಪುಗೊಂಡಿದೆ. ಇಂದು ಎಷ್ಟೋ ಕಲಾವಿದರು ಈ ಅಂಶವನ್ನು ಗಮನಿಸಿಯೇ ಕಲಾಕ್ರಿಯೇಯಲ್ಲಿ ತಮ್ಮನ್ನು ನಿರಂತರವಾಗಿ ತೊಡಗಿಸಿಕೊಂಡಿದ್ದಾರೆ. ಬಹುಶಃ ಇದು ಪಾಶ್ಚಾತ್ಯರ ಪ್ರಭಾವದಿಂದ ಹೆಚ್ಚುಬೆಳಕಿಗೆ ಬಂದಿದ್ದುಕಂಡು ಬರುತ್ತದೆ. ಪ್ರತಿಯೊಂದು ಪ್ರದೇಶಕ್ಕೂ ತನ್ನದೆ ಆದ ಚಿತ್ರ ಬರೆಯುವ ಶೈಲಿ ಇರುವುದನ್ನು ಕಾಣುತ್ತೇವೆ. ಒಂದು ಪ್ರದೇಶದ ಅಥವಾ ಒಂದು ಸಮುದಾಯದ ಚಿತ್ರಗಾರರಲ್ಲಿ ಅನೇಕರು ತಿಳಿದೋ, ತಿಳಿಯದೆಯೋ ಆ ಪ್ರದೇಶದ ವಿಶಿಷ್ಟವಾದ ಶೈಲಿಯ ಅನುಕರಣೆ ಮಾಡುತ್ತಾರೆ. ಅಥವಾ

---

59. ಕಾವೆಂಶ್ರೀ : ಒಡನಾಟ , ಪುಟ 6

ಆದರಿಂದ ಬಹಳ ಪ್ರಭಾವಿತರಾಗುತ್ತಾರೆ. ಹಾಗೆಯೇ ಒಂದೊಂದು ಉಪ ಸಂಸ್ಕೃತಿಯೂ ತನಗೆ ವಿಶಿಷ್ಟವಾಗಿ ಚಿತ್ರಶೈಲಿಯನ್ನು ಹೊಂದಿರುವ ಸಾಧ್ಯತೆಯುಂಟು.[60]

ಭಾರತದಲ್ಲಿ ನವ್ಯಕಲೆ ಗಣನೀಯವಾಗಿ ಕಂಡುಬರಲು ಕಾರಣ ಬ್ರಿಟೀಷ ಮೂಲ ಕಲಾಶಿಕ್ಷಣವೆಂದು ಹೇಳಬಹುದು. ಇಲ್ಲಿ ಕಲಾಶಿಕ್ಷಣ ಪ್ರಾರಂಭವಾದುದು ಸರ್.ಜೆ.ಜೆ. ಸ್ಕೂಲ್ ಆಫ್ ಆರ್ಟ ಮುಂಬೈ ಮತ್ತು ಮದ್ರಾಸ, ಕಲ್ಕತ್ತಾ ಕಲಾಶಾಲೆಗಳಲ್ಲಿ ಅಲ್ಲಿನ ಆಗಿನ ಪ್ರಾಚಾರ್ಯರು ಹೆಚ್ಚಾಗಿ ಪಾಶ್ಚಿಮಾತ್ಯರು. ಅವರ ಒಲವೆಲ್ಲಾ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಪ್ರಸಾರ ಮಾಡಲಾಗಿತ್ತು. ಹೀಗಾಗಿ ಪಠ್ಯಕ್ರಮದಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಈ ಎಲ್ಲಾ ಕಲಾಶೈಲಿಗಳು ಕಾಣಿಸಿಕೊಂಡವು. ಅಲ್ಲಿ ಕಲಾಶಿಕ್ಷಣವನ್ನು ಪಡೆದ ಎಲ್ಲಾ ಕಲಾವಿದರು ಸಹಜವಾಗಿ ಪಾಶ್ಚಿಮಾತ್ಯರ ಹೊಸ ಆಕರ್ಷಣೆಯ ಕಲಾಶೈಲಿಗಳಿಗೆ ಒಳಗಾದವರು . ಬಹುಪಾಲು ಕಲಾವಿದರು ಪಾಶ್ಚಾತ್ಯ ಕಲಾಶೈಲಿಗಳನ್ನು ತಮ್ಮ ಕಲಾಕೃತಿಗಳಲ್ಲಿ ತರುವ ಪ್ರಯತ್ನವನ್ನು ನಡೆಸಿದರು.[61]

ಚಿತ್ರಕಲೆಗಾರನಿಗೆ ಪ್ರತ್ಯಕ್ಷನಾತ್ಮಕ ಸಂಘಟನೆ ಬಹಳ ಅವಶ್ಯ ಅವುಗಳಲ್ಲಿ ಆಕೃತಿ ಮತ್ತು ಕ್ಷೇತ್ರಗಳ ಸಂಬಂಧ ಕಲ್ಪಿಸುವದು ಮುಖ್ಯ . ಗೋಡೆಯ ಮೇಲೆ ,ಕಾಗದದ ಮೇಲೆ, ಅಥವಾ ಇನ್ನಿತರ ಯಾವುದೇ ಚಿತ್ರಗಳು ಇವೆಲ್ಲಾ ಆಕೃತಿಗಳಾಗಲಿ ಕಾಣಲು ತಮ್ಮ ತಮ್ಮ ಕ್ಷೇತ್ರಗಳೊಂದಿಗೆ ಅವು ಹೊಂದಿರುವ ಸಂಬಂಧವೇ ಕಾರಣ. ಆ ಕೃತಿಕ್ಷೇತ್ರದ ಸಂಬಂಧವು ಹೆಚ್ಚುಮೂಲ ರೂಪವಾಗಿರುತ್ತದೆ. ಚಿತ್ರಕಲೆಯ ನೈಪುಣ್ಯತೆ ಆಕೃತಿ ಸಂಬಂಧದ ಮೇಲೆ ಅವಲಂಬಿಸಿರುತ್ತದೆ. ಇದರಿಂದ ಚಿತ್ರಕಲೆಗಾರ ಬರೆದ ಚಿತ್ರ ಅರ್ಥಪೂರ್ಣವಾಗಿರುತ್ತದೆ. ಇದಕ್ಕೆ ಚಿತ್ರಗಾರನ ಅಮೂರ್ತ ನೈಪುಣ್ಯತೆ ಒಂದು ಕಾರಣ[62] ಕಲಾವಿದ ಕಲಾಕೃತಿಗಳನ್ನು ರಚಿಸುತ್ತಲೇ ಒಂದು ಹಂತಕ್ಕೆ ತಲುಪಿದಾಗ ಅವನುಕಲೆಯಲ್ಲಿ ಹೆಚ್ಚಿನದನ್ನು ಹುಡುಕುತ್ತಾ ಹೋಗುತ್ತಾನೆ. ಈ ಸಂದರ್ಭದಲ್ಲಿ ಅವನು ತನ್ನದೇ ಆದ ಒಂದು ಶೈಲಿಯನ್ನು ಕಂಡುಕೊಳ್ಳಲು ಪ್ರಯತ್ನಿಸುವದು ಸಹಜ . ಎಷ್ಟೋ ಕಲಾವಿದರು ಈ ತಂತ್ರವನ್ನು ಅಳವಡಿಸಿಕೊಂಡೆಯೇ ಇಂದು ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಉದಾಹರಣೆಯೊಂದಿಗೆ ಹೇಳಬೇಕಾದರೆ ಪಾಶ್ಚಾತ್ಯ ಕಲಾವಿದರರಾದ ಪಾಬ್ಲೋ ಪಿಕಾಸೋ, ಸಿಜಾನ್, ಮೈಕೆಲ್ ಎಂಜಿಲೋ, ಸಾಲ್ವಡರಡಾಲಿ, ವಿನ್ಸಂಟ್ ವ್ಯಾನ್ ಗಾಗ್ ರಂತಹ ಅನೇಕ ಕಲಾವಿದರು ಹೊಸ ಹೊಸ ಪಂಥಗಳನ್ನೇ ಹುಟ್ಟು ಹಾಕಿದರು. ಭಾರತೀಯ ಆಧುನಿಕ ನವ್ಯಕಲಾವಿದರಾದ ಅವನಿಂದ್ರನಾಥ ಟ್ಯಾಗೋರ, ನಂದಲಾಲ್ ಬೋಸ, ಎನ್. ಎಸ್. ಬೇಂದ್ರೆ,ಎಂ.ಎಫ. ಹುಸೇನ, ಕೆ.ಕೆ.ಹೆಬ್ಬಾರ. ಆರ.ಎಂ. ಹಡಪದ ,ವಿ.ಜಿ. ಅಂದಾನಿಯವರಂಥ ಅನೇಕ ಪ್ರಮುಖ ಕಾಲವದರನ್ನು ಹೆಸರಿಸಬಹುದು. ಖಂಡೇರಾವರೂ ಇದಕ್ಕೆ ಹೊರತಾಗಿಲ್ಲ. ಇವರು ಎಲ್ಲ ಮಾಧ್ಯಮಗಳ ಕಲಾಕೃತಿಗಳನ್ನು ರಚಿಸುವ ರಚನಾ ಸಾಮರ್ಥ್ಯವಿರುವುದರಿಂದ ಒಂದೇ ಶೈಲಿಗೆ ಅಂಟಿಕೊಳ್ಳದೇ ಎಲ್ಲದರಲ್ಲಿಯೂ ಹೋಸತನವನ್ನು ಹುಡುಕಲು ಪ್ರಯತ್ನಿಸಿದ್ದಾರೆ.

ಹೀಗಾಗಿ ಇವರ ಪ್ರತಿಯೊಂದು ಹಂತದಲ್ಲಿ ನಿರ್ಮಾಣಗೊಂಡಿರುವ ಕಲಾಕೃತಿಗಳನ್ನು ಕಾಲಕಾಲಕ್ಕೆ ಅವುಗಳಲ್ಲಾದ ಬದಲಾವಣೆಗಳನ್ನು ನಾವು ಇವರ ಕಲಾಕೃತಿಗಳಲ್ಲಿ ಅಡಗಿರುವುದನ್ನು ಕಾಣಬಹುದು.

ಖಂಡೇರಾವರ ಅಧ್ಯಯದ ಕಾಲದ ಪ್ರಾರಂಭದಲ್ಲಿ ನಿರ್ಮಾಣಗೊಂಡ ಕಲಾಕೃತಿಕಗಳನ್ನು ನಾವು ಗಮನಿಸಿದಾಗ ಅವುಗಳಲ್ಲಿ ಶೈಲಿಗಳ ಬದಲಾಗಿ ಅಧ್ಯಯನಕ್ಕೆ ಸಂಬಂಧಪಟ್ಟಂತೆ , ಪಠ್ಯಕ್ರಮಕ್ಕೆ ಸಂಬಂಧಪಟ್ಟ ವಿಷಯಗಳಾಗಿರುವುದರಿಂದ ಅಲ್ಲಿ ಹೆಚ್ಚಾಗಿ ಯಾವ ಶೈಲಿಗೂ ಅಂಟಿಕೊಳ್ಳದೆ ಅಧ್ಯಯನದ ದೃಷ್ಟಿಯನ್ನಿಟ್ಟುಕೊಂಡು ಕಲಾಕೃತಿಗಳನ್ನು ರಚಿಸಿದ್ದಾರೆ. ಮುಂಬೈನ ಸರ್.ಜೆ.ಜೆ.ಕಲಾಶಾಲೆಯಲ್ಲಿ ಅಧ್ಯಯನ ಮಾಡುವಾಗ ಅಧ್ಯಯನದ ಕೊನೆಯ ಹಂತದಲ್ಲಿ ಆಗಿನ ಖ್ಯಾತ ಕಲಾವಿದರಾದ ಎನ್.ಎಸ್.ಬೇಂದ್ರೆಯವರ ಕಲಾಕೃತಿಯನ್ನು ನೋಡಿ ಪ್ರಭಾವಿತರಾಗಿದ್ದರು. ಅಲ್ಲದೇ ತಮ್ಮ ಸಂಯೋಜನಾ ಕಲಾಕೃತಿಗಳಲ್ಲಿ ಬೇಂದ್ರೆಯವರ ಶೈಲಿಯನ್ನು ಬಳಸಿಕೊಳ್ಳಲು ಪ್ರಾರಂಭಿಸಿದರು. ಈ ಶೈಲಿಯಲ್ಲಿ ಇವರು

---

60. ಡಾ. ಎಸ್.ಸಿ.ಪಾಟೀಲ : (ಸಂ.)ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ 65
61. ಡಾ. ಎಸ್.ಸಿ.ಪಾಟೀಲ : ವರ್ಣಸಂಚಯ, ಪುಟ 53
62. ಡಾ. ಎಸ್.ಸಿ.ಪಾಟೀಲ : (ಸಂ.)ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ 46

ಹಲವಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಇಲ್ಲಿಂದಲೆ ಇವರು ಶೈಲಿಗೆ ಹೆಚ್ಚು ಮಹತ್ವವನ್ನು ಕೊಟ್ಟಿದ್ದು ಕಂಡುಬರುತ್ತದೆ.
ಪ್ರತಿಯೊಬ್ಬ ಕಲಾವಿದನೂ ಕಲೆಯಲ್ಲಿ ಹೊಸತನವನ್ನು ಕಂಡುಕೊಳ್ಳಲು ಏನಾದರೂ ಹೊಸದನ್ನು ಸೃಷ್ಟಿಸಿದಾಗ ಅದುವೇ
ಅವನಿಗೆ ಒಂದು ಶೈಲಿಯಂತೆ ಕಂಡುಕೊಳ್ಳಲು ಪ್ರಚೋದಿಸುತ್ತದೆ. ಹೀಗಾಗುವುದರಿಂದ ಕಲಾವಿದನು ತನ್ನದೇ ಆದ
ಒಂದು ಶೈಲಿಯನ್ನು ಕಂಡುಕೊಳ್ಳುತ್ತಾನೆ. ಎಲ್ಲರೂ ಇದನ್ನು ಬಯಸುವದು ಸಹಜ. ಈ ಕ್ಷೇತ್ರದಲ್ಲಿ ಗಣನೀಯವಾಗಿ ತಮ್ಮ
ನ್ನು ತೊಡಗಿಸಿಕೊಂಡಾಗ ಮಾತ್ರ ಅವರು ಕಲಾಶೈಲಿಯನ್ನು ಹೆಚ್ಚಾಗಿ ಬಳಸುವುದುಂಟು. ಇದಕ್ಕೂ ಮೊದಲು ಅವರು
ಎಲ್ಲ ರೀತಿಯ ಕಲಾ ಮಾಧ್ಯಮಗಳಲ್ಲಿ, ಕಲಾಸೃಷ್ಟಿಯಲ್ಲಿ ತೋಡಗಿಸಿಕೊಂಡಿರುತ್ತಾನೆ. ಕೋನೆಗೆ ತಮ್ಮನ್ನು ಗುರುತಿಸಿಕೊ
ಳ್ಳುವದಕ್ಕೋಸ್ಕರ ಈ ಶೈಲಿಯನ್ನು ಇತ್ತೀಚಿಗೆ ಬಳಸಿಕೊಳ್ಳುವದು ಕಂಡುಬರುತ್ತಿದೆ. ಅಂದರೆ ಕಲಾಕೃತಿಯನ್ನು ನೋಡಿದ
ಕೂಡಲೇ ಗೊತ್ತಾಗುವುಗುವುದು. ಇದು ಇಂಥವರೇ ರಚಿಸಿರುವ ಕಲಾಕೃತಿಯೆಂದು ಎನ್ನುವಷ್ಟರ ಮಟ್ಟಿಗೆ ಶೈಲಿಗೆ ಪ್ರಭಾವಿ
ತರಾಗಿದ್ದಾರೆ.

ಖಂಡೇರಾವರು ಹಂತ ಹಂತವಾಗಿ ಕಲಾಕ್ರಿಯೇಯಲ್ಲಿ ತಮ್ಮನ್ನು ತೊಡಗಿಸಿಕೊಂಡಾಗ ಅವರ ಕಲಾಕೃತಿಗಳ
ಶೈಲಿಗಳು ಬೇರೆ ಬೇರೆ ರೀತಿಯಲ್ಲಿ ವೃದ್ಧಿಯಾಗತೊಡಗಿದವು. ಒಮ್ಮೆ ಇವರು ರಾತ್ರಿಯ ಸಮಯದಲ್ಲಿ ದಾರಿಯಲ್ಲಿ ಹೋಗು
ವಾಗ ಬೇರೆಯವರ ಮನೆಯ ಕಿಟಕಿಯ ಗ್ಲಾಸು ಒಡೆದಿದ್ದು ಕಂಡರು. ಒಡೆದ ಗ್ಲಾಸಿನೊಳಗಿನಿಂದ ಬರುವ ಮನೆಯ ಬೆಳ
ಕು ಚೂರು ಚೂರು ಆಗಿ ಕಾಣುವಂತಿರುವ ದೃಶ್ಯವು ಇವರಿಗೆ ಎನೋ ಒಂದು ರೀತಿಯಲ್ಲಿ ಪ್ರಭಾವವನ್ನು ಬೀರಿತು. ಮುಂದೆ
ಇದು ಒಂದು ಶೈಲಿಯನ್ನವ ಮಟ್ಟಿಗೆ ಬೆಳೆಯಿತು. ಇಂದು ಹೆಚ್ಚಾಗಿ ಖಂಡೇರಾವರು ಇದೆ ಶೈಲಿಯಿಂದಲೆ ತಮ್ಮನ್ನು ಗುರುತಿ
ಸಿಕೊಳ್ಳುತ್ತಾರೆ. ಅಷ್ಟೊಂದು ಪ್ರಭಾವಶಾಲಿಯಾಗಿ ಈ ಶೈಲಿಯು ತನ್ನ ಛಾಪನ್ನು ಮೂಡಿಸಿದ. ವಿಂಡೋಸರಣಿಯೆಂದು
ಕರೆಯುವ ಈ ಶೈಲಿಯಲ್ಲಿ ಖಂಡೇರಾವರು ಎಷ್ಟೋ ಕಲಾಕೃತಿಗಳನ್ನು ರಚಿಸಿದ್ದಾರೆ “Light passing through
the window” ವೆಂತಲೂ ಇದನ್ನು ಕರೆಯಲಾಗುತ್ತದೆ. ಅಂದರೆ ಕಿಟಕಿಯ ಮುಖಾಂತರ ಬೆಳಕು ಹೇಗೆ ಕಾಣಿಸುವು
ದು ಎಂಬುದು ಇದರ ತಾತ್ಪರ್ಯ. ಕಡಿಮೆವರ್ಣವನ್ನು ಬಳಸಿಕೊಂಡು ಅಡ್ಡ ಮತ್ತು ನೇರವಾದ ದಪ್ಪ ದಪ್ಪ ಪಟ್ಟೆಗಳಂತೆ
ಬಣ್ಣವನ್ನು ಸವರುತ್ತಾ ಹೋಗುತ್ತಾರೆ. ಬಿಳಿ ಭಾಗವನ್ನು ಕಾಣಲು ಕ್ಯಾನವಾಸನ್ನು ಹಾಗೆಯೇ ಬಿಡುತ್ತಾರೆ. ಇದರಲ್ಲಿ ಅರ್ಧ
ವಾದಚಂದ್ರನಾಕೃತಿಯನ್ನು ತೋರಿಸಲು ಬಿಳಿಭಾಗದಂತೆ ಕ್ಯಾನವಾಸನ್ನು ಹಾಗೆಯೇ ಬಿಡುತ್ತಾರೆ. ಕಲಾಕೃತಿಯನ್ನು ನೋಡಿ
ದರೆ ಕೇವಲ ದಪ್ಪದಪ್ಪವಾದ ಪಟ್ಟೆಗಳಂತೆ ಕಂಡರೂ ಕಲಾಕೃತಿಯು ನೋಡಲು ಸುಂದರವಾಗಿ ಕಾಣಿಸುವುದು. ಇದರಿಂ
ದಲೇ ನಾವು ತಿಳಿದುಕೊಳ್ಳಬಹುದು. ಅಶೈಲಿಯು ಎಷ್ಟು ಪ್ರಮಾಣಬದ್ಧವಾಗಿದೆಯೆಂದು ಇದು ಖಂಡೇರಾವರ ಕಾಲಕೌ
ಶಲ್ಯಕ್ಕೆ ಒಂದು ಮಾದರಿಯಾಗಿದೆ. ಇದೇ ಶೈಲಿಯಲ್ಲಿ ಎಷ್ಟೋ ಕಲಾಕೃತಿಗಳಿಗೆ ಇವರು ಹಲವಾರು ಪ್ರಶಸ್ತಿಗಳನ್ನು ಪಡೆದು
ಕೊಂಡಿದ್ದಾರೆ. ಇಂದು ಇವರು ನಾಡಿನ ಯಾವುದೇ ಭಾಗಗಳಲ್ಲಿ ಪ್ರಾತ್ಯಕ್ಷಿಕೆಗಳನ್ನು ಮಾಡಲು ಹೋದರೆ ಈ ಶೈಲಿಯ
ಅಮೂರ್ತ ಸಂಯೋಜನಾ ಕಲಾಕೃತಿಯು ನಿರ್ಮಾಣಗೊಳ್ಳುವುದು ಸಹಜ. ಇದು ಖಂಡೇರಾವರ ಅಮೂರ್ತ ಸಂಯೋ
ಜನಾ ಕಲಾಕೃತಿಗಳ ಶೈಲಿಯಾದರೆ ಇವರ ನೈಜಸಂಯೋಜನಾ ಕಲಾಕೃತಿಗಳ ಶೈಲಿಯೂ ವಿಶೇಷವಾಗಿದೆ. ಅದರಲ್ಲಿ ಇವ
ರು ರಚಿಸುವ ವ್ಯಕ್ತಿಚಿತ್ರಗಳು ಇವರ ಕಲಾಕೌಶಲ್ಯವನ್ನು ಎತ್ತಿಹಿಡಿಯುತ್ತದೆ. ವ್ಯಕ್ತಿ ಚಿತ್ರಗಳನ್ನು ರಚಿಸುವುದರಲ್ಲಿ ಖಂಡೇ
ರಾವರು ತಮ್ಮದೇ ಆದ ಒಂದು ಶೈಲಿಯನ್ನು ಕಂಡುಕೊಂಡಿದ್ದಾರೆ. ಇವರು ರಚಿಸುವ ವ್ಯಕ್ತಿಚಿತ್ರದಲ್ಲಿ ಸಾವು ಎರಡು
ಹಂತದಲ್ಲಿ ವರ್ಣಗಾರಿಕೆಯ ಪ್ರಭಾವವನ್ನು ಕಾರಣಬಹುದು ಒಂದು ರೂಪದರ್ಶಿಯರನ್ನು ಎದುರಿಗೆ ಕುಳ್ಳಿರಿಸಿಕೊಂಡು
ಪ್ರಾತ್ಯಕ್ಷಿಕೆಗಳನ್ನು ಮಾಡುವ ಸಂದರ್ಭದಲ್ಲಿಯ ಕಲಾಕೃತಿಗಳು. ಇನ್ನೊಂದು ಛಾಯಾಚಿತ್ರಗಳನ್ನಾಧರಿಸಿ ಮಾಡಿದ ಕಲಾಕೃ
ತಿಗಳು . ಎರಡರಲ್ಲೂ ಒಂದೇ ವಿಷಯ, ಹಾವ-ಭಾವಗಳನ್ನು ತುಂಬಿಸಲು ಪ್ರಯತ್ನಿಸಿದರು. ಅಲ್ಲಿ ಚಿತ್ರಿತಗೊಂಡಿರುವ
ಶೈಲಿ ಬೇರೆ ಬೇರೆ ಯಾದದ್ದು ಕಲಾಪ್ರಾತ್ಯಕ್ಷಿಕೆಗಳನ್ನು ಮಾಡುವ ಸಂದರ್ಭದಲ್ಲಿ ಭಾವಚಿತ್ರಗಳನ್ನು ಅಥವಾ ವ್ಯಕ್ತಿಚಿತ್ರಗಳ
ನ್ನು ಚಿತ್ರಿಸುವಾಗ ಒಂದು ನಿರ್ಧಾರಿತ ಸಮಯವನ್ನಿಟ್ಟುಕೊಂಡು ನೇರವಾಗಿ ಕುಂಚದಿಂದಲೇ ವರ್ಣಗಳನ್ನು ಮಿಶ್ರಣಮಾ
ಡಿಕೊಂಡು ಒಂದರ ಮಗ್ಗಲೊಂದರಂತೆ ಬಣ್ಣದ ರೆಪ್ಪೆಗಳನ್ನು ಇಡುತ್ತಾ ಹೋಗುತ್ತಾರೆ. ಇಲ್ಲಿ ಬಳಸುವ ಕುಂಚಗಳು ಎಲ್ಲ
ವೂ ಚಪ್ಪಟೆಯಾಕಾರದವು. ಕೇವಲ ಕೆಲವೇ ನಿಮಿಷಗಳಲ್ಲಿ ಕಲಾಕೃತಿಗಳನ್ನು ನಿರ್ಮಿಸುತ್ತಾರೆ. ಇಲ್ಲಿ ಕಲಾಕೃತಿಯು

ನೋಡಲು ರೆಪ್ಪೆ ರೆಪ್ಪೆಯಾಗಿ ಕಂಡರು ಅದರಲ್ಲಿಯ ವರ್ಣಗಾರಿಕೆಯ ಪ್ರಭಾವ ಮುಖ್ಯವಾದದ್ದು ಮತ್ತು ಚಿತ್ರಿತಗೊಂಡಿರುವ ವ್ಯಕ್ತಿಯ ಮುಖದಲ್ಲಿ ಭಾವನೆಯನ್ನು ವ್ಯಕ್ತಪಡಿಸುವಂತೆ ಚಿತ್ರಿಸುತ್ತಾರೆ. ಇದು ಇವರದೇ ಆದಂತಹ ಒಂದು ಕಲಾ ಶೈಲಿಯಾಗಿದೆ. ಇದು ಪ್ರಾತ್ಯಕ್ಷಿಕೆಗಳನ್ನು ಮಾಡುವ ಸಂದರ್ಭದಲ್ಲಿ ರಚಿತಗೊಂಡಿರುವ ಕಲಾಕೃತಿಗಳ ಶೈಲಿಯಾದರೆ ಇನ್ನು ಛಾಯಾಚಿತ್ರಗಳನ್ನಾಧರಿಸಿ ರಚನೆಗೊಂಡಿರುವ ವ್ಯಕ್ತಿಚಿತ್ರಗಳು ನೈಜತೆಯಿಂದ ಕೂಡಿದ್ದಾಗಿವೆಯಲ್ಲವೆ ಇಲ್ಲಿ ಬಳಸುವ ವರ್ಣಗಾರಿಕೆಯ ಪ್ರಭಾವವೇ ಬೇರೆ. ಇಲ್ಲಿ ವರ್ಣಗಳನ್ನು ಸರಿಯಾಗಿ ಮಿಶ್ರಣ ಮಾಡಿಕೊಂಡು ಚಪ್ಪಟೆಯಾಗಿ ಛಾಯಾಚಿತ್ರಗಳಲ್ಲಿದ್ದಂತೆಯೇ ನೈಜವಾಗಿ ಚಿತ್ರಿಸುತ್ತಾರೆ. ಇವರ ನೈಜ ಸಂಯೋಜನಾ ಕಲಾಕೃತಿಗಳ ವಿಷಯ ಯಾವುದೇ ಇರಲಿ ಇಲ್ಲಿಯೂ ಇದೇ ರೀತಿಯ ವರ್ಣಗಾರಿಕೆಯ ಪ್ರಭಾವವನ್ನು ಅವರ ಕಲಾಕೃತಿಗಳಲ್ಲಿ ಕಾಣಬಹುದು.

ಹೀಗೆ ಖಂಡೇರಾವರು ಪ್ರತಿಯೊಂದು ವಿಷಯದಲ್ಲಿ ತಮ್ಮದೇ ಆದಂಥ ಒಂದು ಶೈಲಿಯೊಂದನ್ನು ಕಂಡು ಕೊಂಡವರು. ಇವರ ಕಲಾಕೃತಿಗಳನ್ನು ನೋಡಿದ ಕೂಡಲೇ ಇದು ಖಂಡೇರಾವರದೆ ಎನ್ನುವಷ್ಟು ತಮ್ಮತನವನ್ನು ಅದರಲ್ಲಿ ಬಳಸಿಕೊಂಡಿದ್ದಾರೆ. ಇವರ ಅಧುನಿಕ ಸಂಯೋಜನಾ ಕಲಾಕೃತಿಳಲ್ಲಿ ನೈಜತೆ ಇಲ್ಲದಿದ್ದರೂ ಅದರಲ್ಲಿ ರೂಪ-ಆಕಾರ ಮತ್ತು ಭಾವಲಕ್ಷಣಗಳನ್ನು ಇರುವುದು. ನಾವು ನೋಡಬಹುದಾಗಿದೆ. ಇವರ ಆಧುನಿಕ ಸಂಯೋಜನಾ ಕಲಾಕೃತಿಗಳಲ್ಲಿ ಪ್ರಾರಂಭದ ಹಂತದಲ್ಲಿ ಖ್ಯಾತ ಕಲಾವಿದ ಎನ್.ಎಸ್. ಬೇಂದ್ರೆಯವರ ಕಲಾಕೃತಿಗಳ ಶೈಲಿಯು ಹೋಲುತ್ತಿದ್ದರು. ನಂತರದಲ್ಲಿ ತಮ್ಮದೆ ಆದ ಕೆಲವು ರೂಪ -ರೇಷ ಗಳನ್ನು ಅದರಲ್ಲಿ ಕೊಟ್ಟಿದ್ದಾರೆ. ಇಲ್ಲಿಯ ಕಲಾಕೃತಿಗಳಲ್ಲಿ ಹೆಚ್ಚಾಗಿ ಹಳ್ಳಿಯ ವಾತಾವರಣ ಅವರ ದೈನಂದಿನ ಬದುಕಿಗೆ ಸಂಬಂಧ ಪಟ್ಟಂತೆ ವಿಷಯಗಳನ್ನು ತಮ್ಮ ಕಲಾಕೃತಿಗಳಿಗೆ ವಸ್ತುವಿಷಯಗಳಾಗಿ ಬಳಸಿಕೊಂಡಿದ್ದಾರೆ. ಕಲಾಕೃತಿಗಳನ್ನು ಒಂದು ಯುಗದ ಆಸಕ್ತಿ ಮತ್ತು ಕುತೂಹಲದ ಮಾತ್ರವಾಗಿರುತ್ತದೆ. ಎಂಬ ಮಾತುಗಳು ಕಲಾಸೃಷ್ಟಿಯ ಮೂಲ ಮತ್ತು ಅದು ಮಾಡುವ ಪರಿಣಾಮಗಳ ಸಮಾಜಿಕ ಸ್ವರೂಪವನ್ನು ವ್ಯಕ್ತಪಡಿಸುತ್ತವೆ. ಒಬ್ಬ ಕಲಾವಿದನು ಜೀವಿಸಿರುವ ಕಾಲದ ಸಾಮಾಜಿಕ ಸ್ಥಿತಿಗತಿಗಳು ಕಲೆಯ ವಿವಿಧ ವಸ್ತು, ಆಶಯ ನಿರ್ವಹಣೆಗಳನ್ನು ನಿರ್ಧರಿಸುತ್ತವೆ[63] ಇತ್ತೀಚಿಗೆ ಇವರಿಗೆ 2000-01 ರ ಹಿರಿಯ ಕಲಾವಿದರಿಗೆ ನೀಡುವ ಫೆಲೋಶಿಪನ್ನು ದೊರೆತ್ತಿದ್ದು ಅದರಲ್ಲಿರುವ ವಿಷಯಗಳು ಜನಪದೀಯ ವಿಷಯಗಳಿಗೆ ಸಂಬಂಧಪಟ್ಟವುಗಳಾದ್ದವು. ಇವುಗಳಲ್ಲಿ ಅನೇಕ ವಿಷುಯಗಳ ಮೇಲೆ ಹಲವಾರು ಕೃತಿಗಳನ್ನು ಇದೇ ಶೈಲಿಯಲ್ಲಿಯೇ ಆಧುನಿಕ ಸಂಯೋಜನಾ ಕಲಾಕೃತಿಗಳನ್ನು ರಚಿಸಿದ್ದಾರೆ.

ಖಂಡೇರಾವರು ಸಾವಿರಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಅವುಗಳನ್ನು ಅಧ್ಯಯನದ ದೃಷ್ಟಿಯಿಂದ ಮೂರು ಹಂತಗಳಲ್ಲಿ ಚಿತ್ರಿತಗೊಂಡ ಕಲಾಕೃತಿಗಳೆಂದು ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. 1.ಅಧ್ಯಯನ ಕಾಲದಲಿಯ ಕಲಾಕೃತಿಗಳು 2. ಅಧ್ಯಾಪಕ ವೃತ್ತಿಯಲ್ಲಿಯ ಕಲಾಕೃತಿಗಳು 3. ನಿವೃತ್ತಿಯ ನಂತರದಲ್ಲಿಯ ಕಲಾಕೃತಿಗಳು

ಅಧ್ಯಾಯನ ಕಾಲದಲ್ಲಿಯ ಕಲಾಕೃತಿಗಳಲ್ಲಿ ಪಠ್ಯಕ್ರಮವನ್ನೇ ಕೇಂದ್ರೀಕೃತವಾಗಿರಿಸಿಕೊಂಡು ರಚಿಸಿದ ಕಲಾಕೃತಿಗಳು. ಇಲ್ಲಿ ಮುಖ್ಯವಾಗಿ ರೇಖಾಚಿತ್ರಗಳು, ಸ್ಥಿರಚಿತ್ರಗಳು, ನಿಸರ್ಗಚಿತ್ರಗಳು, ಭಾವಚಿತ್ರಗಳನ್ನು ಹೆಸರಿಸಬಹುದು. ಅಧ್ಯಾಪಕ ವೃತ್ತಿಯಲ್ಲಿಯ ಕಲಾಕೃತಿಯಲ್ಲಿ ಇವೆಲ್ಲವೂ ಸೇರಿ ಭಿತ್ತಿ ಚಿತ್ರಗಳು ಪೂರ್ಣಪ್ರಮಾಣದ ಜೀವಮಾದರಿ, ಚಿತ್ರಗಳು ಸಂಯೋಜನಾ ಚಿತ್ರಗಳು ರಚಿಸಿದ್ದು ಕಂಡುಬರುತ್ತದೆ. ನಿವೃತ್ತಿನಂತರದಲ್ಲಿಯ ಕಲಾಕೃತಿಗಳಲ್ಲಿ ಮನೆ ಮಠಗಳಾಗಿ ಖಾಸಗಿಯವರಿಗಾಗಿ ಅನೇಕ ಭಾವಚಿತ್ರಗಳು ಪೌರಾಣಿಕ, ಧಾರ್ಮಿಕ ಚಿತ್ರಗಳನ್ನು ರಚಿಸಿದ್ದಾರೆ. ಹೀಗೆ ಮೂರು ಹಂತಗಳಲ್ಲಿ ಚಿತ್ರಿತಗೊಂಡಿರುವ ಕಲಾಕೃತಿಗಳಲ್ಲಿ ಮುಖ್ಯವಾಗಿ ರೇಖಾಚಿತ್ರ ಮತ್ತು ವರ್ಣಚಿತ್ರಗಳೆಂದು ಎರಡು ಭಾಗಗಳಾಗಿಸಿಕೊಂಡು ಅಧ್ಯಯನ ಮಾಡಲಾಗಿದೆ.

ರೇಖಾಚಿತ್ರಗಳಲ್ಲಿ ಮತ್ತೆ ಎರಡು ಮಾಧ್ಯಮಗಳಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಪೆನ್ಸಿಲ್ ಮಾಧ್ಯಮದ ರೇಖಾಚಿತ್ರಗಳು ಮತ್ತು ಇಂಕ ಮಾಧ್ಯಮದ ರೇಖಾಚಿತ್ರಗಳು ವರ್ಣಚಿತ್ರಗಳಲ್ಲಿ ಜಲವರ್ಣದಿಂದ ರಚಿಸಿದ ಕಲಾಕೃತಿಗಳು ಮತ್ತು ತೈಲವರ್ಣದಿಂದ ರಚಿಸಿದ ಕಲಾಕೃತಿಗಳು

---

63. ಪಿ.ಆರ್‌ತಿಪ್ಪೆಸ್ವಾಮಿ (ಪ್ರ.ಸಂ.) : ಕಲಾಕೋಶ, ಪುಟ 21

ಮೇಲಿನ ಎರಡೂ ಮಾಧ್ಯಮದಲ್ಲಿ ಚಿತ್ರಿತಗೊಂಡ ಕಲಾಕೃತಿಗಳ ವಸ್ತುವಿಷಯವು ಈ ರೀತಿಯಾಗಿದೆ. ರೇಖಾ ಚಿತ್ರಗಳಲ್ಲಿ ಹೆಚ್ಚಾಗಿ ದೈನಂದಿನ ಅಭ್ಯಾಸಕ್ಕೆ ಸಂಬಂಧಪಟ್ಟವುಗಳಾಗಿವೆ. ಅಲ್ಲಿ ರೈಲು ನಿಲ್ದಾಣದಲ್ಲಿ ನಿಂತಿರುವ ರೈಲು, ಟಿಕೇಟು ತೆಗೆಯುತ್ತಿರುವವರು, ಕೂಲಿಯವರು ತಲೆಯಮೇಲೆ ಸಾಮಾನುಗಳನ್ನು ಹೊತ್ತುಕೊಂಡು ಹೋಗುತ್ತಿರುವವರು, ಮಾರುಕಟ್ಟೆಯಲ್ಲಿ ತರಕಾರಿಯನ್ನು ಮಾರುತ್ತಿರುವವರು, ತರಕಾರಿಯನ್ನು ತೆಗೆದುಕೊಂಡು ಹೋಗುತ್ತಿರುವವರು , ಮೀನುಮಾರುವವರು, ಇವುಗಳಲ್ಲದೇ ನಿಸರ್ಗಚಿತ್ರಗಳು ಪ್ರಮುಖವಾದ ವಸ್ತುವಿಷಯಗಳಾಗಿವೆ. ವರ್ಣಚಿತ್ರಗಳಲ್ಲಿ ಮುಖ್ಯವಾಗಿ ಜಲವರ್ಣದಲ್ಲಿ ಪ್ರಕೃತಿ ಚಿತ್ರಗಳು , ಸ್ಥಿರ ಚಿತ್ರಗಳು, ಭಾವಚಿತ್ರಗಳು, ಭಿತ್ತಿಚಿತ್ರಗಳನ್ನು ಹೆಸರಿಸಬಹುದು. ತೈಲವರ್ಣದಲ್ಲಿ ನಿಸರ್ಗಚಿತ್ರಗಳು, ಭಾವಚಿತ್ರಗಳು ,ಸ್ಥಿರಚಿತ್ರಗಳು ಮತ್ತು ಸಂಯೋಜನಾ ಚಿತ್ರಗಳು ಇವುಗಳಲ್ಲಿ ನೈಜ ಸಂಯೋಜನಾ ಚಿತ್ರಗಳು , ಆಧುನಿಕ ಸಮ್ಮಿಶ್ರಣ ಸಂಯೋಜನಾ ಚಿತ್ರಗಳು ಮತ್ತು ಅಮೂರ್ತ ಸಂಯೋಜನಾ ಚಿತ್ರಗಳೆಂದು ವಿಂಗಡಿಕೊಂಡು ಕಲಾಕೃತಿಗಳನ್ನು ಚಿತ್ರಿಸಿರುವುದು ಕಂಡು ಬರುತ್ತದೆ. ಇಲ್ಲಿ ಶರಣರ , ಧಾರ್ಮಿಕ, ಪೌರಾಣಿಕ , ಸಾಮಾಜಿಕ, ವಿಷಯಗಳಿಗೆ ಸಂಬಂಧಪಟ್ಟಂತೆ ವಸ್ತುವಿಷಯವನ್ನು ಬಳಸಿಕೊಂಡಿದ್ದಾರೆ. ಇದಲ್ಲದೆ ಖಂಡೇರಾವರು ಒಂದೇ ಶೈಲಿಗೆ ಅಂಟಿಕೊಳ್ಳದೆ ಹಲವಾರು ಶೈಲಿಗಳಲ್ಲಿ ವಿವಿಧ ರೀತಿಯ ತಂತ್ರ ವಿಧಾನವನ್ನು ಬಳಸಿಕೊಂಡು ಕಲಾಕೃತಿಗಳನ್ನು ರಚಿಸಿರುವುದು ಕಂಡುಬರುತ್ತದೆ. ಹೀಗೆ ಖಂಡೇರಾವರ ಪ್ರತಿಯೊಂದು ಹಂತದಲ್ಲಿ ನಿರ್ಮಾಣಗೊಂಡಿರುವ ಕಲಾಕೃತಿಗಳನ್ನು ನಾವು ಗಮನಿಸಿದಾಗ ಕಾಲಕಾಲಕ್ಕೆ ಅವುಗಳಲ್ಲಾದ ಬದಲಾವಣೆ ಕಂಡುಕೊಂಡು ವಿವಿಧ ಶೈಲಿಗಳು ಆಶೈಲಿಯಲ್ಲಿ ವೈವಿಧ್ಯಮಯವಾದ ತಂತ್ರವಿಧಾನದೊಂದಿಗೆ ಅನೇಕ ಕಲಾಕೃತಿಗಳನ್ನು ರಚಿಸಿದ್ದು ನಾವು ನೋಡಬಹುದಾಗಿದೆ.

ಅಧ್ಯಾಯ ಆರು :

ಜೆ.ಎಸ್. ಖಂಡೇರಾವ : ಕಲಾಕೃತಿಗಳ ಮೇಲಾದ ಪ್ರಭಾವ ಮತ್ತು ಪ್ರೇರಣೆ

ಪ್ರಭಾವ

ಕಲಾವಿದರನ್ನು ಆವರಿಸಿರುವ ಸಾಮಾಜಿಕ, ಸಾಂಸ್ಕೃತಿಕ ಪರಿಸರ ಸೂಕ್ಷ್ಮಾತಿಸೂಕ್ಷ್ಮವಾಗಿ ಅವರ ಮೇಲೆ ದೀರ್ಘ ಕಾಲದ ಪ್ರಭಾವವನ್ನು ಬೀರುತ್ತದೆ.[1] ಎಲ್ಲ ಕಲಾವಿದರು ತಮ್ಮ ಸಮಾಜ ಅಥವಾ ಸಮುದಾಯದಿಂದ ಪ್ರಭಾವಿತರಾಗುತ್ತಾರೆ. ಚಿತ್ರಕಾರರೂ ಇದಕ್ಕೆ ಹೊರತಾಗಿಲ್ಲ. ಒಂದು ಸಮುದಾಯದಲ್ಲಿ ಕಾಲಕ್ರಮದಲ್ಲಿ ವಿಶಿಷ್ಟವಾದ ಕೆಲವು ಸಂಪ್ರದಾಯ ಅಥವಾ ಪರಂಪರೆಗಳು ಹಾಗೂ ಕಲಾಪಂಥಗಳು ಹುಟ್ಟಿಕೊಳ್ಳುವವು. ಬೆಳೆಯುತ್ತಿರುವ ಕಲಾವಿದರು ಅವುಗಳ ಪ್ರಭಾವಕ್ಕೆ ಸಿಲುಕಿಕೊಳ್ಳುತ್ತಾರೆ.[2]

ಮಾನವನ ಜೀವನಕ್ಕೂ ಕಲೆಗೂ ನಿಕಟವಾದ ಸಂಬಂಧವಿದೆ. ವ್ಯಕ್ತಿ ತಾನು ಅನುಭವಿಸಿದ ಘಟನೆ, ಸ್ಥಳ , ಸ್ಥಿತಿಗತಿಗಳ ನೋವು ನಲಿವು ಮುಂತಾದವುಗಳ ಒತ್ತಡದಿಂದ ಒಂದೊಂದು ರೀತಿಯ ಸಂವೇದನೆಯನ್ನು ಪಡೆಯುತ್ತಾನೆ. ಆದಕ್ಕನುಗುಣವಾಗಿ ತನ್ನ ಆನಿಸಿಕೆಗಳನ್ನು ಹೇಳಬೆಕು ಎನ್ನುವ ಭಾವನೆ ಆಕಾಂಕ್ಷೆ ಪ್ರತಿಯೊಬ್ಬನಲ್ಲಿ ಸ್ವಭಾವ ಜನಕಜಲ್ಯವಾಗಿರುತ್ತದೆ. ಆದರೆ ಆ ಗುಣ, ಅನುಭವಗಳು ಪ್ರಜ್ಞೆಯ ವಸ್ತುಗಳಾದಾಗ ಅವು ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳುತ್ತವೆ. ಇವು ವಿವಿಧ ರೀತಿಯ ಸಂವಹನ ಮಾಧ್ಯಮಗಳ ಮೂಲಕ ಸೃಷ್ಟಿಸುವ ಪ್ರತಿ ಮಡಿಲಿನಲ್ಲಿರುವ ಗಿಡ-ಮರ, ಹೂಬಳ್ಳಿ, ಹೀಗೆ ಅವನು ನೆಲೆಸಿರುವ ಈ ಒಂದು ವಾತಾವರಣವು ಅವನಲ್ಲಿ ಪ್ರೇರಣೆಯನ್ನು ತುಂಬುತ್ತವೆ. ಈ ಪರಿಸರದ ವಾತಾವರಣವನ್ನು ತಾನು ಅನುಭವಿಸಿದಾಗ ಮಾತ್ರ ಅದು ಕಲಾತ್ಮಕವಾಗಿ ರೂಪಿತವಾಗುತ್ತದೆ. ಅದಕ್ಕಾಗಿ ಸಾಮಾನ್ಯ ಮನುಷ್ಯನಿಗೂ ಕಲಾವಿದನಿಗೂ ಸ್ವಲ್ಪ ವ್ಯೆತ್ಯಾಸವಿದೆ. ಸಾಮಾನ್ಯ ಮನುಷ್ಯನಾದವನು ತನ್ನ ಸುತ್ತಮುತ್ತಲಿನ ಪರಿಸರವನ್ನು

---

1. ಡಾ. ಎಸ್.ಸಿ. ಪಾಟೀಲ (ಸಂ.) : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ 65
2. ಡಾ. ಎಸ್.ಸಿ. ಪಾಟೀಲ (ಸಂ.) : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ 64
3. ಡಾ. ಎಸ್.ಸಿ. ಪಾಟೀಲ : ವರ್ಣಸಂಚಯ, ಪುಟ 22

ನೋಡುವ ರೀತಿ, ಅದೇ ಪರಿಸರವನ್ನು ಒಬ್ಬ ಕಲಾವಿದನಾದವನು ನೋಡುವ ರೀತಿಗೆ ತುಂಬ ವ್ಯತ್ಯಾಸವಿರುವದು ಕಂಡು ಬರುತ್ತದೆ. ಸಾಮಾನ್ಯ ಮನುಷ್ಯನಾದವನು ಈ ವಾತಾವರಣವನ್ನು ನೋಡಿಯೂ , ಅವನಿಗೆ ಅಲ್ಲೆ ಇದ್ದರೂ ಕೂಡ ಅದು ಅವನಿಗೆ ಯಾವ ರೀತಿಯ ಪರಿಣಾಮ ಬೀರಬಲ್ಲದು. ಆದರೆ ಅದೇ ಪರಿಸರವನ್ನು , ವಾತಾವರಣವನ್ನು ಒಬ್ಬ ಕಲಾವಿದನಾದವನು ಕಲಾತ್ಮಕ ದೃಷ್ಟಿಯಿಂದ ನೋಡುತ್ತಾನೆ. ಉದಾಹರಣೆಗಾಗಿ ಒಂದು ಹಳ್ಳಿಯ ವಾತಾವರಣವನ್ನು ನಾವು ತೆಗೆದುಕೊಂಡಾಗ ಹಳ್ಳಿಯೆಂದ ಮೇಲೆ ಆ ಒಂದು ಕಲ್ಪನೆಯನ್ನು ಮೂಡುವದು ಸಹಜ. ಅಲ್ಲಿಯ ಜನಜೀವನ ರಸ್ತೆಯ ಮಧ್ಯದಲ್ಲಿ ಕಸಕಡ್ಡಿಗಳು, ಹಳೆಯ ಮನೆಗಳು, ಪಾಳುಬಿದ್ದಿರುವ ಮನೆಗಳು , ವಿಶಾಲವಾದ ಮರಗಳು, ಹಳೆಯ ದೇಗುಲಗಳು, ಆಲ್ಲಲ್ಲಿ ಬಿದ್ದಿರುವ ಶಾಸನಗಳು, ಬಯಲು ಪ್ರದೇಶ ಈ ಎಲ್ಲ ಚಿತ್ರಗಳು ಆ ವಾತಾವರಣವನ್ನು ನೋಡಿದಾಗ ನೆನಪಿಗೆ ಬರುತ್ತದೆ. ಸಾಮಾನ್ಯ ಮನುಷ್ಯನಿಗೆ ಇವುಗಳನ್ನು ನೋಡಿದರೂ ಅವನಿಗೆ ಅವುಗಳಲ್ಲಿ ಆಸಕ್ತಿಯು ಕಂಡುಕೊಳ್ಳಲಾರನು.

ಮೇಲಾಗಿ ಅವನು ಇವುಗಳನ್ನು ಅರಿಯದೇ ಹೋಗುತ್ತಾನೆ. ಒಂದು ಶಾಸನವನ್ನು ನೋಡಿದರೆ ಅದರಿಂದ ತಿಳಿದುಕೊಳ್ಳದೇ , ಆದರ ಮೇಲೆ ಬೇರೆನೋ ಪ್ರಯೋಗಗಳನ್ನು ಮಾಡಿ ಅದನ್ನು ವಿರೂಪಗೋಳಿಸುತ್ತಾನೆ. ಆದರೆ ಕಲಾವಿದನಿಗೆ ಇವೆಲ್ಲವೂ ಕಲಾತ್ಮಕವಾಗಿ ಕಾಣಿಸುತ್ತದೆ. ವಿರೋಪಗೊಂಡಿರುವ ಶಾಸನವನ್ನು ನೋಡಿ ಅದರಲ್ಲಿ ಏನಿದೆಯೆಂದು ತಿಳಿದುಕೊಳ್ಳಲು ಪ್ರಯಿತ್ನಿಸುತ್ತಾನೆ. ಇದು ಯಾವ ಕಾಲದ್ದು ಎಂಬ ಹತ್ತು ಹಲವು ಬಗೆಯ ಕಲಾತ್ಮಕ ಮತ್ತು ಸಂಶೋಧನಾತ್ಮಕ ದೃಷ್ಟಿಯಿಂದ ಅವಲೋಕಿಸುತ್ತಾನೆ. ಒಂದು ಹಳೆಯಮನೆ, ಪಾಳುಬಿದ್ದ ಮನೆಯನ್ನು ನೋಡಿದಕೊಡಲೆ ಅದರ ಆಕಾರ , ಮೈವಳಿಕೆ, ಮತ್ತು ಅದರಲ್ಲಿರುವ ಸುಂದರತೆಯನ್ನು ಕಲಾತ್ಮಕವಾಗಿ ಗಮನಿಸುತ್ತಾನೆ. ಈ ವಿಷಯಗಳನ್ನು ತನ್ನ ಪ್ರಾರಂಭದ ಕಲಾಕ್ರೀಯೆಗಳಲ್ಲಿ ಬಳಸಿಕೊಳ್ಳುತ್ತಾನೆ. ಇವುಗಳಲ್ಲದೆ ಆ ಹಳ್ಳಿಗಳಲ್ಲಿ ರುವ ದನಕರುಗಳು, ಗುಡಿಸಲುಗಳು ಈ ವಿಷಯಗಳನ್ನೂ ಸಹಿತ ಅವನು ಚಿತ್ರಿಸಲು ವಿಷಯಗಳನ್ನಾಗಿ, ವಸ್ತುಗಳನ್ನಾಗಿ ಬಳಸಿಕೊಳ್ಳುತ್ತಾನೆ. ಹೀಗೆ ಒಬ್ಬ ಕಲಾವಿದನಿಗೆ ಅವನು ನೆಲೆಸಿರುವ ಪರಿಸರದ ವಾತಾವರಣವೆ ಅವನಿಗೆ ಮೊದಲ ಪ್ರೇರಣೆಯಾಗುತ್ತದೆ. ಈ ವಾತಾವರದಲ್ಲಿಯೇ ಅವನು ಕಲಾತ್ಮಕತೆಯನ್ನು ಕಂಡು ಕಲಾ ಸೃಷ್ಟಿಯಲ್ಲಿ ತೊಡುಗುತ್ತಾನೆ.

ಬದುಕಿನಿಂದ ಸಂವೇದನೇಗೊಂಡು ಬದುಕಿಗೆ ಸ್ಪೂರ್ತಿಯನ್ನು ಕೊಡುವ ಚಿತ್ರಕಲೆ ಬದುಕಿನ ನಿಯಮವನ್ನು ಒಂದು ರೀತಿ ಅನುಸರಿಸುತ್ತದೆ. ಅದರಲ್ಲಿಯೂ ಜೀವನದಲ್ಲಿರುವಂತೆಯೇ ಏಳು-ಬೀಳುಗಳ ಸಂಪ್ರದಾಯಗಳು, ಅವುಗಳ ವಿರುದ್ಧ ಕ್ರಾಂತಿ ಇತ್ಯಾದಿಗಳನ್ನು ಕಾಣುತ್ತೇವೆ. ಜೀವನ ಬದಲಾಯಿಸಿದಂತೆ ಜೀವನದ ಮೌಲ್ಯಗಳು ಬದಲಾದಂತೆ ಕಲೆಯು ಬದಲಾಗುತ್ತದೆ. ಹಳೆಯದರ ಸ್ಥಾನಕ್ಕೆ ಹೊಸದು ಬಂದು ನಿಲ್ಲುತ್ತದೆ. ಈ ಹೊಸದು ಕೂಡ ಮುಂದೆ ಮತ್ತೊಂದು ಹೊಸ ಸಂಪ್ರದಾಯಕ್ಕೆ ದಾರಿ ಮಾಡಿಕೊಡುತ್ತದೆ. ಈ ಕಲಾನುಗುಣ ಅಭಿವ್ಯಕ್ತಿ ಕ್ರಿಯೆಯಾಗಿ ಹೊರಬರುತ್ತವೆ. ಈ ಕ್ರಿಯೆಯನ್ನು ಸೃಷ್ಟಿಕ್ರಿಯೆಯೆಂದು ಹೇಳಬಹುದು[3] ಹೀಗಾಗಿ ಕಲಾವಿದನಿಗೆ ಸೃಷ್ಟಿಯೇ ಮೊದಲ ಪ್ರೇರಣಾ ಶಕ್ತಿಯಾಗಿ ಹೊರ ಹುಮ್ಮುತ್ತದೆ. ಒಬ್ಬ ಕಲಾವಿದನ ಸುತ್ತಮುತ್ತಲಿನ ಪರಿಸರ ಅಲ್ಲಿಯ ವಾತಾವರಣವೇ ಅವನಿಗೆ ಪ್ರೇರಣೇಭೂತವಾಗುವದರಲ್ಲಿ ಸಂದೇಹವೇ ಇಲ್ಲ. ನಿಸರ್ಗದ ನಿರಂತರವಾಗಿ ನಡೆಯುವ ಕ್ರೀಯೆ ಅದೊಂದು ರಾಜಕೀಯ, ಧಾರ್ಮಿಕ, ಸಾಮಾಜಿಕ ಬದಲಾಣೆಗಳಿಗೆ ಪ್ರತಿಕ್ರೀಯೆ ತೋರುವ ಕಾರಣ ಕಲೆಯ ವಿಕಾಸ ಮಾರ್ಗದಲ್ಲಿ ಹಲವೊಂದು ವಿಶಿಷ್ಟಲಕ್ಷಣ ವೈಶಿಷ್ಟ್ಯ, ವೈಚಿತ್ರ್ಯಗಳನ್ನು ಇಂದಿನ ಸಮಕಾಲೀನ ಕಲೆಯಲ್ಲಿ ಗುರುತಿಸಬಹುದಾಗಿದೆ[4] ಮಾನವನ ಚಿತೇತಿಹಾಸದ ಹಿಂದೆ ಅಡಕವಾಗಿರುವ ನಿಯಮಗಳ ಜೊತೆಗೆ ಅವು ಹೇಗೆ ಆತನ ಕಾರ್ಯ ಚಟುವಟಿಕೆಗಳ ಮೇಲೆ ಪ್ರಭಾವನ್ನು ಬಿರುತ್ತವೆಂಬುದನ್ನು ಗೊತ್ತಾಗುತ್ತದೆ.[5] ಒಬ್ಬ ಕಲಾವಿದನಾದವನು ಅನ್ಯಶಾಸ್ತ್ರವನ್ನು ತನ್ನ ಚಿಂತನಶೀಲ ಎಳೆಯಾಗಿ ಹೇಗೆ

---

4. ಡಾ. ಎಸ್.ಸಿ. ಪಾಟೀಲ : ವರ್ಣಸಂಚಯ, ಪುಟ 47

5. ಡಾ. ಎಸ್.ಸಿ. ಪಾಟೀಲ (ಸಂ.) : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ 40

ಪರಿವರ್ತಿಸಿಕೊಳ್ಳುತ್ತಾನೆ. ಮತ್ತು ಈ ಬಗೆಯ ಎಳೆಯ ಸುಪ್ತಸ್ವರದಲ್ಲಿ ಸಂಚರಿಸುತ್ತಿರುತ್ತಲೇ ಸಂವೇದನೆಗೆ ಶಕ್ತಿದಾಯಕವಾಗುತ್ತದೆ. ಅಂದರೆ ಸೃಷ್ಟಿಕ್ರಿಯೆ ಎಷ್ಟರ ಮಟ್ಟಿಗೆ ಪುಷ್ಟಿದಾಯಕವಾದೀತು ಎಂಬುದು ಇಲ್ಲಿ ಮುಖ್ಯವಾಗುತ್ತದೆ.[6] ಚಿತ್ರಕಲೆ ರೇಖೆಗಳು, ಆಕಾರಗಳ ಮೂಲಕ ವರ್ಣಮಯ ರೂಪವನ್ನು ತಾಳುತ್ತಾ ಬಂತು. ವರ್ಣಶೋಭೆ ಚಿತ್ರಕಲೆಗೆ ಹೆಚ್ಚಿನ ಆಯಾಮ ಪ್ರಭಾವಮಯವನ್ನು ನೀಡಿತು. ನಾವು ಬರೆಯುವ ಎಲ್ಲ ಭಾಷೆಗಳ ಅಕ್ಷರಗಳೂ ಸಹ ಚಿತ್ರಕಲೆಯ ಆಕಾರಗಳೇ ಮುದ್ರಣಾಲಯಗಳಲ್ಲದೇ ಇತ್ತೀಚಿಗೆ ಕಂಪ್ಯೂಟರಗಳಲ್ಲಿ ಮಾಡುತ್ತಿರುವರು ಚಿತ್ರಗಳು ವಿವಿಧ ಮಾದರಿಯ ಅಕ್ಷರ ವಿನ್ಯಾಸಗಳನ್ನು ಸಹ ಚಿತ್ರಕಲೆ, ಚಾಕ್ಷುಕ ಪ್ರಭಾವ ದೃಷ್ಟಿಯೇ ಕೆಲಸಮಾಡುತ್ತಿರುವುದನ್ನು ಗಮನಿಸಬಹುದು[7]

ಖಂಡೇರಾವರು ತಮ್ಮ ಪ್ರಾಥಮಿಕ ಶಿಕ್ಷಣದ ಹಂತದಲ್ಲಿಯೇ ಹಲವಾರು ರೀತಿಯ ಪ್ರಭಾವಕ್ಕೆ ಒಳಗಾಗಿ ಕಲಾ ಸೃಷ್ಟಿಯಲ್ಲಿ ತೊಡಗಿಕೊಂಡಿರುವುದನ್ನು ನಾವು ಕಾಣಬಹುದು. " ನಾನು ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಅಲ್ಲಿ ಬೇರೆ ವಿಷಯಗಳೊಂದಿಗೆ ಚಿತ್ರಕಲೆಯೂ ಕೂಡ ಹೇಳಲಾಗುತ್ತಿತ್ತು. ಆಗಿನ ಕಾಲದಲ್ಲಿ ಸರಕಾರಿ ಶಾಲೆಯಲ್ಲಿ ಕಡ್ಡಾಯವಾಗಿ ಈ ಚಿತ್ರಕಲೆಯನ್ನು ಕಲಿಸಲಾಗುತ್ತಿತ್ತು. ಇದಲ್ಲದೆ ಇತರೆ ವಿಷಯಗಳಾದ ಕ್ರಾಫ್ಟ, ಸಂಗೀತ , ಈ ವಿಷಯಗಳನ್ನು ಸಹ ಹೇಳಿಕೊಡುತ್ತಿದ್ದರು. ಹೀಗಿರುವಾಗ ನಮ್ಮ ಶಾಲೆಯಲ್ಲಿ ಡ್ರಾಯಿಂಗ್ ವಿಷಯವನ್ನು ಹೇಳಲು ಅದಕ್ಕೆಂದೇ ಒಂದು ಪ್ರತ್ಯೇಕ ಕೋಣೆ ಇತ್ತು. ದಿನದ ಕೋನೆಯ ಕ್ಲಾಸು ಡ್ರಾಯಿಂಗ್ ದಾಗಿರುತಿತ್ತು. ನಾವು ದಿನಾಲು ಬೆಳಗ್ಗೆ ಒಂಬತ್ತುವರೆ ಗಂಟೆಗೆ ಶಾಲೆಗೆ ಹೋದೆವೆಂದರೆ ಸಂಜೆ ನಾಲ್ಕು ಗಂಟೆಯ ವರೆಗೆ ಕ್ಲಾಸು ನಡೆಯುತ್ತಿದ್ದವು. ಮದ್ಯಾನ್ಹ ಒಂದೂವರೆಯಿಂದ ಎರಡು ಗಂಟೆಯವರೆಗೆ ಬಿಡುವು ಕೊಡುತ್ತಿದ್ದರು. ಆವೇಳೆಯಲ್ಲಿ ನನ್ನ ಸ್ನೇಹಿತರು ಆಟವಾಡುವುದರಲ್ಲಿ ನಿರತರಾಗಿರುತ್ತಿದ್ದರು. ನನಗೆ ಆಟವಾಡುವುದರಲ್ಲಿ ಆಸಕ್ತಿಯಿರಲಿಲ್ಲ. ನಾನು ದೂರದಲ್ಲಿ ಕುಳಿತುಕೊಂಡು ಅವರ ಆಟ-ಪಾಠಗಳನ್ನು ನೋಡುತ್ತಿದ್ದೆ. ಅರ್ಧಗಂಟೆಯಾದಮೇಲೆ ಒಂದು ಗಂಟೆಯನ್ನು ಹೊಡೆಯುತ್ತಿದ್ದರು. ಆಗ ಎಲ್ಲರೂ ನಮ್ಮ ನಮ್ಮ ಕ್ಲಾಸಿಗೆ ಹೋಗುತ್ತಿದ್ದೆವು. ಮದ್ಯಾಹ್ನ ಎರಡು ಕ್ಲಾಸುಗಳು ಮುಗಿದ ಕೂಡಲೇ ಮೂರನೇ ಹಾಗೂ ಅಂತಿಮ ಕ್ಲಾಸು ಚಿತ್ರಕಲೆಯದಾಗಿರುತ್ತಿತ್ತು. ಅಷ್ಟರೊಳಗೆ ಕೆಲವು ವಿದ್ಯಾರ್ಥಿಗಳು ಮನೆಗೆ ಹೋಗಿರುತ್ತಿದ್ದರು. ಡ್ರಾಯಿಂಗ್ ಕ್ಲಾಸ್ ಗೆ ಹೆಚ್ಚುಜನ ಕುಳಿಕೊಳ್ಳುತ್ತಿರಲಿಲ್ಲ ನಾನು ಮತ್ತು ನನ್ನ ಇಬ್ಬರು ಮೂವರು ಗೆಳೆಯರು ಮಾತ್ರ ಡ್ರಾಯಿಂಗ ಕ್ಲಾಸಿಗೆ ಕೂಡುತ್ತಿದ್ದೆವು ಒಂದು ದಿನವೂ ಕ್ಲಾಸು ತಪ್ಪಿಸುತ್ತಿರಲಿಲ್ಲ. ಶಂಕರರಾವ ಮಾಸ್ತರರೆಂಬುವವರು ನಮಗೆ ಡ್ರಾಯಿಂಗ್ ಕಲಿಸುತ್ತಿದ್ದರು. ಅವರು ನಮಗೆ ಚಿತ್ರಕಲೆಯ ಎಲ್ಲ ಆಗು-ಹೋಗುಗಳನ್ನು ಹೇಳಿಕೊಡುತ್ತಿದ್ದರಲ್ಲದೇ ಸ್ವತಃ ತಾವೆ ಒಂದೆರಡು ಚಿತ್ರಗಳನ್ನು ಬಿಡಿಸಿ ತೋರಿಸುತ್ತಿದ್ದರು. ಇದಲ್ಲದೆ ಅವರು ಇತಿಹಾಸಕ್ಕೆ ಸಂಬಂಧಪಟ್ಟ ವಿಷಯಗಳನ್ನು ಹೇಳುತ್ತಿದ್ದರು. ಇತಿಹಾಸಕ್ಕೆ ಸಂಬಂಧಪಟ್ಟಂತೆ ಅವುಗಳಲ್ಲಿ ಬರುವ ನಕ್ಷೆಗಳನ್ನು ಬಿಡಿಸಿ ಅವುಗಳಲ್ಲಿ ಜಿಲ್ಲೆಗಳು, ರಾಜ್ಯಗಳು, ಮಳೆ,ಬೆಳೆ , ಯಾವ ಯಾವ ಸ್ಥಳಗಳಲ್ಲಿ ಯಾವ ಯಾವ ರಾಜ ವಂಶಗಳು ಆಳ್ವಿಕೆಯ ನಡೆಸಿದವು ಎಂಬುವ ಹತ್ತು ಹಲವು ಭಾಗಗಳನ್ನು ತೋರಿಸಲಾಗುತ್ತಿತ್ತು. ಇದಲ್ಲದೆ ರೇಖಾಗಣತಕ್ಕೆ ಸಂಬಂಧಿಸಿದಂತೆ ಜಾಮಿತಿಯ ಆಕೃತಿಗಳನ್ನು ಚಿತ್ರಿಸುವದು, ನನಗಂತು ಈ ವಿಷಯದಲ್ಲಿ ತುಂಬಾ ಆಸಕ್ತಿಯಿತ್ತು. ಹೀಗಿರುವಾಗ ನಾನು ಈ ನಕ್ಷೆಗಳಿಂದಲೇ ಪ್ರಭಾವಿತಗೊಂಡೆ. ನಾನು ಗುರುಗಳಾದ ಶಂಕರರಾವರು ಹೇಳಿದ ಹಾಗೆ ಒಂದೂ ಬಿಟ್ಟು ಬಿಡದೆ ಡ್ರಾಯಿಂಗಗಳನ್ನು ಮಾಡುತ್ತಿದ್ದೆ. ಗುರುಗಳಿಗೆ ನಾನು ಮಾಡಿದ ಡ್ರಾಯಿಂಗನ್ನು ತೊರಿಸುತ್ತಿದ್ದೆ. ಆಗ ಅವರು ನಾನು ಬಿಡಿಸಿದ ಚಿತ್ರಗಳನ್ನು ನೋಡಿ ಸರಿಯಿದ್ದುದ್ದನ್ನು ಸರಿ, ಎಂದು ತಪ್ಪಿದ್ದರೆ ಅದನ್ನು ತಿದ್ದಿಕೊಳ್ಳಲು ಹೇಳುತ್ತಿದ್ದರು. ಒಂದೊಂದು ಸಾರಿ ಅವರು, ನಾನು ತೆಗೆದ ಚಿತ್ರಗಳನ್ನು ನೋಡಿ ಸರಿ ಇದ್ದರೆ ಅದರ ಮೇಲೆ ಗುಡ್ ಎಂದು ಸಹಿಮಾಡುತ್ತಿದ್ದರು. ಎತ್ತಿದ ಕೈ. ಎಂದೂ ಈ ಕ್ಲಾಸು ತಪ್ಪಿಸುತ್ತಿರಲಿಲ್ಲ. ಹೀಗಿರುವಾಗ ನಾನು ಮತ್ತೆ ಮತ್ತೆ ಹೆಚ್ಚಿನ ರೀತಿಯಲ್ಲಿ ಚಿತ್ರ ರಚನೆಯಲ್ಲಿ ಮುಂದಾಗುತ್ತಿದ್ದೆ. ಇದು ನನಗೆ ಒಂದು ರೀತಿಯಲ್ಲಿ ಪ್ರಭಾವವನ್ನು ಬೀರಿದರೆ, ಇನ್ನೊಂದು ರೀತಿಯಲ್ಲಿ ನಾನು ತುಂಬಾ ಪ್ರಭಾವಿತಗೊಂಡಿದ್ದೆ. ಅದು ಹೇಗೆಂದರೆ ನಾನು ಮತ್ತು ನನ್ನ ಇಬ್ಬರು ಸ್ನೇಹಿತರು

---

6. ಡಾ. ಎಸ್.ಸಿ. ಪಾಟೀಲ (ಸಂ.) : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ 37

7. ಡಾ. ಎಸ್.ಸಿ. ಪಾಟೀಲ (ಸಂ.) : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ 123

ಕೂಡಿಕೊಂಡು ದಿನಾಲು ಸಾಯಂಕಾಲ ಊಟವನ್ನು ಮುಗಿಸಿಕೊಂಡು ರಾತ್ರಿವೇಳೆಯಲ್ಲಿ ಶಾಲೆಗೆ ಬರುತ್ತಿದ್ದೇವು. ಅಲ್ಲಿ ಡ್ರಾಯಿಂಗಗಳನ್ನುಮಾಡುತ್ತಿದ್ದೆವು. ಮಧ್ಯದಲಿ ಸ್ವಲ್ಪ ಬೇಜಾರೆನಿಸಿದರೆ ಅಲ್ಲೇ ಶಾಲೆಯ ಹತ್ತಿರದಲ್ಲೇ ಜಲೀಲ್ ಕೆಫೆ ಎಂಬ ಮುಸ್ಲಿಂಮರ ಹೋಟೆಲೊಂದಿತ್ತು. ಅದು ರಾತ್ರಿಯ ಹನ್ನೇರಡು ಗಂಟೆಯವರೆಗೆ, ರಾತ್ರಿ ಸಮಯದ ಸಿನೇಮಾಗಳು ಬಿಡುವವರೆಗೂ ತೆರೆದಿರುತ್ತಿತ್ತು. ನಾವು ಮಧ್ಯದಲ್ಲಿ ಬೇಜಾರಾದಾಗ ಅಡ್ಡಾಡುತ್ತಾ ಆ ಹೋಟೆಲ್ ಕಡೆ ಹೋಗುತ್ತಾ ಇದ್ದೇವು . ಹೋಟೆಲ್ ಒಳಗೆ ಮಾತ್ರ ಹೋಗುತ್ತಿರಲ್ಲಿ. ಯಾಕೆಂದರೆ ನಮ್ಮ ಮನೆಯಲ್ಲಿ ಹೋಟೆಲೊಂದರಲ್ಲಿ ನೀರು ಕುಡಿಯುವದಾಗಲಿ ಅದರಲ್ಲಿ ತಿಂಡಿತಿನ್ನುವದಾಗಲಿ ಇದಕ್ಕೆ ತುಂಬಾ ಸ್ಟ್ರಿಕ್ಟಾಗಿತ್ತು. ನಮ್ಮ ತಂದೆಯವರೂ ಸಹ ಎಂದಿಗೂ ಹೋಟೆಲಗೆ ಹೋದವರಲ್ಲ. ಹೀಗಾಗಿ ನಮಗೆ ಅಲ್ಲಿ ನಿಷೇದವಿರುತಿತ್ತು. ನಾನೇ ಏಕೆ ? ನಮ್ಮ ಮನೆಯಲ್ಲಿ ಯಾರೂ ಹೋಟೆಲಿಗೆ ಹೊಗುತ್ತಿರಲಿಲ್ಲ. ನಾನು ಮತ್ತು ನನ್ನ ಇಬ್ಬರು ಸ್ನೇಹಿತರು ಸೇರಿಕೊಂಡು ದಿನಾಲ ಒಂದು ಸಾರಿಯಾದರೂ ಆ ಹೋಟೆಲ್‌ಕಡೆ ತಿರುಗುತ್ತಿದ್ದೇವು . ಒಂದೊಂದು ಸಾರಿ ಭಯವೂ ಆಗುತ್ತಿತ್ತು. ಯಾರಾದರೂ ನೋಡಿದರೆ ಎಲ್ಲಿ ನಮ್ಮ ಮನೆಯಲ್ಲಿ ಹೇಳುತ್ತಾರೇನೋ ಎಂದು, ನಾವು ಆ ಹೊಟೆಲ್ಲಕಡೆ ಬರಬೇಕಾದರೆ ಒಂದು ಕಾರಣವೂ ಇತ್ತು. ಅದೊಂದು ದೊಡ್ಡ ಹೋಟೆಲ್. ಹೋಟೆಲಿನ ಗೋಡೆಯ ಮೇಲೆ ಹಲವಾರು ರೀತಿಯಲ್ಲಿ ಸುಂದರವಾದ ಚಿತ್ರಗಳಿಂದ ಚಿತ್ರಸಲಾಗಿತ್ತು, ಗ್ಲಾಸಿನಮೇಲೆ ನಿಸರ್ಗಚಿತ್ರಗಳು, ಸುಂದರವಾದ ನಕ್ಷೆಗಳು, ಆ ಹೋಟೆಲಿನ ಗೋಡೆಗಳ ತುಂಬ ಆವರಿಸಿಕೊಂಡು ಬಿಟ್ಟಿದ್ದವು . ನೋಡಲು ಅವು ಸುಂದರವಾಗಿ ಕಾಣುತ್ತಿದ್ದವು. ನಾವು ಆ ಚಿತ್ರಗಳನ್ನು ನೋಡಿ ದಂಗಾಗಿ ಬಿಡುತ್ತಿದ್ದೇವು. ಅಷ್ಟೊಂದು ಸುಂದರವಾದ ಚಿತ್ರಗಳಾಗಿದ್ದವು. ಅವುಗಳ ಬಣ್ಣಗಳ ಬಳಕೆಯು ಅಷ್ಟೆ ಸೊಗಸಾದದ್ದು. ಅವುಗಳನ್ನು ನೊಡಿಕೊಂಡು ನೇರವಾಗಿ ಶಾಲೆಗೆ ಬಂದೆವೆಂದರೆ ಆ ಚಿತ್ರಗಳಂತೆ ಚಿತ್ರಿಸಲು ಪ್ರಯತ್ನಮಾಡುತ್ತಿದ್ದೇವು. ಇದು ಕೂಡ ನನಗೆ ಒಂದು ರೀತಿಯ ಪ್ರಭಾವ ಬೀರಿದೆಂದರೆ ತಪ್ಪೇನಿಲ್ಲ'' ವೆಂದು ಖಂಡೇರಾವರು ತಾವು ಪ್ರಾಥಮಿಕ ಹಂತದ ಶಿಕ್ಷಣವನ್ನು ಪಡೆಯುವಾಗ ಚಿತ್ರಕಲೆಯ ಕಡೆಗೆ ತಮಗೆ ಒಲಿದ ಮನಸ್ಸು ಆ ಹಂತದಲ್ಲಿ ತಮಗೆ ಬೀರಿದ ಪ್ರಭಾವವನ್ನು ವ್ಯಕ್ತಪಡಿಸಿದ್ದಾರೆ.

ಕಲಾವಿದನಾಗಲಿ ಬೇರೆ ಯಾರೇ ಆಗಲಿ ಅವನು ಒಂದು ಸಮಾಜದಲ್ಲಿ ಬೆಳೆಯಬೇಕು. ಕಲಾವಿದನಾದವನು ಯಾವ ಸಮಾದಲ್ಲಿ ಬೆಳೆಯುತ್ತಾನೋ ಆ ಸಮಾಜದಿಂದ ಆತ ಸಾಕಷ್ಟು ಪ್ರಭಾವಿತನಾಗಿರುತ್ತಾನೆ. ಹಾಗೂ ತನ್ನ ಕೃತಿಯ ಮೂಲಕ ಅವನು ವ್ಯಕ್ತಪಡಿಸುತ್ತಾನೆ. ಕಲಾವಿದನ ವಿಚಾರಾತ್ಮಕ ದೃಷ್ಟಿ ಎಷ್ಟು ಬೆಳೆಯುತ್ತೊ ಅಷ್ಟೇ ಗಾಢವಾದ ಚಿತ್ರ ರಚಿಸುತ್ತಾನೆ. [8]/ಲಲಿಕಲೆಗಳಲ್ಲೊಂದಾದ ಚಿತ್ರಕಲೆ ತತ್‌ಕ್ಷಣಕ್ಕೆ ಕಣ್ಣಿಗೆ ಮುದವನ್ನು ನೀಡುತ್ತಾ ನಮ್ಮ ಭಾವ ಪ್ರಪಂಚವನ್ನು ಸೇರಿಕೊಳ್ಳುತ್ತದೆ. ಅಂತರಂಗದಲ್ಲಿ ಅದರ ಬಾಹ್ಯ ಸೌಂದರ್ಯಮತ್ತು ಆಂತರಿಕ ಅರ್ಥಗಳು ಬಹು ಕಾಲದವರೆಗೆ ಉಳಿದು ಬಿಡುತ್ತವೆ. ಈ ದೃಶ್ಯ ಪ್ರಪಂಚವೆಲ್ಲ ಸೃಷ್ಟಿಕರ್ತನ ಒಂದು ಚಿತ್ರಶಾಲೆಯೇ ಆಗಿದ್ದು, ನಾವು ಕಣ್ಣು ತೆರೆದರೆ ಸಾಕು ಚಿತ್ರವೊಂದು ನಮ್ಮ ಕಣ್ಣ ಮುಂದೆ ನಿಂತೇ ಬಿಡುತ್ತದೆ. ಚಿತ್ರಕಲಾವಿದನು ರೇಖೆ ಹಾಗೂ ಬಣ್ಣಗಳಿಂದ ಒಂದು ವಿಶಿಷ್ಟವಾದ ವಸ್ತುವನ್ನು, ಅನುಭವವನ್ನು ತಮ್ಮ ಮುಂದಿಟ್ಟು ಅಚ್ಚರಿಗೊಳಿಸುವನು. ಹಾಗೆಯೇ ಆನಂದವನ್ನುಂಟುಮಾಡುವನು. ಕೆಲವು ಚಿತ್ರಗಳು ನಮ್ಮನ್ನು ತನ್ಮಯಗೊಳಿಸಿ, ಸಮಾಧಿಸಕ್ತರನ್ನಾಗಿ ಮಾಡುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಆಗಿನ ಅನುಭವ ಅವರ್ಣನೀಯವೂ ಆಗುತ್ತದೆ. ಹೀಗಾಗಿ ಅವನು ಒಂದು ಸಮಾಜದ ಅಲ್ಲವೆ ಆ ವಾತಾವರಣದ ಮೂಲಕ ಪ್ರಭಾವಿತಗೊಂಡು ಕಲಾಕ್ರೀಯೆಯಲ್ಲಿ ತಲ್ಲೀನನಾಗಿರುತ್ತಾನೆ.[9]

ಖಂಡೇರಾವರು ರಾತ್ರಿಯ ಸಮಯದಲ್ಲಿ ಹೆಚ್ಚಿನ ಅಭ್ಯಾಸಕ್ಕೆಂದು ಶಾಲೆಗೆ ಹೋಗುತ್ತಿರುವ ಸಮಯದಲ್ಲಿ ಶಾಲೆಯ ಹತ್ತಿರ ಲಕ್ಷ್ಮೀ ಸಿನೇಮಾ ಮಂದಿರವೊಂದಿತ್ತು. ಖಂಡೇರಾವರು ರಾತ್ರಿಯ ಸಮಯದಲ್ಲಿ ಸಿನೇಮಾ ಮಂದಿರದ

---

8. ಎನ್. ಮರಿಶಾಮಾಚಾರ್ : ಕೆ.ಕೆ.ಹೆಬ್ಬಾರ , ಪುಟ 30

9. ಡಾ. ಎಸ್.ಸಿ. ಪಾಟೀಲ (ಸಂ.) : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ 101

ಕಡೆಗೆ ಹೋಗಿ ಅಲ್ಲಿ ಹಚ್ಚಿರುವ ದೊಡ್ಡ ದೊಡ್ಡ ಪೋಸ್ಟರಗಳನ್ನು ನೋಡಿ ಅದರಲ್ಲಿರುವ ನಾಯಕ ನಾಯಕಿಯರ , ಖಳ ನಾಯಕರ ಚಿತ್ರಗಳನ್ನು ಭಾವಪ್ರಧಾನವಾಗಿ ಚಿತ್ರಿಸಲು ಪ್ರಯತ್ನಿಸುತ್ತಿದ್ದರು. ಒಂದು ರೀತಿಯಲ್ಲಿ ಸಿನೇಮಾದ ಪೋಸ್ಟರ ಗಳೂ ಸಹ ಇವರಿಗೆ ಪ್ರಭಾವವನ್ನು ಬೀರಲು ಸಹಕಾರಿಯಾಗಿವೆ.

ಹೀಗೆ ಖಂಡೇರಾವರು ಒಂದಲ್ಲ ಎರಡಲ್ಲ ಹಲವಾರು ಬಗೆಯ ಪ್ರಭಾವಕ್ಕೆ ಒಳಗಾದರು . ಇವರು ಚಿಕ್ಕವ ರಿದ್ದಾಗ ಇವರ ಮನೆಯ ಎದುರುಗಡೆ ಜಾಧವ ಎನ್ನುವ ಒಬ್ಬ ಮರಾಠಿ ಹುಡುಗನಿದ್ದ. ಅವನು ಖಂಡೇರಾವಗಿಂತ ಹೆಚ್ಚು ಕಡಿಮೆ ನಾಲ್ದೈದು ವರ್ಷ ದೊಡ್ಡವನಿರಬಹುದು ಅವನು ದಿನಾಲು ಡ್ರಾಯಿಂಗಗಳನ್ನು ಮಾಡುತ್ತಿದ್ದನು. ಅವನು ಹವ್ಯಾಸ ಕ್ಕಾಗಿ ಮಾಡುತ್ತಿದ್ದನೋ ಅಥವಾ ಅಭ್ಯಾಸದ ಸಲುವಾಗಿ ಮಾಡುತ್ತಿದ್ದನೋ ಗೊತ್ತಿಲ್ಲ. ಒಟ್ಟಿನಲ್ಲಿ ಚೆನ್ನಾಗಿ ಡ್ರಾಯಿಂಗಗಳ ನ್ನು ಮಾಡುತ್ತಿದ್ದನು. ಅವನು ಮಾಡಿದ ಪ್ರಾಣಿಗಳ ಚಿತ್ರಗಳು, ಕಲ್ಪನಾ ಚಿತ್ರಗಳು, ಡಿಸೈನುಗಳು ಖಂಡೇರಾವರನ್ನು ಸಹ ಜವಾಗಿಯೇ ಆಕರ್ಷಿಸಿದವು. ಖಂಡೇರಾವರು ದಿನಾಲು ಸ್ವಲ್ಪೊತ್ತು ಜಾಧವ ಎನ್ನುವ ಹುಡುಗನ ಜೊತೆ ಕುಲಿತು ಅವ ನು ಚಿತ್ರಿಸುವ ಪರಿಯನ್ನು ನೋಡುತ್ತಿದ್ದರು. ಇದೂ ಕೂಡ ಖಂಡೇರಾವರಿಗೆ ಒಂದುರೀತಿಯ ಪ್ರಭಾವ ಬೀರಿದೆಯೆಂ ದು ಹೇಳಬಹುದು.

ಇದಲ್ಲದೆ ಇವರ ತಮ್ಮ ಆಸಕ್ತಿಯ ಕ್ಷೇತ್ರವಾದ ಚಿತ್ರಕಲಾ ಶಿಕ್ಷಣವನ್ನು ಪಡೆಯಲು ಮುಂಬೈಗೆ ಹೋದಾಗ ಅಲ್ಲಿ ಯ ವಾತಾವರಣ, ಜೆ.ಜೆ.ಕಲಾಶಾಲೆಯು ಇವರಿಗೆ ಪ್ರಭಾವ ಬಿರಿದ ಮೊದಲ ಪ್ರಯತ್ನಗಳಾಗಿವೆ. ಜೆ.ಜೆ. ಕಲಾಶಾಲೆಯನ್ನು ನೋಡಿದ ಕೂಡಲೆ , ಅವರು ಎಂಥವರೇ ಆಗಿರಲಿ ಅವರಿಗೆ ಅದು ಪ್ರಭಾವವನ್ನು ಬೀರುವಂತೆ ಆಕರ್ಷಣೆಯನ್ನು ಹೊಂದಿದೆ. ಇಲ್ಲಿಯ ಶಿಸ್ತು , ಸಂಯಮ , ನಡೆ-ನುಡಿ ಎಲ್ಲವೂ ಅಚ್ಚುಕಟ್ಟು ಎಂಥವರಿಗೂ ಪ್ರಭಾವವನ್ನು ಹುಟ್ಟಿಸುವದು ಇದರಿಂದ ನನಗೆ ತುಂಬಾ ಖುಷಿಯಾಗುತ್ತಿತ್ತು. ಯಾರಿಗೂ ಗುಡ ಎಂದು ಸಹಿ ಬಿಳುತ್ತಿರಲಿಲ್ಲ. ಕ್ಲಾಸನಲ್ಲಿ ನಾನು ಚಿತ್ರಕಲೆ ಯಲ್ಲಿ ಇದರ ಲಕ್ಷಣವಾಗಿದೆ. ಖಂಡೇರಾವರು ಇಲ್ಲಿಯೇ ತಮ್ಮ ಉನ್ನತ ಕಲಾ ಶಿಕ್ಷಣವನ್ನು ಪಡೆದುಕೊಂಡರು. ಇವರು ನೈಜಕಲಾಕೃತಿಗಳ ರಚನೆಯ ಹಂತದಲ್ಲಿ ಪಾಶ್ಚಾತ್ಯ ಕಲಾಶೈಲಿಯಿಂದ ಪ್ರಭಾವಿತಗೊಂಡವರು.

ಮನುಷ್ಯ ಏನೆಲ್ಲ ಮಾಡಬೇಕಾದರೆ ಯಾವ ವಿಧದಿಂದಲಾದರೂ ಅವನು ಪ್ರಭಾವಕ್ಕೆ ಒಳಪಟ್ಟಿರುತ್ತಾನೆ. ಇದು ಸೃಷ್ಟಿಯ ನಿಯಮ ಪ್ರಭಾವಕ್ಕೆ ಒಳಗಾಗದ ವ್ಯಕ್ತಿಯಿಲ್ಲ ಇದು ಕಲಾವಿದನಿಗೂ ಹೊರತಾಗಿಲ್ಲ. ಕಲಾವಿದನು ಕಲಾಸೃಷ್ಟಿಯಲ್ಲಿ ತೊಡಗಬೇಕಾದರೆ ಅವನು ಯಾವುದಾದರೂ ಒಂದು ರೀತಿಯಲ್ಲಿ ಪ್ರಭಾವಕ್ಕೆ ಒಳಗಾಗುತ್ತಾನೆ. ಪ್ರಭಾವಿತನಾದ ಅವನಿಂದ ಒಳ್ಳೆಯ ಕಲಾಕೃತಿಯೊಂದು ಹೊರಬರಲು ಸಾಧ್ಯ. ಹೀಗೆ ಪ್ರಭಾವ ಎನ್ನುಂಥದ್ದು ಅದು ಸಹಜವಾಗಿಯೇ ಬರುವಂಥದ್ದು . ಅದಕ್ಕೆ ಕಟ್ಟಳೆಗಳಿಲ್ಲ, ನಿಭಂದನೆಗಳಿಲ್ಲ , ಪ್ರಭಾವಕ್ಕೊಳಗಾದ ಮೇಲೆಯೇ , ಪ್ರಭಾವದಿಂದಲೇ ಕಲಾವಿದನು ಉನ್ನತ ಮಟ್ಟಕ್ಕೆ ಬರಲು ಪ್ರಯತ್ನಿಸುತ್ತಾನೆ. ಕೆಲವರು ನಿಸರ್ಗದಿಂದ ಪ್ರಭಾವಕ್ಕೆ ಒಳಪಟ್ಟರೆ ,ಕೆಲವರು ತಮ್ಮ ಪರಿಸರದ ವಾತಾವರಣದಿಂದ ಪ್ರಭಾವಕ್ಕೊಳಪಡುತ್ತಾರೆ. ಇನ್ನೂ ಕೆಲವರು ಬೇರೆಯವರ ಕಲಾಕೃತಿಗಳಿಂದ ಅವರ ಕಲಾ ಶೈಲಿಯಿಂದ ಪ್ರಭಾವಕ್ಕೊಳಗಾಗುತ್ತಾರೆ. ಹೀಗೆ ಪ್ರಭಾವವೆನ್ನುವದು ಅವರವರ ಮಾನಸಿಕ ಬುದ್ಧಿಮಟ್ಟಕ್ಕೆ ಸಂಬಂಧಿಸಿದಂತೆ ಕ್ರಿಯಾತ್ಮಕವಾಗಿ ರೂಪಗೊಂಡು ಒಳಹೊಕ್ಕುತ್ತದೆ.

ಮುಂಬೈ ಮಹಾನಗರವು ಅಂದು ಸಾಂಸ್ಕೃತಿಕವಾಗಿ ಮುಂದುವರೆದ ನಗರವಾಗಿತ್ತು. ಇಲ್ಲಿ ದಿನಾಲು ಯಾವುದಾದರೂ ಒಂದು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದೇ ಇರುತ್ತಿದ್ದವು. ಇಲ್ಲಿ ನಡೆಯುವ ಪ್ರತಿಯೊಂದು ಕಾರ್ಯಕ್ರಮಗಳು , ಕಲಾಚಟುವಟಿಕೆಗಳಾದ ಕಲಾಪ್ರದರ್ಶನಗಳು, ಕಲಾ ಉಪನ್ಯಾಸಗಳು, ಸಂಗೀತಕಾರ್ಯಕ್ರಮಗಳು ಇತ್ಯಾದಿಗಳು ಖಂಡೇರಾವರ ಮೇಲೆ ತುಂಬ ಪ್ರಭಾವವನ್ನು ಬೀರಿದವುಗಳಾಗಿದ್ದವು. ಉದಾಹರಣೆಯೊಂದಿಗೆ ಹೇಳಬೇಕಾದರೆ ಒಮ್ಮೆ ಖಂಡೇರಾವರು ಒಂದು ಗ್ಯಾಲರಿಯೊಳಗೆ ಹೋದರು. ಆ ಗ್ಯಾಲರಿಯಲ್ಲಿ ಒಬ್ಬ ಖ್ಯಾತ ಹಿರಿಯ ಕಲಾವಿದರ ಪ್ರದರ್ಶನವೊಂದು ನಡೆದಿತ್ತು. ಕಲಾಪ್ರದರ್ಶನದಲ್ಲಿರುವ ಕಲಾಕೃತಿಗಳನ್ನು ಖಂಡೇರಾವರು ಒಂದೊಂದನ್ನೇ ನೋಡುತ್ತಾ ಬರುತ್ತಿರಬೇಕಾದರೆ ಕೆಲವು ಕಲಾಕೃತಿಗಳು ಖಂಡೇರಾವರಿಗೆ ಹಿಡಿಸಿದವು. ಎಲ್ಲಾ ಕಲಾಕೃತಿಗಳನ್ನು

ನೋಡಿಕೊಂಡು ಹೊರಗೆ ಬಂದ ಖಂಡೇರಾವರಿಗೆ ಎಲ್ಲಿಲ್ಲದ ಸಂತಸ. ಇದಕ್ಕೆ ಕಾರಣವೇನೆಂದರೆ ಅದು ಖ್ಯಾತ ಕಲಾವಿದ ಎನ್.ಎಸ್.ಬೇಂದ್ರೆಯವರ ಕಲಾ ಪ್ರದರ್ಶನವಾಗಿತ್ತು. ಎನ್.ಎಸ್ ಬೇಂದ್ರೆಯವರು ಮುಂಬೈನ ಖ್ಯಾತ ಕಲಾವಿದರಾಗಿದ್ದರು. ಸಮಕಾಲೀನ ಕಲೆಯ ಚಳುವಳಿಕಾರರೂ ಆಗಿದ್ದರು. ಅಂದಿನ ವೇಳೆಯಲ್ಲಿ ಮುಂಬೈಯಲ್ಲಿ ಇವರಿಗೆ ತುಂಬ ಬೇಡಿಕೆ ಇತ್ತು. ಎಮ್.ಎಫ್ ಹುಸೇನರ ಸಮಕಾಲಿನರು. ಇಂಥವರ ಹೆಸರನ್ನು ಖಂಡೇವರು ಕೇವಲ ಕೇಳಿತಿಳಿದಿದ್ದರು. ಇವರನ್ನು ನೋಡಿರಲಿಲ್ಲಾ. ಇವರ ಕಲಾಕೃತಿಗಳ ಬಗ್ಗೆ ಖಂಡೇರಾವರಿಗೆ ಹೆಮ್ಮೆಯಿತ್ತು. ಆದರೆ ಅಂದು ತಾವು ನೋಡಿದ ಕಲಾಪ್ರದರ್ಶನ ತಾವು ಇಷ್ಟಪಡುವ ವ್ಯಕ್ತಿಯದೇ ಆಗಿದ್ದಾಗ ಖಂಡೇರಾವರಿಗೆ ಸಂತೋಷದ ಪರಿವೇ ಇರಲಿಲ್ಲ. ಸ್ವತಃ ಖಂಡೇರಾವರೇ ಹೇಳುವ ಹಾಗೆ " ಅಂದು ಕಲಾಗ್ಯಾಲರಿಗಳ ಒಳಗೆ ಹೋಗಿ ಕಲಾಕೃತಿಗಳನ್ನು ವೀಕ್ಷಿಸಬೇಕಾದರೆ ಒಂದು ರೀತಿಯ ಭಯ , ಏಕೆಂದರೆ ಕಲಾ ಗ್ಯಾಲರಿಗಳಲ್ಲಿ ಪ್ರದರ್ಶಿತಗೊಳ್ಳಲಿರುವ ಕಲಾಕೃತಿಗಳು ಹಿರಿಯ ಕಲಾವಿದರಿಂದ ಕೂಡಿರುತ್ತಿದ್ದವು. ಒಳಗಡೆ ಕಲಾವಿದರೂ ಕುಳಿತಿರುತ್ತಿದ್ದರು. ಅವರೆದುರು ಹೋಗಿ ಕಲಾಕೃತಿಗಳನ್ನು ನೋಡುವದೆಂದರೆ ಮೈಯಲ್ಲಿ ನಡುಕ ಹುಟ್ಟುತ್ತಿತ್ತು. ಎನ್.ಎಸ್.ಬೇಂದ್ರೆಯವರ ಕಲಾಕೃತಿಗಳಿಂದ ಪ್ರಭಾವಿತಗೊಂಡವರಲ್ಲಿ ಖಂಡೇರಾವರು ಒಬ್ಬರು. ಖಂಡೇರಾವರು ಎಷ್ಟೋ ಕಲಾಕೃತಿಗಳನ್ನು ಬೇಂದ್ರೆಯವರ ಕಲಾಶೈಲಿಯಲ್ಲಿಯೇ ಚಿತ್ರಿಸಿರುವುದನ್ನು ನಾವು ಅವರ ಪ್ರಾರಂಭದ ಹಂತದಲ್ಲಿಯ ಆಧುನಿಕ ಸಂಯೋಜನಾ ಕಲಾಕೃತಿಗಳನ್ನು ನೋಡಿದರೆ ತಿಳಿಯುತ್ತದೆ. ಇದೊಂದೇ ಅಂತಲ್ಲ ಇಡೀ ಮುಂಬೈನ ಕಲಾವಾತರಣವು ಖಂಡೇರಾವರಿಗೆ ಒಂದು ರೀತಿಯ ಪ್ರಭಾವ ಬೀರಿದೆ ಎಂದರೆ ತಪ್ಪಾಗಲಾರದು.

ಖಂಡೇರಾವರ ಪ್ರತಿಯೊಂದು ಹಂತದಲ್ಲೂ ಒಂದೊಂದು ರೀತಿಯಿಂದ ಪ್ರಭಾವಕ್ಕೊಳಗಾಗಿರುವದು ನಾವು ಕಾಣಬಹುದಾಗಿದೆ. ಇವರು ಪ್ರಭಾವಿತಗೊಂಡ ಒಂದೊಂದು ಸನ್ನಿವೇಶವು ಹೊಸ ಹೊಸ ಶೈಲಿಗಳನ್ನು ಕಂಡುಕೊಳ್ಳುವಲ್ಲಿ ಸಹಕಾರಿಯಾಗಿವೆ. ಒಮ್ಮೆ ಇವರು ರಾತ್ರಿಯ ವೇಳೆಯಲ್ಲಿ ರಸ್ತೆಯಲ್ಲಿ ಹೋಗುವಾಗ ಒಂದು ಮನೆಯ ಕಿಟಕಿಯ ಗ್ಲಾಸು ಒಡೆದು ಹೋಗಿತ್ತು. ಮನೆಯಿಂದ ಬೆಳಕು ಆ ಒಡೆದ ಕಿಟಕಿಯ ಗ್ಲಾಸಿನ ಮೇಲೆ ಬಿದ್ದಾಗ, ಆ ಒಡೆದ ಗ್ಲಾಸಿನಿಂದ ಬೆಳಕು ಚೂರು ಚೂರಾಗಿ ಕಂಡವು . ಇದನ್ನು ಕಂಡ ಖಂಡೇರಾವರು ಒಂದು ನಿಮಿಷ ಅಷ್ಟೆ ನಿಂತುಕೊಂಡು ಆದೃಶ್ಯವನ್ನು ದಿಟ್ಟಿಸಿದರು. ಇದು ಖಂಡೇರಾವರಿಗೆ ಏನೋ ಒಂದು ರೀತಿಯ ಪ್ರಭಾವ ಬೀರಿತು. ಇದು ಖಂಡೇರಾವರ ಬದುಕಿನಲ್ಲಿ ಒಂದು ಹೊಸ ಆಯಾಮವನ್ನೇ ಸೃಷ್ಟಿಸಿತು. ಈ ಒಂದು ಸನ್ನಿವೇಶದಿಂದ ಪ್ರಭಾವಿತರಾದ ಖಂಡೇರಾವರು ತಾವು ಕಂಡ ದೃಶ್ಯವನ್ನು ತಮ್ಮ ಕಲಾಕ್ರೀಯೆಯಲ್ಲಿ ತಂದುಕೊಂಡರು ಅದುವೆ ವಿಂಡೋ ಸರಣಿಯೆಂಬ ಶೈಲಿಯೆಂದು ಹುಟ್ಟಿಕೊಳ್ಳಲು ಪ್ರೇರಕವಾಯಿತು.ಇದೇ ಸರಣಿಯ ಮೇಲೆ ಖಂಡೇರಾವರು ಎಷ್ಟೋ ಕಲಾಕೃತಿಗಳನ್ನು ರಚಿಸಿದ್ದಾರೆ.ಇನ್ನೂ ರಚಿಸುತ್ತಲೇ ಇದ್ದಾರೆ. ಈ ಸರಣಿಯ ಮೇಲೆ ರಚಿತವಾದ ಎಷ್ಟೋ ಕಲಾಕೃತಿಗಳು ಬಹುಮಾನಗಳನ್ನು ಸಹ ಪಡೆದುಕೊಂಡಿವೆ. ಹೀಗೆ ಮನುಷ್ಯನಿಗೆ ಪ್ರಭಾವವು ಎಷ್ಟು ಸಹಕಾರಿಯಾಗಬಲ್ಲದು ಎಂಬುದಕ್ಕೆ ಇದೊಂದು ಉದಾಹರಣೆ ಸಾಕು. ಇಂದು ಖಂಡೇರಾವರು ಇದೇ ಸರಣಿಯಿಂದಲೇ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಖಂಡೇರಾವರು ಎಂದರೆ ವಿಂಡೋಸರಣಿ ,ವಿಂಡೋ ಸರಣಿ ಎಂದರೆ ಖಂಡೇರಾವರು ಎನ್ನುವ ಮಟ್ಟಿಗೆ ಪ್ರಭಾವಿತರಾಗಿದ್ದಾರೆ. ಪ್ರಭಾವಕ್ಕೆ ಒಳಗಾಗದ ವ್ಯಕ್ತಿಯೇ ಇಲ್ಲ. ಅವನು ಒಂದಲ್ಲ ಒಂದು ರೀತಿಯಲ್ಲಾದರೂ , ಯಾವುದಾದರಿಂದಲಾದರೂ ಪ್ರಭಾವಕ್ಕೆ ಒಳಗಾಗುತ್ತಾನೆ. ಸೃಷ್ಟಿಯ ಎಷ್ಟೋ ವೈಚಿತ್ರ್ಯಗಳನ್ನು ಮಾನವನಿಗೆ ಪ್ರಭಾವ ಬೀರಬಲ್ಲವುಗಳಾಗಿವೆ.

ಇಂದು ಖಂಡೇರಾವರು ಜನಪದೀಯ ವಿಷಯಗಳಿಂದ ಪ್ರಭಾವಿತಗೊಂಡು ಅವುಗಳ ಮೇಲೆ ಹಲವಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಇವರಿಗೆ 2000-01 ನೇ ಸಾಲಿನ ಹಿರಿಯ ಕಲಾವಿದರ ಫೆಲೋಶಿಫ ದೊರಕಿದ್ದು , ಅವುಗಳು ಜನಪದೀಯ ವಿಷಯಗಳಿಗೆ ಸಂಬಂಧಪಟ್ಟವುಗಳಾಗಿವೆ. ಖಂಡೇರಾವರು ಪ್ರತಿ ವಾರಕ್ಕೊಮ್ಮೆಯಂತೆ ಕಲಬುರ್ಗಿಯ ಸುತ್ತಮುತ್ತಲಿನ ಹಳ್ಳಿಗಳಿಗೆ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿ ಸ್ಕೆಚ್‌ಗಳನ್ನು ನಿಸರ್ಗಚಿತ್ರಗಳನ್ನು ರಚಿಸುತ್ತಿದ್ದರು. ಒಮ್ಮೆ ಇವರು ನಿಸರ್ಗಚಿತ್ರಗಳನ್ನು ಚಿತ್ರಿಸಬೇಕಾದರೆ ಒಬ್ಬನು ಖಂಡೇರಾವರ ಎದುರಿಗೆ ಗಂಗೆತ್ತನ್ನು ಕರೆದುಕೊಂಡು ಬಂದನು. ಖಂಡೇರಾವರು ಒಮ್ಮೆಲೇ ನಿಸರ್ಗಚಿತ್ರ ಚಿತ್ರಿಸುವುದನ್ನು ಬಿಟ್ಟು ಗಂಗೆತ್ತನ್ನು ನೋಡುತ್ತಾ

ಕುಳಿತರು. ಅದರ ಬೆನ್ನಮೇಲೆ ಹೊಚ್ಚಿರುವ ವಿವಿಧ ಬಣ್ಣಗಳಿಂದ ಕೂಡಿದ ಬಟ್ಟೆಗಳು, ಎರಡೂ ಕೊಂಬುಗಳಿಗೆ ಹಾಕಿದ ಗೊಂಡೆಗಳು ಅದಕ್ಕೆ ಮಾಡಿದ ಶೃಂಗಾರ, ಒಡೆಯನು ಊದುವ ಪುಂಗಿಗೆ ಅದು ತಲೆಯಾಡಿಸುವದು. ಇವೆಲ್ಲವೂ ಖಂಡೇರಾವರಿಗೆ ಏನೋ ಒಂದುರೀತಿಯ ಮನಸ್ಸಿನ ಮೇಲೆ ಪ್ರಭಾವವನ್ನು ಬೀರಿರಬಹುದು. ಇದು ಒಂದು ಸಾರಿ ನಡೆದ ಘಟನೆಯಾದರೆ. ಇನ್ನೊಮ್ಮೆಯೂ ಒಂದು ಘಟನೆ ನಡೆಯಿತು. ಅಂದು ಖಂಡೇರಾವರ ಜೊತೆ ನಾನೂ ಸ್ಕೆಚ್‌ಗಳನ್ನು ಮಾಡಲಿಕ್ಕೆ ಹೋಗಿದ್ದೆ. ಅದೊಂದು ಕಲಬುರ್ಗಿಯ ಸಮಿಪದಲ್ಲಿರುವ ಶ್ರೀನಿವಾಸ ಸರಡಗಿ ಎಂಬ ಚಿಕ್ಕಹಳ್ಳಿಯ ಒಂದು ಭಾಗ . ಅಲ್ಲಿ ಒಂದು ಘಟನೆ ಏನು ನಡೆಯಿತೆಂದರೆ ನಾವು ಸ್ಕೆಚ್‌ಗಳನ್ನು ಮಾಡುತ್ತಿರಬೇಕಾದರೆ ಖಂಡೇರಾವರು ಅಲ್ಲೇ ಸಮೀಪದಲ್ಲಿ ಬಟ್ಟೆಯನ್ನು ಒಗೆಯುತ್ತಿರುವ ಮಹಿಳೆಯ ರೇಖಾಚಿತ್ರವನ್ನು ಬಿಡಿಸುವದರಲ್ಲಿ ಮಗ್ನರಾಗಿದ್ದರು. ಹೀಗಿರುವಾಗ ಎದುರಿನ ಒಂದು ಗುಡಿಸಲಿನಿಂದ ಒಬ್ಬ ಮನುಷ್ಯ ಹೊರ ಬಂದ. ಅವನು ತನ್ನ ಕಾಯಕದ ವೇಷ ಭೂಷಣವನ್ನು ಹಾಕಿಕೊಂಡು ಹೆಗಲ ಮೇಲೆ ಒಂದು ಉದ್ದವಾದ ಕಟ್ಟಿಗೆ, ಅದರ ಎರಡೂ ಕಡೆ ಜೋಳಿಗೆಗಳನ್ನು ನೇತು ಹಾಕಿಕೊಂಡಿದ್ದ. ಅವನು ಧರಿಸಿದ ಬಟ್ಟೆ ರಂಗುರಂಗಿನ ಬಟ್ಟೆಗಳಿಂದ ಕೂಡಿದ್ದು, ಅವು ನೋಡುವುದಕ್ಕೆ ಪಟ್ಟೆಗಳಂತೆ ಕಾಣುತ್ತಿದ್ದವು. ಅದರ ಮೇಲೆ ಕಪ್ಪಾದ ಕಂಬಳಿಯನ್ನು ಹೊಚ್ಚಿಕೊಂಡಿದ್ದನು. ಹೆಗಲ ಮೇಲೆ ರುಮಾಲು ಕೈಯುಲ್ಲಿ ಒಂದು ಶಂಖವನ್ನು ತನ್ನ ಕಾಯಕಕ್ಕೆ ಹೊರಟಿದ್ದ ಅವನ ಮುಖದ ಮೇಲಿನ ಭಾರಿ ಗಾತ್ರದ ಮೀಸೆ, ಅವನನ್ನು ನೋಡಿದ ಕೂಡಲೆ ಹೆದರಿಕೆ ಬರುವಷ್ಟು ಕ್ರೂರನಂತೆ ಕಾಣುತ್ತಿದ್ದ. ಇವರನ್ನು ಕಾಡಸಿದ್ದರು ಎಂದು ಕರೆಯುತ್ತಿದ್ದರು. ಖಂಡೇರಾವರು ಅವನನ್ನು ಕರೆದರು. ಅವನ ಜೊತೆ ಚರ್ಚಿಗಿಳಿದರು. ಅವನಿಂದ ಎಲ್ಲ ವಿಷಯಗಳನ್ನು ತಿಳಿದುಕೊಂಡರು. ಅವರು ಹೊಟ್ಟೆಪಾಡಿಗಾಗಿ ಬೇರೆ ಬೇರೆ ಕಡೆಗಳಲ್ಲಿ ಅಲೆಯುವವರು ಎಂದು ತಿಳಿಯಿತು. ಅವರು ಕೆಲವು ದಿನಗಳು ಮಾತ್ರ ಇಲ್ಲಿ ನೆಲೆಸಿರುತ್ತಾರಂತೆ ಹೆಚ್ಚಾಗಿ ಹೊರಗಡೆ ಸುತ್ತುವುದೇ ಅವರ ಕೆಲಸ ಖಂಡೇರಾವರು ಅವನನ್ನು ಎದುರಿಗೆ ತಮಗೆ ಬೇಕಾದ ಭಂಗಿಗಳಲ್ಲಿ ನಿಲ್ಲಿಸಿಕೊಂಡು ಎರಡು ಮೂರು ಡ್ರಾಯಿಂಗಗಳನ್ನು ಮಾಡಿದರು. ಈ ಒಂದು ಘಟನೆ ಹೇಗೋ ನಡೆದು ಹೊಯಿತು. ಒಮ್ಮೆ ನಾನು ಖಂಡೇರಾವರನ್ನು ಅಧ್ಯಯನದ ದೃಷ್ಟಿಯಿಂದ ಸಂದರ್ಶಿಸಿದಾಗ ನೀವು ನಿಮ್ಮ ಇತ್ತೀಚಿನ ಕಲಾಕೃತಿಗಳನ್ನು ಜನಪದೀಯ ವಿಷಯಗಳ ಮೇಲೆ ಏಕೆ ಚಿತ್ರಿಸುತ್ತಿರುವಿರಿ ? ಈ ವಿಷಯವನ್ನು ಬಳಸಿಕೊಳ್ಳಲು ಕಾರಣವೇನು? ಅಥವಾ ಅಂಥದೊಂದು ಪ್ರಭಾವ ನಿಮಗೇನಾದರೂ ಆಗಿದೆಯಾ? ಎಂದು ಕೇಳಿದಾಗ ಈ ಮೇಲಿನ ಘಟನೆಯನ್ನು ವಿವರಿಸಿದರು.

ಹೀಗೆ ಇದೊಂದೆ ಅಂತಲ್ಲ. ಇಂಥ ಇನ್ನೂ ಹಲವಾರು ಘಟನೆಗಳಿಂದ ಖಂಡೇರಾವರು ಪ್ರಭಾವಿತಗೊಂಡಿದ್ದಾರೆ. ಅವರು ಒಂದೊಂದು ಹಂತದಲ್ಲಿ ಒಂದೊಂದು ರೀತಿಯ ಪ್ರಭಾವಕ್ಕೆ ಒಳಗಾಗಿದ್ದಾರೆ. ಹೀಗೆ ಪ್ರಭಾವವೆಂಬುದು ಹೇಳಿದಾಗಲೇ ಬರುವಂಥದಲ್ಲ. ಅದು ಸಹಜವಾಗಿಯೇ ಉಂಟಾಗುವ ಕ್ರಿಯೆಯಾಗಿದೆ.

ಪ್ರೇರಣೆ

ಕಲಾಕಾರನಿಗೆ ಅನೇಕ ವಿಧದಲ್ಲಿ ಪ್ರೇರಣೆ ದೊರಕುವುದುಂಟು ಕೆಲವೊಮ್ಮೆ ಪ್ರತ್ಯಕ್ಷವಾಗಿ , ಕೆಲವೊಮ್ಮೆ ಪರೋಕ್ಷವಾಗಿ ಆದರೆ ಕಲಾಕಾರನ ಮನಸ್ಸು, ಬುದ್ಧಿಶಕ್ತಿ ಸರ್ವದಾ ಜಾಗೃತವಾಗಿದ್ದು, ಸಂವೇದನಾ ಶೀಲವಾಗಿರಬೇಕು. ಎನ್ನುವದಂತೂ ಅತ್ಯವಶ್ಯಕ ಸಮಾಜದ ಕೋಟಲೆ, ಸಂಘರ್ಷ, ನಿರಾಶೆ ಹಾಗೂ ಉಲ್ಲಾಸ ದ್ವಂದ್ವ - ಇವೆಲ್ಲವೂ ಕಲಾವಿದನ ಸಂವೇದನಾ ಶೀಲ ಮನಸ್ಸನ್ನು ಉತ್ತೇಜಿಸಲು ಸಮರ್ಥವಾಗುತ್ತವೆ [10] ಮಾನವ ಜೀವನ ಮುಖ್ಯವಾಗಿ ತನು, ಮನ ಆತ್ಮಗಳೆಂಬ ಮೂರು ಅಂಶಗಳನ್ನು ಹೊಂದಿದೆ. ಶಿಕ್ಷಣವು ಇವುಗಳನ್ನು ಸಂಸ್ಕರಿಸುವ ಕಾರ್ಯವನ್ನು ಸದಾಕಾಲವೂ ಮಾಡುತ್ತಿರುತ್ತದೆ. ತನುವಿಗೆ ಬೇಕಾದ ಅಶನ-ವಸತಿ ಸಂಸಾರಕ್ಕೆ ಬೇಕಾದ ಉಪಜೀವನದ ಮಾರ್ಗವನ್ನು ಮನಸ್ಸಿನ ವಿಕಾಸಕ್ಕಾಗಿ ಸಾಹಿತ್ಯ, ಕಲೆ , ನೈತಿಕ ಮೌಲ್ಯಗಳನ್ನು , ಆತ್ಮದ ಉದ್ಧಾರಕ್ಕಾಗಿ ಧರ್ಮ, ಆಧ್ಯಾತ್ಮ ಪಾರಮಾರ್ಥಿಕ ಮೌಲ್ಯಗಳನ್ನು ಕೊಡಬಲ್ಲುದೆ ನಿಜವಾದ ಶಿಕ್ಷಣ. ಈ ರೀತಿಯ ವಿದ್ಯಾಪ್ರಸಾದದಿಂದ ಕರ,ಉರ, ಶಿರ, ಸಂವರ್ಧನೆಯಾಗುವದು. ಕರವು

---

10. ಎನ್. ಮರಿಶಾಮಾಚಾರ್ : ಕೆ.ಕೆ. ಹೆಬ್ಬಾರ ,ಪುಟ 17

[illegible]

ಕಾರ್ಯವನ್ನು , ಉರವು ಹೃದಯವನ್ನು , ಶಿರವು ಅರಿವನ್ನು ಸೂಚಿಸುತ್ತದೆ. ಶಿಕ್ಷಣವು ದೇಹಕ್ಕೆ ಪುಷ್ಟಿಯನ್ನು , ಮನಕ್ಕೆ ವೈಶಾಲ್ಯತೆಯನ್ನು ಆತ್ಮಕ್ಕೆ ಆನಂದವನ್ನು ಕೊಟ್ಟು ಅಂತಃಕರಣವನ್ನು ಅರಳಿಸಿ ಸದ್ಗುಣಗಳನ್ನು ಮೈಗೂಡಿಸಿಕೊಂಡು ಬೀರಲು ಇದು ಪ್ರೇರಣೆಯನ್ನು ನೀಡುತ್ತದೆ. [11]

ಖಂಡೇರಾವರು ಬಾಲ್ಯದಿಂದಲೇ ಕಲೆಯ ಅಭಿರುಚಿಯನ್ನು ಹೊಂದಿದವರು. ಇವರು ಪ್ರಾಥಮಿಕ ಶಿಕ್ಷಣದ ಹಂತದಲ್ಲಿಯೇ ಕಲೆಯ ಬಗ್ಗೆ ಹೆಚ್ಚಿನ ಅಸಕ್ತಿಯನ್ನು ಕಂಡುಕೊಂಡವರು. ಕಲೆಯು ಇವರ ಪರಂಪರಾಗತವಾಗಿ ಬಂದದ್ದೇನಲ್ಲ, ಇವರ ಮನೆತನವು ವ್ಯಾಪಾರಸ್ಥರ ಮನೆತನವಾಗಿತ್ತು. ಹೀಗಾಗಿ ಇವರ ಮನೆಯಲ್ಲಿ ಯಾರಿಗೂ ಕಲೆಯ ಬಗ್ಗೆ ಅಷ್ಟೊಂದು ತಿಳುವಳಿಕೆ ಇರಲಿಲ್ಲವಾದ್ದರಿಂದ ಖಂಡೇರಾವರಿಗೆ ಅಲ್ಲಿ ಕಲಾವಾತಾವರಣವನ್ನು ಕಂಡುಕೊಳ್ಳಲು ಅಷ್ಟೊಂದು ಹೆಚ್ಚಿನ ಸಾಧ್ಯತೆ ಇರಲಿಲ್ಲ. ಇವರು ಪ್ರಾಥಮಿಕ ಹಂತದ ಶಿಕ್ಷಣವನ್ನು ಪಡೆಯುವಾಗ ಅಲ್ಲಿ ಇತರ ವಿಷಯಗಳೊಂದಿಗೆ ಚಿತ್ರಕಲೆಯನ್ನು ಹೇಳಿಕೊಡಲಾಗುತಿತ್ತು. ಖಂಡೇರಾವರಿಗೆ ಚಿತ್ರಕಲೆಯ ಆಸಕ್ತಿ ಇತ್ತು . ಅಲ್ಲಿ ಶಂಕರರಾವ ಎಂಬುವವರು ಇತಿಹಾಸ ವಿಷಯವನ್ನು ಹೇಳುತ್ತಿದ್ದರಲ್ಲದೇ ಚಿತ್ರಕಲೆಯನ್ನು ಹೇಳುತ್ತಿದ್ದರು. ಖಂಡೇರಾವರು ಗುರುಗಳಾದ ಶಂಕರರಾವರು ಹೇಳಿದ ಹಾಗೆ ಇತಿಹಾಸಕ್ಕೆ ಸಂಬಂಧಪಟ್ಟಂತೆ ನಕ್ಷೆಗಳಿಂದ ಕೂಡಿದ ಚಿತ್ರಗಳನ್ನು ಬಿಡಿಸುತ್ತಿದ್ದರು. ಗುರುಗಳಾದ ಶಂಕರರಾವರು ಖಂಡೇರಾವರಲ್ಲಿರುವ ಕಲಾಭಿರುಚಿಯನ್ನು ಕಂಡು ಇವರಿಗೆ ಚಿತ್ರಕಲೆಯ ಬಗ್ಗೆ ಆಳವಾದ ಜ್ಞಾನವನ್ನು ತುಂಬುತ್ತಾ ಇವರಿಗೆ ಪ್ರೇರಣೆಯನ್ನು ನೀಡಿದವರಲ್ಲಿ ಮೊದಲಿಗರೆಂದು ಹೇಳಬಹುದು. ಒಂದು ರೀತಿಯಲ್ಲಿ ಈ ಪ್ರೇರಣೆಯು ಮನುಷ್ಯನ ಮಾನಸಿಕವಾದ ಶಕ್ತಿಗೆ ಚೈತನ್ಯವನ್ನು ತುಂಬುವದು ಇದರಿಂದ ಅವನು ತನ್ನ ಕ್ಷೇತ್ರದಲ್ಲಿ ವ್ಯಾಪಕವಾಗಿ ಬೆಳೆಯಲು ದಾರಿಯನ್ನು ಕಂಡುಕೊಳ್ಳುತ್ತಾನೆ . ಇದು ಯಾವುದೇ ಕ್ಷೆತ್ರಕ್ಕೆ ಸಂಬಂದಪಟ್ಟಿಲ್ಲ. ಎಲ್ಲಾ ಕ್ಷೇತ್ರಗಳಿಗೂ ಅನ್ವಯಿಸುತ್ತದೆ. ಚಿತ್ರಕಲಾ ಕ್ಷೇತ್ರವು ಇದಕ್ಕೆ ಹೊರತಾಗಿಲ್ಲ ಒಬ್ಬ ಕಲಾವಿದ ಒಂದು ಹಂತವನ್ನು ತಲುಪಬೇಕಾದರೆ ಅವನ ಹಿಂದೆ ಯಾವ ರೀತಿಯಿಂದಲೂ ಪ್ರೇರಣೆ ಇದ್ದೆ ಇರುತ್ತದೆ. ಪ್ರೇರಣೆಯು ಕಣ್ಣಿಗೆ ಕಾಣದ ಅಂತರ್ಮುಖಿಯಾದ ಒಂದು ಚೈತನ್ಯಯುತ ಶಕ್ತಿ. ಇದು ಅಂತರ್ಮುಖಿಯಾದರೂ ಬಾಹ್ಯ ಪ್ರಚೋದನಗೆ ಹೆಚ್ಚು ಸಹಕಾರಿಯಾಗಬಲ್ಲದು. ಕಲಾವಿದನಾದವನು ಕೆಲವು ಸಾರಿ ತನ್ನ ಸುತ್ತ ಮುತ್ತಲಿನ ಪರಿಸರದಿಂದಲೂ, ವಾತಾವರಣದಿಂದಲೂ ಪ್ರೇರಣೆಯನ್ನು ಪಡೆಯುತ್ತಾನೆ. ಕಲಾವಿದ ತಾನು ಹುಟ್ಟಿ ಬೆಳೆದ ಪರಿಸರದಿಂದ ಪ್ರಭಾವಿತಗೊಳ್ಳುವನಲ್ಲದೆ, ಆದರಿಂದ ಪ್ರೇರಣೆಯನ್ನು ಪಡೆಯುತ್ತಾನೆ. ಖಂಡೇರಾವರಿಗೆ ಅನೇಕ ರೀತಿಯಲ್ಲಿ ಪ್ರೇರಣೆಯು ದೊರಕಿದ್ದುಂಟು.

ಖಂಡೇರಾವರು ಹೈಸ್ಕೂಲ ಶಿಕ್ಷಣವನ್ನು ಪಡೆಯುತ್ತಿದ್ದಾಗ ಇವರಲ್ಲಿರುವ ಕಲಾಶಕ್ತಿಯನ್ನು , ಕಲಾಭಿರುಚಿಯನ್ನು ಕಂಡು ಗುರುಗಳಾಗಿದ್ದ ಮಹ್ಮದ ಷರಿಫರು ಇವರಿಗೆ ಸಾಕಷ್ಟು ಪ್ರೇರಣೆಯನ್ನು ನೀಡಿದ್ದಾರೆ. ಇವರು ಮೊದಲಿನಿಂದಲೂ ಖಂಡೇರಾವರಿಗೆ ಪರಿಚಿತವಿದ್ದರು. ಖಂಡೇರಾವರು ಗ್ರೇಡ್ ಪರೀಕ್ಷೆಗಳನ್ನು ಕಟ್ಟಿದ್ದರಿಂದ ಅವುಗಳಲ್ಲಿ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳುವ ಸಲುವಾಗ ಆಗಾಗ ಇವರ ಮನೆಗೆ ಹೊಗುತ್ತಿದ್ದರಿಂದ ಪರಿಚಯವಿತ್ತು. ಇದರಿಂದ ಖಂಡೇರಾವರು ಕಲೆಯಲ್ಲಿ ಅಡಗಿರುವ ಎಲ್ಲಾ ವಿಷಯಗಳನ್ನು ತಿಳಿದುಕೊಳ್ಳುತ್ತಿದ್ದರು. ಅಲ್ಲದೇ ಖಂಡೇರಾವರಿಗೆ ಮುಂಬೈಯಲ್ಲಿ ಕಲಾಶಿಕ್ಷಣವನ್ನು ಪಡೆಯಬೇಕೆಂಬ ಆಸೆಯಿತ್ತು. ಅವರು ಗುರುಗಳಾದ ಮಹ್ಮದ ಷರೀಫರೆದುರು ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸಿದಾಗ, ಮಹ್ಮದ ಷರೀಫರು ಖಂಡೇರಾವರ ತಂದೆಯವರೆದುರು ಖಂಡೇರಾವರಿಗಿರುವ ಕಲಾಶಿಕ್ಷಣದ ಆಸಕ್ತಿಯನ್ನು ಹೇಳಿ ಅವರಿಗೆ ಮುಂಬೈಯಲ್ಲಿ ಕಲಾಶಿಕ್ಷಣವನ್ನು ಪಡೆಯವಂತೆ ಸಹಾಯ ಮಾಡಿದವರು. ಇವರ ಮಾತಿಗೆ ಖಂಡೇರಾವರ ತಂದೆಯವರು ಖಂಡೇರಾವರನ್ನು ಮುಂಬೈಗೆ ಕಳಿಸಲು ಒತ್ತುಕೊಟ್ಟಿದ್ದರು. ಕಲಿಕೆಯ ದೃಷ್ಟಿಯಿಂದ ಪ್ರೇರಣೆಯು ಬೇಕೆ ಬೇಕು. ಪ್ರೇರಣೆಯಿರಲಾರದೇ ಯಾರೂ ಯಾವ ಹಂತದಲ್ಲೂ ಮುಂದೆ ಬರಲಾರರು ಪ್ರತಿಯೊಬ್ಬರ ಬೆನ್ನ ಹಿಂದೆಯೂ ಯಾವ ರೀತಿಯಿಂದಲಾದರೂ ಪ್ರೇರಣೆಯು ಇದ್ದೇ ಇರುತ್ತದೆ. ಈ ಪ್ರೇರಣೆಯನ್ನು ಉಪಯೋಗಿಸುವಲ್ಲಿ

---

11. ಡಾ. ಎಸ್.ಸಿ ಪಾಟೀಲ (ಸಂ.) : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ 113

ಆತನಲ್ಲಿ ಜಾಣ್ಮೆಯೂ ಇರಬೇಕು. ಹೀಗಾಗಿ ಜಾಣ್ಮೆ ಎನ್ನುವದು ಮನುಷ್ಯನ ಬೆನ್ನ ಹಿಂದೆ ಇರುತ್ತದೆ. ಅದು ನಮ್ಮ ಕಣ್ಣಿಗೆ ಕಾಣಿಸದು. ಆದರೆ ಎಡವಲು ಅದು ಅನುಕೂಲಮಾಡಿಕೊಡುವದಿಲ್ಲ. ನಾವಾಗೆ ನಡೆದುಕೊಂಡು ಹೋಗಬೇಕು. ಆದರೆ ಅದು ದಾರಿ ಕಾಣದಾದಾಗ ಇನ್ನೊಬ್ಬರ ಸಹಾಯವನ್ನು ಕೇಳುತ್ತದೆ. ಆಗ ಇನ್ನೊಬ್ಬರು ಬಂದು ನಮ್ಮ ದಾರಿಯನ್ನು ತೋರಿಸುತ್ತಾರೆ ಗುರಿಯೆನೋ ನಮ್ಮದೇ ಇರಬಹುದು , ಆದರೆ ಹೋಗುವ ಮಾರ್ಗ ತಿಳಿದಿರುವುದಿಲ್ಲ. ಅದಕ್ಕೆ ಇನ್ನೊಬ್ಬರ ಸಹಾಯ ಬೇಕೆ ಬೇಕು. ಅದುವೇ ಪ್ರೇರಣೆಯು ಆಗಿರಬಹುದು. ಎಂದು ಖಂಡೇರಾವರು ನಮಗೆ ತಿಳಿದಿದ್ದನ್ನೇ ಒಮ್ಮೊಮ್ಮೆ ಅರಿಯದಾದಾಗ ಬೇರೆಯವರು ಬಂದು ಅರಿವು ಮೂಡಿಸಲು ಪ್ರಯತ್ನಿಸುತ್ತಾರೆ. ಎನ್ನುವ ಉದಾಹರಣೆಯೊಂದಿಗೆ ಪ್ರೇರಣೆಯು ಯಾವರೀತಿಯಾಗಿ ಮನುಷ್ಯನ ಬದುಕಿಗೆ ಸಹಕಾರಿಯಾಗಬಲ್ಲದು. ಎಂಬುದನ್ನು ವಿವರಿಸುತ್ತಾರೆ.

ಕಲೆ ಮೂಲತಃ ಮಾನವನ ಸೃಷ್ಟಿ ಅದು ಪ್ರತಿಭಾನ್ವಿತ ಮಾನವನ ಜೀವನಾನುಭವ ಅಭಿವ್ಯಕ್ತಿ ಕಲೆ ಮಾನವತೆಯ ವಿಶಿಷ್ಟ ಆನಂದದಾಯಿನಿಯಾದ ಮಾತೃಶಕ್ತಿ. ಭೌತಿಕ ಜಗತ್ತಿನ ಬಾಹ್ಯ ಸೃಷ್ಟಿಗಿಂತ ಹೆಚ್ಚಾಗಿ ಮಾನವನ ಆಂತರಿಕ ನಿತ್ಯ ಸತ್ಯದ ಆನಂದಾನುಭವ ಅಭಿವ್ಯಕ್ತಿ. ಕಲಾವಿದನ ಆತ್ಮದರ್ಶನ ಅಂತಃಪ್ರೇರಣೆ ಬಾಹ್ಯ ಪ್ರಭಾವಗಳ ಸಮಾಹಿತ ಅಭಿವ್ಯಕ್ತಿ ಈ ಕಲೆ ಭಾವ, ಬಣ್ಣ,ರೇಖೆ ಮುಂತಾದ ವಿವಿಧ ಮಾಧ್ಯಮಗಳಲ್ಲಿ ಹೊಮ್ಮಿ ಸಮಾಜದ ಹೃದಯವಂತಿಕೆಯನ್ನು ಆಗು ಮಾಡುತ್ತದೆ.[12] ಯಾವುದೇ ಒಂದು ನಾಡಿನ,ಜನಾಂಗದ, ವರ್ಗದ ಬದುಕಿನ ಬೆಳವಣಿಗೆಯನ್ನು ಅವರ ಪರಂಪರೆ ಹಾಗೂ ಸಂಪ್ರಾದಾಯಗಳನ್ನು ತಿಳಿಯಬೇಕಾದರೆ ಅವರ ಪರಿಸರದಲ್ಲಿ ಜೀವ ಪಡೆದಿರುವ ಕಲೆಗಳನ್ನು ಅಧ್ಯಯನ ಮಾಡಬೇಕಾಗುತ್ತದೆ. ಮಾನವನ ಸಾಂಸ್ಕೃತಿಕ ಲೋಕದ ಪ್ರತಿ ಹಂತದಲ್ಲೂ ಕಲೆ ಪ್ರೇರಣೆಯ ವಸ್ತು ಆಗಿರುತ್ತದೆ. ಕಲಾವಿದನಿಗೆ ಪ್ರಕೃತಿಯು ಪ್ರೇರಣೆಯನ್ನು ನಿಡಬಲ್ಲದು. ಅಲ್ಲದೆ ಅದು ಒಂದೊಂದು ಸವಾಲನ್ನು ಎದುರಿಸುವ ಸಂದರ್ಭವನ್ನು ಸೃಷ್ಟಿಸುತ್ತದೆ. " A greatest part of my early years was spent in observing the world of nature it gave me intense joy to watch thing " ಎಂದು ಪ್ರಕೃತಿಯನ್ನು ಕುರಿತು ಪತ್ರವೊಂದರಲ್ಲಿ ಮಿತ್ರರೊಬ್ಬರಿಗೆ ರವಿಂದ್ರನಾಥ ಠಾಕೂರರು ಹೇಳುತ್ತಾರೆ. ಆಪತ್ರದ ಅಂತಿಮ ಸಾಲುಗಳಲ್ಲಿ ಪ್ರಕೃತಿಯ ಸೌಂದರ್ಯವನ್ನು It is the joy of every man face to face with beauty ಎಂದೂ ಹೇಳುತ್ತಾರೆ ಬಹುಶಃ ಕಲಾ ಇತಿಹಾಸದಲ್ಲಿ ಸೇರಿ ಹೋಗುವ ಬಹುತೇಕ ಕಲಾವಿದರು ಪ್ರಕೃತಿಯಿಂದಲೇ ಮತ್ತು ಅದನ್ನು ನಕಲು ಮಾಡುವದರಿಂದಲೇ ಅಲ್ಲದೇ ಅದರ ಪ್ರೇರಣೆಯಿಂದಲೇ ಚಿತ್ರಕಲೆಯ ಮೂಲ ಪಾಠಗಳನ್ನು ಕಲಿತವರು [13] .Beauty is one of the great mysteries of nature whose in fluence we all se and feel "[14]

ಖಂಡೇರಾವರು ಮುಂಬೈ ಸಾಂಸ್ಕೃತಿಕ ವಾತಾವರಣದಿಂದ ಪ್ರೇರಿತಗೊಂಡವರು. ಇಲ್ಲಿಯ ಸರ್. ಜೆ.ಜೆ. ಕಲಾಶಾಲೆಯಲ್ಲಿ ಅಭ್ಯಾಸವನ್ನು ಮಾಡುವಾಗ ಇವರಿಗೆ ಹೆಚ್ಚಿನ ಪ್ರೇರಣೆಯನ್ನು ನೀಡಿದವರೆಂದರೆ ಬಾಬುರಾವ ಸಡ್ವೇಲ್ಕರ್, ವಾಮನ್‌ಚಿಂಚೋಳಕರ್ ಇವರು ಖಂಡೇರಾವರನ್ನು ಪ್ರೇರೆಪಿಸಿದ್ದು ಅಲ್ಲದೆ ಅವರ ಪ್ರತಿಯೊಂದು ಕಲಾಚಟುವಟಿಕೆಗಳ ಹಂತದಲ್ಲಿ ಸಲಹೆ ಸೂಚನೆಗಳನ್ನು ನೀಡಿದವರು ಇಲ್ಲಿ ಇವರ ಪ್ರೇರಣೆಯಿಂದಲೇ ಖಂಡೇರಾವರು ತಮ್ಮ ಕಲಾಶಿಕ್ಷಣವನ್ನು ಸುಸಂಗತವಾಗಿ ಮುಗಿಸಿಕೊಂಡಿದ್ದಾರೆ. ಅಲ್ಲದೆ ಇವರ ಸಮಕಾಲೀನ ಗೆಳೆಯರಾದ ಅಡಿವೀರೇಕರ್. ಕರ್ನಾಟಕದವರೇ ಆದ ಜೆ.ಎಸ್. ಶೆಣೈರವರು ಪ್ರೇರಣೆಯನ್ನು ನೀಡುವಲ್ಲಿ ಸಹಕರಿಸಿದ್ದಾರೆ. ಇದಲ್ಲದೆ ಖಂಡೇರಾವರಿಗೆ ಆರಂಭದಲ್ಲಿ ಮುಂಬೈಯಲ್ಲಿ ಕಲಾಶಿಕ್ಷಣವನ್ನು ಪಡೆಯಲು ಹೋದಾಗ ಅಷ್ಟೊಂದು ದೊಡ್ಡ ನಗರದಲ್ಲಿ ಇವರಿಗೆ ಮೊದಮೊದಲು ಹೆದರಿಕೆಯಾಗಿತ್ತೆಂದು ಖಂಡೇರಾವರು ಹೇಳುತ್ತಾರೆ. ಈ ಒಂದು ಸಂದರ್ಭದಲ್ಲಿ ಕೆಲವು

---

12. ಡಾ. ಎಸ್.ಸಿ ಪಾಟೀಲ (ಸಂ.) : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪುಟ 106

13. ಕೆ.ವಿ. ಸುಬ್ರಮಣ್ಯಂ : ಕಲಾಸಂವೇದನೇಯ ಒಳನೋಟಗಳು, ಪುಟ 83

14. ಕೆ.ವಿ. ಸುಬ್ರಮಣ್ಯಂ : ಕಲಾಸಂವೇದನೇಯ ಒಳನೋಟಗಳು, ಪುಟ 83

ದಿನಗಳು ಕಳೆದವು. ಮುಂಬೈಯಲ್ಲಿ ಇನ್ನೊಂದು ಪ್ರತಿಷ್ಠಿತ ಕಲಾಶಾಲೆಯಿತ್ತು. ನಮ್ಮ ಕರ್ನಾಟಕದವರೇ ಆದ ಜಿ.ಎಸ್ ದಂಡಾವತಿಮಠರವರು ಈ ಕಲಾಶಾಲೆಯನ್ನು ನಡೆಸುತ್ತಿದ್ದರು. ಈ ಕಲಾಶಾಲೆಯನ್ನು ನೂತನ ಕಲಾಮಂದಿರ ವೆಂದು' ಕರೆಯಲಾಗುತ್ತಿತ್ತು. ಖಂಡೇರಾವರು ಒಮ್ಮೆ ಕಲಾಮಂದಿರಕ್ಕೆ ಹೋದಾಗ ಸಹಜವಾಗಿಯೇ ದಂಡಾವತಿಮಠರವರನ್ನು ಭೇಟಿಯಾದರು. ಅವರು ಖಂಡೇರಾವರಲ್ಲಿರುವ ಕಲಾಸಕ್ತಿಯನ್ನು ಕಂಡು ಪ್ರೇರಣೆಯನ್ನು ನೀಡಿದರಲ್ಲದೇ ತಮ್ಮ ಕಲಾಶಾಲೆಯಲ್ಲಿ ಹೆಚ್ಚಿನ ಅಭ್ಯಾಸಕ್ಕೆಂದು ಬರಲು ಅನುಕೂಲವನ್ನು ಮಾಡಿಕೊಟ್ಟರು. ದಂಡಾವತಿಮಠರವರು ಖಂಡೇರಾವರಿಗೆ ಕೇವಲ ಪ್ರೇರಣೆಯನ್ನಷ್ಟೇ ನೀಡದೆ ಮಾನಸಿಕ ಧೈರ್ಯವನ್ನು ತುಂಬಿದರು. ಖಂಡೇರಾವರ ಪ್ರತಿಯೊಂದು ಹಂತದಲ್ಲೂ ಅವರಿಗೆ ಸಹಾಯವನ್ನು ಮಾಡಿದವರಲ್ಲಿ ಬಹುಶಃ ದಂಡಾವತಿಮಠರವರ ಸಹಾಯ ಸಹಕಾರವಿರಲಿಲ್ಲವೆಂದರೆ ನಾನು ಎಂಥೆಂಥಾ ಕಷ್ಟಗಳನ್ನು ಎದುರಿಸಬೇಕಾಗುತಿತ್ತೋ ಗೊತ್ತಿಲ್ಲ. ನಾನು ನನ್ನ ಜೀವಮಾನ ಇರುವವರೆಗೂ ಅವರು ನೀಡಿದ ಪ್ರೇರಣೆಯನ್ನು ಮರೆಯಲಾರೆನು ಅವರು ಯಾವಾಗಲೂ ನನ್ನ ಬೆನ್ನ ಹಿಂದೆ ಇದ್ದು ಸದಾ ನನಗೆ ಪ್ರೇರಣೆಯನ್ನು ನಿಡುತ್ತಾ ಮಾನಸಿಕವಾಗಿ ಶಕ್ತಿಯನ್ನು ತುಂಬುತ್ತಿದ್ದರು. ಅವರ ಪ್ರೇರಣೆಯಿಂದ ನನಗೆ ಮುಂಬೈ ವಾತಾವರಣಕ್ಕೆ ಹೊಂದಿಕೊಳ್ಳಲು ತಡವಾಗಲಿಲ್ಲ. ಏನೂ ತಿಳಿಯದ ಮುಗ್ದಮಗುವಿನಂತಿದ್ದ ನನಗೆ ಧೈರ್ಯವನ್ನು ತುಂಬಿ ಮುಂಬೈ ವಾತಾವರಣಕ್ಕೆ ಹೊಂದಿಕೊಳ್ಳುವಂತೆ ಆಗಾಗ ಸಲಹೆಗಳನ್ನು ಕೊಡುತ್ತಿದ್ದರು. ಅಲ್ಲದೆ ಎಷ್ಟೋ ಸಲ ಅವರು ನನಗೆ ಆರ್ಥಿಕವಾಗಿಯೂ ಸಹಾಯ ಮಾಡುತ್ತಿದ್ದರು. ಅವರ ಪ್ರೇರಣೆಯ ಸಹಕಾರದ ಪ್ರತಿಫಲದಿಂದ ನನಗೆ ಕಲಾಶಿಕ್ಷಣವನ್ನು ಮುಗಿಸಲು ಕಾರಣವಾಯಿತು ಎಂದು ಖಂಡೇರಾವರು ಅಂದು ತಾವು ಮುಂಬೈಗೆ ಹೋಗಿ ಕಲಾಶಿಕ್ಷಣವನ್ನು ಪಡೆಯುವಾಗ ಕಲಾಗುರು ಜಿ.ಎಸ್.ದಂಡಾವತಿಮಠರವರು ತಮಗೆ ಮಾಡಿದ ಸಹಾಯ ಸಹಕಾರ, ಅವರ ತ್ಯಾಗ ಮನೋಭಾವ , ಅವರು ತಮಗೆ ನೀಡಿದ ಪ್ರೇರಣೆಯನ್ನು ಕುರಿತು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಹೀಗೆ ಖಂಡೇರಾವರೆ ಹೇಳುವ ಹಾಗೆ " ನನಗೆ ಹಲವಾರು ರೀತಿಯಿಂದ ಪ್ರೇರಣೆಯನ್ನು ದೊರಕಿದ್ದರಿಂದಲೇ ಇಂದು ನಾನು ಈ ಮಟ್ಟಕ್ಕೆ ಬರಲು ಕಾರಣವಾಯಿತು. ನನ್ನ ಅಧ್ಯಯನ ಕಾಲದಿಂದಲೂ ಹಿಡಿದು ಅಧ್ಯಾಪಕ ವೃತ್ತಿಯ ಹಂತದವರೆಗೆ ನನಗೆ ಹಲವಾರು ಜನರ ಪ್ರೇರಣೆ ದೊರೆಕಿದ್ದುಂಟು.

ನಾನು ಮುಂಬೈಯಲ್ಲಿ ಕಲಾಶಿಕ್ಷಣವನ್ನು ಪಡೆದುಕೊಂಡು ಕಲಬುರ್ಗಿಗೆ ಬಂದಾಗ ಏನು ಮಾಡಬೇಕೆಂಬುದೇ ತೋಚಲಿಲ್ಲ. ಅಷ್ಟರೊಳಗೆ ನನಗೆ ಮದುವೆಯಾಗಿತ್ತ ಸಂಸಾರದ ಜವಾಬ್ದಾರಿಯನ್ನು ಹೊತ್ತ ನನಗೆ ಯಾವುದಾದರು ಒಂದು ಕೆಲಸ ವನ್ನು ಮಾಡಲೇಬೇಕಾದ ಅನಿವಾರ್ಯತೆ ಇತ್ತು. ನಾನು ಮಾನಸಿಕವಾಗಿ ಅಸ್ವಸ್ಥನಾಗಿಬಿಟ್ಟೆ. ಏನು ಮಾಡಬೇಕೆಂಬುದೇ ತೋಚಲಿಲ್ಲ. ಇಂಥ ಒಂದು ಸಂದರ್ಭದಲ್ಲಿ ನನಗೆ ಸಿ.ವಿ. ಕರಡಗಿಯವರ ದರ್ಶನವಾಯಿತು. ನಾನು ಇವರಿಗೆ ಮೊದಲಿನಿಂದಲೂ ಪರಿಚಿತನಿದ್ದೆ. ಆದರೆ ಅವರ ಜೊತೆ ಹೆಚ್ಚಿನ ಕಾಲ ಕಳೆಯುವ ಸಂದರ್ಭ ಬಂದಿರಲಿಲ್ಲ. ಕರಡಗಿಯವರಿಗೆ ಭೇಟಿಯಾದ ನಾನು ಆ ಒಂದು ಪರಿಸ್ಥಿತಿಯಲ್ಲಿದ್ದ ಎಲ್ಲ ವಿಷಯಗಳನ್ನು ಅವರ ಎದುರು ಹೇಳಿದೆ. ಅವರು ನನಗೆ ಮೊದಲು ಮಾನಸಿಕ ಧೈರ್ಯವನ್ನು ತುಂಬಿದರು ಮೇಲಾಗಿ ಕೆಲಸಕ್ಕೆ ಬೆಂಗಳೂರಿಗೆ ಬರಲು ಹೇಳಿದರು. ಅಲ್ಲಿ ನಿನಗೆ ಯಾವುದಾದರೂ ಒಂದು ಕೆಲಸವನ್ನು ಕೊಡಿಸುವೆನು ಎಂದು ಭರವಸೆಯನ್ನು ಕೊಟ್ಟರು. ಇವರು ಬೆಂಗಳೂರಿನಲ್ಲಿ ಆರ್ಟ ಆ್ಯಂಡ ಕ್ರಾಪ್ಟ ವಿಭಾಗದ ನಿರ್ದೇಶಕರಾಗಿದ್ದರು. ಬೆಂಗಳೂರಿನಲ್ಲಿ ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಒಂದು ಕಲಾವಿದರ ಹುದ್ದೆಯು ಖಾಲಿ ಇತ್ತು. ಈ ಹುದ್ದೆಯನ್ನು ನನಗೆ ಕೊಡಿಸಬೇಕೆಂಬ ಆಲೋಚನೆ ಸಿ.ವಿ.ಕರಡಗಿಯವರದ್ದಾಗಿತ್ತು. ಈ ಇಲಾಖೆಯ ಮೇಲ್ವಿಚಾರಕರು ಸಿ.ವಿ.ಕರಡಗಿಯವರಿಗೆ ಪರಿಚಿತದವರಾಗಿದ್ದರು. ಹೀಗಿರುವುದರಿಂದ ಸಿ.ವಿ.ಕರಡಗಿಯವರು ನನಗೆ ಬೆಂಗಳೂರಿಗೆ ಬರಲು ಹೇಳಿದ್ದರಿಂದ ನಾನು ಬೆಂಗಳೂರಿಗೆ ಹೋದೆ. ಅಲ್ಲಿ ಕರಡಗಿಯವರನ್ನು ಭೇಟಿ ಮಾಡಿದೆ. ಇಬ್ಬರು ಕೂಡಿಕೊಂಡು ವಾರ್ತಾ ಮತ್ತು ಪ್ರಚಾರ ಇಲಾಖೆಗೆ ಹೋದೆವು. ಅಲ್ಲಿ ಇಲಾಖೆಯ ಮೇಲ್ವಿಚಾರಕರು ನಾನು ತೆಗೆದುಕೊಂಡು ಹೋಗಿದ್ದ ಎಲ್ಲಾ ಮೂಲ ಅಂಕಪಟ್ಟಿಗಳನ್ನು ಮತ್ತು ಉತ್ತಮ ಕಲಾಕೃತಿಗಳನ್ನು ನೋಡಿ, ಪರಿಶೀಲಿಸಿ ತಮ್ಮ ಇಲಾಖೆಯಲ್ಲಿ ಖಾಲಿಯಿರುವ ಕಲಾವಿದನ ಹುದ್ದೆಗೆ ಆಯ್ಕೆಮಾಡಿದರು. ಹೀಗೆ ನಾನು ಅಲ್ಲಿ ಕೆಲಸವನ್ನು ಮಾಡುತ್ತಾ ಕೆಲವು ದಿನಗಳನ್ನು ಕಳೆದಿರಬೇಕು. ಒಂದು ದಿನ ನಾನು ಮತ್ತು ಕರಡಗಿಯವರು ಚರ್ಚೆಯಲ್ಲಿ

[illegible]

ಕುಳಿತುಕೊಂಡಾಗ ಅವರು ನನ್ನಲ್ಲಿರುವ ಕಲೆಯ ಅಭಿರುಚಿಯನ್ನು ಕಂಡು ನೀನು ಇಷ್ಟು ಒಳ್ಳೆಯ ಕಲಾಕೃತಿಗಳನ್ನು ಬಿಡುಸುತ್ತಿ, ಇಲ್ಲಿ ಕೆಲಸವನ್ನು ಮಾಡುವ ಬದಲು ಯಾಕೆ ನೀನು ಒಂದು ಕಲಾ ಶಾಲೆಯನ್ನು ತೆರೆಯಬಾರದು ? ಹೇಗೂ ಕಲಬುರ್ಗಿಯಲ್ಲಿ ಒಂದೂ ಕಲಾಶಾಲೆಯಿಲ್ಲ. ಮೇಲಾಗಿ ನೀನು ಜೆ.ಜೆ.ಕಲಾಶಾಲೆಯಲ್ಲಿ ಕಲಾಶಿಕ್ಷಣವನ್ನು ಪಡೆದುಕೊಂಡು ಬಂದಿರುವಿ. ಕಲಾಶಾಲೆಯನ್ನು ತೆರೆದು ಕೆಲವು ವಿದ್ಯಾರ್ಥಿಗಳಿಗಾದರೂ ನೀನು ಕಲಿತುಬಂದಿರುವುದನ್ನು ತಿಳಿಸು. ಸುಮ್ಮನ್ನೆ ನೀನ್ನಲ್ಲಿ ಅಡಗಿರುವ ಆಕಲೆಯನ್ನು ಏಕೆ ಇಂಥ ಕೆಲಸಗಳಲ್ಲಿ ಹಾಳು ಮಾಡಿಕೊಳ್ಳುತ್ತಿ. ನೀನು ಸ್ವತಂತ್ರನಾಗಿದ್ದುಕೊಂಡು ನಾಲ್ಕಾರು ವಿದ್ಯಾರ್ಥಿಗಳೊಂದಿಗೆ ನಿನ್ನ ಕಲಾವೃತ್ತಿಯನ್ನು ಆರಂಭಿಸು, ನಿನಗೆ ಏನಾದರೂ ಸಹಾಯವನ್ನು ಬೇಕಾದರೆ ಅದನ್ನು ನಾನು ಒದಗಿಸಿಕೊಡಲಿಕ್ಕೆ ಪ್ರಯತ್ನಿಸುತ್ತೇನೆ. ಎಂದು ಖಂಡೇರಾವರನ್ನು ವಿಧವಿಧವಾಗಿ ತಿಳಿ ಹೇಳಿದರು. ಖಂಡೇರಾವರಿಗೂ ಇದು ಸರಿಯೆನಿಸಿತು. ಸಿ.ವಿ. ಕರಡಿಗಿಯವರ ಒಂದು ಸಲಹೆ ಮತ್ತು ಪ್ರೇರಣೆ ಯಿಂದಲೇ ಖಂಡೇರಾವರು ಕಲಬುರ್ಗಿಯಲ್ಲಿ ಕಲಾಶಾಲೆಯನ್ನು ತೆರೆಯಲು ಮುಂದಾದರು. ಈ ಒಂದು ಪ್ರೇರಣೆಯ ಪ್ರಯತ್ನದ ಪ್ರತಿಫಲವೇ ಇಂದಿನ ಎಲ್ಲರ ಮನೆ ಮಾತಾಗಿರುವ ಆದರ್ಶ ಕಲಾ ಮಂದಿರ ಹುಟ್ಟುಕ್ಕೊಳ್ಳಲು ಕಾರಣವಾಯಿತು.

ಹೀಗೆ ಸಿ.ವಿ. ಕರಡಗಿಯವರು ತಮಗೆ ನೀಡಿದ ಪ್ರೇರಣೆಯನ್ನು ಆ ಪ್ರೇರಣೆಯ ಪ್ರತಿಫಲದಿಂದಾಗಿ ಹಟ್ಟಿಕೊಂಡ ಆದರ್ಶಕಲಾಮಂದಿರವನ್ನು ಖಂಡೇರಾವರು ಎಂದಿಗೂ ಮರೆಯಲಾರರು. ಬಹುಶಃ ಈ ಪ್ರೇರಣೆಯ ಸಹಾಯ ಎನ್ನುವ ಪದಕ್ಕೆ ಸಮೀಪದಲ್ಲಿದೆ. ಸಹಾಯ-ಪ್ರೇರಣೆ ಎರಡು ಪದಗಳು ಬೇರೆ ಬೇರೆ ಯಾದರೂ ಅದರ ಅರ್ಥ ಕೆಲವು ಸಂದರ್ಭದಲ್ಲಿ ಒಂದೇಯಾಗಿರುತ್ತದೆ. ಸಹಾಯವು ಬಾಹ್ಯ ಪ್ರಚೋದನೆಗೆ ಸಂಬಂಧಪಟ್ಟರೆ ಪ್ರೇರಣೆಯು ಆಂತರಿಕ ಪ್ರಚೋದನೆಗೆ ಸಂಬಂಧಪಟ್ಟಿರುತ್ತದೆ. ಹೀಗೆ ಖಂಡೇರಾವರು ಹಲವಾರು ರೀತಿಯ ಪ್ರೇರಣೆಯಿಂದಾಗಿ ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ. ಸಮಕಾಲೀನ ಪರಂಪರೆಗೆ ಸೇರಿದ ಈ ಕಲಾಕೃತಿಗಳಲ್ಲಿಯೂ ಅವರ ಹಳೆಯ ಅಕಾಡೆಮಿಕ್ ಪ್ರಕಾರದಲ್ಲಿಯ ಪ್ರಮುಖ ಅಂಶಗಳಾದ ಶುದ್ದವರ್ಣಮೇಳ, ಲಯಬದ್ಧತೆ ಕಾಣಬಹುದು ವಿಭಿನ್ನ ಆಕಾರದ, ಹೆಚ್ಚಾಗಿ ಚೌಕಾಕಾರದ ಜಾಮಿತಿಯ ಆಕೃತಿಗಳನ್ನು ನಿರ್ಮಿಸುತ್ತಾ ಕ್ಯಾನವಾಸಿನ ಬಿಳಿಯ ಭಾಗವನ್ನೇ ವಿಂಗಡಿಸಿ ರೇಖೆಯಂತೆ ಉಪಯೋಗಿಸಿಕೊಳ್ಳುವದು. ಇವರ ವಿಶೇಷತೆ ಇವರ ಚಿತ್ರಗಳಲ್ಲಿ ಪಾರದರ್ಶಿಕೆಯಲ್ಲಿ ಮನೋಕ್ರೊಮೆಟಿಕ್ ವರ್ಣಗಳ ವಿನ್ಯಾಸಗಳನ್ನು ಪ್ರಭಾವಶಾಲಿಯಾಗಿ ಕಾಣುತ್ತೇವೆ. [15]. ಇವರು ತಮ್ಮ ಬದುಕನ್ನೇ ಕಲೆಗಾಗಿ ಮುಡುಪಾಗಿಟ್ಟುಕೊಂಡು ಇಂದಿಗೂ ಅವರು ಸುಖ, ಶಾಂತಿ ಸಮೃದ್ಧಿಯಿಂದ ತಮ್ಮ ಪರಿವಾರದೊಂದಿಗೆ ಕಲಾಬದುಕನ್ನು ನಡೆಸುತ್ತಿದ್ದಾರೆ.

ಹೀಗೆ ಈ ಅಧ್ಯಾಯದಿಂದ ನಾವು ಕಂಡುಕೊಳ್ಳಬಹುದಾದ ಅಂಶವೇನೆಂದರೆ ಖಂಡೇರಾವರು ಕಲಾಸೃಷ್ಟಿಯ ಹಂತದಲ್ಲಿ ಯಾವ ರೀತಿಯಲ್ಲಿ ಪ್ರಭಾವಕ್ಕೊಳಗಾದರು ಮತ್ತು ಅವರು ಪ್ರಭಾವಕ್ಕೊಳಗಾದ ವಿಷಯಗಳು, ಸಂದರ್ಭಗಳು ಈ ಎಲ್ಲ ಅಂಶಗಳನ್ನು ಇಲ್ಲಿ ವಿವರಿಸಲಾಗಿದೆ. ಇದಲ್ಲದೇ ಅಲ್ಲಿಯ ಹಿರಿಯ ಕಲಾವಿದರ ಕಲಾಕೃತಿಗಳು ಖಂಡೇರಾವರ ಮೇಲೆ ಯಾವ ರೀತಿಯಲ್ಲಿ ಪರಿಣಾಮ ಬೀರಿದವು ಆ ಕೃತಿಗಳಿಂದ ಪ್ರಭಾವಿತರಾದ ಖಂಡೇರಾವರು ತಮ್ಮ ಕಲಾಕೃತಿಯಲ್ಲಿ ಅವುಗಳನ್ನು ಯಾವ ರೀತಿಯಾಗಿ ಬಳಸಿಕೊಂಡರು ಎಂಬುದನ್ನು ಈ ಅಧ್ಯಾಯನದಲ್ಲಿ ಕಂಡುಕೊಳ್ಳಲಾಗಿದೆ. ಇದಲ್ಲದೇ ಖಂಡೇರಾವರಿಗೆ ಅವರ ಕಲಾಸೃಷ್ಟಿಯ ಹಂತದಲ್ಲಿ ಪ್ರೇರಣೆ ನೀಡಿದ ಮೇಲೆ ಯಾವ ರೀತಿಯ ಪರಿಣಾಮ ಬೀರಿತ್ತು ಮತ್ತು ಆ ಪ್ರೇರಣೆಯನ್ನು ಖಂಡೇರಾವರು ತಮ್ಮ ಕಲಾಕೃತಿಗೆ ಹೇಗೆ ಅಳವಡಿಸಿಕೊಂಡರು ಎಂಬುದನ್ನೂ ಸಹ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

---

15. ಕುಪ್ಪಣ್ಣ ಕಂದಗಲ್ : ಜೆ.ಎಸ್. ಖಂಡೇರಾವ , ಪುಟ 10

ಅಧ್ಯಾಯ ಏಳು :

ಜೆ.ಎಸ್. ಖಂಡೇರಾವ : ಕಲಾಚಟುವಟಿಕೆಗಳು ಮತ್ತು ಕಲಾಸಾಹಿತ್ಯ

ಕಲಾಚಟುವಟಿಕೆಗಳು : ಖಂಡೇರಾವರು ಬಾಲ್ಯದಲ್ಲಿಯೇ ಕಲಾಸಕ್ತಿಯನ್ನು ಹೊಂದಿದವರಾದ್ದರಿಂದ ಅವರು ಯಾವದಾದರೂ ಒಂದು ರೀತಿಯಲ್ಲಿ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಅನೇಕ ಕಲಾಚಟುವಟಿಕೆಗಳನ್ನು ಮಾಡುತ್ತಾ ಬಂದಿದ್ದಾರೆ. ಇವರು ಪ್ರಾಥಮಿಕ ಹಂತದ ಶಿಕ್ಷಣವನ್ನು ಪಡೆಯುವಾಗಲೇ ಹಲವಾರು ರೀತಿಯ ಕಲಾ ಚಟುವಟಿಕೆಗಳನ್ನು ಮಾಡುತ್ತಾ ಬಂದಿರುವುದು ತಿಳಿದುಬರುತ್ತದೆ. ಇವರು ಪ್ರಾಥಮಿಕ ಶಾಲೆಯಲ್ಲಿ ಅಭ್ಯಾಸವನ್ನು ಮಾಡುವಾಗ ಅಲ್ಲಿ ಶಂಕರರಾವ ಎಂಬುವವರು ಇವರಿಗೆ ಚಿತ್ರಕಲೆಯನ್ನು ಇತರ ವಿಷಯಗಳಾದ ಇತಿಹಾಸಕ್ಕೆ ಸಂಬಂಧಪಟ್ಟಂತೆ ಅದರಲ್ಲಿ ಬರುವ ನಕ್ಷೆಗಳನ್ನು ಚಿತ್ರಿಸುವುದರ ಮೂಲಕ ತಿಳಿಸುತ್ತಿದ್ದರು. ಈ ಶಾಲೆಯಲ್ಲಿ ವರ್ಷದ ಕೊನೆಯಲ್ಲಿ ಶಾಲಾವಾರ್ಷಿಕೋತ್ಸವವನ್ನು ಏರ್ಪಡಿಸುತ್ತಿದ್ದರು. ಆ ಒಂದು ಸಂದರ್ಭದಲ್ಲಿ ಶಾಲೆಯಲ್ಲಿ ಚಿತ್ರಕಲೆಯ ಪ್ರದರ್ಶನವನ್ನು ಮಾಡುವ ಪದ್ಧತಿಯನ್ನು ಅನುಸರಿಸುತ್ತಿದ್ದರು. ಈ ಚಿತ್ರಕಲಾ ಪ್ರದರ್ಶನದಲ್ಲಿ ಖಂಡೇರಾವರು ಭಾಗವಹಿಸುತ್ತಿದ್ದರು. ಇದಲ್ಲದೆ ಅಂದು ಇತರ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆಯುತ್ತಿದ್ದವು. ಆದರೆ ಖಂಡೇರಾವರು ಅವುಗಳಲ್ಲಿ ಹೆಚ್ಚಾಗಿ ಭಾಗವಹಿಸುತ್ತಿರಲಿಲ್ಲ. ಕೇವಲ ಚಿತ್ರಕಲಾ ವಿಷಯಕ್ಕೆ ಸಂಬಂಧಪಟ್ಟವುಗಳಾಗಿದ್ದರೆ ಅಂಥವುಗಳಲ್ಲಿ ತಪ್ಪಿಸುತ್ತಿರಲಿಲ್ಲ. ಹೀಗೆ ಪ್ರಾಥಮಿಕ ಶಿಕ್ಷಣದ ಹಂತದಿಂದಲೇ ಕಲೆಯ , ಕಲಾಚಟುವಟಿಕೆಗಳ ಗೀಳನ್ನು ಹೆಚ್ಚಿಕೊಂಡ ಖಂಡೇರಾವರು ಮುಂದೆ ಹೈಸ್ಕೂಲ ಶಿಕ್ಷಣವನ್ನು ಪಡೆಯುವಾಗ ಅಲ್ಲಿ ಹೆಚ್ಚಿನ ಕಾಲವನ್ನು ಚಿತ್ರಕಲೆಗೆ ಸೀಮಿತವಾಗಿಟ್ಟುಕೊಂಡಿದ್ದರು. ಇಲ್ಲಿ ಖಂಡೇರಾವರಿಗೆ ಮಹ್ಮದ ಷರಿಫ ಎನ್ನುವವರು ಚಿತ್ರಕಲೆಯನ್ನು ಹೇಳಿಕೊಡುತ್ತಿದ್ದರು. ಇವರ ಪ್ರೇರಣೆಯಿಂದ ಖಂಡೇರಾವರು ಚಿತ್ರರಚನೆಯಲ್ಲಿ ತಮ್ಮನ್ನು ಹೆಚ್ಚಾಗಿ ತೊಡಗಿಸಿಕೊಳ್ಳುತ್ತಿದ್ದರು. ಆಗ ಈ ಹೈಸ್ಕೂಲಿನಲ್ಲಿ ವೀರಯ್ಯ ಮಾಸ್ತರರು ಎನ್ನುವವರು ಮುಖ್ಯಗುರುಗಳಾಗಿದ್ದರು. ಇವರು ಖಂಡೇರಾವರ ಕಲಾಭಿರುಚಿಯನ್ನು ಕಂಡು ಇವರಿಗೆ ಹೆಚ್ಚಿನ ರೀತಿಯಲ್ಲಿ ಪ್ರೇರಣೆಯನ್ನು ನೀಡುತ್ತಿದ್ದರು.

ಆಗ ಕಲಬುರ್ಗಿಯಲ್ಲಿ ಯಾವುದೇ ಕಡೆಗಳಲ್ಲಿ ಕಲಾಸ್ಪರ್ಧೆಗಳು ನಡೆದರೆ ಶಾಲೆಗೆ ಒಂದು ನೋಟಿಸು ಕಳಿಸುತ್ತಿದ್ದರು. ಆಗ ವೀರಯ್ಯಮಾಸ್ತರರು ಸ್ಪರ್ಧೆಗೆ ತಮ್ಮ ಶಾಲೆಯಿಂದ ವಿದ್ಯಾರ್ಥಿಗಳನ್ನು ಕಳಿಸುತ್ತಿದ್ದರು. ಖಂಡೇರಾವರ ಹೆಸರನು ಸೂಚಿಸುವುದು ಮರೆಯುತ್ತಿರಲಿಲ್ಲ. ಖಂಡೇರಾವರು ಕಲಾಸ್ಪರ್ಧೆಗೆ ಹೋದರೆಂದರೆ ಅಲ್ಲಿ ಇವರಿಗೆ ಬಹುಮಾನ ಕಟ್ಟಿಟ್ಟ ಬುತ್ತಿ ಎನ್ನುವದು ಮುಖ್ಯಗುರುಗಳ ಅನಿಸಿಕೆಯಾಗಿತ್ತು. ಆದ್ದರಿಂದ ಯಾವುದೇ ರೀತಿಯ ಕಲಾಸ್ಪರ್ಧೆಗಳು ನಡೆದರೆ ಅಲ್ಲಿ ಖಂಡೇರಾವರು ಹಾಜರಿರುತ್ತಿದ್ದರು.

ಖಂಡೇರಾವರು ಕಲಾಸ್ಪರ್ಧೆಗೆ ಹೋದ ಕಡೆಗಳಲ್ಲಿ ಹಲವಾರು ಕಡೆಗಳಿಂದ ಬಹುಮಾನವನ್ನು ಪಡೆದುಕೊಂಡಿದ್ದಾರೆ. ಅಂಥವುಗಳಲ್ಲಿ ಅರಣ್ಯ ಇಲಾಖೆಯವರು 'Wild life' ಎನ್ನುವ ಒಂದು ಸ್ಥಳದಲ್ಲಿ ಚಿತ್ರ ಬಿಡುಸುವ ಸ್ಪರ್ಧೆಯನ್ನು ಆಯೋಜಿಸಿದ್ದರು. ಅಲ್ಲಿ ಸ್ಪರ್ಧೆಗೆಂದು ಕಲಬುರ್ಗಿಯ ಹಲವಾರು ಕಡೆಗಳಲ್ಲಿರುವ ಶಾಲೆಗಳ ವಿದ್ಯಾರ್ಥಿಗಳು ಬಂದಿದ್ದರು. ಖಂಡೇರಾವರು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಸ್ಪರ್ಧೆ ಪ್ರಾರಂಭವಾಯಿತು. ಎಲ್ಲರೂ ತಮಗೆ ಕೊಟ್ಟಿದ್ದ ವಿಷಯದ ಮೇಲೆ ಚಿತ್ರಗಳನ್ನು ಬಿಡಿಸುವದರಲ್ಲಿ ಮಗ್ನರಾಗಿದ್ದರು ಖಂಡೇರಾವರು ಕೆಲಹೊತ್ತು ಸುಮ್ಮನೆ ಕುಳಿತರು ಹೆಚ್ಚಿನ ಸ್ಪರ್ಧಾರ್ಥಿಗಳು ಪೆನ್ಸಿಲ್ ನಿಂದ ಚಿತ್ರ ಬಿಡಿಸುತ್ತಿದ್ದರು. ಕೆಲವು ವಿದ್ಯಾರ್ಥಿಗಳು ಮಾತ್ರ ಬಣ್ಣವನ್ನು ಉಪಯೋಗಿಸಿ ಚಿತ್ರ ಬಿಡಿಸುತ್ತಿದ್ದರು. ಅವರೆಲ್ಲರೂ ಚಿತ್ರ ಬಿಡಿಸುವದನ್ನು ತಾವು ಕುಳಿತಲ್ಲಿಂದಲೇ ನೋಡಿದರು. ಇವರು ಯಾವುದೇ ಸ್ಪರ್ಧೆಗೆ ಹೋಗಲಿ, ಮೊದಲು ಸ್ವಲ್ಪ ಸುಮ್ಮನೆ ಕುಳಿತುಕೊಳ್ಳುತ್ತಿದ್ದರು. ಯಾಕೆ ಈ ರೀತಿ ಮಾಡುತ್ತಿರೆಂದರೆ ಅದಕ್ಕೆ ಅವರು ಹೀಗೆ ಹೇಳುತ್ತಾರೆ. "ನಾವು ಅವಸರದಲ್ಲಿ ತೊಡಗಬಾರದು. ಎಲ್ಲರೂ ಚಿತ್ರರಚನೆಯಲ್ಲಿ ತೊಡಗುವ ತನಕ ಸುಮ್ಮನೆ ಕುಳಿತಿರಬೇಕು. ಯಾಕೆಂದರೆ ಎಲ್ಲರೂ ಮಾಡಿದ ಚಿತ್ರಗಳನ್ನು ನೋಡಿದಾಗ ಅವೆಲ್ಲವೂ ಯಾವ ರೀತಿಯಾಗಿವೆ ಎಂಬುದನ್ನು ಮೊದಲು ಗೊತ್ತಾಗುತ್ತದೆ. ನಂತರ ಎರಡನೆಯದ್ದು ನಾವು ಅಲ್ಲಿ ಚಿತ್ರಿತಗೊಂಡಿರುವ ಶೈಲಿಯನ್ನು ಬಿಟ್ಟು ಬೇರೆ ರೀತಿಯಲ್ಲಿ ಚಿತ್ರಿಸಬಹುದು. ಆಗ ಎಲ್ಲರೂ ಮಾಡಿದ ಚಿತ್ರಗಳಿಗಿಂತ ನಾವು ಚಿತ್ರಿಸಿದ ಚಿತ್ರವು ಭಿನ್ನವಾಗಿರುತ್ತದೆ. ಹೀಗಾಗುವುದರಿಂದ ಚಿತ್ರವು ಸ್ಪರ್ಧೆಯಲ್ಲಿ ಒಂದು ಸ್ಥಾನವನ್ನು ಕಂಡುಕೊಳ್ಳದಲ್ಲದೇ ಬಹುಮಾನವನ್ನು ಪಡೆಯುವದಕ್ಕೂ ಒಂದೊಂದು ಸಾರಿ ಎಡೆ ಮಾಡಿಕೊಡುತ್ತದೆ. ಇದು ಸ್ಪರ್ಧಾರ್ಥಿಗಳು ತಿಳಿದುಕೊಳ್ಳಬೇಕಾದ ಒಂದು ಮುಖ್ಯವಾದ ಅಂಶ. ಈ ಒಂದು ಪ್ರಸಂಗಗಳನ್ನು ನನಗೆ ನನ್ನ ಗುರುಗಳಾದ ಮಹ್ಮದ ಷರೀಫರು ಹೇಳುತ್ತಿದ್ದರು." ಎಂದು ಖಂಡೇರಾವರು ಸ್ಪರ್ಧಾತ್ಮಕ ರೀತಿಯನ್ನು ವಿವರಿಸುತ್ತಾರೆ. ಇಲ್ಲಿ ಖಂಡೇರಾವರು 'Wild life' ಎನ್ನುವ ವಿಷಯದ ಮೇಲೆ ಚಿತ್ರಿಸಿದ ಚಿತ್ರವು ಪ್ರಥಮ ಬಹುಮಾನದೊಂದಿಗೆ ಆಯ್ಕೆಯಾಯಿತು. ಆಗ ಸ್ಪರ್ಧೆಯು ಮುಗಿದ ಕೆಲವೇ ಸಮಯದಲ್ಲಿ ಫಲಿತಾಂಶವನ್ನು ತಿಳಿಸುತ್ತಿದ್ದರು. ಎಂದು ಹೇಳುತ್ತಾರೆ.

ಅಲ್ಲದೇ ಕನ್ನಡ ಸಾಹಿತ್ಯ ಸಂಘದವರು ಏರ್ಪಡಿಸಿದ ಒಂದು ಚಿತ್ರಕಲಾ ಸ್ಪರ್ಧೆಯಲ್ಲಿ ಇವರಿಗೆ ಪ್ರಶಸ್ತಿ ಪತ್ರದೊಂದಿಗೆ ಬಹುಮಾನವು ದೊರೆಯಿತು. ಇವೆಲ್ಲವುದರ ಜೊತೆಗೆ ತಮ್ಮ ಶಾಲೆಯಲ್ಲಿ ಎರ್ಪಡಿಸುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಈ ಹಂತದಲ್ಲಿ ಇವರ ಇನ್ನೊಂದು ಮುಖ್ಯವಾದ ಕಲಾ ಚಟುವಟಿಕೆಯೇನೆಂದರೆ , ಇವರು ಮನೆಯಲ್ಲಿ ಕೆಲವು ವಿದ್ಯಾರ್ಥಿಗಳನ್ನು ಎದುರಿಗೆ ಕೂಡಿಸಿಕೊಂಡು ಸಿನೇಮಾದ ಪತ್ತಿಗಳನ್ನು ಒಂದಕ್ಕೊಂದು ದಾರದಿಂದ ಪೋಣಿಸಿಕೊಂಡು ಅದಕ್ಕೆ ಆಕಡೆ ಈಕಡೆ ಸಣ್ಣ ಕಟ್ಟಿಗೆಯನ್ನು ಕಟ್ಟಿಕೊಂಡು ಎದುರಿಗೆ ಒಂದು ತೆಳ್ಳನೆಯ ಬಿಳಿ ಬಟ್ಟೆಯನ್ನು ಗೋಡೆಗೆ ತೂಗುಹಾಕಿ ಜೋಡಿಸಿದ ಪತ್ತಿಗಳ ಮೇಲೆ ಬ್ಯಾಟರಿಯಿಂದ ಬೆಳಕನ್ನು ಹಾಕಿ ಚಿತ್ರಗಳನ್ನು ತೋರಿಸುತ್ತಿದ್ದರು. ಇದು ಒಂದು ರೀತಿಯ ಇವರ ಬಾಲ್ಯ ಜೀವನದ ಕಲಾ ಚಟುವಟಿಕೆ ಹೀಗೆ ಖಂಡೇರಾವರು ಒಂದಲ್ಲ ಒಂದು ರೀತಿಯಲ್ಲಿ ಕಲಾಚಟುವಟಿಕೆಗಳನ್ನು ಮಾಡುತ್ತಿದ್ದರು.

ಖಂಡೇರಾವರು ತಮ್ಮ ಹೈಸ್ಕೂಲ್ ಶಿಕ್ಷಣವನ್ನು ಮುಗಿಸಿಕೊಂಡು ಉನ್ನತ ಶಿಕ್ಷಣವನ್ನು ಪಡೆಯಲು ಮುಂಬೈಗೆ ತೆರಳಿದರು. ಅಲ್ಲಿ ಜೆ.ಜೆ. ಕಲಾಶಾಲೆಯನ್ನುವ ಪ್ರತಿಷ್ಟಿತ ಶಾಲೆಯಲ್ಲಿ ತಮ್ಮ ಕಲಾಶಿಕ್ಷಣವನ್ನು ಪ್ರಾರಂಭಿಸಿದರು. ಖಂಡೇರಾವರು ಇಲ್ಲಿ ಮೊದಲ ವರ್ಷದ ಅವಧಿಯಲ್ಲಿ ಯಾವ ಕಲಾಚಟುವಟಿಕೆಗಳಲ್ಲಿ ಭಾಗವಹಿಸುತ್ತಿರಲಿಲ್ಲ. ನಂತರ ಎರಡನೇ ವರ್ಷದಲ್ಲಿ ಇವರಿಗೆ ಜೆ.ಎಸ್. ಶೆಣೈರವರು ಪರಿಚಯವಾದರು. ಶೆಣೈರವರು ಜೆ.ಜೆ.ಕಲಾಶಾಲೆಯಲ್ಲಿ ಎಲ್ಲರಿಗೂ

ಬೇಕಾದ ವ್ಯಕ್ತಿಯಾಗಿದ್ದರು. ಜೆ.ಜೆ.ಕಲಾಶಾಲೆಯಲ್ಲಿ ಯಾವುದೇ ರೀತಿಯ ಕಲಾಚಟುವಟಿಕೆಗಳು ನಡೆದರೆ ಅಲ್ಲಿ ಶೆಣೈ ರವರ ಪಾಲು ಇದ್ದೇ ಇರುತಿತ್ತು. ಖಂಡೇರಾವರು ಶೇಣೈರವರ ಜೊತೆಗೂಡಿಕೊಂಡು ಶೆಣೈರವರು ಮಾಡುವ ಕಲಾಚಟುವಟಿಕೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುತ್ತಿದ್ದರು. ಇಲ್ಲಿಯೂ ಪ್ರತಿವರ್ಷ ಕಲಾಶಾಲೆಯ ವಾರ್ಷಿಕೋತ್ಸವವನ್ನು ವಿದ್ಯಾರ್ಥಿ ಸಂಘದವರು ಏರ್ಪಡಿಸುತ್ತಿದ್ದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಚಿತ್ರಿಸಿದ ಚಿತ್ರಗಳಲ್ಲಿ ಕೆಲವು ಉತ್ತಮ ಕಲಾಕೃತಿಗಳನ್ನು ಚಿತ್ರಕಲಾ ಪ್ರದರ್ಶನವೆಂಬಂತೆ ಮಾಡಿ, ಅದರಲ್ಲಿ ಎಲ್ಲ ವಿದ್ಯಾರ್ಥಿಗಳ ಕೆಲವು ಕಲಾಕೃತಿಗಳನ್ನು ಪ್ರದರ್ಶನಕ್ಕೆ ಇಡುತ್ತಿದ್ದರು. ಅಲ್ಲದೇ ಅವುಗಳಲ್ಲಿ ಪ್ರಥಮ , ದ್ವಿತಿಯ ಮತ್ತು ತೃತಿಯವೆಂಬಂತೆ ಮೂರು ಬಹುಮಾನಗಳನ್ನು ಕೊಡಿಸುವ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಿದ್ದರು. ಈ ಬಹುಮಾನಗಳನ್ನು ಸಮಾರಂಭಕ್ಕೆ ಬಂದ ಮುಖ್ಯ ಅತಿಥಿಗಳಿಂದ ಕೊಡಿಸಲಾಗುತ್ತಿತ್ತು.ಇದಲ್ಲದೇ ಕಲಾಶಾಲೆಯಲ್ಲಿ ಆಗಾಗ ಬೇರೆ ಬೇರೆ ಕಡೆಗಳಿಂದ ಹಿರಿಯ ಕಲಾವಿದರನ್ನು , ಕಲಾ ಇತಿಹಾಸಕಾರರನ್ನು ಕರೆಸಿ, ಕಲಾಪ್ರಾತ್ಯಕ್ಷಿಕೆಗಳನ್ನು , ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದರು. ಈ ರೀತಿಯ ಕಲಾಚಟುವಟಿಕೆಗಳನ್ನು ಖಂಡೇರಾವರು ಎಂದೂ ತಪ್ಪಿಸಿದವರಲ್ಲ. ಈ ಅವಧಿಯಲ್ಲಿ ಮುಂಬೈಯಲ್ಲಿ ನಡೆಯುವ ಕಲಾಪ್ರದರ್ಶನಗಳಿಗೆ ಇವರು ತಪ್ಪದೇ ಕಲಾಕೃತಿಯನ್ನು ಕಳಿಸುತ್ತಿದ್ದರು. ಇವರು ಕಳಿಸುವ ಚಿತ್ರಗಳು ನಿಸರ್ಗ ಚಿತ್ರಗಳಿಂದ ಕೂಡಿರುತ್ತಿದ್ದವು. ಒಮ್ಮೆ ಇವರು ಪ್ರದರ್ಶನಕ್ಕೆ ಕಳಿಸಿದ ಮಲ್ ಬಾರ್ ಹಿಲ್ಸ್ ಎಂಬ ನಿಸರ್ಗಚಿತ್ರವು ಪ್ರದರ್ಶನಕ್ಕೆ ಆಯ್ಕೆಯಾಗಿ ಎಲ್ಲರ ಗಮನವನ್ನು ಸೆಳೆದಿತ್ತು. ಈ ಪ್ರದರ್ಶನವನ್ನು ಮಹಾರಾಷ್ಟ್ರ ಸರಕಾರದವರು ಆಯೋಜಿಸಿದ್ದರು. ಇದು ರಾಜ್ಯಮಟ್ಟದಕಲಾಪ್ರದರ್ಶನವಾಗಿತ್ತು.

ಇದಲ್ಲದೇ ಖಂಡೇರಾವರು ಮುಂಬೈನ ಇನ್ನೊಂದು ಕಲಾಶಾಲೆಯಾದ ನೂತನ ಕಲಾಮಂದಿರದಲ್ಲಿ ತಮ್ಮ ಹೆಚ್ಚಿನ ಅಭ್ಯಾಸಕ್ಕೆಂದು ಹೋಗುತ್ತಿದ್ದರು. ಈ ಕಲಾಶಾಲೆಯಲ್ಲಿ ನಡೆಯುವ ಕಲಾಚಟುವಟಿಕೆಗಳಲ್ಲಿಯೂ ಇವರು ಭಾಗವಹಿಸುತ್ತಿದ್ದರು. ಅಲ್ಲದೇ ಪ್ರತಿವರ್ಷ ಹಮ್ಮಿಕೊಳ್ಳುವ ವಾರ್ಷಿಕೋತ್ಸವ ಸಮಾರಂಭದಲ್ಲಿ ಚಿತ್ರಕಲಾ ಪ್ರದರ್ಶನವನ್ನು ಏರ್ಪಡಿಸುತ್ತಿದ್ದರು. ಇಲ್ಲಿ ಖಂಡೇರಾವರು ಎಷ್ಟೋ ಸಾರಿ ಬಹುಮಾನಗಳನ್ನು ಪಡೆದುಕೊಂಡಿದ್ದರು. ಇಲ್ಲಿ ಶಂಕರ ಪುಣಂಚಿತ್ತಾಯ , ಶರ್ಮಾರಂತಹ ಅನೇಕ ಸ್ನೇಹಿತರೊಂದಿಗೆ ಕೂಡಿಕೊಂಡು ಕಲಾಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು.

ಖಂಡೇರಾವರು ಅಧ್ಯಯನ ಕಾಲದಲ್ಲಿ ಬೇರೆ ಬೇರೆ ಗ್ಯಾಲರಿಗಳಲ್ಲಿ ಏಕವ್ಯಕ್ತಿ ಮತ್ತುಸಮೂಹ ಕಲಾಪ್ರದರ್ಶನಗಳನ್ನು ಮಾಡದಿರುವದು ಕಂಡುಬರುತ್ತದೆ. ಇದಕ್ಕೆ ಒಂದು ಕಾರಣವಿದೆ. ಆಗ ಮುಂಬೈಯಲ್ಲಿ ಹಲವಾರು ಕಲಾಗ್ಯಾಲರಿಗಳಿದ್ದವೇನೋ ನಿಜ. ಆದರೆ ಇಲ್ಲಿ ಕಲಾ ಪ್ರದರ್ಶನಗಳನ್ನು ಮಾಡಬೇಕಾದರೆ ಕೇವಲ ಹಿರಿಯ ಕಲಾವಿದರಿಗೆ ಕೊಡುವ ಪದ್ಧತಿಯಿತ್ತು. ನಮ್ಮಂತ ಕಿರಿಯ ಮತ್ತು ಇನ್ನೂ ಅಧ್ಯಯನ ಮಾಡುತ್ತಿರುವವರಿಗೆ ಗ್ಯಾಲರಿಗಳನ್ನು ಕಲಾಪ್ರದರ್ಶನ ಮಾಡುವದಕ್ಕೆ ಕೊಡುತ್ತಿರಲಿಲ್ಲವೆಂದು ಖಂಡೇರಾವರು ಹೇಳುತ್ತಾರೆ. ಮುಂಬೈಯು ಆಗ ಸಾಂಸ್ಕೃತಿಕ ಕೇಂದ್ರವೆನಿಸಿಕೊಂಡಿತ್ತು. ಆದ್ದರಿಂದ ಅಲ್ಲಿ ದಿನಾಲು ಏನಾದರು ಒಂದು ಸಾಂಸ್ಕೃತಿಕ, ಕಲಾಚಟುವಟಿಕೆಗಳು ನಡೆಯುತ್ತಿರುತ್ತಿದ್ದವು. ಅವುಗಳಲ್ಲಿ ಹಿರಿಯ ಕಲಾವಿದರ ಕಲಾಪ್ರದರ್ಶನಗಳು, ಕಲಾ ಪ್ರಾತ್ಯಕ್ಷಿಕೆಗಳು, ಸಂಗೀತ ಕಾರ್ಯಕ್ರಮಗಳು ಒಳಗೊಂಡಿದ್ದವು. ಖಂಡೇರಾವರು ಈ ಎಲ್ಲ ಕಲಾಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಿದ್ದರು. ಹೀಗೆ ಇವರು ಮುಂಬೈನ ಕಲಾವಾತಾವರಣಕ್ಕೆ ಹೊಂದಿಕೊಂಡು ಅಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜೆ.ಜೆ.ಕಲಾಶಾಲೆ ಮತ್ತು ನೂತನ ಕಲಾ ಮಂದಿರ ಈ ಎರಡೂ ಕಲಾಶಾಲೆಗಳಲ್ಲಿ ನಡೆಯುವ ಕಲಾಚಟುವಟಿಕೆಗಳಲ್ಲಿ ತಮ್ಮ ಕಲಾಶಿಕ್ಷಣವನ್ನು ಮುಗಿಸಿಕೊಂಡವರಾಗಿದ್ದಾರೆ.

ಖಂಡೇರಾವರು ಮುಂಬೈನ ಸರ್.ಜೆ.ಜೆ.ಕಲಾಶಾಲೆಯಲ್ಲಿ ಕಲಾಶಿಕ್ಷಣವನ್ನು ಪಡೆದುಕೊಂಡು ಕಲಬುರ್ಗಿಗೆ ಬಂದರು. ಈ ಅವಧಿಯಲ್ಲಿ ಅವರು ಆದರ್ಶ ಕಲಾಮಂದಿರ ವೆಂಬ ಒಂದು ಕಲಾಶಾಲೆಯನ್ನು ತೆರೆದರು. ಆಗ ತಮ್ಮ ಕಲಾಶಾಲೆಯಲ್ಲಿ ಹಿರಿಯ ಕಲಾವಿದರನ್ನು ಕರೆಸಿ ಅವರಿಂದ ಕಲಾ ಪ್ರಾತ್ಯಕ್ಷಿಕೆಗಳನ್ನು ಮತ್ತು ಕಲಾಉಪನ್ಯಾಸಗಳನ್ನು ಮಾಡಿಸುತ್ತಿದ್ದರು. ಈ ಸಂದರ್ಭದಲ್ಲಿ ಖಂಡೇರಾವರು ತಮ್ಮ ಆದರ್ಶಕಲಾಮಂದಿರದಲ್ಲಿಯೇ ಒಂದು ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು ಕೈಗೊಂಡಿದ್ದರು, ಮುಂದೆ 197 1ರಲ್ಲಿ ಶರಣಬಸವೇಶ್ವರ ಕಲಾಮಹಾವಿದ್ಯಾಲಯದ ಲಲಿತ ಕಲಾ ವಿಭಾಗದಲ್ಲಿ ಸೇವೆಸಲ್ಲಿಸಲು ಪ್ರಾರಂಭಿಸಿದರು. ಈ ಹಂತದಲ್ಲಿ ಇವರು ಚಿತ್ರಿಸಿದ ಕಿತ್ತೂರು ರಾಣಿ ಚನ್ನಮ್ಮನ ನೈಜ

ಸಂಯೋಜನಾ ಕಲಾಕೃತಿಯು ಅಂತರರಾಷ್ಟ್ರೀಯ ಮಕ್ಕಳ ವರ್ಷವೆಂದು 1977 ರಲ್ಲಿ ಯುನೆಸ್ಕೊ ದವರು ಆಚರಿಸಿದ ಸಂದರ್ಭದಲ್ಲಿ ಎಲ್ಲರಿಂದ ಪ್ರಶಂಸೆಯನ್ನು ಪಡೆಯಿತು. 1980 ರಲ್ಲಿ ದೆಹಲಿಯಲ್ಲಿ ನಡೆದ ಓರಿಯಂಟೇಶನ್ ಕೋರ್ಸ ನಲ್ಲಿ ಭಾಗವಹಿಸಿದವರಾಗಿದ್ದಾರೆ. ಇದನ್ನು ದೆಹಲಿಯ ಸೆಂಟರ್ ಆಫ್ ಕಲ್ಚರ್ ರಿಸೋರ್ಸೆಸ್ ಆ್ಯಂಡ್ ಟ್ರೇನಿಂಗ್ ಇವ ರು ಏರ್ಪಡಿಸಿದ್ದರು. ಇದಲ್ಲದೆ 1980 ರಲ್ಲಿ ಕಲಬುರ್ಗಿಯಲ್ಲಿ ಹಲವಾರು ಕಲಾವಿದರಿಂದ 1980ರಿಂದ 85 ರವರೆಗೆ ಕಲಾಪ್ರಗತಿ ಎಂಬ ಸಂಘಟನೆಯು ಪ್ರಾರಂಭವಾಯಿತು. ಖಂಡೇರಾವರು ಇದರ ಅಧ್ಯಕ್ಷರಾಗಿದ್ದರು. ಹೀಗೆ ಖಂಡೇ ರಾವರು ಹಲವಾರು ಕಲಾಪ್ರದರ್ಶನಗಳನ್ನು, ಕಲಾಪ್ರತ್ಯಕ್ಷಿಕೆಗಳನ್ನು ಮಾಡುವುದರ ಜೊತೆಗೆ ಹಲವಾರು ಬಾರಿ ಆಮಂ ತ್ರಿತ ಉಪನ್ಯಾಸಕರಾಗಿ, ಆಹ್ವಾನಿತ ಕಲಾವಿದರಾಗಿ, ಕಲಾಪ್ರದರ್ಶನಗಳ ನಿರ್ಣಾಯಕರಾಗಿ 1991ರ ಟ್ರೆನಾಲೆ ಅಂತ ರರಾಷ್ಟ್ರೀಯ ಚಿತ್ರಕಲಾ ಪ್ರದರ್ಶನದ ವಿಶೇಷ ಆಮಂತ್ರಿತರಾಗಿ , 1970 ರ ದಶಕದಲ್ಲಿ ಮೈಸೂರು ಆರ್ಟ ಕೌನ್ಸಿಲ್ ಎಂಬ ಸಂಸ್ಥೆಯಲ್ಲಿ ಕ್ರೀಯಾಶೀಲ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿದ್ದಾರೆ.

ಏಕವ್ಯಕ್ತಿ ಕಲಾಪ್ರದರ್ಶನಗಳು

ಖಂಡೇರಾವರು ನಾಡಿನ ಹಲವಾರು ಕಡೆಗಳಲ್ಲಿ ತಮ್ಮ ಕಲಾಕೃತಿಗಳ ಪ್ರದರ್ಶನವನ್ನು ಮಾಡಿದ್ದಾರೆ. ಅಂತಹುಗ ಳಲ್ಲಿ 1976ರಲ್ಲಿ ಕಲಬುರ್ಗಿಯಲ್ಲಿ ಏಕವ್ಯಕ್ತಿ ಕಲಾಪ್ರದರ್ಶನವನ್ನು ಕೈಗೊಂಡಿದ್ದರು. ಇಲ್ಲಿ ಪ್ರದರ್ಶಿತಗೊಂಡಿರುವ ಕಲಾ ಕೃತಿಗಳು ನಿಸರ್ಗಚಿತ್ರದಿಂದ ಕೂಡಿದ್ದವುಗಳಾಗಿದ್ದವು. ಈ ಪ್ರದರ್ಶನವನ್ನು ಕಲಬುರ್ಗಿಯ ಐ.ಬಿ.ವಿ.ಎ. ವೇದಿಕೆಯವ ರು ಪ್ರಾಯೋಜಿಸಿದ್ದರು. 1977 ರಲ್ಲಿ ಬೆಂಗಳೂರಿನ ಮ್ಯಾಕ್ಸಮುಲ್ಲರ ಭವನ ಇವರ ಪ್ರಾಯೋಜಕದೊಂದಿಗೆ ಕಲಾ ಪ್ರದರ್ಶನವನ್ನು ಕೈಗೊಂಡಿದ್ದರು. 1980ರಲ್ಲಿ ಬಿದರನಲ್ಲಿ ಕಲಾಪ್ರದರ್ಶನವನ್ನು ಕೈಗೊಂಡಿದ್ದರಲ್ಲದೇ, ಅದೇ ವರ್ಷ ಧಾರವಾಡದ ಸ್ಕೂಲ್ ಆಫ್ ಆರ್ಟ ಗ್ಯಾಲರಿಯಲ್ಲಿ ತಮ್ಮ ಏಕವ್ಯಕ್ತಿ ಕಲಾಪ್ರದರ್ಶನವನ್ನು ಮಾಡಿದ್ದರು. ಇಲ್ಲಿಯೂ ನಿಸ ರ್ಗಚಿತ್ರಗಳನ್ನು ಪ್ರದರ್ಶನಕ್ಕಿಟ್ಟಿದ್ದರು. ಮುಂದೆ 1981ರಲ್ಲಿ ಕಲಬುರ್ಗಿಯ ಕಲಾಪ್ರಗತಿಯ ಸಹಕಾರದೊಂದಿಗೆ ಹುಬ್ಬ ಳ್ಳಿಯ ಕಲಾಗ್ಯಾಲರಿಯಲ್ಲಿ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು ಮಾಡಿದ್ದಾರೆ. 1982 ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು ಇವರ ಧನಸಹಾಯದೊಂದಿಗೆ ಹೈದರಾಬಾದನಲ್ಲಿ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು ಕೈಗೊಂಡಿದ್ದರು. ಮುಂದೆ ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ತಮ್ಮ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು 1986 ರಲ್ಲಿ ಕೈಗೊಂಡಿದ್ದರು. ಈ ಕಲಾಪ್ರದರ್ಶನವನ್ನು ಬೆಂಗಳೂರಿನ ಇ.ಡಬ್ಲೂ.ಎ.ಇ. ಸಂಸ್ಥೆಯವರು ಪ್ರಾಯೋಜಸಿದ್ದರು. ಇದಲ್ಲದೆ 1988 ರಲ್ಲಿ ಗದಗನ ವಿಜಯ ಕಲಾಮಂದಿರದಲ್ಲಿ ತಮ್ಮ ಏಕವ್ಯೆಕ್ತಿ ಚಿತ್ರಕಲಾ ಪ್ರದರ್ಶನವನ್ನು ಕೈಗೊಂಡಿದ್ದರು. ಹೀಗೆ ಖಂಡೇರಾವರು ನಾಡಿನ ಅನೇಕ ಕಡೆ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು ಮಾಡಿದವರಾಗಿದ್ದಾರೆ.

ಸಮೂಹ ಕಲಾಪ್ರದರ್ಶನಗಳು

ಖಂಡೇರಾವರು ತಮ್ಮ ಸ್ನೇಹಿತರೊಂದಿಗೆ ಕೂಡಿಕೊಂಡು ರಾಜ್ಯವಲ್ಲದೆ ಹೊರರಾಜ್ಯದಲ್ಲೂ ಅನೇಕ ಸಮೂಹ ಚಿತ್ರಕಲಾಪ್ರದರ್ಶಗಳಲ್ಲಿ ಭಾಗವಹಿಸಿದ್ದಾರೆ. 1972 ರಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಮೂಹ ಕಲಾ ಪ್ರದರ್ಶನವನ್ನು ಆಯೋಜಿಸಿದ್ದರು. 1981ರಲ್ಲಿ ಹುಬ್ಬಳ್ಳಿಯಲ್ಲಿರುವ ಕಲಾ ಗ್ಯಾಲರಿಯಲ್ಲಿ ಸಕಮೂಹ ಕಲಾ ಪ್ರದರ್ಶನವನ್ನು ಹಮ್ಮಿಕೊಂಡಿದ್ದರು. ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ 1983 ರಲ್ಲಿ ಸಮೂಹ ಕಲಾಪ್ರದರ್ಶನವ ನ್ನು ಮಾಡಿದ್ದಾರೆ. 1992 ರಲ್ಲಿ ಬೆಂಗಳೂರಿನ ಯಂಗ್ ಡಿಸೈನ್ ಎಂಬ ಗ್ಯಾಲರಿಯಲ್ಲಿ ಸಮೂಹ ಕಲಾ ಪ್ರದರ್ಶನವನ್ನು ಕೈಗೊಂಡಿದ್ದರು. ಎಮ್.ಎಫ್ ಹುಸೇನ್, ಜಿ.ಎಸ್.ಅಡಿವಿರೇಕರ್, ಎಸ್.ಜಿ. ವಾಸುದೇವ, ಜಿ.ಎಸ್.ಶಣೈ, ಪೀಟರ್ ಲೂಯಿಸ, ಕೆ.ಎಸ್ .ರಾವ್ , ವಿಜಯ ಹಾಗರಗುಂಡಿಗಿ ಮತ್ತು ಶ್ರೀಕಾಂತ ಶೆಟ್ಟಿಯವರೊಂದಿಗೆ ಕೂಡಿಕೊಂಡು, ಗಣೇ ಶನ ವಿಷಯಕ್ಕೆ ಸಂಬಂಧಪಟ್ಟಂತೆ ಕಲಾಕೃತಿಗಳು ಮೂಡಿಬಂದವು. ಈ ಕಲಾ ಪ್ರದರ್ಶನವನ್ನು ಜಿ.ಎಸ್.ಶೆಣೈರವರು ಪ್ರಾಯೋಜಿಸಿದ್ದರು. ಮುಂದೆ 1993 ರಲ್ಲಿ ದೆಹಲಿಯ ಅನಾಮಿಕ ಆರ್ಟ ಗ್ಯಾಲರಿಯಲ್ಲಿ ಸಮೂಹ ಕಲಾ ಪ್ರದರ್ಶನ

ವನ್ನುಕೈಗೊಂಡಿದ್ದರು. 1994ರಲ್ಲಿ ಮತ್ತೇ ಗಣೇಶನ ವಿಷಯದಿಂದ ಕೂಡಿದ ಸಮೂಹ ಕಲಾ ಪ್ರದರ್ಶನವು ದೆಹಲಿಯ ಗ್ಯಾಲರಿ ಸ್ಟೆಪ್ಸ್ ನಲ್ಲಿ ಈ ಸಮೂಹ ಕಲಾಪ್ರದರ್ಶನವು ಆಯೋಜಿಸಲಾಗಿತ್ತು. ಈ ಗುಂಪಿನಲ್ಲಿಯೂ ಖಂಡೇರಾವರು ಭಾಗವಹಿಸಿದ್ದರು. 1996 ರಲ್ಲಿ ಬೆಂಗಳೂರಿನ ಇಮೇಜ್ ಆರ್ಟ ಗ್ಯಾಲರಿಯವರು ಪ್ರಾಯೋಜಿಸಿದ ಈ ಸಮೂಹ ಕಲಾ ಪ್ರದರ್ಶನವು ಬೆಂಗಳೂರಿನಕೆ.ಸಿ.ಪಿ ಗ್ಯಾಲರಿಯಲ್ಲಿ ನಡೆಯಿತು. 1997 ರಲ್ಲಿ ಬಿರ್ಲಾ ಅಕಾಡೆಮಿ ಆಫ್ ಆರ್ಟ ಆ್ಯಂಡ ಕಲ್ಚರ ರವರ ಪ್ರಾಯೋಜಕದೊಂದಿಗೆ ಕಲ್ಕತ್ತಾದಲ್ಲಿ ಸಮೂಹ ಕಲಾ ಪ್ರದರ್ಶನವನ್ನು ಕೈಗೊಂಡಿದ್ದರು. ಮುಂದೆ ಅದೇ ವರ್ಷ ಕಲಬುರ್ಗಿಯ ಕೆಲವು ಸಮಕಾಲೀನ ಕಲಾವಿದರೆಲ್ಲರು ಸೇರಿಕೊಂಡು ಮುಂಬೈನ ಪ್ರತಿಷ್ಟಿತ ಜಹಾಂಗೀರ ಆರ್ಟ ಗ್ಯಾಲರಿಯಲ್ಲಿ ಸಮೂಹ ಕಲಾ ಪ್ರದರ್ಶನವನ್ನು ಹಮ್ಮಿಕೊಂಡಿದ್ದರು. ಹೆರಿಟೇಜ್ ಆಫ್ ಕರ್ನಾಟಕ ಎನ್ನುವ ಶಿರೋನಾಮೆಯೊಂದಿಗೆ ಈ ಸಮೂಹ ಕಲಾ ಪ್ರದರ್ಶನವನ್ನು ಕೈಗೊಂಡಿದ್ದರು.

ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದು

ಖಂಡೇರಾವರು ಅನೇಕ ಕಡೆಗಳಲ್ಲಿ ನಡೆದ ಕಲಾಪ್ರದರ್ಶನಗಳಿಗೆ ಕಲಾಕೃತಿಗಳನ್ನು ಕಳಿಸಿದ್ದಾರೆ. ಅವುಗಳಲ್ಲಿ ಕಲಾಕೃತಿಗಳು ಆಯ್ಕೆಗೊಂಡಿರುವ ಪ್ರದರ್ಶನಗಳ ಹೆಸರನ್ನು ಮಾತ್ರ ಇಲ್ಲಿ ಸೂಚಿಸಲಾಗಿದೆ. ಕರ್ನಾಟಕ ಲಲಿತಕಲಾ ಅಕಾಡೆಮಿಯವರು ನಡೆಸುವ ವಾರ್ಷಿಕ ಕಲಾಪ್ರದರ್ಶನಗಳಲ್ಲಿ ಇವರ ಕಲಾಕೃತಿಗಳು ಪ್ರದರ್ಶನಕ್ಕೆ ಆಯ್ಕೆಗೊಂಡವುಗಳಾಗಿವೆ. ಇಲ್ಲಿ 1968 ರಿಂದ 1971ರ ವರೆಗೆ ಸತತವಾಗಿ ಇವರ ಕಲಾಕೃತಿಗಳು ಆಯ್ಕೆ ಗೊಂಡವು. ಮುಂದೆ 1981, 82,83 ರಲ್ಲಿ ಇವರ ಕಲಾಕೃತಿಗಳು ಪ್ರದರ್ಶನಕ್ಕೆ ಆಯ್ಕೆಗೊಂಡವು. 1986 ರಲ್ಲಿ ನಾಸಿಕನ ಕಲಾ ನಿಕೇತನದವರು ಆಯೋಜಿಸಿದ ಕಲಾಪ್ರದರ್ಶನದಲ್ಲಿ ಇವರ ಕಲಾಕೃತಿ ಆಯ್ಕೆಗೊಂಡಿತು. 1986ರಲ್ಲಿ ಕಲ್ಕತ್ತಾ ಲಲಿತಕಲಾ ಅಕಾಡೆಮಿಯವರು ಏರ್ಪಡಿಸಿದ ಕಲಾಪ್ರದರ್ಶನದಲ್ಲಿ ಇವರ ಕಲಾಕೃತಿಯು ಪ್ರದರ್ಶನಕ್ಕೆ ಆಯ್ಕೆಯಾಯಿತು. ಮುಂದೆ ಬೆಂಗಳೂರಿನಲ್ಲಿ ನಡೆದ ಕರ್ನಾಟಕ ಕಲಾ ಮೇಳದಲ್ಲಿ 1983, 84, 88,93 ಈ ವರ್ಷಗಳಲ್ಲಿ ಇವರು ಕಳಿಸಿದ ಕಲಾಕೃತಿಗಳು ಪ್ರದರ್ಶನಕ್ಕೆ ಆಯ್ಕೆಗೊಂಡವು. 1987 ರಲ್ಲಿ ಮದ್ರಾಸಿನ ರಿಜನಲ್ ಆರ್ಟ ಸೆಂಟರ ಇವರು ಆಯೋಜಿಸಿದ ಕಲಾಪ್ರದರ್ಶನದಲ್ಲಿ ಖಂಡೇರಾವರು ಕಳಿಸಿದ ಕಲಾಕೃತಿಯು ಆಯ್ಕೆಗೊಂಡಿದೆ. 1984 ರಲ್ಲಿ ನಡೆದ ರಾಷ್ಟ್ರೀಯ ಕಲಾಯಾತ್ರೆಯನ್ನು ಕಲಾಪ್ರದರ್ಶನದಲ್ಲಿ ಇವರ ಕಲಾಕೃತಿಯು ಆಯ್ಕೆಯಾಯಿತು. 1987 ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯವರು ದೆಹಲಿಯಲ್ಲಿ ನಡೆದ ರಾಷ್ಟ್ರೀಯ ಕಲಾಮೇಳದಲ್ಲಿ ಆಯೋಜಿಸಿದ ಕಲಾಪ್ರದರ್ಶನದಲ್ಲಿ ಇವರ ಕಲಾಕೃತಿಯು ಆಯ್ಕೆಯಾಯಿತು. ಅದೇ ವರ್ಷ ಕರ್ನಾಟಕ ಲಲಿತಕಲಾ ಅಕಾಡೆಮಿಯವರು ಮುಂಬೈನಲ್ಲಿ ಆಯೋಜಿಸಿದ್ದ ಕಿರುರೂಪ ಮಾದರಿಯ ಚಿತ್ರಕಲಾ ಪ್ರದರ್ಶನದಲ್ಲಿ ಇವರು ಕಳಿಸಿದ ಕಲಾಕೃತಿಯು ಆಯ್ಕೆಯಾಯಿತು. ಮಧ್ಯಪ್ರದೇಶದ ರಾಜಪೂರನಲ್ಲಿ 1983 ರಲ್ಲಿ ಮಹಾಕೋಸಲ ಕಲಾಪರಿಷತ್ತು ಇವರು ಆಯೋಜಿಸಿದ್ದ ರಾಷ್ಟ್ರಮಟ್ಟದ ಚಿತ್ರಕಲಾ ಪ್ರದರ್ಶನದಲ್ಲಿ ಇವರು ಕಳಿಸಿದ ಕಲಾಕೃತಿಯು ಆಯ್ಕೆಯಾಯಿತು. ದೆಹಲಿಯ ಲಲಿತಕಲಾ ಅಕಾಡೆಮಿಯವರು ಆಯೋಜಿಸಿದ ರಾಷ್ಟ್ರೀಯ ಕಲಾ ಪ್ರದರ್ಶನದಲ್ಲಿ 1984 ,85,86,87,88,89 ಮತ್ತು 91 ರಲ್ಲಿ ಖಂಡೇರಾವರು ಕಳಿಸಿದ ಕಲಾಕೃತಿಗಳು ಕಲಾಪ್ರದರ್ಶನದಲ್ಲಿ ಆಯ್ಕೆಗೊಂಡವುಗಳಾಗಿವೆ. 1989ರಲ್ಲಿ ಬಾಂಬೆ ಆರ್ಟ ಸೊಸಾಯಿಟಿಯವರು ಮುಂಬೈಯಲ್ಲಿ ಆಯೋಜಿಸಿದ ಕಲಾಪ್ರದರ್ಶನದಲ್ಲಿ ಇವರ ಕಲಾಕೃತಿ ಆಯ್ಕೆಯಾಯಿತು. 1989 ರಲ್ಲಿ ಕುವೆಂಪು ಕಲಾ ಸಂಸ್ಥೆ (ಕೆ.ಎಸ್.ಎ.) ಇವರು ಬೆಂಗಳೂರಿನಲ್ಲಿ ಆಯೋಜಿಸಿದ ಕಿರುರೂಪ ಮಾದರಿಯ ಕಲಾಪ್ರದರ್ಶನದಲ್ಲಿ ಇವರ ಕಲಾಕೃತಿಯು ಆಯ್ಕೆಗೊಂಡಿತು. 1991ರಲ್ಲಿ ಮುಂಬೈಯಲ್ಲಿ ನಡೆದ ಕಿರುರೂಪ ಮಾದರಿಯ ಸಮಕಾಲೀನ ಚಿತ್ರ ಮತ್ತು ಶಿಲ್ಪಕಲಾ ಪ್ರದರ್ಶನದಲ್ಲಿ ಇವರ ಕಲಾಕೃತಿಯು ಆಯ್ಕೆಯಾಯಿತು. ಈ ಕಲಾಪ್ರದರ್ಶನವನ್ನು ದೆಹಲಿಯ ಲಲಿತಕಲಾ ಅಕಾಡೆಮಿಯು ಪ್ರಾಯೋಜಿಸಿತ್ತು. 1992 ರಲ್ಲಿ ಭೂಪಾಲ್ ನಲ್ಲಿ ನಡೆದ ಭಾರತೀಯ ಸಮಕಾಲೀನ ಕಲೆ ಎನ್ನುವ ನಾಲ್ಕನೇ ಭಾರತಭವನ ಬಿನಾಲೆಯಲ್ಲಿ ಭಾಗವಹಿಸಿದ್ದು ಅದೇ ವರ್ಷ ಬೆಂಗಳೂರಿನ ವೆಂಕಟಪ್ಪ ಆರ್ಟ ಗ್ಯಾಲರಿಯಲ್ಲಿ ಏರ್ಪಡಿಸಿದ ಮೊದಲನೇ ದಕ್ಷಿಣ ಏಷ್ಯಾ ರಾಷ್ಟ್ರಗಳ ಸಾರ್ಕಸಮ್ಮೇಳನದ ಅಂಗವಾಗಿ ನಡೆದ ಸಮಕಾಲೀನ ಕಲಾ

ಪ್ರದರ್ಶನದಲ್ಲಿ ಇವರು ಭಾಗವಹಿಸಿದ್ದರು. ಅಲ್ಲದೇ ದೆಹಲಿಯಲ್ಲಿ ನಡೆದ ಏಳನೇಯ ರಾಷ್ಟ್ರೀಯ ಕಲಾಮೇಳದಲ್ಲಿ ಇವರು ಕಲಾಪ್ರದರ್ಶನದಲ್ಲಿ ಪ್ರತಿನಿಧಿಸಿದ್ದರು. 1994ರಲ್ಲಿ ಕರ್ನಾಟಕ ಲಲಿತ ಕಲಾ ಅಕಾಡೆಮಿಯವರು ಮುಂಬೈನ ಬಾಂಬೆ ಆರ್ಟ ಸೊಸಾಯಿಟಿಯಲ್ಲಿ ಆಯೋಜಿಸಿದ ಚಿತ್ರಕಲಾ ಪ್ರದರ್ಶನದಲ್ಲಿ ಇವರ ಕಲಾಕೃತಿಯು ಆಯ್ಕೆಗೊಂಡಿತ್ತು. ಇದಲ್ಲದೆ 1995 ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯವರು ನಡೆಸಿದ ಚಿತ್ರಯಾತ್ರೆ ಎನ್ನುವ ಸಂಚಾರಿ ಕಲಾಪ್ರದರ್ಶನದಲ್ಲಿ ಪ್ರದರ್ಶಿತಗೊಂಡಿರುವ ಕಲಾಕೃತಿಗಳಲ್ಲಿ ಖಂಡೇರಾವರ ಒಂದು ಕಲಾಕೃತಿಯು ಇದೆ. ಹೀಗೆ ಖಂಡೇರಾವರು ಹಲವಾರು ರಾಜ್ಯಮಟ್ಟದ ಮತ್ತು ರಾಷ್ಟ್ರಮಟ್ಟದ ಕಲಾಪ್ರದರ್ಶನಗಳಲ್ಲಿ ಕಲಾಕೃತಿಗಳನ್ನು ಕಳಸಿದ್ದಾರೆ. ಅವುಗಳಲ್ಲಿ ಕಲಾಕೃತಿಗಳು ಆಯ್ಕೆಯಾಗಿವೆ. ಅಲ್ಲದೇ ಕೆಲವು ಕಲಾಕೃತಿಗಳಿಗೆ ಪ್ರಶಸ್ತಿಗಳೂ ಬಂದಿವೆ.


ಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದು

ಖಂಡೇರಾವರು ನಾಡಿನ ಹಲವಾರು ಕಡೆಗಳಲ್ಲಿ, ಅನೇಕ ಕಲಾಶಿಬಿರಗಳಲ್ಲಿ ಪಾಲ್ಗೊಂಡಿದ್ದಾರೆ. 1980 ರಲ್ಲಿ ಕಲಬುರ್ಗಿಯ ಕಲಾಪ್ರಗತಿ ಕಲಾವಿದರ ಸಂಘವು ಆಯೋಜಿಸಿದ ಕಲಾಶಿಬಿರದಲ್ಲಿ ಪಾಲ್ಗೊಂಡಿದ್ದರು. ಇದು ಬಿದರನಲ್ಲಿ ನಡೆದಿತ್ತು. ಕರ್ನಾಟಕ ಲಲಿತಕಲಾ ಅಕಾಡೆಮಿಯವರು 1981 ರಲ್ಲಿ ಧಾರವಾಡದಲ್ಲಿ ಮತ್ತು 1982 ರಲ್ಲಿ ಕಲಬುರ್ಗಿಯಲ್ಲಿ ಆಯೋಜಿಸಿದ ಕಲಾವಿದರ ಶಿಬಿರದಲ್ಲಿ ಖಂಡೇರಾವರು ಭಾಗವಹಿಸಿದ್ದರು. 1983 , 86 ಮತ್ತು 88 ನೇ ಸಾಲಿನಲ್ಲಿ ಬೆಂಗಳೂರಿನಲ್ಲಿ ನಡೆದ ಕಲಾಮೇಳದಲ್ಲಿಯೂ ಖಂಡೇರಾವರು ಭಾಗವಹಿಸಿದ್ದರು. 1994 ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯವರು ಪ್ರಾಯೋಜಿಸಿದ ವಿಶ್ವಕನ್ನಡ ಸಮ್ಮೇಳನದ ಅಂಗವಾಗಿ ಮೈಸೂರಿನಲ್ಲಿ ಏರ್ಪಡಿಸಿದ ರಾಜ್ಯಮಟ್ಟದ ಕಲಾಶಿಬಿರದಲ್ಲಿ ಇವರು ಭಾಗವಹಿಸಿದ್ದರು. 1986 ರಲ್ಲಿ ಕನೆಕ್ಷನ್ ವಿತ್ ದ ಮೀಟಿಂಗ್ ಆಫ್ ಸಾರ್ಕ, ಇವರು ಬೆಂಗಳೂರಿನಲ್ಲಿ ಆಯೋಜಿಸಿದ ರಾಷ್ಟ್ರಮಟ್ಟದ ಕಲಾಶಿಬಿರದಲ್ಲಿ ಭಾಗವಹಿಸಿದ್ದರು. 1989ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಬೆಂಗಳೂರಿನಲ್ಲಿ ನೆಹರು ಜನ್ಮಶತಾಬ್ದಿಯ ಅಂಗವಾಗಿ ಏರ್ಪಡಿಸಿದ ರಾಜ್ಯಮಟ್ಟದ ಕಲಾಶಿಬಿರದಲ್ಲಿ ಖಂಡೇರಾವರು ಭಾಗವಹಿಸಿದ್ದರು. 1990 ರಲ್ಲಿ ಮದ್ರಾಸ ಲಲಿತಕಲಾ ಅಕಾಡೆಮಿಯ ರೀಜನಲ್ ಸೆಂಟರ್ ಇವರು ಕರ್ನಾಟಕದ ಉಡುಪಿಯಲ್ಲಿ ಮತ್ತು ಮಣಿಪಾಲದಲ್ಲಿ ಆಯೋಜಿಸಿದ ಕಲಾಶಿಬಿರದಲ್ಲಿ ಇವರು ಪಾಲ್ಗೊಂಡಿದ್ದರು. 1993 ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯವರು ಮಡಿಕೇರಿಯಲ್ಲಿ ಆಯೋಜಿಸಿದ ನಿಸರ್ಗಚಿತ್ರ ಮತ್ತು ಭಾವಚಿತ್ರ ರಚನೆಯ ಕಲಾಶಿಬಿರದಲ್ಲಿ ಖಂಡೇರಾವರು ಭಾಗವಹಿಸಿ ಒಂದು ಭಾವಚಿತ್ರವನ್ನು ಮತ್ತು ಒಂದು ನಿಸರ್ಗ ಚಿತ್ರವನ್ನು ರಚಿಸಿದ್ದರು.

1993 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ನಿತ್ಯನಿರಂತರ ಬಯಲು ಚಿತ್ರಾಲಯ ಸಣಮಗೆರೆ, ಇವರು ಏರ್ಪಡಿಸಿದ ಚಿತ್ರಕಲಾ ಶಿಬಿರದಲ್ಲಿ ಖಂಡೇರಾವರು ಭಾಗವಹಿಸಿದ್ದರು. 1994ರಲ್ಲಿ ಆರ್ಟಿಸ್ಟಕಂಬೈನ್ ಮಂಗಳೂರಿನಲ್ಲಿ ಆಯೋಜಿಸಿದ ಸೀಸ್ಕೇಪ್ ಎನ್ನುವ ಕಲಾಶಿಬಿರದಲ್ಲಿ ಖಂಡೇರಾವರು ಭಾಗವಹಿಸಿ ರಾತ್ರಿಯ ವೇಳೆಯಲ್ಲಿನ ಕಡಲ ತೀರದ ದೃಶ್ಯ ಎನ್ನುವ ಚಿತ್ರವನ್ನು ಚಿತ್ರಿಸಿದ್ದಾರೆ. 1994ರಲ್ಲಿ ಬಿಜಾಪೂರದಲ್ಲಿ ನಡೆದ ರಾಷ್ಟ್ರಮಟ್ಟದ ಕಲಾಶಿಬಿರದಲ್ಲಿ ಖಂಡೇರಾವರು ಪಾಲ್ಗೊಂಡಿದ್ದರು. 1994 ರಲ್ಲಿ ಮಂಗಳೂರಿನ ಸ್ಪಂದನ ಎನ್ನುವ ಕಲಾಸಂಘದವರು ನಿಡ್ಲೆ ಗ್ರಾಮ ಎನ್ನುವಲ್ಲಿ ಏರ್ಪಡಿಸಿದ ರಾಜ್ಯಮಟ್ಟದ ಕಲಾಶಿಬಿರದಲ್ಲಿ ಇವರು ಭಾಗವಹಿಸಿದ್ದರು. 1995ರಲ್ಲಿ ರಾಯಚೂರಿನಲ್ಲಿ ನಡೆದ ಗುಲಬರ್ಗಾ ವಿಭಾಗ ಮಟ್ಟದ ಕಲಾಶಿಬಿರದಲ್ಲಿ ಖಂಡೇರಾವರು ಭಾಗವಹಿಸಿದ್ದರು. 1997ರಲ್ಲಿ ಗದಗನ ವಿಜಯ ಲಲಿತಕಲಾ ಮಹಾವಿದ್ಯಾಲಯ ಇವರು ಏರ್ಪಡಿಸಿದ ಕಲಾಶಿಬಿರದಲ್ಲಿ ಇವರು ಭಾಗವಹಿಸಿದ್ದರು. ಇದು ಗದಗಿನಲ್ಲಿಯೇ ನಡೆದಿತ್ತು. 1999 ರಲ್ಲಿ ಬೆಂಗಳೂರಿನಲ್ಲಿ ಸಂಯೋಜಿತ ಇವರು ಕೆ.ಕೆ. ಹೆಬ್ಬಾರರ ಸ್ಮರಣಾರ್ಥವಾಗಿ ಏರ್ಪಡಿಸಿದ ಕಲಾಶಿಬಿರದಲ್ಲಿ ಖಂಡೇರಾವರು ಭಾಗವಹಿಸಿದ್ದರು. ಅಲ್ಲದೇ ಅದೇ ವರ್ಷ ಹಾಲಭಾವಿಯವರ ಸ್ಮರಣಾರ್ಥಕವಾಗಿ ನಡೆಸಿದ ಕಲಾಶಿಬಿರದಲ್ಲಿಯೂ ಖಂಡೇರಾವರು ಭಾಗವಹಿಸಿದ್ದರು. ಈ ಶಿಬಿರವು ಧಾರವಾಡದಲ್ಲಿ ನಡೆದಿತ್ತು. 2000ನೇ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸರಕಾರ ಇವರು ಬೆಂಗಳೂರಿನಲ್ಲಿ ನಡೆಸಿದ ಕಲಾಶಿಬಿರದಲ್ಲಿ ಖಂಡೇರಾವರು

ಚಿತ್ರ 7 2. ಇಲ್‌ವಾಲ್‌ನಲ್ಲಿ ನಡೆದ ಆಲೋಕ ಕಲಾಶಿಬಿರದಲ್ಲಿ ಭಾಗವಹಿಸಿದ ಸಂದರ್ಭ.










ಚಿತ್ರ 73. ದೆಹಲಿಯಲ್ಲಿ ನಡೆದ ಓರಿಯಂಟೇಶನ್ ಕೋರ್ಸನಲ್ಲಿ ಭಾಗವಹಿಸಿದ್ದು.



ಚಿತ್ರ 74. ಇತರ ಶಿಬಿರಾರ್ಥಿಗಳೊಂದಿಗೆ ಜೆ.ಎಸ್. ಖಂಡೇರಾವ



ಭಾಗವಹಿಸಿದ್ದರು. ಇದಲ್ಲದೇ 2000-01ನೇ ಸಾಲಿನಲ್ಲಿ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಇವರು ಚಿಕ್ಕಮಗಳೂರಿನಲ್ಲಿ ಏರ್ಪಡಿಸಿದ ರಾಷ್ಟ್ರಮಟ್ಟದ ಕಲಾಶಿಬಿರದಲ್ಲಿ ಖಂಡೇರಾವರು ಭಾಗವಹಿಸಿದ್ದರು. ಅಲ್ಲಿ ಒಂದು ವಿಂಡೋಸರಣಿಯ ಸಂಯೋಜನಾ ಕಲಾಕೃತಿ ಮತ್ತು ಒಂದು ಭಾವಚಿತ್ರವನ್ನು ಚಿತ್ರಿಸಿದರು. ಹೀಗೆ ಖಂಡೇರಾವರು ಹಲ ವಾರು ರಾಜ್ಯ ಮತ್ತು ರಾಷ್ಟ್ರಮಟ್ಟದ ಕಲಾಶಿಬಿರದಲ್ಲಿ ಭಾಗವಹಿಸಿದ್ದಾರೆ.

ವಿಚಾರ ಸಂಕೀರ್ಣದಲ್ಲಿ ಭಾಗವಹಿಸಿದ್ದು

ಖಂಡೇರಾವರು ನಾಡಿನ ಅನೇಕ ಕಡೆಗಳಲ್ಲಿ ನಡೆದ ವಿಚಾರ ಸಂಕೀರ್ಣಗಳಲ್ಲಿ ಭಾಗವಹಿಸಿದ್ದಾರೆ. ಅವುಗಳಲ್ಲಿ ಕೆಲವು ಮುಖ್ಯವಾದವುಗಳನ್ನು ಇಲ್ಲಿ ಹೆಸರಿಸಲಾಗಿದೆ. 1994 ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ನಡೆದ ವಿಚಾರ ಸಂಕೀರ್ಣದಲ್ಲಿ ಕರ್ನಾಟಕದಲ್ಲಿ ಕಲಾಶಿಕ್ಷಣ ಎನ್ನುವ ವಿಷಯದ ಮೇಲೆ ಖಂಡೇರಾವರು ಉಪನ್ಯಾಸವನ್ನು ನೀಡಿದ್ದರು. ಅದೇ ವರ್ಷ ಗುಲಬರ್ಗಾ ವಿಶ್ವವಿದ್ಯಾಲಯದವರು ಚಿಟಗುಪ್ಪಾದಲ್ಲಿ ಏರ್ಪಡಿಸಿದ ವಿಚಾರ ಸಂಕೀರ್ಣದಲ್ಲಿ ಖಂಡೇರಾ ವರು ಕಲೆಯ ಬಗ್ಗೆ ಉಪನ್ಯಾಸವನ್ನು ನೀಡಿದರು. 1995 ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯವರು ಏರ್ಪಡಿಸಿದ ವಿಚಾರಸಂಕೀರ್ಣದಲ್ಲಿ ಖಂಡೇರಾವರು ಉನ್ನತ ಕಲಾಶಿಕ್ಷಣ ಎನ್ನುವ ವಿಷಯದ ಮೇಲೆ ಉಪನ್ಯಾಸವನ್ನು ನೀಡಿದ್ದಾರೆ.

ಆಮಂತ್ರಿತ ಉಪನ್ಯಾಸಕರಾಗಿ

ಖಂಡೇರಾವರು ನಾಡಿನ ಹಲವಾರು ಕಡೆಗಳಲ್ಲಿ ಆಮಂತ್ರಿತ ಉಪನ್ಯಾಸಕರಾಗಿ ಹೋಗಿದ್ದಾರೆ. ಈ ಒಂದು ಸಂದರ್ಭದಲ್ಲಿ ಕಲೆಗೆ ಸಂಬಂಧ ಪಟ್ಟಂತೆ ಉಪನ್ಯಾಸಗಳನ್ನು ನೀಡಿದ್ದಾರಲ್ಲದೆ ಕಲಾಪ್ರಾತ್ಯಕ್ಷಿಕೆಗಳನ್ನು ಮಾಡಿ ಬಂದವರಾ ಗಿದ್ದಾರೆ. ಅವರು ಕಲಾಪ್ರಾತ್ಯಕ್ಷಿಕೆಗಳನ್ನು ಮಾಡುವಾಗ ಸಂಯೋಜನಾ ಚಿತ್ರ, ನಿಸರ್ಗಚಿತ್ರ ಮತ್ತು ಹೆಚ್ಚಾಗಿ ಭಾವಚಿತ್ರಗ ಳನ್ನು ಚಿತ್ರಿಸಿದ್ದಾರೆ. ಅಂಥವುಗಳಲ್ಲಿ ಈ ಕೆಳಗಿನವುಗಳನ್ನು ಪ್ರಮುಖವಾಗಿ ಹೆಸರಿಸಬಹುದು. 1995,87,95,99ರಲ್ಲಿ ದಾವಣಗೆರೆಯ ಸ್ಕೂಲ್ ಆಫ್ ಆರ್ಟ ಆ್ಯಂಡ ಫೈನ ಆರ್ಟ ಎಂಬಲ್ಲಿ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆಗಳನ್ನು ಮಾಡಿ ಬಂದಿ ದವರಾಗಿದ್ದಾರೆ. 1976,87,88,93, 2000 ಈ ವರ್ಷಗಳಲ್ಲಿ ಬೆಂಗಳೂರಿನ ಕೇನ್ ಕಲಾಶಾಲೆಗೆ ಹೋಗಿ ಅಲ್ಲಿ ಉಪನ್ಯಾಸ ಮತ್ತು ಕೆಲವು ಸಲ ಕಲಾಪ್ರಾತ್ಯಕ್ಷಿಕೆಗಳನ್ನು ಮಾಡಿ ಬಂದಿದ್ದಾರೆ.

1988, 91,98ರಲ್ಲಿ ಧಾರವಾಡದ ಸ್ಕೂಲ್ ಆಫ್ ಆರ್ಟನಲ್ಲಿಯೂ ಇವರನ್ನು ವಿಶೇಷ ಉಪನ್ಯಾಸಕರಾಗಿ ಕರೆಸಿದ್ದರು. ಹುಬ್ಬಳ್ಳಿಯ ವಿಜಯಮಹಾಂತೇಶ ಲಲಿತಕಲಾ ಮಹಾವಿದ್ಯಾಲಯದಲ್ಲಿ 1980,84,88,89 ಮತ್ತು 94 ರಲ್ಲಿ ಇವರು ವಿಶೇಷ ಉಪನ್ಯಾಸಕರಾಗಿ ಹೋಗಿ ಅಲ್ಲಿ ಉಪನ್ಯಾಸವಲ್ಲದೇ ಕಲಾ ಪ್ರಾತ್ಯಕ್ಷಿಕೆಗಳನ್ನು ಮಾಡಿ ಬಂದಿದ್ದಾರೆ. ಶ್ರೀ ಸಿದ್ದೇಶ್ವರ ಕಲಾ ಮಂದಿರ ವಿಜಾಪೂರ ಇಲ್ಲಿ 1993,99 ನೇ ಸಾಲಿನಲ್ಲಿ ವಿಶೇಷ ಆಮಂತ್ರಿತ ಉಪನ್ಯಾಸಕರಾಗಿ ಹೋಗಿದ್ದರು. ಇದಲ್ಲದೇ ರಾಯಚೂರು ಜಿಲ್ಲೆಯ ಚಿತ್ರಕಲಾವಿದರ ಸಂಘದ ವತಿಯಿಂದ ನಡೆದ ಕಾರ್ಯಾಗಾರದಲ್ಲಿ ಆಮಂತ್ರಿತ ಉಪನ್ಯಾಸಕರಾಗಿ ಹೋಗಿದ್ದಾರೆ. ಇದು 1994ನೇ ಸಾಲಿನಲ್ಲಿ ನಡೆದಿತ್ತು. 1993ರಲ್ಲಿ ರಾಯಚೂರಿನ ನೂತನ ಲಲಿತ ಕಲಾ ಮಹಾವಿದ್ಯಾಲಯದವರು ಇವರನ್ನು ಆಮಂತ್ರಿತ ಉಪನ್ಯಾಸಕರಾಗಿ ಕರೆಸಿದ್ದರು. ಇದಲ್ಲದೇ ರಾಯ ಚೂರಿನ ಇನೊಂದು ಕಲಾಶಾಲೆಯಾದ ಶ್ರೀಗುರು ಕಲಾಮಂದಿರದಲ್ಲಿ 1996ರಲ್ಲಿ ಇವರು ಆಮಂತ್ರಿತ ಉಪನ್ಯಾಸ ಕರಾಗಿ ಹೋಗಿದ್ದರು. 1996 ರಲ್ಲಿ ಬೆಳಗಾವಿಯಲ್ಲಿ ನಡೆದ ಸಪ್ತರಂಗ ಕಲಾಮೇಳದಲ್ಲಿ ವಿಶೇಷ ಆಮಂತ್ರಿತ ಉಪನ್ಯಾ ಸಕರಾಗಿ ಖಂಡೇರಾವರನ್ನು ಕರೆಸಿದ್ದರು. 1997 ರಲ್ಲಿ ಅಥಣಿಯ ಕಲಾಶಾಲೆಗೆ ಇವರನ್ನು ಆಮಂತ್ರಿತ ಉಪನ್ಯಾಸಕರಾ ಗಿ ಕರೆಸಿದ್ದಾಗ ಅಲ್ಲಿ ಭಾವಚಿತ್ರದ ಪ್ರಾತ್ಯಕ್ಷಿಕೆಯನ್ನು ಮಾಡಿ ಬಂದಿದ್ದಾರೆ. 1999 ರಲ್ಲಿ ಸಂಕೇಶ್ವರದ ಕಲಾಮಂದಿರಕ್ಕೆ ಆಮಂತ್ರಿತ ಉಪನ್ಯಾಸಕರಾಗಿ ಹೋಗಿದ್ದಾಗ ಅಲ್ಲಿ ಉಪನ್ಯಾಸದೊಂದಿಗೆ ಒಂದು ಭಾವಚಿತ್ರದಿಂದ ಕೂಡಿದ ಪ್ರಾತ್ಯಕ್ಷಿಕೆ ಯನ್ನು ಮಾಡಿ ಬಂದಿದ್ದಾರೆ. 1999ರಲ್ಲಿ ವಿಜಾಪೂರದ ಚಿತ್ರಕಲಾಮಹಾವಿದ್ಯಾಲಯಕ್ಕೆ ಆಮಂತ್ರಿತಉಪನ್ಯಾಸಕರಾಗಿ

ಹೋಗಿದ್ದಾಗ, ಅಲ್ಲೂ ಒಂದು ಸಂಯೋಜನೆಯಿಂದ ಕೂಡಿದ ಕಲಾ ಪ್ರಾತ್ಯಕ್ಷಿಕೆಯನ್ನು ಮಾಡಿದ್ದಾರೆ. ಅದೇ ವರ್ಷ ಮೂಡಬಿದ್ರೆಯ ಲಲಿತಕಲಾ ಮಹಾವಿದ್ಯಾಲಯದವರು ಇವರನ್ನು ಆಮಂತ್ರಿತ ಉಪನ್ಯಾಸಕರಾಗಿ ಕರೆಸಿದ್ದಾಗ ಅಲ್ಲಿ ಉಪನ್ಯಾಸದೊಂದಿಗೆ ಕಲಾ ಪ್ರಾತ್ಯಕ್ಷಿಕೆಯನ್ನು ಮಾಡಿ ಬಂದಿದ್ದಾರೆ. ಅದೇ ವರ್ಷ ಜಗಳೂರಿನ ಲಲಿತಕಲಾ ಮಹಾವಿದ್ಯಾಲಯದಲ್ಲಿ ಭಾವಚಿತ್ರದ ಒಂದು ಕಲಾ ಪ್ರಾತ್ಯಕ್ಷಿಕೆಯನ್ನು ಮಾಡಿದ್ದಾರೆ. 1998 ರಲ್ಲಿ ಮೈಸೂರಿನ ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿಯಲ್ಲಿ ಆಮತ್ರಿತ ಉಪನ್ಯಾಸಕರಾಗಿ ಹೋದಾಗ ಉಪನ್ಯಾಸದೊಂದಿಗೆ ಭಾವಚಿತ್ರದ ಒಂದು ಪ್ರಾತ್ಯಕ್ಷಿಕೆಯನ್ನು ಮಾಡಿ ಬಂದಿದ್ದಾರೆ.

ಕಲಬುರ್ಗಿಯ ದಿ ಆರ್ಟ ಇಂಟಿಗ್ರೇಡಷನ್ ಕಲಾಶಾಲೆಯವರು ಇವರನ್ನು ಆಮಂತ್ರಿತ ಉಪನ್ಯಾಸಕರಾಗಿ ಕರೆಸಿದಾಗ ಅಲ್ಲಿ ಭಾವಚಿತ್ರದ ಕಲಾಪ್ರಾತ್ಯಕ್ಷಿಕೆಯನ್ನು ಮಾಡಿ ಬಂದಿದ್ದಾರೆ ಇದಲ್ಲದೇ ಇತ್ತೀಚಿಗೆ ಹಂಪಿ ಕನ್ನಡ ವಿಶ್ವವಿದ್ಯಾಲಯವು ಏರ್ಪಡಿಸಿದ ಪುನರ್ಮನನ ಶಿಬಿರದಲ್ಲಿ ಇವರು ವಿಶೇಷ ಉಪನ್ಯಾಸಕರಾಗಿ ಹೋಗಿ ಅಲ್ಲಿ ರಾಗಮಾಲಾ ಚಿತ್ರಕಲೆಯ ಕುರಿತು ಉಪನ್ಯಾಸವನ್ನು ನೀಡಿದ್ದಾರೆ. ಮತ್ತು ಇದೇ ವಿಶ್ವವಿದ್ಯಾಲಯದಡಿಯಲ್ಲಿ ಬರುವ ಶಿಲ್ಪ ಮತ್ತು ವರ್ಣಚಿತ್ರಕಲಾವಿಭಾಗಕ್ಕೆ ಇವರನ್ನು ಆಮಂತ್ರಿತ ಉಪನ್ಯಾಸಕರಾಗಿ ಕರೆಸಿದಾಗ ಅಲ್ಲಿ ಭಾವಚಿತ್ರದಿಂದ ಕೂಡಿದ ಕಲಾ ಪ್ರಾತ್ಯಕ್ಷಿಕೆಯನ್ನು ಮಾಡಿದ್ದಾರೆ. ಹೀಗೆ ಖಂಡೇರಾವರು ನಾಡಿನ ಹಲವಾರು ಕಡೆಗಳಲ್ಲಿ ಆಮಂತ್ರಿತ ಉಪನ್ಯಾಸಕರಾಗಿ ಹೋಗಿ ಅಲ್ಲಿ ಉಪನ್ಯಾಸವಲ್ಲದೇ ನಿಸರ್ಗಚಿತ್ರ ಸಂಯೋಜನಾ ಚಿತ್ರ ಮತ್ತು ಭಾವ ಚಿತ್ರಗಳಿಂದ ಕೂಡಿದ ಕಲಾ ಪ್ರಾತ್ಯಕ್ಷಿಕೆಗಳನ್ನು ಮಾಡಿ ಬಂದವರಾಗಿದ್ದಾರೆ.

ಕಲಾ ಶಿಬಿರಗಳ ನಿರ್ದೇಶಕರಾಗಿ

ಖಂಡೇರಾವರು ರಾಜ್ಯ ಮತ್ತು ರಾಷ್ಟ್ರಮಟ್ಟದ ಕಲಾಶಿಬಿರಗಳ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ. 1990 ರಲ್ಲಿ ಕಲಬುರ್ಗಿಯ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದ ಸ್ನಾತಕೋತ್ತರ ಲಲಿತಕಲಾ ವಿಭಾಗದಲ್ಲಿ ಆಯೋಜಿಸಿದ ಭಾವಚಿತ್ರ ರಚನಾ ಕಲಾ ಕಾರ್ಯಾಗಾರದಲ್ಲಿ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದವರಾಗಿದ್ದಾರೆ. ಈ ಕಾರ್ಯಾಗಾರವನ್ನು ನಾಗಪುರದ ಸೌತ್ ಸೆಂಟ್ರಲ್ ಝೋನ್ ಕಲ್ಚರಲ್ ಸೆಂಟರ್ ಇವರು ಪ್ರಾಯೋಜಿಸಿದ್ದರು. 1991 ರಲ್ಲಿ ಮೈಸೂರಿನ ಇಲ್‌ವಾಲ್ ಅಲೊಕ್ ನಲ್ಲಿ ಆಯೋಜಿಸಿದ ಯುವ ಕಲಾವಿದರ ಶಿಬಿರದ ನಿರ್ದೇಶಕರಾಗಿ ಖಂಡೇರಾವರು ಕಾರ್ಯನಿರ್ವಹಿಸಿದ್ದರು. ಇದನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯವರು ಆಯೋಜಿಸಿದ್ದರು. 1994 ರಲ್ಲಿ ಬಿಜಾಪೂರದ ಎಸ್.ಎಸ್. ಆರ್ಟ ಇನ್ಸಿಟ್ಯೂಟ್ ನಲ್ಲಿ ಬಿಜಾಪೂರದ ಬಿ.ಎಲ್.ಡಿ. ಶಿಕ್ಷಣ ಸಂಸ್ಥೆಯವರು ಆಯೋಜಿಸಿದ ರಾಷ್ಟ್ರಮಟ್ಟದ ಕಲಾಶಿಬಿರದಲ್ಲಿ ಖಂಡೇರಾವರು ನಿರ್ದೇಶಕರಾಗಿ ಕೆಲಸಮಾಡಿದ್ದಾರೆ. 1995 ರಲ್ಲಿ ಕಲಬುರ್ಗಿಯ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದ ಸ್ನಾತಕೋತ್ತರ ಲಲಿತಕಲಾವಿಭಾಗದಲ್ಲಿ ಆಯೋಜಿಸಿದ ರಾಷ್ಟ್ರಮಟ್ಟದ ಕಲಾಶಿಬಿರದಲ್ಲಿ ಖಂಡೇರಾವರು ಕಲಾಶಿಬಿರದ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ. ಸುಮಾರು ಇಪ್ಪತ್ತು ಜನ ಕಲಾವಿದರು ಈ ಶಿಬಿರಕ್ಕೆ ದೇಶದ ನಾನಾ ಕಡೆಗಳಿಂದ ಬಂದಿದ್ದರು. ಸುಮಾರು ಇಪ್ಪೈದರಿಂದ ಒಂದು ತಿಂಗಳವರೆಗೆ ಈ ಶಿಬಿರವು ನಡೆಯಿತು. ಈ ಶಿಬಿರದಲ್ಲಿ ಚಿತ್ರಿತಗೊಂಡ ಎಲ್ಲಾ ಕಲಾಕೃತಿಗಳು ಶರಣರ ಬದುಕಿಗೆ ಸಂಬಂಧಪಟ್ಟವುಗಳಾಗಿದ್ದವು. ಅವು ವಾಸ್ತವ ರೀತಿಯಿಂದ ಕೂಡಿದ ಕಲಾಕೃತಿಗಳಾಗಿವೆ. 1997ರಲ್ಲಿ ಹುಬ್ಬಳ್ಳಿಯ ವಿ.ವಿ.ಎಲ್.ಕೆ ಮಹಾವಿದ್ಯಾಲಯ ಇವರು ಆಯೋಜಿಸಿದ ಭಾವಚಿತ್ರ ರಚನೆಯ ಕಾರ್ಯಗಾರರಲ್ಲಿ ಖಂಡೇರಾವರು ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ ಸೃಜನಶೀಲ ವೇದಿಕೆಯವರು ರಾಯಚೂರಿನಲ್ಲಿ ಆಯೋಜಿಸಿದ ರಾಜ್ಯಮಟ್ಟದ ಕಲಾ ಶಿಬಿರಕ್ಕೆ ಖಂಡೇರಾವರು ನಿರ್ದೇಶಕರಾಗಿ ಕೆಲಸ ಮಾಡಿದ್ದರು. ಇದಲ್ಲದೆ 2001-02 ನೇ ಸಾಲಿನಲ್ಲಿ ಮೈಸೂರಿನಲ್ಲಿ ನಡೆದ ಯುವ ಕಲಾವಿದರ ಕಲಾಶಿಬಿರಕ್ಕೆ ಖಂಡೇರಾವರು ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ. ಇದನ್ನು ಕರ್ನಾಟಕ ಲಲಿತ ಕಲಾ ಅಕಾಡೆಮಿಯವರು ಆಯೋಜಿಸಿದ್ದರು. ಹೀಗೆ ಖಂಡೇರಾವರು ಹಲವಾರು ರೀತಿಯಲ್ಲಿ ಕಲಾಶಿಬಿರಗಳ ಮತ್ತು ಕಾರ್ಯಾಗಾರಗಳ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದವರಾಗಿದ್ದಾರೆ.

ಕಲಾಪ್ರದರ್ಶನಗಳ ನಿರ್ಣಾಯಕರಾಗಿ

ಖಂಡೇರಾವರು ಅನೇಕ ರಾಜ್ಯ ಮತ್ತು ರಾಷ್ಟ್ರಮಟ್ಟದ ಕಲಾಪ್ರದರ್ಶನದಲ್ಲಿ ನಿರ್ಣಾಯಕರಾಗಿ ಸೇವೆಸಲ್ಲಿಸಿದವರಾಗಿದ್ದಾರೆ. ಇವರು 1979ರಲ್ಲಿ ಕಲಬುರ್ಗಿಯ ಎಂ. ಆರ್.ಎಂ. ಸಿ ಮೆಡಿಕಲ್ ಕಾಲೇಜಿನಲ್ಲಿ ನಡೆದ ನಾಲ್ಕನೇಯ ರಾಷ್ಟ್ರಮಟ್ಟದ ಇಂಟರ್ ಮೆಡಿಕಲ್ ಚಿತ್ರಕಲಾ ಪ್ರದರ್ಶನದಲ್ಲಿ ನಿರ್ಣಾಯಕರಾಗಿ ಕೆಲಸ ಮಾಡಿದ್ದಾರೆ. 1984ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ರಾಜ್ಯಮಟ್ಟದ ಕಲಾಪ್ರದರ್ಶನದಲ್ಲಿ ಇವರು ಕಲಾಪ್ರದರ್ಶನದ ನಿರ್ಣಾಯಕರಾಗಿ ಹೋಗಿದ್ದಾರೆ. 1987 ಮತ್ತು 1992ರಲ್ಲಿ ಕರ್ನಾಟಕ ಲಲಿತ ಕಲಾ ಅಕಾಡೆಮಿಯವರು ಏರ್ಪಡಿಸುವ ವಾರ್ಷಿಕ ಕಲಾ ಪ್ರದರ್ಶನಕ್ಕೆ ಇವರನ್ನು ನಿರ್ಣಾಯಕರನ್ನಾಗಿ ಕರೆಸಿದ್ದರು. 1996 ರಲ್ಲಿ ನಾಗಪುರದಲ್ಲಿ ಸೌತ್ ಸೆಂಟ್ರಲ್ ಝೋನ್ ಕಲ್ಚರಲ್ ಸೆಂಟರ ನಾಗಪುರ ಇವರು ಆಯೋಜಿಸಿದ ಐದನೇ ರಾಷ್ಟ್ರಮಟ್ಟದ ಕಲಾಪ್ರದರ್ಶನಕ್ಕೆ ಕಲಾಪ್ರದರ್ಶನದ ನಿರ್ಣಾಯಕರಾಗಿ ಹೋಗಿ ಬಂದವರಾಗಿದ್ದಾರೆ. 1994 ರಲ್ಲಿ ಬೆಂಗಳೂರಿನಲ್ಲಿ ನಡೆದ ರಾಜ್ಯ ಮಟ್ಟದ ಕಲಾ ಪ್ರದರ್ಶನಕ್ಕೆ ಇವರನ್ನು ನಿರ್ಣಾಯಕರನ್ನಾಗಿ ಕರೆಸಿದ್ದರು. ಈ ಕಲಾ ಪ್ರದರ್ಶನವನ್ನು ರಾಜ್ಯ ಚಿತ್ರಕಲಾ ಶಿಕ್ಷಕರ ಸಂಘದವರು ಏರ್ಪಡಿಸಿದ್ದರು. 1991 ರಲ್ಲಿ ಹುಬ್ಬಳ್ಳಿಯಲ್ಲಿ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯ ಹುಬ್ಬಳ್ಳಿ ಇವರು ಆಯೋಜಿಸಿದ ರಾಜ್ಯ ಮಟ್ಟದ ಜಲವರ್ಣ ಚಿತ್ರಕಲಾ ಪ್ರದರ್ಶನಕ್ಕೆ ಇವರನ್ನು ನಿರ್ಣಾಯಕರಾಗಿ ಕರೆಸಿದ್ದರು. 1992 ರಲ್ಲಿ ಕೊಪ್ಪಳದಲ್ಲಿ ರಾಷ್ಟ್ರಮಟ್ಟದ ಸಾಹಿತ್ಯ ಸಮ್ಮೇಳನದ ಅಂಗವಾಗಿ ಏರ್ಪಡಿಸಿದ ಚಿತ್ರಕಲಾ ಪ್ರದರ್ಶನದಲ್ಲಿಯೂ ಇವರು ಕಲಾಪ್ರದರ್ಶನದ ನಿರ್ಣಾಯಕರಾಗಿ ಕೆಲಸ ಮಾಡಿ ಬಂದವರಾಗಿದ್ದಾರೆ. 1998 ರಲ್ಲಿ ರಾಜ್ಯ ಚಿತ್ರ ಕಲಾ ಉಪನ್ಯಾಸಕರ ಸಂಘದವರು ಏರ್ಪಡಿಸಿದ ಕಲಾಪ್ರದರ್ಶನದಲ್ಲಿ ಖಂಡೇರಾವರು ನಿರ್ಣಾಯ ಕರಾಗಿ ಕಾರ್ಯ ನಿರ್ವಹಿಸಿದ್ದಾರೆ. 1998, 2001 ರಲ್ಲಿ ಮುಂಬೈ ಯಲ್ಲಿ ಬಾಂಬೆ ಆರ್ಟ ಸೊಸಾಯಿಟಿ ಇವರು ಆಯೋಜಿಸಿದ ರಾಷ್ಟ್ರಮಟ್ಟದ ಕಲಾಪ್ರದರ್ಶನದಲ್ಲಿ ಇವರನ್ನು ಕಲಾಪ್ರದರ್ಶನದ ನಿರ್ಣಾಯಕರಾಗಿ ಕರೆಸಿದ್ದರು. 2000 ನೇ ಇಸವಿಯಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಆಯೋಜಿಸಿದ ಜನಪದ ಆಚರಣೆಗಳು ಎನ್ನುವ ರಾಜ್ಯಮಟ್ಟದ ಕಲಾಪ್ರದರ್ಶನದಲ್ಲಿ ಇವರು ಕಲಾ ಪ್ರದರ್ಶನದ ನಿರ್ಣಾಯಕರಾಗಿ ಕಾರ್ಯ ನಿರ್ವಹಿಸಿದವರಾಗಿದ್ದಾರೆ. ಹೀಗೆ ಖಂಡೇರಾವರು ನಾಡಿನ ಅನೇಕ ಕಡೆಗಳಲ್ಲಿ ಕಲಾಪ್ರದರ್ಶನಗಳಿಗೆ ನಿರ್ಣಾಯಕರಾಗಿ ಹೋಗಿ ಅಲ್ಲಿ ನಿಷ್ಪಕ್ಷಪಾತದಿಂದ ಕಾರ್ಯನಿರ್ವಹಿಸಿ ಬಂದವರಾಗಿದ್ದಾರೆ. ಹೀಗಾಗಿ ಇವರು ಚಿತ್ರಕಲೆಯ ಎಲ್ಲಾ ವಲಯಗಳು ತಮ್ಮ ಅಮೂಲ್ಯವಾದ ಅನುಪಮ ಸೇವೆಯನ್ನು ಈ ನಾಡಿಗಾಗಿ ಸಲ್ಲಿಸಿದ್ದಾರೆ. ಇಂಥವರಿಗೆ ಈ ನಾಡಿನಲ್ಲಿ ಹಲವಾರು ಕಡೆಗಳಲ್ಲಿ ಇವರು ಸಲ್ಲಿಸಿದ ಅಮೂಲ್ಯ ಸೇವೆಯನ್ನು ಪರಿಗಣಿಸಿ ಹಲವಾರು ಸಂಘ ಸಂಸ್ಥೆಗಳು ಇವರನ್ನು ಸನ್ಮಾನಿಸಿ ಗೌರವಿಸಿವೆ. ಇದಲ್ಲದೇ ಖಂಡೇರಾವರಿಗೆ ಹಲವಾರು ಪ್ರಶಸ್ತಿ ಮತ್ತು ಗೌರವ ಪ್ರಶಸ್ತಿಗಳನ್ನು ಲಭಿಸಿವೆ.

ಖಂಡೇರಾವರಿಗೆ ಸಂದ ಪ್ರಶಸ್ತಿಗಳು

ಖಂಡೇರಾವರು ಅನೇಕ ರಾಜ್ಯ ಮತ್ತು ರಾಷ್ಟ್ರಮಟ್ಟದ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಅವುಗಳಲ್ಲಿ ಇವರು ಕಳುಹಿಸಿದ ಕಲಾಕೃತಿಗಳು ಪ್ರದರ್ಶನಕ್ಕೆ ಆಯ್ಕೆಯಾಗಿವೆಯಲ್ಲದೇ ,ಅವುಗಳಲ್ಲಿ ಹಲವಾರು ಕಲಾಕೃತಿಗಳು ಇವರಿಗೆ ಪ್ರಶಸ್ತಿಯನ್ನು ಇವರಿಗೆ ತಂದು ಕೊಟ್ಟಿವೆ. ಅಂಥವುಗಳಲ್ಲಿ ಪ್ರಮುಖವಾಗಿ ಈ ಕೆಳಗಿನವುಗಳನ್ನು ಹೆಸರಿಸಬಹುದು. ಕರ್ನಾಟಕ ಲಲಿತಕಲಾ ಅಕಾಡೆಮಿಯವರು ಏರ್ಪಡಿಸುವ ವಾರ್ಷಿಕ ಕಲಾಪ್ರದರ್ಶನದಲ್ಲಿ ಖಂಡೇರಾವರು 1968,69,70 ಹೀಗೆ ಸತತ ಮೂರು ಬಾರಿ ಪ್ರಶಸ್ತಿಯನ್ನು ಪಡೆದರಲ್ಲದೆ ಮುಂದೆ 1980ರಲ್ಲಿ ಮತ್ತೊಮ್ಮೆ ಹಿಗೆ ಒಟ್ಟು ನಾಲ್ಕು ಬಾರಿ ಲಲಿತಕಲಾ ಅಕಾಡೆಮಿಯಿಂದ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.ಮೊದಲ ಮೂರು ಪ್ರಶಸ್ತಿಗಳು ಇವರ ನಿಸರ್ಗಚಿತ್ರಗಳಿಗೆ ಲಭಿಸಿವೆ. ಅನಂತರದ 1980ರಲ್ಲಿಯ ಪ್ರಶಸ್ತಿಯು ಕ್ರಿಯೇಟಿವ್ ಲ್ಯಾಂಡಸ್ಕೇಪ್ ಎನ್ನುವ ಕಲಾಕೃತಿಗೆ ದೊರೆತಿದೆ. 1982ರಲ್ಲಿ ಹುಬ್ಬಳ್ಳಿಯ ಮುನಸಿಪಲ್ ಕಾರ್ಪೊರೇಶನ್ ಇವರು ಏರ್ಪಡಿಸಿದ ರಾಜ್ಯ ಮಟ್ಟದ ಚಿತ್ರಕಲಾ ಪ್ರದರ್ಶನದಲ್ಲಿ ಇವರಿಗೆ ಪ್ರಶಸ್ತಿಯು ಲಭಿಸಿದೆ. 989-90 ನೇ ಸಾಲಿನಲ್ಲಿ ಇಂಟರನ್ಯಾಷನಲ್ ಏರಪೋರ್ಟ



ಚಿತ್ರ 75. ನಾಗಪೂರ ಕಲಾಪ್ರದರ್ಶದಲ್ಲಿ ನಿರ್ಣಾಯಕರಾಗಿ ಕಲಾಕೃತಿಗಳನ್ನು ಆಯ್ಕೆ ಮಾಡುತ್ತಿರುವ ದೃಶ್ಯ.



ಚಿತ್ರ 76. ಕಲಾಕೃತಿಗಳನ್ನು ವೀಕ್ಷಿಸುತ್ತಿರುವುದು.





ಅಥಾರಿಟಿ ಆಫ್ ಇಂಡಿಯಾ ನವದೇಹಲಿ ಇವರು ನಹರುರವರ ಜನ್ಮಶತಾಬ್ದಿ ವರ್ಷದಂದು ಏರ್ಪಡಿಸಿದ ನೆಹರು ದ ವಿಸಿನರಿ ಎನ್ನುವ ರಾಷ್ಟ್ರಮಟ್ಟದ ಕಲಾಪ್ರದರ್ಶನದಲ್ಲಿ ಖಂಡೇರಾವರಿಗೆ ಬಹುಮಾನ ದೊರೆತಿದೆ.

ಗೌರವ ಪ್ರಶಸ್ತಿಗಳು: ಖಂಡೇರಾವರು ಚಿತ್ರಕಲಾಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದನು ಕಂಡು ನಾಡಿನ ಹಲವಾರು ಸಂಘ ಸಂಸ್ಥೆಗಳು ಇವರಿಗೆ ಗೌರವ ಪ್ರಶಸ್ತಿಗಳನ್ನು ನೀಡಿವೆ. 1988ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯವರು ಖಂಡೇರಾವರು ಈ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಇವರಿಗೆ ಅಕಾಡೆಮಿಯ ಗೌರವ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿದೆ. 1995 ರಲ್ಲಿ ಬೆಂಗಳೂರಿನಲ್ಲಿ ಎಂಟನೇ ರಾಷ್ಟ್ರೀಯ ಕಲಾಮೇಳದ ಸಂದರ್ಭದಲ್ಲಿ ಲಲಿತ ಕಲಾ ಅಕಾಡೆಮಿ ನವದೇಹಲಿ ಇವರು ಖಂಡೇರಾವರಿಗೆ ಗೌರವ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿದ್ದಾರೆ. ಈ ಸಮಾರಂಭವು ಬೆಂಗಳೂರಿನ ರವಿಂದ್ರ ಕಲಾ ಕ್ಷೇತ್ರದಲ್ಲಿ ನಡೆದಿತ್ತು. ಆದೇವರ್ಷ ಕರ್ನಾಟಕ ಸರಕಾರದ ಅತ್ಯುನ್ನತ ಪ್ರಶಸ್ತಿಯಾದ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು 1995 ನವೆಂಬರ 1 ರಂದು ಖಂಡೇರಾವರಿಗೆ ನೀಡಿ ಗೌರವಿಸಲಾಯಿತು. ಈ ಪ್ರಶಸ್ತಿಯನ್ನು ಆಗಿನ ಕರ್ನಾಟಕ ಸರಕಾರದ ಮುಖ್ಯಮಂತ್ರಿಗಳಾದ ಹೆಚ್.ಡಿ ದೇವೆಗೌಡರವರು ಇದನ್ನು ಪ್ರಧಾನ ಮಾಡಿದ್ದರು. ಕಲಬುರ್ಗಿಯ ಉದಯೊನ್ಮುಖ ಯುವ ಬರಹಗಾರರ ಬಳಗ ಇವರು ಪ್ರತಿವರ್ಷ ನೀಡುವ ಕಾಯಕ ಸನ್ಮಾನ ಪ್ರಶಸ್ತಿಯನ್ನು 1997 ರಲ್ಲಿ ಖಂಡೇರಾವರಿಗೆ ನೀಡಿ ಗೌರವಿಸಿದರು. ಬೆಂಗಳೂರಿನ ಸಂಯೋಜಿತ ಸಮಕಾಲೀನ ಕಲಾವಿದರ ಸಂಘ ಇವರು ಪ್ರತಿಷ್ಠಾಪಿಸಿದ ಜಿ. ಎಸ್. ಶೆಣೈ ಸ್ಮಾರಕ ಪ್ರಶಸ್ತಿ ಎನ್ನುವ ಗೌರವ ಪ್ರಶಸ್ತಿಯನ್ನು ಖಂಡೇರಾವರಿಗೆ ನೀಡಿ ಗೌರವಿಸಿದ್ದಾರೆ. ಕಲಬುರ್ಗಿಯ ಶ್ರೇಷ್ಟ ಉದ್ದಿನಮೆದಾರರಾದ ಶ್ರೀ ಎಸ್. ಎಸ್. ಪಾಟೀಲರು ತಮ್ಮ ತಂದೆಯವರ ಸ್ಮರಣಾರ್ಥವಾಗಿ ಸ್ಥಾಪಿಸಿದ ಎಸ್.ಆರ್. ಪಾಟೀಲ ಪ್ರತಿಷ್ಠಾನ ಪ್ರಶಸ್ತಿಯನ್ನು 1999ರಲ್ಲಿ ಖಂಡೇರಾವರಿಗೆ ನೀಡಿ ಗೌರವಿಸಿದ್ದಾರೆ. ಇದಲ್ಲದೆ 2002ನೇ ಸಾಲಿನಲ್ಲಿ ಗದಗಿನಲ್ಲಿ ಖ್ಯಾತ ಕಲಾವಿದ ದಿವಂಗತ ಟಿ.ಪಿ. ಅಕ್ಕಿಯವರ ಸ್ಮರಣಾರ್ಥವಾಗಿ ಪ್ರಾರಂಭಗೊಂಡ ಟಿ.ಪಿ.ಅಕ್ಕಿ ಪ್ರಶಸ್ತಿಯನ್ನು ಖಂಡೇರಾವರಿಗೆ ಲಭಿಸಿದೆ. ಇದು ಗೌರವ ಪ್ರಶಸ್ತಿಯಾಗಿದ್ದು, ಪ್ರಾರಂಭಗೊಂಡ ಮೊದಲನೇ ವರ್ಷದ ಗೌರವ ಪ್ರಶಸ್ತಿಯನ್ನು ಖಂಡೇರಾವರಿಗೆ ನೀಡಿ ಸನ್ಮಾನಿಸಿದೆ. ಅಲ್ಲದೆ ಅದೇ ವರ್ಷ ದಾವಣಗೆರೆಯಲ್ಲಿ ಚಿತ್ರಕಲಾವಿದ, ದಿವಂಗತ ಶಂಕರ ಪಾಟೀಲ ಪ್ರತಿಷ್ಠಾನವು ಪ್ರಾರಂಭಗೊಂಡಿದ್ದು, ಅದು ತನ್ನ ಮೊದಲ ಗೌರವ ಪ್ರಶಸ್ತಿಯನ್ನು ಖಂಡೇರಾವರಿಗೆ ನೀಡಿ ಗೌರವಿಸಿದೆ. ಹೀಗೆ ಒಂದೆ ಎರಡೆ ಹಲವಾರು ಸಂಘ ಸಂಸ್ಥೆಗಳು ಇವರಿಗೆ ಗೌರವ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಿವೆ.

ಕಲಾಕೃತಿಗಳ ಸಂಗ್ರಹದ ವಿವರ

ಖಂಡೇರಾವರು ಇಲ್ಲಿಯವರೆಗೆ ಹಲವಾರು ಮಾಧ್ಯಮಗಳಲ್ಲಿ ಸಾವಿರಾರು ಕಲಾಕೃತಿಗಳನ್ನು ಚಿತ್ರಿಸಿದ್ದಾರೆ. ಅವುಗಳಲ್ಲಿ ಕೆಲವು ಕಲಾಕೃತಿಗಳು ರಾಜ್ಯ ಮತ್ತು ರಾಷ್ಟ್ರವಲ್ಲದೆ, ಅಂತಡಿರರಾಷ್ಟ್ರೀಯ ಮಟ್ಟದಲ್ಲೂ ಕಲಾಗ್ಯಾಲರಿಗಳಲ್ಲಿ, ಖಾಸಗಿ ಸಂಘ ಸಂಸ್ಥೆಗಳಲ್ಲಿ ತಮ್ಮ ಸ್ಥಾನವನ್ನು ಅಲಂಕರಿಸಿಕೊಂಡಿವೆ. ಅಂಥವುಗಳಲ್ಲಿ ಬೆಂಗಳೂರಿನ ವೆಂಕಟಪ್ಪ ಆರ್ಟ ಗ್ಯಾಲರಿಯಲ್ಲಿ, ವಸ್ತು ಸಂಗ್ರಹಾಲಯದಲ್ಲಿ, ಕರ್ನಾಟಕ ಲಲಿತಕಲಾ ಅಕಾಡೆಮಿಯಲ್ಲಿ, ರಾಮನ್ ರಿಸರ್ಚ ಇನ್ಸ್ಟಿಟ್ಯೂಟ್‌ನಲ್ಲಿ ಚಿತ್ರಕಲಾ ಪರಿಷತನಲ್ಲಿ, ಕಿರ್ಲೋಸ್ಕರನಲ್ಲಿ ಇವರ ಕಲಾಕೃತಿಗಳು ಸಂಗ್ರಗೊಂಡಿವೆ. ಕಲಬುರ್ಗಿಯ ಪುರಾತತ್ವ ವಸ್ತು ಸಂಗ್ರಹಾಲಯದಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ. ಇಲ್ಲಿ ಸಂಗ್ರಹಗೊಂಡಿರುವ ಕಲಾಕೃತಿಗಳು ನಿಸರ್ಗ ಚಿತ್ರಗಳಿಂದ ಕೂಡಿವೆ. ರಾಯಚೂರಿನ ನೂತನ ಲಲಿತಕಲಾ ಮಹಾವಿದ್ಯಾಲಯ ಮತ್ತು ಗುರು ಕಲಾಮಂದಿರದಲ್ಲಿ ಇವರು ಚಿತ್ರಿಸಿದ ಭಾವಚಿತ್ರಗಳು ಸಂಗ್ರಹಿತಗೊಂಡಿವೆ. ಬಿಜಾಪೂರದ ಸಿದ್ದೇಶ್ವರ ಕಲಾಮಂದಿರದಲ್ಲಿ ಇವರ ಕಲಾಕೃತಿಯು ಸಂಗ್ರಹಗೊಂಡಿದೆ. ದಾವಣಗೆರೆಯ ಸರಕಾರಿ ಕಲಾಶಾಲೆಯಲ್ಲಿಯೂ ಇವರ ಕಲಾಕೃತಿಯನ್ನು ಸಂಗ್ರಹಿಸಿಟ್ಟಿದ್ದಾರೆ. ಹುಬ್ಬಳ್ಳಿಯ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯ ಮತ್ತು ಮುನ್ಸಿಪಲ್ ಕಾರ್ಪೋರೇಶನನ ಮಂಜಗಿ ಆರ್ಟ ಗ್ಯಾಲರಿಯಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ. ಇದಲ್ಲದೆ ಅಥಣಿಯ ಲಲಿತಕಲಾ ಮಹಾವಿದ್ಯಾಲಯ,

[illegible]



ಚಿತ್ರ 77. ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಗೌರವ ಪ್ರಶಸ್ತಿಯನ್ನು ಪಡೆಯುತ್ತಿರುವದು.



ಚಿತ್ರ 78. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ಸ್ವೀಕರಿಸುತ್ತಿರುವದು.





ಚಿತ್ರ 79.

ಖಂಡೇರಾವರಿಗೆ ಆದರ್ಶಕಲಾ ಶಿಕ್ಷರರೆಂದು ಗೌರವಿಸಿದ ಸಂದರ್ಭ.



ಚಿತ್ರ 80.

ಗೌರವವನ್ನು ಪಡೆಯುತ್ತಿರುವ ದೃಶ್ಯ.









ಚಿತ್ರ 81. ಪೂಜ್ಯರಿಂದ , ಸಂಘಸಂಸ್ಥೆಗಳಿಂದ ಸನ್ಮಾನ ಗೊಳ್ಳುತ್ತಿರುವ ಜೆ.ಎಸ್. ಖಂಡೇರಾವ

ಸಂಕೇಶ್ವರ ಲಲಿತಕಲಾ ಮಹಾವಿದ್ಯಾಲಯಬೆಂಗಳೂರಿನ ಲಲಿತಕಲಾ ಮಹಾವಿದ್ಯಾಲಯ ಮತ್ತು ಮೂಡಬಿದರೆಯ ಲಲಿತ ಕಲಾ ಮಹಾವಿದ್ಯಾಲಯಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹ ಗೊಂಡಿವೆ. ಈ ಎಲ್ಲ ಕಡೆಗಳಲ್ಲಿ ಸಂಗ್ರಹಗೊಂಡ ಕಲಾಕೃತಿಗಳು ಪ್ರಾತ್ಯಕ್ಷಿಕೆಗಳಿಂದ ಕೂಡಿದ ಭಾವಚಿತ್ರಗಳಾಗಿವೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಂಗ್ರಹಾಲಯದಲ್ಲಿ ಇವರು ಚಿತ್ರಿಸಿದ ಭಾವಚಿತ್ರ ಸಂಗ್ರಹಗೊಂಡಿದೆ. ಇದಲ್ಲದೆ ಇದೇ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಬಾದಾಮಿಯ ಬನಶಂಕರಿಯಲ್ಲಿರುವ ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗದಲ್ಲಿ ಇವರು ಚಿತ್ರಿಸಿದ ಬಾವಚಿತ್ರ ಸಂಗ್ರಹಗೊಂಡಿದೆ. ಮೈಸೂರಿನ ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿಯಲ್ಲಿ ಇವರು ಚಿತ್ರಿಸಿದ ಭಾವಚಿತ್ರಗಳು ಸಂಗ್ರಹಗೊಂಡಿವೆ. ಕಲಬುರ್ಗಿಯ ದಿ.ಐಡಿಯಲ್ ಕಲಾಶಾಲೆ , ದಿ ಆರ್ಟ್ ಇಂಟಿಗ್ರೇಷನ್ ಕಲಾಶಾಲೆ , ಕರ್ನಾಟಕ ಹಿಂದಿ ಪ್ರಚಾರ ಸಭಾ , ಅಲ್ಲದೆ ಶರಣಬಸವೇಶ್ವರ ಸಂಸ್ಥಾನದಲ್ಲಿ ಅನೇಕ ಕಲಾಕೃತಿಗಳು ಸಂಗ್ರಹಗೊಂಡಿವೆ. ದೆಹಲಿಯ ಲಲಿತಕಲಾ ಅಕಾಡೆಮಿಯ ರವಿಂದ್ರ ಭವನದಲ್ಲಿ, ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ ಆರ್ಟನಲ್ಲಿ, ತಾಜ್‌ಮಹಲ್ ಹೊಟೆಲ್‌ನಲ್ಲಿ ತಾಜಪ್ಯಾಲೆಸ್ ಇಂಟರ್ ಕಾಂಟಿನೆಂಟಲ್‌ನಲ್ಲಿ ಇಂಟರ್‌ನ್ಯಾಷನಲ್ ಏರ್‌ಪೋರ್ಟ ಅಥರಿಟಿ ಅಫ ಇಂಡಿಯಾ, ಮಿನಿಸ್ಟ್ರಿ ಆಫ್ ಎಕ್ಸಟ್ರನಲ್ ಅಫೇರ್ಸ ಆಫ್ ಇಂಡಿಯಾ ಈ ಎಲ್ಲ ಕಡೆಯಲ್ಲಿ ಖಂಡೇರಾವರು ಚಿತ್ರಿಸಿದ ಹಲವಾರು ಕಲಾಕೃತಿಗಳು ಸಂಗ್ರಹಿತಗೊಂಡಿವೆ. ಮುಂಬೈನ ಬಾಂಬೆ ಆರ್ಟ ಸೊಸಾಯಿಟಿಯಲ್ಲಿ ಇವರ ಕಲಾಕೃತಿಯು ಸಂಗ್ರಹಗೊಂಡಿದೆ. ಅಮೇರಿಕದ ಎಪುಲಾ ಅಲಂಬಾ ಎಂಬಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ. ಇದಲ್ಲದೆ ಅಮೇರಿಕಾದ ಇನ್ನೊಂದು ಸ್ಥಳದಲ್ಲಿ ಇವರು ಚಿತ್ರಿಸಿದ ಹಂಪಿಯ ನಿಸರ್ಗಚಿತ್ರಗಳು ಸಂಗ್ರಹಿತಗೊಂಡಿವೆ. ಜರ್ಮನಿಯ ಟ್ಯೂಬೈಂಜಿನ್ ಎಂಬಲ್ಲಿ ಇವರ ಕಲಾಕೃತಿಯು ಸಂಗ್ರಹಗೊಂಡಿದೆ. ಇದಲ್ಲದೆ ಮಲೇಷಿಯಾ , ಸಿಂಗಾಪೂರಗಳಲ್ಲಿಯೂ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ. ಇದಲ್ಲದೆ ಇನ್ನೂ ಹಲವಾರು ಕಲಾಕೃತಿಗಳು ನಾಡಿನ ಹಲವಾರು ಕಡೆಗಳಲ್ಲಿರುವ ಖಾಸಗಿ ಸಂಗ್ರಹಾಲಯಗಳಲ್ಲಿ ಸಂಗ್ರಹಗೊಂಡಿವೆ.

ಹೀಗೆ ಖಂಡೇರಾವರು ಕರ್ನಾಟಕ ಸರಕಾರದ ಪ್ರಶಸ್ತಿಯಾದ ರಾಜ್ಯೋತ್ಸವ ಪ್ರಶಸ್ತಿಯನ್ನು ಪಡೆದ ಪ್ರಮುಖ ಕಲಾವಿದರಾಗಿ, ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ , ಮುಂಬೈನ ಬಾಂಬೆ ಆರ್ಟಸೊಸಾಯಿಟಿಯ ಅಜೀವ ಸದಸ್ಯರಾಗಿ, ನಾಡಿನ ಹಲವಾರು ಕಡೆಗಳಲ್ಲಿ ಆಮಂತ್ರಿತ ಉಪನ್ಯಾಸಕರಾಗಿ ಕಲಾಪ್ರದರ್ಶನಗಳ ನಿರ್ಣಾಯಕರಾಗಿ, 1991 ರ ಟ್ರಿನಾಲೆ ಅಂತರರಾಷ್ಟ್ರೀಯ ಚಿತ್ರಕಲಾ ಪ್ರದರ್ಶನದ ವಿಶೇಷ ಆಮಂತ್ರಿತರಾಗಿ, 1970 ರ ದಶಕದ ಮೈಸೂರು ಆರ್ಟ ಕೌನ್ಸಿಲ್ ಎಂಬ ಸಂಸ್ಥೆಯಲ್ಲಿ ಕ್ರಿಯಾಶೀಲ ಸದಸ್ಯರಾಗಿ , 1980 ರ ದ ದಶಕದಲ್ಲಿ ಕಲಬುರ್ಗಿಯಲ್ಲಿ ಕಲಾ ಪ್ರಗತಿ ಎನ್ನುವ ಕಲಾ ಸಂಘಟನೆಯ ಅಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಅನೇಕ ಕಲಾ ಪ್ರದರ್ಶನಗಳು , ಸಾಂಸ್ಕೃತಿಕ ಸಂಘಟನೆಗಳ ಮೂಲಕ ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಶ್ರೀಮಂತಗೊಳಿಸಿದ್ದಾರೆ. ಎಂದರೆ ತಪ್ಪಾಗಲಾರದು.

ಕಲಾ ಸಾಹಿತ್ಯ


ಸಾಹಿತ್ಯವು ಭಾಷೆಯ ಮೂಲಕ ತೋಡಿಕೊಳ್ಳವ ಮಾಧ್ಯಮ ಸಾಹಿತ್ಯದ ಉದ್ದೇಶ ಹಾಗೂ ಅದರ ಅಭಿವ್ಯಕ್ತ ಮಾಧ್ಯಮವಾದ ಭಾಷೆಯ ಉದ್ದೇಶ ಒಂದೇ, ಎರಡರ ಉದ್ದೇಶವೂ ಸಂವಹನವೇ, ಸಾಹಿತ್ಯದ ಮಾಧ್ಯಮವಾದ ಭಾಷೆಯ ಸಾಮಾಜಿಕ ಮಾಧ್ಯಮವೂ ಹೌದು . ನಮ್ಮ ದೈನಂದಿನ ವ್ಯವಹಾರಗಳಲ್ಲಿ ನಮ್ಮ ಎಲ್ಲ ಬಗೆಯ ಸಂವಹನ ಸಂವಾದಗಳಿಗೂ ಬಳಕೆಯಾಗುವ ಭಾಷೆಯ ಪ್ರಾಯೋಜನಿಕತೆ ಸ್ವರೂಪ ನಮಗೆಲ್ಲ ತಿಳಿದೇ ಇದೆ. ನಮ್ಮ ಶಿಕ್ಷಣವೂ ಭಾಷೆಯ ಮೂಲಕ ನಡೆಯುವುದರಿಂದ ಅನಿವಾರ್ಯವಾಗಿ ಎಲ್ಲರಿಗೂ ಹತ್ತಿರವಾಗುತ್ತದೆ. ಹೀಗೆ ಸಾಹಿತ್ಯ ಸಹೃದಯನ ಜೊತೆಗೆ ಸಮಾನತೆ ಕಲ್ಪಿಸಿಕೊಳ್ಳುತ್ತದೆ. ಹೀಗಾಗಿ ಸಾಹಿತ್ಯದಲ್ಲಿ ಒಂದು ವಾಕ್ಯದಲ್ಲಿ ವಾಸ್ತವತೆ ತಾಗಿಸುವ ಒಂದೆರಡು ಪದಗಳೋ , ರಚನಾ ವೈಶಿಷ್ಟ್ಯವೋ , ಲಯವೂ ಇದ್ದರೆ ಸಾಕು ಅದು ಸಂಪೂರ್ಣ ವಾಸ್ತವತೆಯ ಭಾಸ ಕೊಟ್ಟುಬಿಡುತ್ತದೆ. ಹೀಗಾಗಿ

ಸಾಹಿತ್ಯಕ್ಕಿರುವ ಸ್ಪಷ್ಟತೆ ಚಿತ್ರಕಲೆಗೆ ಬರುವದಿಲ್ಲ [1]. ಸಾಮಾನ್ಯವಾಗಿ ಮಾನವನ ಮಾನಸಿಕ ಕಾರ್ಯಪ್ರವೃತ್ತಿಗಳನ್ನು ಮೂರು ಭಾಗಗಳಾಗಿ ಮಾಡಬಹುದು. ಮೊದಲನೆಯದು ಬುದ್ದಿ ಅಥವಾ ವಿಚಾರಕ್ಕೆ ಸಂಬಂಧಿಸಿದರೆ , ಎರಡನೆಯದ್ದು ಇಚ್ಛೆಗೆ ಸಂಬಂಧಿಸಿದ್ದು ಮತ್ತು ಮೂರನೆ ಯದ್ದು ಭಾವನೆಗೆ ಸಂಬಂಧಿಸಿದ್ದು. ವಿಶಾಲವಾದ ಅರ್ಥಗಳಲ್ಲಿ ಸಾಹಿತ್ಯದ ಬೇರೆ ಬೇರೆ ಅಂಗಗಳನ್ನು ಗಮನಿಸಿದರೆ, ಸಾಹಿತ್ಯ ಈ ಮೂರು ಭಾಗಗಳಿಗೆ ಸಂಬಂಧಿಸಿದೆ. ಆದರೆ ಕಲೆಯು ವಿಶೇಷವಾಗಿ ಭಾವನೆಗೆ ಸಂಬಂಧಿಸಿದ್ದು. ಇದು ಜೀವನದಲ್ಲಿನ ಆಗು ಹೋಗುಗಳಿಗೆ, ಸನ್ನಿವೇಶಗಳಿಗೆ ಭಾವನಾ ಪ್ರತಿಕ್ರಿಯಾತ್ಮಕರೂಪದ್ದು ಇದರ ವ್ಯವಹಾರ ನೇರವಾಗಿ ಹೃದಯದೊಳಗೆ , ಹಾಗೆ ನೋಡಿದರೆ ಕಾವ್ಯ ಮತ್ತು ಚಿತ್ರಕಲೆ ಹೆಚ್ಚುಕಡಿಮೆ ಹಲವಾರು ಸಮಾನ ಅಂಶಗಳಿಂದ ಕೂಡಿದೆ. ಹೀಗಾಗಿ ಸಾಹಿತ್ಯ ಕ್ಷೇತ್ರದ ಕಾವ್ಯ ಚಿತ್ರಕಲೆಗೆ ಹತ್ತಿರವಾಗುವಷ್ಟು ಆದರ ಉಳಿದ ಯಾವ ಅಂಗ ಗಳು ಹತ್ತಿರವಾಗಿಲ್ಲ.[2]

ಕರ್ನಾಟಕದ ಚಿತ್ರಕಲಾ ಕ್ಷೇತ್ರದಲ್ಲಿ ಸಂಶೋಧನ ಲೇಖನಗಳಾಗಲಿ, ವೈಚಾರಿಕ ಪ್ರಬಂಧಗಳಾಗಲಿ , ಹೆಚ್ಚಿನ ಸಂಖ್ಯೆಯಲ್ಲಿ ಬರದಿರಲು ಕಾರಣ ಈ ಕ್ಷೇತ್ರದಲ್ಲಿ ಈ ವರೆಗೆ ಏನೂ ಕೆಲಸವಾಗಿದೆ ಎಂಬ ಅರಿವಿನ ಕೊರತೆಯೇ ಆಗಿದೆ. ಸಾಹಿತ್ಯ, ನಾಟಕ , ಜನಪದ ಕ್ಷೇತ್ರಗಳಿಗೆ ಹೋಲಿಸಿದರೆ ಚಿತ್ರಕಲೆಯ ಬಗ್ಗೆ ಬಂದಿರುವ ಲೇಖನಗಳು ಕಡಿಮೆಯಂದೇ ಹೇಳಬಹುದಾದರೂ ತೀರಾ ನಿರಾಶದಾಯಕವಾಗಿಲ್ಲ. ಈ ಶತಮಾನದಿಂದ ಆರಂಭದಿಂದಲೇ ಹಲವಾರು ನಿಯತ ಕಾಲಿ ಕೆಯಲ್ಲಿ, ಸಂಪಾದನಾ ಗ್ರಂಥಗಳಲ್ಲಿ ಚಿತ್ರಕಲೆಯನ್ನು ಕುರಿತ ಲೇಖನಗಳು ಕಂಡು ಬರುತ್ತಿವೆ. ಈಚೆಗೆ ಪತ್ರಿಕೆಗಳು ಸಂಖ್ಯೆ ಯಲ್ಲಿ ಹೆಚ್ಚಾಗಿದ್ದು , ಕಲೆ ಕುರಿತ ಲೇಖನಗಳು ಹೆಚ್ಚಿಗೆ ಬರುತ್ತಿವೆ [3]. ಖಂಡೇರಾವರ ಕುರಿತು ಬಂದ ಕಲಾಸಾಹಿತ್ಯವನ್ನು ನಾವು ಗಮನಿಸಿದಾಗ ಅವು ಕಡಿಮೆ ಪ್ರಾಮಾಣದಲ್ಲಿರುವುದು ಕಂಡುಬರುತ್ತದೆ. ಅದಕ್ಕೆ ಒಂದು ಕಾರಣವೂ ಇದೆ. ಖಂ ಡೇರಾವರು ಪ್ರಯೋಗಿಕವಾಗಿ ತಮ್ಮನ್ನು ಹೆಚ್ಚು ಪರಿಚಯಿಸಿಕೊಂಡವರಾಗಿದ್ದಾರೆ. ಇವರು ತೋರಿಕೆಗೆ ಇಷ್ಟಪಡದ ವ್ಯಕ್ತಿ. ಸದ್ದು ಗದ್ದಲವಿಲ್ಲದೇ ತಮ್ಮ ಕೆಲಸಗಳನ್ನು ಮಾಡಿಬಿಡುವ ಒಬ್ಬ ಅಂತರ್ಮುಖಿ ಜೀವಿ. ಹೀಗಿರುವುದರಿಂದ ಇವರನ್ನು ಕುರಿ ತು ಬಂದಿರುವ ಕಲಾಸಾಹಿತ್ಯವು ಅಷ್ಟೊಂದು ಹೆಚ್ಚಿನ ಪ್ರಮಾಣದಲ್ಲಿ ಬರದೇ ಇರುವುದು ತೋಚುತ್ತದೆ. ಖಂಡೇರಾವರು ಅಧ್ಯಯನ ಕಾಲದಿಂದಲೂ ಹಿಡಿದು ಇಲ್ಲಿಯವರೆಗೆ ರಚಿಸಿದ ಸ್ಕೆಚ್ ಗಳಾಗಲಿ ಅವರ ಕುರಿತು ಬಂದ ಕಲಾಸಾಹಿತ್ಯದ ಒಂ ದು ಬಂಡಾರದ ಮೂಟೆಯನ್ನು ತಮ್ಮ ಕೋಣೆಯಲ್ಲಿಟ್ಟಿದ್ದರು. ಆದರೆ ಯಾವುದೋ ಒಂದು ಸಮಯದಲ್ಲಿ ಆಮೂಟೆಗೆ ಬೆಂಕಿ ತಗುಲಿತು. ಇವರು ಸಂಗ್ರಹಿಸಿಟ್ಟಿದ್ದ ಮೂಲ ರೆಕಾರ್ಡ ಮತ್ತು ಚಿತ್ರಿಸಿದ ಸ್ಕೆಚ್ ಗಳು ಬೆಂಕಿಗೆ ಆಹುತಿಯಾದವು. ಹೀಗಿರುವುದರಿಂದ ಖಂಡೇರಾವರ ಎಷ್ಟೋ ಸ್ಕೆಚ್ ಗಳು , ಅವರ ಕುರಿತು ಬಂದ ಕಲಾ ಸಾಹಿತ್ಯ , ಒಂದೂ ಉಳಿಯದೇ ಎಲ್ಲವೂ ಸುಟ್ಟು ಭಸ್ಮವಾಗಿವೆ. ಇದರಿಂದ ಖಂಡೇರಾವರಿಗೆ ಏನೋ ಒಂದು ಕಳೆದುಕೊಂಡಂತಾಗಿದೆ. ಇದನ್ನು ನೆನೆಸಿ ಕೊಂಡಾಗಲಂತೂ ಖಂಡೇರಾವರು ಕಂಗಾಲಾಗಿ ಒಂದೊಂದು ಸಾರಿ ಮಾನಸಿಕ ವೇದನೆಗೆ ಒಳಪಡುತ್ತಾರೆ. ಆದರೆ ಆ ಒಂದು ಘಟನೆ ನಡೆದು ಹೊದನಂತರದಲ್ಲಿನ ಅವಧಿಯಂದು ಇಲ್ಲಿಯವರೆಗೆ ಅವರ ಕುರಿತು ಬಂದ ಕಲಾ ಸಾಹಿತ್ಯವನ್ನು ಅವರು ಒಂದು ಕಡೆ ಸುರಕ್ಷಿತವಾಗಿಟ್ಟಿದ್ದಾರೆ. ಅವು ಸಂಖ್ಯೆಯಲ್ಲಿ ಕಡಿಮೆಯಿರಬಹುದು. ಆದರೆ ಅವುಗಳೆಲ್ಲವು ಅಮೂ ಲ್ಯವಾದವುಗಳಾಗಿವೆ. ಇಂದು ಇವುಗಳನ್ನೇ ಮೂಲವಾಗಿಸಿಕೊಂಡು ಅವುಗಳನ್ನು ಸಂರಕ್ಷಣೆಯ ಸಲುವಾಗಿ ಅವುಗಳ ಕುರಿತು ಅಧ್ಯಯನ ಮಾಡಬೇಕಾಗಿದೆ. ಈ ಒಂದು ಹಿನ್ನಲೆಯನ್ನಿಟ್ಟುಕೊಂಡು ಇಂದು ಇವರನ್ನು ಕುರಿತು ಸಂಶೊಧನ ಆಧ್ಯಯನವನ್ನು ಮಾಡಲಾಗುತ್ತಿದೆ. ಇವರ ಕುರಿತು ವೈಚಾರಿಕ ಪ್ರಬಂಧಗಳು, ಪುಸ್ತಕಗಳು ಮತ್ತು ಬಿಡಿಲೇಖಗಳು ಪ್ರಕಟ ವಾಗಿರುವುದನ್ನು ನಾವು ಕಾಣಬಹುದು.

---

1. ಪಿ. ಆರ್.ತಿಪ್ಪೆಸ್ವಾಮಿ (ಪ್ರ.ಸಂ.) : ಚಿತ್ರಕಲಾ ಪ್ರಪಂಚ , ಪುಟ 417
2. ಪಿ. ಆರ್.ತಿಪ್ಪೆಸ್ವಾಮಿ (ಪ್ರ.ಸಂ.) : ಚಿತ್ರಕಲಾ ಪ್ರಪಂಚ , ಪುಟ 415
3. ಪಿ. ಆರ್.ತಿಪ್ಪೆಸ್ವಾಮಿ (ಪ್ರ.ಸಂ.) : ಚಿತ್ರಕಲಾ ಪ್ರಪಂಚ , ಪುಟ 6



ಚಿತ್ರ 82 ಕಲಾವಿದ ಜೆ.ಎಸ್. ಖಂಡೇರಾವರ ಇತ್ತೀಚಿನ ಭಾವಚಿತ್ರ

ಖಂಡೇರಾವರನ್ನು ಕುರಿತು ಬಂದ ಕಲಾ ಸಾಹಿತ್ಯವನ್ನು ನಾವು ಎರಡು ಪ್ರಕಾರಗಳಲ್ಲಿ ವಿಂಗಡಿಸಿಕೊಳ್ಳಬಹುದು. ಒಂದನೆಯದ್ದು ಕನ್ನಡದಲ್ಲಿ ಮೂಡಿಬಂದಿರುವ ಕಲಾಸಾಹಿತ್ಯ. ಎರಡನೇಯದ್ದು ಇಂಗ್ಲೀಷ್‌ನಲ್ಲಿ ಮೂಡಿಬಂದ ಕಲಾಸಾಹಿತ್ಯ.

ಕನ್ನಡದಲ್ಲಿ ಮೂಡಿಬಂದ ಕಲಾಸಾಹಿತ್ಯ : ಖಂಡೇರಾವರನ್ನು ಕುರಿತು ಕನ್ನಡದಲ್ಲಿ ಮೂಡಿ ಬಂದ ಕಲಾ ಸಾಹಿತ್ಯವನ್ನು ನಾವು ನೋಡಿದಾಗ ಅವು ಹೆಚ್ಚಿನದಾಗಿ ಬಿಡಿಲೇಖನಗಳ ರೂಪದಲ್ಲಿ ಬಂದವುಗಳಾಗಿವೆ. ಇನ್ನು ಕೆಲವು ಪುಸ್ತಕದ ರೂಪದಲ್ಲಿ ಬಂದವುಗಳಾಗಿವೆ. ಪುಸ್ತಕದ ರೂಪದಲ್ಲಿ ಬಂದಿರುವ ಕಲಾಸಾಹಿತ್ಯವನ್ನು ಈ ಕೆಳಗಿನಂತೆ ವಿವರಿಸಬಹುದು.

ಜೆ.ಎಸ್.ಖಂಡೇರಾವ

1999ರಲ್ಲಿ ಕರ್ನಾಟಕ ಲಲಿತ ಕಲಾ ಅಕಾಡೆಮಿಯು ಹೊರತಂದ ಜೆ.ಎಸ್. ಖಂಡೇರಾವ ಎನ್ನುವ ಪುಸ್ತಕವನ್ನು ಕಲಬುರ್ಗಿಯ ಕುಪ್ಪಣ್ಣ ಕಂದಗಲ್ ಇವರು ಬರೆದಿದ್ದಾರೆ. ಇವರು ಇಂಜಿನೀಯರರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ವೃತ್ತಿಯಲ್ಲಿ ಇಂಜಿನೀಯರ್‌ರಾದರೂ ಕಲೆಯಲ್ಲಿ ಆಸಕ್ತಿಯನ್ನು ಹೊಂದಿದವರಾಗಿದ್ದಾರೆ. ಇವರು ಬರೆದ ಈ ಪುಸ್ತಕದಲ್ಲಿ ಖಂಡೇರಾವರು ಬಾಲ್ಯಜೀವನದಲ್ಲಿ ಯಾವ ರೀತಿಯಾಗಿ ಕಲಾಸಕ್ತಿಯನ್ನು ಹೊಂದಿದವರಾಗಿದ್ದರು. ಅದಕ್ಕೆ ಯಾವ ರೀತಿಯಾಗಿ ಪರಿಹಾರವನ್ನು ಕಂಡುಕೊಂಡರು ಎಂಬುದನ್ನು ವಿವರಿಸಿದ್ದಾರೆ. ಮುಂದೆ ಹೈಸ್ಕೂಲ್ ಶಿಕ್ಷಣದಲ್ಲಿ ಇವರಿಗೆ ಯಾರು ಪ್ರೇರಣೆಯನ್ನು ನೀಡಿದರು. ಆ ಒಂದು ಪ್ರೇರಣೆಯು ಇವರಿಗೆ ಮುಂಬೈಯಲ್ಲಿ ಕಲಾಶಿಕ್ಷಣವನ್ನು ಪಡೆಯಲು ಕಾರಣವಾಯಿತು. ಖಂಡೇರಾವರು ಮುಂಬೈ ವಾತಾವರಣಕ್ಕೆ ಹೇಗೆ ಹೊಂದಿಕೊಂಡು , ಅಲ್ಲಿ ತಮ್ಮ ಕಲಾಶಿಕ್ಷಣವನ್ನು ಪಡೆದುಕೊಂಡರು. ಈ ಹಂತದಲ್ಲಿ ಆವರಿಗೆ ಸಹಾಯಮಾಡಿದ ಜೆ.ಎಸ್.ದಂಡಾವತಿಮಠರವರ ಪ್ರೇರಣೆಯೊಂದಿಗೆ ಜೆ.ಜೆ.ಕಲಾಶಾಲೆಯಲ್ಲಿ ಕಟ್ಟುನಿಟ್ಟಿನ ಕಲಾಭ್ಯಾಸಂಗವನ್ನು ಹೇಗೆ ಪಡೆದುಕೊಂಡರು ಎಂಬುದನ್ನು ವಿವರಿಸಿದ್ದಾರೆ. ಇದಲ್ಲದೆ ಮುಂಬೈನಲ್ಲಿ ಕಲಾಶಿಕ್ಷಣವನ್ನು ಪಡೆದುಕೊಂಡು ಕಲಬುರ್ಗಿಗೆ ಬಂದಾಗ ಆಗ ಅವರಿಗೆ ಸಹಾಯಮಾಡಿದ ಸಿ.ವಿ. ಕರಡಗಿಯವರು , ಅವರ ಪ್ರೇರಣೆ, ಸಲಹೆಯಮೇರೆಗೆ ಹುಟ್ಟಿಕೊಂಡ ಆದರ್ಶಕಲಾ ಮಂದಿರ ಇದರ ಬೆಳವಣಿಗೆಯ ಜೊತೆಗೆ ಶರಣಬಸವೇಶ್ವರ ಕಲಾಮಹಾವಿದ್ಯಾಲಯದಲ್ಲಿ ಕಲಾಶಿಕ್ಷಕರಾಗಿ ಸೇವೆಯನ್ನು ಸಲ್ಲಿಸುವಾಗ ಆದರ್ಶ ಕಲಾಮಂದಿರವನ್ನು ಅವರ ಶಿಷ್ಯ. ಖ್ಯಾತ ಕಲಾವಿದರಾದ ವಿ.ಜಿ.ಅಂದಾನಿಯವರಿಗೆ ಒಪ್ಪಿಸಿದ್ದು. ಶರಣಬಸವೇಶ್ವರ ಕಲಾಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಬೋಧನೆಯನ್ನು ಮಾಡುತ್ತಾ ಕೆಲವು ದಿನಗಳು ಕಳೆದನಂತರ ಅಲ್ಲಿ ಸ್ನಾತಕೋತ್ತರ ಲಲಿತಕಲಾ ವಿಭಾಗವು ಪ್ರಾರಂಭಗೊಂಡು ಖಂಡೇರಾವರು ಅದರ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದು. ವಿದ್ಯಾರ್ಥಿಗಳಿಗೆ ಕಲೆಯ ಜೊತೆಗೆ ಇತರ ಕಲಾಚಟಿವಟಿಕೆಗಳನ್ನು ತಿಳಿಸುತ್ತಾ ಆದರ್ಶಕಲಾಶಿಕ್ಷರಾಗಿ , ಕಲಾವಿದರಾಗಿ , ನಿರ್ದೇಶಕರಾಗಿ, ಸುಮಾರು ಮೂರು ದಶಕಗಳ ವರೆಗೆ ಅಲ್ಲಿ ಸಲ್ಲಿಸಿದ ಸೇವೆಯನ್ನು ಕುರಿತು ತುಂಬಾ ಕೂಲಂಕುಶವಾಗಿ ತಿಳಿಸಿದ್ದಾರೆ. ಇದಲ್ಲದೆ ಈ ಹಂತದಲ್ಲಿ ಅವರ ಕಲಾಚಟುವಟಿಕೆಗಳು, ಅವರ ಕಲಾಕೃತಿಗಳ ರಚನೆಯ ಬಗ್ಗೆ , ಅವರಿಗೆ ಸಂದ ಪ್ರಶಸ್ತಿಗಳು, ಸನ್ಮಾನಗಳು ಈ ಎಲ್ಲ ವಿಷಯಗಳ ಜೊತೆಗೆ ಇಂದಿಗೂ ಅವರು ತಮ್ಮ ಬದುಕನ್ನು ಕಲಾಬದುಕನ್ನಾಗಿ ಪರಿವರ್ತಿಸಿಕೊಂಡು ತಮ್ಮ ಪರಿವಾರದೊಂದಿಗೆ ಸುಖಮಯ ಕಲಾಬದುಕನ್ನು ನಡೆಸುತ್ತಿರುವ ವಿಷಯಗಳನ್ನು ಕುಪ್ಪಣ್ಣ ಕಂದಗಲ್‌ರವರು ತಮ್ಮ ಪುಸ್ತಕದಲ್ಲಿ ವಿವರಿಸಿದ್ದಾರೆ. ಇದೊಂದು ಗಾತ್ರದಲ್ಲಿ ಚಿಕ್ಕ ಪುಸ್ತಕವಾದರು ಅರ್ಥಗರ್ಭಿತವಾದ ಬರವಣಿಗೆಯಿಂದ ಮೂಡಿಬಂದ ಒಳ್ಳೆಯ ಪುಸ್ತಕವಾಗಿದೆ.

ಕಲಾವಿದರು ನಡೆದು ಬಂದ ದಾರಿ.

ಖಂಡೇರಾವರ ಕಲೆಯನ್ನು , ಕಲಾಬದುಕನ್ನು ಕುರಿತು ಹೊರಬಂದ ಪುಸ್ತಕ ಕಲಾವಿದರು ನಡೆದು ಬಂದ ದಾರಿ. ಇದನ್ನು ಕಲಬುರ್ಗಿಯ ಗವೀಶ ಹಿರೇಮಠರವರು ಬರೆದಿದ್ದಾರೆ. ಒಟ್ಟು ಆರು ಜನ ಕಲಾವಿದರನ್ನು ಇಲ್ಲಿ ಪರಿಚಯಿಸಲಾಗಿದೆ.

ಈ ಆರೂ ಜನರು ಕಲಬುರ್ಗಿ ಜಿಲ್ಲೆಯವರಾಗಿದ್ದಾರೆ. ಇದೊಂದು ಪರಿಚಯಾತ್ಮಕ ಲೇಖನಗಳ ಪುಸ್ತಕವಾಗಿದೆ. ಇಲ್ಲಿ ಒಂದು ಕಡೆ ಖಂಡೇರಾವರ ಕುರಿತ ಒಂದು ಬಿಡಿ ಲೇಖನವಿದೆ. ಸದ್ದುಗದ್ದಲವಿಲ್ಲದ ಕೆಲಸಗಾರ ಖಂಡೇರಾವ ಎನ್ನು ಶಿರೋನಾಮೆಯನ್ನು ಹೊತ್ತ ಈ ಲೇಖನದಲ್ಲಿ ಗವೀಶ ಹಿರೇಮಠರವರು ಖಂಡೇರಾವರನ್ನು ಕುರಿತು ಸರಳತೆ, ಸೌಜನ್ಯ ತೆಗೆ ಮತ್ತೊಂದು ಹೆಸರೇ ಖಂಡೇರಾವ ಸರಳತೆ ಸೌಜನ್ಯಯಲ್ಲಿರುವ ಬದುಕು ಪರಿಶುದ್ಧ ಬದುಕು ಎನ್ನುತ್ತಾರೆ . ಅಲ್ಲದೆ ಇವರು ಒಮ್ಮೆ ಖಂಡೇರಾವರನ್ನು ಸಂದರ್ಶಿಸಲು ಅವರ ಮನೆಗೆ ಹೋದಾಗ ಖಂಡೇರಾವರು ಇವರನ್ನು ಕುರಿತು ಬೇಡ ಹಿರೇಮಠರೆ ನನ್ನ ಜೀವನ ಚರಿತ್ರೆ ಏನು ಮಹತ್ವದ್ದು. ಹೀಗೆ ಹೇಳ್ತಿನಿ ಅಂತ ಬೇಜಾರ ಮಾಡ್ಕೋಬ್ಯಾಡ್ರಿ ನನಗಿಂತ ಹಿರಿಯ ಕಲಾವಿದರಿದ್ದಾರೆ. ಅವರ ಬಗ್ಗೆ ಬರೆಯಿರಿ. ಪ್ರಕಟಿಸಿರಿ ಎಂದು ಹೇಳಿದ್ದರು. ಎಂದು ನೆನಪಿಸಿಕೊಳ್ಳುತ್ತಾ ಖಂಡೇರಾವರು ಯಾವಾಗಲೂ ಕೀರ್ತಿಗಾಗಿ, ಸ್ಥಾನಮಾನಕ್ಕಾಗಿ ಲೆಕ್ಕಿಸಿದವರಲ್ಲವೆಂದು ಹೇಳುತ್ತಾರೆ. ಖಂಡೇರಾವರು ಬಾಲ್ಯದಿಂದ ಹೈಸ್ಕೂಲ್ ಶಿಕ್ಷಣದವರೆಗೆ ಹೇಗೆ ಇದ್ದರು ಯಾರ ಪ್ರಭಾವದಿಂದ ಅವರು ಕಲಾಸಕ್ತಿಯನ್ನು ಹೊಂದಿದರು. ಅವರಿಗೆ ಪ್ರೇರಣೆಯನ್ನು ನೀಡಿದವರು ಮತ್ತು ಅವರ ಸಾಂಸ್ಕೃತಿಕ ಪರಿಸರದ ವಿಷಯಗಳನ್ನು ಇಲ್ಲಿ ವಿವರಿಸಿದ್ದಾರೆ. ಖಂಡೇರಾವರು ಹೈಸ್ಕೂಲ್ ಶಿಕ್ಷಣವನ್ನುಪಡೆಯುವಾಗ ಗ್ರೇಡ್ ಪರೀಕ್ಷೆಗಳನ್ನು ಇಂಟರ ಮೀಡಿಯೆಟ್ ಪರೀಕ್ಷೆಗಳನ್ನು ಮುಗಿಸಿದ್ದರು . ತಮ್ಮ ಹೆಚ್ಚಿನ ಕಲಾಶಿಕ್ಷಣವನ್ನು ಪಡೆಯಲು ಮುಂಬೈಗೆ ಪ್ರಯಾಣ ಬೆಳೆಸಿದರು . ಅಲ್ಲಿ ಏನೂ ಅರಿಯದಾದಾಗ ನನಗೆ ಮಾರ್ಗವನ್ನು ತೋರಿಸಿದವರಲ್ಲಿ ಜಿ.ಎಸ್ ದಂಡಾವತಿಮಠರವರು, ಅವರ ಪ್ರೇರಣೆ, ಸಹಾಯದಿಂದಲೇ ನನಗೆ ಜೆ.ಜೆ. ಕಲಾಶಾಲೆಯಲ್ಲಿ ಕಲಾಶಿಕ್ಷಣವನ್ನು ಮುಗಿಸಲು ಅನುಕೂಲ ವಾಯಿತು. ಎಂದು ಖಂಡೇರಾವರು ನೆನಪಿಸಿಕೊಳ್ಳುತ್ತಾರೆ. ಎಂಬುದನ್ನು ವಿವರಿಸಿದ್ದಾರೆ. ಖಂಡೇರಾವರು ಜೆ.ಜೆ. ಕಲಾಶಾಲೆಯಲ್ಲಿ 1963ರಲ್ಲಿ ಡಿಪ್ಲೋಮಾ ಇನ್ ಡ್ರಾಯಿಂಗ್ ಆ್ಯಂಡ್ ಪೇಯಿಂಟಿಂಗ್ ಮುಗಿಸಿಕೊಂಡು ಕಲಬುರ್ಗಿಗೆ ಬಂದರು. ಆಗ ಮನೆಯವರ ಒತ್ತಾಸೆಯ ಮೇರೆಗೆ 1964 ರ ಜುಲೈ 3 ರಂದು ವೀರಮ್ಮ ಎಂಬುವವರನ್ನು ಬಾಳಸಂಗಾತಿಯನ್ನಾಗಿ ಸ್ವೀಕರಿಸಿದರು. ಆದರೆ ಸಂಸಾರದ ಜವಾಬ್ದಾರಿಯನ್ನು ಹೊತ್ತ ಖಂಡೇರಾವರು ಯಾವದಾದರೂ ಒಂದು ಕೆಲಸವನ್ನು ಮಾಡಲೇ ಬೇಕಾದ ಸಂದರ್ಭದಲ್ಲಿ 1965 ರಲ್ಲಿ ದಿ ಐಡಿಯಲ್ ಕಲಾಶಾಲೆ ಸ್ಥಾಪಿಸಿದರು. ಈ ಹಂತದಲ್ಲಿ ಖಂಡೇರಾವರು ಅನುಭವಿಸಿದ ಕಷ್ಟ, ಆ ಕಷ್ಟಕ್ಕೆ ಅವರಿಗೆ ಯಾರ ಸಹಾಯವೂ ದೊರೆಯಲಿಲ್ಲವೆಂದು ಗವೀಶ ಹಿರೇಮಠರವರು ವಿವರಿಸಿದ್ದಾರೆ. ಅದಕ್ಕಾಗಿಯೇ ಅವರು ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದ ಚಿತ್ರಕಲಾ ವಿಭಾಗದಲ್ಲಿ ಕೆಲಸಕ್ಕೆ ಸೇರಿಕೊಂಡರು. ಈ ಒಂದು ಹಂತದಲ್ಲಿ ಖಂಡೇರಾವರು ವಿದ್ಯಾರ್ಥಿಗಳೊಂದಿಗೆ ತಾವೂ ಕಲಾಕೃತಿಗಳನ್ನು ರಚಿಸುತ್ತಿದ್ದರು. ಮತ್ತು ಇದೆ ಸಂದರ್ಭದಲ್ಲಿ ಅವರು ಹಲವಾರು ಪಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಎಂತಲೂ ವಿವರಿಸಿದ್ದಾರೆ. ಇದಲ್ಲದೆ ಖಂಡೇರಾವರ ಕುರಿತು ಬಂದ ಕೆಲವು ಲೇಖನಗಳನ್ನೂ ಸಹ ಈ ಪುಸ್ತಕದಲ್ಲಿ ಒಂದು ಕಡೆ ತೋರಿಸಿದ್ದಾರೆ. ಇವುಗಳಲ್ಲಿ ಕೆಲವು ಪತ್ರಿಕೆಗಳಲ್ಲಿ ಬಂದವುಗಳಾಗಿದ್ದರೆ ಇನ್ನೂ ಕೆಲವು ಇಂಗ್ಲೀಷ್ ಪತ್ರಿಕೆಯಲ್ಲಿ ಬಂದವುಗಳಾಗಿವೆ. ಕೊನೆಯಲ್ಲಿ ಖಂಡೇರಾವರ ಕಲಾಬದುಕು ಅವರ ಸಂಸಾರಿಕ ಬದುಕನ್ನು ವಿಶ್ಲೇಷಿಸಿರುವದು ಕಂಡು ಬರುತ್ತದೆ.

ಇವರದೇ ಆದ ಇನ್ನೊಂದು ಪುಸ್ತಕ ಸೃಜನಶೀಲ ಕಲಾವಿದರು ಇಲ್ಲಿ ಖಂಡೇರಾವರ ಬಗ್ಗೆ ಒಂದು ಬಿಡಿ ಲೇಖನವಿದೆ. ಅದು ಮೇಲಿನ ಪುಸ್ತಕದಲ್ಲಿರುವಂತೆಯೇ ಆಗಿದ್ದು, ಕೆಲವು ಕಡೆಗಳಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಿಕೊಂಡು ಪುಸ್ತಕವನ್ನು ಹೊರತಂದಿದ್ದಾರೆ. ಇಲ್ಲಿ ವಿಶೇಷವಾಗಿ ನಾವು ಗಮನಿಸಬಹುದಾದ ಅಂಶವೇನೆಂದರೆ ಗವೀಶ ಹಿರೇಮಠರವರು ಖಂಡೇರಾವರ ಬಗ್ಗೆ ಇಲ್ಲಿ ಹೆಚ್ಚು ಒತ್ತುಕೊಡದೆ ಅವರ ಕಲಾಚಟುವಟಿಕೆಗಳ ಬಗ್ಗೆ ಅವರ ಕಲಾಕೃತಿಗಳ ರಚನೆಯ ಬಗ್ಗೆ ಹೆಚ್ಚು ತಿಳಿಸಲು ಪ್ರಯತ್ನಿಸಿದ್ದು ಕಂಡುಬರುತ್ತದೆ. ಅಲ್ಲದೇ ಚಿತ್ರಿತಗೊಂಡಿರುವ ಚಿತ್ರಗಳ ವಸ್ತು ವಿಷಯಗಳ ಬಗ್ಗೆ, ಆ ಚಿತ್ರಗಳು ಕೊಡುವ ಅರ್ಥಗಳ ಬಗ್ಗೆ ಕೂಲಂಕುಷವಾಗಿ ವಿವರಿಸಿದ್ದಾರೆ.

ದೃಶ್ಯಕಲೆಯ ಸೃಜನಶೀಲರು

ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಹೊರಬಂದ ಈ ಪುಸ್ತಕದ ಪ್ರಧಾನ ಸಂಪಾದಕರು ಬಿ.ವಿ.ಕೆ

[illegible]

ಶಾಸ್ತ್ರಿಯವರು. 1990 ರಲ್ಲಿ ಹೊರಬಂದ ಈ ಪುಸ್ತಕದಲ್ಲಿ ಬಸವರಾಜ ಉಪ್ಪಿನರವರು ಖಂಡೇರಾವರ ಬಗ್ಗೆ ಬರೆದ ಒಂದು ಬಿಡಿ ಲೇಖನವಿದೆ. ಇಲ್ಲಿ ಖಂಡೇರಾವರಿಗೆ ಚಿತ್ರಕಲೆಯ ಗೀಳು ಯಾವ ರೀತಿಯಾಗಿ ಪ್ರಾರಂಭವಾಯಿತು. 1960 ರಲ್ಲಿ ಅವರು ತಮ್ಮ ಕಲಾಶಿಕ್ಷಣವನ್ನು ಪಡೆಯಲು ಮುಂಬೈಗೆ ಹೋದಾಗ , ಅಲ್ಲಿ ಅವರಿಗೆ ತಮ್ಮ ಮುಂದಿನ ಗುರಿಯ ಬಗೆಗೆ ಮೂಡಿದ ಪ್ರಶ್ನೆಗಳನ್ನು ಎದುರಿಸಿ ಅವರು ಕಲಾಶಿಕ್ಷಣವನ್ನು ಪಡೆದುಕೊಂಡರು. ಎಂಬುದನ್ನು ಇಲ್ಲಿ ವಿವರಿಸಿದ್ದಾರೆ. ಕಲಾಶಿಕ್ಷಣವನ್ನು ಪಡೆದು ಕಲಬುರ್ಗಿಗೆ ಬಂದ ಖಂಡೇರಾವರಿಗೆ 14-11-1965 ಅವರ ಬದುಕಿನಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭವಾದ ದಿನ. ಏಕೆಂದರೆ ಅಂದು ಅವರು ಆದರ್ಶಕಲಾಮಂದಿರವನ್ನು ಹುಟ್ಟುಹಾಕಿದರು. ಎಂದು ತಿಳಿಸಿದ್ದಾರೆ. ಈ ಕಲಾಶಾಲೆಯ ಜವಾಬ್ದಾರಿಯನ್ನು ಖಂಡೇರಾವರ ಜೊತೆ ಅವರ ಮಿತ್ರರಾದ ಎ.ಎಸ್.ಪಾಟೀಲರು ಮುಂದಾದರು. ಕೆಲವು ವರ್ಷಗಳು ಅಲ್ಲಿ ಕಾರ್ಯಗಳು ಹೀಗೆ ಭರದಿಂದ ಸಾಗಿದವು. ಇದನ್ನು ಕಂಡು ಕಲಬುರ್ಗಿಯ ಶರಣಬಸವೇಶ್ವರ ಸಂಸ್ಥಾನದ ಪೀಠಾಧಿಪತಿಗಳಾದ ಪೂಜ್ಯ ಡಾ॥ ಶರಣಬಸವಪ್ಪ ಅಪ್ಪ ಅವರು ತಮ್ಮ ಸಂಸ್ಥೆಯಲ್ಲಿ ಕಲಾಶಿಕ್ಷಣ ದೊರೆಯುವಂತೆ ಆಗಬೇಕೆಂದು ಕೊಂಡು 1971 ರಲ್ಲಿ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಚಿತ್ರಕಲಾ ವಿಭಾಗವನ್ನು ತೆರೆದರು. ಅಲ್ಲಿ ಖಂಡೇರಾವರು ಕಲಾಶಿಕ್ಷಕರಾದರು. ಇವೆಲ್ಲದರ ಜೊತೆಗೆ ಪ್ರತಿದಿನ ನೂರಾರು ರೇಖಾಚಿತ್ರಗಳು ಚಿತ್ರಿಸುವುದನ್ನು ರೂಢಿಸಿಕೊಂಡಿದ್ದರು. ಎಂಬುದನ್ನು ತಿಳಿಸಿದ್ದಾರೆ. ಅಲ್ಲದೆ ಅವರು ಕಲಾಕ್ರಿಯೆಯಲ್ಲಿ ಯಾವ ರೀತಿಯಾಗಿ ತಮ್ಮನ್ನು ತೊಡಗಿಸಿಕೊಂಡು ಕಲಾ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರೆಂದು , ಈ ಅವಧಿಯಲ್ಲಿ ಅವರಿಗೆ ಬಂದ ಹಲವಾರು ಪ್ರಶಸ್ತಿಗಳನ್ನೂ ಸಹ ಈ ಲೇಖನದಲ್ಲಿ ಸೊಗಸಾಗಿ ವಿವರಿಸಿದ್ದಾರೆ.

ಪ್ರಶಸ್ತಿ ಪಡೆದ ಕಲಾವಿದರು

ಇದು ಕೂಡ ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಹೊರಬಂದ ಪರಿಚಯಾತ್ಮಕ ಲೇಖನಗಳಿಂದ ಕೂಡಿದ ಪುಸ್ತಕವಾಗಿದೆ. ಖಂಡೇರಾವರ ಬಗ್ಗೆ ಒಂದು ಕಡೆ ಹೀಗೆ ಬರೆಯುತ್ತಾ, ಒಂದು ಕಾಲದಲ್ಲಿ ಅತೀ ವಿರಳವಾದ ಕಲಾಚಟುವಟಿಕೆಗಳಿಂದ ಕೂಡಿದ ಕಲಬುರ್ಗಿಯಲ್ಲಿ ಜನಿಸಿದ ಖಂಡೇರಾವರು , ಈ ಭಾಗದಲ್ಲಿ ಕಲಾಭಿರುಚಿಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. 1965 ರಲ್ಲಿ ಆದರ್ಶ ಕಲಾ ಮಂದಿರವನ್ನು ಸ್ಥಾಪಿಸಿದ ಇವರು ಶರಣಬಸವೇಶ್ವರ ಕಲಾಮಹಾವಿದ್ಯಾಲಯದ ಸ್ನಾತಕೋತ್ತರ ಲಲಿತಕಲಾ ವಿಭಾಗದ ನಿರ್ದೇಶಕರಾಗಿ, ಹಲವಾರು ಕಲಾವಿದರನ್ನು ನಾಡಿಗೆ ಪರಿಚಯಿಸಿದವರಾಗಿದ್ದಾರೆ. ಕಲಬುರ್ಗಿಯಲ್ಲಿ ಕಲಾಪ್ರಗತಿ ಎಂಬ ಕಲಾಸಂಘಟನೆಯನ್ನು ಕಟ್ಟಿ ಮುಂಬೈನ ಬಾಂಬೆ ಆರ್ಟ ಸೊಸಾಯಿಟಿಯ ಅಜೀವ ಸದಸ್ಯರಾಗಿದ್ದರು. ಅಲ್ಲದೇ ರಾಜ್ಯಲಲಿತಕಲಾ ಅಕಾಡೆಮಿಯ ಸದಸ್ಯರೂ ಆಗಿದ್ದರು. ಎಂದು ವಿವರಿಸಿದ್ದಾರೆ. ಖಂಡೇರಾವರು ಕಲಾಕೃತಿ ರಚನೆಯಲ್ಲಿ ತೊಡಗಿ ಹಲವಾರು ಕಲಾಪ್ರದರ್ಶನಗಳನ್ನು ಮಾಡಿದ್ದಾರೆ. ಅಲ್ಲದೇ ಹಲವಾರು ಪ್ರಶಸ್ತಿಗಳೂ ಕೂಡ ಇವರ ಪಾಲಾಗಿವೆ. ಕಲಾಪ್ರಗತಿ ಕಲಾಮೇಳ , ವಿಶ್ವಕನ್ನಡ ಸಮ್ಮೇಳನ , ಸಾರ್ಕ, ರಾಜ್ಯ ಲಲಿತಕಲಾ ಅಕಾಡೆಮಿಯವರು ನಡೆಸಿದ ಹಲವು ಕಲಾಶಿಬಿರಗಳಲ್ಲಿ ಇವರು ಭಾಗವಹಿಸಿದ್ದಾರೆ. ಇವರ ಕಲಾಕೃತಿಗಳು ನಾಡಿನ ಹಲವಾರು ಕಲಾಶಾಲೆಗಳು , ಕಲಾಗ್ಯಾಲರಿಗಳು , ಅಲ್ಲದೆ ಖಾಸಗಿ ಸಂಘ ಸಂಸ್ಥೆಗಳಲ್ಲಿಯೂ ಸಂಗ್ರಹಗೊಂಡಿವೆ. ಕಲಾಕೃತಿ ರಚನೆ , ಕಲಾಶಿಕ್ಷಣ ಈ ಎರಡೂ ಕ್ಷೇತ್ರಗಳಲ್ಲಿಯೂ ಖಂಡೇರಾವರು ಸುಮಾರು ಮೂರು ದಶಕಗಳಿಂದಲೂ ಸೇವೆ ಸಲ್ಲಿಸುತ್ತಿದ್ದಾರೆ. ಎಂದು ಈ ಪುಸ್ತಕದಿಂದ ತಿಳಿದುಬರುತ್ತದೆ.

ಹೀಗೆ ಖಂಡೇರಾವರನ್ನು ಕುರಿತು ಪುಸ್ತಕ ರೂಪದಲ್ಲಿ ಬಂದ ಲೇಖನಗಳು ಒಂದು ಬಗೆಯಾದರೆ, ಇನ್ನು ಅವರ ಕಲೆಯನ್ನು ಕುರಿತು ದಿನ ಪತ್ರಿಕೆಗಳಲ್ಲಿ ಬಂದ ಲೇಖನಗಳೊಂದು ಬಗೆಯದಾಗಿವೆ. ಅವುಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಪ್ರಪಂಚ

ಈ ಪತ್ರಿಕೆಯಲ್ಲಿ ನಾಡಿನ ಹೆಸರಾಂತ ಪತ್ರಕರ್ತರಾದ ಶ್ರೀ ಪಾಟೀಲಪುಟ್ಟಪ್ಪನವರು ಖಂಡೇರಾವರ ಬಗ್ಗೆ

ಹೀಗೆ ಹೇಳುತ್ತಾರೆ ಕಲೆಯ ನವನ ವೊನ್ವೆಷಶಾಲಿ ಆವಿರ್ಭಾವವನ್ನು ಖಂಡೇರಾವರ ಕಲಾಕೃತಿಗಳಲ್ಲಿ ನಾವು ಕಾಣುತ್ತೇವೆ. ಕಲಾಕೃತಿ ರಚನೆಯಲ್ಲಿ, ವಿನ್ಯಾಸದಲ್ಲಿ, ರೇಖೆಯಲ್ಲಿ ಅವರು ಜೀವಂತಿಕೆಯನ್ನು ತಂದು ತೋರಿಸುತ್ತಾರೆ. ಎಂದು ಖಂಡೇ ರಾವರು ಹುಬ್ಬಳ್ಳಿಯಲ್ಲಿ ಕಲಾಪ್ರದರ್ಶನವನ್ನು ಮಾಡಿದ ಸಂದರ್ಭದಲ್ಲಿ ಈ ಲೇಖನವನ್ನು ಬರೆದಿದ್ದಾರೆ.

ಸಂಯುಕ್ತ ಕರ್ನಾಟಕ

ದಿನಾಂಕ 4-10 1991 ರಂದು ಪ್ರಕಟವಾದ ಈ ಲೇಖನದಲ್ಲಿ ನಾಡಿನ ಹೆಸರಾಂತ ಕಲಾವಿಮರ್ಶಕರಾದ ಕೆ.ವಿ.ಸುಬ್ರಮಣ್ಯಂರವರು ಕುಂಚ ಕಂಡುಕೊಂಡ ಗಾಂಭಿರ್ಯದ ಸೆಳಕುಗಳು ಎಂಬ ತಲೆ ಬರಹವನ್ನು ಕೊಟ್ಟು ಖಂಡೇ ರಾವರಂಥ ಅನುಭಾವಿಗಳ ಕೊಡುಗೆ ಗಮನಾರ್ಹ ರೀತಿಯ ಸ್ಪೂರ್ತಿಯನ್ನು ನೀಡುವಂತಿದೆ ಎಂದು ಖಂಡೇರಾವರನ್ನು ಕುರಿತು ಒಂದು ಕಡೆ ಹೇಳುತ್ತಾರೆ. ಆಲೋಕ ಕಲಾಶಿಬಿರದ ಸಂದರ್ಭದಲ್ಲಿ ಖಂಡೇರಾವರು ಪ್ರಾತ್ಯಕ್ಷಿಕೆಯನ್ನು ನೀಡಿದ ನಿಮಿತ್ತವಾಗಿ ಈ ಲೇಖನ ಮೂಡಿಬಂದಿದೆ.

ಸಂಯುಕ್ತ ಕರ್ನಾಟಕ

ದಿನಾಂಕ 4-9-92 ರಂದು ಪ್ರಕಟವಾದ ಈ ಲೇಖನದಲ್ಲಿ ಕೆ.ವಿ. ಸುಬ್ರಹ್ಮಣ್ಯಂರವರು ಸಮಕಾಲೀನ ಕಲಾಸೃಷ್ಟಿಯ ವೈವಿಧ್ಯ ಎಂಬ ತಲೆಬರಹದೊಂದಿಗೆ ಬರೆದ ಈ ಲೇಖನದಲ್ಲಿ ಖಂಡೇರಾವರ ಸಮಕಾಲೀನ ಕಲಾಕೃತಿಗಳ ವೈವಿಧ್ಯತೆಯನ್ನು ಕುರಿತು ವಿಶ್ಲೇಷಿಸಿದ್ದಾರೆ. ಬೆಂಗಳೂರಿನ ಯಂಗ್ ಡಿಸೈನದಲ್ಲಿ ಅಗಸ್ಟ 11 ರಿಂದ 24, 1992 ರ ವರೆಗೆ ನಡೆದ ಸಮೂಹ ಕಲಾ ಪ್ರದರ್ಶನದ ನಿಮಿತ್ತ ಈ ಲೇಖನ ರೂಪಗೊಂಡಿತ್ತು. ಈ ಪ್ರದರ್ಶನದಲ್ಲಿ ಪೀಟರಲೂಯಿಸ್, ಜೆ.ಎಸ್. ಖಂಡೇರಾವ, ಸಿ.ಚಂದ್ರಶೇಖರ, ಜೆ.ಎಸ್ ಶೆಣೈರವರ ಕಲಾಕೃತಿಗಳು ಪ್ರದರ್ಶಿತಗೊಂಡಿದ್ದವು. ಖಂಡೇರಾವರನ್ನು ಕುರಿತು ಗುಲಬರ್ಗಾದ ಜೆ. ಎಸ್. ಖಂಡೇರಾವ ತೈಲವರ್ಣದಲ್ಲಿ ಕಿಟಕಿಯಿಂದ ತೂರಿಬಂದ ಬೆಳಕಿನ ಪ್ರಬಂಧವು ಸುಮಧುರ ಅನುಭವವನ್ನು ತಮ್ಮ ಕಲಾಕೃತಿಗಳಲ್ಲಿ ತಂದುಕೊಂಡಿದ್ದಾರೆ. ವೃತ್ತ ಚೌಕ ತ್ರಿಫಿಯರ್‌ಗಳು ಕುಂಚದ ಸಡಿಲ ಬೀಸುಗಳು ಮತ್ತು ಮೈವಳಿಕೆಯಲ್ಲಿ ಅಲಂಕೃತಗೊಂಡಿದೆ. ಕ್ಯಾನವಾಸಿನ ಅವಕಾಶದ ಬಿಳುಪು (ಬಣ್ಣಗಳ ಛಾಯಾಂತರಗಳ ನಡುವೆ) ಒಂದು ರೀತಿಯಲ್ಲಿ ಟ್ಯೂಷೆಸ್ಟ್ರಿಗಳ ನೆಯ್ಗೆಯಂತೆ ರೇಖೆಗಳಾಗಿಯೂ ಕೆಲಸ ಮಾಡಿದೆ ಎಂದು ಖಂಡೇರಾವರ ಸಮಕಾಲೀನ ಕಲಾಸೃಷ್ಟಿಯ ವೈವಿಧ್ಯತೆಯನ್ನು ವಿವರಿಸಿ ತೋರಿಸಿದ್ದಾರೆ.

ಪ್ರಜಾವಾಣಿ

ಡಾ. ವೀರಣ್ಣ ದಂಡೆಯವರು ಕಲಬುರ್ಗಿ ಕಲರವ ಎಂಬ ಅಂಕಣದಲ್ಲಿ ಖಂಡೇರಾವರು ರಾಜ್ಯೋತ್ಸವ ಪ್ರಶಸ್ತಿಯನ್ನು ತೆಗೆದುಕೊಂಡ ನಿಮಿತ್ತ ಈ ಲೇಖನವನ್ನು ಬರೆದಿದ್ದಾರೆ. ಇದಕ್ಕೆ ರಾಜ್ಯೋತ್ಸವ ಸಂಭ್ರಮ, ಖುಷಿತಂದ ಖಂಡೇರಾವ ಪ್ರಶಸ್ತಿ ಎಂಬ ಶಿರೋನಾಮೆಯನ್ನು ಕೊಟ್ಟು ಈ ಸಲದ ಕಲಬುರ್ಗಿಯ ಪ್ರತಿಭಾವಂತ ಚಿತ್ರಕಲಾವಿದ ಪ್ರೊ. ಜೆ.ಎಸ್. ಖಂಡೇರಾವ ಆವರಿಗೆ ದೊರಕಿದ್ದು, ಇದು ಕಲಬುರ್ಗಿಯೇ ಖುಷಿಪಡುವಂತಾಗಿದೆ. ಎಂದು ಹೇಳುತ್ತಾ, ಈಗ ಕಲಬುರ್ಗಿಯಲ್ಲಿ ಎರಡು ಕಲಾಸಂಸ್ಥೆಗಳು ಬೆಳೆದು ನಿಂತಿವೆ. ಈ ಎರಡೂ ಕಡೆ ಸ್ನಾತಕೋತ್ತರ ಪದವಿಯವರೆಗೆ ಶಿಕ್ಷಣದ ವ್ಯವಸ್ಥೆಯಾಗಿದೆ. ಹೀಗೆ ಒಂದಲ್ಲಾ ಎರಡು ಸಂಸ್ಥೆಗಳನ್ನು ಪೋಷಿಸಿ, ಬೆಳೆಸಿದ ಕೀರ್ತಿಯವರದು. ಅವರಿಗೆ ಸಂದ ಗೌರವಗಳು ಅನಂತ ದೇಶದಲ್ಲಿ ಅಲ್ಲದೇ ಅಮೇರಿಕಾ, ಜರ್ಮನ, ಸಿಂಗಾಪೂರ ಮತ್ತು ಮಲೇಶಿಯಾಗಳಲ್ಲಿ ಇವರ ಚಿತ್ರಗಳು ಪ್ರದರ್ಶನಗೊಂಡಿವೆ. ನಮಗೆ ಇವೆಲ್ಲಕ್ಕಿಂತ ಕಲಬುರ್ಗಿಯಲ್ಲಿ ಕಲಾವಿದರ ಪರಂಪರೆಯನ್ನೇ ನಿರ್ಮಾಣಮಾಡಿದ ಖಂಡೇರಾವ ಅವರೆ ಶ್ರೇಷ್ಟರಾಗಿ ತೋರುತ್ತಾರೆ. ಎಂದು ತಮ್ಮ ಅಂಕಣದಲ್ಲಿ ಖಂಡೇರಾವರನ್ನು ಕುರಿತು ವಿವರಿಸಿದ್ದಾರೆ.

[illegible]

ವಿಜಯ ಕರ್ನಾಟಕ

ದಿನಾಂಕ 10-06-2000 ರಂದು ಕಲಾವಿಜಯ ಎಂಬ ವಿಶೇಷ ಅಂಕಣದಲ್ಲಿ ಕಲಾವಿದ ಮಲ್ಲಿಕಾರ್ಜುನ ಭಾಗೋಡಿಯವರು ಖಂಡೇರಾವರ ಬಗ್ಗೆ ಒಂದು ಲೇಖನವನ್ನು ಹೀಗೆ ಬರೆದಿದ್ದಾರೆ. ಖಂಡೇರಾವರು ನವ್ಹೆಂಬರ 1 1940 ರಂದು ಕಲಬುರ್ಗಿಯ ಶಂಕರಪ್ಪ ಮತ್ತು ಬಸಮ್ಮ ಎಂಬ ಸುಸಂಸ್ಕೃತ ವ್ಯಾಪಾರಸ್ಥ ಮನೆತನದಲ್ಲಿ ಜನಿಸಿದರು. ಇವರು ಬಾಲ್ಯದಲ್ಲಿಯೇ ಕಲಾ ಆಸಕ್ತಿಯನ್ನು ಹೊಂದಿದರು. ಅಂತೆಯೇ ತರಗತಿಯಲ್ಲಿ ಗುರುಗಳು ಪಾಠಮಾಡುವಾಗ ಆ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ರೇಖಾಚಿತ್ರಗಳನ್ನು ಗೀಚುತ್ತಿದ್ದರು. ಮುಂದೆ ಇವರು ತಮ್ಮ ಕಲಾಶಿಕ್ಷಣವನ್ನು ಪಡೆಯಲು ಮುಂಬೈಗೆ ಹೋದರು. ಅಲ್ಲಿ ಜಿ.ಜಿ.ಕಲಾಶಾಲೆ ಮತ್ತು ಜೆ.ಎಸ್. ದಂಡಾವತಿಮಠರವರ ನೂತನ ಕಲಾಮಂದಿರದಲ್ಲಿ ತಮ್ಮ ಅನೇಕ ಸ್ನೇಹಿತರೊಂದಿಗೆ ಕಲಾಚಟುವಟಿಕೆಗಳಲ್ಲಿ ತೊಡಗುತ್ತಾ 1963 ರಲ್ಲಿ ಡಿಪ್ಲೊಮಾ ಇನ್ ಡ್ರಾಯಿಂಗ್ ಆ್ಯಂಡ್ ಪೇಂಟಿಂಗ್ ಮುಗಿಸಿಕೊಂಡು ಕಲಬುರ್ಗಿಗೆ ಬಂದರು . ಇಲ್ಲಿ 1965 ರಲ್ಲಿ ಆದರ್ಶ ಕಲಾಮಂದಿರವನ್ನು ಸ್ಥಾಪಿಸಿದರು. ಮುಂದೆ 1971ರಲ್ಲಿ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದ ಚಿತ್ರಕಲಾ ವಿಭಾಗದಲ್ಲಿ ಕಲಾಶಿಕ್ಷಕರಾಗಿ ಸೇರಿಕೊಂಡರು. ಹೀಗೆ ಕಲಾಶಿಕ್ಷಣದಿಂದ , ಮಾರ್ಗದರ್ಶನದ ಜೊತೆಗೆ ಒಳ್ಳೆಯ ಆಡಳಿತಗಾರರಾಗಿ , ಸದಾ ರಚನಾತ್ಮಕ ಕಾರ್ಯದಲ್ಲಿ ತೊಡಗುತ್ತಿದ್ದ ಖಂಡೇರಾವ ಜಲವರ್ಣ, ತೈಲವರ್ಣ, ರೇಖಾಚಿತ್ರ ಈ ಎಲ್ಲದರಲ್ಲೂ ಪ್ರಭುತ್ವ ಪಡೆದವರು. ಇವರು ತ್ರಿವಿಕ್ರಮನಂತೆ ,ಇವರ ಕಲಾಕೃತಿಗಳಲ್ಲಿ ವಿಷಯಕ್ಕೆ ತಕ್ಕಂತೆ ಹೊಂದಿಕೊಂಡ ಸಂಯೋಜನೆ ಆಕಾರ ಮತ್ತು ಅಷ್ಟೇ ಮಿತವಾದ ವರ್ಣಗಳಿಂದ ಅತೀ ಸಮಂಜಸವಾಗಿ ಕಲಾಕೃತಿಗಳನ್ನು ರಚಿಸುತ್ತಾರೆ. ಎಂದು ವಿವರಿಸಿದ್ದಾರೆ. ಇಂದು ಇವರು ವಿಂಡೋಸರಣಿಯ ಮೇಲೆ ಕಲಾಕೃತಿಗಳನ್ನು ರಚಿಸುತ್ತಿದ್ದಾರೆ. ರಾಜ್ಯ ಮತ್ತು ರಾಷ್ಟ್ರದ ಅನೇಕ ಕಡೆಗಳಲ್ಲಿ ಏಕವ್ಯಕ್ತಿ ಮತ್ತು ಸಮೂಹ ಕಲಾಪ್ರದರ್ಶನಗಳನ್ನು ಮಾಡಿದ ಇವರಿಗೆ ಹಲವಾರು ಪ್ರಶಸ್ತಿಗಳು ದೊರೆತಿವೆ ಎಂದು ಮಲ್ಲಿಕಾರ್ಜುನ ಭಾಗೋಡಿಯವರು ವಿವರಿಸಿದ್ದಾರೆ.

ಸುಧಾ

ದಿನಾಂಕ 29-4-1999 ರಂದು ಪ್ರಕಟವಾದ ಈ ಲೇಖನವನ್ನು ಶಂಶಾಂಕರವರು ಬರೆದಿದ್ದಾರೆ. ಅವರು ಖಂಡೇರಾವರನ್ನು ಕುರಿತು ಹೀಗೆ ಹೇಳುತ್ತಾರೆ. ಖಂಡೇರಾವರು ಬಾಲ್ಯದಲ್ಲಿಯೇ ಕಲಾಸಕ್ತಿಯನ್ನು ಹೊಂದಿರುವರು ಅವರು ಹೈಸ್ಕೂಲ್ ಶಿಕ್ಷಣವನ್ನು ಪಡೆಯುವಾಗ ಅನೇಕ ಕಲಾ ಸ್ಪರ್ಧೆಯಲ್ಲಿ ಬಹುಮಾನಗಳು ಪಡೆದುಕೊಂಡಿದ್ದಾರೆ. ಇದೆ ಮುಂದೆ ಅವರಿಗೆ ಜೆ.ಜೆ. ಕಲಾಶಾಲೆಯಲ್ಲಿ ಕಲಾಶಿಕ್ಷಣವನ್ನು ಪಡೆಯಲು ಪ್ರೇರಣೆಯಾಯಿತೆಂದು ತಿಳಿಸುತ್ತಾರೆ. ಮುಂಬೈಯಲ್ಲಿ ಅವರು ಕಲಾಶಿಕ್ಷಣವನ್ನು ಪಡೆಯುವಾಗ ಹಲವಾರು ಕಲಾಪ್ರದರ್ಶನಗಳಿಗೆ ಕಲಾಕೃತಿಗಳನ್ನು ಕಳಿಸುತ್ತಿದ್ದರು. ಅವುಗಳೆಲ್ಲವೂ ನಿಸರ್ಗಚಿತ್ರಗಳಿಂದ ಕೂಡಿರುತ್ತಿದ್ದವು. ಇವರು ಚಿತ್ರಿಸಿದ ಮೆಲ್ ಬಾರಹಿಲ್ಸ್ ನಿಸರ್ಗ ಚಿತ್ರವು ಮಹಾರಾಷ್ಟ್ರ ರಾಜ್ಯದವರು ಏರ್ಪಡಿಸಿದ ಕಲಾಪ್ರದರ್ಶನಕ್ಕೆ ಆಯ್ಕೆಯಾಗಿತ್ತು. ಎಂದು ತಿಳಿಸುತ್ತಾರೆ. ಹೀಗೆ ಖಂಡೇರಾವರು ತಮ್ಮ ಬದುಕನ್ನೇ ಕಲೆಗಾಗಿ ಮುಡುಪಾಗಿಟ್ಟುಕೊಂಡವರು. ಇವರಿಗೆ ಅನೇಕ ಪ್ರಶಸ್ತಿಗಳು ಲಭ್ಯವಾಗಿವೆ. ಇವರೊಬ್ಬ ಕಲಾವಿದರಾಗದೆ , ಒಬ್ಬ ಉತ್ತಮ ಕಲಾಶಿಕ್ಷಕರೂ ಹೌದು ಎಂದು ತಮ್ಮ ಲೇಖನದಲ್ಲಿ ವಿವರಿಸುತ್ತಾರೆ.

ಇಂಗ್ಲೀಷನಲ್ಲಿ ಮೂಡಿಬಂದ ಕಲಾಸಾಹಿತ್ಯ

The Hindu

"Khanderao Shows a keen sense of beauty in the choice of subject and achieves a remarkable freshness in each of the work of high lights his creative artist talent"

Deccan herald

Date 22/8/92ರಂದು Martha Jakimowicz -Karle ಇವರು ಖಂಡೇರಾವರ ಬಗ್ಗೆ ಹೀಗೆ ಬರೆಯುತ್ತಾರೆ. "J.S.Khanderao's style too bases on an older convention of middly geometried synthetic town views which arose some four decades ago in the country as an appropriation of klee and geometric obstraction : The artist's new oils on canvas seem to nicely loosen and clarify his persistent formula by focussion on and enlorging its fragment, while the basic remains.

The window and nocturnal images dwell on effects of light reacting with rudimetary forms of architectural and spatial provenance. Delicately, but a little too simply the textured surfaces are framed or devided by slamting grids, often created by letting in a glimmering ray. Although brought to flat surface, the shapes intend to covey a sense of interpenetrating among planes, illumination and darkness."

ಇದಲ್ಲದೇ ಖಂಡೇರಾವರು ವರ್ಣಸಿದ್ಧಾಂತ ಮತ್ತು ಪ್ರಾಕ್ಟಿಕಲ್ ಜಾಮೆಟ್ರಿ ಆ್ಯಂಡ್ ಪರ್ಸ್‌ಪೆಕ್ಟಿವ್ ಎಂಬ ಎರಡು ಪುಸ್ತಕಗಳನ್ನು ಬರೆದಿದ್ದಾರೆ. ಸಧ್ಯದಲ್ಲಿಯೇ ಅವುಗಳನ್ನು ಪ್ರಕಟಿಸುವ ಸಿದ್ಧತೆಯಲ್ಲಿದ್ದಾರೆ.

ವರ್ಣಸಿದ್ಧಾಂತ : ಹೆಸರೇ ಸೂಚಿಸುವ ಹಾಗೆ ಇಲ್ಲಿ ವರ್ಣಗಳ ಸಿದ್ಧಾಂತವನ್ನು ಕುರಿತಾದ ವಿವರಣೆ ಇರುವುದು. ಕಲೆಯ ಮೂಲ ಶಿಕ್ಷಣದಲ್ಲಿ ಈ ವರ್ಣಗಳ ಅಧ್ಯಯನ , ತಿಳುವಳಿಕೆ, ವಿದ್ಯಾರ್ಥಿಗಳಿಗೆ ಅತಿ ಮುಖ್ಯವಾದ ಅಂಗವಾಗಿದೆ. ಇವುಗಳ ಬಗ್ಗೆ ಆಳವಾದ ಜ್ಞಾನದ ಅವಶ್ಯಕತೆಯಿರುವದರಿಂದ ಈ ಪುಸ್ತಕವು ಹೆಚ್ಚು ಮಹತ್ವದ್ದಾಗಿರುತ್ತದೆ. ಇಲ್ಲಿ ಮೂಲ ವರ್ಣಗಳು ಮತ್ತು ಇತರ ವರ್ಣಗಳ ಬಳಕೆಯ ಕ್ರಮ , ಜನಸಾಮಾನ್ಯರಲ್ಲಿ ವರ್ಣಗಳಲ್ಲಿರುವ ಶಾಸ್ತ್ರೀಯ ತಿಳುವಳಿಕೆ ಮತ್ತು ವರ್ಣಗಳ ವಿಧಾನ, ವರ್ಣಗಳ ಘನತ್ವ ಅವುಗಳ ಸಾಂಕೇತಿಕ ಅರ್ಥಗಳು ಅಲ್ಲದೇ ಮನೋವೈಜ್ಞಾನಿಕ ಅರ್ಥಗಳು, ಬಣ್ಣಗಳ ಬಳಕೆಯ ಕ್ರಮ ಹೀಗೆ ಈ ಪುಸ್ತಕವು ಹಲವಾರು ವೈವಿಧ್ಯಮಯವಾದ ಅಂಶಗಳಿಂದ ಕೂಡಿದ್ದಾಗಿದೆ.

ಪ್ರಾಕ್ಟಿಕಲ್ ಜಾಮೆಟ್ರಿ ಆ್ಯಂಡ್ ಪರ್ಸ್‌ಪೆಕ್ಟಿವ್ : ಈ ಪುಸ್ತಕವು ಜಾಮಿತಿಯ ಅಂಶಗಳನ್ನು ಒಳಗೊಂಡಿದದೆ. ಇಲ್ಲಿ ಮೂರು ಭಾಗಗಳಾಗಿ ವಿಂಗಡಿಸಕೊಳ್ಳಲಾಗಿದೆ.

1. ಪ್ರಾಕ್ಟಿಕಲ್ ಜಾಮೆಟ್ರಿ
2. ಸ್ವಾಲೀಡ್ ಜಾಮೆಟ್ರಿ
3. ಪರ್ಸ್‌ಪೆಕ್ಟಿವ್

ಈ ಮೇಲಿನ ಮೂರು ಅಂಶಗಳನ್ನು ಒಳಗೊಂಡಿರುವ ಈ ಪುಸ್ತಕದಲ್ಲಿ ಕ್ರಮ ಬದ್ಧವಾದ ಅಳತೆ, ಆಕಾರ, ದೂರ ಸಮೀಪ, ಎನ್ನುವಂತೆ ತೋರಿಸುವುದು. ಹೇಗೆ ಎಂಬುದನ್ನು ಈ ಪುಸ್ತಕವನ್ನು ನೋಡಿದ ಕೂಡಲೇ ಅವುಗಳ ಮಹತ್ವವನ್ನು ನಾವು ಕಂಡುಕೊಳ್ಳಬಹುದಾದಷ್ಟು ಸರಳವಾಗಿ , ಅರ್ಥವಾಗುವಂತಹ ಆಕಾರಗಳನ್ನು ,ಅಂಶಗಳನ್ನು ಹೊಂದಿದೆ.

ಅಧ್ಯಾಯ ಎಂಟು :

ಸಮಾರೋಪ

ಕಲೆಯು ಮೂಲತಃ ಮಾನವನ ಸೃಷ್ಟಿ: ಅದು ಪ್ರತಿಭಾನ್ವಿತ ಮಾನವನ ಜೀವನಾನುಭವ ಅಭಿವ್ಯಕ್ತಿ, ಕಲೆ ಮಾನವತೆಯ ವಿಶಿಷ್ಟ ಆನಂದದಾಯಿನಿಯಾದ ಮಾತೃಶಕ್ತಿ. ಭೌತಿಕ ಜಗತ್ತಿನ ಬಾಹ್ಯ ಸೃಷ್ಟಿಗಿಂತ ಹೆಚ್ಚಾಗಿ, ಮಾನವನ ಆಂತರಿಕ ನಿತ್ಯಸತ್ಯದ, ಆನಂದಾನುಭವದ ಅಭಿವ್ಯಕ್ತಿ. ಕಲಾವಿದನ ಆತ್ಮದರ್ಶನ, ಅಂತಹಃ ಪ್ರೇರಣೆ ಭಾಹ್ಯ ಪ್ರಭಾವಗಳ ಸಮಾಹಿತ ಅಭಿವ್ಯೆಕ್ತಿ ಈ ಕಲೆ. ಭಾವ, ಬಣ್ಣ ರೇಖೆ ಮುಂತಾದ ವಿವಿಧ ಮಾಧ್ಯಮಗಳಲ್ಲಿ ಹೊಮ್ಮಿ ಸಮಾಜದ ಹೃದಯ ವಂತಿಕೆಯನ್ನು ಆಗುಮಾಡುತ್ತದೆ.[1] ಕಲೆ ಯಾವಾಗಲೂ ಜನಗಳ ಮನಸ್ಸಿನ ಮೇಲೆ ಪ್ರಭಾವಬೀರುವ ಒಂದು ಮುಖ್ಯ ಸಾಧನೆಯಾಗಿದೆ. ಆದಕ್ಕೆ ಚಿತ್ರಕಲೆ ಮನೋವಿಜ್ಞಾನದ ಸಿದ್ಧಾಂತಗಳ ಮೇಲೆ ಆಧಾರವಾಗಿರುವುದು. ಕಲೆಯಲ್ಲಿ ಕೇವಲ ತಾಂತ್ರಿಕ ನೈಪುಣ್ಯತೆ ಒಂದಿದ್ದರೆ ಸಾಲದು. ತಾಂತ್ರಿಕ ನೈಪುಣ್ಯತೆಯೊಂದಿಗೆ ಮನೊವಿಜ್ಞಾನದ ತತ್ವಗಳನ್ನು ಅಳವಳಿಸಿಕೊಂಡರು ಚಿತ್ರಕಲೆಯ ನೈಪುಣ್ಯತೆ ಇನ್ನೂ ಹೆಚ್ಚುತ್ತದೆ. ಯಾವುದೇ ಕಲಾಕೃತಿಯ ಹಿಂದೆ ಆ ಕಲಾವಿದನ ಮನಸ್ಥಿತಿಯು ಮುಖ್ಯವಾಗಿ ಕಾರಣವಾಗಿರುತ್ತುದೆ. ಹೀಗಾಗಿ ಚಿತ್ರಕಲೆ ಮನಶಾಸ್ತ್ರಕ್ಕೆ ಬಿಡಲಾರದ ನಂಟುತನವಿದ್ದು, ಇವು ಒಂದಕ್ಕೊಂದು ಪೂರಕ ಮತ್ತುಪ್ರೇರಕವಾದ ಸಂಬಂಧವನ್ನು ಹೊಂದಿವೆಯೆಂದು ಹೇಳಬಹುದು.[2] ಜೀವನವನ್ನೇ ಕಲೆಯ ವಿವಿಧ ಆಯಾಮಗಳನ್ನಾಗಿ ರೂಪಿಸಿಕೊಳ್ಳುವವರೆಗೆ ಒಂದು ವಿಶಿಷ್ಟ ಒಳಗಣ್ಣು ಇರುತ್ತದೆ. ಈ ಅಂತರದೃಷ್ಟಿ ಬೆಳೆದಂತೆಲ್ಲಾ ಅವನು ಕಲಾರಸಿಕನಾಗುತ್ತಾನೆ. ಕಲಾರಾಧಕನಾಗಿರುತ್ತಾನೆ. ಉತ್ತಮ ಮಾನವನಾಗುತ್ತಾನೆ. ಎಂದು ಸಂತೋಷಕುಮಾರ ಗುಲವಾಡಿಯವರು ಅಭಿಪ್ರಾಯಪಡುತ್ತಾರೆ. ಹೀಗೆ ಖಂಡೆರಾವರು ತಮ್ಮ ಜೀವನವನ್ನೇ ಕಲೆಗೆ ಮುಡುಪಾಗಿಟ್ಟುಕೊಂಡು, ಹಲವಾರು ಕಲಾಕೃತಿಗಳನ್ನು ರಚಿಸುವದರೊಂದಿಗೆ ಇಂದು ಸಮೃದ್ಧಿಯ ಕಲಾಬದುಕನ್ನು ನಡೆಸುತ್ತಿದ್ದಾರೆ.

---

1. ಡಾ. ಎಸ್.ಸಿ. ಪಾಟೀಲ (ಸಂ.): ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು ,ಪುಟ 116
2. ಡಾ. ಎಸ್.ಸಿ. ಪಾಟೀಲ (ಸಂ.): ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು ,ಪುಟ 49

ಅಧ್ಯಾಯ ಎರಡು :

ಜಿ.ಎಸ್. ಖಂಡೇರಾವರು 1940 ನವ್ಹೆಂಬರ ಒಂದರಂದು ಕಲಬುರ್ಗಿಯಲ್ಲಿ ಜನಿಸಿದರು. ಇವರ ತಂದೆ ಶಂಕರಪ್ಪ ತಾಯಿ ಬಸಮ್ಮ ಇವರದು ಸುಸಂಸ್ಕೃತ ಮನೆತನ ಮತ್ತು ದೊಡ್ಡ ಕುಟುಂಬ. ಈ ಕುಟುಂಬದಲ್ಲಿ ಜನ್ಮ ತಾಳಿದ ಖಂಡೇರಾವರು ಎರಡನೇ ದಿನದಲ್ಲಿಯೇ ತಮ್ಮ ತಾಯಿಯನ್ನು ಕಳೆದುಕೊಂಡು ಅನಾಥರಾದರು. ಕೆಲವು ಕಾಲ ತಮ್ಮ ಸೋದರತ್ತೆಯ ಆಶ್ರಯಪಡೆದರು. ಮುಂದೆ ತಮ್ಮ ಎರಡನೆಯ ತಾಯಿ ಶಿವಮ್ಮನವರ ಆರೈಕೆಯಲ್ಲಿ ಇವರು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡು ಬೆಳೆದರು.

ಇವರು ತಮ್ಮ ಪ್ರಾಥಮಿಕ ಶಿಕ್ಷಣ ಹಂತದಲ್ಲಿಯೇ ಕಲಾಸಕ್ತಿಯನ್ನು ಹೊಂದಿದವರಾಗಿದ್ದುದು ತಿಳಿದುಬರುತ್ತದೆ. ಆದರೆ ಇವರ ತಂದೆಗೆ ಇದು ಇಷ್ಟವಿರಲಿಲ್ಲವೆಂದು, ಅವರು ತಮ್ಮ ಮಗ ಇಂಜನಿಯರೋ ಅಥವಾ ಇನ್ನಾವುದೇ ಅಧಿಕಾರಿಯೋ ಆಗಬೇಕೆಂದು ಬಯಸಿದ್ದರಂತೆ ಆದರೆ ಇವರ ಪ್ರಾಥಮಿಕ ಶಾಲೆಯಲ್ಲಿನ ಕಲಾಶಿಕ್ಷಕರಾಗಿದ್ದ ಮಹ್ಮದ ಷರೀಫ ಇವರು ಜಗದೇವಪ್ಪನವರಲ್ಲಿರುವ ಕಲೆಯನ್ನು ಕಂಡು ಅವರಿಗೆ ಉನ್ನತ ಕಲಾಶಿಕ್ಷಣವನ್ನು ಮುಂದುವರೆಸಲು ಪ್ರೇರೆಪಿಸಿದ್ದುದು ತಿಳಿದುಬರುತ್ತದೆ. ಹೀಗೆ ಖಂಡೇರಾವರು ಸಾಂಸ್ಕೃತಿಕ ಪರಿಸರ ಮತ್ತು ಬಾಲ್ಯ ಜೀವನವನ್ನು ಕುರಿತು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅಧ್ಯಾಯ ಮೂರು :

ಈ ಅಧ್ಯಾಯದಲ್ಲಿ ಜಿ. ಎಸ್. ಖಂಡೇರಾವರು ಕಲಬುರ್ಗಿಯಲ್ಲಿ ತಮ್ಮ ಪ್ರಾಥಮಿಕ ಹಂತದ ಶಿಕ್ಷಣವನ್ನು ಮುಗಿಸಿ ಮುಂಬೈನ ಸರ್.ಜೆ.ಜೆ.ಕಲಾಶಾಲೆಯಲ್ಲಿ ಸೇರಿ ಅಲ್ಲಿ ಅವರು ಡ್ರಾಯಿಂಗ್ ಮತ್ತು ಪೇಯಿಂಟಿಂಗ್ ವಿಷಯವನ್ನು ಆರಿಸಿಕೊಂಡು ಅಧ್ಯಯನ ಮಾಡಿದರು. ಆಗ ಪಳಸೀಕರ್, ಬಾಬುರಾವ್ ಸಡ್ವೇಲ್ಕರ್ ಇವರ ಶಿಕ್ಷಕರಾಗಿದ್ದರು. ಬೆಳಗಿನ ವೇಳೆಯಲ್ಲಿ ಕಲಾಗುರು ದಂಡಾವತಿಮಠರವರ ನೂತನ ಕಲಾಮಂದಿರದಲ್ಲಿ ಹೆಚ್ಚಿನ ಅಭ್ಯಾಸ ಮಾಡುತ್ತಿದ್ದರು. ತಮ್ಮ ಸಹಪಾಟಿಗಳಾದ ಅಡಿವಿರೇಕರ್, ಜಿ. ಎಸ್.ಶೆಣೈ, ಮೃಘಾಂಕ ಜೋಶಿಯವರ ಜೊತೆಗೂಡಿ ಹಲವಾರು ಕಲಾಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದಾರೆ.

ಸರ್.ಜೆ.ಜೆ. ಕಲಾಶಾಲೆಯು ಕಟ್ಟುನಿಟ್ಟಾದ ಶಿಸ್ತಿನ ವ್ಯಾಸಾಂಗ ಪದ್ಧತಿಯನ್ನು ಹೊಂದಿದ್ದಿತು. ಇದು ತಮ್ಮ ಜೀವನದಲ್ಲಿ ಮುಂದೆ ಕಲಾಸಾಧನೆಗೆ ಹೇಗೆ ಭದ್ರಬುನಾದಿಯಾಯಿತೆಂಬುದನ್ನು ಈಗಲೂ ಖಂಡೇರಾವರು ಅಭಿಮಾನದಿಂದ ಸ್ಮರಿಸಿಕೊಳ್ಳುತ್ತಾರೆ ಮುಂಬೈನ ಸುತ್ತ-ಮುತ್ತಲಿನ ಭೂದೃಶ್ಯಗಳನ್ನು ಚಿತ್ರಿಸುತ್ತಿದ್ದರು. ಅಂದು ಇವರು ರಚಿಸಿದ ಮಲಬಾರ್ ಹಿಲ್ಸ್ ನಿಸರ್ಗ ಚಿತ್ರವು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಹೀಗೆ ಅವರ ಅಧ್ಯಯನ ಕಾಲದಲ್ಲಿ ನಡೆದ ಅನೇಕ ಮಹತ್ತರ ಘಟನೆಗಳು, ಆಗಿನ ಕಾಲದ ಪಠ್ಯಕ್ರಮ, ಅಧ್ಯಾಪಕವರ್ಗ, ಸ್ನೇಹಿತರಬಳಗ, ಕಲಾವಾತಾವರಣ ಹಾಗೂ ಕಲಾಸಾಧನೆಯ ಕುರಿತು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅಧ್ಯಾಯ ನಾಲ್ಕು :

ಕಲಾವಿದ ಜಿ.ಎಸ್. ಖಂಡೇರಾವರು ಮುಂಬೈನ ಸರ್. ಜೆ.ಜೆ. ಕಲಾಶಾಲೆಯಲ್ಲಿ ಡ್ರಾಯಿಂಗ್ ಮತ್ತು ಪೇಯಿಂಟಿಂಗ್ ಡಿಪ್ಲೋಮಾ ಮುಗಿಸಿಕೊಂಡು ಕಲಬುರ್ಗಿಗೆ ಬಂದರು. 1964 ರಲ್ಲಿ ಇವರ ವಿವಾಹವು ವೀರಮ್ಮನವರೊಡನೆ ನಡೆಯಿತು. ಗೃಹಸ್ಥರಾದನಂತರ ಸಂಸಾರದ ಜವಾಬ್ದಾರಿಯನ್ನು ಹೊತ್ತ ಇವರಿಗೆ ಜೀವನೋಪಾಯಕ್ಕಾಗಿ ಯಾವುದಾದರೂ ಒಂದು ಕೆಲಸವನ್ನು ಮಾಡಲೇಬೇಕಾದ ಅನಿವಾರ್ಯತೆ ಎದುರಾಯಿತು. ಇವರು ಶ್ರೀ ಸಿ.ವಿ.ಕರಡಗಿಯವರನ್ನು ಸಂದರ್ಶಿಸಿದಾಗ ಸಿ.ವಿ.ಕರಡಗಿಯವರು ನಮ್ಮ ಭಾಗದ ಕಲಾವಿದರು ತಮ್ಮ ಉನ್ನತ ಕಲಾಶಿಕ್ಷಣ ಎಲ್ಲೋ ದೂರಹೋಗಿ ಏಕೆ ಕಲಿಯಬೇಕು? ಇಲ್ಲೇ ಒಂದು ಕಲಾಶಾಲೆ ಏಕೆ ತೆರೆಯಬಾರದು ? ಎಂದು ಹೇಳಿದಾಗ, ಆಗತಾನೆ ನೂತನ ವಿದ್ಯಾಲಯದಲ್ಲಿ ಶಂಕರರಾವ ಆಳಂದಕರ್‌ರವರು ಕಲಾವಿಭಾಗ ಪ್ರಾರಂಭಿಸಿದ್ದರು. ಖಂಡೇರಾವರು ತಾವೊಂದು

ಕಲಾ ಶಾಲೆಯನ್ನು ತೆರೆಯುವದಾಗಿ ಪ್ರಸ್ತಾಪಿಸಿದಾಗ ಆಳಂದಕರ್ ರವರು ಕಲಾಶಾಲೆಯನ್ನು ನಡೆಸುವಲ್ಲಿ ಎದುರಾಗುವ ಅನೇಕ ಸಮಸ್ಯೆಗಳನ್ನು ತಿಳಿಹೇಳಿದರು.ಆದರೂ ಖಂಡೇರಾವರು ತಮ್ಮ ಸಂಕಲ್ಪದಿಂದ ವಿಮುಖರಾಗದೆ 1965 ರಲ್ಲಿ ದಿ ಐಡಿಯಲ್ ಕಲಾಶಾಲೆಯನ್ನು ಸ್ಥಾಪಿಸಿದರು.

ಮುಂಬೈ ಕಲಾಶಿಕ್ಷಣ ಪದ್ಧತಿಯಿಂದ ಪ್ರಭಾವಿತರಾದ ಇವರು ವಿದ್ಯಾರ್ಥಿಗಳಲ್ಲಿ ಕಲಾಪ್ರಜ್ಞೆ ಮೂಡಿಸುವಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದರು. ಆಗಾಗ್ಗೆ ಕಲಾಶಾಲೆಯಲ್ಲಿ ಸಾಹಿತಿಗಳ ಚರ್ಚಾಕೂಟವನ್ನು ಏರ್ಪಡಿಸುತ್ತಾ ವಿದ್ಯಾರ್ಥಿಗಳಿಗೆ ಇತರ ಸಾಂಸ್ಕೃತಿಕ ರಂಗಗಳ ಪರಿಚಯವನ್ನು ಮಾಡಿಸುತ್ತಿದ್ದರು. ಇಷ್ಟೆಲ್ಲಾ ಪರಿಶ್ರಮದ ನಡುವೆಯೂ ಇವರ ವೈಯಕ್ತಿಕ ಕಲಾಸಾಧನೆ, ಕಲಾಕೃತಿಗಳ ರಚನೆ ನಿರಂತರವಾಗಿ ಮುಂದುವರೆದುಕೊಂಡು ಬಂದಿತ್ತು. ಇವರ ಕಾರ್ಯವೈಖರಿ ಮತ್ತು ಶಿಸ್ತು ಸಂಯಮವನ್ನು ಗಮನಿಸಿ ಕಲಬುರ್ಗಿಯ ಶ್ರೀ ಶರಣಬಸವೇಶ್ವರ ಸಂಸ್ಥಾನದ ಎಂಟನೆಯ ಪೀಠಾಧಿಪತಿಗಳಾದ ಡಾ॥ ಶರಣಬಸವಪ್ಪ ಅಪ್ಪ ಅವರು ತಮ್ಮ ಕಲಾ ಮಹಾವಿದ್ಯಾಲಯದ ಲಲಿತಕಲಾ ವಿಭಾಗದ ಉಪನ್ಯಾಸಕರಾಗಲು ಖಂಡೇರಾವರನ್ನು ಒಪ್ಪಿಸುತ್ತಾರೆ. ಮುಂದೆ ಇವರು 1971ರಲ್ಲಿ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದ ಲಲಿತಕಲಾ ವಿಭಾಗದ ಉಪನ್ಯಾಸಕರಾಗಿ ಇಪ್ಪತ್ತೈದು ವರ್ಷಗಳ ಕಾಲ ಸೇವೆ ಸಲ್ಲಿಸುತ್ತಾರೆ ಈ ಹಂತದಲ್ಲಿ ಅಲ್ಲಿ ಸ್ನಾತಕೋತ್ತರ ಲಲಿತಕಲಾ ವಿಭಾಗವು ಪ್ರಾರಂಭಗೊಳ್ಳುತ್ತದೆ. ಆಗ ಅದರ ಮುಖ್ಯಸ್ಥರಾಗಿ ಸಲ್ಲಿಸಿದ ಸೇವೆ ಮತ್ತು ಈ ಅವಧಿಯಲ್ಲಿ ಅವರು ರಚಿಸಿದ ಕಲಾಕೃತಿಗಳು, ಅವರ ಮಾರ್ಗದರ್ಶನದಲ್ಲಿ ತಯಾರಾದ ಕಲಾವಿದರ, ಮತ್ತು ಅವರ ಕಲಾಬದುಕು ಇವುಗಳನ್ನು ಕುರಿತು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅಧ್ಯಾಯ ಐದು :

ಈ ಅಧ್ಯಾಯದಲ್ಲಿ ಜೆ.ಎಸ್. ಖಂಡೇರಾವರ ಕಲಾಕೃತಿಗಳನ್ನು ಕುರಿತು ವಿಶೇಷವಾಗಿ ಚರ್ಚಿಸಲಾಗಿದೆ. ಮುಂಬೈನ ಸರ್. ಜೆ.ಜೆ.ಕಲಾಶಾಲೆಯಲ್ಲಿ ಶಿಕ್ಷಣವನ್ನು ಪಡೆದ ಇವರು ಅನೇಕ ಕಲಾಕೃತಿಗಳನ್ನು ರಚಿಸಿದ್ದು, ಅವುಗಳನ್ನು ಮೂರು ಹಂತವಾಗಿ ವಿಂಗಡಿಕೊಂಡು ಅಧ್ಯಯನ ಮಾಡಲಾಗಿದೆ. ಒಂದನೇಯದು ಅಧ್ಯಯನ ಕಾಲದಲ್ಲಿಯ ಕಲಾಕೃತಿಗಳು ಎರಡನೇಯದು ಅಧ್ಯಾಪಕ ವೃತಿಯಲ್ಲಿಯ ಕಲಾಕೃತಿಗಳು ಮೂರನೇಯದು ನಿವೃತ್ತಿಯ ನಂತರದಲ್ಲಿಯ ಕಲಾಕೃತಿಗಳು.

ಅಧ್ಯಯನ ಕಾಲದಲ್ಲಿಯ ಕಲಾಕೃತಿಗಳಲ್ಲಿ ಪಠ್ಯಕ್ರಮವನ್ನೇ ಕೇಂದ್ರಿಕೃತವಾಗಿರಿಸಿಕೊಂಡು ರಚಿಸಿದ ಕಲಾಕೃತಿಗಳಲ್ಲಿ ಮುಖ್ಯವಾಗಿ ರೇಖಾ ಚಿತ್ರಗಳು, ಸ್ಥಿರಚಿತ್ರಗಳು, ನಿಸರ್ಗಚಿತ್ರಗಳು, ಭಾವಚಿತ್ರಗಳು ಮತ್ತುಸಂಯೋಜನಾ ಚಿತ್ರಗಳು. ಅಧ್ಯಾಪಕ ವೃತ್ತಿಯಲ್ಲಿಯ ಕಲಾಕೃತಿಗಳಲ್ಲಿ ಇವೆಲ್ಲವೂ ಸೇರಿ ಭಿತ್ತಿ ಚಿತ್ರಗಳು, ಪೂರ್ಣ ಪ್ರಮಾಣದ ಜೀವ ಮಾದರಿಯ ಚಿತ್ರಗಳು ಮತ್ತುಸಂಯೋಜನಾ ಚಿತ್ರಗಳು ರಚಿಸಿದ್ದು ಕಂಡುಬರುತ್ತದೆ. ನಿವೃತ್ತಿಯ ನಂತರದಲ್ಲಿಯ ಕಲಾಕೃತಿಗಳಲ್ಲಿ ಮನೆಮಠಗಳಿಗಾಗಿ, ಖಾಸಗಿಯವರಿಗಾಗಿ, ಅನೇಕ ಭಾವಚಿತ್ರಗಳು, ಪೌರಾಣಿಕ ಚಿತ್ರಗಳು, ಧಾರ್ಮಿಕ ಚಿತ್ರಗಳನ್ನು ರಚಿಸಿದ್ದಾರೆ.

ಖಂಡೇರಾವರು ಚಿತ್ರಿಸಿದ ಒಟ್ಟು ಕಲಾಕೃತಿಗಳಲ್ಲಿ ನಾವು ಎರಡು ಭಾಗಗಳಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. 1. ರೇಖಾ ಚಿತ್ರಗಳು 2. ವರ್ಣಚಿತ್ರಗಳು. ರೇಖಾಚಿತ್ರಗಳಲ್ಲಿ ಪೆನ್ಸಿಲ್‌ನಿಂದ ಮಾಡಿದ ಚಿತ್ರಗಳು ಮತ್ತು ಇಂಕನಿಂದ ಮಾಡಿದ ಚಿತ್ರಗಳು. ವರ್ಣಚಿತ್ರಗಳಲ್ಲಿ ಜಲವರ್ಣಚಿತ್ರಗಳು ಮತ್ತುತೈಲವರ್ಣಚಿತ್ರಗಳು. ಮೇಲಿನ ಎರಡೂ ಮಾಧ್ಯಮಗಳ ಕಲಾಕೃತಿಗಳ ವಸ್ತುವಿಷಯಗಳಲ್ಲಿ ವ್ಯಕ್ತಿಚಿತ್ರಗಳು, ಪ್ರಕೃತಿ ಚಿತ್ರಗಳು, ನೈಜಸಂಯೋಜನಾ ಚಿತ್ರಗಳು, ಆಧುನಿಕ ಸಮ್ಮಿಶ್ರಣ ಸಂಯೋಜನಾ ಚಿತ್ರಗಳು , ಅಮೂರ್ತಸಂಯೋಜನಾ ಚಿತ್ರಗಳು ಮತ್ತು ಗ್ರಂಥಗಳಿಗೆ ಒದಗಿಸಿಕೊಟ್ಟ ಚಿತ್ರಗಳು ಎಂಬಂತೆ ವಿಂಗಡಿಸಿಕೊಂಡು ಪ್ರತ್ಯೇಕವಾದ ವಿಸ್ತ್ರ ಅಧ್ಯಯನಮಾಡಲಾಗಿದೆ.

ಅಧ್ಯಾಯ ಆರು :

ಇಂದು ಎಷ್ಟೋ ಕಲಾವಿದರು ಒಂದೇ ಶೈಲಿಗೆ ಅಂಟಿಕೊಂಡಿದ್ದಾರೆ. ಅವರ ಕಲಾಕೃತಿಗಳನ್ನು ನೋಡಿದಾಕ್ಷಣ ಇದು ಇಂತಹ ಕಲಾವಿದರದೇ ಎಂದು ಗುರುತಿಸುವಷ್ಟು ಶೈಲಿಗೆ ಒತ್ತುಕೊಟ್ಟು ಸ್ಥಿರವಾಗಿದ್ದಾರೆ. ಆದರೆ ಖಂಡೇರಾವರು

ಯಾವುದೇ ಒಂದು ಶೈಲಿಗೆ ಬದ್ದರಾಗಿಲ್ಲ. ವಿಭಿನ್ನನೋಟಗಳ, ಶೈಲಿಗಳ ಅಭಿವ್ಯಕ್ತಿಯನ್ನೇ ಪ್ರತ್ಯೇಕ ಶೈಲಿಯೆಂದು ನಾವು ಗುರುತಿಸಬಹುದಾಗಿದೆ.

ಹಲವಾರು ಶೈಲಿಗಳಲ್ಲಿ ಕೃತಿರಚನಾತಂತ್ರ ಅವರಲ್ಲಿರುವುದರಿಂದ ಕಾಲಕಾಲಕ್ಕೆ ವಿವಿಧ ರೀತಿಯ ಕಲಾಕೃತಿಗಳು ರೂಪುಗೊಂಡಿವೆ. ಈ ಹಿನ್ನೆಲೆಯಲ್ಲಿ ಅವರ ಕಲಾಕೃತಿಗಳಿಂದ , ಕಲಾಶಿಕ್ಷಣದ ಮೇಲಾದ ಪ್ರಭಾವ- ಪ್ರೇರಣೆಗಳ ಕುರಿತು ಈ ಅಧ್ಯಾಯದಲ್ಲಿ ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಏಳು :

ಜಿ.ಎಸ್. ಖಂಡೇರಾವರು ಕರ್ನಾಟಕ ಸರಕಾರದ ರಾಜ್ಯೋತ್ಸವ ಪ್ರಶಸ್ತಿ ಪಡೆದ ಪ್ರಮುಖ ಕಲಾವಿದರು. ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ, ಮುಂಬೈನ ಬಾಂಬೆ ಆರ್ಟ ಸೊಸಾಯಿಟಿಯ ಅಜೀವ ಸದಸ್ಯರಾಗಿ, ಆಮಂತ್ರಿತ ಉಪನ್ಯಾಸಕರಾಗಿ, ಕಲಾಪ್ರದರ್ಶನಗಳ ನಿರ್ಣಾಯಕರಾಗಿ, 1991 ಟ್ರಿನಾಲೆ ಅಂತರರಾಷ್ಟ್ರೀಯ ಚಿತ್ರಕಲಾ ಪ್ರದರ್ಶನದ ವಿಶೇಷ ಆಮಂತ್ರಿತರಾಗಿ, 1970 ರ ದಶಕದಲ್ಲಿ ಮೈಸೂರು ಆರ್ಟ ಕೌನ್ಸಿಲ್ ಎಂಬ ಸಂಸ್ಥೆಯಲ್ಲಿ ಕ್ರಿಯಾಶೀಲ ಸದಸ್ಯರಾಗಿ ಸೇವೆಸಲ್ಲಿಸಿದ್ದಾರೆ. ಅನೇಕ ಕಲಾಪ್ರದರ್ಶನಗಳು, ಸಾಂಸ್ಕೃತಿಕ ಸಂಘಟನೆಗಳ ಮೂಲಕ ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಶ್ರೀಮಂತಗೊಳಿಸಿದ್ದಾರೆ.

1999 ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ಜಿ.ಎಸ್. ಖಂಡೇರಾವ ಎಂಬ ಪುಸ್ತಕವನ್ನು ಹೊರತಂದಿದೆ. ಹಲವಾರು ಪತ್ರಿಕೆಗಳಲ್ಲಿ ಇವರನ್ನು ಕುರಿತು ಲೇಖನಗಳು ಬಂದಿವೆ. ಸ್ವತಃ ತಾವೇ ಬರೆದ ಪ್ರಾಕ್ಟಿಕಲ್ ಜಾಮೆಟ್ರಿ ಆ್ಯಂಡ್ ಪರ್ಸಪೆಕ್ಟಿವ್ ಮತ್ತು ವರ್ಣಸಿದ್ಧಾಂತ ಎಂಬ ಕೃತಿಗಳನ್ನು ಪ್ರಕಟಿಸುವ ಸಿದ್ದತೆಯಲ್ಲಿದ್ದಾರೆ.

ಈ ಅಧ್ಯಾಯದಲ್ಲಿ ಜಿ.ಎಸ್. ಖಂಡೇರಾವರ ಕುರಿತಾದ ಗ್ರಂಥಗಳು, ಲೇಖನಗಳು, ಪತ್ರಿಕಾ ವರದಿಗಳು ಒಂದು ಬಗೆಯ ವಿಷಯವಾದರೆ ಅವರ ಕಲಾಚಟುವಟಿಕೆಗಳ ಬಗ್ಗೆ ಕಲಾಪ್ರದರ್ಶನಗಳು, ಕಲಾಶಿಬಿರಗಳು, ಕಾರ್ಯಾಗಾರಗಳು, ಪ್ರಾತ್ಯಕ್ಷಿಕೆಗಳು ಮತ್ತು ವಿಚಾರ ಸಂಕೀರ್ಣಗಳನ್ನೊಳಗೊಂಡ ಸಮಗ್ರ ವಿವರಗಳನ್ನು ಈ ಅಧ್ಯಾಯವು ಹೊಂದಿರುತ್ತದೆ.

ಅಧ್ಯಾಯ ಎಂಟು :

ಈ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡ ವಿವರಗಳನ್ನು ಸಮೀಕ್ಷಿಸಲಾಗಿದೆ.

[illegible]

ಗ್ರಂಥಋಣ

ಅ. ಕನ್ನಡ ಗ್ರಂಥಗಳು

1. ಇಂದಿನ ರಂಗ ಕಲಾವಿದರು : (ಸಂ.) ವಿಜಯಾ
ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು 1986

2. ಎಂ.ಟಿ.ಭೋಪಲಿ : ಡಿ.ಎನ್. ಅಕ್ಕಿ
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು 1995

3. ಎಂ.ವಿ. ಮಿಣಜಗಿ : ಗವೀಶ ಹಿರೇಮಠ
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು 1983

4. ಒಡನಾಟ : ಕಾವೆಂಶ್ರೀ
ಕಲಾಚೇತನ ಪ್ರಕಾಶನ, ಗದಗ 1997

5. ಕರ್ನಾಟಕದ ಕಲೆಗಳು : (ಪ್ರ.ಸಂ.) ಪ್ರೋ. ಎಸ್.ಕೆ. ರಾಮಚಂದ್ರರಾವ
ಕನ್ನಡನಾಡಿನ ಕಲಾವಿದರು (ಹತ್ತನೆ ಸಂಪುಟ)
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

6. ಕಲಾವಿದರು ನಡೆದು ಬಂದ ದಾರಿ : ಗವೀಶ ಹಿರೇಮಠ
ದಿ. ಐಡಿಯಲ್ ಫೈನ್ ಆರ್ಟ ಸೊಸಾಯಿಟಿ,
ಗುಲಬರ್ಗಾ 1983

7. ಕರ್ನಾಟಕದ ಜನಪದ ಚಿತ್ರಕಲೆ : ಡಾ. ಎಸ್.ಸಿ ಪಾಟೀಲ
ವೀರಶೈವ ಅಧ್ಯಯನ ಸಂಸ್ಥೆ, ಗದಗ ಡಂಬಳ 1993

8. ಕಲಾಪ್ರಪಂಚ : ಡಾ. ಶಿವರಾಂ ಕಾರಂತ
ವ್ಯಾಸಂಗ ವಿಸ್ತರಣ ಪ್ರಕಟಣ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 1978

9. ಕಲಾಸಂವೇದನೆಯ ಒಳನೋಟಗಳು : ಕೆ.ವಿ.ಸುಬ್ರಹ್ಮಣ್ಯಂ.
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು 1997

10. ಕೆ.ಕೆ. ಹೆಬ್ಬಾರ : ಎನ್. ಮರಿಶಾಮಾಚಾರ್
ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು 1987

11. ಕಿರಿಯರ ಕರ್ನಾಟಕ : (ಪ್ರ.ಸಂ.) ಪ್ರೋ. ಎಲ್.ಎಸ್. ಶೇಷಗಿರಿರಾವ್
ಕನ್ನಡ ವಿಶ್ವವಿದ್ಯಾಲಯ, ಹಂಪಿ 1994

12. ಕಲೆಯ ದರ್ಶನ : ಶಿವರಾಂ ಕಾರಂತ
ರಾಜಲಕ್ಷ್ಮೀ ಪ್ರಕಾಶನ, ಬಳೇಪೇಟೆಚೌಕ, ಬೆಂಗಳೂರು
(ತೃತಿಯ ಮುದ್ರಣ) 1982

13. ಕಲೆಯ ನೆಲೆ : ವಿ.ಕೃ. ಗೋಕಾಕ
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ ಮೈಸೂರು 1978

27. ಚಿತ್ರ ಚಿತ್ತ : ಚಿ.ಸು. ಕೃಷ್ಣ ಶೆಟ್ಟಿ
ಇಳಾ ಪ್ರಕಾಶನ, ಬೆಂಗಳೂರು 2000

28. ಜಿ. ಎಸ್. ಶೆಣೈ : ಡಾ. ಕಾಸರವಳ್ಳಿ ಕೆ. ಜಿ. ರವೀಶ್
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, 1995

29. ಜಿ.ಎಸ್. ಖಂಡೇರಾವ : ಕುಪ್ಪಣ್ಣ ಕಂದಗಲ್
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, 1999

30. ಡಿ.ವಿ.ಹಾಲಭಾವಿ : ಎಸ್.ಕೆ.ಹೂಗಾರ
ಕರ್ನಾಟಕ ಲಲಿತಕಲಾ ಅಕಾಡೆಮಿ,ಬೆಂಗಳೂರು, 1987

31. ದೃಶ್ಯಕಲೆ ಎಂದರೇನು : ಚಿ.ಸು. ಕೃಷ್ಣ ಶೆಟ್ಟಿ
ಕರ್ನಾಟಕ ಲಲಿತಕಲಾ ಅಕಾಡೆಮಿ,ಬೆಂಗಳೂರು, 1995

32. ದೃಶ್ಯಕಲಾ : ಎನ್.ಮರಿಶಾಮಾಚಾರ್
ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು, 2001

33. ದೃಶ್ಯಕಲಾ ವಿಮರ್ಶೆ : (ಸಂ.) ವಿ.ಜಿ. ಅಂದಾನಿ
ಕರ್ನಾಟಕ ಲಲಿತಕಲಾ ಅಕಾಡೆಮಿ,ಬೆಂಗಳೂರು,2000

34. ಪ್ರಶಸ್ತಿ ಪಡೆದ ಕಲಾವಿದರು : (ಸಂ.) ಪಿ.ಆರ್.ತಿಪ್ಪೆಸ್ವಾಮಿ
ಕರ್ನಾಟಕ ಲಲಿತಕಲಾ ಅಕಾಡೆಮಿ,ಬೆಂಗಳೂರು, 1993

35. ಭಾರತೀಯ ಚಿತ್ರಕಲೆ : ಡಾ. ಶಿವರಾಂ ಕಾರಂತ
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು 1998

36. ಭಾರತದ ದೃಶ್ಯಕಲಾವಿದರು : ಎನ್. ಮರಿಶಾಮಾಚಾರ್
ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು 1992

37. ಭಾರತೀಯ ಸಂಸ್ಕೃತಿ : ಎಸ್. ಶ್ರೀಕಂಠಶಾಸ್ತ್ರಿ
ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ,
ಮೈಸೂರು 1975

38. ರೇಖಾಚಿತ್ರ : (ಸಂ.) ಬಿ.ವಿ.ಕೆ. ಶಾಸ್ತ್ರಿ
ಕರ್ನಾಟಕ ಲಲಿತಕಲಾ ಅಕಾಡೆಮಿ,ಬೆಂಗಳೂರು, 1991

39. ವರ್ಣಸಂಚಯ : ಡಾ.ಎಸ್.ಸಿ. ಪಾಟೀಲ
ವಿಜಯ ಚಿತ್ರಕಲಾ ಮಹಾವಿದ್ಯಾಲಯ , ಇಲಕಲ್ಲ 2001

40. ಶರಣಬಸವೇಶ್ವರರು ಹಾಗೂ ಅವರ ಪರಿಸರದ ಸಾಹಿತ್ಯ : ಡಾ. ಎಸ್. ಎಂ. ಹಿರೇಮಠ
ಪಿಎಚ್.ಡಿ. ಮಹಾಪ್ರಬಂಧ, ಅಶ್ವಿನಿ ಪ್ರಕಾಶನ ಕಲಬುರ್ಗಿ

41. ಸೃಜನಶೀಲ ಕಲಾವಿದರು : ಗವೀಶ ಹಿರೇಮಠ
ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ
ಶ್ರೀ ಮೂರು ಸಾವಿರ ಮಠ ಹುಬ್ಬಳ್ಳಿ, 1991

42. ಸೌಂದರ್ಯಮೀಮಾಂಸೆ : ವಿ.ಕೃ. ಗೋಕಾಕ
ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ 1993

43. ಸಾಹಿತ್ಯ ಮತ್ತು ಚಿತ್ರಕಲೆ : ವೀ. ಸೀತಾರಾಮಯ್ಯ
ರಾಘವ ಪ್ರಕಾಶನ, ಬೆಂಗಳೂರು 1985

44. ಸೌಂದರ್ಯ ಸಮೀಕ್ಷೆ : ಜಿ.ಎಸ್. ಶಿವರುದ್ರಪ್ಪ
ಸತ್ಯಶ್ರೀ ಪ್ರಿಂಟರ್ಸ್ ಬೆಂಗಳೂರು 1965

ಬ. ಇಂಗ್ಲೀಷ ಗ್ರಂಥಗಳು

45. ART EXPERIENCE : M Hiriyanna
Indira Gandhi National Centre for the Arts,
New Delhi 1997

46. AESTHETIC THEORY AND ART : Ranjan K. Ghosh
Ajantha Publications, Delhi, 1979

47. BETWEEN THE LINES : Lakshmi Venkatraman
Values Art Foundation, Chennai, 1997

48. COLOUR IN REPRODUCTION : Hilda Simon
A Studio the book Viking press, NewYork

49. CONTEMPORARY INDIAN ARTISTS : Geeta Kapoor
Vikas Publishing House Pvt.Ltd New Delhi

50. DEVELOPING STYLE IN
WATER COLOUR : Ray Campbell Smith
David & Charles Publication ,1992

51. EDUCATION LIFE & YOGA : Sitaram Jayaswal
Published by India Heritage Research
Foundation

52. ELEVENTH & TWELTH CENTURY
KANNADA LITERATURE : Dr. H.T. Sasnur.

[illegible]

53. EDUCATION OF INDIAN TEACHERS : Uday Shankar
Sterling publishers Pvt. Ltd. NewDelhi

54. FURTHER STEPS IN OIL PAINTINGS : Andrian Hill
Blandford press people Denset, 1970

55. INDIAN SCULPTURE & PAINTING : E.B. Havel
Cosmo Publication new Delhi 1980

56. PAINTING WITH PASTELS : Namcy Kominstky's
Callins publication 1986

57. STARTING TO PAINT A PORTRAIT : Bernard Dunstan
Topligers publishing Co. Inc. NewYork 1979

58. SIR. J.J. SCHOOL OF ARTS, BOMBAY : N.N.Kelkar
A HUNDRED YEARS OF ITS CAREER, 1970

59. THE ART OF SOUTH EAST ASIA : Philip Rawnson
Thams & Hudson

60. THE LIVING LINES : Shankar Patil
Pragati Prakashan, Davangere 1996

ವಿಶ್ವಕೋಶ - ಗೆಜೆಟಿಯರ್‌ಗಳು :

61. ಕಲಾಕೋಶ

62. ಜನಪದಕಲೆಗಳ ವಿಶ್ವಕೋಶ

63. ಗುಲಬರ್ಗಾ ಜಿಲ್ಲೆ ಗೆಜೆಟಿಯರ್ 1997

ಲೇಖನಗಳು

1. ಕುಂಚಕಂಡುಕೊಂಡ ಗಾಂಭೀರ್ಯದ ಸೆಳಕುಗಳು : ಕೆ.ವಿ. ಸುಬ್ರಮಣ್ಯಂ
ಸಂಯುಕ್ತ ಕರ್ನಾಟಕ. ದಿನಾಂಕ 04-10-1991

2. ರಾಜ್ಯೋತ್ಸವ ಸಂಭ್ರಮ, ಖುಷಿತಂದ ಖಂಡೇರಾವ ಪ್ರಶಸ್ತಿ : ಡಾ. ವೀರಣ್ಣದಂಡೆ
ಪ್ರಜಾವಾಣಿ


3. ಸಮಕಾಲೀನ ಕಲಾಸೃಷ್ಟಿಯ ವೈವಿಧ್ಯ : ಕೆ.ವಿ. ಸುಬ್ರಮಣ್ಯಂ
ಸಂಯುಕ್ತ ಕರ್ನಾಟಕ ದಿನಾಂಕ : 04-09-1992

4. ಸೃಜನಶೀಲ ಕಲಾವಿದ ಜೆ.ಎಸ್.ಖಂಡೇರಾವ : ಮಲ್ಲಿಕಾರ್ಜುನ .ಸಿ. ಭಾಗೋಡಿ
ವಿಜಯ ಕರ್ನಾಟಕ ದಿನಾಂಕ : 10-06-2000.

5. ART FOR INTERIORS : Martha Jakimowicz -Karle
Deccan Herald. Date 22-08-1992.

ಅನುಬಂಧ - 2

ಜೆ.ಎಸ್.ಖಂಡೇರಾವ್‌ರಿಗೆ ಸಂದ ಪ್ರಶಸ್ತಿಗಳು
ಬಹುಮಾನಗಳು



GOVERNMENT OF MAHARASHTRA
ART EXAMINATIONS.

DIPLOMA AWARDED TO
Khanderao Jagadev Shankarappa
WHO PASSED THE FINAL
EXAMINATION IN
Drawing and Painting
HELD IN THE YEAR 1963
IN *Second* CLASS.


Chairman,
Examination Committee.

Secretary to Government
Education and Social welfare
Department.

ಜೆ.ಜೆ. ಕಲಾಶಾಲೆಯಿಂದ ಪಡೆದ ಡಿಪ್ಲೋಮಾ
ಪ್ರಶಸ್ತಿಪತ್ರ.



ಭಾಲ್ಕಿಯಲ್ಲಿ ಗೌರವಿಸಿದ ಸನ್ಮಾನಪತ್ರ.



ಕಲಬುರಗಿಯ ಐಡಿಯಲ್ ಕಲಾಶಾಲೆಯವರು
ನೀಡಿದ ನೆನಪಿನ ಕಾಣಿಕೆ.





ಬೆಂಗಳೂರಿನ ಸಂರಂಗಾಚಿತ್ರಕಲಾಗುಂಪು
ನೀಡಿದ ನೆನಪಿನ ಕಾಣಿಕೆ.





ಕರ್ನಾಟಕ ಲಲಿತಕಲಾ ಅಕಾಡೆಮಿ ನೀಡಿದ
ನೆನಪಿನ ಕಾಣಿಕೆ.

